ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ

ಶ್ರೀ ಮದ್ರಾಘವೇಂದ್ರ ಭಾರತೀ ಮಹಾ ಸ್ವಾಮಿಗಳು

ಓಂ

ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ

ಶ್ರೀ ಮದ್ರಾಘವೇಂದ್ರ ಭಾರತೀ

ಮಹಾ ಸ್ವಾಮಿಗಳು

Srimad Raghavendra Bharathi Mahaswamigalu—a sacred Biography, written by Vidwan Ramakrishna Adkoli, Published by Sri B. Krishna Bhat, Bangalore.

Pages : 35+258: First Edition, Copies : 10,000
Pages 37+234- Second Edition, Copies : 5,000

ಪ್ರಥಮ ಮುದ್ರಣ : ೧೯೭೫
ದ್ವಿತೀಯ ಮುದ್ರಣ : ೧೯೮೧

© ಪ್ರಕಾಶಕರು

ಗ್ರಂಥ ಪರಿಷ್ಕರ್ತರು :

ವಿದ್ವಾನ್ ಎನ್. ರಂಗನಾಥ ಶರ್ಮಾ
ವಿದ್ವಾನ್ ಟಿ. ಕೇಶವ ಭಟ್ಟರು
ದಿ॥ ಮುಡಿಯಾಲ ನಾರಾಯಣ ಭಟ್ಟರು

ಸಾದಾ ಪ್ರತಿ : ರೂ. 15-00
ಕ್ಯಾಲಿಕೋ ಪ್ರತಿ : ರೂ. 20-00

ಲೇಖಕರು :

೧) ರಾಮಕೃಷ್ಣ ಅಡ್ಕೋಳಿ,
ಮೂರೂರು.

೨) ಅನುಬಂಧ ೩ ಮತ್ತು ೫
ಪಂಡಿತ ಗಣಪತಿ ಶಾಸ್ತ್ರೀ ಹೆಬ್ಬಾರ
(ಶ್ರೀ ಕೃಷ್ಣಾಶ್ರಮ ಸ್ವಾಮೀಜೀ)
ರಾಮಘಾಟ್, ವಾರಾಣಸೀ
ಉತ್ತರ ಪ್ರದೇಶ.

ಪ್ರಕಾಶಕರು ಮತ್ತು ಮುದ್ರಕರು :

ಬಿ. ಕೃಷ್ಣ ಭಟ್, ಬಿ.ಎ.,
ಶ್ರೀ ಗುರುಪ್ರಸಾದ್ ಪ್ರಿಂಟರ್ಸ್,
೩೫, ರತ್ನವಿಲಾಸ ರಸ್ತೆ, ಬಸವನಗುಡಿ,
ಬೆಂಗಳೂರು-೫೬೦ ೦೦೪

ಓಂ

ಅರ್ಪಣೆ

॥ ಶ್ರೀಮದ್ರಾಮಚಂದ್ರಾಪುರ ಮಹಾ ಸಂಸ್ಥಾನಂ ॥

ಶ್ರೀ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಾದಿ
ಬಿರುದಾಂಕಿತ

ಶ್ರೀಮಜ್ಜಗದ್ಗುರು ಶಂಕರಾಚಾರ್ಯ

ಶ್ರೀ ಗೋಕರ್ಣ ಮಂಡಲಾಧೀಶ್ವರ

ಶ್ರೀಮದ್ರಾಮಚಂದ್ರ ಭಾರತೀ
ಶ್ರೀಗುರು ಕರಕಮಲ ಸಂಜಾತ

ಶ್ರೀಮದ್ರಾಘವೇಂದ್ರ ಭಾರತೀ
ಮಹಾಸ್ವಾಮಿಗಳ
ಶ್ರೀ ದಿವ್ಯ ಸನ್ನಿಧಿಯಲ್ಲಿ

ಅಜ್ಞಾನಾಂತರ್ಗಹನಪತಿತಾನಾತ್ಮ ವಿದ್ಯೋಪದೇಶೈಃ

ತ್ರಾತುಂ ಲೋಕಾನ್ ಭವದಹನಶಿಖಾತಾಪಪಾಪಚ್ಯಮಾನಾನ್ ।

ಮುಕ್ತ್ವಾ ಮೌನಂ ವಟವಿಟಪಿನೋ ಮೂಲತೋ ನಿಸ್ಸರಂತೀ

ಶಂಭೋರ್ಮೂರ್ತಿಶ್ಚರತಿ ಭುವನೇ ಶಂಕರಾಚಾರ್ಯರೂಪಾ ॥

ಶ್ರೀಜಗದ್ಗುರು ಶಂಕರಾಚಾರ್ಯ
ಶ್ರೀರಾಘವೇಂದ್ರ ಭಾರತೀ ಮಹಾಸ್ವಾಮಿಗಳು

ಮುನ್ನುಡಿ

ಮೂರೂರಿನ ವಿದ್ವಾನ್ ರಾಮಕೃಷ್ಣ ಅಡ್ಕೋಳಿ ಅವರು ಬರೆದ ಶ್ರೀ ಗುರು ಚರಿತ್ರೆಯನ್ನು ಆಮೂಲಾಗ್ರವಾಗಿ ಓದಿ ಸಂತೋಷಪಟ್ಟೆ. ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳು ಈ ವರಗೆ ಮಾಡುತ್ತಾ ಬಂದ ಲೋಕೋಪಕಾರಗಳ ವಿವರಗಳು ಸರ್ವಪಠನೀಯ.

ಲೇಖಕರು ಶ್ರೀ ಶಂಕರಾಚಾರ್ಯರ ಬಗೆಗೆ ಬರೆಯುವಾಗ ಉಲ್ಲೇಖಿಸಿದ ಅದ್ವೈತ ಸಿದ್ಧಾಂತ ಸಾರವು ಅತ್ಯಂತ ಸಂಕ್ಷಿಪ್ತ ; ಅನಂತರ ಶ್ರೀ ರಾಮಚಂದ್ರಾಪುರ ಮಠದ ಇತಿಹಾಸವನ್ನು ಅವರು ಆಮೂಲಾಗ್ರವಾಗಿ ಕೊಟ್ಟಿದ್ದಾರೆ. ಆ ಬಳಿಕ ಪೂಜ್ಯ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳ ಲೋಕೋಪಕಾರಗಳನ್ನು ವಿಸ್ತಾರವಾಗಿ ಬರೆದು ಶಿಷ್ಯವೃಂದಕ್ಕಲ್ಲದೆ ಸಮಸ್ತ ಸಮಾಜ ಹಿತೈಷಿಗಳಿಗೂ ಮಹೋಪಕಾರ ಮಾಡಿದ್ದಾರೆ.

ಪ್ರಾಕ್ತನ ಸಂಶೋಧಕರ ಪ್ರಕಾರ, ಬೌದ್ಧರೇ ಮಠಸಂಸ್ಥಾನಿರ್ಮಾಪಕರಲ್ಲಿ ಮೊದಲಿಗರು. ಹಾಗೆಯೇ ಬಾಲ ಸನ್ಯಾಸ ಪ್ರಾರಂಭವಾದದ್ದೂ ಅವರ ಕಾಲದಿಂದಲೇ ಎಂದು ಪ್ರತೀತಿ. ಆರ್ಯಧರ್ಮದ ಆದಿ ಕ್ರಿ. ಪೂ. ೧೦,೦೦೦ ವರ್ಷಗಳ ಹಿಂದೆ ಎಂಬುದು ದಿ. ಬಾಲಗಂಗಾಧರ ತಿಲಕರೇ ಮೊದಲಾದ ಭಾರತೀಯ ವಿದ್ವಾಂಸರ ಶೋಧ. ಬೌದ್ಧ ಜೈನ ಧರ್ಮಗಳು ದುರ್ಬಲವಾಗುತ್ತಿದ್ದ ಆರ್ಯಧರ್ಮವನ್ನು ಅವೈದಿಕವಾಗಿ ಸುಧಾರಿಸಲು ಹೊರಟಿದ್ದರಿಂದ ಶ್ರೀ ಆದಿ ಶಂಕರಾಚಾರ್ಯರು ಅವುಗಳನ್ನೂ ಇತರ ಮತಗಳನ್ನೂ ಖಂಡಿಸಿ ಅಥವಾ ತಿದ್ದಿ, ಅದ್ವೈತ ಸಿದ್ಧಾಂತದ ಚೌಕಟ್ಟಿನೊಳಗೇ ತಂದು ಪರಂಪರಾವಿಚ್ಛೇದವನ್ನು ತಪ್ಪಿಸಿದರು. ಇಂದಿಗೂ ಜಗತ್ತಿನ ವಿವಿಧ ಮತಗಳಿಗೆ ತನ್ನಲ್ಲಿ ಸ್ಥಾನವನ್ನು ಕಲ್ಪಿಸಿಕೊಡಲು ಸಮರ್ಥವಾಗಿರುವ ಒಂದೇ ಒಂದು ಮತವೆಂದರೆ ಅದ್ವೈತಮತ.

ಆಧುನಿಕ ಭೌತಶಾಸ್ತ್ರ ಹಾಗೂ ಮಾನಸಾತಿಮಾನಸ ಶಾಸ್ತ್ರಗಳು ಸಂಶೋಧಿಸಿದ ಸೂಕ್ಷ್ಮತತ್ತ್ವಗಳು ಅದ್ವೈತಸ್ವಾರ್ತಜೀವನ ಧರ್ಮಯೋಗದ ಪ್ರಾಣಸ್ಥಾನೀಯವಾದ ಅಂಶಗಳನ್ನು ಎತ್ತಿ ಹಿಡಿಯುತ್ತಿರುವುದು ಗಮನಾರ್ಹ.

ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರಿಯ ನಿಗ್ರಹಗಳು ಆರ್ಯತ್ವದ ನಿಕಷಗಳು. ಅವುಗಳನ್ನು ಸಾಮಾನ್ಯಧರ್ಮಗಳೆಂದು ಅಥವಾ ಶಾಶ್ವತಧರ್ಮಗಳೆಂದು ಕರೆಯಲಾಗಿದೆ. ಅವುಗಳಿಗೆ ಅವಿರುದ್ಧವಾಗಿಯೇ ಇತರ ಧರ್ಮಾಚರಣೆಗಳು ಇರಬೇಕಾದುದು ವೇದವ್ಯಾಸೋಕ್ತವಾದ ಅಭಿಪ್ರಾಯ ಸಾರ.

"ಹವ್ಯಕಾನಾಂ ಅನೇಕತ್ವಂ" ಎಂದು ಒಬ್ಬ ಸಂಸ್ಕೃತ ಕವಿ ಹೇಳಿರುವಂತೆ, ವ್ಯಕ್ತಿ ಪ್ರತ್ಯೇಕತೆಯ ವಾದದ ವಿಚಾರವನ್ನು ವ್ಯಾವಹಾರಿಕವಾಗಿ ನಂಬಿ ಹೋಳು ಹೋಳಾಗು

ತ್ತಿರುವ ಭಾರತೀಯ ಸಮೂಹದ ವಿವಿಧ ಸಾಂಸ್ಕೃತಿಕ ಘಟಕಗಳಲ್ಲಿ ಒಂದಾದ ಹವ್ಯಕ ವರ್ಗದ ಸದಸ್ಯರು ಅನೈಕ್ಯಕ್ಕೆ ತುತ್ತಾಗುತ್ತಾ ಹೋದುದು ದುರ್ದೈವದ ಸಂಗತಿ. "ಸಾಮಾನು ತುಟ್ಟಿ, ಮನುಷ್ಯ ಅಗ್ಗ" ಎನ್ನಿಸಿರುವ ಈ ಅವಧಿಯಲ್ಲಂತೂ, ಭಾರತೀಯ ನಾಗರಿಕತೆಯನ್ನು ನಿರ್ಮಿಸಿ, ಸಾವಿರಾರು ವರ್ಷಗಳ ಕಾಲ ನಡೆಸಿಕೊಂಡುಬಂದ ವೈದಿಕರಾದ ಬ್ರಾಹ್ಮಣರು "ಮೈನಾರಿಟಿ" ಗಳ ವಿಶೇಷವಾದ ಹಕ್ಕುಗಳನ್ನೂ ಪಡೆಯಲಾರದವರಾಗಿ ಸರ್ವಾಂಗೀಣ ಅವನತಿಯನ್ನು ಹೊಂದುತ್ತಿರುವ ದೃಶ್ಯವೂ ಕರುಣಾಜನಕವಷ್ಟೇ ಅಲ್ಲ, ರಾಷ್ಟ್ರಕ್ಕೇ ಸಾಂಸ್ಕೃತಿಕವಾಗಿ ಹಾನಿಕರ. ಧರ್ಮಗ್ಲಾನಿಯ ಈ ದುರ್ಧರ ಸನ್ನಿವೇಶದಲ್ಲಿ ಶ್ರೀ ಶಂಕರಾಚಾರ್ಯೋಕ್ತ ಯೋಜನೆಯಂತೆ ಮಠ, ದೇವಾಲಯ, ವಿದ್ಯಾಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಕಟಿಬದ್ಧರಾದ ನಮ್ಮ ಪೂಜ್ಯ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳು ಸಾಧಿಸಿದ ಅಂಶಗಳನ್ನು ಮನಂಬುಗುವಂತೆ ವರ್ಣಿಸಿದ ಪ್ರಸ್ತುತ ಈ ಪುಸ್ತಕವು ಸರ್ವರಿಗೂ ಅನುಕರಣೀಯವಾದ ಆದರ್ಶಗಳನ್ನು ಜನರೆದುರಿಟ್ಟಿದೆ. ಅರಿಷಡ್ವರ್ಗಗಳಿಂದ ಪೀಡಿತರಾಗಿರುವುದು ದರಿದ್ರರಾಗಿ ಜೀವಿಸಿರುವುದಕ್ಕಿಂತಲೂ ಹೆಚ್ಚು ಹಾನಿಕರ. 'ಯೇನ ಕೇನ ಪ್ರಕಾರೇಣ' ಶ್ರೀಮಂತರಾದವರಂತೂ "ಪ್ರಥಮ ಶ್ರೀರಿವ ಪುರುಷಃ ಕರೋತಿ ರೂಪಾಣ್ಯನೇಕಾನಿ'' ಎಂಬ ವರ್ಣನೆಗೆ ತಕ್ಕಾಗಿ ಸಮಾಜವನ್ನು ಒಡೆದಾಳಲಾರಂಭಿಸಿದ್ದೂ ಅನೇಕ ಕಡೆಗಳಲ್ಲಿ ಕಂಡುಬರಲಾರಂಭಿಸಿವೆ. ಹೀಗಿರುವಾಗ ನಮ್ಮ ಮಠಗಳು ಆರ್ಥಿಕವಾಗಿಯೂ ನೈತಿಕವಾಗಿಯೂ ದಿನೇ ದಿನೇ ಕೆಳಗುರುಳುತ್ತಿರುವ ಶಿಷ್ಯ ವರ್ಗಗಳನ್ನು ಉದ್ಧರಿಸಲು ಮಿಸನರಿಗಳಿಗಿಂತಲೂ ಹೆಚ್ಚಿನ ಉತ್ಸಾಹ ಹಾಗೂ ಯೋಜನಾ ನೈಪುಣ್ಯಗಳಿಂದ ಶ್ರೀಮದ್ರಾಘವೇಂದ್ರ ಭಾರತೀ ಸ್ವಾಮಿಗಳ ಮೇಲ್ಪಂಕ್ತಿಯನ್ನು ಅನುಸರಿಸುವುದು ಅತ್ಯಗತ್ಯ. ಅವರ ದಿವ್ಯ ಶಕ್ತಿ ಇನ್ನೂ ಹೆಚ್ಚು ಸಂಘಟನ ಕಾರ್ಯವನ್ನೂ ವಿದ್ಯಾಸಂಸ್ಥೆಗಳ ಅಭಿವೃದ್ಧಿಯನ್ನೂ ಶಿಷ್ಯವರ್ಗದ ನೀತಿಶುದ್ಧಿಯನ್ನೂ ಸಾಧಿಸುವುದರಲ್ಲಿ ಈ ಲೇಖಕನಿಗೆ ಎಳ್ಳಷ್ಟೂ ಸಂಶಯವಿಲ್ಲ.

ಪರಮಪೂಜ್ಯ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳ ಆಶೀರ್ವಾದ ಫಲ ಮಂತ್ರಾಕ್ಷತೆಗಳಿಂದ ಪುನೀತರಾದವರ ಬಳಗಕ್ಕೆ ಪ್ರಸ್ತುತ ಲೇಖಕನೂ ಸೇರಿದವನಾದುದರಿಂದ ಅವರ ಈ ದಿವ್ಯ ಗ್ರಂಥಕ್ಕೆ ಈ ನಾಲ್ಕು ಮಾತುಗಳನ್ನು ಬರೆದುಕೊಡಲು ದೊರಕಿದ ಈ ಸುವರ್ಣಾವಕಾಶ ಧನ್ಯತೆಯನ್ನು ತಂದುಕೊಟ್ಟಿದೆ. ಗ್ರಂಥಕರ್ತರಾದ ಶ್ರೀ ಅಡ್ಕೋಳಿಯವರ ಕೈಯಿಂದ ಇಂಥ ಸತ್ ಪ್ರಯತ್ನಗಳು ಇನ್ನೂ ಹೆಚ್ಚಾಗಿ ನಡೆಯುವಂತೆ ಶ್ರೀ ಗುರುಗಳು ಆಶೀರ್ವಾದ ಮಾಡುವರು. ಕನ್ನಡಿಗರು ಈ ಗ್ರಂಥವನ್ನು ಎಲ್ಲೆಡೆಯಲ್ಲಿಯೂ ಸ್ವಾಗತಿಸದೆ ಇರಲಾರರೆಂದು ನನ್ನ ದೃಢವಾದ ನಂಬಿಕೆ.

ಮ. ಗಾಂ. ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು,
ಸಿದ್ದಾಪುರ (ಉ. ಕ.)

ಬಿ. ಎಚ್. ಶ್ರೀಧರ
ಪ್ರಾಚಾರ್ಯ

ಲೇಖಕನ ಅರಿಕೆ

"ಶ್ರೀ ಗುರವೇ ನಮಃ" ಎಂದು ಪಠಿಸಿ ನಮಿಸಿ ಪ್ರತಿಯೊಂದು ಕಾರ್ಯವನ್ನು ಪ್ರಾರಂಭಿಸುವುದು ಅನೂಚಾನವಾದ ಆರ್ಷಪದ್ಧತಿ. ಈ ಚಿರಂತನ ರೂಢಿ ಬೆಳೆದು ಕೊಂಡು ಬರಲು ಶ್ರೀ ಗುರುವಿನ ಹಿರಿಮೆ ಗರಿಮೆಗಳೇ ಪ್ರಮುಖ ಕಾರಣಗಳು.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ॥

ಶ್ರೀ ಗುರುವು ತ್ರಿಮೂರ್ತಿಗಳಾದ ಬ್ರಹ್ಮ , ವಿಷ್ಣು, ಮಹೇಶ್ವರರ ರೂಪಿಯೂ ತುರೀಯನಾದ ಪರಬ್ರಹ್ಮ ಸ್ವರೂಪಿಯೂ ಎಂಬುದು ಸರ್ವ ವೇದ್ಯ ವಿಷಯ.

"ಗುರು'' ಶಬ್ದದ ಅರ್ಥವೇ ಅವನ ಮಹಿಮೆಯನ್ನು ಎತ್ತಿ ತೋರಿಸುತ್ತದೆ.

ಗುಶಬ್ದಸ್ತ್ವಂಧಕಾರಃ ಸ್ಯಾತ್ ರುಶಬ್ದಸ್ತನ್ನಿವರ್ತಕಃ ।
ಅಂಧಕಾರನಿರೋಧತ್ವಾತ್ ಗುರುರಿತ್ಯಭಿಧೀಯತೇ ॥

" 'ಗು' ಎಂದರೆ ಅಜ್ಞಾನಾಂಧಕಾರ, 'ರು' ಎಂದರೆ ಅಜ್ಞಾನಾಂಧಕಾರ ನಿವರ್ತಕವಾದ ಜ್ಞಾನರೂಪೀ ಪ್ರಕಾಶ. ಶ್ರೀ ಗುರುವು ತನ್ನ ದಿವ್ಯವಾದ ಜ್ಞಾನ ಮಯ ಪ್ರಕಾಶದಿಂದ ಶಿಷ್ಯನ ಅಜ್ಞಾನಾಂಧಕಾರವನ್ನು ತೊಲಗಿಸಿ ಅಸತ್ತಿನಿಂದ ಸತ್ತಿನ ಕಡೆಗೆ, ಕೆಡುಕಿನಿಂದ ಒಳಿತಿನೆಡೆಗೆ, ಕತ್ತಲೆಯಿಂದ ಬೆಳಕಿನ ದಿಶೆಗೆ, ಮೃತ್ಯುವಿನಿಂದ ಅಮರತೆಯ ದಿಕ್ಕಿಗೆ, ಅವನನ್ನು ಕರೆದೊಯ್ಯುವ ದಿವ್ಯ ಶಕ್ತಿ". ಆದುದರಿಂದಲೇ ಗುರು ಎಂಬುದು ಅನ್ವರ್ಥಕನಾಮ. ಅದಕ್ಕಾಗಿಯೇ 'ಅಜ್ಞಾನದಿಂದ ಕುರುಡಾದ ಜನ ತೆಯ ಕಣ್ಣನ್ನು ಜ್ಞಾನವೆಂಬ ಅಂಜನ ಶಲಾಕೆಯಿಂದ ತೆರೆಯಿಸುವ ಶ್ರೀ ಗುರುವಿಗೆ ನಮನ' ಎಂದಿದ್ದಾರೆ ಬಲ್ಲವರು.

ಈ ಕಾರಣದಿಂದಲೇ ಎಲ್ಲ ದೇವತೆಗಳಿಗಿಂತ ಮೊತ್ತಮೊದಲು ಶ್ರೀ ಗುರುವಿಗೆ ಎರಗುವ ಸಂಪ್ರದಾಯವಿದೆ.

ಗುರುಂ ಗಣಪತಿಂ ದುರ್ಗಾಂ ಭಾಸ್ಕರಂ ಶಿವಮಚ್ಯುತಮ್ ।
ಬ್ರಹ್ಮಾಣಂ ಗಿರಿಜಾಂ ಲಕ್ಷ್ಮೀಂ ವಾಣೀಂ ವಂದೇ ವಿಭೂತಯೇ ॥

ಎಂಬೀ ಶ್ಲೋಕವು ವಿಘ್ನಹರ್ತನಾದ ಗಣಪತಿ, ಜಗದಂಬಿಕೆಯಾದ ದುರ್ಗೆ, ಜಗಚ್ಚಕ್ಷುವಾದ ಸೂರ್ಯ ಮೊದಲಾದ ಎಲ್ಲವರಿಗಿಂತ ಪ್ರಥಮವಾಗಿ ಶ್ರೀ ಗುರುವಿಗೆ ಪ್ರಣಾಮವನ್ನು ಸಮರ್ಪಿಸುವ ವಾಡಿಕೆಗೆ ನಿದರ್ಶನ.

ಶ್ರೀ ಗುರುವು ಸರ್ವ ವಿದ್ಯೆಗಳ ನಿಧಿ. ಭವರೋಗ ಭಿಷಕ್. ಹರಿಹರರು ರೋಷ ಗೊಂಡರೂ ರಕ್ಷಕ ಶ್ರೀ ಗುರು. ಆದರೆ ಶ್ರೀ ಗುರುವಿನ ಆಗ್ರಹಕ್ಕೆ ತುತ್ತಾದವನನ್ನು ಯಾರೂ ರಕ್ಷಿಸಲಾರರು. ಆದುದರಿಂದಲೇ "ಹರೌ ರುಷ್ಟೇ ಗುರುಸ್ತ್ರಾತಾ ಗುರೌ ರುಷ್ಟೇ ನ ಕಶ್ಚನ'' ಎಂದೂ "ನ ಗುರೋರಧಿಕಂ'' ಎಂದರೆ ಗುರುವಿಗೆ ಸರಿಮಿಗಿಲಾ ದುದು ಯಾವುದೂ ಇಲ್ಲವೆಂದೂ ಗುರುವು ಸರ್ವ ರಕ್ಷಕನೆಂತಲೂ ಹೇಳುವುದು. ಅದಕ್ಕಾಗಿಯೇ "ಗುರುಪ್ರಸಾದೋ ಬಲವಾನ್ ನ ತಸ್ಮಾತ್ ಬಲವತ್ತರಂ'' 'ಗುರು ಪರಮಾನುಗ್ರಹವತ್ಯಧಿಕವು ಅದರಿಂ ಗುರುತರ ಬೇರಿಲ್ಲ' ಎಂದು ಉದ್ಘೋಷಣೆ.

ಈ ಮಾತನ್ನೇ ಕನ್ನಡ ಜಾನಪದ ಕವಿ ಸರ್ವಜ್ಞ ಹೀಗೆಂದಿದ್ದಾನೆ—

ದರುಶನವಾರರಿಂ ಪುರುಷರು ಮೂವರಿಂ
ಪರತತ್ತ್ವದಿರವು ಬೇರೆಂದು—ತೋರಿದ
ಗುರು ತಾನೆ ಹರನು—ಸರ್ವಜ್ಞ ||

" ಗುರುವು ನರನೆಂದವಗೆ ನರಕ ತಪ್ಪುವುದೆ ? "

ಎಂತಲೂ ಪ್ರಶ್ನಿಸಿದ್ದಾನೆ.

ಹಿಂದೀ ಸಾಹಿತ್ಯದ ಸಂತಕವಿ ಮಹಾತ್ಮಾ ಕಬೀರನು "ಗುರು-ಗೋವಿಂದ ದೋನೋ'' ಎಂಬ 'ದೋಹಾ' ದಲ್ಲಿ ಶ್ರೀ ಗುರು ಹಾಗೂ ಪರಮಾತ್ಮ ಇವರಿರ್ವರೂ ಒಟ್ಟಿಗೆ ಪ್ರತ್ಯಕ್ಷರಾದಾಗ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಪಥಪ್ರದರ್ಶಕನಾದ ಶ್ರೀ ಗುರುವಿಗೇ ಮೊದಲು ವಂದಿಸಿ, ಅನಂತರ ಪರಮಾತ್ಮನಿಗೆ ನಮಿಸುವೆನೆಂದು ಹೇಳಿ, ಶ್ರೀ ಗುರುವಿನ ಗರಿಮೆಯನ್ನು ಚಿತ್ರಿಸಿದ್ದಾನೆ.

ಪ್ರಪಂಚದ ತುಂಬ ಪಸರಿಸಿದ ಮಾನವ ಜನಾಂಗದಲ್ಲಿ ಅನೇಕ ಜಾತಿ ಮತ ಪಂಗಡಗಳಿವೆ. ಇವುಗಳಲ್ಲಿ ಬಹುತೇಕ ಎಲ್ಲಾ ಜನಾಂಗದವರಿಗೂ ಧರ್ಮ ಪೀಠಗ ಳಿವೆ; ಗುರುಮಠಗಳಿವೆ. 'ದೇವನೊಬ್ಬ ನಾಮ ಹಲವು' ಎಂಬಂತೆ ಅವರವರ ಪದ್ಧತಿ ಪರಂಪರೆಗನುಗುಣವಾಗಿ, ಮಠವೆಂದೋ ಮಸೀದಿಯೆಂದೋ ಚರ್ಚ್ ಎಂದೋ ಭಿನ್ನ ಭಿನ್ನವಾಗಿ ಅವನ್ನು ಹೆಸರಿಸಬಹುದು. ಆದರೆ ಆ ಸ್ಥಾನವನ್ನು ಅಲಂಕ ರಿಸುವ ಪ್ರತಿಯೊಬ್ಬ ಧರ್ಮವೇತ್ತನೂ ತನ್ನ ಅನುಯಾಯಿಗಳಿಗೆ ಸ್ವಧರ್ಮಾಚರ ಣೆಯ ವಿಷಯದಲ್ಲಿ ಮಾರ್ಗದರ್ಶನವನ್ನೀಯುತ್ತ ಸ್ವಶಿಷ್ಯನು ಸತ್ಪಥಗಾಮಿಯಾಗುವಂತೆ ಮಾಡುತ್ತಾನೆ.

ನಾವೂ ಈ ಸಂಗತಿಗೆ ಹೊರತಾದವರಲ್ಲ. ನಮಗೂ ಸ್ವಕರ್ತವ್ಯ ನಿರ್ವಹಣೆ ಯಲ್ಲಿ ಸಂದೇಹ ಸಂದೋಹಗಳು ಉದ್ಭವಿಸಿದಾಗ ಅವೆಲ್ಲವನ್ನೂ ಪರಿಹರಿಸಿ ಯೋಗ್ಯ ತಿಳುವಳಿಕೆಯನ್ನು ನೀಡಲು ಧರ್ಮಪೀಠವಿದೆ. ಶ್ರೀಮಜ್ಜಗದ್ಗುರು ಶಂಕರಾಚಾರ್ಯ

ರಿಂದ ಸ್ಥಾಪಿತವಾದಾಗಿನಿಂದ ಇಂದಿನ ವರೆಗೂ ಅವಿಚ್ಛಿನ್ನವಾದ ಗುರು ಪರಂಪರೆಯಿಂದ ನಡೆದುಕೊಂಡು ಬರುತ್ತಲಿರುವ 'ಶ್ರೀಮದ್ರಾಮಚಂದ್ರಾಪುರ ಮಠ' ಎಂಬ ಹೆಸರಿನಿಂದ ವಿಖ್ಯಾತವಾದ ಗುರು ಮಠವಿದೆ. ಅನೇಕ ಮಹಾಮಹಿಮರೂ ದಿವ್ಯ ತಪಸ್ವಿಗಳೂ ಈ ಧರ್ಮ ಪೀಠವನ್ನು ಅಲಂಕರಿಸಿ ಶಿಷ್ಯರನ್ನು ಪವಿತ್ರಾತ್ಮರನ್ನಾಗಿಸಿದ್ದಾರೆ.

ನಮ್ಮ ಶ್ರೀರಾಮಚಂದ್ರಾಪುರ ಮಠದ ಶ್ರೀ ಗುರುಪೀಠದಲ್ಲಿ ವಿರಾಜಿಸುತ್ತಲಿರುವ ಪರಮ ಪೂಜ್ಯ ಶ್ರೀಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳು ಶ್ರೀ ಮಠದ ಆಡಳಿತ ವಹಿಸಿ ಎರಡು ದಶಕಗಳು ಗತಿಸಿದುವು. ಈ ಅವಧಿಯಲ್ಲಿ ಶ್ರೀ ಶ್ರೀಗಳವರು ಸಾಧಿಸಿದ ಸಾಧನೆಗಳು ಅಸಂಖ್ಯ, ಅನನ್ಯಸಾಧ್ಯ. ಅವೆಲ್ಲವನ್ನು ಹೇಳುವುದಾಗಲೀ ಅವರ ಮಹಿಮಾತಿಶಯವೆಲ್ಲವನ್ನು ಸಂಗ್ರಹಿಸುವುದಾಗಲೀ ಅಸಾಧ್ಯವಾದ ಕಾರ್ಯ.

ಸಬ್ ಧರತೀ ಕಾಗದ ಕರೂಂ ಲೇಖನಿ ಸಬ್ ಬನ ಜಾಯ |
ಸಪ್ತ ಸಮುಂದರ್ ಕೀ ಮಸಿ ಕರೂಂ ಗುರುಗುಣ ಲಿಖಾ ನ ಜಾಯ ||

"ಅಖಿಲ ಭೂಮಂಡಲವನ್ನು ಕಾಗದವನ್ನಾಗಿ, ಸಮಸ್ತ ವನಸಮೂಹವನ್ನು ಲೇಖನಿಯನ್ನಾಗಿ, ಸಪ್ತ ಸಮುದ್ರಗಳ ನೀರೆಲ್ಲವನ್ನೂ ಮಸಿಯನ್ನಾಗಿ ಪರಿವರ್ತಿಸಿ ಕೊಂಡರೂ ಗುರುವಿನ ಗುಣಗಳನ್ನೆಣಿಸಿ ಬಣ್ಣಿಸುವುದು ಅಶಕ್ಯ'' ಎಂಬ ಸಂತ ಕಬೀರನ ವಚನವು ಪ್ರಕೃತ ಶ್ರೀಗಳವರ ವಿಷಯದಲ್ಲಿ ಸಾರ್ಥಕತೆಯನ್ನು ಪಡೆದಿದೆಯೆಂಬುದು ಸತ್ಯವಾದ ಮಾತು.

ವರ್ತಮಾನ ಶ್ರೀಗಳವರು ಸನಾತನ ವೈದಿಕಧರ್ಮ ಪ್ರಚಾರಕ್ಕಾಗಿ ಕೈಗೆತ್ತಿ ಕೊಂಡ ಕಾರ್ಯಗಳು ಅನೇಕ. ಶ್ರೀಮಠದಲ್ಲಿಯೇ ವೈದಿಕ ಸಂಸ್ಕೃತ ಪಾಠಶಾಲೆ ಯನ್ನು ಪ್ರಾರಂಭಿಸಿ ವಿದ್ವಾಂಸರಿಗೆ ಆಶ್ರಯವನ್ನಿತ್ತು, ಜ್ಞಾನಾರ್ಥಿಗಳಾದ ವಿದ್ಯಾರ್ಥಿ ಗಳ ಪಾಠ ಪ್ರವಚನಗಳಿಗೆ ಅನುಕೂಲತೆ ಕಲ್ಪಿಸಿದ್ದಲ್ಲದೆ, ಸ್ವತಃ ತಾವು ತರ್ಕ, ಸಾಹಿತ್ಯ, ವೇದಾಂತಾದಿ ವಿಷಯಗಳ ಅಧ್ಯಾಪನ ನಡೆಸುತ್ತಾ ಇದ್ದುದೂ ಅವುಗಳಲ್ಲಿ ಒಂದು. ಈ ಜ್ಞಾನಯಜ್ಞದಲ್ಲಿ ಸಕ್ರಿಯನಾಗಿ ಪಾಲುಗೊಳ್ಳುವ, ಪರಮ ಪಾವನೆ ಯಾದ ಜ್ಞಾನಗಂಗೆಯಲ್ಲಿ ಮಜ್ಜನಗೈದು ಪವಿತ್ರನಾಗುವ ಸೌಭಾಗ್ಯ ಈ ಲೇಖಕನಿಗೆ ಕೆಲವು ವರ್ಷಗಳ ಕಾಲ ದೊರೆತಿತ್ತು. ಒಂದೇ ಮಾತಿನಲ್ಲಿ ಸಂಕ್ಷೇಪಿಸುವುದಾದರೆ, ಈ ಲೇಖಕನ ಸರ್ವತೋಮುಖ ಪ್ರಗತಿಗೆ ಪ್ರಧಾನ ಕಾರಣರು ಶ್ರೀಗಳವರು. ಅಶನ, ವಸನ, ವಸತಿ ಸೌಕರ್ಯಗಳನ್ನು ಒದಗಿಸಿ ಎಲ್ಲ ವಿಧದ ಅನುಕೂಲತೆಗಳನ್ನು ಕಲ್ಪಿಸಿ ಕೊಟ್ಟು, ಪ್ರಾರಂಭಿಸಿದ ವಿದ್ಯಾಭ್ಯಾಸವು ಸುಗಮವಾಗಿ ನೆರವೇರುವಂತೆ ಅನುಗ್ರಹಿಸಿದ ಮಹಾನುಭಾವರು ಶ್ರೀಗಳವರು.

ಮಹಾ ಮಹಿಮರೂ ದಿವ್ಯ ತೇಜಸ್ವಿಗಳೂ ವಿದ್ಯಾ ತಪಸ್ಸುಗಳಿಂದ ಪೂತಾ ತ್ಮರೂ ಸದಾ ಶಿಷ್ಯಜನ ಹಿತಚಿಂತಕರೂ ಆಗಿರುವ ಶ್ರೀ ಶ್ರೀಗಳವರ ಮಹಾ ಸಾಧನೆಗಳ

ಬಗೆಗೆ ಗ್ರಂಥವನ್ನು ಸೃಜಿಸಿ ಕೆಲಮಟ್ಟಿಗಾದರೂ ಈ ಋಣದಿಂದ ವಿಮೋಚನೆಯನ್ನು ಪಡೆಯಲೆಳಸಿದೆ. ಆಗ ಈ ಲೇಖನಕಾರ್ಯ ಇಷ್ಟೊಂದು ಗುರುತರವಾದುದೆಂದು ನಾನು ಎಣಿಸಿರಲಿಲ್ಲ.

ಆದರೆ ಒಳಹೊಕ್ಕು ಕೂಲಂಕಷವಾಗಿ ವಿಚಾರಮಾಡತೊಡಗಿದಾಗ "ತಿತೀರ್ಷುರ್ದುಸ್ತರಂ ಮೋಹಾದುಡುಪೇನಾಸ್ಮಿ ಸಾಗರಂ" ಎಂಬ ಕವಿವಾಣಿಯಂತೆ ಮಹಾಸಾಗರವನ್ನು ಚಿಕ್ಕ ದೋಣಿಯೊಂದರಿಂದ ದಾಟಲು ಬಯಸಿದವನ ಸ್ಥಿತಿ ನನ್ನದಾಯಿತು. ಏಕೆಂದರೆ, ಸರ್ವಜ್ಞ ಪೀಠವನ್ನು ಆರೋಹಿಸಿದ ಸ್ವಯಂ ಸರ್ವಜ್ಞರಾದ ಶ್ರೀ ಶಂಕರಾಚಾರ್ಯರಿಂದ ಸಂಸ್ಥಾಪಿಸಲ್ಪಟ್ಟು ತನ್ನ ಅವಿಚ್ಛಿನ್ನ ಗುರು ಪರಂಪರೆಯಿಂದ ಮುಂದುವರಿದು ಬರುತ್ತಲಿರುವ ಶ್ರೀಗುರುಪೀಠಕ್ಕೆ ಭೂಷಣಪ್ರಾಯರಾಗಿರುವ ಶ್ರೀ ಗುರುಪುಂಗವರೆಲ್ಲಿ? ಶ್ರೀಗುರು ಮಠದ ಇತಿಹಾಸ, ಪರಂಪರೆ, ಶ್ರೀ ಶ್ರೀಗಳವರು—ಇತ್ಯಾದಿ ವಿಷಯಗಳ ಬಗೆಗೆ ಅತ್ಯಲ್ಪ ಅಂಶಗಳನ್ನು ಅರಿತಿರುವ ನಾನೆಲ್ಲಿ? ಆದರೂ ಸಂಕಲ್ಪಿಸಿದ ಈ ಸತ್ಕಾರ್ಯವನ್ನು ಪರಿಪೂರ್ಣಗೊಳಿಸಲೇಬೇಕೆಂದು ನಿಶ್ಚಯಿಸಿ, ವಿಷಯ ಸಂಗ್ರಹಣೆಗಾಗಿ ಶ್ರೀ ಶ್ರೀಗಳವರನ್ನೇ ಶರಣುಹೋದೆ. ಹಗಲಿರು-ಳೆನ್ನದೆ, ದಣಿವು ಬೇಸರಿಕೆಗಳಿಲ್ಲದೆ ಶ್ರೀ ಮಠೀಯ ಗ್ರಂಥಾಲಯದಲ್ಲಿದ್ದ ಚಿದ್ವಿಲಾಸೀಯ ಶಂಕರ ವಿಜಯ ಸಹ್ಯಾದ್ರಿಖಂಡ (ಸ್ಕಂದ ಪುರಾಣಾಂತರ್ಗತ), ಮಠದ ಹಿಂದಿನ ಇತಿಹಾಸ, ದಾಖಲೆಪತ್ರ, ಪರಮ ಗುರುಗಳಾದ ಶ್ರೀಮದ್ರಾಘವೇಶ್ವರ ಭಾರತೀ ಸ್ವಾಮಿಗಳಿಂದ ರಚಿತವಾದ "ಹವ್ಯಕರ ಉತ್ಪತ್ತಿಯ ಇತಿಹಾಸ" (ಸುಮಾರ ೯೦ ವರ್ಷಗಳ ಹಿಂದೆ ಮುದ್ರಿತ) – ಇತ್ಯಾದಿ ಆಕರ ಗ್ರಂಥಗಳನ್ನು ಅವರು ಸ್ವತಃ ತಾವೇ ಹುಡುಕಿ ತಂದು ಕೊಟ್ಟದ್ದಲ್ಲದೆ ಆಧಾರ ಶ್ಲೋಕಗಳನ್ನೂ ಅಪ್ಪಣೆ ಕೊಡಿಸಿದರು. ಅಂತಹ ಶ್ರೀ ಶ್ರೀಗಳವರಿಗೆ ಪ್ರಣಾಮಗಳನ್ನು ಪ್ರಥಮವಾಗಿ ಸಮರ್ಪಿಸುವೆ.

ಶ್ರೀ ಗುರುಚರಣಾಶ್ರಿತ ಉಂಚಗೇರಿ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳು ಪ್ರಸ್ತುತ ಗ್ರಂಥಲೇಖನ ಸಮಯದಲ್ಲಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿ ಉಪಕರಿಸಿದ್ದಾರೆ. ಅವರಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ಸಿದ್ಧಾಪುರ (ಉ. ಕನ್ನಡಜಿಲ್ಲೆ)ದ ಮಹಾತ್ಮಾಗಾಂಧಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ಪ್ರಾಚಾರ್ಯರಾದ ಶ್ರೀಯುತ ಬಿ. ಎಚ್. ಶ್ರೀಧರರು ವಿದ್ವಾಂಸರು; ಸಂಸ್ಕೃತ, ಕನ್ನಡ, ಆಂಗ್ಲ ಭಾಷೆಗಳಲ್ಲಿ ಪರಿಣತರು. ಯಲ್ಲಾಪುರದಲ್ಲಿ ಜರುಗಿದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಅಲಂಕರಿಸಿ ಯಶಸ್ವಿಯಾಗಿಸಿದವರು. ಎಲ್ಲಕ್ಕೂ ಹೆಚ್ಚಾಗಿ ಶ್ರೀಮಠದ ತುಂಬು ಅಭಿಮಾನಿಗಳು. ಅಂಥವರು ಈ ಪುಸ್ತಕಕ್ಕೆ ಮುನ್ನುಡಿಕಾರರಾಗಲು ಒಪ್ಪಿದುದು ಒಂದು ಸುದೈವ. ಶ್ರೀಯುತರಿಗೆ ನನ್ನ ಹಾರ್ದಿಕ ಕೃತಜ್ಞತೆಗಳು.

ಮತ ಮಾನ್ಯಗಳ ಬಗೆಗೆ, ಧರ್ಮಪೀಠದ ಕುರಿತಾಗಿ, ಧರ್ಮಾಚಾರ್ಯರ ವಿಷಯವಾಗಿ ಪ್ರಕಟವಾಗುವ ಗ್ರಂಥವು ಸಾಧ್ಯವಿದ್ದಷ್ಟೂ ದೋಷರಹಿತವಾಗಿಯೂ ನಿಖರವಾದ ವಿಷಯಗಳನ್ನು ಸಂದೇಹಕ್ಕೆಡೆಯಿರದಂತೆ ನಿರೂಪಿಸುವಂತಹುದಾಗಿಯೂ ಇರುವುದು ಅತ್ಯಾವಶ್ಯಕ. ಈ ದಿಶೆಯಲ್ಲಿ ಪರಿಶೋಧಕರಾಗಿ ಕಾರ್ಯ ನಿರ್ವಹಿಸಿದ್ದಲ್ಲದೆ, ಸಮುಚಿತ ಸಲಹೆಗಳನ್ನೂ ನೀಡಿದ ಪ್ರಾಧ್ಯಾಪಕ ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮಾ, ಬೆಂಗಳೂರು—ಇವರಿಗೂ, ಪ್ರಾಧ್ಯಾಪಕ ವಿದ್ವಾನ್ ಶ್ರೀ ಟಿ. ಕೇಶವ ಭಟ್ಟ, ಎಂ.ಎ., ಬೆಂಗಳೂರು – ಇವರಿಗೂ ಲೇಖಕನ ಹಾರ್ದಿಕ ನೆನಕೆಗಳು ಸಲ್ಲಲೇ ಬೇಕು.

ಶ್ರೀ ಗುರುಮಠದ ಇತಿಹಾಸ ಲೇಖಕರಾದ ಶ್ರೀ. ಗ. ಸು. ವೈದ್ಯ (ಪಟೇಲರು, ಬರಿಗೆ, ಸೊರಬ), ಹಾಗೂ ಶ್ರೀ ಗಣೇಶ ಭಟ್ಟ, ಕೆಕ್ಕಾರ (ಸಂಪಾದಕರು, 'ಮುನ್ನಡೆ' ವಾರಪತ್ರಿಕೆ) ಸಿದ್ದಾಪುರ – ಇವರಿರ್ವರಿಗೂ ಈ ಗ್ರಂಥದ ಕರಡು ಪ್ರತಿಯನ್ನು ಕೇಳಿ ಓದಿಸಿ ಯೋಗ್ಯಮಾರ್ಗದರ್ಶನ ನೀಡಿದ ಬಗ್ಗೆ ನಾನು ಆಭಾರಿ.

ಈ ಪುಸ್ತಕವನ್ನು ಪ್ರಕಟಿಸಿದ ಸದ್ಗ್ರಂಥ ಪ್ರಕಾಶನ ಸಮಿತಿ, ಬೆಂಗಳೂರು ಇವರಿಗೂ, ಸಕಾಲದಲ್ಲಿ ಅಂದವಾಗಿ ಮುದ್ರಿಸಿ ಕೊಟ್ಟ ಬೆಂಗಳೂರಿನ ಶ್ರೀ ಗುರುಪ್ರಸಾದ್ ಮುದ್ರಣಾಲಯ ಮಾಲಿಕರಾದ ಶ್ರೀ ಬಿ. ಕೃಷ್ಣ ಭಟ್ಟರಿಗೂ ನಾನು ಕೃತಜ್ಞ.

ಈ ದಿವ್ಯ ಗ್ರಂಥವನ್ನು ಓದಿ ಕೇಳಿ, ನಮ್ಮ ಭವ್ಯವೂ ದಿವ್ಯವೂ ಆದ ಶ್ರೀ ಗುರುಮಠ ಹಾಗೂ ಪ್ರಕೃತ ಪೀಠಾಧಿಷ್ಠಿತರಾದ ಶ್ರೀ ಶ್ರೀಗಳವರ ಬಗೆಗೆ ನೈಜವಾದ ತಿಳಿವಳಿಕೆಯನ್ನು ಪಡೆದುಕೊಂಡು ಶಿಷ್ಯಜನತೆ ಶ್ರೇಯೋ ಭಾಗಿಗಳಾದರೆ ಈ ಲೇಖಕನ ಶ್ರಮ ಸಾರ್ಥಕ.

ಮಾನವ ಸಹಜವಾದ ಮರೆವು ಅಲಸಿಕೆಗಳಿಂದಾಗಿ ಈ ಗ್ರಂಥದಲ್ಲಿ ತಲೆದೋರಿರಬಹುದಾದ ಲೋಪದೋಷಗಳನ್ನು ಸಹೃದಯ ವಾಚಕರು ತಿಳಿಸುವ ಔದಾರ್ಯ ತೋರಿದರೆ, ಮುಂದಿನ ಆವೃತ್ತಿಗಳಲ್ಲಿ ತಿದ್ದಿಕೊಳ್ಳುವ ಆಶ್ವಾಸನೆಯನ್ನು ನೀಡ ಬಯಸುವೆ.

ಯದತ್ರ ಸೌಷ್ಠವಂ ಕಿಂಚಿತ್ ತದ್ಗುರೋರೇವ ಮೇ ನ ಹಿ ।
ಯದತ್ರಾಸೌಷ್ಠವಂ ಕಿಂಚಿತ್ ಶನ್ಮಮೈವ ಗುರೋರ್ನ ಹಿ ॥

ಎಂಬಂತೆ ಈ ಪುಟ್ಟ ಪುಸ್ತಕದಲ್ಲಿ ತೋರಿಬರುವ ಗುಣಗಣಗಳೆಲ್ಲವೂ ಪಥ ಪ್ರದರ್ಶಕರಾದ ಶ್ರೀ ಶ್ರೀಗಳವರಿಗೆ ಮುಡುಪು. ಬಂದಿರಬಹುದಾದ ಕುಂದು ಕೊರತೆಗಳಿಗೆ ಲೇಖಕನೇ ಹೊಣೆಗಾರನೆನ್ನುವುದನ್ನು ಸ್ಪಷ್ಟಪಡಿಸ ಬಯಸುವೆ.

ಗ್ರಂಥಸುಮ ಸಮರ್ಪಣ

ರಾಮಚಂದ್ರ ಗುರೋಃ ಶಿಷ್ಯಂ ರಾಮಚಂದ್ರ ಪದಾರ್ಚಕಮ್ ।
ರಾಮಚಂದ್ರ ಮಠಸ್ಥಂ ತಂ ರಾಘವೇಂದ್ರಂ ಭಜಾಮ್ಯಹಮ್ ॥

ಶ್ರೀಮತ್ ಪರಮಹಂಸೇತ್ಯಾದಿ ಬಿರುದಾಲಂಕೃತರೂ, ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಪೀಠಾಧಿಷ್ಠಿತರೂ ಶ್ರೀ ಗೋಕರ್ಣ ಮಹಾ ಮಂಡಲಾಚಾರ್ಯರೂ ಶ್ರೀ ಮದ್ರಾಮಚಂದ್ರಾಪುರ ಗುರುಪೀಠವಲ್ಲಿ ಪ್ರಕೃತ ವಿರಾಜಿಸುತ್ತಲಿರುವವರೂ ಸದ್ಬುದ್ಧಿಯನ್ನು ಪ್ರಚೋದಿಸಿ, ರಹಸ್ಯ ಮಂತ್ರಗಳನ್ನುಪದೇಶಿಸಿ ಸಕಲ ಸೌಕರ್ಯಗಳನ್ನೂ ಕಲ್ಪಿಸಿ, ನನ್ನ ಸರ್ವವಿಧದ ಪ್ರಗತಿಗೆ ಪ್ರಧಾನ ಕಾರಣರೂ ಆದ–ಪರಮ ಪೂಜ್ಯ ಶ್ರೀಮದ್ರಾಘವೇಂದ್ರ ಭಾರತೀ ಸ್ವಾಮಿಗಳವರ ದಿವ್ಯಪಾದಪದ್ಮಗಳಲ್ಲಿ ಅನಂತ ನುತಿಸಹಿತ ಶ್ರದ್ಧಾ ಭಕ್ತಿ ಪುರಸ್ಸರವಾಗಿ ಈ ಗ್ರಂಥಸುಮವನ್ನು ಸಮರ್ಪಿಸಿ, ಶುಭಾಶೀರ್ವಾದವನ್ನು ಅನುಗ್ರಹಿಸಬೇಕೆಂದು ಸಾಷ್ಟಾಂಗ ನಮಿಸಿ ಯಾಚಿಸುವ,

ದಿನಾಂಕ : ೧೪-೭-೧೯೭೫ **ರಾಮಕೃಷ್ಣ**, ಅಡ್ಕೋಳಿ, ಮೂರೂರು.

ಅನುಕ್ರಮಣಿಕೆ

	ಪುಟ
ಮುನ್ನುಡಿ : ಪ್ರಾಚಾರ್ಯ ಶ್ರೀ ಬಿ. ಎಚ್. ಶ್ರೀಧರರವರಿಂದ	v–vi
ಲೇಖಕನ ಅರಿಕೆ	vii–xii
ಅನುಕ್ರಮಣಿಕೆ	
ಪ್ರಕಾಶರ ನುಡಿ – ಕೃತಜ್ಞತೆಗಳು	xiii–xxi
ಗ್ರಂಥಗಳು ದೊರೆಯುವ ಸ್ಥಳ	xxi
ಸದ್ಗ್ರಂಥ ಪ್ರಕಾಶನ ಸಮಿತಿಯು ವಿವರ	xxii–xxiv
ಭಕ್ತ್ಯಂಜಲಿ	xxv–xxvii
ಗ್ರಂಥ ಪುನರ್ಮುದ್ರಣ	xxviii
ಪ್ರಕಾಶಕರ ಮತ್ತು ಮುದ್ರಕರ ಸಂಕ್ಷಿಪ್ತ ವಿಚಾರ	xxix–xxxi
ಪೀಠಿಕೆ :	೧–೧೧
ಶ್ರೀಮಜ್ಜಗದ್ಗುರು ಶಂಕರಾಚಾರ್ಯರು	೧–೨
ಶ್ರೀ ರಾಮಚಂದ್ರಾಪುರ ಮಠ	೩–೪
ಶ್ರೀ ಗುರುಪರಂಪರೆ	೫–೬
ಶ್ರೀ ರಾಮಚಂದ್ರಾಪುರ ಮಠದ ಶಿಷ್ಯ ಸಮಾಜ	೭–೧೧
ಚರಿತ್ರ ಭಾಗ :	೧೨–೧೦೪
ನಮನ	೧೨
ಸಂನ್ಯಾಸಾಶ್ರಮ ಸ್ವೀಕಾರ	೧೩–೧೪
ಬಾಲ್ಯ–ವಿದ್ಯಾಭ್ಯಾಸ	೧೫–೨೧
ಹಿರಿಯ ಸ್ವಾಮಿಗಳ ಕಾಶೀ ಪ್ರಯಾಣ	೨೨–೩೦
ಆಡಳಿತ ಸ್ವೀಕಾರ	೩೧
ಜ್ಞಾನಸಿಂಹಾಸನದ ಸ್ವರೂಪ ದರ್ಶನ	೩೨–೩೪
ಸಾಧಿಸಿದ ಮಹಾ ಕಾರ್ಯಗಳು	೩೫–೪೦
ದೇವಾಲಯಗಳ ಜೀರ್ಣೋದ್ಧಾರ – ಪ್ರೋತ್ಸಾಹ	೪೧–೪೫
ಮಠಾಯತನಗಳ ಪುನರ್ನಿರ್ಮಾಣ	೪೫–೫೩
ಪೆರಾಜೆಯಲ್ಲಿ ಶ್ರೀ ರಾಮಚಂದ್ರಾಪುರ ಮಠ ಸ್ಥಾಪನೆ	೫೪–೫೯
ಸ್ಥಿರಾಸ್ತಿಯ ಅಭಿವೃದ್ಧಿ	೬೦–೬೧
ಸಮಾಜ ಸಂಘಟನೆ	೬೨–೬೬
ಲೌಕಿಕ ವಿದ್ಯಾಪ್ರಸಾರ	೬೭–೭೨
ಪುಸ್ತಕ ಪ್ರಕಾಶನ – ಪ್ರೋತ್ಸಾಹ	೭೩–೭೪
ಶ್ರೀಗಳವರ ಗುಣವಿಶೇಷಗಳು – ಮಹಿಮೆಗಳು	೭೫–೧೦೪
ಅನುಬಂಧ ೧ : ಭಾಷಣಗಳು	೧೦೫–೧೪೪
ಅನುಬಂಧ ೨ : ವಿಚಾರದರ್ಶನ	೧೪೫–೧೪೯
ಅನುಬಂಧ ೩ : ಗುರುಶಿಷ್ಯ ಸಂಬಂಧದ ಮಹತ್ತ್ವ	೧೫೦–೧೬೩
ಅನುಬಂಧ ೪ : ಸ್ತುತಿಗಳು – ೧ ಸಂಸ್ಕೃತ	೧೬೫–೧೮೮
ಸ್ತುತಿಗಳು – ೨ ಕನ್ನಡ	೧೮೯–೨೦೧
ಅನುಬಂಧ ೫ : ೧ ಅಹಿಚ್ಛತ್ರವರ್ತಮಾನ ಸ್ಥಾನ ನಿರ್ಣಯ	೨೦೩–೨೦೬
೨ ಶ್ರೀ ಶಂಕರಾಚಾರ್ಯ ಪೀಠ ಸ್ಥಾಪನೆ ಮತ್ತು ಆವಶ್ಯಕತೆ	೨೦೭–೨೧೭
೩ ಸಮಾಜ ರಕ್ಷಣೆಯ ಆವಶ್ಯಕತೆ	೨೧೮–೨೩೪

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಸರಿ
೩೧	೨	ಕಾತ್ಯಾಂ	ಕಾಶ್ಯಾಂ
೧೦೩	೧೪	ಪರಿವ್ರಾದುಕ್ತ	ಪರಿವ್ರಾಡುಕ್ತ
೧೫೪	೧೬	ದೃಷ್ಟ	ದೃಷ್ಟ
೧೫೮	೧	ಜನ	ಜನ್ಮ
೧೬೨	೩	ಭೇಪೆಜೇ	ಭೇಪಜೇ
೧೬೬	೧	ಸಿಖಿಲಾನ್	ನಿಖಿಲಾನ್
೧೬೭	೨೫	ನಮಃ	ನುಮಃ
೧೭೨	೧೮	ಭಿವೃದ್ಧ	ಭಿವೃದ್ಧಿ
೧೮೦	೧೦	ದ್ವಾದಶಕದ್	ದ್ವಾದಶಕವ್
೧೮೧	೨೩	ನಾಗದು	ನಾಗಲದು
೧೮೨	೭	ಜಾರು	ಚಾರು
೧೮೩	೩	ರುದ್ರ	ರುಂದ್ರ
೧೮೪	೨೧	ಯಲ್ಲ	ಯಿಲ್ಲ
೧೮೫	೪	ನೆಂಬದದಿ	ನಂಬಂದದಿ
	೧೪	ಸವೆದು	ಸದೆದು
೨೨೦	೨೧	ಆಜಾರೋ	ಆಚಾರೋ
೨೨೨	೧೮	ಲೋಲ್ತ್ವಂ	ಲೋಲುಪ್ತ್ವಂ
	೨೪	ಸೋSಲ್ಸ	ಸೋSಲ್ಪ
೨೨೮	೨೩	ಪ್ರಾಪ್ಸ್ಯವ	ಪ್ರಾಪ್ಸ್ಯೆವ

ಪ್ರಕಾಶಕರ ನುಡಿ

ನಮ್ಮ ಸಮಾಜದ ಪರಮಪೂಜ್ಯ ಗುರುಗಳಾದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ರಾಮಚಂದ್ರಾಪುರ ಮಠದ ಶ್ರೀಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳವರ ದಿವ್ಯ ಜೀವನಚರಿತ್ರೆಯನ್ನು ನಾವೀಗ ಸಮಾಜದ ಬಾಂಧವರಿಗೆ ನೀಡುತ್ತಿದ್ದೇವೆ. ಈ ಸಂದರ್ಭದಲ್ಲಿ ನಾವು ನಾಲ್ಕು ಮಾತುಗಳನ್ನು ಬರೆಯಬೇಕಾದುದು ಸಾಂಪ್ರದಾಯಿಕವಷ್ಟೇ ಅಲ್ಲ, ಆವಶ್ಯಕವೂ ಆಗಿದೆ.

ಮಾನವರಲ್ಲಿ ಸರ್ವಸಾಮಾನ್ಯವಾಗಿ ಒಂದೇ ತರಹದ ದೇಹರಚನೆ ಹಾಗೂ ದೇಹದ ಗುಣಧರ್ಮಗಳಿದ್ದರೂ ಎಲ್ಲ ಮಾನವರೂ ಒಂದೇ ಮಟ್ಟದವರಲ್ಲ–ಸಮಾನರಲ್ಲ ಎಂಬುದು ಸತ್ಯವಾದ ಮಾತು. ಕೇವಲ ಲೌಕಿಕ ದೃಷ್ಟಿಯಿಂದ ಯೋಚಿಸಿದರೂ ಒಬ್ಬನು ರಾಷ್ಟ್ರದ ಸರ್ವೋಚ್ಚ ಅಧ್ಯಕ್ಷನಾಗಿ, ಸಕಲರ ವೈಭವ ಅಧಿಕಾರಗಳನ್ನು ಅನುಭವಿಸಿಕೊಂಡಿದ್ದರೆ, ಇನ್ನೊಬ್ಬನು ಏನೇನೂ ಸ್ವಾತಂತ್ರ್ಯವಿಲ್ಲದೆ ಖೈದಿಯಾಗಿರಬಹುದು. ಅಥವಾ ಇನ್ನೊಬ್ಬನು ಯಾವ ಅಧಿಕಾರವೂ ಇಲ್ಲದ ಸಾಮಾನ್ಯ ಕರ್ಮಕರನೂ ಆಗಿರಬಹುದು. ಒಬ್ಬನು ಮಹಾ ವಿಜ್ಞಾನಿಯಾಗಿ, ಜಗತ್ತಿನ ಎಲ್ಲ ಜನರ ಗೌರವಾದರಗಳಿಗೆ ಪಾತ್ರನಾಗಿರಬಹುದು. ಇನ್ನೊಬ್ಬನಿಗೆ ತನ್ನ ವಾತಾವರಣದ ಪರಿಚಯವೇ ಇಲ್ಲದಷ್ಟು ಆತನು ಹೆಡ್ಡನಿರಬಹುದು. ಒಬ್ಬನು ಶ್ರೀಮಂತಿಕೆಯಲ್ಲಿ ಓಲಾಡುತ್ತ ಕೋಟಿ ಸಂಖ್ಯೆಯಲ್ಲಿ ಬರುವ ತನ್ನ ಧನವನ್ನು ಹೇಗೆ ವಿನಿಯೋಗಿಸಬಹುದೆಂಬ ತಿಳಿಯದೆ ಚಡಪಡಿಸುತ್ತಿರಬಹುದು. ಇನ್ನೊಬ್ಬನು ಊಟಕ್ಕೇ ಗತಿಯಿಲ್ಲದೆ, ಹುಳಹುಪ್ಪಟೆಗಳಂತೆ ಸಾಯುವ ಸ್ಥಿತಿಯಲ್ಲಿರಬಹುದು. ಮಾನವನ ವಿಕಾಸದ ಪರಮಪದವಿಗೆ ತಲುಪಿ ಭಗವತ್ ಸ್ವರೂಪಿಯಾಗಿ ಮಾರ್ಪಟ್ಟು ಸ್ವಾನಂದ ಸಾಮ್ರಾಜ್ಯದಲ್ಲಿ ಓಲಾಡುತ್ತ ಲೋಕಬಂಧುವಾಗಿ ಲೋಕಪಿತನಾಗಿ ಭೂತಭವಿಷ್ಯವರ್ತಮಾನಗಳನ್ನೆಲ್ಲ ಲೀಲಾಜಾಲವಾಗಿ ತಿಳಿಯುತ್ತ, ಯಾವುದನ್ನೂ ಬಯಸದೆ, ಯಾವುದಕ್ಕಾಗಿಯೂ ಕೊರಗದೆ ಏನು ದೊರೆತರೂ ಹಿಗ್ಗದೆ, ಏನು ದೊರೆಯದಿದ್ದರೂ ಕುಗ್ಗದೆ ಇರುವ ಮಹಾನುಭಾವನು ಒಬ್ಬನಾಗಿರಬಹುದು. ತಾನಾರು ? ತನ್ನ ಇರವಿನ ರಹಸ್ಯವೇನು – ಎಂಬುವನ್ನೇ ತಿಳಿಯದೆ ಕೇವಲ ವಿಷಯಲಂಪಟನಾಗಿ ಜಾರನಾಗಿಯೋ ಚೋರನಾಗಿಯೋ ಕೊಲೆಗಡುಕನಾಗಿಯೋ ಇರುವ ಮಾನವನೂ ಇರಬಹುದು.

ಆದುದರಿಂದ ಆಕಾರದಲ್ಲಿ ಎಲ್ಲರೂ ಮಾನವರೇ ಆದರೂ ಎಲ್ಲರ ಗುಣ ಯೋಗ್ಯತೆ ಶಕ್ತಿಗಳು ಸಮಾನವಲ್ಲ–ಜೀವನಾದರ್ಶಗಳೂ ಒಂದೇ ಅಲ್ಲ. ಆದುದರಿಂದ ಸ್ನೇಹ, ಸಮಾನತೆ, ಸ್ವಾತಂತ್ರ್ಯ ಎಂಬ ಕೂಗಿನ ಮಧ್ಯದಲ್ಲಿಯೇ ಮಾನವ ಕುಲದವರು

ಒಬ್ಬರನ್ನು ತಮ್ಮ ಮುಖಂಡನೆಂದು ಒಂದಲ್ಲ ಒಂದು ವಿಧದಲ್ಲಿ ಆರಿಸಿ, ಉನ್ನತ ಪೀಠದಲ್ಲಿ ಕುಳ್ಳಿರಿಸಿ, ಅವರ ಆದೇಶವನ್ನು ಪಾಲಿಸಿ ಸಮಾಜವನ್ನು ಭದ್ರವಾಗಿ ಉಳಿಸಿ ಕೊಳ್ಳುತ್ತಾರೆ. ಇಲ್ಲವಾದರೆ ಅರಾಜಕತೆಯೆಂಬುದು ಕಟ್ಟಿಟ್ಟ ಗಂಟು.

ಪ್ರಾಚೀನಕಾಲದ ಮಹರ್ಷಿಗಳು ಈ ರಹಸ್ಯವನ್ನು ನೈಜವಾಗಿ ತಿಳಿದು ಕೊಂಡಿದ್ದರು. ಅವರು ಮಾನವರ ಮತ್ತು ಮಾನವರ ಸಂಬಂಧಗಳನ್ನು ನಿಯಂತ್ರಿಸಿ, ಧರ್ಮಮಾರ್ಗದಲ್ಲಿ ಕೊಂಡೊಯ್ಯಲು **ರಾಜ** ಎಂಬ ಸ್ಥಾನವನ್ನೂ ಮಾನವರ ಮತ್ತು ದೇವರ ನಡುವಿನ ಸಂಬಂಧವನ್ನು ಸರಿಯಾಗಿಟ್ಟುಕೊಂಡು "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ......................" ಎಂಬ ಧ್ಯೇಯದೆಡೆಗೆ ದ್ರುತಗತಿಯಿಂದ ಮುಂದೆ ಸಾಗುವಂತೆ ಮಾಡಲು **ಗುರು** ಎಂಬ ಸ್ಥಾನವನ್ನೂ ಏರ್ಪಡಿಸಿದರು.

ಇವುಗಳಲ್ಲಿ ಗುರು-ಶಿಷ್ಯ ವ್ಯವಸ್ಥೆ ಇತರ ದೇಶಗಳಲ್ಲೂ ಇದೆಯಾದರೂ ಆ ದಿಶೆಯಲ್ಲಿ ಭಾರತ ದೇಶವು ತನ್ನದೇ ಆದ ಒಂದು ವಿಶಿಷ್ಟಸ್ಥಾನವನ್ನು ಪಡೆದುಕೊಂಡಿದೆ. ಗುರು ಎಂದರೆ ಅಜ್ಞಾನವನ್ನು ನಿವಾರಿಸುವವನು ಎಂದರ್ಥ. ಸನಾತನ ಧರ್ಮದಲ್ಲಿ ಈ 'ಗುರು' ಎಂಬ ಸ್ಥಾನಕ್ಕೆ ಕೊಟ್ಟ ಮಹತ್ವವನ್ನೂ ಪ್ರಾಧಾನ್ಯವನ್ನೂ ರಾಜನಿಗೂ ಕೊಡಲಿಲ್ಲ ಎಂದರೆ ತಪ್ಪಾಗದು. ರಾಜನಾದರೂ ಗುರುವಿಗೆ ಮಣಿಯುತ್ತಿದ್ದ, ಗುರುವಿನ ಆಣತಿಯ ಗೆರೆಯನ್ನು ಮೀರಲು ಆತನು ಧೈರ್ಯಪಡುತ್ತಿರಲಿಲ್ಲ ಎಂಬು-ದರಿಂದ ನಿಜವಾಗಿ ಗುರುವೇ ಪರೋಕ್ಷವಾಗಿ ಆಳುತ್ತಿದ್ದನೇ ಹೊರತು ರಾಜನಲ್ಲ ಎಂಬುದೂ ಇದರಿಂದ ಅರ್ಥವಾಗುವುದು.

ಹುಟ್ಟಿನಿಂದ ಪ್ರತಿಯೊಬ್ಬನೂ ಆತ್ಮಜ್ಞಾನಿಯಾಗಿ ಮೆರೆಯಲು ಹಕ್ಕುಳ್ಳವನೇ. ಪ್ರತಿಯೊಬ್ಬನ ಆತ್ಮದಲ್ಲೂ ಅಂತಹ ದಿವ್ಯತೆ ಪ್ರಕಟವಾಗಲು ಬೇಕಾದ ಅಂಗಗಳು ಹಾಗೂ ಷಟ್ಚಕ್ರಗಳೇ ಮೊದಲಾದ ಸೂಕ್ಷ್ಮಸ್ಥಾನಗಳೂ ಇವೆ.

ಆದರೆ ಇದನ್ನು ತಿಳಿದು ಅನುಭವಿಸುವವರು ಬಹಳ ಅಪೂರ್ವ. ಕೆಲವರು ದೇಹಪ್ರಜ್ಞೆಯಲ್ಲೇ ಮುಳುಗಿರಬಹುದು. ಕೆಲವರು ಭಾವುಕತೆಯ ಮಟ್ಟದ ಪ್ರಜ್ಞೆ ಯನ್ನು ಬೆಳೆಸಿಕೊಂಡಿರಬಹುದು. ಆದರೆ ಆತ್ಮಪ್ರಜ್ಞೆ ಬೆಳೆಸಿಕೊಂಡವರು ಕೇವಲ ಕೆಲವರು ಮಾತ್ರ. ಆತ್ಮಪ್ರಜ್ಞೆಯ ಹಂತಕ್ಕೆ ಬಂದ ಮಾನವನು ಆತ್ಮಜ್ಞಾನಿಯಾಗಿ ಸಕಲ ದುಃಖ, ದುರಿತಗಳಿಂದಲೂ ದೂರವಾಗುತ್ತಾನೆ. ಅಹೇತುಕವಾದ ಆನಂದದಲ್ಲಿ ಓಲಾಡುತ್ತಾನೆ.

ವ್ಯಕ್ತಿಯ ಹೃದಯದಲ್ಲಿ ಆತ್ಮಜ್ಞಾನವನ್ನು ಬೆಳಗಿಸುವ ಬೇರಾವ ಸಾಧನವನ್ನೂ ಈತನಕ ಯಾರೂ ಕಂಡುಕೊಂಡಿಲ್ಲ. ಸಾಕ್ಷಾತ್ ಭಗವಂತನೇ ಆದರೂ ಈ ಕಾರ್ಯವನ್ನು ಮಾಡುವುದಿಲ್ಲ. ಇದು ಆತ್ಮಜ್ಞಾನಿಯಾದ ಗುರು ಮಾತ್ರವೇ ಮಾಡ ಬೇಕಾದ ದಿವ್ಯಕಾರ್ಯವಾಗಿದೆ.

ಮನುಷ್ಯನು ಲೌಕಿಕವಾಗಿ ಯಾವ ಸಂಪತ್ತನ್ನು ಪಡೆದರೂ ಅದರಿಂದ ದೊಡ್ಡ ಲಾಭವೇನಿಲ್ಲ – ಏಕೆಂದರೆ, ಅದೆಲ್ಲವೂ ಒಂದಲ್ಲ ಒಂದು ದಿನ ನಮ್ಮ ಕೈಬಿಟ್ಟು ಹೋಗುವುದು. ಆಧ್ಯಾತ್ಮಿಕ ಸಂಪತ್ತು ಅಂದರೆ ದೈವಿಕ ಜ್ಞಾನವೊಂದೇ ನಿಜವಾದ ಲಾಭ. ಆದುದರಿಂದ ನಿಜವಾದ ಲಾಭವನ್ನು ಗಳಿಸಿಕೊಳ್ಳಲು ನಮಗೇನು ಬೇಕು? ಗುರುವೇ ನಮ್ಮ ಸರ್ವಸ್ವ, ಅದಕ್ಕೆಯೇ "ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ। ಗುರುಸ್ಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀಗುರವೇನಮಃ" ಎಂಬ ಪ್ರಾರ್ಥನೆಯನ್ನು ಮಹರ್ಷಿಗಳು ರಚಿಸಿದರು.

ಆತ್ಮಜ್ಞಾನವಾಗಬೇಕಾದುದು ಜೀವನದ ಗುರಿಯಾದರೆ ಆತ್ಮಜ್ಞಾನವು ಇಂದಲ್ಲ ನಾಳೆಯಾದರೂ ದೊರೆಯುವಂತೆ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳನ್ನು ಅವುಗಳ ಆದ್ಯತೆಗನುಸಾರ ಸರಿಯಾದ ಚೌಕಟ್ಟಿನಲ್ಲಿ ಅಭ್ಯಸಿಸುವಂತಹ ಕ್ರಮಬದ್ಧವಾದ ಜೀವನ ನಡೆಸಬೇಕಾದುದೂ ಅಗತ್ಯವೇ. ಯಾವುದು ಸರಿ ? ಯಾವುದು ತಪ್ಪು ಎಂದು ತಿಳಿಯದಿರುವಾಗ ಗುರುವೇ ನಮ್ಮನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಬೇಕು.

ನಿಜವಾಗಿ ಆತ್ಮಜ್ಞಾನಿಯಾದ ಗುರುವು ನಮಗೆ ಕೇವಲ ಲೌಕಿಕವಾದ ಬೋಧನೆ ನೀಡುವುದು ಮಾತ್ರವಲ್ಲ–ಆತ್ಮಸಾಧನೆಯ ಉಪದೇಶವನ್ನು ಅನುಗ್ರಹಿಸುವುದು ಮಾತ್ರವಲ್ಲ – ಅತನು ಸದಾ ನಮ್ಮ ಜತೆಯಲ್ಲೇ ಇದ್ದು ನಮ್ಮನ್ನು ಸಕಲ ಅಪಾಯಗಳಿಂದ ಪಾರುಗಾಣಿಸುವನು ಎಂಬುದು ಶಾಸ್ತ್ರ ವಾಕ್ಯ. ಇದನ್ನು ನಂಬಿಕೊಳ್ಳುವಷ್ಟು ವಿಶ್ವಾಸ ನಮಗಿದೆಯೋ ಇಲ್ಲವೋ ಎಂಬುದು ಬೇರೆ ಮಾತು. ಆದರೆ ಇದರಲ್ಲಿ ಸತ್ಯವಿದೆ.

ಇಂತಹ ಗುರುಗಳ ಮೇಲೆ ಏತಕ್ಕೆ ಭಕ್ತಿಯಿಡಬೇಕು ಎಂಬ ಪ್ರಶ್ನೆಯು ಪ್ರಸ್ತುತವೇ. ಅದಕ್ಕೂ ಉತ್ತರಕೊಡಬೇಕು.

ಗುರುಭಕ್ತಿಯಿಂದ ನಮ್ಮ ದೇಹಾಭಿಮಾನವು ನಾಶವಾಗುವುದು. ಹೃದಯದಲ್ಲಿ ಶುದ್ಧತೆ, ಮುಗ್ಧತೆ, ನಮ್ರತೆ ಬೆಳೆಯಲು ಅನುಕೂಲವಾಗುವುದು. ದೇಹಾಭಿಮಾನವು ಕಡಮೆಯಾದಷ್ಟು ಆತ್ಮಾಭಿಮಾನವು ಹೆಚ್ಚುವುದು. ದೇಹಾಭಿಮಾನ ಎಂದರೆ ದೇಹಪ್ರಜ್ಞೆ, ಆತ್ಮಾಭಿಮಾನ ಎಂದರೆ ಆತ್ಮಪ್ರಜ್ಞೆ; ಹೀಗೆ ಗುರುಭಕ್ತಿಯಿಂದ ನಮ್ಮಲ್ಲಿ ಆತ್ಮಪ್ರಜ್ಞೆ ಬೆಳೆಯುವುದು.

ಇನ್ನೊಂದು ವಿಚಾರ-ಏನೆಂದರೆ, ಗುರುಗಳು ಬಾಹ್ಯವಿಷಯಗಳಲ್ಲಿ ವಿರಕ್ತರು. ಆದುದರಿಂದ ಭೋಗ ಭಾಗ್ಯಗಳಿಂದ ಅವರ ಮನ ಒಲಿಸಲು ಸಾಧ್ಯವಿಲ್ಲ. ಹಾಗಿರಲು ಅವರನ್ನೊಲಿಸುವ ಸಾಧನವಾವುದು ? ಗುರುಭಕ್ತಿ ಮತ್ತು ಗುರುಸೇವೆಗಳೇ ಅವರನ್ನೊಲಿಸುವ ಸಾಧನಗಳು.

ಗಾಢವಾದ ಗುರುಭಕ್ತಿ ಹಾಗೂ ಶ್ರದ್ಧಾಯುತವಾದ ಗುರುಸೇವೆಗಳಿಂದ ಅವರ ನಿರ್ಲಿಪ್ತವಾದ ಕರುಣಾಮಯವಾದ ಹೃದಯವು ಕರಗಿ ನೀರಾಗುವುದು. ಅಂತಹ ಸ್ಥಿತಿಯಲ್ಲೇ ಅವರು ಶಿಷ್ಯರಿಗೆ ಲೌಕಿಕವಾದ ಅಭಯವನ್ನು ನೀಡುತ್ತಾರೆ–ಆಧ್ಯಾತ್ಮಿಕ ಬೋಧನೆ ನೀಡುತ್ತಾರೆ. ಏಕೆಂದರೆ, ಅನುಗ್ರಹ ನೀಡುವ ವಿಶೇಷವಾದ ಶಕ್ತಿ ಆಗಲೇ ಅವರ ಹೃದಯದಲ್ಲಿ ಪ್ರಕಟವಾಗುವುದು.

ಅಲ್ಲದೆ ಮನುಷ್ಯನ ಜೀವನದಲ್ಲಿ ಮತ್ತು ಸಾಧನೆಯಲ್ಲಿ ಭಯ, ವಿನಯ ವಿಶ್ವಾಸವಿರಬೇಕೆಂದು ದೊಡ್ಡವರು ಹೇಳುತ್ತಾರೆ. ಸಮಾಜದಲ್ಲಿ ಎಲ್ಲರೂ ಸಮಾನರೇ–ಹಾಗಿದ್ದರೆ ಯಾರಲ್ಲಿ ಭಯ ವಿನಯ ವಿಶ್ವಾಸ ಇಟ್ಟುಕೊಳ್ಳಬಹುದು ? ಅದಕ್ಕೆ ಗುರುಗಳು ಎಂಬ ಸ್ಥಾನವೇ ಸರಿಯಾದುದು.

ಸದ್ಗುರುವಿನ ಮಹತ್ತ್ವ ಹೀಗಿದ್ದರೆ ನಮ್ಮ ರಾಮಚಂದ್ರಾಪುರ ಮಠದ ಪೂಜ್ಯ ಪೀಠವನ್ನೇರಿರುವ ಸದ್ಗುರುಗಳ ಮಹತ್ತ್ವವು ಇನ್ನಷ್ಟು ದೊಡ್ಡದಿರುವುದು.

ಕಾರಣ, ಸನಾತನ ಧರ್ಮದ ದಿಗ್ವಿಜಯವನ್ನು ಸಾಧಿಸಿದ ಅವತಾರಿ ಪುರುಷರಾದ ಆದಿ ಶಂಕರಾಚಾರ್ಯರು ಸ್ಥಾಪಿಸಿದ ಗುರುಪೀಠ ಇದು. ಅವರೇ ಪೂಜಿಸಿದ ಚಂದ್ರಮೌಳೀಶ್ವರ ಮತ್ತು ಶ್ರೀರಾಮಾದಿ ವಿಗ್ರಹಗಳನ್ನು ಪೂಜಿಸಿದ್ದರಿಂದ ಬರುವ ಶಕ್ತಿ ಬೇರೆ.

ಶ್ರೀ ಆದಿ ಶಂಕರಾಚಾರ್ಯರ ಕಾಲದಿಂದ ಪ್ರಾರಂಭವಾದ ಈ ಗುರು ಪರಂಪರೆಯು ಒಮ್ಮೆಯೂ ಕಡಿದಿಲ್ಲ – ಒಂದೇ ಸಮನೆ ಅದು ಮುಂದುವರಿದಿದೆ. ಆದುದರಿಂದ ಅಂದು ಓತಪ್ರೋತವಾಗಿ ಹರಿದ ಶಕ್ತಿ ಇಂದೂ ಹರಿಯುತ್ತಿದೆ.

ಮೇಲಾಗಿ ಇಂದಿನ ಪೀಠಾಧಿಪತಿಗಳಾದ ಪೂಜ್ಯ ಶ್ರೀಮದ್ರಾಘವೇಂದ್ರ ಭಾರತೀ ಶ್ರೀ ಸ್ವಾಮಿಗಳವರು ಮಹಾತಪಸ್ವಿಗಳು, ಯೋಗಸಂಪನ್ನರು, ಮಹಿಮಾನ್ವಿತರು, ಅವರ ದಿವ್ಯ ಜೀವನದ ಒಂದು ದರ್ಶನ ಈ ಪುಟಗಳಲ್ಲಿ ಸಿಗುವುದು.

ಇದರಲ್ಲಿ ಸತ್ಯವಾದ ನಿರೂಪಣೆಯಿದೆ – ಸತ್ಯಕ್ಕೆ ದೂರವಾದ ಮಾತುಗಳು ಈ ಪುಟಗಳಲ್ಲಿ ಇಲ್ಲವೇ ಇಲ್ಲ. ಆದುದರಿಂದ ಈ ಗ್ರಂಥದ ಅವಲೋಕನದಿಂದ ಪೂಜ್ಯ ಸ್ವಾಮೀಜೀಯವರು ಮೊದಲೇ ಶಕ್ತಿಯುತವಾದ ಈ ಮಹಾ ಪೀಠಕ್ಕೆ ಇನ್ನಷ್ಟು ದಿವ್ಯ ಶಕ್ತಿಯನ್ನು ಹೇಗೆ ಕೂಡಿಸಿದ್ದಾರೆಂಬುದು ತಿಳಿಯುವುದು.

ಪೂಜ್ಯ ಸ್ವಾಮೀಜೀಯವರ ದಿವ್ಯಶಕ್ತಿಗಳಿಂದ ಕೂಡಿದ ಅಲೌಕಿಕ ವ್ಯಕ್ತಿತ್ವದ ಪರಿಚಯ ನಮಗೆ ಮೊದಲೇ ಆಗಿತ್ತು. ನಾವಿದನ್ನು ಮೊದಲೇ ಪ್ರಕಟಗೊಳಿಸಬೇಕಾಗಿತ್ತು. ಆದರೆ ಅದಕ್ಕೆ ಬೇಕಾದ ಯೋಜನೆ, ಶುದ್ಧಸಾಹಿತ್ಯ ನಮಗಿರಲಿಲ್ಲ.

ಪೂಜ್ಯ ಗುರುಗಳಿಂದ ಅನನ್ಯವಾಗಿ ಲೌಕಿಕವಾದ ಹಾಗೂ ಆಧ್ಯಾತ್ಮಿಕವಾದ ಲಾಭ ಪಡೆದವರಲ್ಲಿ ಶ್ರೀ ರಾಮಕೃಷ್ಣ ಅಡ್ಕೋಳಿಯವರೂ ಒಬ್ಬರು. ಅವರ ಹೃದಯವು ಕೃತಜ್ಞತೆಯ ಭಾರದಿಂದ ಬಾಗಿತ್ತು. ಆದುದರಿಂದ ಅವರಿಗೆ ಸುಮ್ಮನಿರಲಾಗಲಿಲ್ಲ. ಪೂಜ್ಯ ಸ್ವಾಮೀಜೀಯವರ ವಿಚಾರದಲ್ಲಿ ಒಂದು ಗ್ರಂಥ ಬರೆಯುವ ಒಂದು ದಿವ್ಯ ಪ್ರೇರಣೆಯು ಅವರಿಗೆ ಬಂತು.

ಆದುದರಿಂದಲೇ ಅವರು ಗ್ರಂಥವನ್ನು ಬರೆದರು. ಇತರ ವಿದ್ವಾಂಸರು ಅದನ್ನು ಪರಿಷ್ಕರಿಸಿದರು. ಇದನ್ನು ನೋಡಿ ಇದನ್ನು ಸಮಾಜದ ಮುಂದೆ ಇಡುವುದು ನಮ್ಮ ಆದ್ಯ ಕರ್ತವ್ಯವೆಂದು ಭಾವಿಸಿ ನಾವಿದನ್ನು ಸಮಾಜಕ್ಕೆ ಸಮರ್ಪಿಸುತ್ತಿದ್ದೇವೆ.

ಹಿಂದೆ ವಿವರಿಸಿದ ರೀತಿಯಲ್ಲಿ ನಮ್ಮ ಗುರುಗಳು ನಮ್ಮ ಇಡಿಯ ಸಮಾಜಕ್ಕೇನೇ ಸದ್ಗುರುಗಳಾಗಿದ್ದಾರೆ. ಅವರ ಗುರುತ್ವದ ಶಕ್ತಿಯೊಂದೆಡೆ, ಪೀಠದ ಶಕ್ತಿಯೊಂದೆಡೆ, ಪೂಜ್ಯ ಶಂಕರಾಚಾರ್ಯರಾದಿಯಾಗಿ ಹಲವು ಗುರುಗಳು ನೀಡಿದ ಶಕ್ತಿಯಿನ್ನೊಂದೆಡೆ, ಚಂದ್ರಮೌಳೀಶ್ವರ, ಶ್ರೀರಾಮಚಂದ್ರ, ಶ್ರೀ ಚಕ್ರಗಳ ಪೂಜೆಯಿಂದ ಬಂದ ಶಕ್ತಿ ಮಗುದೊಂದೆಡೆ. ಅಲ್ಲದೆ ಶ್ರೀಗಳವರ ಸ್ವಂತ ಅನುಷ್ಠಾನ, ನಿಯಮ, ತಪಸ್ಸುಗಳಿಂದ ಬಂದ ಶಕ್ತಿಯಿನ್ನೊಂದೆಡೆ. ನಾವು ತಲೆಬಾಗುವಂತೆ ಮಾಡಲು ಒಂದೊಂದೇ ಶಕ್ತಿ ಸಾಕು. ಅಂಥಾದ್ದರಲ್ಲಿ ಇಂತಹ ವಿವಿಧ ಶಕ್ತಿಗಳ ಸಂಗಮವಾಗಿದೆ ಎಂದರೆ ನಾವೆಷ್ಟು ಬಾಗಬೇಡ ?

ಪೂಜ್ಯ ಗುರುಗಳು, ಈ ಗ್ರಂಥದಲ್ಲಿ ಬಣ್ಣಿಸಿದಂತೆ ಆಧ್ಯಾತ್ಮಿಕ ಗುರುಗಳೂ ಹೌದು ; ನಮ್ಮನ್ನು ಸನ್ಮಾರ್ಗದಲ್ಲಿ ಹಚ್ಚುವ ಪೀಠಾಧಿಪತಿಗಳೂ ಹೌದು ; ಅತ್ಯಂತ ಆಧುನಿಕ ದೃಷ್ಟಿಕೋನಗಳನ್ನು ಪಡೆದುಕೊಂಡಿರುವ ಇಡಿಯ ಸಮಾಜದ ಏಕಮಾತ್ರ ನಾಯಕರೂ ಹೌದು. ಅವರ ಆಶ್ರಯದಲ್ಲಿ ಶಿಷ್ಯರಾದ ನಮ್ಮ ಭವಿಷ್ಯತ್ತು ಅತ್ಯಂತ ಭದ್ರವಾಗಿದೆ. ಅವರ ಆಶೀರ್ವಾದ, ಅನುಗ್ರಹಗಳು, ನಮಗೆ ಭದ್ರವಾದ ಕವಚ ವಂತಿವೆ. ಇಂತಹ ತಪಸ್ವಿಗಳ ಮಾರ್ಗದರ್ಶನ, ನಾಯಕತ್ವ, ಆಶೀರ್ವಾದ ಸದಾ ನಮ್ಮ ಮೇಲೆ ಇರುವಾಗ ನಾವು ನಮ್ಮ ಸಮಾಜವನ್ನು ಹೇಗೆ ಪುನಾರಚಿಸಬಹುದು ? ಹೇಗೆ ಬಲವಾಗಿ ಸಂಘಟನೆ ಮಾಡಬಹುದು ? ಇವು ನಾವು ಯೋಚಿಸತಕ್ಕ ವಿಚಾರಗಳು—

೧. ಮೊತ್ತಮೊದಲು ನಮ್ಮ ಗುರುಗಳ ವಿಶೇಷವಾದ ಗುಣಗಳು, ಹಾಗೂ ಶಕ್ತಿ ಸಾಮರ್ಥ್ಯಗಳು, ಅಲ್ಲದೆ ಅವರ ದಿವ್ಯ ಜೀವನದ ವಿವರಗಳು ನಮ್ಮ ಸಮಾಜದವರಿಗೆ ಈ ಗ್ರಂಥದ ಮೂಲಕವೂ ಇತರ ರೀತಿಗಳಿಂದಲೂ ತಿಳಿಯುವಂತೆ ನಾವು ಮಾಡಬೇಕು.

೨. ನಾವು ಗುರುಗಳನ್ನು ಕುರಿತು ಗಾಢವಾದ ಗೌರವ, ವಿಶ್ವಾಸ, ಭಕ್ತಿ ಗಳನ್ನು ಬೆಳೆಸಿಕೊಳ್ಳಬೇಕು.

೩. ಗುರುಗಳ ಮಾರ್ಗದರ್ಶನದಂತೆ ನಮ್ಮ ಬದುಕನ್ನು ಧರ್ಮ ಮಾರ್ಗದಲ್ಲಿ ನಾವು ನಡೆಸಿ ಪವಿತ್ರವಾದ ಹೃದಯವನ್ನು ಬೆಳೆಸಿಕೊಳ್ಳಬೇಕು.

೪. ನಾವು ಆಗಿಂದಾಗ ಗುರುಗಳನ್ನು ಸಂದರ್ಶಿಸಿ, ಅವರ ಆಶೀರ್ವಾದ, ಮಾರ್ಗದರ್ಶನಗಳನ್ನು ಪಡೆದುಕೊಳ್ಳಬೇಕು.

೫. ಗುರುಗಳು ಭಾಗವಹಿಸಿ, ಪ್ರವಚನ ನೀಡುವ ಸಭೆ ಸಮಾರಂಭಗಳಲ್ಲಿ ನಾವೂ ಭಾಗವಹಿಸಿ, ಅವರ ಉತ್ತಮ ಉಪದೇಶದ ಲಾಭವನ್ನು ಪಡೆದುಕೊಳ್ಳಬೇಕು.

೬. ನಮ್ಮ ಮನೆಗಳಿಗೆ, ಸಂಘ ಸಂಸ್ಥೆಗಳಿಗೆ, ದೇವಸ್ಥಾನಗಳಿಗೆ, ನಮ್ಮ ಊರಿನ ಮಠಗಳಿಗೆ ನಾವು ಪೂಜ್ಯ ಗುರುಗಳನ್ನು ಆಗಿಂದಾಗ ಭಕ್ತಿಯಿಂದ ಬರ ಮಾಡಿಸಿ, ಅವರ ದರ್ಶನದ ಹಾಗೂ ಉಪದೇಶದ ಲಾಭ ನಮಗೆ ಮಾತ್ರವಲ್ಲದೆ ಊರಿನ ಇತರರಿಗೂ ಸಿಗುವಂತೆ ಮಾಡಿಸಬೇಕು.

೭. ಗುರುಗಳಿಗೆ ನಮ್ಮ ಭಕ್ತಿ ಗೌರವದ ದ್ಯೋತಕವಾಗಿ ಕಾಣಿಕೆ, ಫಲ, ಪುಷ್ಪಾದಿಗಳನ್ನು ಆಗಿಂದಾಗ ಸಮರ್ಪಿಸಿ ಗುರೂಪಾಸನೆಯನ್ನು ಮಾಡುತ್ತಾ ಅವರ ಆಶೀರ್ವಾದ ಪಡೆದುಕೊಳ್ಳಬೇಕು.

೮. ಸಮಾಜ ಬಾಂಧವರು ಸುಸಂಘಟಿತರಾಗಿ, ಸಮಾಜದ ಅಭ್ಯುದಯಕ್ಕಾಗಿ ಮಾಡುವ ಸಕಲ ಕಾರ್ಯಗಳಲ್ಲೂ ನಮ್ಮ ತನು, ಮನ, ಧನವನ್ನು ಸಮರ್ಪಿಸಲು ಸಿದ್ಧರಾಗಬೇಕು.

೯. ನಮ್ಮ ನಮ್ಮ ಊರಿನ ಹಾಗೂ ಸಮಾಜದ ಮಠ, ಮಂದಿರ, ದೇವಾಲಯಗಳು ಒಳ್ಳೆಯ ರೀತಿಯಲ್ಲಿ ಇರುವಂತೆ ನಾವು ಸಹಕರಿಸಬೇಕು.

ಪೀಠಾಧಿಪತಿಗಳಾದ ನಮ್ಮ ಗುರುಗಳು ಸರ್ವಸಂಗ ಪರಿತ್ಯಾಗಿಗಳು, ವಿರಕ್ತರು. ಅವರ ಸ್ಥಾನದ ಗೌರವಕ್ಕಾಗಿ ಮಾತ್ರ ಕೆಲವೊಂದು ರಾಜವೈಭವದ ಸಂಕೇತಗಳನ್ನು ಅವರು ಇಟ್ಟುಕೊಂಡಿದ್ದಾರೆ. ಸಹಜವಾಗಿ ಸ್ವಾಮಿಗಳಿಗೆ ಬಂಧು ಬಳಗವಿಲ್ಲ, ಕುಟುಂಬ ಸಂಸಾರ ಇಲ್ಲ. ಅವರಿಗೆ ಶಿಷ್ಯಜನರೇ ಬಂಧು ಬಳಗ.

ಆದುದರಿಂದ ಸದಾ ಶಿಷ್ಯರ ಹಿತಚಿಂತನೆಯನ್ನೇ ಮಾಡುತ್ತಾ ಅವರ ಯೋಗ ಕ್ಷೇಮಕ್ಕಾಗಿ, ಸೀತಾರಾಮ ಚಂದ್ರಮೌಳೀಶ್ವರರ ಸನ್ನಿಧಿಯಲ್ಲಿ ಸಂಪ್ರಾರ್ಥಿಸುತ್ತಿರುವ ನಮ್ಮ ಗುರುಗಳನ್ನು, ನಮ್ಮ ಹೆತ್ತ ತಾಯಿ ತಂದೆಯವರಿಗಿಂತಲೂ ಆತ್ಮೀಯವಾದ,

ಪ್ರೇಮ ಗೌರವ ಭಕ್ತಿಗಳಿಂದ ನೋಡಿಕೊಂಡು, ಅವರ ಹೃದಯವನ್ನು ಕರಗಿಸಿ, ಅವರ ಆಶೀರ್ವಾದ, ಅನುಗ್ರಹಗಳನ್ನು ಪಡೆದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ನಮ್ಮ ಸಮಾಜದ ಉನ್ನತಿಗಾಗಿ ಅಹರ್ನಿಶಿ ದುಡಿಯುತ್ತ ಕಳಕಳಿಯಿಂದ ಹಲವು ಮಹಾಕಾರ್ಯಗಳನ್ನು ಮಾಡುತ್ತಿರುವ ಹಾಗೂ ಮಾಡಿಸುತ್ತಿರುವ ಪೂಜ್ಯ ಶ್ರೀ ಮದ್ರಾಘವೇಂದ್ರ ಭಾರತೀ ಸ್ವಾಮಿಗಳವರೇ ನಮ್ಮ ಸಮಾಜದ ಗುರುಗಳೂ ಪೀಠಾಧಿಪತಿಗಳೂ ಅಧಿನಾಯಕರೂ ಆಗಿರುವುದು ನಮ್ಮ ಪರಮ ಸೌಭಾಗ್ಯವಾಗಿದೆ. ಈ ಗ್ರಂಥವನ್ನು ಸಮಾಜದವರೆಲ್ಲರೂ ಓದಿ, ಕರ್ತವ್ಯವನ್ನು ಚೆನ್ನಾಗಿ ತಿಳಿದುಕೊಂಡು, ಶ್ರೀಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಲೆಂದು ಹಾರೈಸುತ್ತೇವೆ. ಅಂತಹ ಅರ್ಹತೆಯನ್ನು ನಮಗೆಲ್ಲರಿಗೂ ಶ್ರೀಗುರುಗಳು ಅನುಗ್ರಹಿಸಲೆಂದು ಶ್ರೀ ಸೀತಾ ರಾಮ ಚಂದ್ರ, ಚಂದ್ರಮೌಳೀಶ್ವರ ಹಾಗೂ ಶ್ರೀ ರಾಜರಾಜೇಶ್ವರಿಯರ ದಿವ್ಯ ಸನ್ನಿಧಿಯಲ್ಲಿ ಭಕ್ತಿಯಿಂದ ಸಂಪ್ರಾರ್ಥಿಸುತ್ತೇವೆ.

ಕೃತಜ್ಞತೆಗಳು

ಪರಮ ಪೂಜ್ಯ ಶ್ರೀಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳವರ ಈ ಚರಿತ್ರಗ್ರಂಥವನ್ನು ತಮ್ಮ ಆತ್ಮ ಪ್ರೇರಣೆಯಂತೆ ಬರೆದುಕೊಟ್ಟು ಗುರು ಭಕ್ತಿಯನ್ನು ಮೆರೆದ ಅಧ್ಯಾಪಕರೂ ಕವಿಗಳೂ ಆಗಿರುವ ಲೇಖಕ ವಿದ್ವಾನ್ **ರಾಮಕೃಷ್ಣ ಅಡ್ಕೋಳಿ** ಅವರಿಗೂ

ಮುನ್ನುಡಿಯನ್ನು ಕೃಪೆಯಿಂದ ಬರೆದುಕೊಟ್ಟ ಪ್ರಾಚಾರ್ಯ **ಶ್ರೀ ಬಿ. ಎಚ್. ಶ್ರೀಧರ**ರವರಿಗೂ

ಲೇಖಕರು ಬರೆದ ಮೂಲಪ್ರತಿಯ ಆಧಾರದಿಂದ, ತಮ್ಮ ಅನುಭವದ ಕೆಲವು ಮಹತ್ತ್ವದ ವಿಷಯಗಳನ್ನು ಸೇರಿಸಿ ಅತಿ ಶೀಘ್ರವಾಗಿ ಶುದ್ಧಪ್ರತಿಯನ್ನು ಪರಿಶೋಧಿಸಿ ಬರೆದುಕೊಟ್ಟ **ಶ್ರೀ ಮಡಿಯಾಲ ನಾರಾಯಣ ಭಟ್ಟ**ರಿಗೂ

ಬರೆದ ಗ್ರಂಥವನ್ನು ಮತ್ತು ಕವಿತೆ ಮುಂತಾದ ಇತರ ಗ್ರಂಥಭಾಗವನ್ನು ಭಾಷೆ, ಶೈಲಿ, ವಿಷಯ, ಅನುಕ್ರಮಗಳ ದೃಷ್ಟಿಯಿಂದ ಪರಿಶೋಧಿಸಿದ್ದಲ್ಲದೆ, ಕರಡಚ್ಚನ್ನು ಕೂಡ, ಎಚ್ಚರಿಕೆ ವಹಿಸಿ ತಿದ್ದಿ ಸಹಕರಿಸಿದ ವಿದ್ವಾನ್ **ಎನ್. ರಂಗನಾಥಶರ್ಮಾ** ಮತ್ತು ವಿದ್ವಾನ್ **ಟಿ. ಕೇಶವ ಭಟ್ಟ** ಅವರಿಗೂ ಇದನ್ನು ಅಚ್ಚುಮಾಡಲು ಒಪ್ಪಿಕೊಂಡು ಸುಂದರವಾಗಿ ಸಕಾಲದಲ್ಲಿ ಮುದ್ರಿಸಿಕೊಟ್ಟ ಶ್ರೀ ಗುರುಪ್ರಸಾದ್ ಪ್ರಿಂಟಿಂಗ್ ಪ್ರೆಸ್ಸಿನ ಮಾಲಿಕರಾದ **ಶ್ರೀ ಬಿ. ಕೃಷ್ಣಭಟ್ಟ**ರಿಗೂ ಅವರ ಸಹಾಯಕ ಕೆಲಸ ಗಾರರಿಗೂ **ಸಮಿತಿಯ ಹಾರ್ದಿಕ ಕೃತಜ್ಞತೆಗಳು.**

ಈ ಗ್ರಂಥದ ಅನುಬಂಧದಲ್ಲಿ ಗುರುಶಿಷ್ಯ ಸಂಬಂಧದ ಮಹತ್ತ್ವ ಎಂಬ ಲೇಖನವನ್ನು ಹವ್ಯಕ **ಸಮಾಜ** ಮತ್ತು **ಶ್ರೀ ಗುರುಮಠ ಸಂಕ್ಷಿಪ್ತ ಇತಿಹಾಸ** ಮತ್ತು **ಇತರ ಲೇಖನಗಳು** ಎಂಬ ಗ್ರಂಥದಿಂದ ಆರಿಸಿ ಪ್ರಕಟಿಸಿದ್ದೇವೆ. ಅದನ್ನು ಬರೆದ **ಶ್ರೀ ಗ. ಸು. ಪಾಟೀಲ,** ಬರಿಗೆ – ಅವರಿಗೆ ನಮ್ಮ ವಂದನೆಗಳು.

ಅನುಬಂಧ ನಾಲ್ಕರಲ್ಲಿ ಪ್ರಕಟವಾಗಿರುವ ಸಂಸ್ಕೃತ ಮತ್ತು ಕನ್ನಡ ಗುರುಸ್ತುತಿ ಪ್ರಧಾನವಾದ ಕವಿತೆಗಳನ್ನು ಬರೆದುಕೊಟ್ಟಿರುವ ಎಲ್ಲ ಭಕ್ತ ವೃಂದಕ್ಕೂ ನಮ್ಮ ಕೃತಜ್ಞತೆಗಳು ಮುಡಿಪಾಗಿವೆ.

ಈ ಗ್ರಂಥದ ಮುದ್ರಣಕಾರ್ಯವನ್ನು ಬೆಂಗಳೂರಿನ ಗುರುಪ್ರಸಾದ್ ಪ್ರಿಂಟಿಂಗ್ ಪ್ರೆಸ್ಸಿನ ಮಾಲಿಕರಾದ ಶ್ರೀ ಬಿ. ಕೃಷ್ಣಭಟ್ಟರು ವಹಿಸಿಕೊಂಡದ್ದಲ್ಲದೆ ಇಂಥದೊಂದು ಸದ್ಗ್ರಂಥವನ್ನು ಹೊರತರುವ ಅಭಿಮಾನ ಭಕ್ತಿ ಭಾವಗಳಿಂದ ಪ್ರೇರಿತರಾಗಿ, **ಮೊದಲಿನ ಒಂದು ಸಾವಿರ ಪ್ರತಿಗಳು ಸೇವಾರೂಪದಲ್ಲಿ** ಕಾಗದ ಬೈಂಡು ಇತ್ಯಾದಿ ಎಲ್ಲ ವೆಚ್ಚಸಹಿತ ಉಚಿತವಾಗಿ ಮುದ್ರಿಸಿ ಕೊಡುವುದಾಗಿಯೂ ಇನ್ನುಳಿದ ಪ್ರತಿಗಳ ವಿಷಯದಲ್ಲಿ **ಮುದ್ರಣದ ವೆಚ್ಚವನ್ನು ತಾವೇ ನಿರ್ವಹಿಸಿ** ಸೇವೆ ಸಲ್ಲಿಸುವುದಾಗಿಯೂ ಅತಿ ಶ್ರದ್ಧೆಯಿಂದ ಒಪ್ಪಿ ಅದರಂತೆ ನಡೆಸಿಕೊಟ್ಟಿರುವುದು ಶ್ಲಾಘನೀಯವೂ ಆದರ್ಶವೂ ಆಗಿದೆ. ಅವರಿಗೆ ಈ ಸದ್ಗ್ರಂಥ ಪ್ರಕಾಶನ ಸಮಿತಿಯು ವಿಶೇಷವಾದ ಅಭಿನಂದನೆ ಅಭಿವಂದನೆಗಳು ಸಲ್ಲುತ್ತವೆ.

ಲೇಖಕರಾದ ಶ್ರೀ ಅಡ್ಕೋಳಿಯವರು ಬರೆದ ಈ ಗ್ರಂಥವನ್ನು ಪ್ರಕಾಶನಕ್ಕೆ ತರಲು ಯೋಚಿಸುತ್ತ ನಾವು ಸೇರಿ **"ಸದ್ಗ್ರಂಥ ಪ್ರಕಾಶನ ಸಮಿತಿ'** ಯನ್ನು ರಚಿಸಿಕೊಂಡೆವು. ಅಧ್ಯಕ್ಷರಾದಿಯಾಗಿ ಪದಾಧಿಕಾರಿಗಳು ಹಾಗೂ ಸಮಿತಿಯವರು ರೂ. ೫೦೦ಕ್ಕೆ ಕಡಮೆಯಾಗದಂತೆ ಪ್ರತಿ ಸದಸ್ಯರೂ ನಿಧಿ ಸೇರಿಸಿಕೊಂಡೆವು. ಈ ಸಂಗತಿಯನ್ನು ತಿಳಿದು ಕೆಲವು ಮಹನೀಯರು ಸ್ವಯಂ ಪ್ರೇರಣೆಯಿಂದಲೇ ಬಂದು ನೆರವಾದುದು ಸಂಸ್ಮರಣೀಯ. ಶ್ರೀಮಠದ ನೇತೃತ್ವದಲ್ಲಿ ನಡೆಯುವ ಸಮಾಜದ ಅಭಿವೃದ್ಧಿ ಕಾರ್ಯಕಲಾಪಗಳಲ್ಲಿ ತನು ಮನೋ ಧನಗಳಿಂದ ಸೇವೆ ಸಲ್ಲಿಸತಕ್ಕವರು ಬಹು ಮಂದಿ ಇರುವರೆಂಬುದು ಸರ್ವವಿದಿತ. ಅವರನ್ನೆಲ್ಲ ಕಂಡು ಅಥವಾ ಪತ್ರ ಬರೆದು ಕೇಳಿದರೆ, ಇನ್ನೂ ಎಷ್ಟೋ ವಿಧದ ಸಹಕಾರ ದೊರೆಯುತ್ತಿತ್ತೆಂಬುದೂ ನಿರ್ವಿವಾದ ವಿಷಯ. ಆದರೆ ನಮಗೆ ಅದಕ್ಕೆ ಕಾಲಾವಕಾಶವಾಗಲಿಲ್ಲ. ಮುಂದೆ ಇಂತಹ ಪ್ರಸಂಗಗಳಲ್ಲಿ ಅವರಿಗೆಲ್ಲ ತಿಳಿಸಲು ಅನುಕೂಲವಾದೀತೆಂದು ಸಮಾಧಾನಪಟ್ಟುಕೊಂಡಿದ್ದೇವೆ.

ಕನ್ನಡಿಗರು ಈ ಸದ್ಗ್ರಂಥವನ್ನು ಕೊಂಡೋದಿದರೆ, ವಿಚಾರಗಳನ್ನರಿತು ಆಚರಿಸಲು ಪ್ರೇರಿತರಾದರೆ ನಮ್ಮ ಶ್ರಮ ಸಾರ್ಥಕ; ಓದುಗರ ಜೀವನವೂ ಸಾರ್ಥಕವಾಗುವುದು. ಹಾಗೆ ಆಗುವಂತೆ ಶ್ರೀ ಗುರ್ವನುಗ್ರಹವಿರುವುದೆಂದು ತಿಳಿಸುತ್ತಿದ್ದೇವೆ.

ಬೆಂಗಳೂರು
೨೩–೭–೧೯೭೫
(ವ್ಯಾಸ ಪೂರ್ಣಿಮೆ)

ಪ್ರಕಾಶಕರು
ಸದ್ಗ್ರಂಥ ಪ್ರಕಾಶನ ಸಮಿತಿ

ಗ್ರಂಥಗಳು ದೊರೆಯುವ ಸ್ಥಳ

೧. **ಕಾರ್ಯದರ್ಶಿ, ಸದ್ಗ್ರಂಥ ಪ್ರಕಾಶನ ಸಮಿತಿ,**
ಹವ್ಯಕಬ್ರಾಹ್ಮಣ ಮಹಾಸಭಾ, ೧೧ ನೆಯ ಅಡ್ಡ ರಸ್ತೆ,
ಮಲ್ಲೇಶ್ವರ, ಬೆಂಗಳೂರು–೩.

೨. **ಚಿರ ಸಾಹಿತ್ಯ ಪ್ರಕಾಶನ,**
೧೫ ನೆಯ ಮುಖ್ಯರಸ್ತೆ, ಬನಶಂಕರಿ ೨ ನೆಯ ಹಂತ,
ಜಯನಗರ, ಬೆಂಗಳೂರು–೫೬೦ ೦೭೦.

೩. **ಶ್ರೀ ಗುರುಪ್ರಸಾದ ಪ್ರಿಂಟರ್ಸ್,**
೩೫, ರತ್ನವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು–೫೬೦ ೦೦೪

೪. **ಶ್ರೀ ರಾಮಚಂದ್ರಾಪುರ ಮಠ,**
ಪೋಸ್ಟ್ : ಹನಿಯ, ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ.

೫. **ಶ್ರೀ ರಾಮಚಂದ್ರಾಪುರ ಮಠ,**
ಪೆರಾಜೆ, ಪೋಸ್ಟ್–ನೇರಳಕಟ್ಟೆ, ಬಂಟ್ವಾಳ ತಾಲೂಕು, ದ. ಕನ್ನಡ ಜಿಲ್ಲೆ.

೬. **ಶ್ರೀ ರಾಮಚಂದ್ರಾಪುರ ಮಠ,**
ತೀರ್ಥಹಳ್ಳಿ. ಶಿವಮೊಗ್ಗ ಜಿಲ್ಲೆ–೫೭೭೪೩೨.

೭. **ಶ್ರೀ ರಘೂತ್ತಮ ಮಠ,**
ಪೋಸ್ಟ್ : ಕೆಕ್ಕಾರು, via ಕುಮಟಾ, ಉ. ಕನ್ನಡ ಜಿಲ್ಲೆ.

೮. **ಅನ್ನಾವರ ಅಡಿಕೆ ಕಂಪನಿ,**
ಬಿ. ಎಚ್. ರೋಡು, ಸಾಗರ, ಶಿವಮೊಗ್ಗ ಜಿಲ್ಲೆ

ಸದ್ಗ್ರಂಥ ಪ್ರಕಾಶನ ಸಮಿತಿ, ಬೆಂಗಳೂರು

೧.	ಅಧ್ಯಕ್ಷರು	ಶ್ರೀ ಸಿ. ಎಸ್. ಶಾಸ್ತ್ರಿಗಳು, ವಕೀಲರು, ಮಲೆತಡ್ಕ ಪುಣಚ ಗ್ರಾಮ, ಬಂಟ್ವಾಳ ತಾಲೂಕು, ದ. ಕ.
೨.	ಉಪಾಧ್ಯಕ್ಷರು :	ಡಾ॥ ಜಿ. ಎನ್. ಸಭಾಹಿತರು, ಹಳದೀಪುರ, ಹೊನ್ನಾವರ ತಾಲೂಕು, ಉ. ಕ.
೩.	,,	ಶ್ರೀ ಜಿ. ಎಸ್. ಭಾಗವತರು ಕುಮಟಾ, ಜಿಲ್ಲಾ ಜಡ್ಜರು, ಬೆಂಗಳೂರು.
೪.	ನಿಧಿಪ್ರಮುಖರು :	ಶ್ರೀ ಟಿ. ಎಸ್. ರಾಮಚಂದ್ರ, ಸಾಗರ, ಹೈಕೋರ್ಟ್ ಅಡ್ವೊಕೇಟ್, ನಂ-೨, ಶ್ರೀ ಕಂಠನ್ ಲೇಔಟ್, ಹೈಗ್ರೌಂಡ್ಸ್, ಬೆಂ-೧
೫.	ಪ್ರಧಾನ ಸಂಪಾದಕರು :	ಪ್ರೊ॥ ಎಂ. ಮರಿಯಪ್ಪ ಭಟ್ಟರು, ಎಂ. ಎ., ಪಂಜಸೀಮೆ, ಸುಳ್ಯ ತಾಲೂಕು, ದ. ಕ.
೬.	ಕಾರ್ಯದರ್ಶಿಗಳು :	ಶ್ರೀ ಕೆ. ಐ. ಭಟ್ಟರು, ಕರ್ಕಿ, ಹೈಕೋರ್ಟ್ ಅಡ್ವೊಕೇಟ್, ಹವ್ಯಕ ಬ್ರಾಹ್ಮಣ ಮಹಾಸಭಾ, ೧೧ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-೩.
೭.	ಸಹ-ಕಾರ್ಯದರ್ಶಿಗಳು :	ಶ್ರೀ ಟಿ. ಕೇಶವ ಭಟ್ಟರು, ಎಂ.ಎ., ೭೫೪, 'ಶ್ರೀವರ್ಧನ', ೧೫ನೆಯ ಮುಖ್ಯರಸ್ತೆ, ಬನಶಂಕರಿ ೨ನೆಯ ಹಂತ, ಬೆಂಗಳೂರು-೨೦.

ಸ ದ ಸ್ಯ ರು

ಸರ್ವಶ್ರೀಗಳಾದ :

೮. ಎಸ್. ಪಿ. ಭಟ್ಟರು, ಹಳ್ಳಾಕ್ರು, ಚೀಫ್ ಇಂಜಿನಿಯರ್,
೯೯, 'ಪರಮೇಶ್ವರ', ರಾಜಮಹಲ್ ವಿಲಾಸ ವಿಸ್ತರಣ,
ಬೆಂಗಳೂರು-೫೬೦ ೦೦೬.

೯. ಪಿ. ಎಂ. ಭಟ್ಟರು, ಕರ್ಕಿ, ಡೈರೆಕ್ಟರ್, ಸಣ್ಣ ಉಳಿತಾಯ ಯೋಜನೆ,
ಬೆಂಗಳೂರು.

೧೦. ಶ್ರೀಮತಿ ಮೀನಾಕ್ಷಮ್ಮ ಜಿ. ಕೆ. ಗೋವಿಂದ ಭಟ್ಟರು, ವಸಂತನಗರ, ಬೆಂಗಳೂರು.

೧೧. ಆಡಿಬಾಯಿ ಭೀಮ ಭಟ್ಟರು, ಅಡ್ವೊಕೇಟ್, ೧೦೮, ರಾಜಮಹಲ್ ವಿಲಾಸ ವಿಸ್ತರಣ, ಬೆಂಗಳೂರು-೫೬೦೦೦೬,

೧೨. ಶ್ರೀಮತಿ ಕಲ್ಯಾಣಿ ಕೆ ಎಂ. ಭಟ್ಟರು, ಕರ್ಕಿ, ಕುಮಾರಪಾರ್ಕ್, ಬೆಂಗಳೂರು.

೧೩. ಎಸ್. ಆರ್. ಭಾಗವತರು, ಕರ್ಕಿ, ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್, ಬೆಂಗಳೂರು.

೧೪. ಬಿ. ಕೃಷ್ಣ ಭಟ್ಟರು, ಮಾಲಿಕರು, ಗುರುಪ್ರಸಾದ ಪ್ರಿಂಟರ್ಸ್, ೩೫, ರತ್ನವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು-೪

೧೫. ಎಂ. ಪಿ. ಪ್ರಭು, ಮೇನೇಜಿಂಗ್ ಪಾರ್ಟ್ನರ್, ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್, ಬೆಂಗಳೂರು.

೧೬. ಕೆ. ಎಸ್. ಹೆಗಡೆಯವರು, ಕರ್ಕಿ, ವಿಶ್ವೇಶ್ವರಪುರಂ, ಬೆಂಗಳೂರು-೪

೧೭. ಶ್ರೀ ವಿಶ್ವನಾಥ ಧರ್ಮ ವಿದ್ಯಾಪರಿಷತ್, ಕೆಕ್ಕಾರು, ಹೊನ್ನಾವರ ತಾಲೂಕು, ಉ. ಕ.

೧೮. ಶ್ರೀ ಪರಮಾನಂದಮಠ, ಶೀಗೇಹಳ್ಳಿ, ಸಿರಸಿ ತಾಲೂಕು, ಉ. ಕ.

೧೯. ಎಲ್. ಟಿ. ತಿಮ್ಮಪ್ಪ ಹೆಗಡೆಯವರು, ಸಾಗರ, ಶಿವಮೊಗ್ಗ ಜಿಲ್ಲೆ.

೨೦. ಎಚ್. ರಾಘವೇಂದ್ರರಾವ್, ಹೊಸಬಾಳೆ, ಸೊರಬ, ಶಿವಮೊಗ್ಗ.

೨೧. ಜಿ. ಎನ್. ಹೆಗಡೆಯವರು, ದೊಡ್ಮನೆ, ಸಿದ್ದಾಪುರ, ಉ. ಕ.

೨೨. ಡಾ|| ಕೆ. ಜಿ. ಭಟ್ಟರು, ಸಿದ್ದಾಪುರ, ಉ. ಕ.

೨೩. ವೆಂಕಟರಮಣ ನರಸಿಂಹ ಉಪಾಧ್ಯಾಯರು, ಸಾಲ್ಕಣಿ, ಸಿರಸಿ ತಾಲೂಕು, ಉ. ಕ.

೨೪. ಗಣಪತಿ ನಾರಾಯಣ ಹೆಗಡೆ, ಗಡೀಮನೆ, ನೈಗಾರು ಪಟೇಲರು, ಸಿರಸಿ ತಾಲೂಕು, ಉ. ಕ.

೨೫. ಆರ್. ಎಸ್. ಭಾಗವತರು, ಎಂ. ಎಲ್. ಸಿ. ಮತ್ತು ಸಹೋದರರು ಕುಮಟಾ, ಉ. ಕ.

೨೬. ಗಣಪತಿ ಮಹಾಬಲೇಶ್ವರ ಭಟ್ಟರು, ಹೆಬ್ಬಾರನ ಕೆರೆ, ಅಡಕೆ ವ್ಯಾಪಾರಿಗಳು, ಕುಮಟಾ, ಉ. ಕ.

೨೭. ಗಣೇಶ ಪರಮೇಶ್ವರ ಹೆಗಡೆಯವರು, ಕಡ್ಲೆ, ಹೊನ್ನಾವರ ತಾಲೂಕು, ಉ. ಕ.

೨೮. ಗಣಪತಿ ಗಣೇಶ ಭಟ್ಟರು, ನರಸಿಂಹ ಗಣೇಶ ಭಟ್ಟರು, ವಕೀಲರು ಮತ್ತು ಸಹೋದರರು, ಚಿತ್ರಿಗಿ, ಕುಮಟಾ ತಾಲೂಕು, ಉ. ಕ.

೨೯. ಗಣಪನಾರಾಯಣ ಹೆಗಡೆ ಮಾಪಸ್ಸನ್, ಕರ್ಕಿ, ಹೊನ್ನಾವರ ತಾಲೂಕು, ಉ. ಕ.

೩೦. ಚಕ್ರಕೋಡಿ ಸುಬ್ಬಣ್ಣ ಜೋಯಿಸರ ಮಕ್ಕಳು–ಶಿರಂಕಲ್ಲು ಈಶ್ವರ ಜೋಯಿಸರು, ನಾರಾಯಣ ಜೋಯಿಸರು ಮತ್ತು ತಿರುಮಲೇಶ್ವರ ಜೋಯಿಸರು. ಕನ್ಯಾನ, ಬಂಟವಾಳ ತಾಲೂಕು, ದ. ಕ.

೩೧. ಬಡೆಕ್ಕಿಲ ಡಾ॥ ಶಂಭು ಶರ್ಮರು ಮತ್ತು ಡಾ॥ ಬಿ. ಶಿವರಾಮ ಭಟ್ಟರು, ಪುತ್ತೂರು, ದ. ಕ.

೩೨. ಕುಳ್ಳಜೆವಾಸಿ ಕೈಂತಜೆ ರಾಮಭಟ್ಟರು ಮತ್ತು ಮಕ್ಕಳು–ವಕೀಲ್ ಗೋವಿಂದ ಭಟ್ಟರು, ವಿಷ್ಣು ಭಟ್ಟರು, ಮಾಣಿಗ್ರಾಮ, ಬಂಟವಾಳ ತಾಲೂಕು, ದ. ಕ.

೩೩. ಆರ್. ಬಿ. ಗಿಳಿಯಾಲ, ಪಾಣಾಜೆ, ಪುತ್ತೂರು ತಾಲೂಕು, ದ. ಕ.

೩೪. ಡಾ॥ ಎಮ್. ಎನ್. ಭಟ್ಟರು, ಕಾಸರಗೋಡು, ಕೇರಳ.

೩೫. ಕುಂಡಿಗೆ ಶ್ಯಾಮ ಭಟ್ಟರು, ಎಂ. ಎ., ನೀರ್ಚಾಲು, ಕಾಸರಗೋಡು ತಾಲೂಕು, ಕೇರಳ.

೩೬. ನನಕಾನ ಶಂಕರನಾರಾಯಣ ಭಟ್ಟರು, ಎಂ. ಎ., ಅಧ್ಯಾಪಕರು, ನವಜೀವನ ಹೈಸ್ಕೂಲ್, ಬದಿಯಡ್ಕ, ಕಾಸರಗೋಡು ತಾಲೂಕು, ಕೇರಳ.

೩೭. ಎಂ. ಆರ್. ಕೃಷ್ಣಯ್ಯನವರು, ಮಡಿಕೇರಿ, ಕೊಡಗು.

೩೮. ಎಂ. ಸಿ. ಮೃತ್ಯುಂಜಯ ಭಟ್ಟ ಚೆನ್ನಕೇಶವ ಭಟ್ಟರು, ಕರ್ಕಿಕೊಪ್ಪ, ಸಾಗರ.

೩೯. ಮೂಗಮನೆ ಗಣೇಶಯ್ಯನವರು, ಶಿರೂರು, ತಾಳಗುಪ್ಪ, ಸಾಗರ ತಾಲೂಕು.

೪೦. ಡಾ॥ ಗೋಪಾಲಕೃಷ್ಣಯ್ಯ, ಕೀಲಾರ ಸಂಪಾಜೆ, ಸುಳ್ಯ ತಾಲೂಕು, ದ. ಕ.

೪೧. ಆಸ್ನಾವರ ಅಡಿಕೆ ಕಂಪನಿ, ಬಿ. ಎಚ್. ರೋಡು, ಸಾಗರ, ಶಿವಮೊಗ್ಗ ಜಿಲ್ಲೆ.

೪೨. ಬಿ. ರಾಮಚಂದ್ರ ಭಟ್, ಬೈಪದವು, ಪೋ–ಕಬಕ ಪುತ್ತೂರು ತಾಲೂಕು, ದ. ಕ.

೪೩. ಶ್ರೀಮತಿ ರಾಧಾ ಎಂ. ಎಸ್. ಭಟ್, ಎಂ. ಎಲ್. ಎ., ಸಿರ್ಸಿ

೪೪. ವಿ. ಆರ್ ಭಾಗವತರು, ಪೌರಸಭಾಧ್ಯಕ್ಷರು, ಸಿರ್ಸಿ

೪೫. ಜಿ ಎಸ್. ಭಟ್ ಮತ್ತು ಆರ್. ಜಿ. ಭಟ್, ಲೆಕ್ಕಾರ್, ನೀಲೇಕಣಿ, ಸಿರ್ಸಿ.

೪೬. ಅಡೇಮನೆ ಗೋಪಾಲಯ್ಯ, ಮುಟುಗುಪ್ಪೆ, ಸೊರಬ ತಾಲೂಕು

೪೭. ಪ್ರೆಸಿಡೆಂಟ್, ಸಂಪದಭಿವೃದ್ಧಿ ಸಮಾಜ, ಕೇದಿಗೆಸರ, ಪೋ – ಭೀಮನ ಕೋಣೆ, ಸಾಗರ ತಾಲೂಕು.

೪೮. ಶ್ರೀ ಹವ್ಯಕಬ್ರಾಹ್ಮಣ ಮಹಾಸಭಾ, ಬೆಂಗಳೂರು.

ಪ್ರಸೀದತು ಶ್ರೀರಾಮಚಂದ್ರಃ

ಗತ ಸಂ. ೧೮೮೩

ಶ್ರೀಮತ್ಪರಮಹಂಸಾದಿ ವಿರಾಜಿತ ಶ್ರೀಮಜ್ಜಗದ್ಗುರು
ಶಂಕರಾಚಾರ್ಯ ಶ್ರೀಮದ್ರಾಮಚಂದ್ರಾಪುರ ಮಠಾಧಿಷ್ಠಿತ
ಶ್ರೀಮದ್ರಾಮಚಂದ್ರ ಭಾರತೀ ಗುರುಕರಕಮಲ ಸಂಜಾತ

ಶ್ರೀಮದ್ರಾಘವೇಂದ್ರ ಭಾರತೀ ಸ್ವಾಮಿಗಳವರಿಂದ

ಬೆಂಗಳೂರು ಶ್ರೀ ಸದ್ಗ್ರಂಥ ಪ್ರಕಾಶನ ಸಮಿತಿ ವಿಷಯೇ

ಶ್ರೀಮನ್ನಾರಾಯಣ ಸ್ಮೃತಿ ಪುರಸ್ಸರ ಪ್ರೇಷಿತ ಸಂದೇಶ — ಅದಾಗಿ "ನಿಯಂತಾ ಚೇನ್ನ ವಿದ್ಯೇತ ನ ಕಶ್ಚಿದ್ಧರ್ಮಮಾಚರೇತ್" ಎಂಬ ವಚನಾನುಸಾರ ಧರ್ಮಪೀಠಸ್ಥಾಪಕ ಶ್ರೀಮಚ್ಛಂಕರಭಗವತ್ಪಾದರ ಅವಿಚ್ಛಿನ್ನ ಪರಂಪರಾ ವೈಶಿಷ್ಟ್ಯಪೂರ್ಣವಾದ ಶ್ರೀಮದ್ರಾಮಚಂದ್ರಾಪುರ ಮಠದ ಆಚಾರ್ಯರು ಧರ್ಮರಕ್ಷಣಾರ್ಥ ಅನವರತ ಪರಿಶ್ರಮಿಸುತ್ತಿರುವುದು ಪ್ರಸಿದ್ಧವಾದ ವಿಷಯ.

ಭಗವತ್ಪಾದರ ತೇಜೋವಿಶೇಷದಿಂದ ಬೆಳಗುತ್ತಿರುವ ಈ ದಿವ್ಯ ಪೀಠದ ಆಚಾರ್ಯರ ತಪೋಮಹಿಮೆ ಅನೇಕವಿಧ ಅಲೌಕಿಕ ಶಕ್ತಿಗಳ ನಿರೂಪಣ-ಪರವಾದ ಗ್ರಂಥ ರಚಿಸಿ, ಸಮರ್ಪಿಸಿ, ಜನತೆಯಲ್ಲಿ ಪ್ರಚುರ ಪಡಿಸುವ ಮೂಲಕ ಧರ್ಮಜಾಗೃತಿಯಾಗಲೆಂಬ ಘನ ಉದ್ದೇಶದಿಂದ ಪ್ರಕಟಿಸುತ್ತಿರುವುದು ಸರಿಯಷ್ಟೆ.

ವಿಭೂತಿಪುರುಷರೂ ಆವೇಶಾವತಾರಿಗಳೂ ಆದ, ಶ್ರೀಮದಾಚಾರ್ಯರ ಪ್ರಭಾವಪೂರ್ಣವಾದ ಈ ಗುರುಪೀಠದಲ್ಲಿ ಭಕ್ತಿಶ್ರದ್ಧಾನ್ವಿತರಾಗಿ ಇಂತಹ ವಿಶಿಷ್ಟ ಗ್ರಂಥ ರಚನಾಪ್ರಕಾಶನಗಳಲ್ಲಿ ಭಾಗವಹಿಸಿದ ಸಮಸ್ತ ಶಿಷ್ಯ ಭಕ್ತ ವರ್ಗದವರೂ ಶ್ರೀ ಸೀತಾರಾಮ ಚಂದ್ರಮೌಳೀಶ್ವರರ ಪರಮ ಪ್ರಸಾದ ಭಾಗಿಗಳಾಗಲೆಂದು ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣ ಸ್ಮೃತಯಃ

ಮಿತಿಃ ರಾಕ್ಷಸ ಸಂ| ಅಶ್ವಿನ ಶುಕ್ಲ ಪ್ರತಿಪದುಪರಿದ್ವಿತೀಯಾ ಇಂದುವಾಸರೇ
(ತಾ. ೬-೧೦-೧೯೭೫)

ವಸತಿಃ ಬೆಂಗಳೂರು ಬಸವನಗುಡಿ ಲಾಲ್ ಬಾಗ್ ವೆಸ್ಟ್ ಗೇಟ್ ಸಂಮುಖ ಕೂಡಲೀ ಶೃಂಗೇರಿ ಸಚ್ಚಿದಾನಂದ ಪ್ರಾಸಾದೇ (ನಂ. ೧೬೬ ವಾಣೀ ವಿಲಾಸ ರೋಡು).

ಭಕ್ತ್ಯಂಜಲಿ

ಆಧ್ಯಾತ್ಮಿಕ ಮೌಲ್ಯಗಳು ಶಿಥಿಲವಾಗುತ್ತಿರುವ ಈ ಕಾಲದಲ್ಲಿ ಅಪೌರುಷೇಯವಾದ ನಮ್ಮ ಧರ್ಮದ ಪುನರುತ್ಥಾನ ಅಗಾಧ ಕೆಲಸ. ಈ ದಿಶೆಯಲ್ಲಿ ಗುರುಪೀಠಗಳ ಕರ್ತವ್ಯ ಮಹತ್ತರವಾಗಿದೆ. ಅವು ಮತ್ತೆ ನಮಗೆ ಆಧ್ಯಾತ್ಮಿಕ ಸ್ಫೂರ್ತಿಯನ್ನು ನೀಡುವ ಕೇಂದ್ರಗಳಾಗಬೇಕಾಗಿದೆ.

ಭಾರತದ ಆತ್ಮವಿರುವುದು ಅದರ ಆಧ್ಯಾತ್ಮಿಕ ಹಿರಿಮೆಯಲ್ಲಿ. ಇಂದು ಜಗತ್ತು ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಭಾರತದ ಕಡೆ ನೋಡುತ್ತಿದೆ.

ಶ್ರೀರಾಮಚಂದ್ರಾಪುರ ಮಠದ ಯತಿವರ್ಯರಾದ ಶ್ರೀ ಶ್ರೀ ರಾಘವೇಂದ್ರ ಭಾರತೀ ಮಹಾಸ್ವಾಮಿಯವರ ತಪೋಮಹಿಮೆ ಮತ್ತು ಆಧ್ಯಾತ್ಮಿಕ ತೇಜಸ್ಸಿನಿಂದ ಪ್ರಭಾವಿತರಾದವರಲ್ಲಿ ನಾನೂ ಒಬ್ಬ. ಈ ಕಾರಣದಿಂದ ಈ ಪವಿತ್ರ ಗ್ರಂಥದ ಮುದ್ರಣ ಕಾರ್ಯವನ್ನು ಸಂತೋಷದಿಂದ ನಿರ್ವಹಿಸಿದ್ದೇನೆ. ಈಗ ಈ ಗ್ರಂಥದ ಹತ್ತು ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸ್ದೇನೆ. ಇವರಲ್ಲಿ ಮೊದಲನೆಯ 1000 ಪ್ರತಿಗಳ ಪೂರ್ಣ ವೆಚ್ಚವನ್ನು ನಾನು ಸ್ವತಃ ವಹಿಸಿಕೊಂಡಿದ್ದೇನೆ. ಉಳಿದ 9000 ಪ್ರತಿಗಳಿಗೆ ಪ್ರಕಾಶಕರು ಕಾಗದವನ್ನು ಮಾತ್ರ ಒದಗಿಸಿದ್ದಾರೆ. ಮುದ್ರಣ ವೆಚ್ಚ ನನ್ನದೇ. ಗುರು ಸೇವೆಗೆ ಇದು ನನ್ನ ಅಲ್ಪ ಕಾಣಿಕೆ. ಶ್ರೀಗಳ ಚರಣಕಮಲಗಳಲ್ಲಿ ಸಲ್ಲಿಸಿದ ಸೇವೆ ಎಂದೇ ಭಾವಿಸಿದ್ದೇನೆ.

ಬ್ರಾಹ್ಮಣ ಸಮಾಜದಲ್ಲಿ ಶ್ರೀಮಂತರಿಲ್ಲದೆ ಇಲ್ಲ. ಆದರೆ ಸಿರಿತನ ಸಾರ್ಥಕವಾಗ-ಬೇಕಾದರೆ ಅದಕ್ಕೆ ಧರ್ಮದ ತಳಹದಿ ಬೇಕು. ಶ್ರೀಮಂತಿಕೆಯ ಅಟ್ಟಹಾಸದಲ್ಲಿ ವೈಯಕ್ತಿಕ ಜೀವನದ ಮೌಲ್ಯಗಳನ್ನು ಕಡೆಗಣಿಸುವುದು ಬ್ರಾಹ್ಮಣ ಧರ್ಮಕ್ಕೇ ವ್ಯತಿರಿಕ್ತವಾದದ್ದು. ಸರ್ವರ ಹಿತವನ್ನೂ ಚಿಂತಿಸುವ ವ್ಯಕ್ತಿ ಸ್ವಾರ್ಥಿಯಾಗಲು ಸಾಧ್ಯವಿಲ್ಲ.

ನಾನು ಹಲವು ವರ್ಷಗಳಿಂದಲೇ ಬೆಂಗಳೂರಿನಲ್ಲಿ "ವಿಶ್ವಭಾರತಿ" ಬಹುಮುಖ ಯೋಜನೆಯ ಸಂಸ್ಥೆ, ತದಂಗವಾಗಿ ವಿಸ್ತೃತ ಪ್ರದೇಶದಲ್ಲಿ ವಸತಿ ಯೋಜನೆ, ಶ್ರೀ ಗುರುಪ್ರಸಾದ ಅಚ್ಚುಕೂಟ – ಮುಂತಾದುವನ್ನು ನಡೆಸಿಕೊಂಡು ಬಂದಿರುತ್ತೇನೆ. ಇವುಗಳ ಕಾರ್ಯಸಾಫಲ್ಯಕ್ಕೆ ಶ್ರೀಗುರುಗಳವರ ಕೃಪಾನುಗ್ರಹ ಮತ್ತು ಮಾರ್ಗದರ್ಶನಗಳೇ ಪ್ರೇರಕವೆಂದು ತಿಳಿದುಕೊಂಡಿದ್ದೇನೆ. ಈ ವಸತಿ ಕೇಂದ್ರದಲ್ಲಿ ಶ್ರೀ ರಾಮಚಂದ್ರಾಪುರ ಮಠದ ಒಂದು ಶಾಖೆ ಇರಬೇಕೆಂಬ ಅಪೇಕ್ಷೆಯ ಮೇರೆಗೆ ೧೯೭೫ರಲ್ಲಿ ಒಂದು ಸುಯೋಗ್ಯ ನಿವೇಶನವನ್ನು ಶ್ರೀಗುರುಗಳವರಿಗೆ ಸಮರ್ಪಣೆ ಮಾಡಿರುತ್ತೇನೆ.*

---

* ನೋಡಿ ಪುಟ ೧೦೨ ಮತ್ತು ಆ ಬಗ್ಗೆ ಜ್ಞಾಪಕ ಕವಿತೆ, ಪುಟ ೧೬೯

ಆದರೇನು ? ನಮ್ಮ ಕಾರ್ಯಗಳೆಲ್ಲ ಪ್ರಗತಿಮುಖದಲ್ಲಿರುವಾಗಲೇ ದೇಶದಲ್ಲಿ ತುರ್ತುಪರಿಸ್ಥಿತಿಯ ಕರಾಳಛಾಯೆ ಕವಿದು ಈ ಯೋಜನೆಗಳಿಗೆಲ್ಲ ಬಾಧೆಯನ್ನುಂಟು ಮಾಡಿತು. ತುರ್ತುಸ್ಥಿತಿ ಹೋದ ಮೇಲೆಯೂ ಕವಿದಿದ್ದ ಗ್ರಹಣ ತೊಲಗಲು ಸ್ವಲ್ಪಕಾಲ ಹಿಡಿಯಿತು. ಈಗ ನಮ್ಮ ಕಾರ್ಯಗಳು ಚೇತರಿಸುತ್ತಾ ಬಂದಿವೆ. ಹೀಗೆ ಆಗಲು, ನನಗೆ ಶ್ರೀ ಗುರುಗಳವರ ಕೃಪಾನುಗ್ರಹವೇ ಮುಖ್ಯ ದಾರಿದೀಪ. ಹಿಂದೆ ಮಠಕ್ಕಾಗಿ ಸಮರ್ಪಿಸಿದ ನಿವೇಶನ ಈ ಕೇಂದ್ರದ ಪೂರ್ವ ಸೀಮಾರೇಖೆ-ಯಲ್ಲಿದ್ದು, ಇಲ್ಲಿ ಶ್ರೀ ಗುರುಮಠ ಮೇಲೆದ್ದು ಈ ಕೇಂದ್ರದ ವಾತಾವರಣವನ್ನು ಪಾವನಗೊಳಿಸಲಿದೆ. ನನ್ನ ಗುರು ಸೇವೆ ಇಷ್ಟೇ ಸಾಲದು; ಈ ಕೇಂದ್ರದ ಪಶ್ಚಿಮದ ಕೊನೆಯ ಗಿರಿಧಾಮದಲ್ಲಿ ೬೦ ಅಡಿ x ೮೦ ಅಡಿ ವಿಸ್ತೀರ್ಣದ ನಿವೇಶನವನ್ನು ನಮ್ಮ ಗುರುಗಳವರಿಗೆ ವಸತಿಗೃಹ ನಿರ್ಮಾಣಕ್ಕಾಗಿ ಇದೀಗ ಸಮರ್ಪಣೆ ಮಾಡಿರುತ್ತೇನೆ. ಶ್ರೀಗಳವರು ಶಿಷ್ಯವರ್ಗಕ್ಕೆ ಸಂದರ್ಶನವೀಯುವುದಕ್ಕಾಗಿ ಬೆಂಗಳೂರಿಗೆ ಚಿತ್ತಯಿಸಿದಾಗಲೆಲ್ಲ ಇದುವರೆಗೆ ವಸತಿ ಸ್ಥಳ ಅನಿಶ್ಚಿತವಾಗಿತ್ತು. ಇನ್ನು ಮುಂದೆ ಅವರು ಬೆಂಗಳೂರಿನಲ್ಲಿರುವಾಗಲೆಲ್ಲ ಅವರ ಹಾಗೂ ಶ್ರೀ ರಾಮಚಂದ್ರ ಚಂದ್ರಮೌಳೀಶ್ವರರ ಅನುಗ್ರಹದ ದಿವ್ಯಧಾಮವು ಈ ವಸತಿ ಕೇಂದ್ರವೇ ಆಗಿರಬೇಕು. ಅವರ ಕೃಪಾವಲೋಕನದ ಪ್ರಥಮ ಭಾಗ್ಯ ನಮ್ಮದಾಗಬೇಕು – ಎಂಬ ಗುರುಭಕ್ತಿ ಪೂರ್ಣ ಅಪೇಕ್ಷೆಯೇ ಈ ನನ್ನ ಸಮರ್ಪಣೆಗೆ ಮುಖ್ಯ ಕಾರಣವಾಗಿದೆ.

ಎಲ್ಲ ಮಾನವರೂ ದೈವಾಂಶಸಂಭೂತರೆಂಬ ಭಾವನೆಯುಳ್ಳ ಪೂಜ್ಯ ಶ್ರೀಗಳು ಬ್ರಾಹ್ಮಣ ಸಮಾಜದಲ್ಲಿ ಜಾಗೃತಿ ಉಂಟಾಗುವಂತೆ, ಹೊಸದೃಷ್ಟಿ ಬೆಳೆಯುವಂತೆ ನೈತಿಕ ಮಾರ್ಗದರ್ಶನ ನೀಡುತ್ತಿರುವುದು ನಮಗೆಲ್ಲರಿಗೂ ಹೆಮ್ಮೆ. ಶ್ರೀಗಳ ನೈತಿಕ ಮಾರ್ಗದರ್ಶನ ಮುಂದೆಯೂ ಲಭಿಸುವುದೆಂಬ ವಿಶ್ವಾಸ ನಮಗಿದೆ.

ಸಮಗ್ರ ರಾಷ್ಟ್ರದ ಕಲ್ಯಾಣವು ಎಲ್ಲ ವರ್ಗಗಳ ಪರಮ ಗುರಿಯಾಗಿರಬೇಕು. ಅದರಲ್ಲೂ ವಿಶ್ವಕಲ್ಯಾಣವನ್ನೇ ತನ್ನ ಉದಾತ್ತ ಆದರ್ಶವಾಗಿ ಹೊಂದಿರುವ ಬ್ರಾಹ್ಮಣ ಸಮಾಜವಂತೂ ಸಂಕುಚಿತ ದೃಷ್ಟಿಯನ್ನು ಬಿಟ್ಟು ತನ್ನ ಗಮನವನ್ನು ಕೇವಲ ತನ್ನ ಸಮಾಜದ ಅಭಿವೃದ್ಧಿಗೆ ಮಾತ್ರ ಸೀಮಿತಗೊಳಿಸದೆ ಸಮಗ್ರ ರಾಷ್ಟ್ರದ ಶ್ರೇಯಸ್ಸಿನ ಕಡೆ ಹರಿಸಬೇಕು; ಇತರರಿಗೆ ಮಾರ್ಗದರ್ಶಿಯಾಗಬೇಕು, ಸಮಾಜ ರಾಷ್ಟ್ರದ ಒಂದು ಅಂಗ, ಸಮಾಜದ ಪ್ರಗತಿ ರಾಷ್ಟ್ರದ ಪುರೋಭಿವೃದ್ಧಿಯನ್ನೇ ಅವಲಂಬಿಸಿದೆ.

"ಸರ್ವೇ ಜನಾಃ ಸುಜನೋ ಭವಂತು" ಎಂಬ ನಮ್ಮ ಆದರ್ಶದಲ್ಲಿ ಜಾತ್ಯತೀತ ತತ್ತ್ವ ಅಡಗಿದೆ; ಸಮಾಜದ ತಿರುಳಿದೆ. ಎಲ್ಲರ ಕಲ್ಯಾಣವನ್ನೂ ಬಯಸುವುದು ಆರ್ಷೇಯವಾಗಿ ಬಂದಿರುವ ನಮ್ಮ ಧರ್ಮ. ಈ ತತ್ತ್ವಾನುಷ್ಠಾನ ಎಂದಿಗಿಂತ ಈಗ ಅಗತ್ಯವಾಗಿದೆ.

ಈ ಗುರುಚರಿತ್ರೆಯನ್ನು ಓದಿದವರಿಗೆ ಖಂಡಿತವಾಗಿಯೂ ಆಧ್ಯಾತ್ಮಿಕ ಮೌಲ್ಯಗಳಲ್ಲಿ ಶ್ರದ್ಧೆ, ಆಸಕ್ತಿ ಉಂಟಾಗುವುದರಲ್ಲಿ ಸಂದೇಹವಿಲ್ಲ. ಶ್ರೀಗಳ ತಪೋಭೂಮಿಯಾದ ಶ್ರೀರಾಮಚಂದ್ರಾಪುರ ಮಠವು ತನ್ನ ಶಿಷ್ಯ ಪರಂಪರೆಗೆ ಆಧ್ಯಾತ್ಮಿಕ ಸ್ಫೂರ್ತಿ ನೀಡಲಿ ಎಂಬುದು ನನ್ನ ಹಾರೈಕೆ.

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ

—ಬಿ. ಕೃಷ್ಣ ಭಟ್

ಗ್ರಂಥ ಪುನರ್ಮುದ್ರಣ

೧೯೭೫ ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಾಶಿತವಾದ ಈ ಸದ್ಗ್ರಂಥದ ಪ್ರತಿಗಳು ಯಾವಾಗಲೇ ಮುಗಿದುಹೋಗಿವೆ. ಇದರಿಂದ ಈ ಗ್ರಂಥದ ಬಗ್ಗೆ ಬಂದ ಬೇಡಿಕೆಗಳನ್ನು ಈಡೇರಿಸಲು ಪ್ರಕಾಶಕರು ಅಸಮರ್ಥರಾಗಿದ್ದಾರೆ. ಇದನ್ನು ಪರಿಭಾವಿಸಿ, ಇದೀಗ ಗ್ರಂಥವನ್ನು ಪುನರ್ಮುದ್ರಿಸಲಾಗಿದೆ. ಈ ಸಂದರ್ಭದಲ್ಲಿ ಗ್ರಂಥಾಕೃತಿಯನ್ನು ಕ್ರೌನ್ ಡೆಮ್ಮಿಯಾಗಿ ಮಾಡಲಾಗಿದೆ. (ಪ್ರಥಮ ಮುದ್ರಣದ ಗ್ರಂಥಾಕೃತಿ ಕಿರೀಟ ಅಷ್ಟದಳದ್ದಾಗಿತ್ತು.) ಹೊಸದಾಗಿ ಅನುಬಂಧ – ೫ನ್ನು ಇದರಲ್ಲಿ ಸೇರಿಸಿಕೊಳ್ಳಲಾಗಿದೆ. ಶ್ರೀ ಪಂಡಿತ ಗಣಪತಿಶಾಸ್ತ್ರೀ ಹೆಬ್ಬಾರ (ಶ್ರೀಕೃಷ್ಣಾಶ್ರಮ ಸ್ವಾಮೀಜೀ), ರಾಮ್ ಘಾಟ್, ವಾರಾಣಸಿ, ಉತ್ತರ ಪ್ರದೇಶ – ಇವರು ಬರೆದ “ಗುರುಶಿಷ್ಯಸಂಬಂಧದ ಮಹತ್ತ್ವ” ಎಂಬ ಲೇಖನವನ್ನು ಅನುಬಂಧ – ೩ರಲ್ಲಿ ಹಿಂದೆಯೇ (ಪ್ರಥಮ ಮುದ್ರಣದಲ್ಲಿ) ಸೇರಿಸಲಾಗಿತ್ತು. ಪುನರ್ಮುದ್ರಣದಲ್ಲಿ ಹಲವರು ಹಿತೈಷಿ ವಿದ್ವಾಂಸರ ಅಭಿಪ್ರಾಯದಂತೆ ಮೇಲಿನ ಲೇಖಕರ ಇನ್ನು ಮೂರು ವಿಶೇಷ ಮೌಲ್ಯವುಳ್ಳ ಲೇಖನಗಳನ್ನು ಸೇರಿಸಿ ಐದನೆಯ ಅನುಬಂಧವನ್ನಾಗಿ ರೂಪಿಸಲಾಗಿದೆ.

೧೯೭೫ರಿಂದೀಚೆ ಶ್ರೀಗುರುಗಳವರ ಇಚ್ಛಾಶಕ್ತಿಯಿಂದ ಆದ ಸಮಾಜೋಪಯೋಗಿ ಕಾರ್ಯಪ್ರಗತಿಯ ಅಂಶಗಳು ವಿಪುಲವಾಗಿವೆ. ಅವನ್ನೆಲ್ಲ ವಿವರಿಸುವ ಬೇರೊಂದು ಬೃಹದ್ಗ್ರಂಥವನ್ನು ಹೊರತರುವ ಯೋಜನೆಯೂ ಇದೆ. ಆದುದರಿಂದ ಅವನ್ನು ಈ ಪುನರ್ಮುದ್ರಣದಲ್ಲಿ ಸೇರಿಸಿಕೊಂಡಿಲ್ಲ. ಆದರೂ ಮಹತ್ತ್ವಪೂರ್ಣವಾದ ಒಂದೆರಡು ಅಂಶಗಳನ್ನು ಇಲ್ಲಿ ಹೇಳಲಾಗಿದೆ.

ಈ ಗ್ರಂಥದ ಪುನರ್ಮುದ್ರಣದ (ಐದು ಸಾವಿರ ಪ್ರತಿಗಳು) ಸಂಪೂರ್ಣ ವೆಚ್ಚವನ್ನು ಗುರುಸೇವಾಭಾವದಿಂದ ನಾನೇ ವಹಿಸಿರುತ್ತೇನೆ. ಅವರ ಕೃಪಾಶೀರ್ವಾದ ನಿರಂತರ ನನಗೆ ಇರಲೆಂದು ಪ್ರಾರ್ಥಿಸುತ್ತೇನೆ. ಈ ಸದ್ಗ್ರಂಥವನ್ನು ಓದುವವರು ಪುಣ್ಯ ಭಾಗಿಗಳು ; ಶ್ರೀ ಗುರು ಪರಮಾತ್ಮನ ಕೃಪಾಸಂರಕ್ಷಣ ಪಾತ್ರರಾಗುವರೆಂದು ತಿಳಿಸಲು ಬಯಸುತ್ತೇನೆ. ಈ ಗ್ರಂಥ ಮುದ್ರಣದಲ್ಲಿ ಕರಡಚ್ಚನ್ನು ತಿದ್ದಲು ನೆರವಾದ ವಿದ್ವಾನ್ ಶ್ರೀ ಟಿ. ಕೇಶವ ಭಟ್ಟರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಓಂ ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ
ಓಂ ಶಾಂತಿ ಶ್ಶಾಂತಿ ಶ್ಶಾಂತಿಃ

“ಶ್ರೀಗುರುಕೃಪಾ”
ನಂ. ೩೫, ರತ್ನವಿಲಾಸ ರಸ್ತೆ,
ಬಸವನಗುಡಿ, ಬೆಂಗಳೂರು–೪

ಬಿ. ಕೃಷ್ಣ ಭಟ್
೨೬–೨–೧೯೮೧
ರೌದ್ರಿ ಸಂ। ಮಾಘಕೃಷ್ಣ ಸಪ್ತಮೀ ಗುರುವಾರ



ಶ್ರೀ ಬಿ. ಕೃಷ್ಣ ಭಟ್ಟರು

ಪರಮ ಪೂಜ್ಯ ಧರ್ಮಗುರುಗಳಾದ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳವರ ಆದೇಶದ ಮೇರೆಗೆ ಈ ಸಂದರ್ಭದಲ್ಲಿ ಶ್ರೀ ಬಿ. ಕೃಷ್ಣ ಭಟ್ಟರ ವಿಷಯವಾಗಿ ನಾಲ್ಕು ಮಾತುಗಳನ್ನು ಬರೆಯಲು ಸಂತೋಷಪಡುತ್ತೇನೆ.

ಪ್ರಸ್ತುತ ಗ್ರಂಥದ ಮುದ್ರಕರೂ ಪ್ರಕಾಶಕರೂ ಆಗಿರುವ ಶ್ರೀ ಬಿ. ಕೃಷ್ಣ ಭಟ್ಟರು ಹಲವು ಆದರ್ಶ ಗುಣಗಳಿಂದಕೂಡಿದವರು. ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಸೀಮೆಯ ಕಾಟುಕುಕ್ಕೆ ಗ್ರಾಮದ ಬೋಳುಬೈಲು ಇವರು ಜನ್ಮವೆತ್ತಿ ಬಾಲ್ಯವನ್ನು ಕಳೆದ ಸ್ಥಳ. ಇವರು ಚಿಕ್ಕಂದಿನಲ್ಲೇ ತೀರ್ಥರೂಪರನ್ನು ಕಳಕೊಂಡು ಕಷ್ಟಜೀವಿಯಾಗಿ ಬೆಳೆದು ಬಂದವರು. ವಿಟ್ಲದಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಪಡೆದು ಧರ್ಮಸ್ಥಳದ ದಿವಂಗತ ಮಂಜಯ್ಯ ಹೆಗ್ಗಡೆಯವರ ಆಶ್ರಯ ಪಡೆದು, ಉಜಿರೆ ಶ್ರೀ ಮಂಜುನಾಥೇ-ಶ್ವರ ಹೈಸ್ಕೂಲಿನಲ್ಲಿ ಪ್ರೌಢ ವಿದ್ಯಾಭ್ಯಾಸ ಮುಗಿಸಿ, ಉಡುಪಿಯ ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಆಶ್ರಯ ಹೊಂದಿ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಉಚ್ಚ ಶಿಕ್ಷಣ ಪಡೆದು ಬಿ. ಎ. ಪದವೀಧರರಾಗಿ, ಬೆಂಗಳೂರಿನ ಲಾ ಕಾಲೇಜಿನಲ್ಲಿ ನ್ಯಾಯ ಶಾಸ್ತ್ರ ಅಭ್ಯಾಸ ಮಾಡುತ್ತಿರುವಾಗ ದಿವಂಗತ ಪ್ರಧಾನಿ ಶ್ರೀ ಜವಾಹರಲಾಲ್ ನೆಹರೂ ರವರ ಸಂಪರ್ಕ ಹೊಂದಿ ಸಮಾಜ ಹಿತ ಹಾಗೂ ಬಹುಜನೋಪಯೋಗಿ ಕಾರ್ಯಕ್ಕೆ ಪ್ರೇರಿತರಾಗಿ ಭಾರತ ಸೇವಕ ಸಮಾಜಕ್ಕೆ ಸೇರಿ ಅನೇಕ ಸಾರ್ವಜನಿಕ ಸೇವಾಕಾರ್ಯಗಳನ್ನು ಮಾಡಿ ಕೀರ್ತಿಗಳಿಸಿದರು. ಇಂಥ ಸೇವಾಕಾರ್ಯಗಳಲ್ಲಿ ಬೆಂಗಳೂರಿನ ದಕ್ಷಿಣ ವಲಯದ ಆವಲಹಳ್ಳಿಯ ೨೦೦ ಎಕ್ರೆ ವಿಸ್ತಾರವಾದ ಪ್ರದೇಶದಲ್ಲಿ ನಿರ್ಮಿತವಾಗುತ್ತಿರುವ "ವಿಶ್ವಭಾರತಿ ಹೌಸಿಂಗ್ ಕಾಂಪ್ಲೆಕ್ಸ್" ಎಂಬ ಬಹುಮುಖ ಜನೋಪಯೋಗಿ ಯೋಜನೆ ವೈಶಿಷ್ಟ್ಯಪೂರ್ಣ ಹಾಗೂ ಉದಾತ್ತ ದೃಷ್ಟಿಕೋನವನ್ನು ಎತ್ತಿ ತೋರಿಸುವಂಥಾದ್ದಾಗಿದೆ.

ಶ್ರೀ ಕೃಷ್ಣ ಭಟ್ಟರು ವಿದ್ಯಾಕ್ಷೇತ್ರದಿಂದ ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಡುವ ಮುನ್ನ ಭಾರತದ ದೂರವಾಣಿ ಕಾರ್ಖಾನೆಯಲ್ಲಿ ಸ್ವಲ್ಪಕಾಲ ಉದ್ಯೋಗದಲ್ಲಿದ್ದು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ದೃಷ್ಟಿಯಲ್ಲಿ ಉದ್ಯೋಗವನ್ನು ತೊರೆದರು. ಇವರು ಉದಯ ಬರಹಗಾರರ ಮತ್ತು ಕಲಾವಿದರ ಸಂಘವನ್ನು ಸ್ಥಾಪಿಸಿದ್ದಾರೆ. 'ಶ್ರೀ ಗುರುಪ್ರಸಾದ' ಮುದ್ರಣಾಲಯವನ್ನು ಪ್ರಾರಂಭಿಸಿ ಸಾಹಿತ್ಯ ಪ್ರಸಾರಭಾವದಿಂದ ಹಲವು ಉತ್ತಮಗ್ರಂಥಗಳನ್ನು ಪ್ರಕಾಶನ ಪಡಿಸಿದ್ದಾರೆ. ಹಲವು ಲೇಖಕರ ಕೃತಿಗಳನ್ನು ಸೊಗಸಾಗಿ ಅಚ್ಚುಹಾಕಿಸಿದ್ದಾರೆ. ಇವರ ಪ್ರಕಾಶನಗಳಲ್ಲಿ ಪ್ರಸ್ತುತ 'ಶ್ರೀ ಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳು' ಎಂಬುದು ಮಹತ್ತ್ವಪೂರ್ಣ-ವಾಗಿದೆ. ಆರು ವರ್ಷಗಳ ಹಿಂದೆ ಇದರ ಪ್ರಥಮ ಮುದ್ರಣ ಮಾಡಿದವರು ಇವರೇ. ಇದೀಗ ಪುನರ್ಮುದ್ರಣವನ್ನೂ ಶ್ರೀ ಗುರುಸೇವಾಭಾವನೆಯಿಂದ ಮಾಡಿರುವುದು ಶ್ಲಾಘನೀಯವಾಗಿದೆ.

ತಮಗಿರುವ ಗುರುಭಕ್ತಿಯ ಪ್ರತೀಕವಾಗಿ ಇವರು ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಶ್ರೀಸಂಸ್ಥಾನದ ಕೀರ್ತಿಧ್ವಜ ಮೇಲೆದ್ದು ಕಾಣುವ ಹಾಗೆ ಶ್ರೀ ರಾಮ ಚಂದ್ರಾಪುರ ಮಠದ ಕಟ್ಟಡಕ್ಕಾಗಿ 1975ರಲ್ಲಿ ಒಂದು ನಿವೇಶನವನ್ನು ಅರ್ಪಣೆ ಮಾಡಿರುವುದು ಸರ್ವವಿದಿತ. ಇದೀಗ ಶ್ರೀಗಳವರ ಬೆಂಗಳೂರು ಮೊಕ್ಕಾಮಿನ ಸಮಯದಲ್ಲಿ ಏಕಾಂತ ತಪೋನುಸ್ಥಾನಕ್ಕೆ ಅನುಕೂಲಪಡಿಸುವ ವಸತಿಗಾಗಿ ಉತ್ತಮವಾದ ಇನ್ನೊಂದು ನಿವೇಶನವನ್ನು ಅರ್ಪಣೆಮಾಡಿ, ಮಂದಿರನಿರ್ಮಾಣಕ್ಕಾಗಿ ತವಕಿಸುತ್ತಿರುವುದು ಇವರ ಭಕ್ತ್ಯಂಜಲಿಯಲ್ಲಿ ಕಾಣಿಸಿದಂತೆ, ಉದಾರ ಭಕ್ತಿಗೆ ಜ್ವಲಂತವಾದ ಇನ್ನೊಂದು ಉದಾಹರಣೆಯಾಗಿದೆ.

ಶ್ರೀ ಬಿ. ಕೃಷ್ಣ ಭಟ್ಟರು ಸೌಮ್ಯ-ಸೌಜನ್ಯ-ವಿನಯ ವಿಭೂಷಿತ ಸದ್ಗೃಹಸ್ಥ-ರೆಂಬುದು ಇವರ ಸಂಪರ್ಕವುಳ್ಳವರಿಗೆಲ್ಲ ಅನುಭವಕ್ಕೆ ಬಂದ ವಿಷಯ. ಪ್ರಚಾರಾಡಂಬರ ವನ್ನು ಬಯಸದೆ, ಆಹಾರ ವಿಶ್ರಾಂತಿಗಳ ಪರಿವೆಯಿಲ್ಲದೆ, ಪ್ರತಿ ನಿಮಿಷವೂ ಪ್ರತಿ ದಿನವೂ ಗಂಟೆಯ ಮುಳ್ಳಿನಂತೆ ಚಲಿಸುತ್ತಾ "ಬಹುಜನ ಹಿತಾಯ ಸ್ವಾಂತಃ ಸುಖಾಯ" ದುಡಿಯುವ ಶಾಂತಸ್ವಭಾವದ ವಿರಳವ್ಯಕ್ತಿಗಳಲ್ಲಿ ಇವರೊಬ್ಬರು.

ಇವರಿಗೆ ಇಂತಹವೇ ಗುಣಶೀಲಗಳಿಂದ ಕೂಡಿ, ತಮ್ಮ ಸುಖವನ್ನು ಲೆಕ್ಕಿಸದೆ ಎಲ್ಲ ಕೆಲಸಗಳಲ್ಲಿಯೂ ಎಲ್ಲಾ ಸಮಯಗಳಲ್ಲಿಯೂ ಹೊಂದಿಕೊಂಡು ನಡೆಯುವ ಸಾಧ್ವಿಯಾದ ಧರ್ಮಪತ್ನಿ ಶ್ರೀಮತಿ ರಾಧಮ್ಮನವರ ಈ ದಂಪತಿಗಳ ಚಿಕ್ಕ ಚೊಕ್ಕ ಸಂಸಾರವನ್ನು ಕಾಣುವುದು ಅಪೂರ್ವವೇ ಸರಿ. ಇವರಿಂದ ಉಪಕೃತರಾದವರ ಸಂಖ್ಯೆ ಅಪರಿಮಿತ. ಧರ್ಮ, ದೇವರು, ಗುರುಗಳು, ಬಡವರು, ಲೋಕಹಿತ ಕಾರ್ಯಗಳು-ಇವು ಇವರ ಪಂಚಪ್ರಾಣ. ತುರ್ತುಪರಿಸ್ಥಿತಿಯಲ್ಲಿ ಸಾಕಷ್ಟು ಕಷ್ಟ-ನಷ್ಟಗಳಿಗೆ ಈಡಾದರೂ

ಇವರು ನಂಬಿದ ಗುರ್ವನುಗ್ರಹವೆಂಬ ರಕ್ಷಾಕವಚ ಇವರನ್ನು ಎಲ್ಲ ವಿಪತ್ತುಗಳಿಂದ ಪಾರುಮಾಡಿದೆ, ಮುಂದೆಯೂ ಇವರಿಗಿದು ಸಂರಕ್ಷಕವಾಗಿದೆ.

ಇವರಿಂದ ಧಾರ್ಮಿಕ, ಸಾಮಾಜಿಕ ಕಲ್ಯಾಣ ಕಾರ್ಯಗಳು ನಿರಂತರ ನಿರಾತಂಕವಾಗಿ ಸಾಗಲಿ! ಇವರ ಪೂರ್ವಸಂಕಲ್ಪಿತ ವಿಶ್ವಭಾರತೀ ವಿವಿಧೋದ್ದೇಶ ಸಂಸ್ಥೆ ತನ್ನ ಧ್ಯೇಯ ಸಾಧನೆಯಲ್ಲಿ ಸಿದ್ಧಿ ಪಡೆಯಲಿ! ಕರ್ಮಯೋಗಿಯಂತಿರುವ ಇವರ ಪ್ರೋಭಿವೃದ್ಧಿಯನ್ನು ಶ್ರೀ ಗುರುಕರಾರ್ಚಿತ ಶ್ರೀ ಪಟ್ಟಾಭಿರಾಮಚಂದ್ರಾದಿ ದೇವತೆಗಳು ಅನುಗ್ರಹಿಸಲಿ !— ಎಂದು ಶ್ರೀಗಳವರು ವಾತ್ಸಲ್ಯಾಭಿಮಾನ ಪುರಸ್ಸರವಾಗಿ ವ್ಯಕ್ತಪಡಿಸಿರುವುದನ್ನು ಈ ನಾಲ್ಕು ಮಾತುಗಳಿಂದ ಹೇಳಿ ಸಂತಸಪಡುತ್ತೇನೆ.

ಶ್ರೀ ಗುರುಚರಣಾಶ್ರಿತ,
ಸುಬ್ರಹ್ಮಣ್ಯ ಶಿವರಾಮ ಶಾಸ್ತ್ರೀ ಎಂಚಕೇರಿ,
ಶ್ರೀ ರಾಮಚಂದ್ರಾಪುರ ಮಠ,
ಮುಕ್ಕಾಂ : ಬೆಂಗಳೂರು.

ಶ್ರೀಮಜ್ಜಗದ್ಗುರು ಶಂಕರಾಚಾರ್ಯರು

ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಮ್ ।
ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್ ॥

ಈ ಭೂಮಂಡಲದಲ್ಲಿ ಸತ್ವಗುಣದ ಸತ್ವ ಕಡಮೆಯಾಗಿ ರಜೋಗುಣ ತಮೋಗುಣಗಳು ಒಂದಕ್ಕಿಂತ ಇನ್ನೊಂದು ತಾನೇ ತಾನಾಗಿ ವಿಜೃಂಭಿಸಲು ತೊಡಗಿದಾಗ ಧರ್ಮದ ಕಡೆಗೆ ಜನರ ಒಲವು ಕಡಮೆಯಾಗುವುದು. ಆಗ ಅಧರ್ಮವೇ ಧರ್ಮವೆಂದೂ ದುರಾಚಾರವೇ ಸದಾಚಾರವೆಂದೂ ಭಾವಿಸಿ, ಜನರು ತಪ್ಪುದಾರಿಯನ್ನನುಸರಿಸುತ್ತಾರೆ.

ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠವಾದ ಸಂಸ್ಕೃತಿ ಸದಾಚಾರ ಸಂಪನ್ನತೆಗಳಿಗೆ ತವರುಮನೆ ಭಾರತ ಎಂದು ವಿದೇಶೀಯರೂ ಹೇಳಿದ್ದುಂಟು. ಎಂತಹ ದುರ್ಧರ ಪ್ರಸಂಗದಲ್ಲಿಯೂ ಭಾರತ ಜನನಿಯ ಒಡಲಿನಿಂದ ಅವತರಿಸಿದ ಅಸಂಖ್ಯರಾದ ದಿವ್ಯ ಪುರುಷರು, ಸಾಧುಸಜ್ಜನರು, ಮತಪ್ರವರ್ತಕ ಆಚಾರ್ಯರು ತಮ್ಮ ಸುಜ್ಞಾನಮಯ ದಿವ್ಯಜ್ಯೋತಿಯಿಂದ ಜನತೆಯ ಹೃದಯದಲ್ಲಿ ಹುದುಗಿದ ಅಜ್ಞಾನಾಂಧಕಾರವನ್ನು ದೂರೀಕರಿಸಲು ಯತ್ನಿಸಿದ್ದಾರೆ; ಯತ್ನಿಸುತ್ತಿದ್ದಾರೆ. 'ದುಃಖೋದರ್ಕವಾದ ದುಷ್ಕೃತ್ಯ ದುರ್ವರ್ತನೆಗಳಿಗೆ ಕಾರಣೀಭೂತರಾದ ಕುಕರ್ಮಿಗಳನ್ನೂ ದುರ್ಮಾರ್ಗ ಪ್ರವರ್ತಕರನ್ನೂ ನಿಗ್ರಹಿಸಿ, ಸಭ್ಯರನ್ನೂ ಶಿಷ್ಟರನ್ನೂ ಸಾತ್ವಿಕರನ್ನೂ ಸಂರಕ್ಷಿಸಲು, ಧರ್ಮವೃಕ್ಷದ ತಾಯಿಬೇರನ್ನು ಉಪದೇಶಾಮೃತ ಸಂಸೇಚನೆಯಿಂದ ದೃಢಗೊಳಿಸಲು ಆ ಜಗನ್ನಿಯಾಮಕನು ನಾನಾರೂಪದಿಂದ ಅವತರಿಸುತ್ತಾನೆ, – ಎಂಬ ವಾಣಿಯನ್ನು ದಿಟಗೊಳಿಸಿದ್ದಾರೆ; ದಿಟಗೊಳಿಸುತ್ತಿದ್ದಾರೆ.

ಸುಮಾರು ಕ್ರಿ. ಶ. ಎಂಟನೆಯ ಶತಮಾನದ ಉತ್ತರಾರ್ಧದಲ್ಲಿ ಜೈನ ಬೌದ್ಧಾದಿ ಮತಗಳ ಪ್ರಭಾವಾಧಿಕ್ಯದಿಂದಾಗಿ ಸನಾತನ ವೈದಿಕ ಧರ್ಮವು ಮಲಿನವಾಗ ತೊಡಗಿದಾಗ ಅಜ್ಞಾನಾಂಧಕಾರದಲ್ಲಿ ಗಾಢವಾಗಿ ಮುಳುಗಿದ ಸಾಂಸಾರಿಕ ದಾವಾಗ್ನಿಯಲ್ಲಿ ಬಿದ್ದು ಬೇಯುತ್ತಲಿದ್ದ ಜನತೆಯನ್ನು ಆತ್ಮವಿದ್ಯೋಪದೇಶದಿಂದ ಉದ್ಧರಿಸಲು ಸರ್ವವಿದ್ಯೆಗಳಿಗೂ ಅಧೀಶ್ವರನಾದ ಶ್ರೀಶಂಕರನೇ ಜಗದ್ಗುರುವಾಗಿ, ಶ್ರೀ ಶಂಕರರೆಂಬ ನಾಮಧೇಯದಿಂದ ಅವತರಿಸಿದ ಸಂಗತಿ ಸರ್ವವಿದಿತ.

ಶ್ರೀಗಳವರು ಬೆಳ್ಳಿಯ ಸಿಂಹಾಸನದಲ್ಲಿ

ಕೇರಳ ರಾಜ್ಯದ ಪೂರ್ಣಾನದಿಯ ತೀರದಲ್ಲಿಯೇ ಇದ್ದ ಅಗ್ರಹಾರ, ವೇದಶಾಸ್ತ್ರ ಸಂಪನ್ನರಾದ ದ್ರಾವಿಡ ಬ್ರಾಹ್ಮಣರ ಆವಾಸಸ್ಥಾನ. ಅಲ್ಲಿಯೇ ನೆಲಸಿದ್ದ ಸದಾಚಾರ ನಿರತರಾದ ಶಿವಗುರು ಆರ್ಯಾಂಬಾ (ಸತೀದೇವಿ) ಎಂಬ ದ್ರಾವಿಡ ಬ್ರಾಹ್ಮಣದಂಪತಿಗಳಿಂದ ಆವಿರ್ಭವಿಸಿದರು ಶ್ರೀ ಶಂಕರರು (ಕ್ರಿ. ಶ. ೭೮೮–೮೨೦).

ಅಸಾಧಾರಣವಾದ ಬುದ್ಧಿಶಕ್ತಿ, ಅಸದೃಶವಾದ ಮೇಧಾಶಕ್ತಿ, ಸಹಜ–ಸರಳ–ಆಕರ್ಷಕ ವಾಕ್‌ಶಕ್ತಿ– ಇವುಗಳಿಂದ ಕೂಡಿದ್ದ ಶ್ರೀ ಶಂಕರರು ಉಪನೀತರಾದ ಸ್ವಲ್ಪ ಕಾಲದಲ್ಲಿಯೇ ವೇದ, ವೇದಾಂತ ಶಾಸ್ತ್ರ ಪುರಾಣ ಇತಿಹಾಸಗಳನ್ನು ಕರತಲಾಮಲಕವನ್ನಾಗಿಸಿಕೊಂಡರು. ಮಾತೆಯ ಆಜ್ಞೆಯನ್ನು ಪಡೆದು ನರ್ಮದಾತೀರದಲ್ಲಿ ಗುಹಾವಾಸಿಗಳಾಗಿದ್ದ ಶ್ರೀ ಗೋವಿಂದ ಭಗವತ್ಪಾದರಿಂದ ನೇರವಾಗಿ ವಿದ್ವತ್ ಸಂನ್ಯಾಸವನ್ನು ಸ್ವೀಕರಿಸಿದರು. ಪರಮಹಂಸ ಪರಿವ್ರಾಜಕರಾಗಿ, ಭಗವತ್ಪೂಜ್ಯಪಾದರಾಗಿ, ಪೀಠ ಸಂಸ್ಥಾಪಕರಾಗಿ, ಮಹಾಮಹಿಮಾನ್ವಿತರಾಗಿ ಮೆರೆದರು.

"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" ಪರಬ್ರಹ್ಮವೇ ಸತ್ಯ. ಈ ಪ್ರಪಂಚವು ಮಿಥ್ಯ. ಜೀವನು ಪರಬ್ರಹ್ಮ. ಅದರ ಹೊರತು ಬೇರಿನ್ನಾವುದೂ ಅಲ್ಲ. ಪರಬ್ರಹ್ಮಸಾಕ್ಷಾತ್ಕಾರವೇ ಮೋಕ್ಷ. **"ಜ್ಞಾನಾದೇವ ಹಿ ಕೈವಲ್ಯಂ"** ಜ್ಞಾನಮಾರ್ಗವೇ ಮೋಕ್ಷಪ್ರಾಪ್ತಿಗೆ ಪ್ರಧಾನ ಸಾಧನ– ಎಂಬುದಾಗಿ ವೇದವೇದಾಂತಗಳನ್ನು ಮಥಿಸಿ ನಿರ್ಣಯಿಸಿದ ಶ್ರೀಮದಾಚಾರ್ಯ ಶಂಕರರು ಭಾರತಾದ್ಯಂತ ಎಲ್ಲೆಡೆಯಲ್ಲಿಯೂ ಅದ್ವೈತ ತತ್ತ್ವವನ್ನು ಪ್ರಚಾರಮಾಡಿ, **ಅದ್ವೈತ ಮತ ಪ್ರತಿಷ್ಠಾಪನಾಚಾರ್ಯರು** ಎಂದೆನಿಸಿಕೊಂಡರು.

ವೈದಿಕಧರ್ಮ ಉದ್ಧಾರಕ್ಕಾಗಿ, ಅದ್ವೈತ ಮತ ಪ್ರಚಾರಕ್ಕಾಗಿ ಕನ್ಯಾಕುಮಾರಿಯಿಂದ ಹಿಮಾಲಯದ ತನಕವೂ ಸಂಚರಿಸಿದ ಶ್ರೀಶಂಕರಾಚಾರ್ಯರು ಅಲ್ಲಲ್ಲಿ ತಮ್ಮ ಪೀಠಗಳನ್ನು ಸ್ಥಾಪಿಸಿದರು. ಶೃಂಗೇರಿ, ಗೋಕರ್ಣ, ಜಗನ್ನಾಥಪುರಿ, ದ್ವಾರಕಾ, ಬದರೀನಾಥ, ಕಾಂಚಿ – ಇತ್ಯಾದಿ ಸ್ಥಳಗಳಲ್ಲಿ ಶ್ರೀಮದಾದ್ಯಶಂಕರಾಚಾರ್ಯರಿಂದ ಸಂಸ್ಥಾಪಿತವಾದ ಮಠಗಳು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿವೆ.

ಶ್ರೀರಾಮಚಂದ್ರಾಪುರ ಮಠ

ಗೋಕರ್ಣ ಮಂಡಲೇ ಪೂಜ್ಯ ಶಂಕರಾಚಾರ್ಯ ನಿರ್ಮಿತಃ ।
ರಾಮಚಂದ್ರಾಭಿಧಾನೇನ ಮಠೋಽಯಂ ರಾಜತೇತರಾಮ್ ॥

ಅದ್ವೈತ ಮಠ ಪ್ರತಿಷ್ಠಾಪನೆಗಾಗಿ ಸನಾತನ ವೈದಿಕ ಧರ್ಮದ ಉದ್ಧಾರಕ್ಕಾಗಿ ಭಾರತದ ಆದ್ಯಂತ ಸಂಚಾರ ಕೈಗೊಂಡ ಶ್ರೀ ಶಂಕರಾಚಾರ್ಯರು ದಕ್ಷಿಣ ಭಾರತದ ಪವಿತ್ರ ಕ್ಷೇತ್ರವಾದ ಗೋಕರ್ಣಕ್ಕೆ ಆಗಮಿಸಿದರು.

ಗೋಕರ್ಣ ಕ್ಷೇತ್ರವು ಪಂಡಿತರ ತವರು ಮನೆ; ವಿದ್ವಾಂಸರ ನಿವಾಸ ಸ್ಥಾನ; ವೇದವೇದಾಂತ ಶಾಸ್ತ್ರಾದಿಗಳ ಅಧ್ಯಯನ ಅಧ್ಯಾಪನ ಕೇಂದ್ರ; ಮಹರ್ಷಿಗಳ ತಪೋಭೂಮಿ; ಅಗ್ನಿಹೋತ್ರಿಗಳ ಯಾಜಕರ ಆವಾಸ ಪ್ರದೇಶ; ಶ್ರೀಮಹಾಬಲೇಶ್ವರ ಜ್ಯೋತಿರ್ಲಿಂಗ ಮತ್ತು ಸಮುದ್ರರಾಜ – ಇವರ ದಿವ್ಯ ಸಾನ್ನಿಧ್ಯದಿಂದ ಪವಿತ್ರವಾದ ಪ್ರದೇಶ. ಅಗಸ್ತ್ಯ ಪ್ರಹರ್ಷಿಗಳ ಶಿಷ್ಯರಾದ ವರದಮುನಿಗಳು ತಪೋನಿರತರಾಗಿ, ತಮ್ಮ ಗುರುಪರಂಪರೆಯಿಂದ ಪೂಜಿಸಲ್ಪಟ್ಟ ತಪೋರಾಮಾದಿ ವಿಗ್ರಹಗಳನ್ನು ಅರ್ಚಿಸುತ್ತಾ ಇದ್ದುದು ಇಲ್ಲಿಯೇ.

ಗುರುವರ ಆಚಾರ್ಯ ಶಂಕರರನ್ನು ಸಂದರ್ಶಿಸಿದ ವರದ ಮಹಾಮುನಿಗಳು ತಾವು ಪೂಜಿಸುತ್ತಲಿದ್ದ ತಪೋರಾಮಾದಿ (ಆರು) ವಿಗ್ರಹಗಳನ್ನು ತಮ್ಮ ಪರಮ ಪೂಜ್ಯ ಗುರುವರ್ಯರ ಆಣತಿಗನುಗುಣವಾಗಿ ಶ್ರೀ ಶಂಕರರಿಗೆ ಸಮರ್ಪಿಸಿ, ಶಾಶ್ವತವಾಗಿ ಅವುಗಳ ಪೂಜೆ ಪುರಸ್ಕಾರಗಳು ನಡೆದುಕೊಂಡು ಬರುವಂತೆ ವ್ಯವಸ್ಥೆ ಮಾಡಲು ವಿನಂತಿಸಿದರು.

ವರದ ಮುನಿಗಳ ಕೋರಿಕೆಯನ್ನು ಈಡೇರಿಸಲು ಯೋಚಿಸಿದ ಶ್ರೀಮದಾದ್ಯ ಶಂಕರಾಚಾರ್ಯರು ತಮ್ಮ ಪೂರ್ವಸಂಕಲ್ಪದಂತೆ ಶ್ರೀ ಗೋಕರ್ಣ ಕ್ಷೇತ್ರದಲ್ಲಿ ತಮ್ಮ ಮಠವನ್ನು ಸ್ಥಾಪಿಸಿದರು. ತಮ್ಮ ಪ್ರಿಯ ಶಿಷ್ಯ ಶ್ರೀಸುರೇಶ್ವರಾಚಾರ್ಯರಿಂದ ಸಂನ್ಯಾಸ ದೀಕ್ಷೆ ಪಡೆದವರಲ್ಲಿ ಪ್ರಪ್ರಥಮರೂ ತಮ್ಮಿಂದಲೇ ವೇದಾಂತ ತತ್ತ್ವಗಳನ್ನು ಅಭ್ಯಸಿಸಿ ಸರ್ವ ವಿದ್ಯಾವಿಶಾರದರೂ ಆದ ಶ್ರೀವಿದ್ಯಾನಂದಾಚಾರ್ಯರನ್ನು ಕರೆದು —

ಅತ್ರ ಶಿಷ್ಯ ಯತಿಶ್ರೇಷ್ಠ ಗೋಕರ್ಣೇ ಮುನಿಸೇವಿತೇ
ಆಚಾರ್ಯತ್ವಂ ಚ ಕುರುತಾಂ ವಿದ್ಯಾನಂದ ಮಹಾಮತೇ ॥
ಇತ್ಯುಕ್ತ್ವಾ ಶಂಕರಾಚಾರ್ಯಃ ಶತಶೃಂಗಸ್ಯ ಮೂರ್ಧನಿ ॥
ಅಶೋಕೋ ರಾಜತೇ ಯತ್ರ ಸಾ ಪಯಿತ್ವಾ ಮಠಂ ವರಮ್ ॥

ವರದಾಖ್ಯೇನ ಮುನಿನಾ ಪ್ರಾಪ್ತರಾಮಾದಿ ವಿಗ್ರಹಾನ್ ।
ಚಂದ್ರಮೌಲಿಂ ದಿವ್ಯಲಿಂಗಂ ಪಾದುಕಾಂ ದಿವ್ಯದರ್ಶನಾಮ್ ॥
ವಿದ್ಯಾನಂದಯತೀಃ ದತ್ವಾ ಪುನಸ್ತೋಷಮವಾಪ್ತವಾನ್ ।
ರಘೂತ್ತಮ ಮಠ ಇತಿ ನಾಮ್ನಾ ಖ್ಯಾತೋ ಭವೇದ್ವರಃ ॥

(ಚಿದ್ವಿಲಾಸ ಶಂಕರ ವಿಜಯ, ಮಠೋತ್ಪತ್ತಿ ನಿರೂಪಣ ಸಮಯ)

(ಯತಿಶ್ರೇಷ್ಠನಾದ ವಿದ್ಯಾನಂದನೇ ! ಮುನಿಗಳಿಂದ ಸೇವಿತವಾದ ಗೋಕರ್ಣ ಕ್ಷೇತ್ರದಲ್ಲಿ ನಮ್ಮಿಂದ ಸಂಸ್ಥಾಪಿಸಲ್ಪಟ್ಟ ಈ ಪೀಠದಲ್ಲಿ ನೀನು ಇದ್ದು ಶ್ರೀ ಗೋಕರ್ಣ ಮಂಡಲದ ಆಚಾರ್ಯತ್ವವನ್ನು ನಿರ್ವಹಿಸು. ವರದ ಮುನಿಗಳ ಅನಂತರವೂ ಅರ್ಚಿಸುತ್ತಾ ಬಂದ ಈ ರಾಮಾದಿ ವಿಗ್ರಹಗಳನ್ನೂ ದಿವ್ಯವಾದ ಈ ಚಂದ್ರಮೌಳೀಶ್ವರ ಲಿಂಗವನ್ನೂ ನೀನು ವಿಧಿವತ್ತಾಗಿ ಪೂಜಿಸಿಕೊಂಡು ಬಾ. ರಘುಗಳಿಗೆ ಉತ್ತಮನಾದ ಶ್ರೀ ರಾಮಚಂದ್ರನೇ ಮಠದ ಪ್ರಧಾನ ದೇವತೆಯಾದ ಕಾರಣ, ಈ ಮಠವು **ಶ್ರೀರಘೂತ್ತಮ ಮಠ** ಎಂಬ ಅಂಕಿತದಿಂದ ಪ್ರಖ್ಯಾತವಾಗಲಿ)—ಎಂದು ಹರಸಿದರು.

ಶ್ರೀ ವಿದ್ಯಾನಂದಚಾರ್ಯರು ತಮ್ಮ ಗುರುವರ್ಯರ ಆಜ್ಞೆಯನ್ನು ಶಿರಸಾವಹಿಸಿ, ಅಲ್ಲಿಯೇ ಉಳಿದು ಗೋಕರ್ಣ ಮಂಡಲದ **ಶ್ರೀ ರಘೂತ್ತಮ ಮಠದ** ಪ್ರಪ್ರಥಮ ಮಠಾಧಿಪತಿಗಳಾಗಿ ವಿರಾಜಿಸಿದರು.

ಶ್ರೀ ವಿದ್ಯಾನಂದಾಚಾರ್ಯರಿಂದ ಹತ್ತನೆಯವರಾದ ಶ್ರೀರಾಮಚಂದ್ರ ಭಾರತೀ ಸ್ವಾಮಿಗಳು ಶಿವಮೊಗ್ಗ ಜಿಲ್ಲೆಯ ಈಗಿನ ಹೊಸನಗರ ತಾಲೂಕಿನಲ್ಲಿ ಶರಾವತೀ ನದಿಯ ಎಡದಂಡೆಯ ಮೇಲೆ ಆಗಸ್ತ್ಯತೀರ್ಥದ ವಾಯವ್ಯ ದಿಶೆಯಲ್ಲಿ ಶ್ರೀಕಾರ್ಣಗಿರಿ (ಕಾರ್ಗಡಿ)ಯ ಉತ್ತರ ಪೂರ್ವಗಳ ಮಧ್ಯಭಾಗದಲ್ಲಿ ನವೀನ ಮಠಾಯತನವನ್ನು ನಿರ್ಮಾಪಿಸಿ ತಮ್ಮ ಆರಾಧ್ಯ ದೇವನಾದ ಶ್ರೀರಾಮಚಂದ್ರನ ಹೆಸರನ್ನೇ ಆ ಪುರಕ್ಕೂ ಇಟ್ಟರು. ಹೀಗೆ ರಾಮಚಂದ್ರಾಪುರದಲ್ಲಿ ಶ್ರೀರಾಮಚಂದ್ರ ಭಾರತೀ ಸ್ವಾಮಿಗಳವರಿಂದ ನಿರ್ಮಿಸಲ್ಪಟ್ಟ ಮತ್ತು ಶ್ರೀರಾಮಚಂದ್ರನೇ ಪ್ರಧಾನ ದೇವತೆಯಾದ ಈ ಮಠವು **ಶ್ರೀ ರಾಮಚಂದ್ರಾಪುರ ಮಠವೆಂದೇ** ವಿಖ್ಯಾತವಾಗಿ ಸಂಬಂಧಿಸಿದ **ಶ್ರೀರಘೂತ್ತಮಾದಿ** ಮಠಗಳ ಆಡಳಿತ ನಿರ್ವಹಣೆಯ ಪ್ರಧಾನ ಕೇಂದ್ರವಾಗಿ ಮಾರ್ಪಟ್ಟಿತು. ಅಂದಿನಿಂದ ಗೋಕರ್ಣದಲ್ಲಿದ್ದ ಮೂಲ ಮಠದ ಶ್ರೀ ರಘೂತ್ತಮ ಮಠವೂ ಶ್ರೀ ರಾಮಚಂದ್ರಾಪುರ ಮಠ ಎಂಬ ನಾಮಧೇಯದಿಂದ ಮುಂದುವರಿದು ಬರತೊಡಗಿದೆ.

ಶ್ರೀಮದಾದ್ಯಶಂಕರಾಚಾರ್ಯರಿಂದ ಮೊದಲ್ಗೊಂಡು ಅವಿಚ್ಛಿನ್ನ ಗುರು ಪರಂಪರೆಯಿಂದ ನಡೆದುಬರುತ್ತಲಿರುವ ಈ ಗುರುಪೀಠದಲ್ಲಿ ಈಗ ಮೂವತ್ತೈದನೆಯವರಾದ **ಶ್ರೀಮದ್ರಾಘವೇಂದ್ರ ಭಾರತೀ ಮಹಾಸ್ವಾಮಿ** ಗಳವರು ವಿರಾಜಿಸುತ್ತಲಿದ್ದಾರೆ.

ಶ್ರೀ ಗುರುಪರಂಪರೆ

ಶ್ರೀಶಂಕರಪ್ರಪೂರ್ಣಾಂ ತಾಂ ವಿದ್ಯಾನಂದ್ಯೈಃ ಪ್ರವರ್ಧಿತಾಮ್ ।
ಶ್ರೀರಾಘವೇಂದ್ರೈರ್ವಿಖ್ಯಾತಾಂ ವಂದೇ ಗುರುಪರಂಪರಾಮ್ ॥

ಸನಾತನ ವೈದಿಕಧರ್ಮದ ಸಂರಕ್ಷಣೆ ಹಾಗೂ ಸಂವರ್ಧನೆ ಅಂತರಾಯರಹಿತ-ವಾಗಿ ನಿರಂತರ ನೆರವೇರಬೇಕೆಂಬ ಘನೋದ್ದೇಶದಿಂದ ಶ್ರೀಮದಾದ್ಯಶಂಕರಾಚಾರ್ಯರು ಅಲ್ಲಲ್ಲಿ ಅದ್ವೈತ ಪೀಠಗಳನ್ನು ಸಂಸ್ಥಾಪಿಸಿದರಷ್ಟೆ. ಅವುಗಳಲ್ಲಿ ನಮ್ಮ ಮಠವು ಅವಿಚ್ಛಿನ್ನವಾದ ಗುರುಪರಂಪರೆಯಿಂದ ಶ್ರೀ ಶಂಕರಾಚಾರ್ಯರ ಸದುದ್ದೇಶವನ್ನು ಕಾರ್ಯಗತಗೊಳಿಸುತ್ತಲಿರುವುದು ಅತ್ಯಂತ ಹೆಮ್ಮೆಯ ವಿಷಯ.

ಶ್ರೀಮಠದ ಗುರುಪರಂಪರೆ ಹೀಗಿದೆ

೧. ಶ್ರೀ ಮಜ್ಜಗದ್ಗುರು ಆದ್ಯಶಂಕರಾಚಾರ್ಯರು
— ಶ್ರೀಮಠದ ಸಂಸ್ಥಾಪಕರು

೨. ಶ್ರೀ ಸುರೇಶ್ವರಾಚಾರ್ಯರು
—ಶ್ರೀವಿದ್ಯಾನಂದಾಚಾರ್ಯರಿಗೆ ಸಂನ್ಯಾಸ ದೀಕ್ಷೆಯಿತ್ತವರು

೩. ಶ್ರೀ ವಿದ್ಯಾನಂದಾಚಾರ್ಯರು
— ಶ್ರೀಮಠದ ಪ್ರಥಮ ಪೀಠಾಧಿಪತಿಗಳು

೪. ಶ್ರೀ ಚಿದ್‌ಬೋಧ ಭಾರತಿಗಳು

೫. ಶ್ರೀ ನಿತ್ಯಾನಂದ ಭಾರತಿಗಳು

೬. ಶ್ರೀ ನಿತ್ಯಬೋಧ ಘನೇಂದ್ರ ಭಾರತಿಗಳು

೭. ಶ್ರೀ ಸಚ್ಚಿದಾನಂದ ಭಾರತಿಗಳು

೮. ಶ್ರೀ ಚಿದ್ಘನೇಂದ್ರ ಭಾರತಿಗಳು (ಶ್ರೀರಘುವೀರೇಂದ್ರ ಭಾರತಿಗಳು)

೯. ಶ್ರೀ ಸೀತಾರಾಮಚಂದ್ರ ಭಾರತಿಗಳು

೧೦. ಶ್ರೀ ಚಿದ್‌ಬೋಧ ಭಾರತಿಗಳು

೧೧. ಶ್ರೀ ರಾಘವೇಶ್ವರ ಭಾರತಿಗಳು

೧೨. ಶ್ರೀ ರಾಮಚಂದ್ರ ಭಾರತಿಗಳು (ಹೊಸನಗರ ದಶ್ರೀರಾಮಚಂದ್ರಾಪುರ ಮಠದ ಸಂಸ್ಥಾಪಕರು)

೧೩. ಶ್ರೀ ರಾಘವೇಶ್ವರ ಭಾರತಿಗಳು

೧೪. ಶ್ರೀ ರಾಮಯೋಗೀಂದ್ರ ಭಾರತಿಗಳು

೧೫. ಶ್ರೀ ನೃಸಿಂಹ ಭಾರತಿಗಳು

೧೬. ಶ್ರೀ ಅನಂತೇಂದ್ರ ಭಾರತಿಗಳು

೧೭. ಶ್ರೀ ರಾಮಭದ್ರ ಭಾರತಿಗಳು

೧೮. ಶ್ರೀ ರಾಘವೇಶ್ವರ ಭಾರತಿಗಳು
೧೯. ಶ್ರೀ ವಿದ್ಯಾಧನೇಂದ್ರ ಭಾರತಿಗಳು
೨೦. ಶ್ರೀ ರಘುನಾಥ ಭಾರತಿಗಳು
೨೧. ಶ್ರೀ ರಾಮಚಂದ್ರ ಭಾರತಿಗಳು
೨೨. ಶ್ರೀ ರಘೂತ್ತಮ ಭಾರತಿಗಳು
೨೩. ಶ್ರೀ ಪರಮೇಶ್ವರ ಭಾರತಿಗಳು (ಶ್ರೀ ವೆಂಕಟೇಶ್ವರ ಸರ್ವಜ್ಞರು)
೨೪. ಶ್ರೀ ರಾಘವೇಶ್ವರ ಭಾರತಿಗಳು
೨೫. ಶ್ರೀ ರಘೂತ್ತಮ ಭಾರತಿಗಳು
೨೬. ಶ್ರೀ ರಾಘವೇಶ್ವರ ಭಾರತಿಗಳು
೨೭. ಶ್ರೀ ರಘೂತ್ತಮ ಭಾರತಿಗಳು
೨೮. ಶ್ರೀ ರಾಘವೇಶ್ವರ ಭಾರತಿಗಳು
೨೯. ಶ್ರೀ ರಘೂತ್ತಮ ಭಾರತಿಗಳು
೩೦. ಶ್ರೀ ರಾಘವೇಶ್ವರ ಭಾರತಿಗಳು
೩೧. ಶ್ರೀ ರಾಮಚಂದ್ರ ಭಾರತಿಗಳು
೩೨. ಶ್ರೀ ರಾಘವೇಂದ್ರ ಭಾರತಿಗಳು
೩೩. ಶ್ರೀ ರಾಘವೇಶ್ವರ ಭಾರತಿಗಳು
೩೪. ಶ್ರೀರಾಮಚಂದ್ರ ಭಾರತಿಗಳು
೩೫. ಶ್ರೀ ಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳು

ಶ್ರೀಗುರು ಪೀಠದಲ್ಲಿ ಪ್ರಕೃತ ರಾರಾಜಿಸುತ್ತಲಿರುವ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳವರ ದಿವ್ಯ ಚರಿತ್ರೆ ಈ ಮುಂದಿನ ಪುಟಗಳಲ್ಲಿ ವಿಸ್ತರಿಸಿದೆ.

ಸಂಸಾರಾರ್ಣವ ತಾರಕಾಯ ಯತಯೇ ಭಕ್ತೇಷ್ಟ ಸಂದಾಯಿನೇ
ಅದ್ವೈತಾಮೃತ ವರ್ಷಿಣೇಽಮಿತವಿದೇ ಸಂದೇಹ ಸಂಹಾರಿಣೇ ।
ವಿಷ್ಣುಬ್ರಹ್ಮ ಶಿವಾತ್ಮಕಾಯ ಮಹತೇ ಪಾಪೌಘವಿಧ್ವಂಸಿನೇ
ಶ್ರೀಮದ್ರಾಘವ ಭಾರತೀಂದ್ರ ಗುರವೇ ಭಕ್ತ್ಯಾ ಹಿ ಸೇಯಂ ನತಿಃ ॥

ಶ್ರೀ ರಾಮಚಂದ್ರಾಪುರ ಮಠದ ಶಿಷ್ಯಸಮಾಜ

ರಾಘವೇಂದ್ರಗುರುಃ ಶ್ರೀಮಾನಜ್ಞಾನತಿಮಿರಾಪಹಃ |
ವಿಕಾಸಯತು ನಶ್ಚಿತ್ತಂ ಶಿಷ್ಯಭಕ್ತಾಬ್ಜಭಾಸ್ಕರಃ ||

ಶ್ರೀಗೋಕರ್ಣ ಮಹಾಮಂಡಲದ ಶ್ರೀಮದ್ರಾಮಚಂದ್ರಾಪುರ ಮಠ ಮಹಾಸಂಸ್ಥಾನದ ಶಿಷ್ಯವರ್ಗದವರು ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳ ಬಹು ಭಾಗಗಳಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ, ಈಗ ಕೇರಳ ರಾಜ್ಯಕ್ಕೆ ಸೇರಿರುವ ಕಾಸರಗೋಡಿನಲ್ಲಿ, ಕೊಡಗು ಜಿಲ್ಲೆಯಲ್ಲಿ ವಿಶಾಲವಾಗಿ ಪಸರಿಸಿದ್ದಾರೆ. ಈಗಂತೂ ಅವರು ಭಾರತದ ಉದ್ದಗಲಕ್ಕೂ ಇದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.

ಈ ಶಿಷ್ಯವರ್ಗದಲ್ಲಿ ಬಹುಸಂಖ್ಯಾತರು ಹವ್ಯಕರು (ಹೈಗರು, ಹವಿಕರು) ಹಾಗೂ ಸಕಲಾಪುರದವರು, ಶಿಲ್ಪಕಾರ, ಭಂಡಾರಿ, ಮಡಿವಾಳ, ಇತ್ಯಾದಿ ಅನೇಕ ಪಂಗಡದವರೂ ಇದ್ದಾರೆ. ಬಹುಸಂಖ್ಯಾತ ಶಿಷ್ಯರು ಹವ್ಯಕ ಸಮಾಜಕ್ಕೆ ಸೇರಿದವರಾದುದರಿಂದ ಶ್ರೀಗಳವರ **'ಹವ್ಯಕ ಮಂಡಲಾಧೀಶ್ವರ'** ಎಂಬ ಬಿರುದು ಸಾರ್ಥಕವಾಗಿದೆ.

ಈಗ ಕರ್ನಾಟಕದ ಆದ್ಯಂತ ಕಾಣಸಿರುವ ಈ ಹವ್ಯಕರ ಮೂಲಸ್ಥಳ ಉತ್ತರ ಪ್ರದೇಶದ ಅಹಿಚ್ಛತ್ರವೆಂದು ತಿಳಿದುಬರುತ್ತದೆ. ಈ ಪರಶುರಾಮ ಕ್ಷೇತ್ರದಲ್ಲಿ ದೇವ ಯಜ್ಞ, ಪಿತೃಯಜ್ಞಗಳನ್ನು ನೆರವೇರಿಸಲೆಂದೇ ಇರುವ ರಾಜನಾದ ಮಯೂರ ವರ್ಮನ ಕಾಲದಲ್ಲಿ ಆದರಪೂರ್ವಕವಾಗಿ ಆಮಂತ್ರಿಸಲ್ಪಟ್ಟರು. ಆಸ್ತಿಕರಿಂದ ದಾನ, ದತ್ತಿ, ಉಂಬಳಿಗಳನ್ನು ಸ್ವೀಕರಿಸಿ, ಇಲ್ಲಿಯೇ ನೆಲಸಿ, ದೇವ ಪಿತೃಗಳ ಆರಾಧನೆಯನ್ನು ಕಾಲಕಾಲಕ್ಕೆ ಸರಿಯಾಗಿ ನೆರವೇರಿಸಿ, ಸುವೃಷ್ಟಿ, ಸುಭಿಕ್ಷ, ಸಮೃದ್ಧಿ, ಸ್ವಯಂಪರಿಪೂರ್ಣತೆಗಳನ್ನು ತಂದುಕೊಟ್ಟ ಹಿರಿಮೆ ಈ ಹವ್ಯಕ ವರ್ಗಕ್ಕೆ ಇದೆ.

ದೇವ, ಪಿತೃಯಜ್ಞಗಳನ್ನು ಆಚರಿಸುವವರು ಎಂಬುದೇ ಹವ್ಯಕ ಶಬ್ದದ ಅರ್ಥ. 'ಅಹೋರಾತ್ರ' ಎಂಬ ಎರಡು ಶಬ್ದಗಳ ಸಮ್ಮಿಳನದಿಂದ ಉತ್ಪನ್ನವಾದ ಜ್ಯೋತಿಶಾಸ್ತ್ರದ 'ಹೋರಾ' ಎಂಬ ಶಬ್ದದಂತೆ 'ಹವ್ಯ-ಕವ್ಯ' ಎಂಬೆರಡು ಪದಗಳ ಸಂಯೋಜನೆಯಿಂದ 'ಹವ್ಯಕ' ಎಂಬ ಶಬ್ದ ರೂಪುಗೊಂಡಿದೆ. 'ಹವ್ಯ' ಎಂದರೆ ಯಾಗಾದಿಗಳಲ್ಲಿ ದೇವತೆಗಳಿಗೆ ವಿಧಿ-ಪೂರ್ವಕವಾಗಿ ಸಮರ್ಪಿಸುವ ದ್ರವ್ಯ. ಶ್ರಾದ್ಧಾದಿಗಳ ಮೂಲಕ ಪಿತೃಗಳಿಗೆ ನೀಡುವ ತಿಲೋದಕಾದಿಗಳೇ 'ಕವ್ಯ' ಈ ಹವ್ಯ-ಕವ್ಯಗಳನ್ನು ವಿಧಿವತ್ತಾಗಿ ಕಾಲಕಾಲಕ್ಕೆ ದೇವ-ಪಿತೃಗಳಿಗೆ ಸಮರ್ಪಿಸುವವರು ಎಂಬ ಅರ್ಥವುಳ್ಳವರು ಹವ್ಯಕರು.

ಗೋಕರ್ಣ ಕ್ಷೇತ್ರದಲ್ಲಿ ಶ್ರೀಮದಾದ್ಯಶಂಕರಾಚಾರ್ಯರಿಂದ ಸಂಸ್ಥಾಪಿತವಾದಾಗಿನಿಂದಲೂ ನಮ್ಮ ಮಠಕ್ಕೆ ಶ್ರೀ ಗೋಕರ್ಣ ಮಂಡಲದ ಧರ್ಮಾಚಾರ್ಯತ್ವ ಪ್ರಾಪ್ತ

ವಾಗಿದೆ. ಅಂದಿನಿಂದ ಇಂದಿನವರೆಗೆ ಅವಿಚ್ಛಿನ್ನವಾದ ಗುರುಪರಂಪರೆಯಿಂದ ಶಿಷ್ಯ ಸಮಾಜದ ಯೋಗಕ್ಷೇಮದ ಹೊಣೆಯನ್ನು ಶ್ರೀಮಠ ಅನುಸ್ಯೂತವಾಗಿ ನಿರ್ವಹಿಸುತ್ತಾ ಬಂದಿದೆ.

ಪುಣ್ಯ-ಪಾಪ, ಸ್ವರ್ಗ-ನರಕ ಒಳಿತು-ಕೆಡುಕು — ಇತ್ಯಾದಿಗಳ ಬಗೆಗಿನ ಸಾರಾ-ಸಾರಾ ವಿವೇಕ ಪರಿಪೂರ್ಣತೆ, ಶ್ರೀಗುರು-ದೇವತಾ ವಿಷಯದಲ್ಲಿ ಭಕ್ತಿಶ್ರದ್ಧೆ, ಧಾರ್ಮಿಕ ಕಟ್ಟು-ಕಟ್ಟಳೆಗಳನ್ನು ಅನುಸರಿಸುವಿಕೆ, ಆಸ್ತಿಕ ಭಾವನೆ—ಇವೇ ಮೊದಲಾದ ಸದ್ಗುಣಗಳನ್ನು ವಿಭೂಷಣವಾಗಿಸಿಕೊಂಡಿದ್ದ ಆಗಿನ ಶಿಷ್ಯ ಸಮಾಜ, ಧರ್ಮಮಾರ್ಗಾನುಯಾಯಿಯಾಗಿ ಇಹ-ಪರಗಳೆರಡರಲ್ಲಿಯು ಸುಖ-ಸಂತೋಷ-ಸದ್ಗತಿಗಳಿಗೆ ಭಾಜನವಾಗಿತ್ತು.

ಇದು ಹವ್ಯಕ ಸಮಾಜದವರ ಮೂಲ ಇತಿಹಾಸ. ಕಾಲಾನಂತರದಲ್ಲೂ ಅವರ ಪೈಕಿ ಕೆಲವರು ಉತ್ತಮ ವೈದಿಕರಾಗಿ ವೇದಾಧ್ಯಯನ ಶಾಸ್ತ್ರಾಧ್ಯಯನ ಇವುಗಳನ್ನು ಮುಂದುವರಿಸುತ್ತಾ ವೇದೋಕ್ತವಾದ ಕರ್ಮಗಳನ್ನು ಮಾಡುತ್ತಾ ಸಮಾಜಕ್ಕೆ ಆಚಾರ್ಯರಾಗಿ ಉಳಿದರು. ಆದರೆ ಬಹುಸಂಖ್ಯಾಕರು ಕೃಷಿಯನ್ನೇ ತಮ್ಮ ಮುಖ್ಯ ವೃತ್ತಿಯನ್ನಾಗಿ ಇಟ್ಟುಕೊಂಡು ಸದಾಚಾರ ಸಂಪನ್ನರಾಗಿ ಈ ಮಠದ ಕೆಳಗೆ ಬಾಳಿದರು.

ಬ್ರಿಟಿಷ್ ಆಳಿಕೆ ಭಾರತ ದೇಶದಲ್ಲಿ ಪ್ರಾರಂಭವಾದಮೇಲೆ ಹವ್ಯಕ ಬ್ರಾಹ್ಮಣರು ನೆಲಸಿಕೊಂಡಿದ್ದ ಪ್ರದೇಶಗಳು ಬೇರೆಬೇರೆ ಪ್ರಾಂತ್ಯಗಳ ಆಡಳಿತಕ್ಕೆ ಒಳಗಾದುವು. ಕಾಸರಗೋಡು ಸಹಿತವಾದ ದಕ್ಷಿಣ ಕನ್ನಡ ಮದ್ರಾಸು ಪ್ರಾಂತ್ಯದ ಅಧೀನವಿದ್ದರೆ, ಕೊಡಗು ಪ್ರತ್ಯೇಕವಾದ ಒಂದು ಆಶ್ರಿತ ರಾಜ್ಯವಾಗಿತ್ತು. ಉತ್ತರ ಕನ್ನಡವು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿತು. ಶಿವಮೊಗ್ಗ ಜಿಲ್ಲೆ ಹಿಂದಿನ ಮೈಸೂರು ರಾಜ್ಯಕ್ಕೆ ಸೇರಿತ್ತು.

ಸಹ್ಯಾದ್ರಿ ಬೆಟ್ಟ ಹಾಗೂ ದಕ್ಷಿಣ ಕನ್ನಡ, ಉತ್ತರ ಕನ್ನಡಗಳಲ್ಲಿರುವ ಹಲವಾರು ಸೇತುವೆಗಳಿಲ್ಲದ ನದಿಗಳು (ಈಗ ಸೇತುವೆಗಳು ರಚಿಸಲ್ಪಟ್ಟಿವೆ)-ಇವುಗಳಿಂದಾಗಿ ಈ ವಿವಿಧ ಪ್ರದೇಶಗಳ ನಡುವೆ ಸಾರಿಗೆ ಸಂಪರ್ಕವೂ ಇಲ್ಲವಾಯಿತು.

ಇದರ ಪರಿಣಾಮವಾಗಿ ಹವ್ಯಕ ಸಮಾಜದವರು ಆಗಾಗ ಪರಸ್ಪರ ಕಲೆತುಕೊಂಡು ಸುಸಂಘಟಿತರಾಗಿ ಒಟ್ಟಾಗಿ ಬಾಳಲು ಸಾಧ್ಯವಿಲ್ಲದೆ ಹೋಯಿತು. ಆದುದರಿಂದ ತಮ್ಮ ಸಮಾಜದ ಶಕ್ತಿಯ ಅರಿವಾಗಲು ಅವರಿಗೆ ಅವಕಾಶವಿರಲಿಲ್ಲ.

ಹವ್ಯಕರು ಹೆಚ್ಚಿನವರು ಮಲೆನಾಡು ಹಾಗೂ ಮಲೆನಾಡ ಸಂಪರ್ಕವಿರುವ ಸೀಮೆಗಳಲ್ಲೇ ವಾಸವಾಗಿದ್ದುದರಿಂದ ಅವರು ಸಾಹಸಿಗಳು, ಕಷ್ಟಪಟ್ಟು ದುಡಿಯುವವರು

ಮತ್ತು ಕಷ್ಟಸಹಿಷ್ಣುಗಳು. ಅಡಕೆ, ಬತ್ತ, ತೆಂಗುಗಳೇ ಅವರ ಪ್ರಧಾನ ಬೆಳೆಗಳಾದುವು. ಈ ಎಲ್ಲಾ ಕಾರಣಗಳಿಂದ ಹವ್ಯಕ ವರ್ಗವು ಶ್ರೀಮಂತ ವರ್ಗವೆಂಬುದಾಗಿ ಪರಿಗಣಿಸಲ್ಪಡತೊಡಗಿತ್ತು. ೧೯೩೯-೪೦ರ ಅನಂತರವಂತೂ ಅಡಕೆಯ ಧಾರಣೆ ಹೆಚ್ಚಿದ ಮೇಲೆ, ಅವರ ಸಂಪತ್ತು ವೃದ್ಧಿಯಾಯಿತು ಎನ್ನಲಡ್ಡಿಯಿಲ್ಲ.

ಹವ್ಯಕ ಬ್ರಾಹ್ಮಣರು ಸ್ಫುರದ್ರೂಪಿಗಳು, ಸುಸಂಸ್ಕೃತರು, ನೀತಿ ಸಂಪನ್ನರು, ಕುಲೀನ ಸ್ವಭಾವದವರು ಮತ್ತು ಸ್ವಾಭಿಮಾನಿಗಳು. ಎಲ್ಲದಕ್ಕಿಂತ ಹೆಚ್ಚಾಗಿ ಇವರು ತುಂಭಾ ಬುದ್ಧಿವಂತರು – ಎಂದು ಸಾಮಾನ್ಯ ಅಭಿಪ್ರಾಯ.

ಶತಮಾನಗಳ ಹಿಂದೆ ಹವ್ಯಕರು ರಾಜಕೀಯವಾಗಿ ಬಹಳ ಮುಂದೊತ್ತಿ ದುಡಿಯುತ್ತಿದ್ದವರು ಅಲ್ಲವಾದರೂ, ಮಹಾತ್ಮಾ ಗಾಂಧಿಯವರ ಅಸಹಕಾರ ಚಳುವಳಿಯಲ್ಲಿ ಹವ್ಯಕರು ತುಂಬಾ ಸಂಖ್ಯೆಯಲ್ಲಿ ಭಾಗವಹಿಸಿದರು. ಅವರಿಗೆ ಉಗ್ರಶಿಕ್ಷೆಯ ರೂಪದಲ್ಲಿ ಸರಕಾರದವರು ಅವರ ಆಸ್ತಿಗಳನ್ನು ಮುಟ್ಟುಕೋಲು ಹಾಕಿ ಹರಾಜು ಪಡಿಸಿದ್ದರಿಂದ ಅವರು ತುಂಬಾ ಕಷ್ಟ ಕಾರ್ಪಣ್ಯಗಳಿಗೆ ಗುರಿಯಾದರು. ಇದರ ಲಾಭ ಪಡೆದುಕೊಂಡು ಇತರ ಸಮಾಜದವರು ಕೆಲವರು ಮುಂದೆ ಬಂದರು.

ಈ ಕಾರಣದಿಂದಲೋ ಅಥವ ಇನ್ನಾವ ಕಾರಣದಿಂದಲೋ ಹವ್ಯಕರಲ್ಲಿ ಕರ್ನಾಟಕ ಸರಕಾರದಲ್ಲಿ ಸಚಿವಸ್ಥಾನಪಡೆದು ಕೀರ್ತಿಗಳಿಸಿದವರಿದ್ದರೂ ಇಂದಿಗೆ ರಾಜಕೀಯವಾಗಿ ಬಹಳ ಚಟುವಟಿಕೆಯಿಂದ ಮುಂದುವರಿಯುವವರು ಕಡಿಮೆ. ಕೆಲವರು ಮುಂದುವರಿದರೂ ಉಳಿದವರು ಅವರಿಗೆ ಬೆಂಬಲ ನೀಡುವುದಿಲ್ಲ. ಈ ಕಾರಣದಿಂದಲೇ ಹವ್ಯಕರಲ್ಲಿ ರಾಜಕೀಯವಾಗಿ ಉನ್ನತ ಸ್ಥಾನದಲ್ಲಿರುವವರು ಕಡಿಮೆ.

ರಾಜಕೀಯ ಮುಂದಾಳುಗಳು ಇಲ್ಲವಾದುದರಿಂದಲೋ ಅಥವಾ ರಾಜಕೀಯವಾಗಿ ಹಿಂದೆ ಇವರು ವಿಭಿನ್ನ ಕ್ಷೇತ್ರಗಳಲ್ಲಿ ಹರಿಹಂಚಾಗಿ ಹೋಗಿದ್ದರಿಂದಲೋ, ಹವ್ಯಕರು ಬಹಳ ಅನುಕೂಲಸ್ಥರೂ, ಬುದ್ಧಿವಂತರೂ, ಸುಸಂಸ್ಕೃತರೂ ಆದರೂ ಇವರಲ್ಲಿ ಸಂಘಟನೆ, ಸಂಯುಕ್ತ ಯೋಜನೆ ಕಡಿಮೆಯೆಂದೇ ಹೇಳಬಹುದು. "ಒಂದು ಗುಂಪಿನ ಅಂಕೆಯೊಳಗೆ ನಾವಿರಲಾರೆವು. ನಾವು ಸ್ವತಂತ್ರರು" ಎಂಬ ಭಾವನೆಯೇ ಇವರಲ್ಲಿ ಅಧಿಕ.

ಕರ್ನಾಟಕವೆಲ್ಲಾ ಒಂದೇ ಆಗಿ, ಹವ್ಯಕರೆಲ್ಲಾ ಇಂದು ಹೆಚ್ಚಿನ ಮಟ್ಟಿಗೆ ಒಂದೇ ಆಡಳಿತದಲ್ಲಿದ್ದರೂ (ದುರದೃಷ್ಟವಶಾತ್ ಕಾಸರಗೋಡು ತಾಲೂಕು ಇನ್ನೂ ಕೇರಳದಲ್ಲೇ ಇದೆ.) ಸುಸಂಘಟಿತರಾಗುವ ಮನಸ್ಸು ಮೊದಲಿಗಿಂತ ಹೆಚ್ಚಾಗಿದ್ದರೂ ಇನ್ನೂ ಅದು ಪೂರ್ತಿಯಾಗಿ ಬೆಳೆದಿಲ್ಲ.

ಈ ಸಂದರ್ಭದಲ್ಲಿ ಪಾಶ್ಚಾತ್ಯರ ಸಂಸ್ಕೃತಿಯ ಬದಲಾವಣೆಗಳು ಸಹಜವಾಗಿಯೇ ಬಂದುವು. ಜೀವನ ಕ್ರಮ, ಆಚಾರ-ವಿಚಾರ ಬದಲಾಯಿತು. ಬಹುಸಂಖ್ಯಾತ

ಯುವಕರು ಉಚ್ಚಶಿಕ್ಷಣ ಪಡೆಯತೊಡಗಿದರು. ಧಾರ್ಮಿಕ ದೃಷ್ಟಿ ಕ್ಷೀಣಿಸತೊಡಗಿತು. ಆಗ ಮಠಗಳ ಮತ್ತು ಸಮಾಜದ ನಡುವಿನ ಸಂಬಂಧವೇನು? ಮಠಗಳೇಕೆ? ಸ್ವಾಮಿಗಳೆಂದರೆ ಏನು ? ಸ್ವಾಮಿಗಳು ಮಠಾಧಿಪತಿಗಳಾಗಿರುವುದೆಂದರೆ ಏನು? ಅವರ ಸ್ಥಾನಮಾನವೇನು? ಶಕ್ತಿಯೇನು? ಅವರ ಕಡೆಗೆ ಸಮಾಜ ಬಾಂಧವರ ಕರ್ತವ್ಯ ಏನು? ಎಂಬಿತ್ಯಾದಿ ವಿಷಯಗಳಲ್ಲಿ ಕೆಲವು ಶಂಕೆಗಳು ಸಮಾಜದ ಕೆಲವರಲ್ಲಿ ಎದ್ದಿರಬಹುದು.

ಅಥವಾ ಮಠ, ಸ್ವಾಮಿಗಳು ಎಲ್ಲವೂ ಬೇಕೆಂದು ಕಂಡವರಿಗೂ ಇನ್ನೊಂದು ತರದ ಶಂಕೆ ಬರಬಹುದು. "ಸರ್ವಸಂಗ ಪರಿತ್ಯಾಗ ಮಾಡಿ ಪರಿವ್ರಾಜಕರೆನಿಸಿದ ಮಠಾದಿಪತಿಗಳು ಜಪ, ತಪ, ಪೂಜೆ, ಅನುಷ್ಠಾನ, ವೇದಾಂತಾದಿ ವಿಚಾರ ಇತ್ಯಾದಿಗಳನ್ನು ಮಾತ್ರ ನೆರವೇರಿಸುತ್ತಾ ಮಠದಲ್ಲೇ ಏಕೆ ಇರಬಾರದು? ಸಮಾಜದಲ್ಲಿ ಏಕೆ ಸಂಚರಿಸಬೇಕು ? ಅವರಿಗೆ ವಸ್ತುವಾಹನಗಳೇಕೆ ? ರಾಜೋಪಚಾರಗಳೇಕೆ?"

ಇಂತಹ ಶಂಕೆಗಳಿಂದ ಹಾಕುವ ಪ್ರಶ್ನೆಗಳಿಂದ ಶ್ರದ್ಧಾಭಕ್ತಿಗಳಿರುವವರ ಮನದಲ್ಲೂ ಒಂದು ತರದ ಸಂಶಯ, "ನಾವು ತಪ್ಪುತ್ತಿದ್ದೇವೋ? ನಾವು ಹೆದ್ದರೇ?" ಎಂಬ ಭೀತಿ ತೋರಲು ಅವಕಾಶವಿದೆ.

ಆದರೆ ಇಂತಹ ಶಂಕೆಗಳನ್ನು ದಿವ್ಯಪುರುಷರಾದ ಶ್ರೀಮದಾದ್ಯ ಶಂಕರಾಚಾರ್ಯರು ಆಗಲೇ ಮುಂದಾಗಿ ದಿವ್ಯದೃಷ್ಟಿಯಿಂದ ಕಂಡು ಅವುಗಳಿಗೆ ಉತ್ತರ ನೀಡಿರುತ್ತಾರೆ. ಅವರ ವಚನಗಳು ಹೀಗಿವೆ :

"ಆಚಿನೋತಿ ಚ ಶಾಸ್ತ್ರಾಣಿ ಆಚಾರೇ ಸ್ಥಾಪಯತ್ಯಪಿ ।
ಸ್ವಯಮಾಚರತೇ ಯಸ್ಮಾತ್ ತಮಾಚಾರ್ಯಂ ಪ್ರಚಕ್ಷತೇ ॥
ಗತಿರ್ನಾನ್ಯಾ ಮೂಲಂ ಮನುಷ್ಯಾಣಾಂ [illegible] ಕಾಪವರ್ಗ [illegible] ।
ಧರ್ಮ್ಯಾಚಾರ್ಯಸ್ಯ ಸುಮಹಚ್ಛಾಸನಂ ಸರ್ವತೋಽಧಿಕಮ್ ॥"

ಆಹಾರ, ನಿದ್ರೆ, ಭಯ, ಮೈಥುನ, ಮೊದಲಾದವುಗಳು ಮಾನವರಿಗೂ ಪಶುಗಳಿಗೂ ಉಭಯಸಾಧಾರಣವಾದವುಗಳು. ಮಾನವನನ್ನು ಪಶುವರ್ಗದಿಂದ ಬೇರ್ಪಡಿಸಿ, ಉನ್ನತ ದುಷ್ಟಿಕ್ಕೆ ಒಯ್ಯಲು ಸಮರ್ಥವಾದುದು ಧರ್ಮವೊಂದೇ. ಈ ಧರ್ಮವೇ ಮಾನವತೆಗೆ ಮೂಲಾಧಾರ. ಯಾವುದು ಧರ್ಮ? ಯಾವುದು ಅಧರ್ಮ? ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಸತ್ಪಥ ಪ್ರದರ್ಶನ ಮಾಡಲು, ಧರ್ಮಶಾಸ್ತ್ರಾದಿ ಗ್ರಂಥಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದ, ಅವನ್ನು ತಾವು ಸ್ವತಃ ಆಚರಿಸಿ, ಆಚರಣೆಯಲ್ಲಿ ತರುವಂತೆ ಮಾಡುತ್ತಲಿರುವ ಧರ್ಮಾಚಾರ್ಯರಿಂದ ಮಾತ್ರ ಸಾಧ್ಯ. ಆದುದರಿಂದ ಧರ್ಮಾಚಾರ್ಯರ ಶಾಸನವು ಎಲ್ಲಕ್ಕಿಂತಲೂ ಮಿಗಿಲಾದುದು ಎಂಬುದು ಅವರ ಆಶಯ,

ಮಠೇ ತು ನಿಯತಂ ವಾಸಃ ಆಚಾರ್ಯಸ್ಯ ನ ಯುಜ್ಯತೇ ||

'ಆಚಾರ್ಯನಾದವನು ಮಠದಲ್ಲಿ ನಿರಂತರವಾಗಿ ವಾಸಿಸಬಾರದು' ಅಂದರೆ ಶಿಷ್ಯಜನತೆಯ ಯೋಗಕ್ಷೇಮವನ್ನು ವಿಚಾರಿಸಿ, ಅವರನ್ನು ಸನ್ಮಾರ್ಗಾವಲಂಬಿಗಳನ್ನಾಗಿ ಮಾಡಲು ಶಿಷ್ಯಸಮಾಜದಲ್ಲಿ ಆಚಾರ್ಯನು ಸಂಚಾರ ಕೈಗೊಳ್ಳಬೇಕು' ಎಂದು ಅವರು ಮಾಡಿದ ಅಪ್ಪಣೆ.

ದೇವರಾಜೋಪಚಾರಾಂಶ್ಚ ಯಥಾವದನುಪಾಲಯೇತ್ ||

(ದೇವ ದೇವತೆಗಳಿಗೆ ಮತ್ತು ರಾಜ ಮಹಾರಾಜರಿಗೆ ಮಾಡತಕ್ಕ ಸೇವೆ ಉಪಚಾರಗಳನ್ನು ಧರ್ಮದ ಕಾರಣಕ್ಕಾಗಿ, ಸ್ವೀಕರಿಸಬೇಕು.) ಯಾನ ಆಂದೋಲಿಕಾದ್ಯಾರೋಹಣ, ಶಿಷ್ಯ ಸಮಾಜ ಸಂಚರಣ, ದೇವ ರಾಜೋಪಚಾರ ಸ್ವೀಕರಣ–ಮೊದಲಾದುವುಗಳನ್ನು ಧಾರ್ಮಿಕ ಉದ್ದೇಶಕ್ಕಾಗಿ ನೆರವೇರಿಸಬೇಕು ಎಂಬುದು ಮಠಾಧಿಪತಿಗಳಿಗೆ ಶ್ರೀ ಶಂಕರರ ಉಪದೇಶ.

'ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ' ಎಂಬ ಸಂಗತಿ ದಿಟವಾದರೂ ಬಲ್ಲವರೇ ಇಲ್ಲವೆಂದಾಗುವುದಿಲ್ಲವಲ್ಲ. ಅಂತಹರಿಂದ ವಿಷಯವನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದು ಉಚಿತವಾದೀತು.

ಪ್ರಚಲಿತ ಗುರುಗಳೂ ಮಠಾಧಿಪತಿಗಳೂ ಆಗಿರುವ ಪೂಜ್ಯ **ಶ್ರೀಮದ್ರಾಘವೇಂದ್ರ ಭಾರತೀ ಶ್ರೀಸ್ವಾಮಿಗಳು** ಜ್ಞಾನಸಿಂಹಾಸನವನ್ನೇರಿ ಆಡಳಿತವನ್ನು ಕೈಗೆತೆಗೆದುಕೊಳ್ಳುವ ಮೊದಲಿನ ಹವ್ಯಕ ಬ್ರಾಹ್ಮಣರ ಸ್ಥಿತಿಗತಿ ಹೀಗಿತ್ತು ಎಂಬುದು ಸತ್ಯಸಂಗತಿ. ಅವರು ಆಡಳಿತ ಸ್ವೀಕರಿಸಿದನಂತರ ಈ ಸಮಾಜಕ್ಕೆ ಏನಾಗಿದೆ ಎಂಬುದು ಮುಂದಿನ ಪುಟಗಳಲ್ಲಿ ಸ್ಫುಟವಾಗಿ ಹೊರಬರುವ ಅವರ ಚರಿತ್ರೆಯಿಂದ ತಿಳಿದು ಬರುವುದು.

ಶ್ರೀ ರಾಮಚಂದ್ರಪುರಭದ್ರ ಮಠಾಭ್ರ ಚಂದ್ರ
ಶ್ರೀ ರಾಘವೇಂದ್ರ ಯತಿಪುಂಗವ ದೇಶಿಕೇಂದ್ರ ।
ಶ್ರೀ ರಾಮಚಂದ್ರ ಪದಪಂಕಜಸಕ್ತಭೃಂಗ
ನಿತ್ಯಂ ಸ್ತುವೇಽಘಹರ ದೇವ ಭವತ್ಪದಾಬ್ಜಮ್ ||

ಪೂಜ್ಯ ಶ್ರೀಗುರುಗಳವರು ಅನುಷ್ಠಾನದಲ್ಲಿರುವುದು

ಶ್ರೀಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳು

ನ ಮ ನ

ಶಿಷ್ಯವೃಂದ ಸೇವ್ಯಮಾನ ದಿವ್ಯಪಾದ ಪಂಕಜಂ
ರಾಮಚಂದ್ರ ಚಂದ್ರಮೌಳಿ ಪಾದಪದ್ಮ ಪೂಜಕಮ್ ।
ನ್ಯಾಯವೇದ ಸಾಂಖ್ಯಯೋಗ ತತ್ತ್ವವಾಕ್ಯ ಕೋವಿದಂ
ರಾಘವೇಂದ್ರ ಭಾರತೀಗುರುಂ ಸದಾ ನಮಾಮ್ಯಹಮ್ ॥

ವಿಭೂತಿ ವಿಭೂಷಿತ ವಿಶಾಲಫಾಲ, ದಿವ್ಯಕಾಂತಿಯನ್ನು ಹೊರಸೂಸುತ್ತಿರುವ ತೇಜಃಪುಂಜವಾದ ಪದ್ಮದಲಾಯತ ಲೋಚನಯುಗಲ, ವ್ಯಾವಹಾರಿಕ ದೂರದರ್ಶಿತ್ವವನ್ನು ಎತ್ತಿತೋರುವ ನೀಳವಾದ ನಾಸಿಕ, ಹೊರಹೊಮ್ಮುತ್ತಿರುವ ಮುಗುಳ್ನಗೆಯಿಂದ ಒಡಗೂಡಿದ ಪ್ರಸನ್ನ ಗಂಭೀರ ಮುಖಮಂಡಲ, ಚಿನ್ ಮುದ್ರಾಮುದ್ರಿತ ಅಭಯವರದ ಕರಕಮಲ, ಭವ್ಯ ಸುಂದರ ಸುವರ್ಣಕಾಂತಿಯುತ ಕಮನೀಯ ಕಾಯ, ಅದಕ್ಕೊಪ್ಪುವ ಕಾಷಾಯ ವಸನ, ಸಕಲಪಾಪಗಳನ್ನೂ ದೂರಮಾಡುವ ಪವಿತ್ರಚರಣ ಯುಗಲ – ಇವೆಲ್ಲವುಗಳಿಂದ ಶೋಭಿತರಾಗಿ ತಮ್ಮ ಆರಾಧ್ಯ ದೇವತೆಗಳಾದ ಶ್ರೀ ಸೀತಾರಾಮಚಂದ್ರ, ಚಂದ್ರಮೌಳೀಶ್ವರ, ರಾಜರಾಜೇಶ್ವರೀ ದಿವ್ಯ ಸನ್ನಿಧಿಯಲ್ಲಿ ಅನುದಿನವೂ ಸಮಗ್ರ ಶಿಷ್ಯಜನತೆಯ ಯೋಗಕ್ಷೇಮವನ್ನು ಸಂಪ್ರಾರ್ಥಿಸುತ್ತಾ ಶ್ರೀ ಗುರುಪೀಠದಲ್ಲಿ ವಿರಾಜಿಸುತ್ತಲಿರುವವರು – ನಮ್ಮ ಶ್ರೀಗಳವರು – ಶ್ರೀ ಗೋಕರ್ಣ ಮಂಡಲಾಧೀಶ್ವರ **ಶ್ರೀಮದ್ರಾಘವೇಂದ್ರಭಾರತೀ ಮಹಾಸ್ವಾಮಿಗಳವರು. ಇವರು** ಪ್ರಕೃತ ಗ್ರಂಥ ಚೇತನ ಸ್ವರೂಪರು.

ಸಂನ್ಯಾಸಾಶ್ರಮ ಸ್ವೀಕಾರ

ಶ್ರೀಮಜ್ಜಗದ್ಗುರು **ಶಂಕರಾಚಾರ್ಯರಿಂದ** ಸಂಸ್ಥಾಪಿಸಲ್ಪಟ್ಟ **ಶ್ರೀ ವಿದ್ಯಾನಂದಾಚಾರ್ಯರಿಂದ** ಮೊದಲ್ಗೊಂಡು, ಅವಿಚ್ಛಿನ್ನ ಗುರು ಪರಂಪರೆಯಿಂದ ಮುಂದುವರಿದು ಬರುತ್ತಲಿರುವ **ಶ್ರೀಮದ್ರಾಮಚಂದ್ರಾಪುರ ಮಠದ** ಪೀಠಾಧಿಷ್ಠಿತರಾದ ವರ್ತಮಾನ **ಶ್ರೀಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳವರು,** ಕಾಂಚೀ ಮಹಾರಾಜನಿಂದ ಸನ್ಮಾನಪೂರ್ವಕವಾಗಿ ಆನೆಯನ್ನು ಪಡೆದವರೂ ಮೈಲಿಬೇನೆಯಿಂದ ಕುರುಡಾದ ಕಣ್ಣನ್ನು ಚಿತ್ರಮೂಲ-ಕೊಡಚಾದ್ರಿಗಳಲ್ಲಿ ಅಖಂಡ ತಪಸ್ಸನ್ನಾಚರಿಸಿ ಮರಳಿ ಪಡೆದುಕೊಂಡು ಮಹಾತಪಸ್ವಿಗಳೆಂದು ವಿಖ್ಯಾತರಾದವರೂ ಯಾರಿಂದಲೂ ನಿಗ್ರಹಿಸಲಾಗದಷ್ಟು ಕೊಬ್ಬಿದ ಮದ್ದಾನೆಯನ್ನು ಕೇವಲ ಕಾವಿಶಾಟಿಯಿಂದ (ಹೊದೆದ ಉತ್ತರೀಯದಿಂದ) ಬಿಗಿದು ಹಾಕಿದ ಮಹಾನುಭಾವರೂ ಆಗಿದ್ದ **ಶ್ರೀಮದ್ರಾಘವೇಶ್ವರ ಭಾರತೀ ಸ್ವಾಮಿಗಳವರ** ಪ್ರಶಿಷ್ಯರು.

ಸುವರ್ಣರತ್ನ ಖಚಿತವಾದ ಆನೆಯ ದಂತಗಳಿಂದ ಕಲಾತ್ಮಕವಾಗಿ ತಯಾರಿಸಿದ, ಸಮಸ್ತ ರಾಜವೈಭವೋಪೇತವಾದ ಹಸ್ತಿದಂತ ಸಿಂಹಾಸನವನ್ನು ನಿರ್ಮಿಸಿ, ಶ್ರೀ ಗೋಕರ್ಣ ಮಹಾಕ್ಷೇತ್ರದಲ್ಲಿ ಶ್ರೀ ಮಹಾಬಲೇಶ್ವರನ ದಿವ್ಯ ಸಾನ್ನಿಧ್ಯದಲ್ಲಿ ಅಖಿಲ ಶಿಷ್ಯಜನತೆಯ ಅಭಿಲಾಷೆಯ ಮೇರೆಗೆ ಆರೋಹಿಸಿ, ವ್ಯಾಖ್ಯಾನ ಸಿಂಹಾಸನಾಧೀಶ್ವರರೆಂಬ ಬಿರುದನ್ನು ಸಾರ್ಥಕಪಡಿಸಿಕೊಂಡವರೂ ತಪೋನಿಷ್ಠರೂ ಆಗಿದ್ದ **ಶ್ರೀಮದ್ರಾಮಚಂದ್ರ ಭಾರತೀ ಸ್ವಾಮಿಗಳವರ** ಕರಕಮಲ ಸಂಜಾತರು.

ಪರಮಪೂಜ್ಯರಾದ **ಶ್ರೀ ರಾಮಚಂದ್ರ ಭಾರತೀ ಸ್ವಾಮಿಗಳವರು** ತಮ್ಮ ಮಠದ ಗುರುಪರಂಪರೆ ಈ ವರೆಗಿನಂತೆ ಮುಂದೆಯೂ ಅವಿಚ್ಛಿನ್ನವಾಗಿ ನಡೆದುಕೊಂಡು ಬರಬೇಕೆಂದು ಬಯಸಿ, ಅಖಿಲ ಶಿಷ್ಯ ಮಂಡಲಿಯ ಅಭಿಪ್ರಾಯವನ್ನು ತಿಳಿಯಲಪೇಕ್ಷಿಸಿ, ಸಮಗ್ರ ಶಿಷ್ಯ ಜನತೆಯ ಮಹಾಸಭೆಯನ್ನು ಸೇರಿಸಿದರು. ಆ ಸಭೆ ಶಿಷ್ಯಪರಿಗ್ರಹವಾಗಲೇಬೇಕೆಂದು ಒಕ್ಕೊರಲಿನಿಂದ ಒತ್ತಾಯಪಡಿಸಿತು. ಎಲ್ಲಾ ಭಾಗಗಳಿಂದಾಪ್ತ ಪ್ರತಿನಿಧಿಗಳನ್ನೊಳಗೊಂಡು ನಿರ್ಮಿತವಾದ ಸಮಿತಿ ಶ್ರೀಗುರುಪೀಠಕ್ಕೆ ಅರ್ಹನಾದ ವಟುವನ್ನು ಆಯ್ಕೆಮಾಡಿ ಶ್ರೀ ಸಂಸ್ಥಾನಕ್ಕೆ ನಿವೇದಿಸುವ ಹೊಣೆಯನ್ನು ಹೊತ್ತುಕೊಂಡಿತು.

ಸತ್ಕುಲ, ಉತ್ತಮ ಶೀಲ, ಒಳ್ಳೆಯ ಗುಣ-ಸ್ವಭಾವ, ಯೋಗ್ಯ ಜಾತಕಗಳುಳ್ಳ ಆರೆಂಟು ವಟುಗಳಲ್ಲಿ ಎಲ್ಲರಿಂದಲೂ ಎಲ್ಲಾ ವಿಧದಿಂದಲೂ ಪ್ರಶಸ್ತವೆಂದು ಮೆಚ್ಚಿಕೆಗಳಿಸಿದ ಹಾಗೂ ಸಂನ್ಯಾಸದ ಸಕಲ ಸಲ್ಲಕ್ಷಣಗಳಿಂದ ಕೂಡಿದ ವರ್ತಮಾನ ಶ್ರೀಗಳವರನ್ನೇ ಶಿಷ್ಯರನ್ನಾಗಿ ಪರಿಗ್ರಹಿಸಿ, ಸಂಯೋಗ್ಯ ಉತ್ತರಾಧಿಕಾರಿಗಳನ್ನಾಗಿ

ಅಂಗೀಕರಿಸಲು ಸಮಿತಿಯ ಸದಸ್ಯರೆಲ್ಲರೂ ಒಮ್ಮತದಿಂದ ಶ್ರೀ ಸಂಸ್ಥಾನಕ್ಕೆ ಅರಿಕೆ ಮಾಡಿದರು.

ಗುರುವರೇಣ್ಯ ಶ್ರೀರಾಮಚಂದ್ರ ಭಾರತೀ ಸ್ವಾಮಿಗಳು ಸಾಗರ ಪ್ರಾಂತ್ಯದಲ್ಲಿ ಸಂಚರಿಸುತ್ತಿರುವಾಗ, ಶಿಷ್ಯಪರಿಗ್ರಹ ಮಹಾಶಯೆಯನ್ನು ಸೇರಿಸುವ ಸುಮಾರು ಮೂರು ವರ್ಷ ಮೊದಲೇ ಕರೂರು ಸೀಮೆಯ ಮಾಗಲು ವೇ|| ಬ್ರಂ|| ಗಣಪತಿ ಭಟ್ಟರಿಂದ ವರ್ತಮಾನ ಶ್ರೀ ಶ್ರೀಗಳವರ ಜಾತಕವನ್ನು ಸಂಗ್ರಹಿಸಿಟ್ಟುಕೊಂಡ ಸಂಗತಿ ದೈವ ಸಂಕಲ್ಪಿತ. ಭಾವಿ ನಿರ್ಣಯವನ್ನು ಪೂರ್ವಭಾವಿಯಾಗಿಯೇ ಕಂಡುಕೊಂಡ ಒಂದು ವಿಶೇಷ ಘಟನೆ ಇದು.

ಮುಂದಿನ ಪೀಠಾಧಿಪತಿಯ ಕುರಿತಾಗಿ ಜನ್ಮಕುಂಡಲಿ ಮತ್ತು ಇತರ ಲಕ್ಷಣಗಳ ಆಧಾರದಲ್ಲಿ ಶಿಷ್ಯಪರಿಗ್ರಹ ಸಮಿತಿಯು ಮಾಡಿದ ನಿರ್ಣಯವನ್ನು ಅಂಗೀಕರಿಸಿ, ವೃದ್ಧರಾದ ಶ್ರೀ ರಾಮಚಂದ್ರ ಭಾರತೀ ಸ್ವಾಮಿಗಳು ಈ ಶಿಷ್ಯಪರಿಗ್ರಹಸಮಾರಂಭವು ಶೀಘ್ರವಾಗಿ ನೆರವೇರಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಪ್ರಧಾನ ಮಠವಾದ ಹೊಸನಗರ ತಾಲೂಕು ಶ್ರೀರಾಮಚಂದ್ರಾಪುರ ಮಠದಲ್ಲಿ ಪ್ರವರ್ತಮಾನ ಶಾಲಿವಾಹನ ಶಕೆ ೧೮೬೭ ನೆಯ ಪಾರ್ಥಿವ ಸಂವತ್ಸರದ ವೈಶಾಖ ಶುದ್ಧ ಸಪ್ತಮಿ ಬುಧವಾರ (ದಿನಾಂಕ ೧೮-೪-೧೯೪೫) ವರ್ತಮಾನ ಶ್ರೀಗಳವರ ಆಶ್ರಮ ಸ್ವೀಕಾರ, ಉಪದೇಶ ಗ್ರಹಣ – ಮುಂತಾದ ಕಾರ್ಯಕ್ರಮಗಳು ಪ್ರಾರಂಭವಾಗಿ ಅದೇ ಶುದ್ಧ ದಶಮೀ ಸೋಮವಾರ (ದಿನಾಂಕ ೨೧-೪-೧೯೪೫) ಶುಭ ಮುಹೂರ್ತದಲ್ಲಿ ಯೋಗ ಪಟ್ಟಾಭಿಷೇಕ, "ಶ್ರೀ ರಾಘವೇಂದ್ರ ಭಾರತೀ" ಎಂಬ ಅಭಿಧಾನ ಪ್ರದಾನ – ಇತ್ಯಾದಿ ಮಹಾಕಾರ್ಯಗಳು ಶಿಷ್ಯ ಸಮಾಜದ ಎಲ್ಲೆಡೆಯ (ವಿಶೇಷವಾಗಿ ಸಾಗರ ಪ್ರಾಂತದವರ) ಶಿಷ್ಯರ ಸೇರುವಿಕೆಯಿಂದ ಅತ್ಯಂತ ವಿಜೃಂಭಣೆಯಿಂದ ಅಭೂತಪೂರ್ವವಾಗಿ ನೆರವೇರಿದುವು.

ಗೋಕರ್ಣ ತೀರ್ಥೇ ಶತಶೃಂಗ ಪರ್ವತೇ
ಶ್ರೀಶಂಕರಾರ್ಯೇಣ ಮುದಾ ಪ್ರಕಲ್ಪಿತೇ ।
ವಿದ್ಯಾಪ್ರಮೋದೇನ ಸುವರ್ಧಿತೇ ಮಠೇ
ಲಸಂತಮಸ್ಮದ್ಗುರುಪುಂಗವಂ ಭಜೇ ॥

ಬಾಲ್ಯ - ವಿದ್ಯಾಭ್ಯಾಸ

ವೇದವೇದಾಂಗ ವೇದಾಂತ ನ್ಯಾಯಸಾಂಖ್ಯವಿಶಾರದಮ್
ಗೋಕರ್ಣಮಂಡಲಾಚಾರ್ಯಂ ರಾಘವೇಂದ್ರಂ ಭಜಾಮ್ಯಹಮ್ ॥

ಕರ್ನಾಟಕದ ಮಲೆನಾಡಿನಲ್ಲಿ "ಮಾಗಲು" ಎಂಬುದು ಸುಂದರವಾದ ಹಳ್ಳಿ; ವೇದವಿದರಾದ ಉದಾತ್ತ ಚಾರಿತ್ರ್ಯದ ವಿಪ್ರೋತ್ತಮರ ನೆಲೆವೀಡು. ಅದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕರೂರು ಸೀಮೆಯಲ್ಲಿ ಸೊಗಸಾದ ಬೆಟ್ಟಗಳ ಮಗ್ಗುಲಲ್ಲಿ ಪ್ರಶಾಂತವಾಗಿ ರಂಜಿಸುವ ಪ್ರದೇಶ.

ಶ್ರೀ ಗಣಪತಿ ಭಟ್ಟರು ಆ ಹಳ್ಳಿಯಲ್ಲಿ **ವೇದಮೂರ್ತಿ** ಎಂಬ ಅಂಕಿತ ಪಡೆದವರು ಮಾತ್ರವಲ್ಲ—ನಿಜಕ್ಕೂ ಸಂಸ್ಕೃತವನ್ನು ತಿಳಿದ ವೇದಮೂರ್ತಿಗಳು. ವೇದವೇ ಅವರ ಉಸಿರಾಗಿತ್ತು. ಅದೇ ತಮ್ಮ ಜೀವನದ ಸರ್ವಸ್ವ ಎಂದು ನಂಬಿದ ನಿಜವಾದ ವಿಪ್ರವರ್ಯರು ಅವರು.

ಅವರು ಯಜುಶ್ಶಾಖೆಯ ಬೋಧಾಯನ ಸೂತ್ರಾನುಯಾಯಿಗಳಾಗಿ ವಸಿಷ್ಠ ಗೋತ್ರಕ್ಕೆ ಸೇರಿದವರು. ಅವರು ಮಹಾಗಣಪತಿ ಮತ್ತು ಚಂಡಿಕಾ ಉಪಾಸನೆ ಮಾಡುವುದರಲ್ಲಿ ಜೀವನವನ್ನು ಸವೆಯಿಸಿದವರು. ಗಣಪತಿ ಭಟ್ಟರು ನಿಜವಾದ ಭಗವದ್ಭಕ್ತರು. ಆದುದರಿಂದಲೇ ಅವರು ವಿದುರನಂಥವರು. ಅಂದರೆ, ಅವರ ಮನಸ್ಸು ತುಂಬಿತ್ತು, ಆದರೆ ಕೈ ಬರಿದಾಗಿತ್ತು.

ಅವರು ಆಯುರ್ವೇದ ಪಂಡಿತರೂ ಆಗಿದ್ದರು. ಎಂತಹ ರೋಗವನ್ನಾದರೂ ಗುಣಪಡಿಸುವ ಶಕ್ತಿ ಅವರಿಗಿತ್ತು. ಅಲ್ಲದೆ ಮಂತ್ರದ ಮೂಲಕವಾಗಿಯೂ ಅವರು ರೋಗಗಳನ್ನು ಗುಣಪಡಿಸುತ್ತಿದ್ದರು. ಆ ಬಗೆಗಳಿಂದ ಅವರು ಹಣ ಸಂಪಾದನೆ ಮಾಡಬಹುದಿತ್ತು. ಆದರೆ ಅವರು ಆ ವಿದ್ಯೆಯನ್ನು ಪರಹಿತಕ್ಕಾಗಿ ಬಳಸಿಕೊಂಡರೇ ವಿನಾ ಸಂಪಾದನೆಯ ಮಾರ್ಗವಾಗಿ ಬಳಸಿಕೊಳ್ಳಲಿಲ್ಲ.

ಸರ್ಪದಂಶಕ್ಕೆ ಬೇಕಾದ ಅಮೂಲ್ಯ ಔಷಧ ಅವರಿಗೆ ತಿಳಿದಿದ್ದರೂ ಅದನ್ನೂ ಹಣ ಸಂಪಾದನೆಗಾಗಿ ಬಳಸಲಿಲ್ಲ. ಅದನ್ನು ಜೀವರಕ್ಷಣೆಗಾಗಿ ಉಪಯೋಗಿಸಿಕೊಂಡರು. ಅವರಿಗೇ ಸ್ವತಃ ಎರಡು ಸಲ ಸರ್ಪ ಕಡಿದಾಗಲೂ ತಮ್ಮ ಸ್ವಂತ ಚಿಕಿತ್ಸೆಯಿಂದಲೇ ಅವರು ಗುಣಮುಖರಾದರು.

ಗಣಪತಿ ಭಟ್ಟರು ವೈದಿಕದಲ್ಲಿ ದೊರೆತ ಹಣವನ್ನಾದರೂ ಇತರರಿಗೆ ದಾನ ಮಾಡಿ ಹರ್ಷಪಟ್ಟವರು.

ಮೂಕಾಂಬಿಕಾ ಅಮ್ಮನವರು, ಪತಿಗೆ ಹೇಳಿದಂತಹ ಪತ್ನಿ. ಪತಿಯ ನೆರಳಿನಲ್ಲಿ ನಡೆದು ನಡೆಯುವ ಸಾಧ್ವಿ. ಬಡವರಿಗೆ ತಾಯಿಯಾಗಿ ನೆರವು ನೀಡುತ್ತಿದ್ದರು. ಮನೆಗೆ ಬಂದ ಅತಿಥಿ ಅಭ್ಯಾಗತರನ್ನು ಆದರಿಸುವೆಡೆಯಲ್ಲಿ ತಮಗೇನು ಉಳಿದೀತು ಎಂಬುವನ್ನೂ ನೋಡದ ಉದಾರತೆ ಆ ತಾಯಿಯದು. ಆದರೂ ಇದ್ದುದರಲ್ಲಿ ಚತುರತೆಯಿಂದ ಸಂಸಾರವನ್ನು ತೂಗಿಸಿಕೊಂಡು ಹೋಗಬಲ್ಲ ಧರ್ಮ ದೃಷ್ಟಿ, ಬುದ್ಧಿ ಸೂಕ್ಷ್ಮತೆಗಳು ಆಕೆಯಲ್ಲಿ ಇದ್ದವು.

ಇಂತಹ ಧರ್ಮನಿಷ್ಠ ವೈದಿಕ ದಂಪತಿಗಳಿಗೆ ಇನ್ನೊಂದು ಪುತ್ರೋತ್ಸವವಾಯಿತು. ಕುಲವನ್ನು ದೇದೀಪ್ಯಮಾನವಾಗಿ ಬೆಳಗುವ ಸಂನ್ಯಾಸದ ಸಕಲ ಸಲ್ಲಕ್ಷಣಗಳಿಂದ ಕೂಡಿದ ಶಿಶು ಅದು ಎಂಬುದು ಪ್ರಾಯಶಃ ಆ ದಂಪತಿಗಳಿಗೆ ಆಗ ತಿಳಿದಿರಲಿಲ್ಲ. ಆ ಶಿಶುವೇ ಇಂದಿನ ಪೂಜ್ಯ ಸ್ವಾಮೀಜೀಯವರಾದ **ಶ್ರೀಮದ್ರಾಘವೇಂದ್ರ ಭಾರತೀ ಶ್ರೀಸ್ವಾಮಿಗಳವರು.**

ಶಿಶು ಬೆಳೆದು ಬಾಲಕನಾದಾಗ, ಚುರುಕಿನ ಚಟುವಟಿಕೆಗಳನ್ನು ಪ್ರಕಟಿಸುತ್ತಿದ್ದನು. ಗೌರವರ್ಣದ ಸುಂದರ ಮುಖದ ಮೂಲಕ ಧರ್ಮನಿಷ್ಠೆ, ಮಾತಾಪಿತರ ಮೇಲೆ ಭಕ್ತಿ ಹಾಗೂ ವಿಚಾರ ಪರತೆ, ದೂರದರ್ಶಿತ್ವಗಳನ್ನು ತೋರುತ್ತಿದ್ದನು.

ಆ ಭಾಗದ ತುಮರೀ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ತಡವಾಗಿ ಪ್ರಾರಂಭವಾಯಿತು. ಬಾಲಕನಿಗೆ ಬಂದ ಲಿವರ್ ದೋಷವೇ ಅಂದಿನ ಶಿಕ್ಷಣವು ಕುಂಠಿತವಾಗಲು ಕಾರಣವಾಯಿತು.

ಗಣಪತಿ ಭಟ್ಟರು ಸಕುಟುಂಬರಾಗಿ ಅರ್ಧೋದಯ ಪುಣ್ಯಕಾಲದಲ್ಲಿ ಸಮುದ್ರಸ್ನಾನ ಮಾಡಬೇಕೆಂದು ಬಯಸಿದರು. ಅದಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯ, ಕುಂದಾಪುರದ ಬಳಿಯ ಉಪ್ಪುಂದಕ್ಕೆ ಹೋದರು. ಅಲ್ಲಿ ಸ್ವಲ್ಪ ಸಮಯ ಉಳಿಯಬೇಕಾಗಿ ಬಂದುದರಿಂದ ಅವರ ಪ್ರೇಮದ ಬಾಲಕನ ಪ್ರಾಥಮಿಕ ವಿದ್ಯಾಭ್ಯಾಸವು ಉಪ್ಪುಂದದಲ್ಲಿಯೇ ಮುಂದುವರಿಯಬೇಕಾಗಿ ಬಂದಿತು. ಅಲ್ಲಿಂದ ಗಣಪತಿ ಭಟ್ಟರು ಭಟ್ಕಳಕ್ಕೆ ಬಂದು ಅಲ್ಲಿ ಸಕಲಾಪುರ ಸೀಮೆಯ ಶ್ರೀ ಹಡೀಲು ಶೇಷಗಿರಿ ಉಪಾಧ್ಯಾಯರ ಮನೆಯಲ್ಲೇ ವಾಸ್ತವ್ಯಕ್ಕೆ ತೊಡಗಿದರು. ಜತೆಯಲ್ಲೇ ಸಂಚರಿಸಿದ ಬಾಲಕನು ಪಿತೃಮುಖದಿಂದ ಸಂಸ್ಕೃತ ಅಧ್ಯಯನಕ್ಕೆ ಪ್ರಾರಂಭಿಸಿದ್ದು ಆಗಲೇ.

''ದುಃಖಾತ್ ದುಃಖತರಂ ಕಿಂ ಪರಗೃಹವಾಸಃ ಪರಾನ್ನಂ ಚ'' ಎಂಬ ಮಾತಿದೆ. ಅಂದರೆ, ಇತರರ ಮನೆಯಲ್ಲಿ ವಾಸವಿದ್ದು ಇತರರ ಅನ್ನ ಉಣ್ಣುವುದಕ್ಕಿಂತಲೂ ಹೆಚ್ಚು ದುಃಖವಲ್ಲೂ ದುಃಖಕರವಾದುದು ಯಾವುದು? ಎಂಬ ಪ್ರಶ್ನೆಯೇ ಈ ಮಾತಿನ ಅರ್ಥ.

ಈ ಬಾಲಕನಿಗೆ ಎಳವೆಯಲ್ಲೇ ಇಂತಹ ಪರಿಸ್ಥಿತಿ ಬಂದಿತು. ಉಪಾಧ್ಯಾಯರ ಮನೆಯಲ್ಲಿ ಹಲವು ಬಾಲಕರು ಹೀಗಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದರೂ ಈ ಬಾಲಕನ ಗುರುಭಕ್ತಿ, ವಿದ್ಯೆಯಲ್ಲಿ ತೋರಿದ ವಿಶೇಷ ಆಸಕ್ತಿ ಶ್ರದ್ಧೆಗಳಿಂದಾಗಿ ಆತನನ್ನು ಉಪಾಧ್ಯಾಯರು ವಿಶೇಷ ಪ್ರೇಮದಿಂದ ನೋಡಿಕೊಂಡು ಆತನಿಗೆ ಪರಗೃಹ ವಾಸ ಮತ್ತು ಪರಾನ್ನಗಳ ದುಃಖದ ಬಾಧೆ ಅಷ್ಟೊಂದು ತಗಲದಂತೆ ಮಾಡಿದರು.

ಮತ್ತೆ ಆ ಬಾಲಕನ ಸಂಸ್ಕೃತ ವಿದ್ಯಾಭ್ಯಾಸವು ಆತನ ತೀರ್ಥರೂಪರ ಸಮ್ಮುಖ ದಲ್ಲಿಯೇ ನಡೆಯುವಂತಾಯಿತು. ಶಬ್ದಗಳು, ಧಾತುಗಳು, ಅಮರ ಕೋಶದ ಮೂರು ಕಾಂಡಗಳು – ಇವು ಆ ಬಾಲಕನ ನಾಲಗೆಯ ತುದಿಯಲ್ಲಿಯೇ ಸದಾ ಕುಣಿಯುತ್ತಿದ್ದವು. ಈ ವಿದ್ಯಾನೈಪುಣ್ಯಕ್ಕೆ ಕಳೆಗೊಡುವಂತೆ ಈ ಬಾಲಕನಲ್ಲಿ ಗುರು ಹಿರಿಯರಲ್ಲಿ ಶ್ರದ್ಧಾಭಕ್ತಿಗಳಿದ್ದವು. ಭಾರತೀಯ ಸಂಸ್ಕೃತಿಯ ಕುರಿತು ಗಾಢವಾದ ಅಭಿಮಾನವಿತ್ತು. ಭಗವಂತನ ಮೇಲೆ ಅಚಲವಾದ ಭಕ್ತಿಯಿತ್ತು.

ಗಣಪತಿ ಭಟ್ಟರು ಪ್ರೇಮಾತಿಶಯದಿಂದ ಆ ಬಾಲಕನಿಗೆ ಉಪನಯನ ಸಂಸ್ಕಾರ-ವನ್ನು ಎಳೆಯ ವಯಸ್ಸಿನಲ್ಲಿಯೇ ನಡೆಸಿದರು. ಆತನ ನಿಯಮಬದ್ಧ ಜೀವನಕ್ಕೆ ಹಾಗೂ ಆತ್ಮವಿಕಸನಕ್ಕೆ ಇದರಿಂದ ಹೊಸತಾದ ಒಂದು ಹುರುಪು ಬಂದಂತಾಯಿತು. ನವೀನವಾದ ಒಂದು ಮಾರ್ಗ ದೊರೆತಂತಾಯಿತು. ಆದುದರಿಂದ ಗಣಪತಿ ಭಟ್ಟರು ಈ ಸತ್ಪುತ್ರನಿಗೆ ಸಂಸ್ಕೃತದೊಂದಿಗೆ ತಾವೇ ಸ್ವತಃ ವೇದಾಧ್ಯಯನವನ್ನೂ ಮಾಡಿಸ-ತೊಡಗಿದರು.

ಇಂದು ಹೆಚ್ಚಿನ ಬ್ರಾಹ್ಮಣ ಯುವಕರ ಅಥವಾ ಹುಡುಗರ ಮಟ್ಟಿಗೆ ಹೇಳುವು-ದಾದರೆ ಉಪನಯನವೆಂಬುದು, ಒಂದು ದೊಡ್ಡಸ್ತಿಕೆಯನ್ನು ಪ್ರದರ್ಶಿಸಿಕೊಳ್ಳುವ ಆಡಂಬರದ ಕಾರ್ಯಕ್ರಮ ಮಾತ್ರ ಆಗಿದೆ. ವಟುವಿನ ಜೀವನದಲ್ಲಿ ಉಪನಯನ ಸಂಸ್ಕಾರದಿಂದ ಆಧ್ಯಾತ್ಮ ಸಾಧನೆಯ ನಯನ (ಕಣ್ಣು) ಸಿಗುವುದಿಲ್ಲ. ಸಂಧ್ಯಾ ವಂದನೆಯನ್ನು ಮಾಡುವುದೇ ಆಧುನಿಕ ಯುಗಕ್ಕೆ ನಾಚಿಕೆಗೇಡಿನ ವಿಚಾರ ಎಂದು ಭಾವಿಸುವ ಯುವಕರು ಯಜ್ಞೋಪವೀತವೊಂದು ಅನಾವಶ್ಯಕ ಹಗರಣ ಇಲ್ಲವೇ ಬಂಧನ ಎಂದು ಭಾವಿಸಿ ಎಲ್ಲಿಯೋ ತೆಗೆದಿಟ್ಟರೆ ಏನೂ ಆಶ್ಚರ್ಯವಿಲ್ಲ.

ಇಂದು ಬ್ರಾಹ್ಮಣರು ಸನಾತನ ಧರ್ಮದ ಸಿದ್ಧಾಂತದಂತೆ ಜನಾಂಗದ ಮುಖಂಡರಾಗಿರುವ ಬದಲು, ಕರುಣಾಜನಕ ಪರಿಸ್ಥಿತಿಯಲ್ಲಿದ್ದು, ಅನಾಥತೆಯ ಹಂತಕ್ಕೆ ಬಂದು ಮುಟ್ಟಲು ಅವರು ತಮ್ಮ ಯೋಗ್ಯತೆ, ಪ್ರತಿಭೆ ಹಾಗೂ ಸತ್ತ್ವ ಗಳನ್ನು ಕಾಪಾಡಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಆತ್ಮಸಾಧನೆ ಮಾಡದಿರು ವುದೇ ಪ್ರಧಾನ ಕಾರಣವಾಗಿದೆ. ಇತರರು ತಮ್ಮನ್ನು ತಿರಸ್ಕರಿಸಿ, ದ್ವೇಷಿಸಿ, ತಮ್ಮ ಅವಸ್ಥೆ ಹೀಗಾಯಿತು ಎಂದು ಭಾವಿಸಿ, ಹಲುಬುವವರಿದ್ದಾರೆ. ತಾವೇ ತಮ್ಮ

ಅವನತಿಗೆ ಕಾರಣ ಎಂದು ಭಾವಿಸಿ, ತಮ್ಮನ್ನು ತಿದ್ದಿಕೊಳ್ಳುವ ಮಂದಿ ಕಡಿಮೆಯಾಗಿದ್ದಾರೆ.

ಆದರೆ, ಪೂರ್ವಾರ್ಜಿತ ಸಂಸ್ಕಾರದಿಂದಲೂ ಹಿರಿಯರ ಮಾರ್ಗದರ್ಶನ ಹಾಗೂ ಮೇಲ್ಪಂಕ್ತಿಗಳಿಂದಲೂ ಈ ಬಾಲಕನು ಮೇಲೆ ಹೇಳಿದ ರೀತಿಯ ತಪ್ಪನ್ನು ಮಾಡ-ಲಿಲ್ಲ. ಬದಲಾಗಿ ಆತನು ನಿತ್ಯವೂ ಶೌಚ, ಸ್ನಾನ, ಸಂಧ್ಯಾವಂದನೆ, ಅಗ್ನಿಕಾರ್ಯ ಮೊದಲಾದ ಬ್ರಹ್ಮಚರ್ಯಾಶ್ರಮದ ವ್ರತಗಳನ್ನು ಚೆನ್ನಾಗಿ ಪಾಲಿಸಿಕೊಂಡು ಬಂದು ತೇಜಸ್ವಿಯಾಗಿಯೂ, ಓಜಸ್ವಿಯಾಗಿಯೂ ಕಾಣಿಸತೊಡಗಿದನು. ಜತೆಯಲ್ಲಿಯೆ ಸಂಸ್ಕೃತ ಹಾಗೂ ವೇದಾಧ್ಯಯನವು ಪಿತೃಸಮ್ಮುಖದಲ್ಲಿ ನಡೆಯಿತು. ಅಷ್ಟರಲ್ಲೇ ಆರಣ್ಯಕ–೧೦, ಕಾಠಕ–೩. ಬ್ರಾಹ್ಮಣ ಪ್ರಥಮಾಷ್ಟಕಾಂತ – ಇಷ್ಟು ಆತನಿಗೆ ಕಂಠಸ್ಥವಾಗಿದ್ದುವು.

ಆದರೆ ಮಗನ ಪ್ರತಿಭೆಯನ್ನು ಕಂಡುಕೊಂಡು ಶ್ರೀ ಗಣಪತಿ ಭಟ್ಟರು ಆತನ ಮುಂದಿನ ವಿದ್ಯಾಭ್ಯಾಸವು ತನ್ನ ಬಳಿಯಲ್ಲಿ ಆಗುವುದಕ್ಕಿಂತಲೂ ಬೇರೆ ವೇದಪಾಠ-ಶಾಲೆಯಲ್ಲಿ ಚೆನ್ನಾಗಿ ನಡೆಯಬಹುದು ಎಂದು ಭಾವಿಸಿಕೊಂಡರು. ಏಕೆಂದರೆ ಮಂತ್ರ ಪ್ರಯೋಗ, ಆಯುರ್ವೇದ ಚಿಕಿತ್ಸೆ, ವೈದಿಕ ವಿನಿಯೋಗಗಳಿಂದ ಅವರು ಬಿಡುವಿಲ್ಲದೆ ಇದ್ದ ಕಾರಣ, ಮಗನ ವಿದ್ಯಾಭ್ಯಾಸದ ಕಡೆಗೆ ಪೂರ್ಣ ಲಕ್ಷ್ಯಕೊಡಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ.

ಆದುದರಿಂದ ಅವರು ತಮ್ಮ ಹುಡುಗನನ್ನು ಪ್ರೇಮದಿಂದ ವೇದಾಧ್ಯಯನದ ತವರೂರಾದ ತಂಜಾವೂರಿಗೆ ಕರೆದುಕೊಂಡು ಹೋದರು. ಅಲ್ಲಿ ಅಯ್ಯಂಪೇಟೆಯ ಬಳಿ ಪವಿತ್ರ ಕಾವೇರೀನದಿಯ ಪರಿಸರದಲ್ಲಿ ಆಹರ ಮಾಂಗುಡಿ ಎಂಬುದು ಕೃಷ್ಣಯಜು-ರ್ವೇದಾಧ್ಯಯನಕ್ಕೆ ಪ್ರಸಿದ್ಧವಾದ ಕೇಂದ್ರ. ಅದೇ ಸ್ಥಳದಲ್ಲಿರುವ ವೇದಪಾಠ ಶಾಲೆಯಲ್ಲಿಯೇ ಗಣಪತಿ ಭಟ್ಟರು ತಮ್ಮ ಪುತ್ರನನ್ನು ವೇದಾಧ್ಯಯನಕ್ಕೆ ತೊಡಗಿಸಿದರು.

ವೇದ ಕಲಿಯತೊಡಗಿದ ಈ ವಟು, ಸುಮಾರು ಎರಡು ವರ್ಷಗಳ ಸಮಯ ಅಲ್ಲಿ ವೇದಾಧ್ಯಯನವನ್ನು ಮಾಡಿ, ಅನಾರೋಗಕ್ಕೆ ಗುರಿಯಾಗಿ ಊರಿಗೆ ಮರಳ-ಬೇಕಾಯಿತು. ಸಾಗರದಲ್ಲಿ ಅನಾಯಾಸವಾಗಿ ದೊರೆತ ಒಬ್ಬ ವ್ಯಕ್ತಿಯ ಸಹಕಾರದ ಮೂಲಕ ಚಿಕಿತ್ಸೆಪಡೆದು ಹುಡುಗನು ಆರೋಗ್ಯ ಭಾಗ್ಯವನ್ನು ಪಡೆಯುವಂತಾಯಿತು.

ಮತ್ತೆ ವೇದವನ್ನು ಕಲಿಯಬೇಕೆಂಬ ಉತ್ಕಟೇಚ್ಛೆಯಿಂದ ಹುಡುಗನು ಯೋಗ್ಯ ಸ್ಥಳವನ್ನು ಅರಸುತ್ತಾ ನಂಜನಗೂಡಿಗೆ ಬಂದನು. ಅಲ್ಲಿ ವಾರಾನ್ನವನ್ನು ಮಾಡುತ್ತಾ ಶ್ರೀ ಶಂಕರಮಠದಲ್ಲಿ ವೇದಾಧ್ಯಯನ ಮಾಡಲು ಅವಕಾಶ ದೊರೆಯಿತು.

ಅಲ್ಲಿಯ ಶ್ರೀಶಂಕರಮಠದಲ್ಲಿ ಶ್ರೀರಾಮಲಕ್ಷ್ಮಣರ ವಿಗ್ರಹ ಮತ್ತು ಆದಿ-ಶಂಕರಾಚಾರ್ಯರ ಪ್ರತಿಮೆ ಕೂಡ ಈ ಬ್ರಹ್ಮಚಾರಿಗೆ ಬೇಕಾದ ಮುಂದಿನ ಸ್ಫೂರ್ತಿ

ಯನ್ನು ನೀಡತೊಡಗಿದುವು. ಈ ವಟು ನಿತ್ಯವೂ ತಪ್ಪದೆ ಶೌಚ-ಸ್ನಾನಗಳನ್ನು ಮುಗಿಸಿ ಸಂಧ್ಯಾವಂದನೆ ಅಗ್ನಿಕಾರ್ಯಗಳನ್ನು ಭಕ್ತಿಯಿಂದ ಪೂರೈಸಿ, ಶಂಕರಭಗವ-ತ್ಪಾದರ ಪ್ರತಿಮೆಯ ಮುಂದೆ ಭಕ್ತಿಯಿಂದ ನಿಂತು ಶ್ರೀ ಶಂಕರಾಚಾರ್ಯರ ಅಷ್ಟೋ-ತ್ತರ ಶತನಾಮಾವಳಿಯನ್ನು ಪಠಿಸಿ ತಲೆಬಾಗಿ ಭಕ್ತಿಶ್ರದ್ಧೆಗಳಿಂದ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದನು.

ಈ ವಟುವು ಲೌಕಿಕವಾದ ಸ್ಥಾನ, ಮಾನ, ಸಂಪತ್ತು, ಹೆಣ್ಣು, ಮಣ್ಣು, ಹೊನ್ನುಗಳನ್ನು ಕೇಳಲಿಲ್ಲ. ಅವುಗಳ ಬದಲು ಕಾಶೀಕ್ಷೇತ್ರಕ್ಕೆ ಹೋಗಿ ಶಾಸ್ತ್ರಾಧ್ಯಯನ ಮಾಡಿ ಶಂಕರ ಭಗವತ್ಪಾದರಂತೆ ಜ್ಞಾನಿಯೂ ಯತಿವರೇಣ್ಯನೂ ಆಗುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದನು. ಇದು ಎಲ್ಲಾ ಹುಡುಗರು ಮಾಡಬಹುದಾದ ಪ್ರಾರ್ಥನೆಯಲ್ಲ. ಇದು ಅಲೌಕಿಕ ಪ್ರಾರ್ಥನೆ.

ಆ ದಿವ್ಯ ಪ್ರಾರ್ಥನೆಯ ಫಲ ಲಭಿಸಿತು. ಹಿಂದೆ ಬರೆದಂತೆ ಆ ಸ್ಫುರದ್ರೂಪಿ ಬಾಲಕನೇ ಇಂದು ಶಂಕರ ಭಗವತ್ಪಾದರು ಸ್ಥಾಪಿಸಿದ ಮಠದ ಗುರುಪರಂಪರೆಯ ಅವಿಚ್ಛಿನ್ನ ಸರಣಿಯಲ್ಲಿ ಅವರಿಂದ ಮೂವತ್ತೈದನೆಯ ಜಗದ್ಗುರುಗಳಾಗಿ ಬಂದು, ಹವ್ಯಕ ಸಮಾಜಕ್ಕೆ ಧಾರ್ಮಿಕ ಹಾಗೂ ಲೌಕಿಕ ಮುಖಂಡರೂ ಆಗಿ ನಿಂತಿರುವ ಶ್ರೀ ಮದ್ರಾಮಚಂದ್ರಾಪುರ ಮಠದ **ಶ್ರೀ ಮದ್ರಾಘವೇಂದ್ರ ಭಾರತೀ ಶ್ರೀ ಸ್ವಾಮೀಜೀಯವರು.**

ನಂಜನಗೂಡಿನಲ್ಲಿ ಹೀಗೆ ಸ್ವಾಮೀಜೀಯವರು ವೇದಾಧ್ಯಯನದ ವಿದ್ಯಾರ್ಥಿಯಾಗಿದ್ದಾಗ ವೇ। ಬ್ರಂ। ಶ್ರೀ ಯಜ್ಞನಾರಾಯಣ ಶಾಸ್ತ್ರಿಗಳು ಅವರ ಸಹಪಾಠಿಗಳಾಗಿದ್ದರು. ಈಗ ಅವರು ತುಮಕೂರು ಬ್ರಾಹ್ಮಣ ಸೇವಾಸಂಘದ ಅಧ್ಯಕ್ಷರೂ ವೇದ-ಸಂಸ್ಕೃತ ಪಾಠಶಾಲೆಯ ಪ್ರಧಾನ ಅಧ್ಯಾಪಕರೂ ಆಗಿದ್ದಾರೆ. ಅವರು ಸ್ವಾಮೀಜೀಯವರ ಕುರಿತು ಹೇಳಿದ ಮಾತು ಮನನೀಯವಿದೆ. “ನಂಜನಗೂಡಿನ ಶ್ರೀ ಶಂಕರಮಠದಲ್ಲಿ ಶ್ರೀಗಳವರೊಡನೆ ವೇದಾಧ್ಯಯನ ಮಾಡುವ ಸುಯೋಗ ನನಗೆ ಲಭಿಸಿತ್ತು. ಪ್ರಥಮ ಸಂದರ್ಶನದಲ್ಲಿಯೇ ಇವರ ಬ್ರಹ್ಮಚರ್ಯ ತೇಜಸ್ಸು ನನ್ನನ್ನು ಆಕರ್ಷಿಸಿತು. ಇವರು ಮುಂದೆ ಜ್ಞಾನ ಸಿಂಹಾಸನಾರೂಢರಾಗುವರೆಂಬುದನ್ನು ಜ್ಯೋತಿರ್ವಿದನಾದ ನಾನು ಆಗಲೇ ತಿಳಿದೆನು. ಇವರು ಸಹಜವಾಗಿಯೇ ಅತ್ಯಂತ ಸೂಕ್ಷ್ಮಬುದ್ಧಿಯುಳ್ಳವರಾಗಿದ್ದರು. ನನಗೆ ತುಂಬಾ ಆತ್ಮೀಯರಾದ ಇವರು ಅಧ್ಯಯನ ಮಾಡುವಾಗ ನನ್ನ ಜೊತೆಯಲ್ಲೇ ಇರುತ್ತಿದ್ದರು. ವೇದದ ಯಾವುದೇ ಹನಸನ್ನು (ಅಧೀತ ವೇದದಲ್ಲಿಯ ಯಾವುದಾದರೊಂದು ಭಾಗವನ್ನು) ಕೇಳಿದ ಕೂಡಲೇ ಹಿಂದುಮುಂದು ನೋಡದೆ, ತಪ್ಪದೆ ಕೂಡಲೇ ಲೀಲಾಜಾಲವಾಗಿ ಹೇಳುವ ರೀತಿ ನಮ್ಮೆಲ್ಲರಲ್ಲಿ ಇವರಿಗೇ ಮೀಸಲಾಗಿತ್ತು.’’

ಸ್ವಾಮೀಜೀಯವರಿಗೆ ಆಧ್ಯಾತ್ಮದಲ್ಲಿ, ಭಾರತೀಯ ಸಂಸ್ಕೃತಿಯಲ್ಲಿ, ಸಂನ್ಯಾಸ ದಲ್ಲಿ ಇದ್ದ ಶ್ರದ್ಧೆ ನಂಜನಗೂಡಿನಲ್ಲಿ ಇದ್ದ ಸಮಯದಲ್ಲಿ ಅತ್ಯಂತ ಬಲವಾಗಿ ಬೆಳೆಯಿತು.

ಕಾಶಿಗೆ ತೆರಳಿ ವೇದ, ವೇದಾಂತ, ಧರ್ಮಶಾಸ್ತ್ರ ಮೊದಲಾದ ವೈದಿಕ ವಿದ್ಯೆಗ ಗಳಲ್ಲಿ ತುಂಬಾ ವಿದ್ವಾಂಸನಾಗಿ ಸಂನ್ಯಾಸ ಸ್ವೀಕರಿಸಿ, ಸರ್ವಸಂಗ ಪರಿತ್ಯಾಗಿಯಾಗಿ ಪರಿವ್ರಾಜಕನಾಗಿ ದೇಶದ ಉದ್ದಗಲದಲ್ಲಿ ಸಂಚರಿಸುತ್ತಾ ಧರ್ಮಬೋಧೆ ಮಾಡಬೇಕು, ತಪಸ್ಸನ್ನೆಸಗಬೇಕು, ಕಟ್ಟಕಡೆಗೆ ಬ್ರಹ್ಮ ಸಾಕ್ಷಾತ್ಕಾರ ಪಡೆಮುಕೊಳ್ಳಬೇಕು–ಎಂದು ಸ್ವಾಮೀಜಿ ಬಲವಾಗಿ ಕನಸುಕಾಣತೊಡಗಿದರು. ಅಂತಹ ಭವ್ಯತೆಯ ತೇಜೋ ಮಯ ಜೀವನವನ್ನೆಣಿಸಿದಾಗ ಸ್ಫೂರ್ತಿ ಅವರ ಅಂತರಂಗವನ್ನು ವಿದ್ಯುಲ್ಲತೆಯಂತೆ ಆವರಿಸುತ್ತಿತ್ತು.

ಮನುಷ್ಯನ ಜನ್ಮವು ಅತ್ಯಂತ ಮಹತ್ತ್ವಪೂರ್ಣವಾದುದು. ಕಾರಣ, ಮನು-ಷ್ಯನು ಮಾತ್ರ ತನ್ನನ್ನೇ ತಾನು ವಿಶ್ಲೇಷಣೆ ಮಾಡಿಕೊಂಡು, ಭಗವತ್ ಸ್ವರೂಪ ವಾಗಿ ಮಾರ್ಪಟ್ಟು ದುಃಖ, ರೋಗ, ಜರಾಮರಣಗಳಿಂದ ಬಿಡುಗಡೆಗೊಳ್ಳಬಹುದು. ಮನುಷ್ಯಜನ್ಮ ಬಂದರೆ ಸಾಲದು, ತಾನು ಆತ್ಮಸಾಧನೆಮಾಡಬೇಕೆಂದು ಕಾಣಲು, ಇನ್ನೆಷ್ಟು ದೊಡ್ಡ ಪುಣ್ಯ ಮಾಡಬೇಕು! ಬಹು ಸಂಖ್ಯಾಕರು ಮಾಯೆಯ ಬಂಧ-ನದಿಂದ ಬಿಡುಗಡೆ ಮಾಡಿಕೊಳ್ಳಬೇಕೆಂದು ಬಯಸುವುದಿಲ್ಲ. ಮಾಯೆಯ ಬಂಧ-ನವೇ ಸುಖದ ಸಾಧನವೆಂದು ಅವರು ಭಾವಿಸಿಕೊಳ್ಳುತ್ತಾರೆ.

ಆತ್ಮ ಸಾಧನೆಗಾಗಿ ತಾನು ಸಂನ್ಯಾಸ ಸ್ವೀಕಾರ ಮಾಡಬೇಕು, ಸರ್ವಸಂಗ ಪರಿತ್ಯಾಗಿಯಾಗಬೇಕು ಎಂಬ ಪ್ರೇರಣೆ ಬರುವುದು ಬಹಳ ದೊಡ್ಡ ಮಾತು. ಜನ್ಮಾಂತರದ ವಿಶೇಷ ಪುಣ್ಯ ಇದ್ದವನಿಗೆ ಮಾತ್ರ ಇದು ಸಾಧ್ಯ! ಉಳಿದವರ ದೃಷ್ಟಿಯಿಂದ ಸಂನ್ಯಾಸವೆಂದರೆ ಕರುಣಾಜನಕ ಪರಿಸ್ಥಿತಿ ಎಂದು ಕಾಣಬಹುದು.

ನಿಜವಾದ ಸಂನ್ಯಾಸಿಯ ಅಂತರಂಗದ ಶಕ್ತಿ, ಆರ್ದ್ರತೆ, ಆನಂದ ಹಾಗೂ ದಿವ್ಯತೆಗಳು ಅತ್ಯಂತ ವಿಶೇಷವಾದವುಗಳು. ಸರ್ವರನ್ನೂ ತನ್ನ ಬಳಿಗೆ ಸೆಳೆಯುವ ಸೂತ್ರ ಅದರಲ್ಲಿ ಅಡಗಿದೆ. ಕಾರಣ, ದಿವ್ಯತೆಯು ಪರಾಕಾಷ್ಠೆಗೆ ಬರಲು ಸಂನ್ಯಾಸ ಧರ್ಮಕ್ಕೆ ಮಾನವನು ಬರಲೇಬೇಕು.

ಎಲ್ಲರೂ ತಿಳಿದೋ ತಿಳಿಯದೆಯೋ ದಿವ್ಯತೆಯನ್ನೇ ಅರಸುತ್ತಿರುತ್ತಾರಾದ್ದರಿಂದ ಅಂತಹ ದಿವ್ಯತೆ ಕಂಡಾಗ ಎಲ್ಲರೂ ಮಣಿಯುವರು. ಆದುದರಿಂದ ಸಂನ್ಯಾಸ ಪಡೆಯುವ ಆಕಾಂಕ್ಷೆ ಮನುಷ್ಯನ ಅತ್ಯಂತ ಉದಾತ್ತಪ್ರೇರಣೆಯಾಗಿದೆ. ಅಂತಹ ಪ್ರೇರಣೆ ಸ್ವಾಮೀಜೀಯವರಿಗೆ ಕೌಮಾರಾವಸ್ಥೆಯಲ್ಲಿ ಬಂದಿರುವುದರಿಂದ ಅವರ ಅಂತರಂಗದ ಯೋಗ್ಯತೆಯೂ ದೈವೀಶಕ್ತಿಯ ವೈಶಿಷ್ಟ್ಯವೂ ತಿಳಿಯುವುದು.

ಸ್ವಾಮೀಜೀಯವರು ಹೀಗೆ ಸಂನ್ಯಾಸ ಸ್ವೀಕಾರಮಾಡಿ ಪರಿವ್ರಾಜಕರಾಗಿ ದಿವ್ಯ ಪ್ರಜ್ಞೆಯಲ್ಲಿರಬೇಕೆಂದು ಬಿಡದೆ ಬಯಸುತ್ತಿದ್ದ ಸಮಯದಲ್ಲೇ ಅವರಿಗೆ ಮಠದಿಂದ ಕರೆ ಬಂದದ್ದು. ಸ್ವಾಮೀಜೀಯವರು ತುಂಬಾ ಯೋಚಿಸಿದರು. ಶಂಕರ ಭಗವತ್ಪಾದರು ಸ್ಥಾಪಿಸಿದ ಪೀಠವಲ್ಲಿ, ಅವರ ಶಿಷ್ಯಪರಂಪರೆಯ ಪೂಜ್ಯ ಗುರುಗಳಿಂದ ಸಂನ್ಯಾಸ ಸ್ವೀಕಾರ ಮಾಡುವ ಇಂತಹ ಸುವರ್ಣ ಸಂಧಿ ಹುಡುಕುವ ಬಳ್ಳಿಯಂತೆ ಕಾಲಿಗೆ ಸಿಕ್ಕಿ ಹಾಕಿಕೊಂಡಿರುವಾಗ ಏಕೆ ಅದನ್ನು ಬಿಡಬೇಕು – ಎಂದು ಯೋಚಿಸಿದರು. ಅತ್ಯಂತ ಹರ್ಷದಿಂದ ಈ ಕರೆಗೆ ಓಗೊಟ್ಟರು ಸ್ವಾಮೀಜೀಯವರು. ಜ್ಞಾನಸಿಂಹಾಸನವನ್ನೇರಲು ಕರೆಬಂದಿರುವಾಗ ತನ್ನ ಮಗನನ್ನು ಕಳುಹಿಸಿಕೊಡುವುದು ಕುಟುಂಬಕ್ಕೇ ಶ್ರೇಯಸ್ಕರ ಹಾಗೂ ಪುಣ್ಯ ಪ್ರದವಾದುದೆಂದು ತಾಯಿ ಮೂಕಾಂಬಿಕಾ ಅಮ್ಮನವರೂ ತಂದೆ ಶ್ರೀಗಣಪತಿ ಭಟ್ಟರೂ ಒಪ್ಪಿಕೊಂಡರು.

ಆದುದರಿಂದ ಮೇಲೆ ಬರೆದಂತೆ ಶಿಷ್ಯ ಪರಿಗ್ರಹ ಕಾರ್ಯಕ್ರಮ ನಡೆದು ಸ್ವಾಮೀಜೀಯವರು ತಮ್ಮ ಗುರುಗಳಿಂದ ಯೋಗಪಟ್ಟಾಭಿಷೇಕ ಪಡೆದುಕೊಂಡು ಶ್ರೀಮದ್ರಾಘವೇಂದ್ರ ಭಾರತೀ ಸ್ವಾಮಿಗಳವರು ಎಂಬ ಅಭಿಧಾನವನ್ನು ಪಡೆದುಕೊಂಡರು. ಸ್ವಾಮೀಜೀಯವರನ್ನು ಈ ಗುರುಪೀಠಕ್ಕೆ ಆಯ್ಕೆ ಮಾಡುವುದರಲ್ಲಿ ಪ್ರಮುಖಪಾತ್ರವಹಿಸಿದವರು ಸಾಗರ ತಾಲೂಕಿನ ಆವಿನಹಳ್ಳಿ ಸೀಮೆಯ ಶ್ರೀ ತುಂಜೇ ಆರ್. ಸುಬ್ಬರಾಯರು. ಅಲ್ಲದೆ ಸ್ವಾಮೀಜೀಯವರನ್ನು ಶ್ರೀಮಠಕ್ಕೆ ಕರೆತರುವಲ್ಲಿ ಸಮಾಜದ ಪರವಾಗಿ ಪ್ರಮುಖ ಪಾತ್ರವಹಿಸಿದವರು ಸಾಗರದ ಪ್ರಸಿದ್ಧ ವಕೀಲರೂ ಆಗಿದ್ದ ಶ್ರೀ ಟಿ. ಎಸ್. ವೆಂಕಪ್ಪನವರು.

ಶ್ರೀಗಳವರು ಆಶ್ರಮಸ್ವೀಕಾರಮಾಡಿದ ಅನಂತರ, ಪೂಜ್ಯ ಹಿರಿಯ ಗುರುಗಳಿಂದ ಆಶ್ರಮ ಸಂಪ್ರದಾಯ, ನಿಯಮ, ಮಠೀಯ ವ್ಯವಹಾರ ಮುಂತಾದುವುಗಳ ಬಗೆಗೆ ಅನುಭವ ಪಡೆದುಕೊಂಡರು. ಉಭಯ ಶ್ರೀಗಳವರೂ ಆ ವರ್ಷದ ಚಾತುರ್ಮಾಸ್ಯ ವ್ರತವನ್ನು ಪದ್ಧತಿಯಂತೆ ಪ್ರಾರಂಭಿಸಿದರು.

ಬಾಲ್ಯೇಽಧೀತ ಸಮಸ್ತ ವೇದನಿಚಯೋ ಯಃ ಪ್ರಾಪ್ತವಂಶಶ್ರಿಯಂ
ವೈರಾಗ್ಯೇಣ ವಿಹಾಯ ಸ್ವೀಯಮನಸಾ ಲೇಭೇ ತುರೀಯಂ ಪದಮ್ ॥
ಈಡ್ಯೋ ವಿಶ್ವವಿಭೂತಿವಂದಿತಪದೋ ವಿದ್ವಜ್ಜನೈರಾವೃತಃ
ಸೋಽಯಂ ಚಾತ್ರ ವಿಭಾತಿ ದೇಶಿಕವರಃ ಶ್ರೀರಾಘವೇಂದ್ರಾಖ್ಯಯಾ ॥

ಹಿರಿಯ ಸ್ವಾಮಿಗಳವರ ಕಾಶೀ ಪ್ರಯಾಣ

ವ್ರತ ಸಂಕಲ್ಪಾನಂತರ ಮಠದ ಒಬ್ಬಿಬ್ಬರು ಪರಿಚಾರಕರ ಪರಸ್ಪರ ಕಲಹದಿಂದ ನೊಂದುಕೊಂಡ ಹಿರಿಯ ಸ್ವಾಮಿಗಳವರು ಕಾಶಿಗೆ ಪಯಣ ಗೈದು ಗಂಗಾತೀರ್ಥ ಸ್ನಾನಗೈದು ವಿಶ್ವೇಶ್ವರನ ದರ್ಶನ ಪಡೆಯದೆ ಭಿಕ್ಷೆ ಸ್ವೀಕರಿಸುವುದಿಲ್ಲವೆಂದು ವ್ರತ ತೊಟ್ಟರು. ಮಠದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರೂ ಮಠದ ಕೆಲವು ಪ್ರಮುಖ ಶಿಷ್ಯರ ಬೆಂಬಲದಿಂದ ವೃದ್ಧರಾದ ಶ್ರೀಮದ್ರಾಮಚಂದ್ರ ಭಾರತೀ ಶ್ರೀ ಸ್ವಾಮಿಗಳವರು ತಮ್ಮ ಸ್ವಂತ ವಾಹನದಲ್ಲಿ ಪಯಣಗೈಯುವ ನಿರ್ಧಾರ ಕೈಗೊಂಡರು.

ವರ್ತಮಾನ ಶ್ರೀ ಸ್ವಾಮೀಜೀಯವರು ಆಗ ಸಂನ್ಯಾಸ ಸ್ವೀಕಾರಮಾಡಿ ಕೇವಲ ಆರೇಳು ತಿಂಗಳುಗಳ ಅವಧಿ ಆಗಿತ್ತಷ್ಟೆ. ಹಿರಿಯ ಸ್ವಾಮೀಜೀಯವರು ದೂರದ ಕಾಶೀಪ್ರಯಾಣ ಮಾಡುತ್ತಾರೆ ಎಂದು ತಿಳಿದು ಅವರು ಸಹಜವಾಗಿಯೇ ಕಳವಳ ಕ್ಕೀಡಾದರು.

ಹಿರಿಯ ಸ್ವಾಮಿಗಳು ಹೊರಡುವ ಸಿದ್ಧತೆಯಲ್ಲಿರುವಾಗ ''ನಾವೇನು ಮಾಡ ಬೇಕು''? ಎಂಬ ಪ್ರಶ್ನೆ ಹಾಕಿ ಕಿರಿಯ ಸ್ವಾಮಿಗಳು ಮುಂದಿನ ಬಗೆಗೆ ಆದೇಶ ಬೇಡಿ ದರು. ಆದರೆ ಅವರು ನಿರ್ದಿಷ್ಟವಾಗಿ ಹೇಳುವ ಸ್ಥಿತಿಯಲ್ಲಿರಲಿಲ್ಲ. "ಸಮಿತಿಯವರು ಇದ್ದಾರೆ. ಅವರಿಂದ ವ್ಯವಸ್ಥೆ ಆದೀತು!'' ಎಂದಷ್ಟೇ ನುಡಿದರು.

ಮುಂದೇನು ಎಂಬುದು ತಿಳಿಯದೆ ವರ್ತಮಾನ ಸ್ವಾಮೀಜೀಯವರಿಗೆ ದೊಡ್ಡ ಆಘಾತವಾದಂತಾಯಿತು. ಭವಿಷ್ಯತ್ತೆಲ್ಲವೂ ಒಮ್ಮೆ ಕತ್ತಲಾದಂತೆ ಅವರಿಗೆ ಕಂಡಿತು. "ನಾವು ಈ ಜ್ಞಾನಪೀಠವನ್ನು ಏರಲು ಒಪ್ಪಿದ್ದು ತಪ್ಪಾಯಿತೇ? ಇದಕ್ಕಿಂತ ಕೇವಲ ಸಂನ್ಯಾಸಿಯಾಗಿ ಪರಿವ್ರಾಜಕನಾಗಿ ವಿದ್ಯಾಭ್ಯಾಸಮಾಡಿ, ದೇಶ ಸಂಚಾರಮಾಡಿದ್ದರೆ ಒಳ್ಳೆಯದಾಗಿತ್ತೇನೋ?'' ಎಂಬ ಶಂಕೆ ಅವರನ್ನು ಬಾಧಿಸಿತು.

ಇತ್ತ ಶ್ರೀಮದ್ರಾಮಚಂದ್ರ ಭಾರತೀ ಸ್ವಾಮಿಗಳವರು ಪಯಣ ಹೊರಟು ಮಧ್ಯೆ ಮಧ್ಯೆ ವಿವಿಧ ಕ್ಷೇತ್ರಗಳಲ್ಲಿ ತಂಗುತ್ತಾ ಲೋಕ ಪಾವನೆಯಾದ ಗಂಗೆಯಿಂದ ಮತ್ತು ವಿಶ್ವೇಶ್ವರನಿಂದ ಪವಿತ್ರವಾದ ಕಾಶೀ ಮಹಾಕ್ಷೇತ್ರಕ್ಕೆ ಬಂದು ತಲುಪಿದರು. ಅವರು ಅಲ್ಲಿ ರಾಮಘಾಟದಲ್ಲಿರುವ **ಶ್ರೀ ವೀರೇಶ್ವರ ಕೃಷ್ಣಯಜುರ್ವೇದ ಪಾಠ ಶಾಲೆಯಲ್ಲಿ** ತಾತ್ಕಾಲಿಕ ವಸತಿ ಮಾಡಿದರು. ಮಾಡಿದ ನಿಶ್ಚಯಕ್ಕೆ ಸರಿಯಾಗಿ ಗಂಗಾಸ್ನಾನಗೈದು, ವಿಶ್ವೇಶ್ವರನನ್ನು ದರ್ಶಿಸಿ, ಪೂಜಿಸಿ, ಭಿಕ್ಷೆ ಸ್ವೀಕರಿಸಿದರು.

ಶ್ರೀಮದ್ರಾಘವೇಂದ್ರ ಭಾರತೀ ಸ್ವಾಮಿಗಳವರು ಯೋಚನೆಗೀಡಾದರು. ಅಲ್ಲದೆ, ಅವರಿಗೆ ಆವಶ್ಯಕ ಅನುಕೂಲತೆಗಳೊಂದಿಗೆ ಪಾಠ ಪ್ರವಚನಗಳಿಗೂ ಆಗ ಅವಕಾಶ ವಿರಲಿಲ್ಲ.

ಸಂನ್ಯಾಸ ಸ್ವೀಕಾರದ ಅವರ ಮಹಾನ್ ಧ್ಯೇಯವು ಧನ್ಯವಾಗಿ ಪೂರೈಸಲ್ಪಟ್ಟರೂ ಉನ್ನತ ವಿದ್ಯಾಭ್ಯಾಸ ಪಡೆಯುವ ಅವರ ಆಕಾಂಕ್ಷೆ ಈಡೇರದೆ ಉಳಿದಿತ್ತು. ಸಂಸ್ಕೃತ ಸಾಹಿತ್ಯವನ್ನು, ತರ್ಕ, ನ್ಯಾಯ, ಧರ್ಮ ಶಾಸ್ತ್ರಗಳು, ವೇದಾಂತ–ಮೊದಲಾದ ಜ್ಞಾನ ಭಂಡಾರಗಳನ್ನು ಸ್ವಾಧೀನಮಾಡಿಕೊಂಡು ಮಹಾಪಾಂಡಿತ್ಯಗಳಿಸಬೇಕು ಎಂಬ ಮಹತ್ವಾಕಾಂಕ್ಷೆ ಕೈಗೂಡುವ ದಾರಿ ಕಾಣಲಿಲ್ಲ.

ಪ್ರಾಚೀನವಾದ ವೈದಿಕಜ್ಞಾನದ ತವರೂರು ಎಂಬುದಾಗಿ ಪ್ರಸಿದ್ಧವಾದ ಕಾಶಿಗೇ ತೆರಳಬೇಕು; ಅಲ್ಲಿಯ ಮಹಾಪಂಡಿತರ ಮುಖದಿಂದ ಜ್ಞಾನತೀರ್ಥವನ್ನು ಆಸ್ವಾದಿಸಬೇಕು – ಎಂದು ಬಲವಾಗಿ ಬಯಸಿದ್ದ ಅವರಿಗೆ ಮುಂದಿನ ದಾರಿ ಏನು ಎಂಬುದು ತಿಳಿಯಲಿಲ್ಲ.

ಕಟ್ಟಕಡೆಗೆ ಅವರು ಒಂದು ನಿರ್ಧಾರಕ್ಕೆ ಬಂದರು. "ಏನೇ ಆಗಲಿ, ಪ್ರೌಢ ವಿದ್ಯಾಭ್ಯಾಸ ಪಡೆಯಲೇ ಬೇಕು. ಪರಿವ್ರಾಜಕನಾದರೂ ಸರಿಯೇ ಭಿಕ್ಷಾನ್ನದಿಂದ ಜೀವಿಸಬೇಕಾದರೂ ಸರಿಯೇ, ಕಾಶಿಗೆ ಹೋಗಿ ಉಚ್ಚ ವಿದ್ಯಾಭ್ಯಾಸವನ್ನು ಪಡೆಯುತ್ತೇವೆ. ಕಾಲ್ನಡಿಗೆಯಲ್ಲಾದರೂ ಕಾಶಿಗೆ ಹೋಗಿಯೇ ಬಿಡುತ್ತೇವೆ. ಈ ಜ್ಞಾನ ಪೀಠ ಕೈತಪ್ಪಿಹೋದರೂ ಹೋಗಲಿ! ನಮಗದರಿಂದ ಏನಾಗಬೇಕು? ವಿದ್ವಾಂಸರಾಗಿ ಸಂನ್ಯಾಸಿಯಾಗಬೇಕೆಂದು ಬಯಸಿದ್ದೇವೆ. ಸಂನ್ಯಾಸಸ್ವೀಕಾರ ಮಾಡಿ ಆಯಿತು. ಇನ್ನು ವಿದ್ಯೆಕಲಿತರಾಯಿತು,"

ಸ್ವಾಮೀಜೀಯವರಿಗೆ ಇನ್ನೂ ಶಿಷ್ಯರ ಬಳಗದ ಪರಿಚಯುವಾಗಿರಲಿಲ್ಲ. ಕೈಯಲ್ಲಿ ಹಣವೂ ಇರಲಿಲ್ಲ. ಸಹಾಯ ಮಾಡುವವರಾರನ್ನೂ ಕಾಣಲಿಲ್ಲ. ಈ ಜ್ಞಾನ ಪೀಠವನ್ನೇರಿ ಇತರರನ್ನು ಯಾಚಿಸುವಂತೆಯೂ ಇಲ್ಲ.

ಇಂತಹ ಸಂದರ್ಭದಲ್ಲಿ ಸ್ವಾಮೀಜೀಯವರು ತಮ್ಮ ಧ್ಯೇಯವನ್ನು ಸಾಧಿಸಲೇ ಬೇಕು ಎಂಬ ದೃಢನಿಶ್ಚಯದಿಂದ ಶ್ರೀರಾಮಚಂದ್ರಾಪುರ ಮಠದಿಂದ ಒಂದು ರಾತ್ರಿ ಎತ್ತಿನ ಗಾಡಿಯಲ್ಲಿ ಹೊರಟೇಬಿಟ್ಟರು. ಒಬ್ಬ ಸಹಾಯಕನು ಮಾತ್ರ ಅವರ ಜೊತೆ ಗಿದ್ದನು. ಕೈಯಲ್ಲಿ ಅತ್ಯಲ್ಪ ಮಾತ್ರ ಹಣವಿತ್ತು. ಸಾಗರದ ಸಮೀಪ ಇರುವ ಇಕ್ಕೇರಿಯ ಶ್ರೀ ಅಘೋರೇಶ್ವರ ದೇವಾಲಯಕ್ಕೆ ಸ್ವಾಮೀಜೀಯವರು ತಲುಪಿದರು ಮತ್ತು ಅಲ್ಲಿ ಒಂದೆರಡು ದಿನ ನಿಂತು ಮುಂದಿನ ಪಯಣದ ಯೋಜನೆ ಹಾಕಲು ಉದ್ದೇಶಿಸಿದರು.

ಇಕ್ಕೇರಿಯಲ್ಲಿ ಹವ್ಯಕ ಸಮಾಜದವರು ಹಲವರಿದ್ದರೂ ಸ್ವಾಮೀಜೀಯವರಿಗೆ ಅವರ ಪರಿಚಯವಿರಲಿಲ್ಲ, ಸಮಾಜದವರಿಗೆ ಸ್ವಾಮೀಜೀಯವರ ಪರಿಚಯವಿಲ್ಲ.

ಇಂತಹ ಸನ್ನಿವೇಶದಲ್ಲಿ "ಯಾರೋ ಸ್ವಾಮಿಗಳು ಬಂದಿದ್ದಾರೆ" ಎಂದು ಊರಿನ ಕೆಲವರು, ಅವರ ದರ್ಶನಾಕಾಂಕ್ಷಿಗಳಾಗಿ ಫಲಗಳನ್ನು ತೆಗೆದುಕೊಂಡು ಬಂದರು. ಅಲ್ಲಿಯ ಕೆಲವು ಹವ್ಯಕ ಪ್ರಮುಖರಿಗೆ ಸ್ವಾಮೀಜೀಯವರು ಸಂದೇಶ ಕಳುಹಿಸಿದರು. ಒಂದೆರಡು ದಿನದಲ್ಲಿ ಕೆಲವರು ಬಂದು ಕಲೆತರು. ಸಮಿತಿಯವರಿಗೂ ಈ ವದಂತಿ ದೊರೆತು ಅವರೂ ಬಂದರು. ಚಿಕ್ಕದಾದ ಒಂದು ಸಮಾಲೋಚನೆಯು ಸ್ವಾಮೀಜೀಯವರ ಮತ್ತು ಕಲೆತ ಹವ್ಯಕ ಮುಖಂಡರ ನಡುವೆ ನಡೆಯಿತು.

ಸ್ವಾಮೀಜೀಯವರು ತಮ್ಮ ಕೃತ ನಿಶ್ಚಯವನ್ನು ತಿಳಿಸಿದರು. ಶಿಷ್ಯರ ಬಳಗ ದವರು ಸ್ವಾಮೀಜೀಯವರ ವಿದ್ಯಾವಾಂಛೆಯನ್ನು ಬಹಳವಾಗಿ ಮೆಚ್ಚಿಕೊಂಡರು. ಆದರೆ "ಹಿರಿಯ ಸ್ವಾಮೀಜೀಯವರು ಮಠದಲ್ಲಿ ಇಲ್ಲದಿರುವಾಗ ಸ್ವಾಮೀಜೀಯವರು ಕಾಶಿಗೆ ಪಯಣ ಬೆಳೆಸಬಾರದು. ನಾವು ಮಠದಲ್ಲೇ ಸ್ವಾಮೀಜೀಯವರಿಗೆ ಉಚ್ಚ ಶಿಕ್ಷಣದ ವ್ಯವಸ್ಥೆ ಮಾಡುತ್ತೇವೆ, ಪಂಡಿತರನ್ನು ಕರೆಯಿಸುತ್ತೇವೆ" ಎಂದು ಆಶ್ವಾಸನೆ ನೀಡಿದರು.

ಎಲ್ಲರ ಆಗ್ರಹದ ಪ್ರಾರ್ಥನೆಗೆ ಸ್ವಾಮೀಜೀಯವರು ಬೆಲೆ ಕೊಡಬೇಕಾಯಿತು. ಆದುದರಿಂದ ಇಷ್ಟವಿಲ್ಲವಾದರೂ, ಶಿಷ್ಯರ ಕೇಳಿಕೆಯಂತೆ ಶ್ರೀರಾಮಚಂದ್ರಾಪುರಮಠಕ್ಕೆ ಸ್ವಾಮೀಜೀಯವರು ಮರಳಿ ಬಂದರು. ಅವರ ಜೊತೆಯಲ್ಲೇ ಒಬ್ಬರು ಪಂಡಿತರು ಮಠಕ್ಕೆ ಬಂದರು. ಸ್ವಾಮೀಜೀಯವರ ಪ್ರೌಢ ಶಿಕ್ಷಣವು ಮಠದಲ್ಲೇ ಪ್ರಾರಂಭ ವಾಯಿತು. ಆದರೆ ಕಾಶಿಗೆ ತೆರಳಿ ಅಲ್ಲೇ ಮಹಾಪಂಡಿತರ ಸಮ್ಮುಖದಲ್ಲಿ ವಿದ್ಯಾ ರ್ಜನೆ ಮಾಡಬೇಕೆಂಬ ಸ್ವಾಮೀಜೀಯವರ ಧ್ಯೇಯ ಪೂರೈಸದೆ ಉಳಿದಿತ್ತು.

ಹೀಗಿರಲು ಕಾಶೀಕ್ಷೇತ್ರದಲ್ಲಿ ಹಿರಿಯ ಸ್ವಾಮಿಗಳವರು ರಾಮಘಾಟದ ಶ್ರೀ ವಲ್ಲಭರಾಮ ಸಾಲಿಗ್ರಾಮ ಸಾಂಗವೇದ ವಿದ್ಯಾಲಯದಲ್ಲಿ ಉತ್ತಮ ಪಾಠಪ್ರವಚನ ನಡೆಯುತ್ತಿದ್ದುದನ್ನು ಗಮನಿಸಿದರು. ಆ ಮಹಾ ವಿದ್ಯಾಲಯದಲ್ಲಿ ಪ್ರಾಚೀನ ಶಿಕ್ಷಣ ಪದ್ಧತಿಗನುಸಾರ ತರ್ಕ, ವೇದಾಂತ, ವ್ಯಾಕರಣ, ಸಾಹಿತ್ಯ-ಮುಂತಾದ ವಿಷಯಗ ಳಲ್ಲಿ ಬಹಳ ಸಮರ್ಪಕವಾಗಿ ಪಾಠಪ್ರವಚನ ನೀಡಲಾಗುತ್ತಿದೆ ಎಂಬುದನ್ನು ಅವರು ತಿಳಿದುಕೊಂಡರು. ಪಂಡಿತ **ರಾಜರಾಜೇಶ್ವರ ಶಾಸ್ತ್ರೀ ದ್ರವಿಡ** ಎಂಬವರ ಹಿರಿತನ ದಲ್ಲಿ ಹಾಗೂ ಮಾರ್ಗದರ್ಶನದಲ್ಲಿ ಈ ವಿದ್ಯಾಸಂಸ್ಥೆ ನಡೆಯುತ್ತಿದೆ ಎಂಬುದನ್ನು ಅವರು ಮನಗಂಡರು. ಹಿರಿಯಸ್ವಾಮಿಗಳು ಕಿರಿಯವಯಸ್ಸಿನ ತಮ್ಮ ಅಭಿಮಾನಿ

ಶಿಷ್ಯರೊಬ್ಬರಿಗೆ ಪತ್ರವನ್ನು ಬರೆಯುತ್ತಾ ಈ ವಿದ್ಯಾಲಯದ ಕುರಿತು ಪ್ರಸ್ತಾಪಿಸಿದರು. ಸಮಿತಿಯರು ಇಷ್ಟಪಟ್ಟರೆ ಕಿರಿಯ ಸ್ವಾಮಿಗಳ ವಿದ್ಯಾಭ್ಯಾಸ ಕಾಶಿಯ ಈ ವಿದ್ಯಾಲಯದಲ್ಲಿ ನಡೆಯುವುದು ಒಳ್ಳಿತಾಗಬಹುದು ಎಂಬ ಅಭಿಪ್ರಾಯ ವನ್ನು ಅವರು ಸೂಚಿಸಿದರು.

ಇತ್ತ ಶ್ರೀರಾಮಚಂದ್ರಾಪುರ ಮಠದಲ್ಲಿ ಇದ್ದ ಶ್ರೀಮದ್ರಾಘವೇಂದ್ರ ಭಾರತೀ ಸ್ವಾಮಿಗಳವರಿಗೆ ಈ ಪತ್ರದ ಅಭಿಪ್ರಾಯ ತಿಳಿದು, ಕಾಶಿಗೆ ಹೋಗುವ ಅವರ ಧ್ಯೇಯ ಮತ್ತೆ ಮೂಡಿತು.

ಸ್ವಾಮೀಜೀಯವರು ಪ್ರಮುಖ ಶಿಷ್ಯರುಗಳನ್ನು ಶ್ರೀರಾಮಚಂದ್ರಾಪುರ ಮಠಕ್ಕೆ ಬರಮಾಡಿ ತಮ್ಮ ಅಭಿಪ್ರಾಯದ ಕುರಿತು ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ಯಾರೂ ಅವರನ್ನು ತಡೆಹಿಡಿಯುವ ಸಾಹಸಕ್ಕೆ ಹೋಗದೆ ಅವರ ಪಯಣಕ್ಕೆ ಮುಂದಿನ ವ್ಯವಸ್ಥೆಮಾಡಲು ಮುಂದಾದರು.

ಸ್ವಾಮೀಜೀಯವರು ಪಾರ್ಥಿವ ಸಂವತ್ಸರದ ಫಾಲ್ಗುಣ ಬಹುಳದಲ್ಲಿ ಕ್ರಿ. ಶ. ೧೯೪೬ ನೆಯ ಎಪ್ರಿಲ್ ತಿಂಗಳಲ್ಲಿ ಶ್ರೀ ಹೊಸಬಾಳೆ ಸುಬ್ಬರಾಯರು ಮತ್ತು ಇತರ ಪರಿಸೇವಕರೊಡನೆ ಕಾಶಿಗೆ ಪಯಣ ಬೆಳೆಸಿದರು.

ಸ್ವಾಮೀಜೀಯವರು ಕಾಶಿಗೆ ತಲುಪಿದೊಡನೆ ತಮ್ಮ ಗುರುಗಳ ದರ್ಶನಲಾಭ ವನ್ನು ಪಡೆದು ಸಂತೋಷಪಟ್ಟರು. ತಮ್ಮ ಗುರುವರ್ಯರ ವಾಸ್ತವ್ಯದಲ್ಲಿ ತಮ್ಮ-ವಸತಿಸೌಕರ್ಯಕ್ಕೆ ಅವಕಾಶವಾಗದೆ ಬೇರೆ ಕಡೆಗೆ ಅವರು ಹೋಗಬೇಕಾಗಿ ಬಂದರೂ ದಿನಂಪ್ರತಿ ತಮ್ಮ ಗುರುವರ್ಯರ ಸಂದರ್ಶನ ಲಾಭ ಪಡೆಯುತ್ತಿದ್ದರು.

ಸ್ವಲ್ಪ ಸಮಯದಲ್ಲಿ ಹಿರಿಯ ಸ್ವಾಮೀಜೀಯವರು ಕಾಶಿಯಿಂದ ಶ್ರೀರಾಮ ಚಂದ್ರಾಪುರ ಮಠಕ್ಕೆ ಮರಳಿದರು. ಅವರು ವಾಸವಾಗಿದ್ದ ಶ್ರೀನಿರೇಶ್ವರ ಕೃಷ್ಣ ಯಜುರ್ವೇದ ಪಾಠಶಾಲೆ, ಇದರಿಂದ ತೆರವಾದ ಕಾರಣ ಸ್ವಾಮೀಜೀಯವರು ಅನಂತರ ಅದರಲ್ಲಿ ವಾಸ್ತವ್ಯಕ್ಕೆ ತೊಡಗಿದರು. ಇದರಿಂದ ಸ್ವಾಮೀಜೀಯವರ ಅಧ್ಯಯನಕ್ಕೆ ಹೆಚ್ಚು ಸೌಕರ್ಯವಾಯಿತು.

ಪಂಡಿತ ಗಣಪತಿ ಶಾಸ್ತ್ರಿ ಹೆಬ್ಬಾರ, ಅವರು ಸ್ವಾಮೀಜೀಯವರ ಆಚಾರ್ಯ ವರ್ಗದಲ್ಲಿ ಅತ್ಯಂತ ಪ್ರಮುಖರಾಗಿದ್ದರು. ಅವರು ವ್ರತನಿಷ್ಠ ಬ್ರಹ್ಮಚಾರಿಗಳಾಗಿದ್ದರು. ಶುಲ್ಕವನ್ನು ಸ್ವೀಕರಿಸದೆ ಅಧ್ಯಾಪನ ಮಾಡುತ್ತಿದ್ದರು. ಹಲವು ಭಾಷೆಗಳಲ್ಲಿ ಪಾಂಡಿತ್ಯ ಪೂರ್ಣರಾಗಿದ್ದರಲ್ಲದೆ ಪೌರಸ್ತ್ಯ, ಪಾಶ್ಚಾತ್ಯ ಉಭಯವಿದ್ಯಾವಿಶಾರದರಾಗಿಯೂ ಇದ್ದರು. ಅವರಿಗೆ ಸ್ವಾಮೀಜೀಯವರ ಮೇಲೆ ವಿಶೇಷವಾದ ಪ್ರೇಮಾದರಗಳಿದ್ದವು. ಆದುದರಿಂದ ಅವರು ಸ್ವಾಮೀಜೀಯವರಿಗೆ ಹೆಚ್ಚಿನ ಶ್ರದ್ಧೆಯಿಂದ ಪಾಠ ಹೇಳುತ್ತಿದ್ದರು.

ಸ್ವಾಮೀಜೀಯವರ ಪ್ರೌಢ ವಿದ್ಯಾಭ್ಯಾಸದ ಈ ಸಮಯದಲ್ಲಿ ಕಾಶಿಯಲ್ಲೇ ಬ್ರಹ್ಮಚರ್ಯವ್ರತನಿಷ್ಠರಾಗಿ ವಸತಿಮಾಡಿಕೊಂಡಿದ್ದ ಶಿವಮೊಗ್ಗ ಜಿಲ್ಲೆಯ ಸಾಗರದ ಶ್ರೀ ಕಲ್ಸೆ ಬಿ. ವೆಂಕಪ್ಪ ಭಟ್ಟ ಎಂಬವರು ದೈವ ಪ್ರೇರಣೆಯಿಂದ ಸ್ವಾಮೀಜೀಯವರ ನಿತ್ಯದ ಅನುಷ್ಠಾನ, ಪೂಜೆ, ಮತ್ತಿತರ ಆವಶ್ಯಕತೆಗಳ ಬಗೆಗೆ ತುಂಬಾ ನೆರವಾಗಿ ಸೇವೆ ಸಲ್ಲಿಸಿ, ಪುಣ್ಯಭಾಜನರಾದರು. ಅವರು ಸ್ವಾಮೀಜೀಯವರಿಗೆ ಈ ಸಂದರ್ಭ ದಲ್ಲಿ ಮಾಡಿದ ಸೇವೆ ಪ್ರಶಂಸನೀಯವಾಗಿದೆ.

ಊರಿಗೆ ಮರಳಿದ ಹಿರಿಯ ಸ್ವಾಮಿಗಳವರು ಉತ್ತರ ಕನ್ನಡ ಜಿಲ್ಲೆಯ ಕೆಕ್ಕಾರು ಶ್ರೀ ರಘೂತ್ತಮ ಮಠದಲ್ಲಿದ್ದಾಗ ಅಸ್ವಾಸ್ಥ್ಯಕ್ಕೀಡಾದರು. ಚಿಕಿತ್ಸೆ ಮಾಡಿದರೂ, ವೃದ್ಧಾಪ್ಯದ ವೆಸೆಯಿಂದಾಗಿ ಅವರ ದಿವ್ಯಾತ್ಮವು ಬ್ರಹ್ಮೈಕ್ಯವಾಯಿತು. ಅಧ್ಯಯನ ದಲ್ಲಿ ಗಾಢವಾಗಿ ಮುಳುಗಿದ್ದ ಸ್ವಾಮೀಜೀಯವರಿಗೆ ಈ ವಾರ್ತೆ ತಲುಪಿದೊಡನೆಯೇ ಅವರು ತುಂಬಾ ಕಳವಳಕ್ಕೆ ಈಡಾದರು.

ತಮ್ಮ ಕರ್ತವ್ಯವೇನು ಎಂದು ಸ್ಮರಿಸಿಕೊಳ್ಳಲು ಅವರಿಗೆ ಹೆಚ್ಚು ಕಾಲ ಹಿಡಿಯ ಲಿಲ್ಲ. ಕೂಡಲೇ ಅವರು ಕೆಕ್ಕಾರಿನ ಶ್ರೀ ರಘೂತ್ತಮ ಮಠಕ್ಕೆ ಧಾವಿಸಿದರು. ಶಿಷ್ಯರಿಂದೊಡಗೂಡಿ ಶಾಸ್ತ್ರೀಯವಾದ ರೀತಿಯಲ್ಲಿ ಗುರುಗಳ ಆರಾಧನಾ ಸಮಾರಂಭ ವನ್ನು ನೆರವೇರಿಸಿದರು.

ಆದಾದ ಕೆಲವು ದಿನಗಳ ತನಕ ಸ್ವಾಮೀಜೀಯವರು ಅದೇ ಮಠದಲ್ಲೇ ಇದ್ದು, ಶಿಷ್ಯ ಸಮುದಾಯದ ಕೂಡೆ ತಮ್ಮ ಸಂಪರ್ಕವನ್ನು ಹೆಚ್ಚಿಸಿಕೊಂಡರು. ಅಲ್ಲದೆ ಶ್ರೀಕ್ಷೇತ್ರ ಗೋಕರ್ಣದಲ್ಲಿದ್ದ ಮೂಲ ರಘೂತ್ತಮ ಮಠಕ್ಕೆ ಭೇಟಿ ನೀಡಿದರು. ಸಮುದ್ರಸ್ನಾನ, ಈಶ್ವರಾರ್ಚನಾದಿ ಕಾರ್ಯಕ್ರಮಗಳನ್ನು ಅತ್ಯಂತ ಭಕ್ತಿಯುತವಾಗಿ ನೆರವೇರಿಸಿ, ಕೆಲಕಾಲ ಅಲ್ಲೇ ವಸತಿ ಮಾಡಿ, ಅಲ್ಲಿಂದ ಹೊಸನಗರ ಮತ್ತು ತೀರ್ಥ ಹಳ್ಳಿಯ ಶ್ರೀರಾಮಚಂದ್ರಾಪುರ ಮಠಕ್ಕೆ ಬಂದು ಅಲ್ಲಿ ವಾಸ್ತವ್ಯ ಮಾಡಿದರು.

ಈ ಸಂದರ್ಭ, ಸ್ವಾಮೀಜೀಯವರಿಗೆ ಉಭಯ ಧರ್ಮಸಂಕಟದ ಸನ್ನಿವೇಶ ಬಂತು. ಗುರುಗಳು ಬ್ರಹ್ಮೈಕ್ಯರಾದರು. ಆ ದೃಷ್ಟಿಯಿಂದ ಶಿಷ್ಯ ಸಮುದಾಯಕ್ಕೆ ಮಾರ್ಗದರ್ಶನ ಮಾಡಲು ತಾವು ಮಠದಲ್ಲೇ ನಿಲ್ಲಬೇಕಾದುದು ಅಗತ್ಯ ಎಂದು ಅವರು ಮನಗಂಡರು. ಮೇಲಾಗಿ, ಮಠದ ಆರ್ಥಿಕ ಪರಿಸ್ಥಿತಿ ಹಿತವಾಗಿರಲಿಲ್ಲ. ಇಂತಹ ಸನ್ನಿವೇಶದಲ್ಲಿ ತಾವು ಮಠದಲ್ಲೇ ಇದ್ದು, ಪರಿಸ್ಥಿತಿಯನ್ನು ತಮ್ಮ ಸಕಲ ಶಕ್ತಿಯನ್ನುಪಯೋಗಿಸಿ, ಕ್ಷಿಪ್ರವಾಗಿ ಸುಧಾರಿಸಿ ಮೇಲಕ್ಕೆತ್ತಬಹುದೆಂಬ ವಿಶ್ವಾಸ ಅವರಿಗಿತ್ತು.

ಆದರೆ ಅವರ ಅಧ್ಯಯನವು ಅಪೂರ್ಣವಾಗಿತ್ತು. ಹಿಡಿದುದನ್ನು ಶತಾಯ ಗತಾಯ ಸಾಧಿಸಿಯೇ ತೀರುತ್ತೇನೆ ಎಂಬ ಪಣ ಅವರದು. ಅವರ ರೀತಿಯೇ ಹಾಗೆ.

ಮೇಲಾಗಿ ಈಗ ಮೊಟಕುಗೊಳಿಸಿದ ಅಧ್ಯಯನವನ್ನು ಮುಂದೆಂದೂ ಪರಿಣಾಮಕಾರಿಯಾಗಿ ಚಿಗುರಿಸಲು ಸಾಧ್ಯವಿಲ್ಲ. ಅಲ್ಲದೆ, ಪಡೆದುಕೊಳ್ಳಬೇಕಾದ ಲೋಕಾನುಭವ, ಮಾಡಬೇಕಾದ ತೀರ್ಥಕ್ಷೇತ್ರ ಸಂದರ್ಶನ ಹಾಗೆಯೇ ಉಳಿದಿವೆ. ಹಾಗಿರಲು ಕಾಶಿಯಲ್ಲಿ ಅಂತಹ ಮಹಾ ಮಹೋಪಾಧ್ಯಾಯರ ಸಮ್ಮುಖದಲ್ಲಿ ಮಾಡುವ ಅಧ್ಯಯನವನ್ನು ಮೇಲಿನ ವ್ಯಾವಹಾರಿಕ ಕಾರಣಕ್ಕಾಗಿ ಹೇಗೆ ಕೊನೆಗೊಳಿಸುವುದು? ಈ ಪ್ರಶ್ನೆ ಅವರನ್ನು ಬಾಧಿಸಿತು.

ಇಂತಹ ಗಹನವಾದ ವಿಚಾರವನ್ನು ಅವಸರದಲ್ಲಿ ಕೈಗೊಳ್ಳಬಾರದೆಂದೆಣಿಸಿ ಸುದೀರ್ಘವಾಗಿ ತಮ್ಮೊಳಗೇ ಮಂಥನಮಾಡಿಕೊಂಡು ಯೋಚಿಸಿದರು ಸ್ವಾಮೀಜಿ. ಆದರೆ, ಅವರ ನಿರ್ಣಯವು ಮತ್ತೆ ಕಾಶಿಯಲ್ಲಿ ಮುಂದುವರಿಸಲೇ ಬೇಕಾದ ತಮ್ಮ ಅಧ್ಯಯನದ ಕಡೆಗೇ ಒಲೆಯುತ್ತಿತ್ತು.

ಪ್ರಮುಖ ಶಿಷ್ಯರನ್ನು ಕರೆದು ಅವರನ್ನು ಸಮಾಧಾನ ಪಡಿಸಿಯೇ ಮುಂದಿನ ಹೆಜ್ಜೆ ತೆಗೆಯಬೇಕೆಂದು ಸ್ವಾಮೀಜಿ ಬಯಸಿದರು. ಬಳಿಸೇರಿದ ಪ್ರಮುಖ ಶಿಷ್ಯರು ಶ್ರೀ ಹೊಸಬಾಳೆ ಸುಬ್ರಾಯರ ನೇತೃತ್ವದಲ್ಲಿ ಸ್ವಾಮೀಜೀಯವರನ್ನು ಸಂದರ್ಶಿಸಿ, ಮಠದ ಆಗಿನ ಪರಿಸ್ಥಿತಿಯಲ್ಲಿ ಸ್ವಾಮೀಜೀಯವರು ಮಠವನ್ನು ಬಿಟ್ಟು ತೆರಳಬಾರ-ದೆಂದೂ ಮಠದಲ್ಲೇ ಬೇಕಾದ ಪ್ರಾಚಾರ್ಯರನ್ನಿಟ್ಟುಕೊಂಡು ಅಧ್ಯಯನ ಸಾಧಿಸ-ಬೇಕೆಂದೂ ಅವರು ಪರಿಪರಿಯಾಗಿ ಬೇಡಿಕೊಂಡರು.

ಆದರೆ ಸ್ವಾಮೀಜೀಯವರ ವಿಚಾರಧಾರೆ ಹರಿತವಾಗಿತ್ತು. ತಮ್ಮ ಭವಿಷ್ಯತ್ತು, ತಮ್ಮ ಶಿಷ್ಯಸಮಾಜದ ಭವಿಷ್ಯತ್ತು ಅವರ ಕಣ್ಣಮುಂದೆ ಕಟ್ಟಿತ್ತು. ಆದುದರಿಂದಲೇ ಅವರ ನಿರ್ಧಾರವು ಹಿಮಾಲಯದಷ್ಟು ಅಚಲವಾಗಿತ್ತು. ವಿನಯದಿಂದ, ಆದರೆ ದೃಢವಾಗಿ ತಮ್ಮ ನಿರ್ಧಾರವನ್ನು ಅವರು ಒತ್ತಿ ಹೇಳಿದರು. ಶಿಷ್ಯವೃಂದದವರು ಒಪ್ಪಿಕೊಳ್ಳದೆ ಬೇರೆ ವಿಧಿಯಿರಲಿಲ್ಲ. ವಾದವು ಅಷ್ಟು ಬಲವಾಗಿತ್ತು.

ಆದರೆ ಮಠದಲ್ಲಿ ಅರಾಜಕತೆಯುಂಟಾಗದಂತೆ ಮಾಡುವುದಕ್ಕಾಗಿ ಅದೇ ಶಿಷ್ಯರಲ್ಲಿ ಪ್ರಮುಖರನ್ನು ಸೇರಿಸಿ ಸ್ವಾಮೀಜೀಯವರು ಶ್ರೀ ಹೊಸಬಾಳೆ ಸುಬ್ರಾಯರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದರು. ಸ್ವಾಮೀಜೀಯವರು ತಮ್ಮ ಯೌವನದ ಹೊಸದರಲ್ಲಿ ಮಾಡಿದ ತಮ್ಮ ಸಮಾಜದ ಸಂಘಟನಾಕಾರ್ಯದ ಮುನ್ನುಡಿಯಾಯಿತು ಈ ಸಮಿತಿ ಎನ್ನಬಹುದು.

ವಿರೋಧಿ ಸಂವತ್ಸರದ ಆಷಾಢ ಶುದ್ಧದಲ್ಲಿ ([illegible]ನೆಯ ಜುಲೈ) ಸ್ವಾಮೀಜೀಯವರು ಮತ್ತೆ ಕಾಶಿಗೆ ತೆರಳಿದರು.

ಹಿಂದೆ ಅದಮ್ಯ ಸಾಹಸದಿಂದ ಪರಿವ್ರಾಜಕರಂತೆ ಕಾಶಿಗೆ ಹೋಗಲು ಮಾನಸಿಕ ಸಿದ್ಧತೆ ಮಾಡಿ ಹೊರಟ ಸ್ವಾಮೀಜೀಯವರು ಇಂದು ಆಧ್ಯಾತ್ಮ ಸಮ್ರಾಟರಾದ ಶಂಕರ ಭಗವತ್ಪಾದರು ಸ್ಥಾಪಿಸಿದ ಮಠದ ಅವಿಚ್ಛಿನ್ನ ಶಿಷ್ಯ ಪರಂಪರೆಯ ಉನ್ನತ ಸ್ಥಾನದ ಪ್ರತಿನಿಧಿಯಾಗಿ ಲಕ್ಷಾಂತರ ಜನರ ಧರ್ಮಗುರುವಾಗಿ ಕಾಶಿಗೆ ತೆರಳು ತ್ತಿದ್ದರು. ಲಕ್ಷಾಂತರ ಮಂದಿ ಸುಸಂಸ್ಕೃತ ಜನರ ಭವಿಷ್ಯತ್ತಿನ ಬಗೆ ಅವರ ಕೈಯಲ್ಲಿತ್ತು. ಅದುದರಿಂದಲೇ ಈ ಸಲ ಸ್ವಾಮೀಜೀಯವರು ಒಬ್ಬಂಟಿಗರಾಗಿ ಹೋಗಲಿಲ್ಲ. ಮಿತ ಪರಿವಾರದೊಂದಿಗೆ ಸ್ಥಾನದ ಗೌರವಕ್ಕೆ ಸರಿಯಾಗಿ ಹೊರಟರು.

ಕಾಶಿಗೆ ತಲಪಿದ ಸ್ವಾಮೀಜೀಯವರು ಮತ್ತೆ ಅಧ್ಯಯನದ ಸಾಗರದಲ್ಲಿ ಗಾಢ-ವಾಗಿ ಮುಳುಗಿದರು. ಸಾಹಿತ್ಯ, ವ್ಯಾಕರಣ, ತರ್ಕ, ಸಾಂಖ್ಯ ಮೀಮಾಂಸೆ, ವೇದಾಂತ ಮೊದಲಾದ ಪ್ರಾಚೀನ ಶಾಸ್ತ್ರಗಳನ್ನು ಅಧ್ಯಯನ ಮಾಡುವುದರಲ್ಲಿ ಲೋಕದ ಬಾಹ್ಯ ಆಕರ್ಷಣೆಗಳನ್ನು ಮರೆತರು. ಆದುದರಿಂದ ಈ ಎಲ್ಲಾ ಶಾಸ್ತ್ರಗಳನ್ನೂ ಕರತಲಾಮಲಕ ವಾಗಿ ಮಾಡಿಕೊಂಡು ಎಲ್ಲಾ ಪಂಡಿತರ ಪ್ರಶಂಸೆ, ಮೆಚ್ಚುಗೆ, ಅಭಿಮಾನಗಳನ್ನು ಪಡೆದುಕೊಳ್ಳಲು ಅವರಿಗೆ ಸಾಧ್ಯವಾಯಿತು.

ಹೀಗೆ ಸ್ವಾಮೀಜೀಯವರು ಕಾಶಿಯಲ್ಲಿದ್ದ ಆರು ವರ್ಷಗಳ ಅವಧಿಯಲ್ಲಿ ಅವರ ಜ್ಞಾನಾಭಿವೃದ್ಧಿಗೆ ಕಾರಣರಾದವರಲ್ಲಿ ಸಾಂಗವೇದ ವಿದ್ಯಾಲಯದ ಈ ಕೆಳಗಿನ ವಿದ್ವಾಂಸರು ಪ್ರಮುಖರು. ಹಿಂದೆ ಬಣ್ಣಿಸಿದ ಪಂಡಿತ ಗಣಪತಿ ಶಾಸ್ತ್ರಿ ಹೆಬ್ಬಾರ ಇವರ ಪ್ರಾಚಾರ್ಯತ್ವದಲ್ಲಿ, ಪಂ॥ ನ್ಯಾಯಾಚಾರ್ಯ ಹರಿರಾಮ ಶಾಸ್ತ್ರಿ ಶುಕ್ಲ, ಪಂ॥ ನ್ಯಾಯಾಚಾರ್ಯ ಜಯರಾಮ ಶಾಸ್ತ್ರಿ ಶುಕ್ಲ, ಪಂ॥ ರಾಮಚಂದ್ರ ಶಾಸ್ತ್ರಿ, ಹೊಸ ಮನೆ ಗೋಕರ್ಣ, ಕೊಡಗಿನ ಶ್ರೀ ಕೃಷ್ಣ ಶಾಸ್ತ್ರಿಗಳು, ಶ್ರೀ ಉಪೇಂದ್ರ ರಾಜ-ಹಂಸ ವ್ಯಾಕರಣಾಚಾರ್ಯ, ಮೈಥಿಲಿ ಮೊದಲಾದವರು ಸ್ವಾಮೀಜೀಯವರಿಗೆ ಪಾಠ ಪ್ರವಚನ ಮಾಡಿದರು, ಇವರ ಮಧ್ಯೆ ಕೊಡಗಿನ ಶ್ರೀ ಕೃಷ್ಣ ಶಾಸ್ತ್ರಿಗಳು ಕಾಶಿಯ ಬಿಂದುಮಾಧವ ಘಟ್ಟ ವಾಸಿಗಳಾಗಿದ್ದರಲ್ಲದೆ, ಬ್ರಹ್ಮಚಾರಿಗಳಾಗಿದ್ದು ಅನಂತರ ತುರೀಯಾಶ್ರಮವನ್ನು ಸ್ವೀಕರಿಸಿದ್ದರು. ಇವರು ವೈಯಾಕರಣ ವಿದ್ವಾಂಸರು. ತಮ್ಮ ಮಹಾಭಾಷ್ಯಾಂತ ವ್ಯಾಕರಣ ಪುಸ್ತಕಗಳನ್ನೂ ಸಾಂಖ್ಯಯೋಗಾದಿ ಶಾಸ್ತ್ರಗಳ ಅಮೂಲ್ಯ ಗ್ರಂಥಗಳನ್ನೂ ಸ್ವಾಮೀಜೀಯವರಿಗೆ ಇವರು ಸಮರ್ಪಿಸಿದರು.

ಸ್ವಾಮೀಜೀಯವರು ಹೀಗೆ ಕಾಶಿಯಲ್ಲಿ ಅಧ್ಯಯನ ಮಾಡುತ್ತಿದ್ದಾಗಲೇ ಅನೇಕ ಪುಣ್ಯಕ್ಷೇತ್ರಗಳ ದರ್ಶನಗೈದರು. ಶ್ರೀ ರಾಮಚಂದ್ರನ ಪಾದ ಧೂಳಿಯಿಂದ ಪವಿತ್ರ ವಾದ ಅಯೋಧ್ಯೆಯ ಸಂದರ್ಶನವು ಸ್ವಾಮೀಜೀಯವರಿಗೆ ಅತ್ಯಂತ ಹೆಚ್ಚಿನ ಆನಂದ ವನ್ನು ನೀಡಿತು. ಹಾಗೆಯೇ ಶ್ರೀ ಸರಸ್ವತಿಯ ಮೂಲಸ್ಥಾನವಾದ ವಿಂಧ್ಯಾಚಲ ಹಾಗೂ ಗಂಗಾ ಗೋಮತೀ ಸಂಗಮದಲ್ಲಿರುವ ಶ್ರೀ ಮಾರ್ಕಂಡೇಯ ಕ್ಷೇತ್ರ ಮೊದ

ಲಾವ ಹಲವು ಯಾತ್ರಾಸ್ಥಳಗಳಿಗೆ ಸ್ವಾಮೀಜಿ ದರ್ಶನ ನೀಡಿ ಅಲ್ಲಲ್ಲೇ ಅನುಷ್ಠಾನ, ಪೂಜೆ ತಪಸ್ಸುಗಳನ್ನು ಸಲ್ಲಿಸಿ ಮರಳಿದರು. ಇಂತಹ ಕ್ಷೇತ್ರಗಳು ಸಾಮಾನ್ಯವಾಗಿ ದುರ್ಗಮವಾಗಿದ್ದು ಬಹಳ ಮಂದಿ ಸಂದರ್ಶನ ಪಡೆಯಲು ಸಾಧ್ಯವಿರುವ ಕ್ಷೇತ್ರಗಳಲ್ಲ ವೆಂಬುದು ಗಮನಾರ್ಹ ವಿಚಾರ.

ಕಾಶಿಯಲ್ಲಿ ಇದ್ದಾಗ ಹಾಗೂ ತೀರ್ಥಯಾತ್ರೆಗಳ ಸಂದರ್ಭ ಸ್ವಾಮೀಜೀ ಯವರು ಲೋಕದ ವ್ಯವಹಾರವನ್ನು ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ಸೂಕ್ಷ್ಮ ವಾಗಿ ತಿಳಿದುಕೊಳ್ಳುತ್ತಿದ್ದರು. ಹಿಂದಿಯನ್ನು ಚೆನ್ನಾಗಿ ಕಲಿತುಕೊಂಡು, ಉಳಿದ ಭಾಷೆಗಳ ಜನರೊಡನೆ ಸಂಪರ್ಕವನ್ನಿಟ್ಟುಕೊಳ್ಳುವುದರಲ್ಲಿ ಯಶಸ್ವಿಗಳಾದರು. ಇದ ರಿಂದ ಆಧುನಿಕ ಸಮಾಜದ ಜನರೊಡನೆ ಅವರು ಅತ್ಯಂತ ಜಾಣ್ಮೆಯಿಂದ ವ್ಯವಹಾರ ಮಾಡಲು ಬೇಕಾದ ಸಾಮರ್ಥ್ಯವನ್ನು ಪಡೆದುಕೊಂಡರು. ಅಲ್ಲದೆ ಹಲವು ವಿದ್ವಾಂ ಸರು ಹಾಗೂ ಸಜ್ಜನರ ಪರಿಚಯ, ಗೌರವಗಳನ್ನು ಪಡೆದುಕೊಂಡರು.

ಇಷ್ಟರಲ್ಲಿ ಊರಿನಿಂದ ಶಿಷ್ಯಪ್ರಮುಖರ ಆಗ್ರಹದ ಕರೆ ಬರತೊಡಗಿತು. ಮಠಕ್ಕೆ ಮರಳಿ ಶಿಷ್ಯರಿಗೆ ಯೋಗ್ಯ ಮಾರ್ಗದರ್ಶನ ನೀಡಿ ಅವರನ್ನು ಸನ್ಮಾರ್ಗದಲ್ಲಿ ಕರೆದೊಯ್ಯಬೇಕು. ಮಠದ ಆಡಳಿತವನ್ನು ಕೈಗೆತ್ತಿಕೊಳ್ಳಬೇಕು – ಎಂಬ ವಿನಂತಿ ಅವರಿಂದ ಬಂತು. ಸ್ವಾಮೀಜೀಯವರು ಇನ್ನು ಈ ವಿನಂತಿಯನ್ನು ತಳ್ಳಿ ಹಾಕುವಂ ತೆಯೇ ಇರಲಿಲ್ಲ. ಆದುದರಿಂದ ಅಧ್ಯಯನವನ್ನು ಮುಗಿಸಿ, ಅವರು ಊರಿನ ಕಡೆಗೆ ಪಯಣ ಬೆಳೆಸಲುದ್ಯುಕ್ತರಾದರು.

ಈ ತನಕ ಶಿಷ್ಯರೆಂಬುದಾಗಿ ಪರಿಗಣಿಸಲ್ಪಟ್ಟದ್ದ ಅವರು ಈಗ ಸಮಾಜಕ್ಕೇನೇ ಗುರುವಾಗುವ ಸ್ಥಾನಕ್ಕೆ ಹಿಂದಿರುಗುತ್ತಿದ್ದರು. ಆ ಸ್ಥಾನದ ಮಟ್ಟಕ್ಕೆ ಸರಿಯಾಗಿ ಅವರನ್ನು ಗೌರವಿಸಬೇಕಾಗಿತ್ತು.

ಅದಕ್ಕಾಗಿ, ಶ್ರೀ ಸಾಂಗವೇದ ವಿದ್ಯಾಲಯದ ಅಧ್ಯಕ್ಷರಾದ ಪಂಡಿತ ರಾಜ ರಾಜೇಶ್ವರ ಶಾಸ್ತ್ರಿಗಳವರ ಹಿರಿತನದಲ್ಲಿ, ಕಾಶಿಯಲ್ಲಿ ಪಂಡಿತ ಮಂಡಲಿಯು ಸಭೆ ಸೇರಿತು. ಎಲ್ಲಾ ಪಂಡಿತರೂ ಸ್ವಾಮೀಜೀಯವರನ್ನು ಮುಕ್ತಕಂಠದಿಂದ ಶ್ಲಾಘಿ ಸಿದರು. ಮುಖ್ಯವಾಗಿ ಅತ್ಯಂತ ಗಹನವಾಗಿ, ಕಬ್ಬಿಣದ ಕಡಲೆಯಂತಿರುವ ನವೀನ ನ್ಯಾಯಶಾಸ್ತ್ರವನ್ನು ಸ್ವಾಮೀಜೀಯವರು ಅಧ್ಯಯನ ಮಾಡಿ ಅರಗಿಸಿಕೊಂಡ ಬಗೆಗೆ ಎಲ್ಲರೂ ಸ್ವಾಮೀಜೀಯವರನ್ನು ತುಂಬು ಹೃದಯದಿಂದ ಶ್ಲಾಘಿಸಿದರು. ಸಭೆಯ ವರು ಸ್ವಾಮೀಜೀಯವರನ್ನು ಅತ್ಯಂತ ಪ್ರೇಮದಿಂದ ಸ್ತುತಿಸಿ, ಗೌರವಿಸಿ ಬೀಳ್ಕೊ ಟ್ಟರು.

ಕಾಶಿಯಲ್ಲಿ ಮಾಡಲೇಬೇಕಾದ ಇತರ ಕಾರ್ಯಕಲಾಪಗಳನ್ನು ಯಥೋಚಿತ ವಾಗಿ ಪೂರೈಸಿ ಪಯಣ ಹೊರಟ ಸ್ವಾಮೀಜೀಯವರು ಖರಸಂವತ್ಸರದ ಪುಷ್ಯಶುದ್ಧದಲ್ಲಿ

(ಜನವರಿ ೧೯೫೨) ತೀರ್ಥಹಳ್ಳಿಯ ಶ್ರೀರಾಮಚಂದ್ರಾಪುರ ಮಠಕ್ಕೆ ಬಂದು ತಲಪಿದರು. ಬಹಳ ಕಾಲದಿಂದ ಗುರುಗಳಿಲ್ಲದೆ ದುಃಖಿತರಾದ ಶಿಷ್ಯಸಮಾಜದವರು ತುಂಬಾ ಹರ್ಷಪಟ್ಟರು.

ತಾವಿಲ್ಲದಾಗ ಮಠದ ಆಡಳಿತವನ್ನು ತಮ್ಮ ಮನೆಯ ವ್ಯವಹಾರ ಎಂಬಂ-ತೆಯೋ ಅತ್ಯಂತ ಶ್ರದ್ಧೆಯಿಂದ ನೋಡಿಕೊಂಡ ಶ್ರೀ ಹೊಸಬಾಳೆ ಸುಬ್ರಾಯರು ಹಾಗೂ ಅವರ ಸಂಗಡಿಗರ ಬಗೆಗೆ ಸ್ವಾಮೀಜೀಯವರು ಹೃದಯ ತುಂಬಿ ಶ್ಲಾಘಿಸಿ ತಮ್ಮ ಭಾವನೆಯನ್ನು ಪ್ರಕಟಿಸಿಕೊಂಡರು.

ಯಾವುದೇ ತಾತ್ವಿಕ, ಧಾರ್ಮಿಕ ವಿಚಾರಗಳಲ್ಲಿ ಗಾಢವಾದ ಪರಿಜ್ಞಾನ ಪಡೆದುಕೊಂಡು ಸನಾತನ ಧರ್ಮದ ಆಚರಣೆಯು ಯಾವ ದಾರಿಯಲ್ಲಿ ನಡೆಯಬೇಕು ಎಂಬುದನ್ನು ಕರಾರುವಾಕ್ಕಾಗಿ ಹೇಳಲು ಬೇಕಾದ ಸಾಮರ್ಥ್ಯವನ್ನೂ ಮಹಾ ಪಾಂಡಿತ್ಯವನ್ನೂ ತಪಃಶಕ್ತಿಯನ್ನೂ ಪಡೆದುಕೊಂಡು ತಮ್ಮ ಬಳಿಗೆ ಮರಳಿ ಬಂದ ತಮ್ಮ ಗುರುಗಳ ಬಗೆಗೆ ಎಲ್ಲ ಶಿಷ್ಯರಿಗೂ ಗಾಢವಾದ ಅಭಿಮಾನ, ಗೌರವ ಭಕ್ತಿಗಳು ಮೂಡಿಬಂದವು.

ಸ್ವಾಮೀಜೀಯವರು ಸಮಾಜದ ಉತ್ಕರ್ಷಕ್ಕೆ ಮುಂದೆ ಮಾಡಬೇಕಾದ ಶ್ರೇಷ್ಠವಾದ ಮಹಾಕಾರ್ಯಗಳಿಗೆ, ಗುರುಗಳ ಕುರಿತಾಗಿ ಉದಿಸಿದ ಶಿಷ್ಯರ ಈ ಭಾವನೆಗಳು ನಾಂದಿಯಾಗಿ ನಿಂತವು.

ಆಡಳಿತ ಸ್ವೀಕಾರ

ಕಾಶ್ಯಾಂ ವತ್ಸರಸಪ್ತಕೇಷು ವಿಧಿವದ್ವೇದೋದಿತೇ ಸತ್ಪಥೇ
ವೇದಾಂತಾದಿ ಸಮಸ್ತಶಾಸ್ತ್ರನಿಕರಾತ್ ಸಂಪ್ರಾಪ್ಯ ಬೋಧಶ್ರಿಯಮ್ ।
ವಿದ್ವದ್ವೃಂದ ಸಮರ್ಚಿತೈಕಚರಣೋಽಸ್ಯಾಗತ್ಯ ತಸ್ಮಾತ್ತತಃ
ಶಿಷ್ಯಾನುಗ್ರಹವಾಂಛಯಾ ವಿಚರತಿ ಶ್ರೀರಾಘವೇಂದ್ರೋ ಗುರುಃ ॥

ಸ್ವಾಮೀಜೀಯವರು ಕಾಶಿಯಿಂದ ಮರಳಿದ ಮೇಲೆ ಸ್ವಲ್ಪವೂ ಸಮಯವನ್ನು ಕಳೆಯದೆ ಕ್ರಿ.ಶ. ೧೯೫೨ರಲ್ಲಿ ತಾವು ನೇಮಿಸಿದ ಶಿಷ್ಯರ ಸಮಿತಿಯಿಂದ ಮಠದ ಆಡಳಿತವನ್ನು ಕೈಗೆ ತೆಗೆದುಕೊಂಡರು. ಸೂಕ್ಷ್ಮಗ್ರಾಹಿಗಳಾಗಿ ಅವರು ಮಠದ ಆಸ್ತಿಗಳು, ಅವುಗಳ ಗಡಿಗಳು, ಮಣ್ಣಿನ ತರಗತಿ, ಅಲ್ಲಿರುವ ಬೆಳೆಗಳು, ಅಲ್ಲಿ ಮುಂದೆ ಮಾಡಬಹುದಾದ ಅಭಿವೃದ್ಧಿಗಳು – ಮುಂತಾದುವುಗಳನ್ನು ತಿಳಿದುಕೊಂಡರು.

ಸ್ವಾಮೀಜೀಯವರು ಆಡಳಿತ ಸ್ವೀಕರಿಸಿದ ಕೂಡಲೇ ಮಠಕ್ಕೆ ಸಂಬಂಧಪಟ್ಟ ಸಕಲ ದಾಖಲೆ, ರಿಕಾರ್ಡುಗಳನ್ನು ಸ್ವತಃ ಅಧ್ಯಯನ ಮಾಡಿ, ವಿವರಗಳು ಬೇಕಾದಲ್ಲಿ ಅನುಭವಿಗಳಾದ ಹಿರಿಯ ಶಿಷ್ಯರನ್ನು ಕರೆಸಿ ವಿಚಾರಿಸಿ ತಿಳಿದುಕೊಂಡರು. ಮಠದ ಪೂರ್ವೇತಿಹಾಸ, ಪರಂಪರೆ, ಶಕ್ತಿ–ಮೊದಲಾದುವುಗಳು ಅವರಿಗೆ ಮನವರಿಕೆಯಾಗಿ ತಮ್ಮ ಹೊಣೆಗಾರಿಕೆಯು ಎಷ್ಟು ಗುರುತರವಾದುದು ಎಂಬುದನ್ನು ಅವರು ಮನಗಂಡು ಇನ್ನೂ ಹೆಚ್ಚಾಗಿ ಜಾಗೃತರಾದರು.

ಶ್ರೀಗುರುವರ್ಯರು ಸಂಭಾಷಣೆಯಲ್ಲಿ

ಜ್ಞಾನಸಿಂಹಾಸನದ ಸ್ವರೂಪದರ್ಶನ

ಮಠದ ಮುಖ್ಯಸ್ಥರಾದ ಗುರುಗಳು ಸರ್ವಸಂಗಪರಿತ್ಯಾಗಿ ಸಂನ್ಯಾಸಿಗಳು. ಆದರೆ ಅವರ ಧರ್ಮವು ಇತರ ಸಂನ್ಯಾಸಿಗಳ ಧರ್ಮಕ್ಕಿಂತ ಭಿನ್ನವಾಗಿದೆ.

ಸಂನ್ಯಾಸಿಗಳು ಸಾಮಾನ್ಯಧರ್ಮದಂತೆ ಪರಿವ್ರಾಜಕರಾಗಿರಬೇಕು. ಅವರ ದೆಂಬ ನಿವಾಸ, ಮಠ ಅವರಿಗಿರಬಾರದು. ಅವರು ನಿಂತಲ್ಲಿ ನಿಲ್ಲಬಾರದು. ಅವರು ದೇಶಪರ್ಯಟನೆ ಮಾಡುತ್ತಿರಬೇಕು. ಭಿಕ್ಷಾಟನೆಯಿಂದಲೇ ಜೀವನ ನಿರ್ವಹಿಸಬೇಕು. ಅವರು ಯಾವುದೇ ಆರ್ಥಿಕ ವ್ಯವಹಾರಗಳ ಕುರಿತು ಯೋಚಿಸಬಾರದು. ಅಂತಹ ವ್ಯವಹಾರಗಳಲ್ಲಿ ತೊಡಗಬಾರದು. ಅವರು ಸದಾ ವಿರಕ್ತರಾಗಿ ದೈವಚಿಂತನೆ ಅಥವಾ ಸ್ವಸ್ವರೂಪ ಚಿಂತನೆ ಮಾಡುತ್ತಾ ಅಷ್ಟಾಂಗ ಯೋಗದಲ್ಲಿ ಪರಿಣತರಾಗಿ ತಪೋನಿರತ ರಾಗಿರಬೇಕು. ಅಲ್ಲದೆ ಅವರು, ಅಪೇಕ್ಷಿಸಿದವರಿಗೆ ಬೋಧನೆಯನ್ನು ಮಾಡಬೇಕು.

ಆಹಾರ, ಆಶ್ರಯ ದೊರೆತಿತೆಂದು ಅವರು ಹಿಗ್ಗಬಾರದು. ದೊರೆಯಲಿಲ್ಲ ವೆಂದು ಕುಗ್ಗಬಾರದು. ಗೌರವ ಬಂತೆಂದು ಸಂತಸಪಡಬಾರದು; ಅಗೌರವವಾಯಿ ತೆಂದು ದುಃಖಿಸಬಾರದು. ಏನು ದೊರಕಿದರೂ ಭಗವತ್ ಪ್ರಸಾದವೆಂದು ಭಾವಿಸಿ, ನಿರ್ವಿಕಾರ ಬುದ್ಧಿಯಿಂದ ಆತ್ಮನಿಷ್ಠರಾಗಿರುವುದು ಅವರ ಧರ್ಮ.

ಅಂತಹ ಸಂನ್ಯಾಸಿಗಳಿಗೆ ಪರಿಜನರಿಲ್ಲ, ಅನುಯಾಯಿಗಳಿಲ್ಲ, ಪರಿಚಾರಕರಿಲ್ಲ, ಪರಿವಾರವಿಲ್ಲ. ಅವರಿಗೆ ಸೊತ್ತುಗಳನ್ನಿಟ್ಟುಕೊಳ್ಳುವ ಪೆಟ್ಟಿಗೆಯಿಲ್ಲ. ಸೊತ್ತುಗಳು ಮೊದಲೇ ಇಲ್ಲ. ಪಕೀಟು ಇಲ್ಲ, ದುಡ್ಡೂ ಇಲ್ಲ. ಯಾವ ಪ್ರತಿಕ್ರಿಯೆ ಬಂದರೂ ಅದು ಭಗವದಿಚ್ಛೆ ಎಂದು ಭಾವಿಸಿ, ಸದಾ ಪ್ರಸನ್ನಚಿತ್ತರಾಗಿ ಆತ್ಮನಿಷ್ಠರಾಗಿ ಇರು ವುದು ಅವರ ಧರ್ಮ.

ಇದು ಆತ್ಮಸಾಧನೆಗೆ ಅತ್ಯಂತ ಪರಣಾಮಕಾರಿಯಾದ ಮಾರ್ಗ. ಆದುದ ರಿಂದಲೇ ಜಾಗ್ರತ್, ಸ್ವಪ್ನ , ಸುಷುಪ್ತಿ ಎಂಬ ಮೂರು ಸ್ಥಿತಿಗಳಿಗೆ ಮೇಲಿನ ತುರೀಯ ಎಂಬ ನಾಲ್ಕನೆಯ ಸ್ಥಿತಿಯನ್ನು ಸದಾ ಅನುಭವಿಸಿಕೊಂಡು ಇರುವ ಜೀವನ್ಮುಕ್ತನ ಸ್ಥಿತಿಗೆ ಬರಲು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಎಂಬ ಮೂರು ಆಶ್ರಮಗಳಿಗೂ ಆಚೆಗಿನ ಅಂದರೆ ಶ್ರೇಷ್ಠವಾದ ಸಂನ್ಯಾಸಾಶ್ರಮದ ಸ್ಥಿತಿಗೆ ಬರಲೇಬೇಕು ಎಂಬುದು ಋಷಿವಾಕ್ಯ.

ಇಂತಹ ಸನ್ಯಾಸ ಸ್ವೀಕರಿಸಬೇಕೆಂಬ ಬಯಕೆ ಬರುವುದೇ ಧನ್ಯತೆಯ ಪರಾ ಕಾಷ್ಠೆ. ನಿಜವಾಗಿ ಸನ್ಯಾಸ ಸ್ವೀಕರಿಸುವುದು ಮಾನವ ಸ್ವಭಾವದ ಅತ್ಯಂತ ಶ್ರೇಷ್ಠ ಮಾದರಿ. ಅದರಿಂದ ಸಿಗುವ ಫಲವು ಅಮೃತದ ರಸಬಿಂದುಗಳು.

ಅಂತರಂಗದ ಗುಣ, ಯೋಗ್ಯತೆಗಳ ದೃಷ್ಟಿಯಿಂದ ಮಠಾಧಿಪತಿಗಳಾದ ಸಂನ್ಯಾಸಿಗಳಿಗೂ ಮೇಲಿನ ಮಾತು ಅನ್ವಯಿಸುವುದು. ಆದರೆ, ಬಾಹ್ಯವಾಗಿ ಲೌಕಿಕವಾಗಿ ಅವರ ಧರ್ಮವು ಸ್ವಲ್ಪ ಭಿನ್ನವಾಗಿದೆ.

ಜನರು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಸರಿಯಾದ ರೀತಿಯಲ್ಲಿ ಅಂದರೆ ವೇದೋಕ್ತವಾದ ರೀತಿಯಲ್ಲಿ ಆಚರಿಸುತ್ತಾರೋ ಎಂದು ನೋಡಿಕೊಂಡು, ತಪ್ಪುವವರನ್ನು ದಂಡನೀತಿಯಿಂದಾದರೂ ಸರಿದಾರಿಗೆ ಹಚ್ಚುವ ಹೊಣೆಗಾರಿಕೆಯೂ ಅವರಿಗಿದೆ. ಅಲ್ಲದೆ ಅವರು ಶಿಷ್ಯಕೋಟಿಗೆ ಸದಾಕಾಲ ಧರ್ಮಬೋಧನೆ ನೀಡಿ ಅವರು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಬೇಕು. ಅವರು ಆಗಾಗ ತಮ್ಮ ಶಿಷ್ಯರ ಮಧ್ಯದಲ್ಲಿ ಪಯಣ ಬೆಳೆಸಿ, ಅವರಿಗೆ ಲೌಕಿಕವಾದ ಹಾಗೂ ಧಾರ್ಮಿಕವಾದ ವಿಷಯಗಳಲ್ಲಿ ಕೂಡ ಮಾರ್ಗದರ್ಶನ ನೀಡಬೇಕು. ಅಲ್ಲದೆ, ವೈದಿಕ ವಿದ್ವಾಂಸರು ತಮ್ಮ ವೈದಿಕ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಪೂರೈಸಿ, ಅವರು ಸಮಾಜಕ್ಕೆ ಆಚಾರ್ಯರಾಗುವಂತೆ ನೋಡಿಕೊಳ್ಳಬೇಕು. ವೇದ ಪಾಠಶಾಲೆಗಳು, ಸಂಸ್ಕೃತ ಪಾಠಶಾಲೆಗಳು ಹಾಗೂ ಇತರ ವಿದ್ಯಾ ಸಂಸ್ಥೆಗಳನ್ನು ಅವರು ಪೋಷಿಸಬೇಕು. ಸಂನ್ಯಾಸಧರ್ಮವನ್ನು ಅನುಸರಿಸುವವರಿಗೆ ಸಮಾಜದ ಜನರು ಗೌರವ, ಪೋಷಣೆ, ಆಶ್ರಯ ಕೊಡುವಂತೆ ಮಾಡಬೇಕು. ಅಲ್ಲದೆ ವಿವಿಧ ಮಠಗಳಲ್ಲಿ ವೇದೋಕ್ತವಾದ ರೀತಿಯಲ್ಲಿ ಪೂಜೆ, ಅನುಷ್ಠಾನ ನಡೆದು ಆ ಮಠಗಳು ಜನತೆಯ ಅಭ್ಯುದಯವನ್ನು ಸಾಧಿಸಬಲ್ಲ ಶಕ್ತಿಯ ಕೇಂದ್ರಗಳಾಗಿರುವಂತೆ ಮಾಡಬೇಕು. ದಾರಿ ತಪ್ಪಿ, ನೀತಿ ತಪ್ಪಿ ನಡೆಯುವವರಿಗೆ ತಕ್ಕ ಶಿಕ್ಷೆ ನೀಡಿ, ಉಳಿದವರು ಅವರನ್ನು ಅನುಸರಿಸದಂತೆ ಮಾಡಬೇಕು.

ಈ ಕರ್ತವ್ಯಗಳಲ್ಲಿ ಸಹಜವಾಗಿಯೇ ಒಂದು ರಾಜಧರ್ಮವು ಅಡಗಿದೆ. ಆದುದರಿಂದ ಅವರಿಗೂ ಒಂದು ರಾಜದಂಡವಿದೆ.

ಈ ಬಗೆಯಲ್ಲಿ ಧರ್ಮಸ್ಥಾಪನೆ ಮಾಡಬೇಕಾದರೆ ಒಂದು ಆಡಳಿತ ಯಂತ್ರ ಬೇಕು, ಪರಿವಾರ ಬೇಕು, ಪರಿಜನರು ಬೇಕು, ಐಶ್ವರ್ಯ ಸಂಪಾದನೆಗೆ ಮೂಲವಾಗಿ ಆಸ್ತಿಪಾಸ್ತಿಗಳೂ ಬೇಕು.

ಆದುದರಿಂದ, ಮಠಾಧಿಪತಿಗಳು ಜೀವನ ಕ್ರಮದಲ್ಲಿ, ಅಂತರಂಗ ಸಾಧನೆಯಲ್ಲಿ ಸರ್ವಸಂಗ ಪರಿತ್ಯಾಗಿಗಳಾದರೂ ಪರಿವ್ರಾಜಕರಾಗಿ ಸುತ್ತುತ್ತಾ ಭಿಕ್ಷಾಟನೆಯಿಂದ ಜೀವನ ಮಾಡುವಂತಿಲ್ಲ.

ಅವರು ರಾಜರಂತೆ ಸಿಂಹಾಸನ, ಕಿರೀಟ, ಪಲ್ಲಕ್ಕಿ, ಆನೆ, ಕುದುರೆ, ವಾಹನ, ಛತ್ರ, ಚಾಮರ ಮೊದಲಾದ–ರಾಜೋಪಚಾರ ದೇವೋಪಚಾರ ಪಡೆಯಲು ಹಕ್ಕು

ಹಾಗೂ ಅಧಿಕಾರವುಳ್ಳವರಾಗಿದ್ದಾರೆ ಎಂಬುದು ಶ್ರೀಮದಾದ್ಯ ಶಂಕರಾಚಾರ್ಯರ ವಚನಗಳಿಂದ ತಿಳಿದುಬರುವುದು.

ಇಂತಹ ಬಾಹ್ಯ ವೈಭವದಿಂದ ಜನಸಾಮಾನ್ಯರ ಮೇಲೆ ಪ್ರಭಾವವಾಗಿ, ಅವರು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಲು ಹೆಚ್ಚು ಅನುಕೂಲವಾಗುವುದು ಎಂಬುದು ನಿಸ್ಸಂದೇಹ. ಈ ಧರ್ಮ ಸೂಕ್ಷ್ಮವನ್ನು ಸ್ವಾಮೀಜೀಯವರು ಚೆನ್ನಾಗಿ ಕರಗತಮಾಡಿಕೊಂಡು, ಅಷ್ಟಾಂಗಯೋಗದ ವಿಧ ವಿಧಾನಗಳನ್ನು ಚೆನ್ನಾಗಿ ತಿಳಿದು ಕೊಂಡು ಅಭ್ಯಸಿಸುವುದು, ಅನುಷ್ಠಾನ ಮಾಡುವುದು ಮತ್ತು ಸ್ವಸ್ವರೂಪಾನು ಸಂಧಾನನಡೆಸುವುದು ಮಾತ್ರವಲ್ಲದೆ, ಮಠದ ಲೌಕಿಕ ಶಕ್ತಿಯನ್ನೂ ಬೆಳೆಸುವುದು ಎಂಬ ಕಡೆಗೆ ಪ್ರಾಶಸ್ತ್ಯವನ್ನೂ ಆದ್ಯತೆಯನ್ನೂ ನೀಡಿದರು.

ಸಾಧಿಸಿದ ಮಹಾಕಾರ್ಯಗಳು

ಶ್ರೀಗಳವರು ಆಡಳಿತವನ್ನು ವಹಿಸಿಕೊಂಡ ಅನಂತರದ ಈ ಎರಡು ದಶಕಗಳಲ್ಲಿ ಅವರು ಸಾಧಿಸಿದ ಮಹಾಕಾರ್ಯಗಳು ಹಲವಾರು. ಅವೆಲ್ಲವನ್ನೂ ಕ್ರೋಡೀಕರಿಸು-ವುದು ಅಸಾಧ್ಯವಾದ ಮಾತು. ಶ್ರೀಗಳವರು ಯೋಚಿಸಿ ಸಾಧಿಸಿ ತೋರಿಸಿದ ಶಿಷ್ಯ ಜನೋಪಯೋಗಿಗಳಾದ ಕೆಲವು ಕಾರ್ಯಗಳ ಶಬ್ದಚಿತ್ರವೇ ಈ ಮುಂದಿನ ಭಾಗ.

ವಿದ್ಯಾನಾಂ ನಿಲಯಃ ಸಮಸ್ತ ಜಗತಾಂ ಸನ್ಮಾನಭಾಕ್ಸರ್ವದಾ
ಶಾಸ್ತ್ರಾಣಾಂ ನಿಧಿರೇಷ ಸರ್ವನಿಗಮಜ್ಞಾನಾಕರಃ ಶ್ರೀಕರಃ ।
ಏತಾದೃಗ್ಯತಿಪುಂಗವಸ್ತ್ರಿಭುವನೇ ನೋ ಜಾತು ದೃಷ್ಟಃ ಕ್ವಚಿತ್
ಆದ್ಯಶ್ಯಂಕರ ಏವ ನೂನಮುದಿತಃ ಶ್ರೀರಾಘವೇಂದ್ರಾತ್ಮನಾ ॥

ವಿದ್ಯಾಸಂಸ್ಥೆಗಳ ಸ್ಥಾಪನೆ ಹಾಗೂ ಪ್ರೋತ್ಸಾಹ

ಅಪೌರುಷೇಯವಾದ ವೇದದ ಆಧಾರದಲ್ಲಿ ಸನಾತನ ಧರ್ಮವು ನಿಂತಿದೆ. ಸನಾತನ ಧರ್ಮದ ಆಚರಣೆಯನ್ನು ಜನರು ಶ್ರದ್ಧೆಯಿಂದ ಮಾಡಿ ಜೀವನ ಸಾರ್ಥಕ್ಯ ಗೊಳಿಸುವುದರೊಂದಿಗೆ ಲೌಕಿಕವಾಗಿ ಸುಖ, ಶಾಂತಿ, ಸಮೃದ್ಧಿಗಳನ್ನು ಕೂಡಾ ಪಡೆದು ಕೊಳ್ಳಬೇಕೆಂದು ಎಲ್ಲ ಋಷಿಗಳ ಅಭಿಮತ. ಭಗವಾನ್ ಶಂಕರಾಚಾರ್ಯರು ಅದೇ ಉದ್ದೇಶದಿಂದ ಸನಾತನ ಧರ್ಮವನ್ನು ಪುನರುತ್ಥಾನಗೊಳಿಸುವುದಕ್ಕಾಗಿ ತಮ್ಮ ದಿವ್ಯ ಜೀವನವನ್ನು ಸಮರ್ಪಿಸಿದರು. ಜ್ಞಾನಸಿಂಹಾಸನವನ್ನೇರ್ಪಡಿಸಿ ಅದರಲ್ಲಿ ಸಂನ್ಯಾಸ ಸ್ವೀಕಾರ ಮಾಡಿದ ಯತಿವರೇಣ್ಯರನ್ನು ಆಚಾರ್ಯರನ್ನಾಗಿ ಸ್ಥಾಪಿಸಿ ಅವರ ಮೂಲಕ ಜನತೆಗೆ ಧರ್ಮಬೋಧೆ ದೊರೆತು ಅವರು ಸನಾತನ ಧರ್ಮವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಿ, ಜೀವಿಸುವಂತೆ ಮಾಡುವುದು ಪೂಜ್ಯಶಂಕರ ಭಗವತ್ಪಾದರ ಉದ್ದೇಶ.

ವೇದವು ಅನಾದಿ, ಅನಂತ, ಮಂತ್ರದ್ರಷ್ಟಾರರಾದ ಮಹರ್ಷಿಗಳು ಅಂತಹ ದಿವ್ಯ ವಾದ ವೇದವನ್ನು ಕಂಡುಕೊಂಡರು (discovered). ಅಥವಾ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಅವರು ತಮ್ಮ ತಪೋಬಲದಿಂದ ಭಗವದ್ವಾಣಿಯಾಗಿ ಬಂದ ವೇದವನ್ನು ಕೇಳಿದರು. ಆದುದರಿಂದಲೇ ಅದಕ್ಕೆ ಶ್ರುತಿ ಎಂಬ ನಾಮ ಬಂತು.

ವೇದವು ಭಗವಂತನ ಶಕ್ತಿಯ ಒಂದು ಕೇಂದ್ರಸ್ಥಾನ. ವೇದದ ಅಭ್ಯಾಸದಿಂದ ಅದರ ಪಠನದಿಂದ ಮತ್ತು ವೇದಕ್ಕನುಸಾರ ಜೀವನ ಮಾಡುವುದರಿಂದ ವ್ಯಕ್ತಿಯು ಪರಿಪುಷ್ಟಿಯನ್ನೂ ಶಕ್ತಿಯನ್ನೂ ಪೂರ್ಣತೆಯನ್ನೂ ಪಡೆಯುತ್ತಾನೆ. ವ್ಯಕ್ತಿಯ ಆತ್ಮವಿಕಸನದಿಂದ ಸಮಾಜವು ದಿವ್ಯತೆಯ ಸ್ವರೂಪವಾಗಿ ಮಾರ್ಪಡುವುದು.

ಧರ್ಮದ ಹಾಗೂ ಸನಾತನ ಧರ್ಮಾನುಯಾಯಿಗಳ ಶಕ್ತಿ ಎಂದರೆ ವೇದವನ್ನು ಜೀವನದಲ್ಲಿ ಅನುಷ್ಠಾನಗೊಳಿಸಿದ ಶಕ್ತಿ. ಆದುದರಿಂದಲೇ ಈ ಪವಿತ್ರವಾದ ವೇದದ ಆಧಾರದಲ್ಲಿ ಇಂದಿಗೂ ಜಗತ್ತಿನ ಸುಸಂಸ್ಕೃತ ವಿದ್ವಾಂಸರ ಕಣ್ಣು ಕೋರೈಸುವಂತಹ ಸರ್ವಾಂಗ ಸುಂದರವಾದ ಜೀವನವನ್ನು ನಡೆಸಲು ಭಾರತೀಯರಿಗೆ ಸಾಧ್ಯವಾಯಿತು.

ಹೀಗಿರಲು ಭಾರತೀಯರ ಅಶಕ್ತತೆ, ದುರ್ಬಲತೆ ಎಂದರೆ ವೇದವನ್ನು ಮರೆತು ವೇದಮಾತೆಯನ್ನು ಅಲಕ್ಷಿಸಿ ಬಂದ ದುರ್ಬಲತೆಯೇ ಆಗಿದೆ ಎಂಬುದು ನಿರ್ವಿವಾದ.

ದುರದೃಷ್ಟವಶಾತ್ ಇಂದು ಗ್ಲಾನಿಯ ಪಥದಲ್ಲಿರುವ, ಅಜ್ಞಾನರೂಪ ಅಂಧ-ಕಾರದಲ್ಲಿರುವ ನಮ್ಮ ಜನತೆಯನ್ನು, ಸಮಾಜವನ್ನು ಮೇಲಕ್ಕೆತ್ತಲು ವೇದವನ್ನು ಮತ್ತೆ ಅತ್ಯುನ್ನತ ಸ್ಥಾನದಲ್ಲಿ ಕುಳ್ಳಿರಿಸುವುದೇ ಸರಿಯಾದ ರಾಜಮಾರ್ಗ.

ವೇದವೇದಾಂತಗಳನ್ನು ಆಮೂಲಾಗ್ರವಾಗಿ ಅಧ್ಯಯನಮಾಡಿ ವ್ಯಾಖ್ಯಾನ-ವನ್ನೂ ಮಾಡಿಕೊಂಡು ವೇದದ ಒಂದು ಪ್ರಕಟನ ಸ್ವರೂಪವಾಗಿ ಮಾರ್ಪಟ್ಟ, ಶ್ರೀಮದ್ರಾಮಚಂದ್ರಾಪುರ ಮಠದ ಶ್ರೀಮದ್‌ರಾಘವೇಂದ್ರ ಭಾರತೀ ಸ್ವಾಮಿಗಳ-ವರು ವೇದದ ಪುನರುತ್ಥಾನವೇ ಮಠಾನುಯಾಯಿಗಳ ಹಾಗೂ ಇಡಿಯ ಧರ್ಮ ಬಾಂಧವರ ಪುನುರುತ್ಥಾನ ಕಾರಣ – ಎಂಬುದನ್ನು ಪೂರ್ತಿಯಾಗಿ ಮನಗಂಡರು. ಆದುದರಿಂದಲೇ ಪೂಜ್ಯ ಸ್ವಾಮೀಜೀಯವರು ಮಠದ ಆಡಳಿತನಿರ್ವಹಣೆ ಕೈಗೊಂಡ ಕೂಡಲೇ ವೇದದ ಪುನರುತ್ಥಾನಕ್ಕೆ ಕೈ ಹಚ್ಚಿದರು.

ವೇದದ ದಿವ್ಯ ಮಹತ್ತ್ವವನ್ನೂ ವೈದಿಕ ಧರ್ಮವನ್ನೂ ಆಚರಿಸಬೇಕಾದ ಅಗತ್ಯ ವನ್ನು ಅವರು ತಮ್ಮ ಶಿಷ್ಯ ಜನತೆಗೆ ಧಾರ್ಮಿಕ ಉಪನ್ಯಾಸಗಳ ಮೂಲಕ ಉಪದೇಶಿಸ-ತೊಡಗಿದರು. ಅಲ್ಲದೆ ಇಂದಿನ ಕಾಲಕ್ಕೆ ಅನುಗುಣವಾಗಿ ವೈದಿಕ ಧರ್ಮವನ್ನು ಹೇಗೆ ಆಚರಣೆಗೆ ತರಬಹುದೆಂಬುದನ್ನು ಅವರು ವಿವರಣಾತ್ಮಕವಾಗಿ ಹೇಳತೊಡಗಿದರು. ಶಿಷ್ಯ ಸಮಾಜದವರು ವೈದಿಕ ರೀತಿಯಲ್ಲಿ ಜೀವನ ಮಾಡುವಂತೆ ವ್ಯಯಕ್ತಿಕವಾಗಿಯೂ ಪ್ರೋತ್ಸಾಹಿಸತೊಡಗಿದರು. ಅಲ್ಲದೆ ವೈದಿಕ ಧರ್ಮವನ್ನು ಮನಃಪೂರ್ವಕವಾಗಿ ಆಚರಿಸುವ ಶಿಷ್ಯರ ಒಂದು ಕೇಂದ್ರಬಿಂದುವನ್ನು ತಯಾರಿಸಲು ಅವರು ನಿರ್ಣಯಿಸಿ-ದರು. ಈ ಕಾರಣಕ್ಕಾಗಿಯೇ ಅವರು ವಿವಿಧ ಜಿಲ್ಲೆಗಳಲ್ಲಿ ವಾಸಿಸುವ ಶಿಷ್ಯರ ಮಧ್ಯೆ ವ್ಯಾಪಕವಾಗಿ ಬಿಡುವಿಲ್ಲದೆ ಸಂಚರಿಸುತ್ತಾ ಉಪದೇಶನೀಡತೊಡಗಿದರು. ಇಂತಹ ಕಾರ್ಯಕ್ರಮಗಳ ಪರಿಣಾಮವಾಗಿ ಶಿಷ್ಯ ಸಮೂಹದಲ್ಲಿ ಒಂದು ತರದ ನವೀನ ಜಾಗೃತಿ ಮೂಡತೊಡಗಿತು ಎನ್ನಲಡ್ಡಿಯಿಲ್ಲ.

ವೇದಕ್ಕೆ ಇಂತಹ ಮಹತ್ತ್ವವನ್ನೂ ಆದ್ಯತೆಯನ್ನೂ ನೀಡಿದ ಸ್ವಾಮೀಜೀಯವರು ತಮ್ಮ ಹೃದಯದಲ್ಲಿ ವೇದಪಾಠಗಳಿಗೆ ವಿಶೇಷವಾದ ಪ್ರಾಧಾನ್ಯವನ್ನು ನೀಡತೊಡಗಿದರು. ಮೊದಲಿನಿಂದಲೇ ನಡೆದು ಬರುತ್ತಿದ್ದ ಅನೇಕ ವೈದಿಕ ಸಂಸ್ಕೃತ ಪಾಠಶಾಲೆಗಳಿಗೆ ಬಗೆಬಗೆಯ ರೀತಿಯಲ್ಲಿ ಪ್ರೋತ್ಸಾಹ ನೀಡಿ ಮಾರ್ಗದರ್ಶನವಿತ್ತು ಮತ್ತು ಅಗತ್ಯವಿದ್ದಾಗ ಸುವರ್ಣ ಮಂತ್ರಾಕ್ಷತೆಯನ್ನು ಕೂಡಾ ಅನುಗ್ರಹಿಸಿ ಜೀವಕಳೆ ತುಂಬಿದರು. ಅಲ್ಲದೆ ಅಲ್ಲಲ್ಲಿ ನವೀನವಾದ ವೈದಿಕಪಾಠಶಾಲೆಗಳನ್ನು ಸಂಸ್ಥಾಪಿಸಿ ವೇದಾಧ್ಯಯನಕ್ಕೆ ಇನ್ನಷ್ಟು ಅನುಕೂಲವನ್ನು ಒದಗಿಸಿಕೊಟ್ಟರು.

ಇಷ್ಟೇ ಅಲ್ಲದೆ ಶ್ರೀಗಳವರು ಆದರ್ಶಪ್ರಾಯರಾದ ವೈದಿಕ ವಿದ್ವತ್ತು ಪಡೆದ ಶಿಷ್ಯರ ಒಂದು ಸಮುದಾಯವನ್ನು ತಯಾರಿಸಿ ಅವರ ಮೂಲಕ ಸನಾತನ ವೈದಿಕ ಧರ್ಮದ ವಿಜಯ ವೈಜಯಂತಿಯನ್ನು ಎಲ್ಲೆಡೆಯಲ್ಲೂ ಹಾರಿಸಬೇಕೆಂದು ಬಯಸಿ-ದರು. ಅದಕ್ಕಾಗಿ ತೀರ್ಥಹಳ್ಳಿಯ ಶ್ರೀಮದ್ ರಾಮಚಂದ್ರಾಪುರ ಮಠವಲ್ಲಿಯೇ ಒಂದು ಸವೇದ ಸಂಸ್ಕೃತ ಪಾಠಶಾಲೆಯನ್ನು ತಮ್ಮ ಮಾರ್ಗದರ್ಶನದಲ್ಲೇ ನಡೆಸುವ ರೀತಿಯಲ್ಲಿ ಪ್ರಾರಂಭಿಸಿದರು. ಕೂಡಲೇ ಶಿಷ್ಯ ಮಂಡಲದ ಮೂಲೆ ಮೂಲೆಗಳಿಂದ ಅನೇಕರು ತಮ್ಮ ಮಕ್ಕಳನ್ನು ಈ ಪಾಠಶಾಲೆಗೆ ಸೇರಿಸಿದರು.

ತಮ್ಮಲ್ಲಿಯ ಪಾಠಶಾಲೆಯಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಯಾವುದೇ ತರದ ತೊಡಕು ತೊಂದರೆಗಳು ಉಂಟಾಗದಂತೆ ಶ್ರೀಗಳವರು ಸಕಲ ವ್ಯವಸ್ಥೆಗಳನ್ನು ಜಾಗರೂಕತೆಯಿಂದ ಮಾಡಿಸಿದರು. ವೇದಾಂತ, ಸಾಹಿತ್ಯ, ವ್ಯಾಕರಣ ಇತ್ಯಾದಿ ಶಾಸ್ತ್ರಗಳಲ್ಲಿ ಪಾರಂಗತರಾದ ವಿದ್ವಾನ್ ಶಂಕರ ಶಾಸ್ತ್ರಿಗಳು ಸೂರಿ, ವಿದ್ವಾನ್ ಕೆ. ಕೃಷ್ಣ ಶಾಸ್ತ್ರಿಗಳು, ವೇದಾಂತ ಶಿರೋಮಣಿ ಶ್ರೀ ಪರಕ್ಕಜೆ ಸುಬ್ರಾಯ ಭಟ್ಟರು ಮೊದಲಾದ ಪಂಡಿತರಿಗೆ ಆಶ್ರಯವನ್ನಿತ್ತು, ತಮ್ಮ ಪಾಠಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪಾಠಪ್ರವಚನಕ್ಕೆ ಅನುಕೂಲತೆಯನ್ನು ಏರ್ಪಡಿಸಿದರು.

ಸಾಹಿತ್ಯ, ತರ್ಕ (ನವೀನ ನ್ಯಾಯ), ಸಾಂಖ್ಯ ಮತ್ತು ವೇದಾಂತ ಇವುಗಳ ಅಧ್ಯಾಪನವನ್ನು ಸ್ವಾಮೀಜೀಯವರೇ ಸ್ವತಃ ಕೈಗೊಂಡರು. ವೈದಿಕ ವಿದ್ಯಾರ್ಥಿಗಳು "ಕೂಪಮಂಡೂಕ" ದಂತಾಗಬಾರದು – ಎಂಬ ಸದುದ್ದೇಶದಿಂದ ಪಾಠಪ್ರವಚನಗಳಲ್ಲಿ ಸ್ವಾಮೀಜೀಯವರು ವ್ಯಾವಹಾರಿಕ ವಿಷಯಸಂಯೋಜನೆ ಮಾಡುತ್ತಿದ್ದರು. ಕರ್ಕಶವಾದ ತರ್ಕಶಾಸ್ತ್ರ (ನವೀನ ನ್ಯಾಯ), ಮುಕ್ತಾವಲಿ, ದಿನಕರೀ ಸಹಿತವಾದ ಗ್ರಂಥಗಳಲ್ಲಿ ಕ್ರೋಡಪತ್ರ ಸಹಿತ ಸಾಮಾನ್ಯ ನಿರುಕ್ತಿ ಪರ್ಯಂತ, ವೇದಾಂತದಲ್ಲಿ ಗೀತಾ-ಭಾಷ್ಯ – ಉಪನಿಷದ್ಭಾಷ್ಯ – ಬ್ರಹ್ಮಸೂತ್ರ ಭಾಷ್ಯ, ಇವುಗಳಲ್ಲದೆ ಉದ್ಗ್ರಂಥಗಳಾದ ಲಘುಚಂದ್ರಿಕಾಸಹಿತ ಅದ್ವೈತಸಿದ್ಧಿ, ಸಿದ್ಧಾಂತ ಬಿಂದು ಇತ್ಯಾದಿ ಗ್ರಂಥಗಳ ವರೆಗಿನ ವಿವಿಧ ಶಾಸ್ತ್ರಗಳ ಅಧ್ಯಾಪನದಲ್ಲಿ ಸ್ವಾಮೀಜೀಯವರು ಸುಲಭ, ಸರಳ, ಸರಸ, ಆಕರ್ಷಕ ನಿರೂಪಣಾಕ್ರಮವನ್ನು ಅಳವಡಿಸಿಕೊಂಡಿರುವರು.

ಪಾಠದ ಮಧ್ಯದಲ್ಲಿ ಸ್ವಾಮೀಜೀಯವರು ಶಿಷ್ಯರ ಉಪಯೋಗಕ್ಕಾಗಿ ಚಿಕ್ಕ ಪುಟ್ಟ ವಿಚಾರ ಪರಿಪ್ಲುತ ಉಪನ್ಯಾಸಗಳನ್ನು ನೀಡುವ ಪರಿಪಾಠವನ್ನಿಟ್ಟುಕೊಂಡಿ- ದ್ದಾರೆ.

ಹೀಗೆ ಮಠದ ಶಾಲೆಯಲ್ಲಿ ಶ್ರೀಗಳವರ ದಿವ್ಯ ಮಾರ್ಗದರ್ಶನದಲ್ಲಿ ವೈದಿಕ ಸಂಸ್ಕೃತ ವಿದ್ಯಾಭ್ಯಾಸ ನಡೆಸಿ, ಬೆಳಕಿಗೆ ಬಂದ ಶಿಷ್ಯರು ಹಲವರು. ಅವರ ಪೈಕಿ ಕೆಲವರು ಸನ್ಮಾರ್ಗಾವಲಂಬಿಗಳಾಗಿ ಶ್ರೀಗಳವರ ವೈದಿಕ ಧರ್ಮ ಪ್ರಸಾರದ ಉದ್ದೇಶ ವನ್ನು ಕೆಲಮಟ್ಟಿಗೆ ಪೂರೈಸುತ್ತಿದ್ದಾರೆ.

ಇದಲ್ಲದೆ ಶ್ರೀ ಶ್ರೀಗಳವರು ಶಿಷ್ಯಮಂಡಲದಲ್ಲಿ ಅನೇಕ ಕಡೆ ಪಾಠಶಾಲೆಗಳನ್ನು ಸಂಸ್ಥಾಪಿಸಿದರು. ಹಾಗೂ ಹಿಂದೆ ಉಲ್ಲೇಖಿಸಿದಂತೆ ಮೊದಲೇ ಇದ್ದ ವೈದಿಕ ವಿದ್ಯಾ ಸಂಸ್ಥೆಗಳಿಗೆ ಪ್ರೋತ್ಸಾಹ, ನೆರವು, ಆಶೀರ್ವಾದಗಳನ್ನು ನೀಡಿ ವೈದಿಕ ವಿದ್ಯಾ ಪ್ರಸಾರ ಕಾರ್ಯವನ್ನು ಮುಂದುವರಿಸಿದರು.

ಕೆಳಗಿನ ನಿದರ್ಶನಗಳಿಂದ ಈ ಮಾತಿನ ಸ್ಪಷ್ಟೀಕರಣವಾಗುವುದು.

೧. ಶ್ರೀ ರಾಘವೇಂದ್ರ ಭಾರತೀ ಸಾಮವೇದ ಪಾಠಶಾಲೆ

(ಮುಗ್ವೆ, ಹೊನ್ನಾವರ ತಾಲೂಕು, ಉತ್ತರ ಕನ್ನಡ)

ಹೊನ್ನಾವರ ತಾಲೂಕಿನ ಮುಗ್ವೆ ಗ್ರಾಮದಲ್ಲಿ ಸ್ವಾಮೀಜೀಯವರ ದಿವ್ಯಹಸ್ತ ದಿಂದ ೧೯೫೩ರಲ್ಲಿ ಸಂಸ್ಥಾಪಿಸಲ್ಪಟ್ಟ ಈ ಪಾಠಶಾಲೆಯು ಈಗ ಸವೇದ ಸಂಸ್ಕೃತ ಪಾಠ ಶಾಲೆಯಾಗಿ ಮಾರ್ಪಾಡು ಹೊಂದಿದೆ. ಇದರಲ್ಲಿ ಸಾಮವೇದದೊಂದಿಗೆ ಇತರ ವೇದ ಗಳನ್ನು ಕಲಿಸುವ ವ್ಯವಸ್ಥೆಯಿದೆ. ಈ ವಿದ್ಯಾಸಂಸ್ಥೆಯಲ್ಲಿ ವೈದಿಕ ವಿದ್ಯಾದಾನದ ಕಾರ್ಯವು ಬಹು ಸಮರ್ಪಕವಾಗಿ ನಡೆಯುತ್ತಿದೆ. ಸಾಮವೇದ, ಯಜುರ್ವೇದ ಮತ್ತು ಸಂಸ್ಕೃತ ಅಭ್ಯಾಸವನ್ನು ಮಾಡುತ್ತಿರುವ ಅನೇಕ ವಿದ್ಯಾರ್ಥಿಗಳ ಉತ್ತಮ ಕೇಂದ್ರ ವಾಗಿ ಇದು ಮಾರ್ಪಡುತ್ತಿದೆ. ಇದರ ಬಗೆಗೆ ಒಂದು ಭವ್ಯ ಮಂದಿರವನ್ನು ನಿರ್ಮಾಣ ಮಾಡುವುದಕ್ಕಾಗಿ ನಿಧಿ ಸಂಗ್ರಹವಾಗುತ್ತಲಿದೆ. ಈ ಭವನದ ನಿರ್ಮಾಣಕ್ಕಾಗಿ ಭೂಮಿಯನ್ನು ದಾನ ಮಾಡಿದವರು ಈ ವಿದ್ಯಾ ಮಂದಿರದ ಸಮಿತಿಯ ಸದಸ್ಯರು. ಈ ಮಂದಿರದ ಶಿಲಾಸ್ಥಾಪನೆಗಾಗಿ ಸ್ವಾಮೀಜೀಯವರನ್ನು ಭಕ್ತಿಯಿಂದ ಪ್ರಾರ್ಥಿಸಿ ಕೊಂಡಿದ್ದಾರೆ. ಈ ಕಾರ್ಯವು ಬೇಗನೆ ನೇರವೇರಲಿದೆ ಎಂದು ನಿರೀಕ್ಷಿಸಬಹುದು.

೨. ವಿದ್ಯಾರಣ್ಯ ಸಂಸ್ಕೃತ ಪಾಠಶಾಲೆ

(ಕೆಕ್ಕಾರು, ಹೊನ್ನಾವರ ತಾಲೂಕು, ಉತ್ತರ ಕನ್ನಡ)

ಬ್ರಹ್ಮಶ್ರೀ ಕೆಕ್ಕಾರು ಶಿವಭಟ್ಟರಿಂದ ಮೊತ್ತಮೊದಲು ಈ ಪಾಠಶಾಲೆ ಸ್ಥಾಪಿಸಲ್ಪಟ್ಟಿತು. ಈಗ ಶ್ರೀ ವಿಶ್ವನಾಥ ಧರ್ಮ ವಿದ್ಯಾಪರಿಷತ್ತು ಈ ಪಾಠಶಾಲೆಯನ್ನು ಸುಸೂತ್ರವಾಗಿ ನಡೆಸುತ್ತಲಿದೆ. ಇದರ ಕಟ್ಟಡದ ವಿಸ್ತರಣೆಗೆ ಸ್ಥಳದ ಕೊರತೆ ಬಹಳ ಇತ್ತು. ಈ ಪರಿಷತ್ತಿನವರು ಸ್ಥಳದ ಕೊರತೆಯ ಕುರಿತಾಗಿ ಸ್ವಾಮೀಜೀಯವರಿಗೆ ನಿವೇದಿಸಿಕೊಂಡರು. ಆಗ ಶ್ರೀಗಳವರು ಕೆಕ್ಕಾರು ಶ್ರೀರಘೂತ್ತಮ ಮಠದ ಮುಂಭಾಗದ ಉಪ್ಪರಿಗೆಯ ವಿಶಾಲವಾದ ಸ್ಥಳವನ್ನು ತಾತ್ಕಾಲಿಕ ಉಪಯೋಗಕ್ಕಾಗಿ ಪಾಠಶಾಲೆಗೆ ನೀಡಿದ್ದಲ್ಲದೆ ಹೊಸ ಕಟ್ಟಡ ಕಟ್ಟಿಸುವ ಬಗೆಗೆ ಅವಶ್ಯವಿರುವ ಭೂಮಿಯನ್ನು ಕೂಡ ದಾನವಾಗಿ ನೀಡಿರುತ್ತಾರೆ. ಈಗಲೂ ಈ ಪಾಠಶಾಲೆ ಶ್ರೀಮಠವಲ್ಲಿಯೇ ಶ್ರೀಗಳವರ ದಿವ್ಯ ಮಾರ್ಗದರ್ಶನ ಪಡೆಯುತ್ತಾ ಧರ್ಮ ವಿದ್ಯಾ ಪ್ರಸಾರ ಮಾಡುತ್ತಿದೆ.

೧೯೭೨ ನೆಯ ಇಸವಿ ಮೇ ತಿಂಗಳಲ್ಲಿ ಸ್ವಾಮೀಜೀಯವರ ಹಿರಿತನದಲ್ಲಿ ಕರ್ನಾಟಕ ರಾಜ್ಯದ ಅಂದಿನ ಸನ್ಮಾನ್ಯ ಶಿಕ್ಷಣ ಸಚಿವರಾಗಿದ್ದ ಶ್ರೀ ಬದರಿನಾರಾಯಣ ಅಯ್ಯಂಗಾರ್ ಅವರ ನೇತೃತ್ವದಲ್ಲಿ ಈ ಪಾಠಶಾಲೆಯ ವಜ್ರಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಅನಂತರ ಶಾಲಾಭವನದ ಕೋನ ಶಿಲಾ ಸ್ಥಾಪನೆಯನ್ನು ಶ್ರೀಗಳವರು ತಮ್ಮ ದಿವ್ಯ ಹಸ್ತಗಳಿಂದ ನೆರವೇರಿಸಿದರು. ಧರ್ಮ ವಿದ್ಯಾಪ್ರಸಾರಕವಾದ ಉತ್ತಮ ವೈದಿಕ ವಿದ್ಯಾಸಂಸ್ಥೆ ಎಂದು ಹೆಸರು ಗಳಿಸಿದ ಈ ಪಾಠಶಾಲೆಗೆ ಭವ್ಯ ಭವಿಷ್ಯತ್ತು ಇದೆ.

ಈ ಕೆಳಗಿನ ಮೂರು ವೈದಿಕ ವೇದಪಾಠಶಾಲೆಗಳನ್ನು ಸ್ವಾಮೀಜೀಯವರು ಪ್ರೋತ್ಸಾಹಿಸುತ್ತಾ ನೆರವು ನೀಡುತ್ತಾ ಅವು ಯೋಗ್ಯ ಪಥದಲ್ಲಿ ಸಾಗುವಂತೆ ಮಾಡುತ್ತಿದ್ದಾರೆ.

೧. **ಸವೇದ ಸಂಸ್ಕೃತ ಪಾಠಶಾಲೆ** – ಕೇದಿಗೆ ಸರ ಭೀಮನ ಕೋಣೆ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ.

೨. **ಸಂಸ್ಕೃತ ಪಾಠಶಾಲೆ** – ಹಾಳತ ಕಟ್ಟೆ, ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ.

೩. **ಹಿರೇಮನೆ ಪಾಠಶಾಲೆ**–ತಾಳಗುಪ್ಪ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ.

ಇವುಗಳಲ್ಲದೆ ಇತರ ಕಡೆಗಳಲ್ಲಿ ಅಲ್ಲಲ್ಲಿ ನಡೆಯುತ್ತಿರುವ ಗುರುಕುಲ ಪದ್ಧತಿಯ ಅನೇಕ ವೈದಿಕ ವಿದ್ಯಾಪ್ರಸಾರಕ ಸಂಘ ಸಂಸ್ಥೆಗಳು ಶ್ರೀಗಳವರ ಸಕ್ರಿಯ ಸಹಾಯ ಆಶೀರ್ವಾದ ಪ್ರೋತ್ಸಾಹ – ಇತ್ಯಾದಿಗಳಿಂದ ಉತ್ತಮ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿವೆ.

ಅಲ್ಲದೆ ಶ್ರೀ ತೀರ್ಥಹಳ್ಳಿಯಲ್ಲಿರುವ ಶ್ರೀ ರಾಮಚಂದ್ರಾಪುರ ಮಠವಲ್ಲಿ ಪೂಜೆ ಸಮಯದಲ್ಲಿ ಪ್ರತಿದಿನ ವಿದ್ವಾಂಸರಿಂದ ವೇದಪಠನ ಕಾರ್ಯಕ್ರಮವೂ ನಡೆಯುತ್ತಿದ್ದು, ವಾತಾವರಣ ಹಾಗೂ ಭಜಕರ ಮನಸ್ಸು ಪಾವನವಾಗುವಂತೆ ಆಗುತ್ತಿದೆ.

ಶ್ರೀಗಳವರ ಸವಾರಿ ಚಿತ್ತೈಸಿದಲ್ಲೆಲ್ಲಾ ಮಠನ ವೈದಿಕ ವಿದ್ವಾಂಸರು ಜೊತೆ-ಯಲ್ಲಿಯೇ ಇದ್ದುಕೊಂಡು ವೇದಪಠನ ಕಾರ್ಯಕ್ರಮ ನಡೆಸಿಕೊಡುವುದರಿಂದ ವೇದದ ಮಹತ್ತ್ವವು ಜನರಿಗೆ ಮತ್ತೆ ಮತ್ತೆ ಮನದಟ್ಟಾಗುವಂತಾಗುತ್ತಿದೆ.

ದೇವಾಲಯುಗಳ ಜೀರ್ಣೋದ್ಧಾರ-ಪ್ರೋತ್ಸಾಹ

ಶಾಂತಸ್ವರೂಪ ವರವಿಪ್ರಸರೋಜಭಾಸ್ವನ್
ಶ್ರೀ ರಾಘವೇಂದ್ರ ಭವತಃ ಕರುಣಾಪ್ರಭಾವಾತ್ ।
ಸರ್ವೇ ಸ್ವಧರ್ಮ ನಿರತಾಸ್ಸಫಲೋದ್ಯಮಾಶ್ಚ
ನಿತ್ಯಂ ಭವೇಮ ಸುಖಿನೋ ಭವದೀಯ ಶಿಷ್ಯಾಃ ॥

ಭಾರತ ದೇಶದ ಉದ್ದಗಲದಲ್ಲಿ ಹರಡಿಕೊಂಡಿರುವ ಅಸಂಖ್ಯ ದೇವಾಲಯುಗಳನ್ನು ವೀಕ್ಷಿಸಿದಾಗ ಈ ದೇಶದಲ್ಲಿ ದೇವಾಲಯುಗಳಿಗೆ ಎಂತಹ ಉನ್ನತ ಸ್ಥಾನವಿತ್ತು ಎಂಬುದು ತಿಳಿಯುವುದು.

ಈ ದೇವಾಲಯುಗಳು ಆಗಮಶಾಸ್ತ್ರ ರೀತಿಯಲ್ಲಿ ರಚನೆಯಾಗಿದ್ದು ಭಗವತ್ ಶಕ್ತಿಯ ಕೇಂದ್ರಗಳಾಗಿವೆ. ಜನಸಾಮಾನ್ಯರು ಅಂತಹ ದೇವಾಲಯುಗಳಲ್ಲಿ ಮೂರ್ತಿಗಳ ಮೂಲಕವಾಗಿ ಭಗವಂತನನ್ನು ದರ್ಶಿಸಿ, ಭಜಿಸಿ, ಪೂಜಿಸಿ, ಶ್ರದ್ಧಾ ಭಕ್ತಿಗಳನ್ನು ಬೆಳೆಸಿಕೊಳ್ಳುತ್ತಿದ್ದರು. ಸಾಮಾಜಿಕ ಜೀವನದಲ್ಲಿ ದೇವಾಲಯುಗಳಿಗೆ ಬಹಳ ಹೊಂದಾಣಿಕೆಯ ಸ್ಥಾನವಿತ್ತು. ವಿಶೇಷ ಸಂದರ್ಭಗಳಲ್ಲಿ ಈ ದೇವ ಮಂದಿರ ಗಳಲ್ಲಿ ಊರಿನ ಜನರೆಲ್ಲಾ ಒಟ್ಟು ಸೇರಿ, ತಮ್ಮ ಸಾಮಾಜಿಕ ಸಂಘಟನೆಯನ್ನು ಬಲಪಡಿಸಿಕೊಳ್ಳುತ್ತಿದ್ದರು.

ಅಲ್ಲದೆ ಈ ದೇವಾಲಯುಗಳು ಭಕ್ತರ ಕಷ್ಟಗಳನ್ನು ಪರಿಹರಿಸುವ, ಮನೋ ಭೀಷ್ಟವನ್ನು ಪೂರೈಸುವ ಕಾಮಧೇನುಗಳಾಗಿವೆ. ನಮ್ಮ ಪ್ರಾಚೀನ ಸಂಸ್ಕೃತಿಯ ಭವ್ಯ ಪ್ರತೀಕಗಳಾಗಿ ಕಂಗೊಳಿಸುತ್ತಿವೆ.

ಆದರೆ, ಹೆಚ್ಚಿನ ದೇವಾಲಯುಗಳು ಕಾಲವಶದಿಂದ ಜೀರ್ಣವಾಗುತ್ತಿವೆ. ದೇವತಾ ಮಂದಿರಗಳ ಮೇಲೆ ಜನರಿಗೆ ಹಿಂದೆ ಇದ್ದ ಶ್ರದ್ಧೆ ಇಂದು ಇಲ್ಲ. ಭೂಮಿ ಇದ್ದ ದೇವಸ್ಥಾನಗಳಿಗೆ ಇಂದು ಗೇಣಿ ಸಿಗುತ್ತಿಲ್ಲ. ಜನರಿಂದ ಕಾಣಿಕೆ ಹಣವೂ ನಿರೀಕ್ಷಿತ ಮಟ್ಟದಲ್ಲಿ ಬರುತ್ತಿಲ್ಲ. ದೇವಸ್ಥಾನದ ಗುಡಿ ಗೋಪುರಗಳನ್ನು ಪುನರ್ರಚಿಸಿ ಅವು ಬಲಿಷ್ಠವೂ ಸುಂದರವೂ ಆಗುವಂತೆ ಮಾಡಲು ಧನಬಲವು ಜನರಿಂದ ಬರುತ್ತಿಲ್ಲ. ಪರಿಣಾಮವಾಗಿ ಕೆಲವು ದೇವಸ್ಥಾನಗಳು ಅತ್ಯಂತ ಚಿಂತಾಜನಕವಾಗಿವೆ. ಕೆಲವು ದೇವಾಲಯುಗಳಲ್ಲಿರುವ ವಿಗ್ರಹಗಳಿಗಂತೂ "ಸೂರ್ಯೋ ಜ್ಯೋತಿಃ ವಾಯುರ್ಧೂಪಃ ವೃಷ್ಟಿರಭಿಷೇಕಃ" ಎಂಬಂತಾಗಿದೆ. ಅಂದರೆ, ಅಂತಹ ವಿಗ್ರಹಗಳಿಗೆ ಸೂರ್ಯನೇ ದೀಪ, ವಾಯುವೇ ಧೂಪ, ಮಳೆಯೇ ಅಭಿಷೇಕ. ಇಂತಹ ಕರುಣಾಜನಕ ಪರಿಸ್ಥಿತಿ

ಯನ್ನು ನೋಡಿದಾಗ ಅಥವಾ ಅಂತಹ ವಾರ್ತೆ ಕೇಳಿದಾಗ ಸ್ವಾಮೀಜೀಯವರ ಮನಸ್ಸು ತುಂಬಾ ನೊಂದುಕೊಳ್ಳುವುದು.

ಅದಕ್ಕಾಗಿ ಸ್ವಾಮೀಜೀಯವರು ಹೋದ ಕಡೆಗಳಲ್ಲೆಲ್ಲಾ ಆ ಊರಿನ ದೇವಾಲಯಗಳು ಜೀರ್ಣೋದ್ಧಾರವಾಗುವುದಕ್ಕೆ ಭಕ್ತರೇ ಸಹಕರಿಸಬೇಕೆಂದು ಕರೆ ಕೊಡುತ್ತಿದ್ದಾರೆ. ವ್ಯಕ್ತಿಜೀವನಕ್ಕೂ ಸಾಮಾಜಿಕ ಜೀವನಕ್ಕೂ ದೇವಾಲಯಗಳ ಸ್ಥಾನ-ವೆಷ್ಟು ಮುಖ್ಯ ಎಂದು ಶಿಷ್ಯಜನರಿಗೆ ಮನ ಒಪ್ಪುವಂತೆ ಉಪದೇಶಿಸುತ್ತಾರೆ.

ನೂತನ ದೇವಾಲಯ ನಿರ್ಮಾಣ ಕಾರ್ಯಕ್ಕಿಂತ ಪುರಾತನ ಕಾಲದ ದೇವಾಲಯದ ಪುನರ್ನಿರ್ಮಾಣವು ಹೆಚ್ಚು ಅಗತ್ಯ ಹಾಗೂ ಶ್ರೇಯಸ್ಕರನೆಂದು ಮನಮುಟ್ಟು-ವಂತೆ ಬೋಧಿಸಿ ಶಿಷ್ಯರು ಸುಸಂಘಟಿತರಾಗಿ ಈ ಪವಿತ್ರ ಕಾರ್ಯಗಳನ್ನು ನೆರವೇರಿಸಿ ಪುಣ್ಯ ಭಾಜನರಾಗುವಂತೆ ಸ್ವಾಮೀಜೀ ಮಾಡುತ್ತಿದ್ದಾರೆ.

ಶ್ರೀಗಳವರಿಂದ ಹೀಗೆ ದಿವ್ಯ ಪ್ರಚೋದನೆ ಪಡೆದ ಶಿಷ್ಯ ಜನತೆ ಈ ಕುರಿತಾಗಿ ಜಾಗೃತರಾಗುತ್ತಿದ್ದಾರೆ. ಹಲವು ಕಡೆಗಳಲ್ಲಿ ಶಿಷ್ಯರು ಸುಸಂಘಟಿತರಾಗಿ ಯೋಜನೆ ಹಾಕಿಕೊಂಡು ತಮ್ಮ ಊರಿನ ಪ್ರಾಚೀನ ದೇವಾಲಯಗಳ ಪುನರ್ ನಿರ್ಮಾಣಕ್ಕೆ ಹಣ ಸಂಗ್ರಹಣೆಯನ್ನೂ ಮಾಡಿ ಶ್ರೀಗಳವರ ಆಶೀರ್ವಾದವನ್ನು ಪಡೆದುಕೊಂಡು ಮುಂದುವರಿಸುತ್ತಿದ್ದಾರೆ. ಹೀಗೆಯೇ ಕೆಲವು ಕಡೆಗಳಲ್ಲಿ ದೇವಾಲಯದ ಪುನರ್ನಿರ್ಮಾಣದ ಕಾರ್ಯವು ಪರಿಸಮಾಪ್ತಿಯಾಗಿದೆ; ಉಳಿದೆಡೆಗಳಲ್ಲಿ ಮುಂದುವರಿಯುತ್ತಿದೆ.

ಶ್ರೀಗಳವರ ಪ್ರೇರಣೆಯಿಂದ, ಪೋಷಣೆಯಿಂದ ಪುನಃ ನವೀನತೆಯನ್ನು ಹೊಂದಿ ಶೋಭಿಸುತ್ತಿರುವ ಅನೇಕ ದೇವಾಲಯಗಳಲ್ಲಿ ಈ ಕೆಳಗಿನವುಗಳ ವಿವರವನ್ನು ತಿಳಿಯಬಹುದು.

೧. ಬಟ್ಟೆ ವಿನಾಯಕ ದೇವಾಲಯ

(ಕೆಕ್ಕಾರು, ಹೊನ್ನಾವರ ತಾಲೂಕು, ಉತ್ತರ ಕನ್ನಡ)

ವಿಘ್ನಹರ್ತನೆಂದೂ ಭಕ್ತರ ಅಭೀಷ್ಟವನ್ನು ತ್ವರಿತವಾಗಿ ನೆರವೇರಿಸುವವನೆಂದೂ ಪ್ರಖ್ಯಾತನಾದ, ಸ್ವಯಂ ಉದ್ಭೂತನಾದ ಬಟ್ಟೆ ವಿನಾಯಕ ದೇವಾಲಯದ ಗರ್ಭಾ-ಗಾರ ಹಾಗೂ ಮುಖಮಂಟಪ – ಇವೆರಡೂ ಅತ್ಯಂತ ಜೀರ್ಣಾವಸ್ಥೆಯನ್ನು ಹೊಂದಿದ್ದವು. ಶ್ರೀಗಳವರು ಈ ದೇವಾಲಯದ ಗರ್ಭಗುಡಿಯ ಕಟ್ಟೋಣದ ಕಾರ್ಯವನ್ನು ಮೊತ್ತಮೊದಲು ನೆರವೇರಿಸುವಂತೆ ಮಾಡಿದರು. ಈಗ ಮುಖಮಂಟಪದ ಕಾರ್ಯವೂ ಶ್ರೀಗಳವರ ಮಾರ್ಗದರ್ಶನದಲ್ಲಿಯೇ ಪರಿಪೂರ್ಣತೆಯನ್ನು ಪಡೆದಿದೆ.

೨. ಈಶ್ವರ ದೇವಾಲಯ, ಬೇಳೂರು (ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ.)

ಕೆಳದಿ ಸೀಮೆಯ ಬೇಳೂರು ಗ್ರಾಮದ ಈಶ್ವರದೇವರ ಭಜಕರಲ್ಲಿ ಪರಸ್ಪರ ಹೊಂದಾಣಿಕೆಯಿಲ್ಲದೆ ಜಲಾಧಿವಾಸಿಯಾಗಿದ್ದ ಲಿಂಗರೂಪೀ ಈಶ್ವರ ಪುನಃ ಪ್ರತಿಷ್ಠಾ- ಪನೆಯನ್ನು ಹೊಂದಿರಲಿಲ್ಲ. ಭಜಕರಲ್ಲಿ ಅನ್ಯೋನ್ಯ ಸಂಘಟನೆಯುಂಟುಮಾಡಿ, ಶ್ರೀ ದೇವರ ಪ್ರತಿಷ್ಠಾಪನಾ ಕಾರ್ಯವನ್ನು ಶ್ರೀಗಳವರು ಸ್ವತಃ ಮುಂದೆ ನಿಂತು ತಮ್ಮ ದಿವ್ಯ ಹಸ್ತಗಳಿಂದ ನೆರವೇರಿಸಿ ಕೊಟ್ಟು, ಆ ಸೀಮೆಯ ಶಿಷ್ಯ ಸಮುದಾಯದಲ್ಲಿ ಏಕತೆಯೂ ಈಶ್ವರ ಭಕ್ತಿಯೂ ಇತೋಽಪ್ಯತಿಶಯವಾಗಿ ಸಂವರ್ಧಿಸುವಂತೆ ಮಾಡಿ ಅನುಗ್ರಹಿಸಿರುವರು.

೩. ಶ್ರೀ ರಾಮೇಶ್ವರ ದೇವಾಲಯ, ಇಟಗಿ
(ಸಿದ್ದಾಪುರ ತಾಲೂಕು, ಉತ್ತರ ಕನ್ನಡ.)

ಸಿದ್ದಾಪುರ ತಾಲೂಕಿನ ಬಿಳಗಿ ಸೀಮೆಯ ಇಟಗಿಯ ಶ್ರೀ ರಾಮೇಶ್ವರ ದೇವಾ- ಲಯ ಬಹು ಪ್ರಾಚೀನವಾದುದು. ತ್ರಿಕಾಲ ಬಲಿ, ಆಗಮೋಕ್ತ ದೇವತಾ ವಿನಿ- ಯೋಗಗಳು ಕಾಲಾನುಸಾರ ನಡೆಯುತ್ತಲಿರುವ ಪುಣ್ಯ ಕ್ಷೇತ್ರ. ಶ್ರೀ ದೇವರ ಭಜಕರಲ್ಲಿ ಪರಸ್ಪರ ಹೊಂದಾಣಿಕೆ ಕಡಿಮೆಯಾದ ಕಾರಣ ಸುಮಾರು ೧೨೦ ವರ್ಷಗ- ಳಷ್ಟು ದೀರ್ಘಕಾಲ ಪರ್ಯಂತ ಅಷ್ಟಬಂಧ ಕಾರ್ಯ ನಡೆಯಲಿಲ್ಲ. ಶ್ರೀಗಳವರು ಸಮಸ್ತ ಭಜಕರಿಗೂ ಸೂಕ್ತ ಬುದ್ಧಿವಾದ ಹೇಳಿ, ಯೋಗ್ಯ ತಿಳಿವಳಿಕೆಯನ್ನು ನೀಡಿ ಸಮಾಧಾನಗೊಳಿಸಿ ಉಪಯುಕ್ತ ಮಾರ್ಗದರ್ಶನ ಮಾಡಿದರು. ಅವರ ಫಲ ಸ್ವರೂಪವಾಗಿ ಶ್ರೀ ರಾಮೇಶ್ವರ ದೇವರ ಭಜಕರೆಲ್ಲರೂ ಒಂದಾಗಿ ಸೇರಿ ಶ್ರೀ ದೇವರ ಅಷ್ಟಬಂಧ, ಶಿಲಾಧ್ವಜ ಸ್ಥಾಪನೆ ಮುಂತಾದ ಅವಶ್ಯಕರಣೀಯ ದೇವತಾ ವಿನಿಯೋಗ ಗಳನ್ನು ಅಲ್ಪಾವಧಿಯಲ್ಲಿ ಶ್ರೀಗಳವರ ನೇತೃತ್ವದಲ್ಲಿ ಜರುಗಿಸಿದರಲ್ಲದೆ, ಶ್ರೀಗಳವರ ಅಡ್ಡಪಾಲಕಿ ಮೆರವಣಿಗೆ, (ತಿರ್ಯಗಾಂದೋಲಿಕಾ ಉತ್ಸವ) ಮತ್ತೀಯ ಸುವರ್ಣ ರತ್ನ ಖಚಿತ ಹಸ್ತದಿಂದ ನಿರ್ಮಿತ ಸಿಂಹಾಸನ ಪ್ರದರ್ಶನ – ಇತ್ಯಾದಿಗಳನ್ನು ಬಹು ವಿಜೃಂಭಣೆಯಿಂದ ನೆರವೇರಿಸಿ, ಶ್ರೀ ಗುರು ದೇವತಾಕೃಪೆಗೆ ಪಾತ್ರರಾಗುವಂತೆ ಪ್ರಚೋದಿತರಾದರು.

೪. ಶ್ರೀ ಮಹಾಗಣಪತಿ ದೇವಾಲಯ–ಇಡಗುಂಜಿ,
(ಹೊನ್ನಾವರ ತಾಲೂಕು, ಉತ್ತರ ಕನ್ನಡ.)

ಬ್ರಹ್ಮರ್ಷಿ ನಾರದರಿಂದ ಸಂಸ್ಥಾಪಿಸಲ್ಪಟ್ಟ ಇಡಗುಂಜಿ ಶ್ರೀಮಹಾ ಗಣಪತಿ ಮಹಿಮೆಯನ್ನು ಅರಿಯದವರಿಲ್ಲ. ದೇವಾಲಯದ ಧರ್ಮದರ್ಶಿಗಳಾದ ಡಾ|| ಜಿ. ಯನ್. ಸಭಾಹಿತ್, ಜಿಲ್ಲಾ ನ್ಯಾಯಾಧೀಶರಾದ ಜಿ. ಯನ್. ಸಭಾಹಿತ್

ಇವರ ಭಕ್ತಿ ಶ್ರದ್ಧಾ ಪುರಸ್ಸರವಾದ ಪರಿಶ್ರಮದ ಫಲವಾಗಿ ಪುನರ್ನೂತನವಾಗಿ ನಿರ್ಮಾಣಗೊಂಡು ಈ ದೇವಾಲಯು ಕಂಗೊಳಿಸುತ್ತಿದೆ. ಶ್ರೀ ಸಭಾಹಿತರ ಒತ್ತಾಯದ ಹೃತ್ಪೂರ್ವಕ ವಿಜ್ಞಾಪನೆಗೆ ಮನ್ನಣೆ ಕೊಟ್ಟು ಪೂಜ್ಯ ಸ್ವಾಮೀಜೀಯವರ್ು ಶ್ರೀ ದೇವಾಲಯು ಗೋಪುರ (ಶಿಖರ)ದ ಸುವರ್ಣ ಕಲಶಾರೋಹಣ ಸಮಾರಂಭಕ್ಕೆ ಬಿಜಯಂಗೈದು ಕಾರ್ಯಕ್ರಮವನ್ನು ಸುಗಮವಾಗಿ ನೆರವೇರಿಸಿಕೊಟ್ಟು ಅನುಗ್ರಹಿಸಿದರು.

೫. ಶ್ರೀ ಶಂಕರನಾರಾಯಣ ದೇವಾಲಯು – ಕಾನಮಠ, ಕೊಯಿಪಾಡಿ ಗ್ರಾಮ, ಕುಂಬಳೆ ಸೀಮೆ, ಕಾಸರಗೋಡು ತಾಲೂಕು, ಕೇರಳ.

ಗರ್ಭಗುಡಿ ಮಾತ್ರವಿದ್ದ ಈ ದೇವಾಲಯದ ಚಂದ್ರಶಾಲೆಯ ಅಭಿವೃದ್ಧಿಗೆ ಅದರ ಭಜಕರು ಒಂದುಗೂಡಿ ಪ್ರಯತ್ನಿಸುವಂತೆ ಸ್ವಾಮೀಜೀಯವರು ಪ್ರೇರಿಸಿ ಸುವರ್ಣಮಂತ್ರಾಕ್ಷತೆಗಳನ್ನು ಅನುಗ್ರಹಿಸಿದರು. ಚಂದ್ರಶಾಲೆಯ ಕೆಲವು ಭಾಗ ಸಿದ್ಧಗೊಂಡಿದ್ದು ಉಳಿದ ಭಾಗಗಳು ನಿರ್ಮಾಣವಾಗಿ ಸದ್ಯಃಪೂರ್ತಿಗೊಳ್ಳಲಿದೆ. ಆರ್ಥಿಕ ಸ್ಥಿತಿಯಲ್ಲಿ ಹಿಂದಿದ್ದ ಅಲ್ಪಸಂಖ್ಯೆಯ ಭಜಕರು ಶಕ್ತಿ ಮೀರಿ ಪ್ರಯತ್ನಿಸಿ ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ಈ ಕಾರ್ಯವನ್ನು ನೆರವೇರಿಸುತ್ತಿರುವುದು ಆದರ್ಶ ಹಾಗೂ ಗಮನಾರ್ಹ.

೬. ಶ್ರೀರಾಮೇಶ್ವರ ದೇವಾಲಯ, ರಾಮತೀರ್ಥ, ಹೊನ್ನಾವರ, ಉತ್ತರ ಕನ್ನಡ.

ಈ ದೇವಾಲಯು ಹೊನ್ನಾವರ ಪೇಟೆಯ ಸಮೀಪದಲ್ಲಿ ಎತ್ತರವಾದ ಗುಡ್ಡದ ಮೇಲೆ ಉತ್ತಮವಾದ ವಾತಾವರಣದಲ್ಲಿದೆ. ಇಲ್ಲಿ ಕೆಲವು ವರ್ಷ ಶ್ರೀಗಳವರ ಮುಕ್ಕಾಂ ಆಗಾಗ ಆಗುತ್ತಿತ್ತು. ಈ ಮಧ್ಯೆ ಉತ್ತರ ದಿಕ್ಕಿನ ಚಂದ್ರಶಾಲೆ ಹಾಗೂ ಸ್ವರ್ಗಾಶ್ರಮವೆಂಬ ಉಪಕಟ್ಟಡದ ರಚನೆ ವಗೈರೆ ನಡೆದಿರುವುದು ವಿಶೇಷ ಮಹತ್ತ್ವದ ಘಟನೆ.

ಇವಲ್ಲದೆ —

೭. ಶ್ರೀ ಶಂಕರನಾರಾಯಣ ದೇವಾಲಯು (ಚಂದ್ರಶಾಲೆ)— ಕುಂಟಿಕಾನ, ಪೆರಡಾಲ ಗ್ರಾಮ, ಕುಂಬಳೆಸೀಮೆ, ಕಾಸರಗೋಡು ತಾಲೂಕು, ಕೇರಳ.

೮. ಮಕ್ಕಿ ಉಮಾ ಮಹೇಶ್ವರ ದೇವಾಲಯ – ಹೊಸಕುಳಿ, ಹೊನ್ನಾವರ, ಉತ್ತರ ಕನ್ನಡ.

೯. ಶ್ರೀ ಸುಬ್ರಹ್ಮಣ್ಯ ದೇವಾಲಯ – ಮುಗ್ವೆ, ಹೊನ್ನಾವರ, ಉತ್ತರ ಕನ್ನಡ.

೧೦. ಉಪ್ಪಲೆ ಶ್ರೀ ಮಹಾಲಿಂಗೇಶ್ವರ ದೇವಾಲಯ – ಕಡೆ ಹೊನ್ನಾವರ, ಉತ್ತರ ಕನ್ನಡ.

೧೧. ಶ್ರೀ ಶಂಭುಲಿಂಗೇಶ್ವರ ದೇವಾಲಯ – ವಂದೂರು ಹೊನ್ನಾವರ, ಉತ್ತರ ಕನ್ನಡ.

೧೨. ಶ್ರೀ ಅನಂತಪದ್ಮನಾಭ ದೇವಾಲಯ (ಸರೋವರದ ಮಧ್ಯದಲ್ಲಿದೆ) ಅನಂತಪುರ–ಕುಂಬಳೆಸೀಮೆ, ಕಾಸರಗೋಡು ತಾಲೂಕು, ಕೇರಳ.

ಇವೇ ಮೊದಲಾದ ಅನೇಕ ದೇವಾಲಯಗಳು, ಚಂದ್ರಶಾಲೆಗಳು, ಗರ್ಭಾಗಾರ, ಮುಖಮಂಟಪಗಳು, ಶ್ರೀಗಳವರ ಪ್ರತ್ಯಕ್ಷ ಪರೋಕ್ಷಗಳಾದ ಸಹಾಯ, ಸಲಹೆ, ಪ್ರೋತ್ಸಾಹ, ಸಹಕಾರಗಳಿಂದ ಊರ್ಜಿತಾವಸ್ಥೆಯನ್ನು ಹೊಂದಿವೆ, ಹೊಂದುತ್ತಿವೆ.

ಮಠಾಯತನಗಳ ಪುನರ್ನಿರ್ಮಾಣ

ಪೂಜ್ಯ ಶಂಕರ ಭಗವತ್ಪಾದರು ಯೋಚಿಸಿದ ಹಿಂದೂ ಸಮಾಜದ ಪುನರ್ನಿರ್ಮಾಣದಲ್ಲಿ ಮಠಾಯತನಗಳಿಗೆ ತಮ್ಮದೇ ಆದ ವಿಶಿಷ್ಟ ಸ್ಥಾನಗಳಿವೆ. ಜನರನ್ನು ಸನ್ಮಾರ್ಗಕ್ಕೆ ಹಚ್ಚುವ, ಧರ್ಮಾಭಿಮಾನಿಗಳನ್ನಾಗಿ ಇರಗೊಳಿಸುವ ಮತ್ತು ಜನರು ದಾರಿತಪ್ಪದಂತೆ ಎಚ್ಚರಿಸುವ – ಕೇಂದ್ರಸ್ಥಾನಗಳೇ ಮಠಾಯತನಗಳು ಎಂದು ಹೇಳಬಹುದು. ಮಠನಿರ್ಮಾಣದ ಉದ್ದೇಶಗಳನ್ನು ಹೀಗೆ ಸಂಗ್ರಹಿಸಬಹುದು. —

೧. ಧರ್ಮಬೋಧನೆ ಮಾಡುವ, ಜ್ಞಾನ ಸಿಂಹಾಸನವನ್ನೇರಿದ ಪೀಠಾಧಿಪತಿಗಳಾದ ಯತಿವರೇಣ್ಯರ ನಿವಾಸಕ್ಕೆ ಅವಕಾಶಕೊಡುವುದು ಈ ಮಠಗಳ ಒಂದು ಪ್ರಧಾನ ಉದ್ದೇಶ. ಸ್ವಾಮಿಗಳವರು ಸಮಾಜದ ಜನರಲ್ಲಿ ಧರ್ಮ ಪ್ರಚಾರಕ್ಕಾಗಿ ಕೈಗೊಳ್ಳತಕ್ಕ ಸಂಚಾರದ ವೇಳೆಯಲ್ಲಿ ವಿರಮಿಸಲು ಹಾಗೂ ವಾಸಿಸಲು ಈ ಮಠಗಳು ಒಳ್ಳೆಯ ಕೇಂದ್ರಗಳು. ಒಂದೊಂದು ಹೋಬಳಿಯಲ್ಲಿ ಒಂದೊಂದಾದರೂ ಅಂತಹ ಮಠವಿದ್ದರೆ, ಸ್ವಾಮಿಗಳವರು ಆ ಹೋಬಳಿಗೆ ಸಂದರ್ಶನವೀಯಬೇಕೆಂದಾಗ ಆ ಮಠವನ್ನೇ ಸಂಚಾರದ ಕೇಂದ್ರಸ್ಥಾನವನ್ನಾಗಿ ಇಟ್ಟುಕೊಳ್ಳಲು ಬರುವುದು. ಶಿಷ್ಯರ ಆಗ್ರಹದ ಕೇಳಿಕೆಯ ಮೇರೆಗೆ ಅವರ ಮನೆಗಳಿಗೆ ಸಂದರ್ಶನ ನೀಡಿ ತಮ್ಮ ಪಾದಧೂಳಿಯಿಂದ ಆ ಮನೆಗಳನ್ನು ಪವಿತ್ರವಾಗಿಸಿ ಮನೆಯವರು ಶ್ರದ್ಧಾಭಕ್ತಿಗಳಿಂದ ನೀಡುವ ಭಿಕ್ಷವನ್ನು ಸ್ವೀಕರಿಸಿ, ಮತ್ತೆ ಮಠಕ್ಕೆ ತೆರಳಿ ಇತರ ಧಾರ್ಮಿಕ ಚಟುವಟಿಕೆಗಳನ್ನು ಬೆಳೆಸಲು ಅನುಕೂಲವಾಗಿರುವುದು. ತಮ್ಮ ಮನೆಗಳಿಗೆ ಪೀಠಾಧಿಪತಿಗಳನ್ನು ಕರೆ

ಸುವ ಪುಣ್ಯ ಹಾಗೂ ಸೌಭಾಗ್ಯಗಳಿಲ್ಲದ ಜನರು ಸಮೀಪವೇ ಇರುವ ಮಠಗಳಿಗೆ ಬಂದು ಸ್ವಾಮಿಗಳವರ ದರ್ಶನ, ಉಪದೇಶ, ಆಶೀರ್ವಾದ, ಅನುಗ್ರಹಗಳನ್ನು ಪಡೆದುಕೊಳ್ಳಲು ಇದರಿಂದ ಅನುಕೂಲವಾಗುವುದು. ಹೀಗೆ ಆ ಪ್ರಾಂತದ ಜನರು ತಮ್ಮ ಪೀಠಾಧಿಪತಿಗಳಿಂದ ಉತ್ತಮ ಧಾರ್ಮಿಕ, ಲೌಕಿಕ ಪ್ರಯೋಜನ ಪಡೆದು ಕೊಳ್ಳಲು ಇಂತಹ ಮಠಗಳು ಕೇಂದ್ರ ಸ್ಥಾನಗಳಾಗಿ ಪರಿಣಮಿಸುವುವು.

೨. ತಮ್ಮ ಸ್ವಗೃಹದಲ್ಲಿ ಉಪನಯನ ಮದುವೆ ಮುಂತಾದವುಗಳನ್ನು ಮಾಡಿ ಕೊಂಡು ತಮ್ಮ ಬಂಧುಮಿತ್ರರಿಗೆ ಮೃಷ್ಟಾನ್ನನೀಡಿ ಸಂತೃಪ್ತಿ ಪಡಿಸಲು ಅವಕಾಶವಿಲ್ಲ ದವರು ಒಟ್ಟಾಗಿ ಸೇರಿ ಸಾಮೂಹಿಕವಾಗಿ ಮಠಗಳಲ್ಲಿ ಪೂಜ್ಯ ಗುರುವರ್ಯರ ಸನ್ನಿಧಿ-ಯಲ್ಲಿ ಅಂತಹ ಕಾರ್ಯಕ್ರಮಗಳನ್ನು ನೆರವೇರಿಸಿ ಕರ್ತವ್ಯವನ್ನು ಪೂರ್ತಿಗೊಳಿಸುವ ಅವಕಾಶವಿದೆ. ಇದರಿಂದ ಸಮಾರಂಭಗಳ ವೆಚ್ಚಗಳು ಕಡಿಮೆಯಾಗುವುದಲ್ಲದೆ ಉಪನಯನ ವಟುಗಳಿಗೆ ಅಥವಾ ವಿವಾಹದ ವಧೂವರರಿಗೆ ಪೂಜ್ಯ ಗುರುವರ್ಯರ ಆಶೀರ್ವಚನವನ್ನು ಪಡೆದುಕೊಳ್ಳಲು ಅನುಕೂಲವಾಗುವುದು. ಇದು ಮಠಾಯ-ತನಗಳ ಇನ್ನೊಂದು ಮಹತ್ತ್ವ.

೩. ಮಠಗಳಲ್ಲಿ ಸಹಜವಾಗಿಯೇ ದೇವತಾಪ್ರತಿಮೆಗಳಿಗೆ ನಿತ್ಯ ನೈಮಿತ್ತಿಕವಾದಂತಹ ಪೂಜೆ ಪುನಸ್ಕಾರಗಳು ನಡೆದು ಅವುಗಳು ಶಕ್ತಿಯ ಕೇಂದ್ರಗಳಾಗುವುವು. ಅಲ್ಲದೆ, ಆಯಾ ಪ್ರಾಂತದ ಜನರ ಪರವಾಗಿ ಈ ಪುಣ್ಯ ಕಾರ್ಯಗಳು ನಡೆಯುವುದಾದ ಕಾರಣದಿಂದಾಗಿ ಅದರಿಂದಾಗುವ ಪ್ರಯೋಜನಗಳು ಅಲ್ಲಿರುವ ಎಲ್ಲಾ ಜನರಿಗೂ ದೊರೆಯುವುವು.

೪. ಒಂದೊಂದು ಪ್ರಾಂತದಲ್ಲಿರುವ ಸಮಾಜದ ಜನರೂ ಸಾಮಾನ್ಯವಾಗಿ ಒಟ್ಟುಸೇರಿ ಈ ಮಠಗಳ ರಚನೆಯಾಗಿರುವುದರಿಂದ ಅವುಗಳು ಘನತೆಯ ಕೇಂದ್ರಗಳು, ಮಠಕಟ್ಟಡಗಳ ನವ್ಯತೆ ಭವ್ಯತೆಗಳು ಶಿಷ್ಯಜನತೆಯ ಕರ್ತವ್ಯಪ್ರಜ್ಞೆಯ ದೂರ ದೃಷ್ಟಿಯ ಹಾಗೂ ಆಢ್ಯತೆಯ ಪ್ರತೀಕಗಳು.

೫. ಇಂತಹ ಮಠಗಳಲ್ಲಿ ಸಮಾಜದ ಜನರು ಆಗಾಗ ಒಟ್ಟು ಸೇರಿ ವಿಚಾರ ವಿನಿಮಯ ಮಾಡಿಕೊಂಡು ಪರಸ್ಪರ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡು ತಮ್ಮ ಸಂಘಟನೆಯನ್ನು ಬೆಳೆಸಿಕೊಳ್ಳಲು ಅವಕಾಶವಾಗುವುದು.

ಈ ಎಲ್ಲಾ ವಿಷಯಗಳನ್ನು ಪೂರ್ತಿಯಾಗಿ ಮನಗಂಡ ಪೂಜ್ಯ ಸ್ವಾಮೀಜೀಯವರು ಹವ್ಯಕ ಸಮಾಜವು ಹಬ್ಬಿಕೊಂಡಿರುವ ವಿವಿಧ ಪ್ರದೇಶಗಳಲ್ಲಿರುವ ಹಲವು ಮಠಗಳ ಸ್ಥಿತಿಗಳಿಗೆ ಬಹಳ ಹೆಚ್ಚಿನ ಮಹತ್ತ್ವವನ್ನು ಕೊಡತೊಡಗಿದರು. ಇಂತಹ ಹಿನ್ನೆಲೆಯಿಂದ ಈ ಮಠದ ಕಟ್ಟಡಗಳನ್ನು ನೋಡಿದಾಗ ಅವು ಬಹಳ ಜೀರ್ಣಾವಸ್ಥೆ

ಯಲ್ಲಿ ಸಶಿಸುತ್ತಿದ್ದು ಈ ಸಮಾಜವು ಪತನದ ಹಾಗೂ ವಿನಾಶದ ದಾರಿಯಲ್ಲಿದೆ ಎಂದು ಕೂಗಿ ಕೂಗಿ ಕರೆಯುತ್ತಿರುವಂತೆ ಅವರಿಗೆ ಭಾಸವಾಗಿರಬೇಕು.

ಆದುದರಿಂದಲೇ ಈ ಪರಿಸ್ಥಿತಿಯಿಂದ ಅವರು ಬಹಳ ಕಳವಳಕ್ಕೀಡಾದರು. ತಮ್ಮಲ್ಲಿರುವ ದಿವ್ಯತೆ, ಶಕ್ತಿ, ಬುದ್ಧಿ, ಸಾಮರ್ಥ್ಯ, ಮುಂದಾಲೋಚನೆ, ವಿಚಕ್ಷಣತೆ, ಪರೇಂಗಿತಜ್ಞತೆ, ಮಾನವ ಸ್ವಭಾವದರ್ಶನ ಮತ್ತು ವಾಕ್‌ಶಕ್ತಿ ಇವುಗಳನ್ನು ಉಪಯೋಗಿಸಿಕೊಂಡು ಬೇರೆಬೇರೆ ಕಡೆಗಳಲ್ಲಿರುವ ಶಿಷ್ಯ ಸಮಾಜದ ಜನರನ್ನು ಕರ್ತವ್ಯ ನಿಷ್ಠತೆಯೆಡೆಗೆ ಜಾಗೃತಗೊಳಿಸಿದರು. ತಮ್ಮ ಪ್ರವೇಶದ ಮಠದ ನಾಶ ಎಂದರೆ ತಮ್ಮ ಸಮಾಜದ ನಾಶ ಎಂಬುವನ್ನು ಮನಗಾಣಿಸಿದರು. ಅವರನ್ನು ಹುರಿ-ದುಂಬಿಸಿ, ಪ್ರೋತ್ಸಾಹಿಸಿ ಧೈರ್ಯತುಂಬಿ ಮಠಗಳ ಪುನರ್ನಿರ್ಮಾಣಕ್ಕೆ ಆ ಸಮಾಜದ ಮುಖಂಡರು ಕಂಕಣಬದ್ಧರಾಗುವಂತೆ ಮಾಡತೊಡಗಿದರು.

ಹೀಗೆ ಸ್ವಾಮೀಜೀಯವರ ನೇತೃತ್ವದಲ್ಲಿ ಬೇರೆಬೇರೆ ಕಡೆಗಳಲ್ಲಿ ಸಭೆಗಳು ನಡೆದು ಮಠಗಳ ಪುನರ್ನಿರ್ಮಾಣಕ್ಕೆ ಯೋಜನೆಗಳು ಸಿದ್ಧವಾದುವು. ಸ್ವಾಮೀಜೀಯವರ ನೇತೃತ್ವದಲ್ಲಿ ಧನಸಂಗ್ರಹ ಕಾರ್ಯಗಳು ಪ್ರಾರಂಭವಾದುವು. ಕಟ್ಟಡದ ಪುನಾರಚ-ನೆಯ ಕಾರ್ಯಗಳು ಭರದಿಂದ ನಡೆದವು. ಸ್ವಲ್ಪವೇ ಸಮಯದಲ್ಲಿ ಸಮಾಜದ ಭವ್ಯತೆಯ ಲಕ್ಷಣಗಳೆಂಬಂತೆ ಮಠದ ಹೊಸಕಟ್ಟಡಗಳು ತಲೆಯೆತ್ತಿ ನಿಂತವು.

ಯಾವುದೇ ಪೀಠಾಧಿಪತಿಯು ಇಡಿಯ ಜೀವಮಾನ ಕಾಲದಲ್ಲಿ, ಇಂಥ ಒಂದೇ ಒಂದು ಕಟ್ಟಡವನ್ನು ರಚಿಸುವುದು ದುಸ್ತರವೆಂದು ಕಾಣುವ ಸಂದರ್ಭದಲ್ಲಿ, ಪೂಜ್ಯ ಸ್ವಾಮೀಜೀಯವರು ಕೇವಲ ಎರಡು ದಶಕಗಳಲ್ಲಿ ಹಲವಾರು ಮಠಗಳನ್ನು ಈ ರೀತಿಯಲ್ಲಿ ಪುನಾರಚಿಸಲು ಶಕ್ತರಾದರು. ಇದು ಕೇವಲ ಲೌಕಿಕ ಶಕ್ತಿಯು ಮಾತ್ರವಲ್ಲ. ಇದರ ಹಿನ್ನೆಲೆಯಲ್ಲಿ ಒಂದು ದೈವೀ ಶಕ್ತಿಯೇ ಅಡಗಿದೆ.

ಪುನರ್ನೂತನವಾಗಿ ರೂಪುಗೊಂಡು ಭವ್ಯವಾಗಿ ಕಂಗೊಳಿಸುವ ಮಠಾಯತನಗಳಿವು :

೧. ಶ್ರೀ ರಘೂತ್ತಮಮಠ – ಗೋಕರ್ಣ ಕ್ಷೇತ್ರ, ಕುಮಟೆ ತಾಲೂಕು, ಉತ್ತರ ಕನ್ನಡ.

ಶ್ರೀ ಮದಾದ್ಯಶಂಕರಾಚಾರ್ಯರಿಂದ ಸಂಸ್ಥಾಪಿಸಲ್ಪಟ್ಟ ನಮ್ಮ ಈ ಪ್ರಪ್ರಥಮ ಮಠದ ಕಟ್ಟಡವು ಕಾಲವಶದಿಂದ ಬಹು ಜೀರ್ಣವಾಗಿತ್ತು. ಈ ಮಠಕ್ಕೆ ಸಂಬಂಧಪಟ್ಟ ಕುಮಟಾ ತಾಲೂಕು – ಹರೀಟಿ – ಹಾಗೂ ಮಿರ್ಜಾನ ಸೀಮೆಗಳ ಶಿಷ್ಯ ಸಮೂಹದ ವಿಶೇಷ ಸಹಾಯ ಸಹಕಾರಗಳಿಂದ ಗರ್ಭಾಗಾರದ ವಿಶೇಷ ಗೋಪುರದ ಕಟ್ಟೋಣದೊಂದಿಗೆ ಈ ಮಠದ ಕಟ್ಟಡವನ್ನು ಪುನರ್ನೂತನವಾಗಿ ಕ್ರಿ. ಶ. ೧೯೫೬ ರಲ್ಲಿ ಶ್ರೀಗಳವರು ನಿರ್ಮಾಪಿಸಿದರು.

೨. ಶ್ರೀರಘೂತ್ತಮ ಮಠ – ಕೆಕ್ಕಾರು, ಹೊನ್ನಾವರ ತಾಲೂಕು, ಉತ್ತರ ಕನ್ನಡ.

ಶ್ರೀಮಚ್ಛಂಕರಾಚಾರ್ಯರಿಂದ ೧೧ನೆಯ ಗುರುಗಳವರಾದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳವರ ಕಿರಿಯ ಶಿಷ್ಯರಾದ ಶ್ರೀ ರಘೂತ್ತಮ ಭಾರತಿಗಳವರಿಂದ ಕೆಕ್ಕಾರಿನಲ್ಲಿ ಸಂಸ್ಥಾಪಿತರಾದ ಈ ಮಠವು ಶ್ರೀ ರಘೂತ್ತಮ ಮಠವೆಂದೇ ಪ್ರಸಿದ್ಧಿಗೆ ಬಂದಿದೆ ಈ ಮಠದ ಕಟ್ಟಡವೂ ಗರ್ಭಗುಡಿಯೂ ಬಹು ಹಳೆಯವಾಗಿದ್ದುವು. ಗರ್ಭಗುಡಿಯನ್ನು ನವೀನವಾಗಿ ನಿರ್ಮಿಸುವುದರೊಂದಿಗೆ ಶ್ರೀ ಮಠದ ಮೂರು ಭಾಗದ ಚಂದ್ರಶಾಲೆಗಳನ್ನೂ ಹೊಸತಾಗಿ ಉತ್ತಮ ರೀತಿಯಿಂದ ನಿರ್ಮಾಣಮಾಡಿಸಿದವರು ಶ್ರೀ ಗಳವರು. ಮುರಿದು ಬೀಳುವಂತಿದ್ದ ಗುರುಮೂರ್ತಿ ಭವನದ ಕಟ್ಟೋಣದ ಕಾರ್ಯವೂ ಇವುಗಳ ಜೋತೆಗೇ ನೇರವೇರಿತು. ಅವಶ್ಯಕವಾದ ದೇವತಾಕಾರ್ಯಗಳೊಂದಿಗೆ ಗುರುಮೂರ್ತಿಗಳ ಸಂಸ್ಥಾಪನಾಕಾರ್ಯವೂ ಜರುಗಿತು.

"ಈ ಮಠದ ಕಟ್ಟಡದ ಪುನರ್ನಿರ್ಮಾಣ ಕಾರ್ಯದಲ್ಲಿ ಸಾಂಪತ್ತಿಕ ಸ್ಥಿತಿಯಲ್ಲಿ ಹಿಂದಿರುವ ಶಿಷ್ಯ ಜನರು ಭಕ್ತಿಭಾವದಿಂದ ನೀಡಿದ ವಿಶೇಷ ಆರ್ಥಿಕ ಸಹಾಯ, ಸಲ್ಲಿಸಿದ ಸೇವೆ ಸಹಕಾರಗಳು ಸಂಸ್ಮರಣೀಯ" ಎಂಬುದು ಶ್ರೀಗಳವರ ತುಂಬು ಮನದಿಂದ ಹೊರಹೊಮ್ಮಿದ ಮೆಚ್ಚುಗೆಯ ನುಡಿ.

೩. ಶ್ರೀ ಕೃಷ್ಣಾನಂದ ಮಠ – ಸಂತೆಕಟ್ಟೆ, ಹೊಸನಗರ.

ನಗರ ಹೋಬಳಿ ಕಬ್ಬುನಾಡು ಸೀಮೆಯ ಕೊಡಚಾದ್ರಿಯ ಸಮೀಪದಲ್ಲಿ ಈ ಮಠವಿದೆ. ಮೊದಲು ಇಲ್ಲಿ ಪ್ರತ್ಯೇಕ ಗುರುಪರಂಪರೆಯೂ ಇತ್ತು. ಕ್ರಿ.ಶ. ೧೯೪೮ ರಲ್ಲಿ ಈ ಮಠದ ಕೊನೆಯ ಸ್ವಾಮಿಗಳು ಬ್ರಹ್ಮೀಭೂತರಾದಾಗ ಉತ್ತರಾಧಿಕಾರಿಗಳು ಯಾರೂ ಇಲ್ಲದ ಕಾರಣ, ಆಗಿನ ಮೈಸೂರು ಸರಕಾರ ಮಠದ ಅಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡಿತ್ತು.

ಕ್ರಿ. ಶ. ೧೯೫೨ನೆಯ ಎಪ್ರಿಲ್ ತಿಂಗಳಲ್ಲಿ (ನಂದನ ಸಂವತ್ಸರದ ಚೈತ್ರ ಮಾಸ) ಶ್ರೀಗಳವರ ಪ್ರಭಾವ, ಪ್ರಯತ್ನಗಳ ಫಲಸ್ವರೂಪವಾಗಿ ಶಿಷ್ಯ ಜನತೆಯ ಪ್ರಾರ್ಥನೆಯ ಮೇರೆಗೆ ಘನ ಸರಕಾರದವರು ಯಾವತ್ತೂ ಸ್ಥಿರ ಚರ ಆಸ್ತಿಗಳ ಜೊತೆಗೆ ಈ ಮಠದ ಆಡಳಿತವನ್ನು ಶ್ರೀಗಳವರಿಗೆ ವಹಿಸಿಕೊಟ್ಟರು.

ಹರುಕು ಮುರುಕಾಗಿದ್ದ ಈ ಮಠದ ಗರ್ಭಾಗಾರವನ್ನು ಶ್ರೀಗಳವರು ನೂತನವಾಗಿ ನಿರ್ಮಾಣ ಮಾಡಿಸಿದರು. ಘನಾಂತ ವೇದಾಧ್ಯನ ಸಂಪನ್ನರಾದ ಮಂಗಳೂರು ಹೋಬಳಿ, ವಿಟ್ಲ ಸೀಮೆಯ ಕನ್ಯಾನ ಗ್ರಾಮದ ಚೆಂಬರ್ಪು ಶ್ರೀ ಶಂಕರನಾರಾಯಣ

ಘನಪಾಠಿಗಳಿಗೆ ಅಲ್ಲಿ ಆಶ್ರಯವಿತ್ತು, ಪೂಜಾ ವಿನಿಯೋಗಗಳು ಸುಸಂಬದ್ಧವಾಗಿ ನೆರವೇರುವ ಏರ್ಪಾಡು ಮಾಡೋಣಾಗಿದೆ.

೮. ಕೇದಿಗೆ – ಭಾನ್ಕುಳಿ ಸಂಯುಕ್ತ ಮಠ, ಸಿದ್ದಾಪುರ ತಾಲೂಕು, ಉ. ಕನ್ನಡ.

ಸಿದ್ದಾಪುರ ಪಟ್ಟಣದಿಂದ ಸುಮಾರು ನಾಲ್ಕು ಮೈಲಿ ದೂರವಲ್ಲಿರುವ ಈ ಮಠವು ಬಿಳಗಿ ಸೀಮೆಯಲ್ಲಿದೆ. ಈ ಮಠದ ಶಿಷ್ಯ ಸಮಾಜದವರು ಸಾಹಿತ್ಯ, ಸಂಸ್ಕೃತಿ, ಕಲೆಗಳಲ್ಲಿ ವಿಶೇಷಾಭಿರುಚಿಯಿರುವವರು. ಗುರುಪೀಠವಲ್ಲಿ, ಅದರಲ್ಲಿಯೂ ಹೆಚ್ಚಾಗಿ ಪ್ರಕೃತ ಶ್ರೀಗಳವರ ಬಗೆಗೆ ವಿಶೇಷ ಅಭಿಮಾನ, ಭಕ್ತಿ ಶ್ರದ್ಧೆಗಳನ್ನು ತಳೆದವರು. ಅವರು ಸಮಾಜ ಸಂಘಟನಾ ಪ್ರಿಯರು, ಹಾಗೂ ಸ್ವಾಭಿಮಾನಿಗಳು. "ಈ ಮಠವನ್ನು ಪೂಜ್ಯ ಸ್ವಾಮೀಜೀಯವರಿಗೆ ಸಮರ್ಪಿಸಿದರೆ ಉತ್ತಮವಾದೀತು. ಮಠದ ಮುಂದಿನ ಅಭ್ಯುದಯಕ್ಕೂ ಒಳಿತಾದೀತು" ಎಂದು ಅವರೆಲ್ಲರೂ ಒಮ್ಮತದಿಂದ ತೀರ್ಮಾನಿಸಿದರು.

ಹಿಂದಿನ ಪದ್ಧತಿಗನುಸಾರವಾಗಿ ಪೂಜ್ಯ ಸ್ವಾಮೀಜೀಯವರು ಆ ಸೀಮೆಯ ಸಂಚಾರ ಕೈಗೊಂಡಾಗ ಈ ಮಠದ ಶಿಷ್ಯ ಸಮಾಜದವರು ತಮ್ಮ ನಿರ್ಣಯಕ್ಕನುಸರಿಸಿ ಪೂಜ್ಯ ಸ್ವಾಮೀಜೀಯವರ ಪಾದಗಳಿಗೆ ಕ್ರಿ. ಶ. ೧೯೫೪ನೇ ಫೆಬ್ರವರಿಯಲ್ಲಿ ಮಠವನ್ನು ಸಮರ್ಪಿಸಿದರು. ಈ ಮಠದ ಪ್ರಧಾನ ದೇವರು "ಸೀತಾಲಕ್ಷ್ಮಣಸಹಿತ ಶ್ರೀರಾಮಚಂದ್ರ" ಎಂಬುದು ಮಹತ್ತ್ವದ ವಿಷಯವಾಗಿದೆ.

ಈ ಮಠದ ಕಟ್ಟಡವು ಹಳೆಯದಾಗಿತ್ತು. ಈ ಸೀಮೆಯ ಶಿಷ್ಯರು ತಮ್ಮ ಸಾಂಪತ್ತಿಕ ಅನುಕೂಲತೆಗೆ ಮೀರಿ ಸಲ್ಲಿಸಿದ ಆರ್ಥಿಕ ಸೇವೆ, ಸಹಾಯ ಹಾಗೂ ವಿಶೇಷವಾದ ನೆರವಿನಿಂದ ಪೂಜ್ಯ ಸ್ವಾಮೀಜೀಯವರ ನೇತೃತ್ವದಲ್ಲಿ ಮಠದ ಕಟ್ಟಡ ಭವ್ಯವಾಗಿ ಮೈದಳೆದು ಹೊಸ ರೂಪ ಧರಿಸಿ, ಎಲ್ಲರ ಕಣ್ಮನಗಳನ್ನೂ ತನ್ನೆಡೆಗೆ ಆಕರ್ಷಿಸುತ್ತಾನಿಂತಿದೆ. ಸೌಮ್ಯಸಂವತ್ಸರದ ವೈಶಾಖಶುದ್ಧ ಪಂಚಮಿಯಂದು ಶ್ರೀಶಂಕರ ಜಯಂತಿಯ ಶುಭ ಮುಹೂರ್ತದಲ್ಲಿ, ಈ ನೂತನ ಮಠ ಕಟ್ಟಡದ ಉದ್ಘಾಟನೆ ವಿಜೃಂಭಣೆಯಿಂದ (ಎಪ್ರಿಲ್ ೧೯೭೯ರಲ್ಲಿ) ಜರುಗಿತು. ಮೊದಲು ಈ ಮಠಕ್ಕೆ ಸಾರಿಗೆ ಸಂಪರ್ಕದ ಅನುಕೂಲತೆ ಹೇಳಿಕೊಳ್ಳುವಷ್ಟು ಉತ್ತಮವಾಗಿರಲಿಲ್ಲ. ಈಗ ಉತ್ತಮ ರಸ್ತೆಯ ಸೌಕರ್ಯವನ್ನೂ ವಿದ್ಯುತ್ ಸಂಪರ್ಕವನ್ನೂ ಈ ಮಠ ಹೊಂದಿದೆ. ಪಕ್ಕದಲ್ಲಿಯೇ ಶ್ರೀಗಳವರು ನೂತನವಾಗಿ ನಿರ್ಮಿಸಿದ ದೊಡ್ಡ ಸರೋವರ ಇದೆ.

ಕೇದಗೀ ಮಠದ ಶ್ರೀಗಂಗಾವಿಶ್ವೇಶ್ವರ ದೇವಾಲಯದ ಗರ್ಭಾಗಾರದ ಜೀರ್ಣೋದ್ಧಾರ ಕಾರ್ಯವೂ ಜರುಗಿದೆ. ದೇವತಾ ಪೂಜಾದಿ ವಿನಿಯೋಗಗಳು ಕಾಲಕಾಲಕ್ಕೆ ಸರಿಯಾಗಿ ನೆರವೇರುವ ಏರ್ಪಾಡನ್ನು ಕ್ರಿ. ಶ. ೧೯೭೯ರಿಂದ ಮಾಡಲಾಗಿದೆ.

೫. ಶ್ರೀರಾಮಚಂದ್ರಾಪುರ ಮಠ – ಹೊಸನಗರ, ಶಿವಮೊಗ್ಗ ಜಿಲ್ಲೆ. ಪ್ರಸಿದ್ಧಿಯನ್ನೂ ಪ್ರಾಧಾನ್ಯವನ್ನೂ ಪಡೆದ ಈ ಮಠವು ಹೊಸನಗರದಿಂದ ಐದು ಮೈಲು ದೂರದಲ್ಲಿದೆ. ಪ್ರಕೃತಿಯ ಮಡಿಲಲ್ಲಿ ಈ ಮಠವು ಕಮನೀಯವಾಗಿ ಕಂಗೊಳಿಸುತ್ತದೆ.

ಶ್ರೀಮದಾದ್ಯ ಶಂಕರಾಚಾರ್ಯರಿಂದ ೧೨ನೆಯ ಪೀಠಾಧಿಪತಿಗಳು ಶ್ರೀರಾಮ ಚಂದ್ರ ಭಾರತೀ ಸ್ವಾಮಿಗಳವರು. ಅವರು ಅಗಸ್ತ್ಯ ತೀರ್ಥದ ವಾಯುವ್ಯ ದಿಶೆಯಲ್ಲಿ, ಶರಾವತೀ ನದಿಯ ಎಡತಡಿಯ ಮೇಲೆ ತಮ್ಮ ನಾಮಾಂಕಿತದಿಂದ (ಶ್ರೀರಾಮಚಂದ್ರ ಎಂಬ ಹೆಸರಿನ) ಪ್ರಸಿದ್ಧವಾದ ಮಠವನ್ನು ಸ್ಥಾಪಿಸಿ ಪ್ರಖ್ಯಾತ ನಾಮರಾದರು.

ಅನಂತರ, ಈ ಮಠದ ಕಟ್ಟಡವನ್ನು ೩೩ನೆಯ ಪೀಠಾಧಿಪತಿಗಳಾದ ಪರಮ ಪೂಜ್ಯ ಶ್ರೀಮದ್‌ರಾಘವೇಶ್ವರ ಭಾರತೀ ಸ್ವಾಮಿಗಳವರು ಕಲ್ಲಿನಿಂದ ಭದ್ರವಾಗಿ ಕಟ್ಟಿಸಿದರು. ಕಾಲ ಗತಿಸಿ ಈ ಮಠವೂ ಹಳೆಯದಾಗ ತೊಡಗಿತ್ತು.

ಪ್ರಧಾನ ಮಠದ ಮಠಾಯತನವೂ ಇನ್ನುಳಿದೆಲ್ಲ ಮಠ ಭವನಗಳಿಗಿಂತ ಪ್ರಧಾನ ವಾಗಿಯೇ ಇರುವುದು ಯುಕ್ತವೆಂದು ಶ್ರೀಗಳವರು ಭಾವಿಸಿದರು. ಸುಮಾರು ಐದು ಲಕ್ಷ ರೂಪಾಯಿಗಳ ವೆಚ್ಚದಿಂದ ಭವ್ಯವಾಗಿ, ದಿವ್ಯವಾಗಿ, ಸುಂದರವಾಗಿ ಈ ಮಠವನ್ನು ನೂತನವಾಗಿ ರಚಿಸಲು ನಿಶ್ಚೈಸಿದರು. ಕೂಡಲೇ ಕಟ್ಟಡ ರಚನೆಯ ಕಾರ್ಯವು ಭರದಿಂದ ಪ್ರಾರಂಭವಾಯಿತು.

ಶ್ರೀ ಗುರುದೇವತಾ ದರ್ಶನಾರ್ಥಿಗಳಾಗಿ ಬಂದುಹೋಗುವ ಶಿಷ್ಯರ, ಭಜಕರ ಅನುಕೂಲತೆಗಾಗಿ ಉತ್ತಮ ರಸ್ತೆಯ ಸೌಕರ್ಯ, ಮಠದ ಹೊರಗಡೆಯೇ ಉಳಿಯಲು ಬಯಸುವವರಿಗೆ ಪ್ರತ್ಯೇಕ ಪ್ರವಾಸಿಮಂದಿರದ ಏರ್ಪಾಡು, ವಸತಿಗಾಗಿ ವಿದ್ಯುದ್ದೀಪ, ವಿದ್ಯುತ್ ವ್ಯಜನಗಳಿಂದ ಸಮಲಂಕೃತವಾದ ಕೊಠಡಿಗಳ ಸೌಲಭ್ಯ, ನಲ್ಲಿನೀರಿನ ವ್ಯವಸ್ಥೆ, ಮುಂಭಾಗದಲ್ಲಿ ಕಾರಂಜಿಯ ಉದ್ಯಾನ, ಹಿಂಭಾಗದಲ್ಲಿ ಫಲ ಭರಿತ ಹಚ್ಚ ಹಸುರು ಕಂಗೊಳಿಸುತ್ತಿರುವ ಕ್ರಮುಕೋದ್ಯಾನ – ಇವೇ ಮೊದಲಾದ ಆಧುನಿಕ ಸೌಕರ್ಯಗಳಿಂದ ಪ್ರಧಾನ ಮಠವು ಕ್ರಿ. ಶ. ೧೯೭೦ರಲ್ಲಿ ಪುನಾರಚಿತ ವಾಯಿತು.

ಪಕ್ಕದಲ್ಲಿ ಪವಿತ್ರವಾದ ಅಗಸ್ತ್ಯತೀರ್ಥ; ಇನ್ನೊಂದೆಡೆ ಶರಾವತಿಯ ಪರಮ ಪಾವನ ಸಲಿಲ, ಶ್ರೀರಾಮನಾಮವನ್ನು ಫಾಲದೇಶದಲ್ಲಿ ಧರಿಸಿದ ಗರ್ಭಾಗಾರ, ಗೋಪುರದ ಫಲಕಗಳು, ಪ್ರಭು ಶ್ರೀ ರಾಮಚಂದ್ರನ ಆಣತಿಯನ್ನು, ವೇದಸಾರವನ್ನು ಉದ್ಘೋಷಿಸುವ ಮುಖಮಂಟಪದ ಶಿಲಾ ಫಲಕಗಳು. ಈ ಮಠವು ತಮ್ಮ ಶಿಷ್ಯ ಸಮುದಾಯದೊಂದಿಗೆ ಆರಾಧ್ಯ ದೇವತೆಯ ದರ್ಶನ ಪಡೆಯಲು ಹೊರಡಲುದ್ಯುಕ್ತ ವಾಗಿದೆಯೋ ಎಂಬಂತೆ ಭಾಸವಾಗುವ ಮೇಲಿನ ವಿಮಾನಗೋಪುರ, "ಶ್ರೀ ರಾಮ

ಚಂದ್ರಾಪುರ ಮಠವು ಇದೇ, ನಿಮಗೆಲ್ಲರಿಗೂ ಸುಸ್ವಾಗತ" ಎನ್ನುವಂತೆಸೆಯುವ ಶ್ರೀಮಠದ ಹೆಬ್ಬಾಗಿಲು, ಇವೆಲ್ಲವುಗಳಿಂದ ಸುಶೋಭಿತವಾಗಿ ಪ್ರಾಚೀನ-ಅರ್ವಾಚೀನ ಸಂಸ್ಕೃತಿಗಳ ಸಮ್ಮಿಲನದ ಸಂಸೂಚಕವಾಗಿ ಈ ಮಠವು ಈಗ ಕಂಗೊಳಿಸುತ್ತಿದೆ.

ಶ್ರದ್ಧಾ-ಭಕ್ತಿ ಅಭಿಮಾನಗಳ ದ್ಯೋತಕವಾಗಿ ಸಾಗರ ಪ್ರಾಂತದ ಶಿಷ್ಯ ಜನತೆಯು ಉದಾರವಾಗಿ ವಿಶೇಷ ಕಾಣಿಕೆ ಹಣವನ್ನು ಸಾರ್ಥಕವಾಗಿ ವ್ಯಯಿಸಿದ ಈ ಮಠದ ಭವ್ಯ ಭವನ ನಿರ್ಮಾಣ ಕೌಶಲ, ಕಾರ್ಯಕುಶಲ ಶಿಲ್ಪಿವರೇಣ್ಯರ (ನುರಿತ ಇಂಜಿನಿಯರ) ಚುರುಕು ಬುದ್ಧಿಗೂ ನಿಲುಕದಷ್ಟು ಮಹೋನ್ನತವಾಗಿದೆ - ಎಂಬುದು ಅತಿಶಯೋಕ್ತಿ ಎನ್ನಿಸದ ನುಡಿ.

ಪ್ರಾಚೀನ ಕಾಲದ ಗುರುಕುಲಗಳನ್ನು ನೆನಪಿಗೆ ತರುತ್ತಾ ಮಲೆನಾಡಿನ 'ವಿದ್ಯಾಸೌಧ' ಎಂದು ಕರೆಯಿಸಿಕೊಳ್ಳಲ್ಪಡುತ್ತಿರುವ ಭವ್ಯವಾದ ಈ ಮಠದ ಕಟ್ಟಡ ಶ್ರೀ ಶ್ರೀಗಳವರ ದೈವಿಕ ಬೌದ್ಧಿಕ ಶಕ್ತಿ ಸಾಮರ್ಥ್ಯ ಸಂಪನ್ನತೆಗಳಿಗೆ ಪ್ರತ್ಯಕ್ಷ ನಿದರ್ಶನವಾಗಿದೆ.

ಈ ಮಠದ ನವ್ಯ ಭವನದಲ್ಲಿ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಹಾಗೂ ಗೋವರ್ಧನಧಾರಿ ಶ್ರೀ ಕೃಷ್ಣ ಮೊದಲಾದ ಮೂರ್ತಿಗಳ ಪುನಃ ಪ್ರತಿಷ್ಠೆ, ಬ್ರಹ್ಮ ಕಲಶ, ಧಾರ್ಮಿಕ ವಿನಿಯೋಗಗಳು-ಮೊದಲಾದುವುಗಳು ವಿಜೃಂಭಣೆಯಿಂದ ನೆರ-ವೇರಲಿರುವುವು.

೬. ಶ್ರೀ ರಾಮಚಂದ್ರಾಪುರ ಮಠ - ತೀರ್ಥಹಳ್ಳಿ ತಾಲೂಕು, ಶಿವಮೊಗ್ಗ ಜಿಲ್ಲೆ.

ತೀರ್ಥಹಳ್ಳಿ ತಾಲೂಕಿನ ಕೇಂದ್ರವಾದ ತೀರ್ಥಹಳ್ಳಿ ಶಹರಿನ ರಥ ಬೀದಿಯಲ್ಲಿ ರುವ ಮಠವು, ಸಂಸ್ಥಾನದ ಆಡಳಿತ ಕೇಂದ್ರವಾಗಿರುವುದರಿಂದಲೂ, ಪೂಜ್ಯ ಸ್ವಾಮೀಜೀಯವರು ಹೆಚ್ಚಾಗಿ ವಾಸವಾಗಿರುವ ಕೇಂದ್ರವಾಗಿರುವುದರಿಂದಲೂ, ವ್ಯಾವಹಾರಿಕವಾಗಿ ಉಳಿದ ಮಠಗಳಿಗಿಂತ ಹೆಚ್ಚಿನ ಅಗ್ರಮಾನ್ಯತೆಯನ್ನೂ ಪ್ರಾಧಾನ್ಯ ವನ್ನೂ ಈಗ ಪಡೆದಿರುತ್ತದೆ.

ಈ ಪ್ರದೇಶದಲ್ಲಿಯ ೬೨ ಹವ್ಯಕ ಮನೆತನಗಳ ಆಚಾರ ವಿಚಾರಗಳ ಮೇಲ್ವಿ ಚಾರಣೆಗಾಗಿ ಈ ಮಠವು ಶಾಲಿವಾಹನ ಶಕ ೧೪೮೮ ನೆಯ ಕ್ರೋಧನ ಸಂವತ್ಸರದಲ್ಲಿ ಸ್ಥಾಪಿತವಾಯಿತೆಂದು ದಾಖಲೆಗಳಿಂದ ತಿಳಿದುಬರುತ್ತದೆ.

ಶ್ರೀ ರಾಮಚಂದ್ರಾಪುರ ಮಠದ ೩೨ನೆಯ ಗುರುಗಳಾದ ಶ್ರೀಮದ್ರಾಘವೇಂ ದ್ರಭಾರತೀ ಸ್ವಾಮಿಗಳವರಿಂದ ಸಂನ್ಯಾಸ ಪಡೆದ ಶ್ರೀ ಅಮರೇಂದ್ರಪುರೀ ಸ್ವಾಮಿಗಳು

೧೮೫೭ನೆಯ ಇಸವಿಯಲ್ಲಿ ಪ್ರಧಾನ ಮಠವಾದ ಶ್ರೀರಾಮ ಚಂದ್ರಾಪುರ ಮಠಕ್ಕೆ ತನ್ನ ಮಠದ ಆಡಳಿತವನ್ನು ವಹಿಸಿಕೊಟ್ಟರು.

ಶ್ರೀ ಭಾರ್ಗವ ಪರಶುರಾಮರಿಂದ ಸಂಸ್ಥಾಪಿತವಾದ ಶ್ರೀ ರಾಮೇಶ್ವರ ದೇವಸ್ಥಾನದ ವಾಮಪಾರ್ಶ್ವದಲ್ಲಿ ರೂಪಿತವಾದ ತೀರ್ಥಹಳ್ಳಿಯ ಈ ಮಠದ ಹಿಂಬದಿಯಲ್ಲೇ ಹರಿದು ಹೋಗುತ್ತಿರುವ ತುಂಗಾನದಿಯ ಸೊಬಗು ಅನ್ಯಾದೃಶವಾಗಿದೆ. ಕಣ್ಮನವನ್ನು ಸೆಳೆಯುವಂತಹದಾಗಿವೆ. ಮಠವಲ್ಲಿ ಹಿಂದಿನಿಂದಲೇ ಪ್ರಖ್ಯಾತವಾಗಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯು ಪ್ರಧಾನ ಆರಾಧ್ಯ ಮೂರ್ತಿಯಾಗಿರುತ್ತಾನೆ.

ಶಿಥಿಲಗೊಂಡ ಈ ಮಠದ ಕಟ್ಟಡವನ್ನು ಶ್ರೀಗಳವರು ಸುಮಾರು ಎರಡು ಲಕ್ಷ ರೂಪಾಯಿಗಳ ವ್ಯಯದಿಂದ ಕ್ರಿ. ಶ. ೧೯೭೩ರಲ್ಲಿ ಭವ್ಯವಾಗಿ ಕಟ್ಟಿಸಿದ್ದಾರೆ. ನೂತನವಾಗಿ ನಿರ್ಮಾಣಮಾಡಿಸುವ ಮೊದಲು ಈ ಮಠದ ಕಟ್ಟಡವನ್ನು ನೋಡಿದ ಜನರನ್ನು, ನವ್ಯವಾಗಿ ಭವ್ಯವಾಗಿ ರೂಪುಗೊಂಡು ನಿಂತ ಈ ಮಠಭವನವು ಅತ್ಯಾಶ್ಚರ್ಯಚಕಿತರನ್ನಾಗಿಸುತ್ತದೆ.

೭. ಅಪ್ಸರಕೊಂಡ ಮಠ – ಹೊನ್ನಾವರ, ಉತ್ತರ ಕನ್ನಡ.

ನಿಸರ್ಗ ರಮಣೀಯ ಪ್ರದೇಶದಲ್ಲಿ ಸಮುದ್ರ ರಾಜನ ಸಮ್ಮುಖದಲ್ಲಿ ಈ ಮಠವಿದೆ. ಗೇರುಸೊಪ್ಪಾ ಸೀಮೆಯ ಈ ಮಠದ ಸಮಸ್ತ ಶಿಷ್ಯ ಜನತೆ ಕ್ರಿ. ಶ. ೧೯೫೪ನೆಯ ಇಸವಿಯಲ್ಲಿ ಈ ಮಠವನ್ನು ಶ್ರೀ ಸಂಸ್ಥಾನಕ್ಕೆ ಒಪ್ಪಿಸಿತು.

ಸ್ವಲ್ಪಕಾಲ ಈ ಮಠದ ವ್ಯವಹಾರ ತೊಡಕು – ತೊಂದರೆಗಳಿಗೆ ಸಿಲುಕಿದರೂ ಈಗ ಶ್ರೀಗಳವರ ಸಂಪೂರ್ಣ ಆಡಳಿತಕ್ಕೆ ಒಳಪಟ್ಟು ಈ ಮಠದ ನಿತ್ಯ ನೈಮಿತ್ತಿಕ ಪೂಜಾದಿ ಕಾರ್ಯಗಳು ಯಥಾಯೋಗ್ಯವಾಗಿ ನೆರವೇರುತ್ತಲಿವೆ.

ಹಿಂದಿನಿಂದಲೂ ಶ್ರೀಸಂಸ್ಥಾನದ ಆಡಳಿತಕ್ಕೆ ಒಳಪಟ್ಟ ಜೀರ್ಣವಾದ ಮಠಕಟ್ಟಡಳನ್ನಲ್ಲದೆ, ಹೊಸದಾಗಿ ಸೇರ್ಪಡೆಯಾದ ಮಠೀಯ ಭವನಗಳನ್ನು ನೂತನವಾಗಿ ಪುನರ್ನಿರ್ಮಾಣ ಮಾಡಿದವರು ಶ್ರೀ ಶ್ರೀಗಳವರು. ಸ್ವತಃ ನಿಪುಣ ನಿರ್ದೇಶಕರಾಗಿ ಕಾಲಕಾಲಕ್ಕೆ ಅವಶ್ಯವಿದ್ದ ಅತಿಕಷ್ಟದಿಂದ ಸಂಪಾದಿಸಿದ ಸಾಂಪತ್ತಿಕ ಅನುಕೂಲತೆಯೊಂದಿಗೆ ಅವಶ್ಯಕ ಸಾಧನ ಸಲಕರಣೆಗಳನ್ನೂ ಒದಗಿಸಿಕೊಂಡು, ಶಿಷ್ಯಸಮಾಜದವರೂ ಅತ್ಯಂತ ಉದಾರತೆಯಿಂದ ಧನ ಸಹಾಯ ನೀಡುವಂತೆ ಮಾಡಿ, ಮಠಾಯತನಗಳ ಈ ಪುನರ್ನಿರ್ಮಾಣ ಕಾರ್ಯವನ್ನು ಸ್ವಲ್ಪ ಸಮಯದಲ್ಲಿಯೇ ಪರಿಪೂರ್ಣತೆಯ ದಿಶೆಯಲ್ಲಿ ಮುಂದುವರಿಸಿದರು ಪೂಜ್ಯ ಶ್ರೀಗಳವರು. ಅವರ ಕಾರ್ಯ ಕ್ಷಮತೆ, ಅವಿಚ್ಛಿನ್ನ ಗುರು ಪರಂಪರಾ ಪ್ರಾಪ್ತ ಮಹಿಮಾತಿಶಯ, ಸಮಯೋಚಿತ ವ್ಯಾವಹಾರಿಕ ಬುದ್ಧಿ

ಕೌಶಲ, ಅನುಷ್ಠಾನ ಹಾಗೂ ಆರಾಧ್ಯದೇವತಾರ್ಚನದಿಂದ ಪ್ರಾಪ್ತವಾದ ತಪಃಸಾಮರ್ಥ್ಯ – ಇವುಗಳಿಗೆ ಪುನಾರ್ರಚನೆಗೊಂಡ ಭವ್ಯವಾದ ಮಠದ ಕಟ್ಟಡಗಳು ಒಂದು ದಿವ್ಯ ನಿದರ್ಶನವಾಗಿ ನಿಂತಿವೆ.

ಅಂದಾಗ,

ಜೀರ್ಣಾನಾಂ ಮಠಸೌಧಾನಾಂ ಪುನರ್ನಿರ್ಮಾಣಕೋವಿದಃ |
ರಾಘವೇಂದ್ರಗುರುರ್ದೈವಶಕ್ತಿಯುಕ್ತಿಸಮನ್ವಿತಃ ||

ಎಂಬ ಉಕ್ತಿ ಸಾರ್ಥಕವಲ್ಲವೆ ?

ಪೆರಾಜೆಯಲ್ಲಿ ನೂತನವಾಗಿ
ಶ್ರೀ ರಾಮಚಂದ್ರಾಪುರ ಮಠ ಸ್ಥಾಪನೆ

ಮಠಾಯತನ ನಿರ್ಮಾಣಂ ದೇವತಾಸ್ಥಾಪನಂ ತಥಾ ।
ಗುರುಸೇವಾನುರಕ್ತಿಶ್ಚ ನಾಲ್ಪಸ್ಯ ತಪಸಃ ಫಲಮ್ ॥

ನೂತನವಾಗಿ ಮಠವನ್ನು ನಿರ್ಮಾಣ ಮಾಡಿಸುವುದಾಗಲಿ, ದೇವತಾಸ್ಥಾಪನಾ ಕಾರ್ಯವನ್ನು ನೆರವೇರಿಸುವುದಾಗಲಿ ಅಸಾಧಾರಣವಾದ ಕೆಲಸ. ಈ ಕೆಲಸಗಳಿಗೆ ವಿಶೇಷವಾದ ತಪೋಬಲವೂ ಆತ್ಮಶಕ್ತಿಯೂ ಅತ್ಯಾವಶ್ಯಕ. ಶ್ರೀಗಳವರು ಇವೆರಡೂ ಮಹತ್ತಮ ಕಾರ್ಯಗಳನ್ನು ಜರುಗಿಸಿ ತಮ್ಮ ಗರಿಮೆಯನ್ನು ಮೆರೆಸಿದ್ದಾರೆ.

ಶ್ರೀರಾಮಚಂದ್ರಾಪುರ ಮಠದ ಶಿಷ್ಯಜನತೆ ದಕ್ಷಿಣಕನ್ನಡ ಜಿಲ್ಲೆ ಹಾಗೂ ಕೇರಳ ರಾಜ್ಯದ ಮಂಗಳೂರು ಹೋಬಳಿಯ ವಿಟ್ಲ, ಕುಂಬಳೆ, ಪುತ್ತೂರು, ಪಂಜ ಹಾಗೂ ಬಂಗರ ಸೀಮೆಗಳಲ್ಲಿ ನೆಲಸಿದೆ. ಐದು ಸಹಸ್ರಕ್ಕೂ ಮಿಕ್ಕಿದ ಮನೆಗಳುಳ್ಳ ಈ ಶಿಷ್ಯರು ತಮ್ಮ ಭಾಗದಲ್ಲಿ ತಮ್ಮದೇ ಆದ ಒಂದೂ ಮಠಾಯತನವಿಲ್ಲದ ಕಾರಣ ಶ್ರೀಗಳವರ ದರ್ಶನ, ಆಶೀರ್ವಾದ ಪಡೆಯಲು ತೀರ್ಥಹಳ್ಳಿಯಲ್ಲಿದ್ದ ಶ್ರೀ ರಾಮಚಂದ್ರಾಪುರ ಮಠಕ್ಕೋ ಶ್ರೀಗಳವರು ವಸತಿಗೈದ ಇನ್ನಿತರ ಸ್ಥಾನಗಳಿಗೋ ಧಾವಿಸಬೇಕಾಗುತ್ತಿತ್ತು. ಈ ಕೊರತೆಯನ್ನು ನಿವಾರಿಸಲು ಅಲ್ಲಿಯ ಸಮಗ್ರ ಶಿಷ್ಯಜನರು ಹಿಂದಿನ ಗುರುವರ್ಯರಾದ (೩೩ನೆಯ) ಶ್ರೀ ರಾಮಚಂದ್ರಭಾರತೀ ಸ್ವಾಮಿಗಳವರ ಕಾಲದಲ್ಲಿಯೇ ವಿಚಾರ ಮಾಡಿದ್ದರು. ಆದರೆ ಅವರ ವಿಚಾರವು ಕಾರ್ಯರೂಪಕ್ಕೆ ಇಳಿದಿರಲಿಲ್ಲ.

ಪ್ರಕೃತ ಶ್ರೀಗಳವರು ಈ ಸೀಮೆಯ ಸಂಚಾರ ಕೈಗೊಂಡಾಗ ಮಠ ಸ್ಥಾಪನೆಯ ವಿಷಯ ಪುನಃ ಪ್ರಸ್ತಾಪಕ್ಕೆ ಬಂದಿತು. ನವೀನ ಮಠ ನಿರ್ಮಾಣದ ಬಗೆಗೆ ವಿಚಾರ ವಿನಿಮಯ ಮಾಡಲು ಶ್ರೀ ಶಕ ೧೮೮೩ನೆಯ ಪ್ಲವ ಸಂವತ್ಸರದ ಅಧಿಕ ಜ್ಯೇಷ್ಠ ೩ ರ ಗುರುವಾರ (ದಿನಾಂಕ ೧-೬-೧೯೬೧) ಬಂಟ್ವಾಳ ತಾಲೂಕಿನ ಪಾಣೆ ಮಂಗಳೂರು ಸಮೀಪ, ನೇತ್ರಾವತೀನದಿಯ ತೀರದಲ್ಲಿರುವ ನಂದಾವರ ವಿನಾಯಕ ದುರ್ಗಾ ಶಂಕರನಾರಾಯಣ ದೇವಾಲಯದಲ್ಲಿ ಆ ಭಾಗದ ಶಿಷ್ಯಜನತೆಯ ಮಹಾಸಭೆ ಶ್ರೀಗಳವರ ನೇತೃತ್ವದಲ್ಲಿ ನೆರವೇರಿ, ಮಂಗಳೂರು ಹೋಬಳಿಗೆ ಮಧ್ಯವರ್ತಿಯಾದ ಸ್ಥಳದಲ್ಲಿ ಮಠಾಯತನವೊಂದನ್ನು ಸಂಸ್ಥಾಪಿಸಲೇ ಬೇಕೆಂದು ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾಯಿತು.

ನಿಯೋಜಿತ ನವೀನ ಮಠದ ನಿರ್ಮಾಣಕ್ಕೆ ಯೋಜನೆ ಸಿದ್ಧವಾಗಿ ದಿನಾಂಕ ೧೪-೬-೧೯೬೭ ರಂದು ಪುತ್ತೂರು ಸೀಮೆಯ (ಮಾಣಿ ಸಮೀಪ) ಪೆರಾಜೆಗ್ರಾಮದಲ್ಲಿ ೩೦ ಎಕರೆಗಳಷ್ಟು ಜಮೀನನ್ನು ಶ್ರೀಗಳವರ ಮುಖಾಂತರ ಖರೀದಿಸಲಾಯಿತು.

ಖರೀದಿಸಿವ ಜಮೀನಿನ ಸುಧಾರಣೆಗಾಗಿ ಕೃಷಿಯಲ್ಲಿ ಅನುಭವಿಗಳೂ ತಜ್ಞರೂ ಸಮೀಪವೇ ಇರುವವರೂ ಆದ ಕೆಲವು ಶಿಷ್ಯರನ್ನು ಆರಿಸಿಕೊಂಡು ಬಂದು, ಕೃಷಿ ಸಮಿತಿಯನ್ನು ಪೂಜ್ಯ ಸ್ವಾಮೀಜೀಯವರು ರಚಿಸಿ, ಆ ಭೂಮಿಯನ್ನು ಅಭಿವೃದ್ಧಿ ಪಡಿಸಿ ಚೆನ್ನಾಗಿ ಕೃಷಿಮಾಡಿ ಸಾಕಷ್ಟು ಉತ್ಪತ್ತಿ ಪಡೆಯುವ ಹೊಣೆಗಾರಿಕೆಯನ್ನು ಆ ಸಮಿತಿಗೆ ಬಿಟ್ಟುಕೊಟ್ಟರು. ಸಮಿತಿಯವರು ಅಡಕೆ, ತೆಂಗು, ಭತ್ತ ಇತ್ಯಾದಿ ಬೆಳೆಗಳನ್ನು ಈ ಭೂಮಿಯಲ್ಲಿ ಹಾಕಿ ಅದನ್ನು ಅಭಿವೃದ್ಧಿಗೊಳಿಸಿ ಗಣನೀಯ ಪ್ರಮಾಣದಲ್ಲಿ ಉತ್ಪತ್ತಿ ಬರುವಂತೆ ಮಾಡಿದರು.

ಇಷ್ಟೆಲ್ಲ ಆದರೂ ಮಠ ಕಟ್ಟಡದ ನಿರ್ಮಾಣಕಾರ್ಯವು ಯೋಜನೆಯ ಮಟ್ಟದಲ್ಲಿಯೇ ಇತ್ತು. ೧೯೭೦ನೆಯ ಇಸವಿಯ ಜನವರಿ ೨೧ರಂದು ನವೀನ ಮಠ ಕಟ್ಟಡದ ನಿರ್ಮಾಣಕ್ಕಾಗಿಯೇ ೧೬೧ ಜನ ಸದಸ್ಯರುಳ್ಳ ಮಠಕಟ್ಟಡದ ವಿಸ್ತೃತ ಸಮಿತಿಯು ಶ್ರೀಗಳವರ ಘನ ಅಧ್ಯಕ್ಷತೆಯಲ್ಲಿ ರೂಪುಗೊಂಡಿತು. ಆಗಬೇಕಾದ ಕಟ್ಟಡದ ನಕಾಶೆ ಮತ್ತು ಅಂದಾಜುಕೂಡ ಸಿದ್ಧವಾಯಿತು.

ನವ್ಯ ಮಠದ ಶಂಕುಸ್ಥಾಪನಾ ಸಮಾರಂಭವು ಶ್ರೀ ಶಕ ೧೮೯೩ನೆಯ ಸಾಧಾರಣ ಸಂವಸ್ಸರದ ವೈಶಾಖ ಶುದ್ಧ ಪಂಚಮಿಯ ರವಿವಾರ (ದಿನಾಂಕ ೧೦-೫-೧೯೭೦) ಶ್ರೀ ಶಂಕರಜಯಂತಿಯ ಸುಮುಹೂರ್ತದಲ್ಲಿ ಶ್ರೀಗಳವರ ದಿವ್ಯ ಹಸ್ತದಿಂದ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಶ್ರೀಮಠದ ಮಧ್ಯಭಾಗದಲ್ಲಿ ಸಪರಿವಾರ ಶ್ರೀ ಸೀತಾರಾಮಚಂದ್ರ ದೇವರ ಸ್ಥಾಪನೆಗಾಗಿ ನಿರ್ಮಾಣವಾಗಲಿದ್ದ ಗರ್ಭಾಗಾರದ ಮೂಲ ಶಿಲಾನ್ಯಾಸವು ಶ್ರೀ ಶಕ ೧೮೯೩ನೆಯ ಸಾಧಾರಣ ಸಂವತ್ಸರದ ಮಾಘ ಶುದ್ಧ ಪಂಚಮಿಯ ರವಿವಾರ (ದಿನಾಂಕ ೩೧-೧-೧೯೭೧) ಮಂಗಳಮಯ ಮುಹೂರ್ತದಲ್ಲಿ ಶ್ರೀಗಳವರ ದಿವ್ಯ ಕರಕಮಲ-ದಿಂದ ನೆರವೇರಿತು.

ಶ್ರೀಗಳವರಿಂದ ಅಮಿತ ಸ್ಫೂರ್ತಿಯನ್ನೂ ಯೋಗ್ಯ ಮಾರ್ಗದರ್ಶನವನ್ನೂ ಪಡೆದು ಮಠಕಟ್ಟಡದ ಸಮಿತಿಯ ಅವಿರತವಾದ ಪರಿಶ್ರಮದ ಫಲವಾಗಿ ಶ್ರೀಮಠದ ಕಟ್ಟಡವು ಸರ್ವಾಂಗ ಸುಂದರವಾಗಿ ಸುಮಾರು ೪ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಭವ್ಯವಾಗಿ ಪೂರೈಸಲ್ಪಟ್ಟಿತು. ಕಟ್ಟಡದ ರಚನೆಯ ಪ್ರತಿಯೊಂದು ಹಂತದಲ್ಲಿಯೂ ಸ್ವಾಮೀಜೀಯವರು ಅದನ್ನು ಸ್ವತಃ ವೀಕ್ಷಿಸುತ್ತ ಮಾರ್ಗದರ್ಶನ ನೀಡುತ್ತಲೂ

ಇದ್ದರು. ಅಲ್ಲದೆ, ಧನಸಂಗ್ರಹಕಾರ್ಯದಲ್ಲಿ ಸ್ವಾಮೀಜೀಯವರೇ ಸ್ವತಃ ಬಹಳಷ್ಟು ಶ್ರಮವಹಿಸಿದರು.

ಶ್ರೀ ಶಕ ೧೮೯೪ ನೆಯ ಪರಿಧಾವಿ ಸಂವತ್ಸರದ ಮಾಘ ಶುದ್ಧ ಬಿದಿಗೆಯ ಸೋಮವಾರ (ದಿನಾಂಕ ೫-೨-೧೯೭೩) ಮಂಗಳೂರು ಹೋಬಳಿಗೆ ಸೇರಿದ ಶಿಷ್ಯ ಜನತೆಯ ಭಾಗ್ಯೋದಯದ ದಿನ! ಹೊಸ ಮಠದಲ್ಲಿ ತಮ್ಮ ಆರಾಧ್ಯ ದೇವತೆಯಾದ ಸಪರಿವಾರ ಶ್ರೀ ಸೀತಾರಾಮಚಂದ್ರನ ಪ್ರತಿಷ್ಠಾಪನಾ ಮಹೋತ್ಸವದ ಪವಿತ್ರದಿನ! ತಮ್ಮ ಹೃದಯ ಕಮಲಾಸೀನರಾದ ಶ್ರೀ ಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳವರ ದಿವ್ಯದರ್ಶನವನ್ನು ತಮ್ಮ ಸೀಮೆಯಲ್ಲಿ ನವೀನ ಮಠದ ಭವ್ಯ ಕಟ್ಟಡದಲ್ಲಿ ಪಡೆಯಲು ಹಂಬಲಿಸಿ ಸಕುಟುಂಬರಾಗಿ ಶಿಷ್ಯ ಜನರು ಗುಂಪು ಗುಂಪಾಗಿ ಮಠಕ್ಕೆ ಆಗಮಿಸಿದರು.

ಪೂಜ್ಯ ಶ್ರೀಗಳವರು ಮುಂಚಿನ ದಿನ ಸಂಜೆ ಸಕಲರಾಜವೈಭವದೊಂದಿಗೆ ಮೆರವಣಿಗೆಯಲ್ಲಿ ಜಯ ಘೋಷಣೆಗಳೊಂದಿಗೆ ನವೀನ ಮಠಾಯತನಕ್ಕೆ ಬಿಜಯಂಗೈದು ಶಿಷ್ಯಜನತೆಯ ಬಹುದಿನಗಳ ಅಪೇಕ್ಷೆಯನ್ನು ಪೂರ್ಣಗೊಳಿಸಿದರು. ಶಿಷ್ಯ ಜನರಿಗೆ ಹೇಳಲಾರದ ಉತ್ಸಾಹ ಸಂಭ್ರಮವಿತ್ತು.

ಮರುದಿನ ಅಂದರೆ ತಾ॥ ೬-೨-೧೯೭೩ ರಂದು ನೂತನ ರಾಮಚಂದ್ರಾಪುರ ಮಠದಲ್ಲಿ ಎಲ್ಲಿಲ್ಲದ ಸಂಭ್ರಮ, ವಿಜೃಂಭಣೆ, ಜನರ ಓಡಾಟಗಳು! ಮಂಗಳೂರು ಹೋಬಳಿಯ ಮೂಲೆ ಮೂಲೆಗಳಿಂದ ಸುಮಾರು ೩-೪ ಸಾವಿರ ಜನ ಶಿಷ್ಯ ಪರಿವಾರದವರು ಮಠಕ್ಕೆ ಆಗಮಿಸಿದ್ದರು. ಮಠವು ಈ ಬಗೆಯಲ್ಲಿ ಭವ್ಯವಾಗಿ, ಎಲ್ಲರ ನಿರೀಕ್ಷಣೆಗೆ ಮೀರಿ ರೂಪುಗೊಂಡ ಬಗೆ ಎಲ್ಲರಿಗೆ ಅಚ್ಚರಿಯಾಗಿತ್ತು; ಸಂತೋಷವೂ ಆಗಿತ್ತು. ತಮ್ಮ ಸ್ವಾಮೀಜೀಯವರ ಕುರಿತಾಗಿ ಒಂದು ನವೀನವಾದ ಅಭಿಮಾನ, ಗೌರವ, ಭಕ್ತಿ ಉದಯಿಸಿತು.

ಮಠದ ಪ್ರಾಂಗಣದಲ್ಲಿ ವಿಶಾಲವಾಗಿ ಚಪ್ಪರ ಹಾಕಲಾಗಿತ್ತು. ಹಿಂಬದಿಯಲ್ಲೂ ಇತರ ಚಿಕ್ಕ ಚಪ್ಪರಗಳಿದ್ದುವು.

ಪ್ರಾತಃಕಾಲ ಒಂದು ಬದಿಯಲ್ಲಿ ಸಾಮೂಹಿಕ ಉಪನಯನ ಕಾರ್ಯಕ್ರಮ ನಡೆಯಿತು. ಅದಾದ ಮೇಲೆ ಮಠದ ಒಳಗೆ ಹಲವು ಬಗೆಯ ಪೂಜೆ, ಹವನ, ವೇದ ಪಾರಾಯಣ ಮೊದಲಾದವುಗಳು ಆದ ನಂತರ ಶುಭ ಮುಹೂರ್ತದಲ್ಲಿ, ಮಂಗಳ ವಾದ್ಯ ಘೋಷ ಹಾಗೂ ವೇದ ಘೋಷದೆಡೆಯಲ್ಲಿ ಸಪರಿವಾದ ಸೀತಾರಾಮಚಂದ್ರರ ಮೂರ್ತಿ ಸಾಲಿಗ್ರಾಮ ಮೊದಲಾದ ದೇವತಾ ಮೂರ್ತಿಗಳ ಪ್ರತಿಷ್ಠಾಪನಾ ಕಾರ್ಯವನ್ನು ಪೂಜ್ಯ ಸ್ವಾಮಿಗಳವರೇ ನೆರವೇರಿಸಿ, ಪೂಜಿಸಿದರು. ಈ ರೂಪದಲ್ಲಿ ಮಠದ ಭವ್ಯ ಕಟ್ಟಡದ ಉದ್ಘಾಟನೆಯೂ ಜರುಗಿತು.

ಮಧ್ಯಾಹ್ನ ಸಹಸ್ರಾರು ಜನರಿಗೆ ಮೃಷ್ಟಾನ್ನ ಸಂತರ್ಪಣೆ ನಡೆದು, ಎಲ್ಲರ ಮೈಮನ ತಣಿಯಿತು.

ಅಪರಾಹ್ನ ಭವ್ಯವಾದ ಸಭಾಕಾರ್ಯಕ್ರಮ ನಡೆಯಿತು. ಶಿಷ್ಯರಲ್ಲಿ ಹಲವು ಪ್ರಮುಖರು, ಈ ಹೊಸ ಮಠದ ವಿಚಾರವಾಗಿಯೂ ಪೂಜ್ಯ ಸ್ವಾಮೀಜೀಯವರ ವಿಚಾರವಾಗಿಯೂ ಉಪನ್ಯಾಸಗಳನ್ನು ಮಾಡಿದರು. ಹಲವು ವಿದ್ವಾಂಸರು ತಮ್ಮ ಗುರುಗಳನ್ನು ಕುರಿತು ರಚಿಸಿದ ಕವಿತಾಸಮರ್ಪಣೆಗಳನ್ನು ಭಾವಪೂರ್ಣವಾಗಿ ಓದಿ ಹೇಳಿದರು.

ಅನಂತರ ಪೂಜ್ಯ ಸ್ವಾಮೀಜೀಯವರು ಇಡಿಯ ಹವ್ಯಕ ಸಮಾಜವನ್ನು ದೇಶದ ಹಿತದೃಷ್ಟಿಯಿಂದ ಜಾಗೃತಗೊಳಿಸುವ ರೀತಿಯಲ್ಲಿ ಅತ್ಯಂತ ವೈದುಷ್ಯಪೂರ್ಣವಾಗಿ, ಭಾವಪೂರ್ಣವಾಗಿ , ಸ್ಫೂರ್ತಿಯುತವಾಗಿ ಉಪನ್ಯಾಸವಿತ್ತು. ಎಲ್ಲರ ಹೃನ್ಮಂದಿರದಲ್ಲಿ ಆನಂದೋತ್ಸವವು ಮೂರ್ತೀಭವಿಸುವಂತೆ ಮಾಡಿದರು ಸ್ವಾಮೀಜೀಯವರ ಮಾತು ಈ ರೀತಿಯಾಗಿ ದಿವ್ಯ ಆಶೀರ್ವಾದದಿಂದ ಕೊನೆಗೊಂಡಿತು—

‘ಕೌಸಲ್ಯಾಸುಪ್ರಜಾ ರಾಮಃ ಸೀತಾಲಕ್ಷ್ಮಣಸಂಯುತಃ ।
ಸೋಮೋ ಹಿ ಚಂದ್ರಮೌಲಿಶ್ಚ ಸದಾ ಸಂತನುತಾಚ್ಛಿವಮ್ ॥೧॥
ವಸಿಷ್ಠೋ ವಾಮದೇವಶ್ಚ ಜಾಬಾಲಿಶ್ಚಾಥ ಗೌತಮಃ ।
ವ್ಯಾಸಃ ಶುಕೋ ಗೌಡಪಾದೋ ಗೋವಿಂದೋ ಭಗವಾನೃಷಿಃ ॥೨॥
ಶಂಕರೋ ಭಗವತ್ಪಾದಃ ತಿಷ್ಠಂತ್ವತ್ರ ಮುದಾನ್ವಹಮ್ ।
ತನ್ವಂತು ಹಿ ತಥಾ ನಿತ್ಯಂ ಸರ್ವೇಷಾಂ ಜಗತಾಂ ಶಿವಮ್ ॥೩॥

“ಈ ನವೀನ ಮಠದಲ್ಲಿ ನೂತನವಾಗಿ ಪ್ರತಿಷ್ಠಾಪಿಸಿದ ಸಪರಿವಾರ ಶ್ರೀ ಸೀತಾ ರಾಮಚಂದ್ರ ಚಂದ್ರಮೌಲೀಶ್ವರರು ಮಂಗಳವನ್ನು ಸದಾ ಉಂಟುಮಾಡಲಿ. ವಸಿಷ್ಠ, ವಾಮದೇವಾದಿ ಮಹರ್ಷಿಗಳೂ, ಗೋವಿಂದ ಭಗವತ್ಪಾದ ಶ್ರೀಶಂಕರಾಚಾರ್ಯರೂ, ಇಲ್ಲಿ ನೆಲಸಿ ಎಲ್ಲರಿಗೂ ಯೋಗಕ್ಷೇಮಗಳನ್ನು ದಯೆಪಾಲಿಸಲಿ. ಆರಾಧಕರ ಭಕ್ತಿ ಶ್ರದ್ಧೆಯೂ ಇತೋಪ್ಯತಿಶಯ ಅಭಿವೃದ್ಧಿ ಹೊಂದಲಿ. ಮಂಗಳೂರು ಹೋಬಳಿಯ ನಮ್ಮ ಈ ಮಠವೂ “ಶ್ರೀರಾಮಚಂದ್ರಾಪುರ ಮಠ” ಎಂಬ ನಾಮಧೇಯದಿಂದಲೇ ಪ್ರಖ್ಯಾತವಾಗಲಿ!” ಎಂದು ಶ್ರೀಗಳವರು ಹೃತ್ಪೂರ್ವಕವಾಗಿ ಹರಸಿದರು.

ಮಂಗಳೂರು ಹೋಬಳಿಯಲ್ಲಿ ವಾಸವಾಗಿರುವ ಹವ್ಯಕ ಜನತೆಗೆ ತಮ್ಮ ಭಾಗದಲ್ಲಿಯೂ ತಮ್ಮದೇ ಆದ ಮಠವು (ಪ್ರಧಾನ ಮಠವಾದ ಶ್ರೀರಾಮಚಂದ್ರಾಪುರ ಮಠದ ಶಾಖಾ ಮಠವು) ಇರಬೇಕೆಂಬ ಪ್ರಬಲವಾದ ಅಪೇಕ್ಷೆಯು ಶ್ರೀಗಳವರ ದಿವ್ಯ ಮಾರ್ಗದರ್ಶನ, ಶುಭಾಶೀರ್ವಾದ, ಯೋಗ್ಯವಾದ ಸಲಹೆ ಸಹಕಾರ – ಇವೆಲ್ಲವುಗಳಿಂದ

ಸಾಕಾರ ರೂಪುತಳೆದು "ಶ್ರೀರಾಮಚಂದ್ರಾಪುರ ಮಠ" ಎಂಬ ಅಭಿಧಾನವನ್ನು ಪಡೆದು ಕಂಗೊಳಿಸುತ್ತಲಿರುವ ಈ ನವ್ಯ ಮಠವು ವೈದಿಕವಿದ್ಯೆಯ ಪ್ರಧಾನ ಕೇಂದ್ರವಾಗಲಿದೆ. ಶಿಷ್ಯ ಜನತೆಯ ಧಾರ್ಮಿಕ ಪ್ರವೃತ್ತಿ ಪ್ರಚೋದಕವಾದ ಆದರ್ಶ ಛಾತ್ರನಿಲಯವಾಗಲಿದೆ. ಕಲಿಮಲದಿಂದ ಕಲುಷಿತವಾದ ವಾತಾವರಣಕ್ಕೆ ಸಿಲುಕಿ ಕಲಕಿದ ಮನಸ್ಸುಳ್ಳ ಭಕ್ತಕೋಟಿಯನ್ನು ಉದ್ಧರಿಸುವ ಆಧ್ಯಾತ್ಮ ಕೇಂದ್ರವಾಗಲಿದೆ ಎಂಬುದಕ್ಕೆ ಮಠದಲ್ಲಿ ಪ್ರತಿವರ್ಷವೂ ಜರುಗುತ್ತಲಿರುವ ಸಾಮೂಹಿಕ ಧಾರ್ಮಿಕ ಉಪನಯನ, ಉಪನ್ಯಾಸಾದಿಗಳೇ ನಿದರ್ಶನಗಳು.

ಮಂಗಳೂರು ಹೋಬಳಿ ಶ್ರೀರಾಮಚಂದ್ರಾಪುರ ಮಠದ ಕಟ್ಟಡದ ವಿಸ್ತೃತ ಸಮಿತಿಯ ಸದಸ್ಯರು ಶ್ರೀಮಠದ ಕಟ್ಟಡ ಕಟ್ಟೋಣದ ಬಗೆಗೆ ವರದಿಯನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಕೆಲವು ಪ್ರಕೃತೋಪಯೋಗಿ ಸಾಲುಗಳು ಇವು :—

"……ಪರಮ ಪೂಜ್ಯರಾದ ನಮ್ಮ ಶ್ರೀಗುರುಗಳವರು ಶ್ರೀರಾಮಚಂದ್ರಾಪುರ ಮಠದ ಮಹಾಸಂಸ್ಥಾನಾಧೀಶ್ವರರಾಗಿ ಈ ಮಂಗಳೂರು ಹೋಬಳಿ ಶ್ರೀಮಠದ ನಿವೇಶನದ ಖರೀದಿಗಾಗಿ ೫ ಸಹಸ್ರ ರೂಪಾಯಿಗಳ ಸುವರ್ಣ ಮಂತ್ರಾಕ್ಷತೆಯನ್ನಿತ್ತು ಆಶೀರ್ವದಿಸಿ ಪ್ರೋತ್ಸಾಹಿಸಿದರು.

……ನಮ್ಮ ಶ್ರೀಗಳವರು ಅಮೋಘವೂ ಆದ ದಿವ್ಯೋಪದೇಶದಿಂದ ನಮ್ಮೆಲ್ಲರನ್ನು ಬಡಿದೆಬ್ಬಿಸಿ, ಸ್ಫೂರ್ತಿಯನ್ನು ಇತ್ತು ಅನುಗ್ರಹಿಸಿದರು.

……ಪರಮಪೂಜ್ಯರಾದ ನಮ್ಮ ಶ್ರೀಸ್ವಾಮಿಗಳವರು ಆಗಾಗ ನಮ್ಮ ಸೀಮೆಗೆ ಚಿತ್ತೈಸಿ, ನಮ್ಮನ್ನೆಲ್ಲ ಒಟ್ಟು ಸೇರಿಸಿ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಕರೆದು ಬೋಧಿಸಿ, ಪ್ರಚೋದಿಸಿ, ಈ ಪುಣ್ಯ ಕಾರ್ಯದಲ್ಲಿ ನಾವೆಲ್ಲ ಪರಿಶ್ರಮಿಸುವಂತೆ ಸ್ಫೂರ್ತಿದಾಯಕವಾದ ಪೂರ್ಣ ಚೈತನ್ಯವನ್ನಿತ್ತು ಹರಸಿ, ಅನುಗ್ರಹಿಸುತ್ತಾ ಬಂದಿದ್ದಾರೆ.

……ಶ್ರೀಗಳವರೇ ಮುಂದೆ ನಿಂತು ತಾಯಿ ಮಕ್ಕಳಿಗೆ ನಡೆ ಕಲಿಸಿದಂತೆ ಈ ಮಹಾಕಾರ್ಯವನ್ನು ಪೂರೈಸಿಕೊಟ್ಟರೆನ್ನಬೇಕು.

……ಇಂದಿನ ಸುಮುಹೂರ್ತದ ವರೆಗೂ ಮತ್ತೆ ಮತ್ತೆ ಇತ್ತ ಚಿತ್ತೈಸಿ ಪರಮಪೂಜ್ಯರಾದ ನಮ್ಮ ಮಹಾಸ್ವಾಮಿಗಳವರು ನಮ್ಮನ್ನೆಲ್ಲಾ ಒಟ್ಟುಗೂಡಿಸಿ ಹೇಳಿ, ಹುರುಪಿತ್ತು, ಹರಸಿ, ನಾವುಗಳೆಲ್ಲ ಕಾರ್ಯಪ್ರವೃತ್ತರಾಗುವಂತೆ ನಿಯೋಜಿಸಿ ಪೂರ್ಣಚೈತನ್ಯವನ್ನಿತ್ತು ಅನುಗ್ರಹಿಸಿದಂತೆ, ನಮ್ಮೆಲ್ಲರ ಪೂರ್ಣ ಪರಿಶ್ರಮದ ಫಲವಾಗಿಹಿಂದಿರದ ಮಂಗಳೂರು ಹೋಬಳಿಯ ನಮ್ಮ ಶ್ರೀರಾಮಚಂದ್ರಾಪುರ ಮಠ ಮೇಲೆದ್ದು ವಿಜೃಂಭಿಸಿತು.

.......ಇದು ನಮ್ಮ ಹೋಬಳಿಯ ಹವ್ಯಕ ಬ್ರಾಹ್ಮಣ ಸಮಾಜದ ಏಕತೆಯ ಪ್ರತೀಕವಾಗಿ, ಪ್ರವೃದ್ಧಿಯ ದ್ಯೋತಕವಾಗಿ, ನಮ್ಮ ಗುರುಗಳಾಗಿರುವ ಪರಮಪೂಜ್ಯ ಶ್ರೀಮದ್ರಾಮಚಂದ್ರಾಪುರ ಮಠಾಧೀಶ್ವರ ಶ್ರೀಮದ್ರಾಘವೇಂದ್ರ ಭಾರತೀ ಸ್ವಾಮಿ-ಗಳವರ ಮಹಾಸಂಸ್ಥಾನದ ವಿಜಯಸ್ಥೈರ್ಯ ಜಯಂತಿಯಾಗಿ ಕಂಗೊಳಿಸುತ್ತಿದೆ."

ಮೇಲೆ ಉದ್ಧೃತವಾದ ಈ ವಾಕ್ಯಗಳು ಮಂಗಳೂರು ಹೋಬಳಿ ಶ್ರೀಮಠದ ಕಟ್ಟಡಕ್ಕಾಗಿ ನಿವೇಶನದ ಖರೀದಿಯಿಂದ ಮೊದಲ್ಗೊಂಡು ಉದ್ಘಾಟನಾ ಸಮಾರಂಭದ ವರೆಗಿನ ಈ ಮಹತ್ಕಾರ್ಯದಲ್ಲಿ ಶ್ರೀಗಳವರು ವಹಿಸಿದ ಪಾತ್ರವೇನೆಂಬುವದನ್ನು ಪ್ರತಿ-ಬಿಂಬಿಸುವ ತುಂಬುಹೃದಯದ ಭಕ್ತಿರಸ ಪರಿಪ್ಲುತ ವಚನಗಳು.

ಆದುದರಿಂದಲೇ ಅವರು—

"ನಾವು ಕಟ್ಟಿದ ನಮ್ಮ ಮಠವಿದು – ಇದುವೆ ಗುರುವಿಗೆ ಕಾಣಿಕೆ ಹರಸಿ ಆಶೀರ್ವದಿಸಿ ಶಿಷ್ಯರ, ಇದುವೆ ನಮ್ಮಯ ಕೋರಿಕೆ" ಎಂದು ಈ ಮಠವನ್ನೇ ಕಾಣಿಕೆಯಾಗಿ ಸಮರ್ಪಿಸಿ, ಶುಭಾಶೀರ್ವಾದವನ್ನು ಕೋರಿದ್ದಾರೆ.

ಶ್ರೀಗಳವರು ಸಂಕಲ್ಪಿಸಿ, ಯೋಚಿಸಿ. ರೂಪಿಸಿ, ಸಾಧಿಸಿದ ಅನೇಕ ಮಹಾ ಸಾಧನೆಗಳಲ್ಲಿ ನವೀನ ಮಠಸ್ಥಾಪನೆಯ ಈ ಕಾರ್ಯವು ಮಕುಟ ಪ್ರಾಯವಾದು-ದೆಂಬುದು ನಿಜವಾಗಿಯೂ ವಾದಾತೀತ ವಿಷಯ.

ನಾವು ಕಟ್ಟಿದ ನಮ್ಮ ಮಠವಿದು ಇದುವೆ ಗುರುವಿಗೆ ಕಾಣಿಕೆ ।
ಹರಸಿ ಆಶೀರ್ವದಿಸಿ ಶಿಷ್ಯರ, ಇದುವೆ ನಮ್ಮಯ ಕೋರಿಕೆ ॥

ಸ್ಥಿರಾಸ್ತಿಯ ಅಭಿವೃದ್ಧಿ

"ಸನಾತನ ವೈದಿಕಧರ್ಮದ ಸಂರಕ್ಷಣೆ, ಸಂವರ್ಧನೆ – ಇವುಗಳ ಬಗೆಗೆ ಪೀಠಾಧಿಪತಿಗಳು ಯಾವಾಗಲೂ ಪ್ರಯತ್ನಿಸಬೇಕು. ಸಂಸ್ಥಾಪಿಸಿದ ಮಠಗಳಲ್ಲಿಯ ಪೂಜಾದಿ ವಿನಿಯೋಗಗಳನ್ನು ಕಾಲಕಾಲಕ್ಕೆ ಯಥೋಚಿತವಾಗಿ ನೆರವೇರಿಸಿಕೊಂಡು ಬರಬೇಕು." ಎಂಬುದು ಶ್ರೀಮದಾಚಾರ್ಯರು ಪೀಠಾಧಿಪತಿಗಳಿಗೆ ನೀಡಿದ ಆಜ್ಞಾವಚನ.

ಧಾರ್ಮಿಕ ಶ್ರದ್ಧೆ ಖಿಲವಾಗುತ್ತಿರುವ ಈ ಕಲಿಕಾಲದಲ್ಲಿ ಕಾಲಕಾಲಕ್ಕೆ ಸರಿಯಾಗಿ ಕಾಣಿಕೆ – ಸೇವೆ ಇತ್ಯಾದಿಗಳು ಶ್ರೀಮಠಕ್ಕೆ ಸಲ್ಲುವುದು ದುರ್ಭರ ಹಾಗೂ ದುಸ್ತರ. ಎಂತಹ ಪರಿಸ್ಥಿತಿಯೇ ಎದುರಾದರೂ ಗುರುಪರಂಪರೆಯಿಂದ ಅವಿಚ್ಛಿನ್ನವಾಗಿ ನಡೆದುಬಂದ ದೇವತಾ ಕಾರ್ಯಗಳು ಮುಂದುವರಿದುಕೊಂಡು ಬರಲೇಬೇಕು– ಎಂಬುದು ಶ್ರೀಗಳವರ ಮನೀಷೆಯಾಗಿತ್ತು.

ಹೀಗಿರಲು, ಮಹಾಕ್ಷೇತ್ರ ಕಾಶಿಯಿಂದ ಪ್ರೌಢ ವಿದ್ಯಾಧ್ಯಯನವನ್ನು ಪೂರಯಿಸಿಕೊಂಡು ಮರಳಿ ಆಗಮಿಸಿ ತಮ್ಮ ಮಠಗಳ ಆಡಳಿತ ಸೂತ್ರವನ್ನು ಶ್ರೀಗಳವರು ತಮ್ಮ ಕೈಗೆತ್ತಿಕೊಂಡಾಗ, ಎಲ್ಲ ಮಠಗಳಿಗೆ ಸಂಬಂಧಪಟ್ಟ ಅಡಕೆ ತೋಟ, ತೆಂಗಿನ ಹಿತ್ತಲು, ಭತ್ತದ ಗದ್ದೆ – ಇತ್ಯಾದಿ ಆಸ್ತಿಗಳು ಅತ್ಯಂತ ಹೀನಸ್ಥಿತಿಗೆ ಇಳಿದು ಅವುಗಳ ವಾರ್ಷಿಕ ಕಂದಾಯವನ್ನು ತುಂಬುವುದು ಕೂಡಾ ಕಠಿಣವಾಗಿ ಪರಿಣಮಿಸತೊಡಗಿತ್ತು. ಇದನ್ನು ಪರಾಂಬರಿಸಿದ ಶ್ರೀಗಳವರು ಕೂಲಂಕಷವಾಗಿ ತುಂಬಾ ಯೋಚಿಸತೊಡಗಿದರು. ಕಂದಾಯವನ್ನು ಕೂಡಾ ಕಟ್ಟಲಾಗದಂತಹ ದುಃಸ್ಥಿತಿಯು ಆಸ್ತಿಗಳಿಗೆ ಬರಬಾರದು. ಅಂದರೆ ಆಸ್ತಿಯ ಉತ್ಪತ್ತಿಯನ್ನು ಹೆಚ್ಚಿಸಲೇಬೇಕು. ಅದಕ್ಕಾಗಿ ಸ್ಥಿರಾಸ್ತಿಗಳನ್ನು ತುಂಬಾ ಅಭಿವೃದ್ಧಿಪಡಿಸಿ, ಅವುಗಳಿಂದ ಮುಂದೆ ಹೇರಳವಾದ ಉತ್ಪತ್ತಿ ಬರುವಂತಾಗಬೇಕು ಎಂದು ಅವರು ಆಶಿಸಿದರು.

ಮಠಕ್ಕೆ ಬರುವ ಕಾಣಿಕೆ ಮೊದಲಾದ ಇತರ ಉತ್ಪತ್ತಿಗಳು ಕಡಿಮೆಯಾಗಿ, ಮಠದ ವಿನಿಯೋಗಗಳಿಗೆ ಬೇಕಾದ ಆರ್ಥಿಕ ಬಲವಿಲ್ಲದಂತೆ ಆಗಬಾರದು ಎಂಬುದಕ್ಕಾಗಿ ಕೂಡಾ ಸ್ಥಿರಾಸ್ತಿಗಳನ್ನು ಅಭಿವೃದ್ಧಿಗೊಳಿಸಿ, ಅವುಗಳ ಉತ್ಪತ್ತಿಗಳಿಂದಲೇ ಮಠದ ವಿನಿಯೋಗಗಳು ಚೆನ್ನಾಗಿ ನಡೆದುಕೊಂಡು ಬರುವಂತಾಗಬೇಕೆಂದು ಅವರು ಯೋಚಿಸಿದರು.

ಅಲ್ಲದೆ ಇನಾಮು ರದ್ದತಿ, ಭೂಹಿಡುವಳಿ ಮಿತಿ, ಒಕ್ಕಲು ಮಸೂದೆ ಇತ್ಯಾದಿ ಹೊಸ ಹೊಸ ಶಾಸನಗಳು ಬಂದು ಮಠದ ಸಾವಿರಾರು ಎಕರೆ ಜಮೀನು ಕೈತಪ್ಪಿ

ಹೋದಾಗ ಸ್ವಂತ ಸಾಗುವಳಿಗೆ ಉಳಿದ ಆಸ್ತಿಗಳನ್ನು ಹೀಗೆ ಆಮೂಲಾಗ್ರವಾಗಿ ಅಭಿವೃದ್ಧಿಪಡಿಸುವುದು, ಮಠದ ಅಸ್ತಿತ್ವದ ದೃಷ್ಟಿಯಿಂದಲೇ ಅಗತ್ಯವಾಗಿತ್ತು.

ಆದುದರಿಂದ ಈ ಯೋಚನೆಗಳು ಸುಳಿದೊಡನೆಯೇ ಪೂಜ್ಯ ಸ್ವಾಮೀಜೀಯವರು ದೂರದೃಷ್ಟಿಯಿಂದ ಕಾರ್ಯಪ್ರವೃತ್ತರಾದರು. ಅಡಕೆ ತೋಟ, ತೆಂಗಿನ ತೋಟ, ಭತ್ತದ ಗದ್ದೆಗಳು – ಮೊದಲಾದ ಸ್ಥಿರಾಸ್ತಿಗಳನ್ನು ತೀವ್ರವಾಗಿ ಅಭಿವೃದ್ಧಿಪಡಿಸಿ, ಅವುಗಳ ಉತ್ಪತ್ತಿಯಿಂದ ಮಠದ ಸಕಲ ವಿನಿಯೋಗಗಳು ನಡೆದುಕೊಂಡು ಬರುವಂತೆ ಭವ್ಯವಾದ ಯೋಜನೆ ಹಾಕಿ, ಶ್ರೀಗಳವರು, ತಾವು ಸ್ವತಃ ಆಗಾಗ ಆಸ್ತಿಗಳಿಗೆ ಸಂದರ್ಶನ ನೀಡಿ, ಯೋಗ್ಯ ಮಾರ್ಗದರ್ಶನಮಾಡಿ, ಸಮರ್ಥರಾದ ಜನರನ್ನು ಇಟ್ಟುಕೊಂಡು ಯೋಜನೆಯನ್ನು ಕಾರ್ಯರೂಪಕ್ಕೆ ತಂದೇಬಿಟ್ಟರು.

ಮಠದ ಆಸ್ತಿಗಳು ಕರುಣಾಜನಕ ದೃಶ್ಯವನ್ನು ಕಾಣಿಸುವ ಬದಲು, ಹುಲುಸಾಗಿ ಬೆಳೆದು, ಇತರ ಶಿಷ್ಯಜನರಿಗೂ ಆದರ್ಶವಾದ, ಕಣ್ಮನಗಳನ್ನು ತಣಿಸುವ ಶ್ರೇಷ್ಠ ಕೃಷಿಭೂಮಿಗಳಾಗಿ ಮಾರ್ಪಟ್ಟವು. ಮಠದ ಹಳೆಯ ಆಸ್ತಿಗಳ ಜೊತೆಗೆ, ಅನೇಕ ಹೊಸಕ್ಷೇತ್ರಗಳನ್ನು ಮಠದ ಆಡಳಿತಕ್ಕೆ ಒಳಪಡಿಸಿ, ಅವುಗಳನ್ನು ಅಭಿವೃದ್ಧಿಗೊಳಿಸಿ ಫಲಸಮೃದ್ಧವಾಗುವಂತೆ ಮಾಡಿದರು.

ಇದರಿಂದ ಸ್ವಾಮೀಜೀಯವರ ವ್ಯಾವಹಾರಿಕ ಕ್ರಿಯಾಶಕ್ತಿ, ಕೃಷಿಯ ಕುರಿತಾದ ಅಭಿರುಚಿ, ಅನುಭವಗಳು, ಅವರ ಸ್ವಪ್ರಯತ್ನ, ಸಾಹಸಗಳು, ಅವರ ದೂರದೃಷ್ಟಿ, ಆರ್ಥಿಕ ಸಮತೋಲನದ ಲೆಕ್ಕಾಚಾರಗಳು – ಮೊದಲಾದುವುಗಳು ಬೆಳಕಿಗೆ ಬಂದು, ಅವರು ಆಧುನಿಕ ಜಗತ್ತಿಗೆ ಹೇಳಿಸಿದ 'ಗುರುಕುಲತಿಲಕರು' ಎಂಬುದು ಸರ್ವರಿಗೂ ವಿಶದವಾಗಿ ತೋರುವಂತಾಯಿತು.

ಹೀಗೆ ಪೂಜ್ಯ ಆದಿಶಂಕರಾಚಾರ್ಯರ ಕಟ್ಟಾಜ್ಞೆಯನ್ನು ಸ್ವಾಮೀಜೀಯವರು ಅತ್ಯಂತ ನಿಷ್ಠೆಯಿಂದ ಪಾಲಿಸಿಕೊಂಡು ಬಂದು, ಸಕಲ ಮಠಗಳ ಎಲ್ಲ ಧಾರ್ಮಿಕ ವಿನಿಯೋಗಗಳು ಸ್ವಲ್ಪವೂ ತಪ್ಪದಂತೆ ನಡೆದುಕೊಂಡು ಬರುವಂತೆ ಮಾಡಿ ಅನ್ಯ ಪೀಠಾಧಿಪತಿಗಳಿಗೂ ಒಂದು ಆದರ್ಶವನ್ನು ಹಾಕಿ ತೋರಿಸಿದರು.

ಸಮಾಜ ಸಂಘಟನೆ

"ಶಿಷ್ಯಸಮಾಜ" ಎಂಬ ಪೂರ್ವಭಾವಿ ಪರಿಚ್ಛೇದದಲ್ಲಿ ವಿಸ್ತರಿಸಿದಂತೆ ನೂತನ ಕರ್ನಾಟಕ ರಾಜ್ಯೋದಯಕ್ಕಿಂತ ಮೊದಲು ಹವ್ಯಕ ಸಮಾಜವು ವಿವಿಧ ರಾಜಕೀಯ ಪ್ರದೇಶಗಳಲ್ಲಿ ಹರಿದು ಹಂಚಿ ಹೋದಂತಿತ್ತು. ಆದುದರಿಂದ ಸಮಾಜದಲ್ಲಿ ಏಕತೆ, ಪರಸ್ಪರ ಹೊಂದಾಣಿಕೆಗಳು ಕಡಿಮೆಯಾಗಿ ಶಿಷ್ಯ ಸಮಾಜವು ಧಾರ್ಮಿಕ ಸಾಮಾಜಿಕ ಹಾಗೂ ಆರ್ಥಿಕ ಮುಗ್ಗಟ್ಟನ್ನು ಎದುರಿಸುವಂತಾಗಿತ್ತು.

ಆಡಳಿತ ಸ್ವೀಕರಿಸಿದೊಡನೆಯೇ ಶಿಷ್ಯಾನುಗ್ರಹ ನಿಮಿತ್ತ ಸಂಚಾರ ಕೈಗೊಂಡ ಪೂಜ್ಯ ಶ್ರೀಗಳವರು ಈ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದರು. ಶಿಷ್ಯ ಸಮಾಜದ ಸರ್ವತೋಮುಖ ಪ್ರಗತಿಗೆ ಕಂಕಣ ಬದ್ಧರಾದ ಶ್ರೀಗಳವರಿಂದ ಈ ಬಗೆಗೆ ನವೀನ ಯೋಜನೆಗಳು ರೂಪಿತವಾದುವು. ಸಮಾಜ ಸಂಘಟನೆಗಾಗಿ ಕೈಗೆತ್ತಿಕೊಂಡ ಪ್ರಪ್ರಥಮ ಪ್ರಯತ್ನದ ಫಲವೇ ಶ್ರೀಗಳವರು ಸೇರಿಸಿದ ಅಖಿಲ ಹವ್ಯಕ ಮಹಾಧಿ-ವೇಶನ.

ಅಖಿಲ ಹವ್ಯಕ ಮಹಾಧಿವೇಶನ

ನವಕರ್ನಾಟಕದ ರಾಜ್ಯೋದಯವಾದುದು ಕ್ರಿ. ಶ. ೧೯೫೬ ನೆಯ ಇಸ್ವಿಯ ನವಂಬರ ಮೊದಲನೆಯ ದಿನಾಂಕದಂದು. ಇದಕ್ಕೂ ಒಂದು ವರ್ಷ ಮೊದಲೇ ಶ್ರೀಗಳವರು ವಿಭಿನ್ನ ಭಾಗಗಳಲ್ಲಿ ವಾಸಿಸಿದ್ದ ಶಿಷ್ಯ ಜನತೆಯನ್ನು ಒಂದುಗೂಡಿಸಲೆಳಸಿ ಕೃತಕೃತ್ಯರಾದರು.

"ಸಂಘೇ ಶಕ್ತಿಃ ಕಲೌ ಯುಗೇ" ಸಾಂಘಿಕ ಶಕ್ತಿಯೇ ಕಲಿಯುಗದಲ್ಲಿ ನಿಜವಾದ ಶಕ್ತಿ. ಶಿಷ್ಯಸಮುದಾಯದ ಸರ್ವಮುಖ ಉನ್ನತಿಗೆ ಪ್ರಕೃತ ಪರಿಸ್ಥಿತಿಯಲ್ಲಿ ಸಂಘಟನೆ ಅತ್ಯಾವಶ್ಯಕ ಎಂದು ಭಾವಿಸಿದ ಶ್ರೀಗಳವರು ಅಖಿಲ ಹವ್ಯಕ ಮಹಾಧಿವೇಶನವನ್ನು ಸೇರಿಸುವ ಏರ್ಪಾಡು ಮಾಡಿದರು.

ಈ ಮಹಾಧಿವೇಶನ ಮನ್ಮಥನಾಮ ಸಂವತ್ಸರದ ಆಶ್ವೀಜ ಬಹುಳ ಬಿದಿಗೆ ಹಾಗೂ ತದಿಗೆ (ದಿನಾಂಕ ೨-೧೧-೧೯೫೫ ಹಾಗೂ ೩-೧೧-೧೯೫೫) ಗಳಲ್ಲಿ ಎರಡು ದಿನಗಳ ಪರ್ಯಂತ ತೀರ್ಥರಾಜಪುರ ವಿರಾಜಿತ ಶ್ರೀ ರಾಮಚಂದ್ರಾಪುರ ಮಠದಲ್ಲಿ ಸಂಭ್ರಮದಿಂದ ನೆರವೇರಿತು.

ಈ ಅಧಿವೇಶನ ಜಯಪ್ರದವಾಗಲು ಶ್ರೀಹೊಸಬಾಳೆ ಸುಬ್ಬರಾಯರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿಯೂ ಶ್ರೀ ಚಕ್ರಕೋಡಿ ಶ್ಯಾಮಶಾಸ್ತ್ರಿಗಳು (ಪುತ್ತೂರಿನ ಪ್ರಸಿದ್ಧ ವಕೀಲರು) ಸೂಕ್ತ ಸಲಹೆಗಾರರಾಗಿಯೂ ಕಾರ್ಯ ನಿರ್ವಹಿಸಿದರು.

ಅಖಿಲ ಹವ್ಯಕ ಮಹಾಧಿವೇಶನದ ಉದ್ಘಾಟನೆಯನ್ನು ಸ್ವಾಮೀಜೀಯವರ ಅಧಿನಾಯಕತ್ವದಲ್ಲಿ ಲಾ ಕಾಲೇಜಿನ ಪ್ರಿನ್ಸಿಪಾಲ್ ವಿ. ಆರ್. ಭಟ್ಟರು ಅಧ್ಯಕ್ಷ-ರಾಗಿದ್ದು, ಜಿಲ್ಲಾ ನ್ಯಾಯಾಧೀಶರಾಗಿ ನಿವೃತ್ತರಾದ ಶ್ರೀಮಾನ್ ಎಂ. ಎಸ್. ಹೆಗಡೆ, ಎಂ.ಎ., ಎಲ್.ಎಲ್.ಬಿ., ಇವರು ನೆರವೇರಿಸಿದರು. ಅಂತಹ ಸಮಯದಲ್ಲಿ ತುಂಬು ಹೃದಯದಿಂದ ಶ್ರೀ ಹೆಗಡೆಯವರ ಮುಖದಿಂದ ಹೊರ ಹೊಮ್ಮಿದ ನುಡಿಯಿದು. "........ನಮ್ಮ ಸಮಾಜದ ಇತಿಹಾಸದಲ್ಲಿಯೇ ಇದೊಂದು ಹೊಸ ಆರಂಭ. ಇಂತಹ ಸಂದರ್ಭವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ನಮ್ಮ ಸ್ವಾಮೀಜೀಯವರಿಗೆ, ನಮ್ಮೆಲ್ಲರ ನೆನಕೆಗಳು ಸಲ್ಲಬೇಕು......"

ವಿ. ಆರ್. ಭಟ್ಟರು, ಸ್ವಾಮೀಜೀಯವರ ಸಮಾಜ ಸಂಘಟನೆಯ ಮಹಾ ಕಾರ್ಯವು ಅತಿ ಮಹತ್ವದ್ದೆಂದೂ ಗುರುಪರಂಪರೆಯಲ್ಲಿ ಇದು ಪ್ರಪ್ರಥಮವೆಂದೂ ಇದಕ್ಕೆ ಶಿಷ್ಯಸಮಾಜವು ಸ್ವಾಮೀಜೀಯವರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲ-ದೆಂದೂ ಉದ್ಗರಿಸಿದರು.

ಈ ಅಧಿವೇಶನದಲ್ಲಿ ಸಮಾಜೋನ್ನತಿಯನ್ನು ಸಾಧಿಸುವ ಕ್ರಮಗಳ ಕುರಿತಾದ ಹಲವು ನಿರ್ಣಯಗಳು ಮಂಡಿಸಲ್ಪಟ್ಟವು. ಬಿಚ್ಚು ಮನಸ್ಸಿನಿಂದ ನಡೆದವರಿಂದ ಚರ್ಚೆ ಗಳಾಗಿ ಹಲವು ಉಪಯುಕ್ತ ನಿರ್ಣಯಗಳು ಅಂಗೀಕೃತವಾದುವು. ಅಲ್ಲದೆ, ಈ ಸಮ್ಮೇಳನದ ಪರಿಣಾಮವಾಗಿ ಸಮಗ್ರ ಹವ್ಯಕ ಬಾಂಧವರ ನೈತಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಆರ್ಥಿಕ ಹಿತಸಂವರ್ಧನೆಗಾಗಿ ಶ್ರಮಿಸಲು ಎಲ್ಲಾ ಪ್ರದೇಶಗಳಿಂದ ಆಯ್ದ ೧೦೧ ಜನರ ಸದಸ್ಯರನ್ನೊಳಗೊಂಡ "ಅಖಿಲ ಹವ್ಯಕ ಮಹಾಮಂಡಲ" ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದರ ಮೊದಲ ಅಧ್ಯಕ್ಷರಾಗಿ ಶ್ರೀಮೇಳ-ವರಿಗೆ ಲಕ್ಷ್ಮೀನಾರಾಯಣಪ್ಪನವರನ್ನು ಆಯ್ಕೆ ಮಾಡಲಾಯಿತು.

ಪೂಜ್ಯ ಸ್ವಾಮೀಜೀಯವರು ಶುಭಾಶಂಸನೆ ಮಾಡಿದ್ದಲ್ಲದೆ, ಅಂತ್ಯದಲ್ಲಿ ಅನು-ಗ್ರಹ ಉಪನ್ಯಾಸ ಮಾಡಿ ಶಿಷ್ಯವೃಂದವನ್ನು ಮನಃಪೂರ್ವಕವಾಗಿ ಆಶೀರ್ವದಿಸಿ ಮಹಾಧಿವೇಶನವನ್ನು ಸಮಾಪ್ತಿಗೊಳಿಸಿದರು.

ಸಭಾಕಾರ್ಯಕ್ರಮದ ಅಂತ್ಯದಲ್ಲಿ ವಿವಿಧ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮ-ಗಳನ್ನು ಜೋಡಿಸಿ, ಕಾರ್ಯಕ್ರಮವು ಇನ್ನಷ್ಟು ವೈಶಿಷ್ಟ್ಯಪೂರ್ಣವಾಗುವಂತೆ ಮಾಡಲಾಗಿತ್ತು.

ಈಗಿನಂತೆ ಸಂಪರ್ಕಸಾಧನಗಳು ಹಾಗೂ ಇತರ ಸೌಕರ್ಯಗಳು ೧೯೫೫ ರಷ್ಟು ಹಿಂದಿನ ಆ ಕಾಲದಲ್ಲಿ ಏನೇನೂ ಇರಲಿಲ್ಲ. ಈ ಮಠಕ್ಕೆ ಸೇರಿದ ವಿವಿಧ ಭಾಗದ ಶಿಷ್ಯರು ಹೀಗೆ ಸಹಸ್ರ ಸಂಖ್ಯೆಯಲ್ಲಿ ಒಂದೆಡೆಯಲ್ಲಿ "ನ ಭೂತೋ ನ ಭವಿಷ್ಯತಿ" ಎಂಬಂತೆ ಅಧಿವೇಶನದಲ್ಲಿ ಕಲೆತು ವಿಚಾರ ವಿನಿಮಯ ಮಾಡಿ ಪರಸ್ಪರ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡು ತಮ್ಮ ಸಂಘಟನೆಯನ್ನು ಬೆಳೆಸುವಂತೆ ಮಾಡಿದರು – ಸ್ವಾಮೀಜೀ ಯವರು. ಶಿಷ್ಯರ ಸಹಾಯ ಬೆಂಬಲಗಳನ್ನು ಪಡೆದು, ಇದನ್ನು ಸಾಧಿಸಿದ ಸ್ವಾಮೀಜೀ ಯವರ ಕ್ರಿಯಾಶಕ್ತಿ ಹಾಗೂ ಸಂಘಟನಾ ಸಾಮರ್ಥ್ಯವು ಗುರುಪರಂಪರೆಯಲ್ಲಿ ನಿಜಕ್ಕೂ ಅಪ್ರತಿಮವಾಗಿದೆ.

ನೇತಾ ಭವಾನಖಿಲ ಹವ್ಯಕಮಂಡಲಸ್ಯ
ಶ್ರೋತಾ ಭವಾನಖಿಲಶಾಸ್ತ್ರ ಪುರಾಣರಾಶೇಃ ।
ತ್ರಾತಾ ಭವಾನಖಿಲದೀನಜನಾವಲೀನಾಂ
ಕೋ ನಾಮ ವೇತ್ತಿ ಭವತೋ ಮಹಿಮಾನಮೀಡ್ಯಮ್ ॥

ಧಾರ್ಮಿಕ ಪಂಚಾಂಗ ಪ್ರಕಟನೆ

ಶಿಷ್ಯವರ್ಗದ ಐಕ್ಯಕ್ಕೆ ಕಾಲಕಾಲಕ್ಕೆ ಜರುಗುವ ಧಾರ್ಮಿಕ ಕಾರ್ಯಗಳು ಸಹಾಯಕ. ಈ ಧರ್ಮ – ಕರ್ಮಗಳು ಪಂಚಾಂಗಕ್ಕೆ ಅನುಗುಣವಾಗಿ ನೆರವೇರುತ್ತವೆ. ಪಂಚಾಂಗ ಪ್ರಕಾಶಕರ ಸಂಖ್ಯಾಬಲವು ಅಧಿಕಗೊಂಡು ಮನೆಮನೆಗೆ ಒಂದೊಂದು ಪಂಚಾಂಗವಾಗಿ ಧಾರ್ಮಿಕ ಕರ್ಮಗಳು ಬೇರೆ ಬೇರೆ ಕಾಲದಲ್ಲಿ ಆಚರಿಸಲ್ಪಡತೊಡ-ಗಿದಾಗ ಸಮಾಜದಲ್ಲಿ ಅನೇಕತೆ ತಾಂಡವವಾಡುವುದು ಸಹಜ. ಇದನ್ನು ಗಮನಿಸಿದ ಶ್ರೀಗಳವರು ಈ ತೊಂದರೆಯ ಪರಿಹಾರಕ್ಕಾಗಿ ಯೋಚಿಸಿ, ಯೋಜಿಸಿದ ಕಾರ್ಯದ ಸಾಕಾರ ರೂಪವೇ ಕಳೆದ ಅನೇಕ ವರ್ಷಗಳಿಂದ ಪ್ರಕಟವಾಗುತ್ತಿರುವ ಧಾರ್ಮಿಕ ಪಂಚಾಂಗ.

ಪ್ರಪಂಚದಲ್ಲಿಯ ಸಮಸ್ತ ಪ್ರಾಣಿಗಳಲ್ಲಿ ಮಾನವನು ಅತ್ಯಂತ ಶ್ರೇಷ್ಠನಾಗಿದ್ದು ವೇದೋಕ್ತ ಧರ್ಮ, ಕರ್ಮಾಚರಣೆಯಿಂದ ತನ್ನ ಶ್ರೇಯಸ್ಸು – ಪ್ರೇಯಸ್ಸುಗಳನ್ನು ಸಾಧಿಸಿಕೊಳ್ಳಲು ಸಮರ್ಥನು. ವೇದೋಕ್ತವಾದ ಧರ್ಮ ಕಾರ್ಯಾಚರಣೆಗೆ ಶಾಸ್ತ್ರ ವಿಹಿತವಾದ ಕಾಲವು ಅತ್ಯಾವಶ್ಯಕ, ಅಂತಹ ಕಾಲವನ್ನು ಶಾಸ್ತ್ರಸಿದ್ಧ ಪಂಚಾಂಗದ ಮೂಲಕ ಅರಿತುಕೊಂಡು ಧರ್ಮವನ್ನು ಆಚರಿಸುವುದು ಅನೂಚಾನವಾಗಿ ನಡೆದುಬಂದ ಸಂಪ್ರದಾಯ,

ಆದರೆ ಇತ್ತೀಚೆಗೆ, ಪಂಚಾಂಗವನ್ನು ಪ್ರಕಟಿಸುವವರು – ಅನುಸರಿಸುವ ಗಣಿತ ಪದ್ಧತಿಯು ವಿಭಿನ್ನತೆಯಿಂದಾಗಿ ವೇದೋಕ್ತ ಧಾರ್ಮಿಕ ಕಾರ್ಯಗಳನ್ನು ಶಾಸ್ತ್ರೋಕ್ತ ಸಮಯದಲ್ಲಿ ಆಚರಿಸುತ್ತಾಬಂದ ಶಿಷ್ಯಜನತೆಗೆ ತೊಡಕು ತೊಂದರೆಗಳು ತುಂಬಾ ಉಂಟಾದವು. ಶೋಭಕೃತ್ ಸಂ॥ದ ನವರಾತ್ರಿ ಆಚರಣೆಯ ವಿಷಯದಲ್ಲಿ ಉದ್ಭವಿಸಿದ ತೊಂದರೆಯನ್ನು ನಿವಾರಿಸಲು ಶ್ರೀಮಠದಿಂದ ನಿರೂಪವನ್ನು ಹೊರಡಿಸಬೇಕಾಗಿ ಬಂತು. ಇನ್ನು ಮುಂದೆ ಶಿಷ್ಯಸಮಾಜದಲ್ಲಿ ಈ ರೀತಿಯ ತೊಂದರೆ, ಗೊಂದಲ ಅನೈಕ್ಯಗಳಿಗೆ ಅವಕಾಶವಾಗದಂತೆ ಧಾರ್ಮಿಕ ಕರ್ಮಾಚರಣೆಯಲ್ಲಿ ಏಕರೂಪತೆಯುಂಟಾಗಲು ಅನುಕೂಲವಾಗುವಂತೆ ಶಾಸ್ತ್ರಶುದ್ಧ ಪಂಚಾಂಗವನ್ನು ಶ್ರೀಸಂಸ್ಥಾನದ ನಿರ್ದೇಶನದಂತೆ ಪ್ರಕಟಿಸುವುದು ಯುಕ್ತವೆಂದು ಬಹುಸಂಖ್ಯಾತ ಶಿಷ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಅಭಿಪ್ರಾಯವನ್ನು ಮೊದಲೇ ತಳೆದಿದ್ದ ಶ್ರೀಗಳವರು, ಪಂಚಾಂಗ ಪ್ರಕಾಶನಗೊಳಿಸಲೆಳಸಿ, ಗಣಿತ ತಜ್ಞರ ಒಂದು ಸಮಿತಿಯನ್ನು ನಿಯಮಿಸಿದರು. ಈ ಸಮಿತಿಯು "ಧಾರ್ಮಿಕ ಪಂಚಾಂಗ ಪ್ರಕಟನಾ ಸಮಿತಿ" ಎಂಬ ನಾಮಧೇಯದಿಂದ ಬೆಳಕಿಗೆ ಬಂದಿದೆ. ತನ್ನ ಹೆಸರಿಗನುಸಾರವಾಗಿ ಈ ಸಮಿತಿ ಕಳೆದ ಹತ್ತು ವರ್ಷಗಳಿಂದ ಸಿದ್ಧಾಂತಾನುಸಾರವಾದ "ಧಾರ್ಮಿಕ ಪಂಚಾಂಗವನ್ನು" ಶ್ರೀಗಳವರ ನಿರ್ದೇಶನದಂತೆ ಪ್ರಕಟಿಸುತ್ತಾ ಬಂದಿದೆ.

ಗ್ರಹಗಳು, ನಕ್ಷತ್ರಗಳು ಮತ್ತು ಸೂರ್ಯಚಂದ್ರರ ಚಲನವಲನವನ್ನನುಸರಿಸಿ ಪಂಚಾಂಗದ ಗಣಿತ ಹಾಗೂ ಮುಹೂರ್ತಗಳ ನಿರ್ಣಯವಾಗುವುದು. ಮಂತ್ರ-ದ್ರಷ್ಟಾರರಾದ ಹಿಂದಿನ ಮಹರ್ಷಿಗಳು ಮಂತ್ರ ಹಾಗೂ ತಪಸ್ಸುಗಳಿಂದ ಪಡೆದ ತಮ್ಮ ದಿವ್ಯಶಕ್ತಿಯಿಂದ ಇವುಗಳ ಚಲನವಲನವನ್ನು ನಿರ್ದಿಷ್ಟವಾಗಿ ಕಂಡುಹಿಡಿಯಲು ಸಮರ್ಥರಾಗಿದ್ದರು. ಈ ವಾತಾವರಣದ ಮೂಲಕ ಬಾಹ್ಯಾಕಾಶವನ್ನು ವೀಕ್ಷಿಸಿದಾಗ ಹಲವು ಬಗೆಯ ತಪ್ಪುಗಳು ಬರುತ್ತವೆ ಎಂಬುದನ್ನು ವಿಜ್ಞಾನಿಗಳೂ ಒಪ್ಪಿಕೊಳ್ಳುತ್ತಾರೆ. ಅದಕ್ಕಾಗಿ ಬಾಹ್ಯದೃಷ್ಟಿ ಅಥವಾ ಯಂತ್ರ ದೃಷ್ಟಿಯನ್ನು ಅನುಸರಿಸಿ, ಮುಹೂರ್ತಗಳನ್ನು ನಿರ್ಣಯಿಸುವುದಕ್ಕಿಂತ ಪರಿಪೂರ್ಣವಾಗಿ ಸರಿಯಾಗಿ ತಿಳಿಯಬಲ್ಲ ಮಹರ್ಷಿಗಳ ಮಂತ್ರದೃಷ್ಟಿಯನ್ನು ಅನುಸರಿಸಿ ಪಂಚಾಂಗ ತಯಾರಿಸುವುದು ವಿಹಿತ ಹಾಗೂ ಸರಿಯೆಂಬುದೇ ಸ್ವಾಮೀಜೀಯವರ ಸಾರ್ಥಕ ಅಭಿಪ್ರಾಯವಾಗಿದೆ.

ಆದುದರಿಂದ ಶಾಸ್ತ್ರಶುದ್ಧವಾದ ಈ "ಧಾರ್ಮಿಕ ಪಂಚಾಂಗ"ಕ್ಕೆ ಅನುಗುಣವಾಗಿ ಧರ್ಮ – ಕರ್ಮಗಳನ್ನು ನಿಶ್ಚಿತವಾದ ಮುಹೂರ್ತದಲ್ಲಿ ಆಚರಿಸಿದರೆ ಶ್ರೇಯಸ್ಸು ಪ್ರೇಯಸ್ಸು ಎರಡಕ್ಕೂ ಭಾಜನರಾಗಬಹುದು ಎಂಬುದು ಗುರುಗಳ ನಿಶ್ಚಿತ ಅಭಿಮತವಾಗಿದೆ. ಹೀಗೆ ಧಾರ್ಮಿಕ ಪಂಚಾಂಗವನ್ನು ರಚಿಸಿ ಶಿಷ್ಯರನ್ನು ಅನುಗ್ರಹಿಸಿದ

ಶ್ರೀಗಳವರು ಪ್ರಸನ್ನ ಮುದ್ರೆಯಲ್ಲಿ

ಶ್ರೀಗುರುಗಳ ದೂರದೃಷ್ಟಿ, ದೃಢತೆ ಹಾಗೂ ಶಾಸ್ತ್ರದೃಷ್ಟಿಗಳು ನಿಜಕ್ಕೂ ಅತ್ಯಂತ ಶ್ಲಾಘನೀಯವಾಗಿವೆ.

ಹವ್ಯಕ ಮಹಾಸಭಾ (ಬೆಂಗಳೂರು)

ನವಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಈ ಸಂಸ್ಥೆಯಿದೆ. ನಮ್ಮ ಪ್ರಾಂತ್ಯದ ಎಲ್ಲ ವ್ಯವಹಾರಗಳ ಕೇಂದ್ರಸ್ಥಾನವಾದ ಬೆಂಗಳೂರಿನಲ್ಲಿ ನಮ್ಮ ಸಮಾಜದ ಅನೇಕ ಗಣ್ಯವ್ಯಕ್ತಿಗಳು ನೆಲಸಿದ್ದಾರೆ. ಅವರೆಲ್ಲರೂ ಸೇರಿ ಸ್ಥಾಪಿಸಿಕೊಂಡ "ಹವ್ಯಕ ಮಹಾಸಭಾ" ಎಂಬ ಈ ಸಂಸ್ಥೆ ಹವ್ಯಕ ಸೋದರರ ಉನ್ನತಿಗಾಗಿ ಶ್ರಮಿಸುತ್ತಿದೆ. ಈ ಸಭೆ ತನ್ನದೇ ಆದ ಒಂದು ಭವನವನ್ನು ನಿರ್ಮಾಣಮಾಡಲು ಹೊರಟಾಗ ಶ್ರೀಗಳವರು ೧೫೦೦ ರೂಪಾಯಿಗಳ ಸುವರ್ಣ ಮಂತ್ರಾಕ್ಷತೆಯನ್ನಿತ್ತು ಅನುಗ್ರಹಿಸಿದ್ದಾರೆ.

ಈ ಸಭೆ ತನ್ನ ಚಟುವಟಿಕೆಗಳನ್ನು ಸಮಗ್ರ ಜನತೆಗೆ ತಿಳಿಯಪಡಿಸಲು "ಹವ್ಯಕ" ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಾ ಬಂದಿದೆ. ಈ 'ಹವ್ಯಕ' ಪತ್ರಿಕೆಯ ಬಿಡುಗಡೆಯ ಸಮಾರಂಭಕ್ಕೆ ಚಿತ್ತೈಸಿ ಕಾರ್ಯಕ್ರಮವನ್ನು ಸುಗಮವಾಗಿ ನೆರವೇರಿಸಿ ಆಶೀರ್ವದಿಸಿದವರು ಶ್ರೀಗಳವರು.

ನಿರ್ಮಾಣಗೊಂಡು ನಿಂತ "ಹವ್ಯಕ ಭವನ"ದ ಉದ್ಘಾಟನೆ ಕಳೆದ ೧೯೭೪ನೆಯ ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ ನೆರವೇರಿತು. ಶ್ರೀಗಳವರು ಬೆಂಗಳೂರಿಗೆ ಚಿತ್ತೈಸಿದಾಗ ಈ "ಹವ್ಯಕ ಮಹಾಸಭಾ ಭವನ"ಕ್ಕೆ ಸಂದರ್ಶನ ನೀಡಿ, ಸೇರಿದ ಹವ್ಯಕ ಬಾಂಧವರನ್ನೆಲ್ಲಾ ಅನುಗ್ರಹಿಸಿದರು.

ಲೌಕಿಕ ವಿದ್ಯಾ ಪ್ರಸಾರ

"ಪ್ರತಿದಿನ ಪರಿವರ್ತನೆ ಹೊಂದುತ್ತಲಿರುವ ಈ ಪ್ರಪಂಚದಲ್ಲಿ ಬಾಳ ಬೇಕಾಗಿರುವ ಪ್ರತಿಯೊಬ್ಬನಿಗೆ ವೈದಿಕ ವಿದ್ಯಾಧ್ಯಯನ ಒಂದೇ ಸಾಲದು. ಆತ ಲೌಕಿಕ ವಿದ್ಯೆಯನ್ನು ಅರಿತಿರುವುದು ಅತ್ಯಾವಶ್ಯಕ" ಎಂಬ ಪ್ರಗತಿಪರ ವಿಚಾರಧಾರೆಯುಳ್ಳವರು ಶ್ರೀಗಳವರು. ಅವರ ದಿವ್ಯ ಮಾರ್ಗದರ್ಶನ, ಶುಭಾಶೀರ್ವಾದ, ಸುವರ್ಣಮಂತ್ರಾಕ್ಷತೆಗಳನ್ನು ಪಡೆದು ಚೈತನ್ಯಪೂರ್ಣವಾಗಿ ವಿದ್ಯಾದಾನ ಮಾಡುತ್ತಿರುವ ಲೌಕಿಕ ವಿದ್ಯಾ ಪ್ರಸಾರ ಕೇಂದ್ರಗಳಾದ ಕಾಲೇಜುಗಳು, ಜ್ಯೂನಿಯರ್ ಕಾಲೇಜುಗಳು, ಪ್ರೌಢವಿದ್ಯಾಶಾಲೆಗಳು ಇವುಗಳ ಸಂಖ್ಯೆಗಳು ಅಗಣಿತವಾಗಿವೆ. ಅಂತಹ ಕೆಲವು ವಿದ್ಯಾಸಂಸ್ಥೆಗಳಿಗೆ ಸ್ವಾಮೀಜೀಯವರು ನೀಡಿದ ಆಶೀರ್ವಾದ ಅನುಗ್ರಹಗಳ ವಿವರ ಈ ಕೆಳಗಿವೆ.

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನಲ್ಲಿಯ ಮಹಾತ್ಮಾ ಗಾಂಧಿ ಜನ್ಮ ಶತಾಬ್ದಿ ಕಾಲೇಜು, ಲೌಕಿಕ ವಿದ್ಯಾ ಪ್ರೇಮಿಗಳಾದ ಶ್ರೀಗಳವರ ಘನ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿದೆ. ಅವರ ಅಮೃತಹಸ್ತದಿಂದ ಹತ್ತು ಸಹಸ್ರ ರೂಪಾಯಿಗಳ ಸುವರ್ಣ ಮಂತ್ರಾಕ್ಷತೆ, ಆಶೀರ್ವಾದ ಪಡೆದ ಈ ಕಾಲೇಜು ದಿನೇ ದಿನೇ ಪ್ರವರ್ಧಮಾನ ಸ್ಥಿತಿಗೆ ಬರುತ್ತಿದೆ. ಶ್ರೀಗಳವರಿಗೆ ಈ ಕಾಲೇಜಿನ ವಿಷಯವಾಗಿ ತುಂಬಿದ ಪ್ರೇಮ ಅಭಿಮಾನಗಳಿವೆ.

ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಅಳಿಕೆಯಲ್ಲಿ "ಲೋಕ ಸೇವಾ ವೃಂದ" ಎಂಬ ಸಂಸ್ಥೆಯು-ವಸತಿಸಹಿತವಾಗಿ ಆದರ್ಶಪ್ರಾಯವಾದ ಪ್ರೌಢಶಾಲೆಯನ್ನೂ ವಿವಿಧ ಶಿಕ್ಷಣ ಸಂಸ್ಥೆಗಳನ್ನೂ ನಡೆಸುತ್ತಿದೆ. ಇದರ ಅಧ್ಯಕ್ಷರಾದ ಶ್ರೀ ಮಡಿಯಾಲ ನಾರಾಯಣಭಟ್ಟರ ನಮ್ರ ಪ್ರಾರ್ಥನೆಗೆ ಓಗೊಟ್ಟು ಈ ಸಂಸ್ಥೆಗಳಿಗೆ ಸಂದರ್ಶನವನ್ನಿತ್ತು, ತುಂಬಿದ ಸಭೆಯಲ್ಲಿ ಶ್ರೀಗಳವರು ಸುವರ್ಣಮಂತ್ರಾಕ್ಷತೆಯೊಂದಿಗೆ ಅನುಗ್ರಹ ಉಪನ್ಯಾಸ ಮಾಡಿ "ಈ ಸಂಸ್ಥೆಯು ಕಾಲೇಜು ಆಗಿ ಪರಿವರ್ತನೆ ಹೊಂದಿ ಬೆಳಗಿ ಬಾಳಲಿ" ಎಂದು ಆಶೀರ್ವದಿಸಿದರು. ಶ್ರೀಗಳವರ ಪರಮಾನುಗ್ರಹದಿಂದ ಅತ್ಯಲ್ಪ ಕಾಲದಲ್ಲಿಯೇ ಈ ಪ್ರೌಢಶಾಲೆಯು ಜ್ಯೂನಿಯರ್ ಕಾಲೇಜು ಆಗಿ ಪ್ರವರ್ತಿಸಿದೆ. ಜ್ಯೂನಿಯರ್ ಕಾಲೇಜಿನ ಉದ್ಘಾಟನೆಯ ಆಮಂತ್ರಣವನ್ನು ಸ್ವೀಕರಿಸಿದಾಗ ಪೂಜ್ಯ ಶ್ರೀಗಳವರು ಮತ್ತೆ ಸುವರ್ಣಮಂತ್ರಾಕ್ಷತೆ ನೀಡಿ ಆಶೀರ್ವದಿಸಿ ಒಳ್ಳಿತಾಗಲೆಂದು ಅನುಗ್ರಹಿಸಿದರು.

ಈ ವಿದ್ಯಾಸಂಸ್ಥೆಗೆ ಸ್ವಾಮೀಜೀಯವರು ತಾ. ೧೮-೧-೭೫ರಲ್ಲಿ ಮತ್ತೊಮ್ಮೆ ಸಂದರ್ಶನವನ್ನಿತ್ತು ಅದರ ದಶವಾರ್ಷಿಕೋತ್ಸವದ ಅಧ್ಯಕ್ಷ ಪೀಠದಿಂದ ಮತ್ತೊಮ್ಮೆ

ತುಂಬುಹೃದಯದಿಂದ ಆಶೀರ್ವಾದ ನೀಡಿ ಎರಡು ಸಾವಿರ ರೂಪಾಯಿಗಳ ಸುವರ್ಣ ಮಂತ್ರಾಕ್ಷತೆಯನ್ನು ಅನುಗ್ರಹಿಸಿದರು.

ಸಿದ್ದಾಪುರ ತಾಲೂಕಿನ (ಉತ್ತರ ಕನ್ನಡ) ಹಾರ್ಸಿಕಟ್ಟಾ ಹೈಸ್ಕೂಲಿನ ಕೋಣೆ ಶಿಲಾನ್ಯಾಸ ಸಮಾರಂಭದ ಅಧ್ಯಕ್ಷ ಪೀಠವನ್ನು ಅಲಂಕರಿಸಿದ ಶ್ರೀಗಳು ಸುವರ್ಣ ಮಂತ್ರಾಕ್ಷತೆಗಳನ್ನಿತ್ತು ಅನುಗ್ರಹಿಸಿದ್ದಾರೆ.

ಅದೇ ತಾಲೂಕಿನ ಇಟಗಿ ರಾಮೇಶ್ವರ ಹೈಸ್ಕೂಲಿನ ಉದ್ಘಾಟನಾ ಕಾರ್ಯವನ್ನು ನೆರವೇರಿಸಿಕೊಟ್ಟು, ವಿದ್ಯಾಭ್ಯಾಸದ ಕಡೆಗೆ ಆ ಪ್ರದೇಶದ ಜನತೆಯ ಮನಸ್ಸು ಆಕರ್ಷಿತವಾಗುವಂತೆ ಪ್ರಚೋದಿಸಿ, ಸುವರ್ಣ ಮಂತ್ರಾಕ್ಷತೆಗಳನ್ನಿತ್ತು ಆಶೀರ್ವದಿಸಿದರು – ನಮ್ಮ ಶ್ರೀಗಳವರು.

ಹೊನ್ನಾವರ ತಾಲೂಕು (ಉತ್ತರ ಕನ್ನಡ) ಕರ್ಕಿಗ್ರಾಮದ ಶ್ರೀ ಚೆನ್ನಕೇಶವ ಹೈಸ್ಕೂಲಿನ ವಿಜ್ಞಾನಮಂದಿರದ ಕೋಣೆ ಶಿಲಾನ್ಯಾಸ ಕಾರ್ಯವನ್ನು ಜರುಗಿಸಿ ಶ್ರೀ ಗುರುವರ್ಯರು ಸುವರ್ಣಮಂತ್ರಾಕ್ಷತೆಗಳನ್ನಿತ್ತು ಅನುಗ್ರಹಿಸಿದರು.

ಕೇರಳ ರಾಜ್ಯದ ಕಾಸರಗೋಡು ತಾಲೂಕು ಪೆಡಾಲ ಗ್ರಾಮದ ನೀರ್ಚಾಲು ಮಹಾಜನ ಸಂಸ್ಕೃತ ಕಾಲೇಜು ಇಂದು ಪ್ರೌಢಶಾಲೆಯಾಗಿ ಮಾರ್ಪಾಟು ಹೊಂದಿದೆ. ಈ ವಿದ್ಯಾಸಂಸ್ಥೆಯನ್ನು ನಡೆಸುತ್ತಲಿರುವ ಮಹಾಜನ ವಿದ್ಯಾವರ್ಧಕ ಸಂಘದ ಪ್ರಮುಖರಾದ ಸರ್ವಶ್ರೀ ಖಂಡಿಗೆ ಶ್ಯಾಮ ಭಟ್ಟರು, ಈಳಂತೋಡಿ ಜೋಯಿಸ ಕೃಷ್ಣ ಭಟ್ಟರು, ಡಾ॥ ಪಿ. ಯಸ್. ಶಾಸ್ತ್ರಿಗಳು, ನವಕಾನ ಶಂಕರನಾರಾಯಣ ಭಟ್ಟರು— ಮುಂತಾದವರ ಬಿನ್ನಹದ ಮೇರೆಗೆ ವಿದ್ಯಾಸಂಸ್ಥೆಯ ವಸ್ತ್ರಮಹೋತ್ಸವದ ಮುಕ್ತಾಯ ಸಮಾರಂಭಕ್ಕೆ ಚಿತ್ತೈಸಿ, ಅಧ್ಯಕ್ಷ ಪೀಠವನ್ನು ಅಲಂಕರಿಸಿದ ಶ್ರೀಗಳವರು ೨,೫೦೦ ರೂಪಾಯಿಗಳ ಸುವರ್ಣ ಮಂತ್ರಾಕ್ಷತೆಯನ್ನು ನೀಡಿ ಆಶೀರ್ವದಿಸಿದ್ದಾರೆ. “ಈ ವಿದ್ಯಾಸಂಸ್ಥೆ ಬೆಳೆಯಲಿ ಸಂಸ್ಕೃತ ವಿದ್ಯಾ ಪ್ರಸಾರಕ ಕೇಂದ್ರವಾಗಲಿ” ಎಂದು ಹಾರೈಸಿದ್ದಾರೆ.

ಲೋಕಸೇವಾ ವೃಂದದ ಅಧ್ಯಕ್ಷರಾದ ಶ್ರೀ ಮುಡಿಯಾಲ ನಾರಾಯಣ ಭಟ್ಟರು, ಸ್ವಾಮೀಜೀಯವರನ್ನು ತಮ್ಮ ಸಂಸ್ಥೆಗೆ ಇನ್ನೊಮ್ಮೆ ಸಂದರ್ಶನ ನೀಡಿ ಅವರ ವಾರ್ಷಿಕೋತ್ಸವದ ಅಧ್ಯಕ್ಷತೆವಹಿಸಿ, ಅದನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಈ ಸಂಸ್ಥೆಯ ಅಭಿವೃದ್ಧಿಯನ್ನು ನೋಡಿ ಸಂತೃಪ್ತರಾದ ಸ್ವಾಮೀಜೀಯವರು ಪ್ರೀತಿಯಿಂದ ಈ ಆಮಂತ್ರಣವನ್ನು ಸ್ವೀಕರಿಸಿದರು.

ಅದರಂತೆ ಲೋಕಸೇವಾವೃಂದದ ಮತ್ತು ವಿದ್ಯಾಸಂಸ್ಥೆಗಳ ವಾರ್ಷಿಕೋತ್ಸವವು ತಾ. ೧೧-೧-೭೫ ರಂದು ಅಳಿಕೆಯ ಸತ್ಯಸಾಯಿ ವಿಹಾರ ಎಂಬಲ್ಲಿ ವೈಭವದಿಂದ ಜರುಗಿತು. ಈ ಕಾರ್ಯಕ್ರಮ ಚರಿತ್ರಾರ್ಹವಾಗಿದೆ.

ಅಂದು ಅಪರಾಹ್ನ ಸುಮಾರು ೨-೩೦ಕ್ಕೆ ಸ್ವಾಮೀಜೀಯವರು ಪರಿವಾರ ಸಮೇತರಾಗಿ ವಿದ್ಯಾನಿವೇಶನಕ್ಕೆ ಆಗಮಿಸಿದಾಗ ಅಧ್ಯಕ್ಷ ಶ್ರೀನಾರಾಯಣ ಭಟ್ಟರು ಪುಷ್ಪಹಾರವನ್ನು ಸಮರ್ಪಿಸಿ ಪೂರ್ಣಕುಂಭದಿಂದ ಸ್ವಾಗತಿಸಿದರು. ಇಕ್ಕೆಲದಲ್ಲಿ ಸಾಲಾಗಿ ನಿಂತ ಸಮವಸ್ತ್ರಧರಿಸಿದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಕ್ತಿಯಿಂದ ವಂದಿ-ಸುತ್ತಿದ್ದಂತೆಯೇ ವಾದ್ಯಘೋಷ, ಬ್ಯಾಂಡು ಮತ್ತು ವೇದಘೋಷಗಳೊಡನೆ ಸ್ವಾಮೀಜೀಯವರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಬಂದು, ನೆರೆದ ಹಲವು ಮಹನೀಯರ ಸಮ್ಮುಖದಲ್ಲಿ ಪಾದಪೂಜೆ, ಫಲಕಾಣಿಕೆ – ಮೊದಲಾದುವುಗಳನ್ನು ನೀಡಿ, ಸ್ವಾಮೀಜೀಯವರನ್ನು ಗೌರವಿಸಲಾಯಿತು.

ತದನಂತರ ಸ್ವಾಮೀಜೀಯವರು ಲೋಕಸೇವಾವೃಂದದ ವಿಸ್ತಾರವಾದ ನಿವೇಶನದಲ್ಲಿರುವ ವಿವಿಧ ಅಂಗಸಂಸ್ಥೆಗಳನ್ನು ವೀಕ್ಷಿಸಿ, ಅವುಗಳಿಗೆಲ್ಲಾ ಮಂತ್ರಾಕ್ಷತೆ ಎರಚಿ ಪವಿತ್ರಗೊಳಿಸಿದರು.

ಸಂಜೆ ೪-೪೫ ಗಂಟೆಗೆ ಕರ್ನಾಟಕ ಪ್ರಾಂತ್ಯದ ಸಾರ್ವಜನಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಚ್. ವಿ. ಶ್ರೀರಂಗರಾಜು ಅವರೂ ನಿವೇಶನಕ್ಕೆ ಆಗಮಿಸಿ, ಪೂಜ್ಯಸ್ವಾಮಿಗಳ ಭೇಟಿಯನ್ನು ಪಡೆದುಕೊಂಡರು.

ಅನಂತರ ಇಬ್ಬರೂ ಜೊತೆಯಾಗಿ ವಾದ್ಯಘೋಷ, ವೇದಘೋಷಗಳೊಂದಿಗೆ ಉದ್ಘಾಟಿತವಾಗಬೇಕಾದ ವಿದ್ಯಾರ್ಥಿನಿಲಯದ "ವಾಲ್ಮೀಕಿ ಸದನ" ಮತ್ತು ವಿದ್ಯಾರ್ಥಿ ನಿಲಯದ "ಯಶೋಧರಾ" ಎಂಬ ಕಟ್ಟಡಗಳ ಕಡೆಗೆ ತೆರಳಿದರು. ಮಾನ್ಯ ಶಿಕ್ಷಣ ನಿರ್ದೇಶಕರೂ ಸ್ವಾಮೀಜೀಯವರ ಅನುಮತಿಯನ್ನು ಪಡೆದು ಎರಡು ಕಟ್ಟಡಗಳನು ವಿದ್ಯುಕ್ತವಾಗಿ ಉದ್ಘಾಟಿಸಿದರು. ಸ್ವಾಮೀಜೀಯವರು ಕಟ್ಟಡದೊಳಕ್ಕೆ ಪ್ರವೇಶಿಸಿ, ಮಂತ್ರಾಕ್ಷತೆ ಹಾಕಿ ಆಶೀರ್ವದಿಸಿದರು.

ಅನಂತರ ಮೆರವಣಿಗೆಯಲ್ಲಿ ಇಬ್ಬರೂ ಸಭಾನಿವೇಶನಕ್ಕೆ ಬಂದು ವೇದಿಕೆಯನ್ನೇರಿದರು. ವೈದಿಕಪ್ರಾರ್ಥನೆ, ಬಾಲಿಕೆಯರಿಂದ ಪ್ರಾರ್ಥನೆ ಆದ ಅನಂತರ, ಪೂಜ್ಯ ಸ್ವಾಮೀಜೀಯವರಿಗೆ ಮತ್ತು ಶಿಕ್ಷಣ ನಿರ್ದೇಶಕರಿಗೆ ಹಾರ ಸಮರ್ಪಣೆ ಮಾಡಲಾಯಿತು ಮತ್ತು ಸ್ವಾಮೀಜೀಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಅದನ್ನು ನಡೆಸಿಕೊಡಬೇಕೆಂದು, ಪ್ರಾರ್ಥಿಸಲಾಯಿತು.

ಅಧ್ಯಕ್ಷಪೀಠದಿಂದ ಪೂಜ್ಯ ಶ್ರೀ ಸ್ವಾಮೀಜೀಯವರು ಅನುಗ್ರಹ ಭಾಷಣ ಮಾಡುತ್ತಾ ಹೀಗೆಂದರು :—

"ನಮ್ಮ ದೇಶ ಅತ್ಯಂತ ಪವಿತ್ರ ದೇಶವೆಂದೆನಿಸಿಕೊಂಡಿದೆ. ಇಲ್ಲಿ ಪರಮಾತ್ಮನ ಅನೇಕ ಅವತಾರಗಳಾಗಿವೆ. ಮುಂದೆಯೂ ಆದೀತು. ಅನೇಕ ಪವಿತ್ರನದಿ, ಪುಣ್ಯಕ್ಷೇತ್ರ

ಗಳಿಂದ ಕೂಡಿದ ಈ ಭಾರತವು ಅನೇಕಾನೇಕ ಸಾಧು ಸಂತರ, ಪುಣ್ಯಪುರುಷರ, ಅವತಾರೀ ಪುರುಷರ, ಜನ್ಮ ಕ್ಷೇತ್ರವಾಗಿ ಜಗತ್ತಿಗೆ ಮಾರ್ಗದರ್ಶನ ನೀಡುವ ಯೋಗ್ಯತೆ ಯಿಂದ ಕೂಡಿದೆ.

ಈ ಸಂಸಾರ ಪರಿವರ್ತನಶೀಲವಾದುದು. ಹರಿಯುವಂತಹ ನೀರಿನಂತೆ ಇದು ನಿರಂತರ ಸಾಗುತ್ತಿದೆ. ಸಂಸಾರ ಅನಾದಿ. ಸೂರ್ಯನ ಉದಯಾಸ್ತಗಳು ಕಾಲದ ಬದಲಾವಣೆಗೆ ಕಾರಣವಾಗಿ ಸಕಲ ಜೀವರಾಶಿಗಳ ಜೀವನದಲ್ಲಿ ನಿರಂತರ ವ್ಯತ್ಯಾಸ ಗಳನ್ನು ತರಲು ಕಾರಣವಾಗಿದ್ದರೂ ಹೇಗೆ ಒಂದೇ ರೀತಿಯಾಗಿ ಕಾಣಿಸುವುದೋ ಹಾಗೆಯೇ ನಮ್ಮ ಸಂಸಾರವೂ ಆಗಿದೆ. ದುರ್ಲಭವಾದ ಮಾನವಜನ್ಮವನ್ನು ಪಡೆದ ನಾವು ಈ ಜೀವನವನ್ನು, ಪವಿತ್ರಗೊಳಿಸಬೇಕು. ಪರಮಾತ್ಮನು ಅಣುವಿನಲ್ಲಿ ಅಣು, ಮಹತ್ತಿನಲ್ಲಿ ಮಹತ್ತೂ ಆಗಿದ್ದಾನೆ. ಬ್ರಹ್ಮಸೃಷ್ಟಿಯಲ್ಲಿ ಮಾನವನೇ ಶ್ರೇಷ್ಠ. ಎಲ್ಲಾ ಜೀವರಾಶಿಗಳನ್ನೂ ಸೃಷ್ಟಿಸಿ, ಕೊನೆಗೆ ಮಾನವನನ್ನು ಸೃಷ್ಟಿಸಿದಾಗ ಬ್ರಹ್ಮನಿಗೆ ತನ್ನ ಸೃಷ್ಟಿ ಸಫಲವಾಯಿತು – ಎಂದು ಕಾಣಿಸಿತು. ಪ್ರತಿಯೊಬ್ಬನ ದೇಹದಲ್ಲೂ ಆತ್ಮ-ಸ್ವರೂಪಿಯಾದ ದೇವನಿದ್ದಾನೆ. ಇದನ್ನರಿತು ಜ್ಞಾನಿಯಾಗಬೇಕು. ಜ್ಞಾನಿಯಾದ ಮಾನವನಿಗೂ ಪರಮಾತ್ಮನಿಗೂ ಭೇದವಿಲ್ಲ.

ಮನುಷ್ಯ ಇಂದು ತನ್ನ ಬುದ್ಧಿಯನ್ನು ಉಪಯೋಗಿಸಿ ಮೀನಿನಂತೆ ನೀರಿನಲ್ಲಿ ಚಲಿಸಬಲ್ಲ. ಹಕ್ಕಿಯಂತೆ ಆಕಾಶದಲ್ಲಿ ಹಾರಬಲ್ಲ. ಚಂದ್ರಲೋಕಕ್ಕೂ ಹೋಗಿ ಬರಬಲ್ಲ ನಮ್ಮ ಪೂರ್ವಿಕರು ವೈಜ್ಞಾನಿಕವಾಗಿ ಇಷ್ಟು ಮುಂದುವರಿದಿರದಿದ್ದರೂ ಆಧ್ಯಾತ್ಮಿಕ ವಾಗಿ ಮುಂದುವರಿದಿದ್ದರು. ಭೌತಿಕ ವಿಜ್ಞಾನವು ನಮ್ಮನ್ನು ಮತ್ತು ಮತ್ತು ದುಃಖಕ್ಕೆ ತಳ್ಳಬಹುದೇ ಹೊರತು ಅದರಿಂದ ಸುಖವಿಲ್ಲ. "ಅಶಾಂತಸ್ಯ ಕುತಃ ಸುಖಂ" ಎಂದರೆ ಶಾಂತಿಯಿಲ್ಲದವನಿಗೆ ಸುಖವಿಲ್ಲ. ಜ್ಞಾನಿಗಳು ಪಡೆಯುವ ಸುಖ ಮಾತ್ರ ಶಾಶ್ವತ. 'ಪಂಡಿತಾಃ ಸಮದರ್ಶಿನಃ' ಎಂಬಂತೆ ಜ್ಞಾನಿಗಳಾದವರಿಗೆ ಎಲ್ಲರಲ್ಲೂ ತಮ್ಮ ಸ್ವರೂಪ ಕಂಡುಬರುತ್ತದೆ. ಮಾನವ ತನ್ನ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳನ್ನು ಉಪಯೋಗಿಸಿ ಆಧ್ಯಾತ್ಮಿಕ ಸಾಧನೆ ಮಾಡಬೇಕು.

ಲೋಕಸೇವಾವೃಂದದಿಂದ ಹಿಂದೆ ಪ್ರಕಟಿತವಾದ ಪುಸ್ತಕದಲ್ಲಿ ಕಾಣಿಸಿದಂತೆ 'ಭಾರತೀಯ ಮಿಶಿನರಿ ಸಂಸ್ಥೆ' ಯನ್ನು ಸ್ಥಾಪಿಸುವ ಉದ್ದೇಶವನ್ನು ಇರಿಸಿಕೊಂಡು ಮುಂದುವರಿಯುತ್ತಿರುವುದು ನಮಗೆ ತುಂಬಾ ಹರ್ಷದ ವಿಚಾರ. ನ್ಯಾಯಕ್ಕೆ ಧಾರ್ಮಿಕ ಕಾರ್ಯಗಳಿಗೆ ದೈವ ಸಹಾಯ ಕೂಡಿ ಬರುತ್ತದೆ. ೧೯೬೭ನೇ ಇಸವಿ ಯಲ್ಲೊಮ್ಮೆ ಇಲ್ಲಿಗೆ ಬಂದಿದ್ದೆವು. ಆಗ ಇಲ್ಲಿ ಏನೂ ಇರಲಿಲ್ಲ. ಈಗ ತುಂಬಾ ಅಭಿವೃದ್ಧಿಯಾಗಿದೆ. ಜ್ಯೂನಿಯರ್ ಕಾಲೇಜು ತನಕವೂ ಆಗಿದೆ. ಇದರಿಂದ ನಮಗೆ ತುಂಬಾ ಸಂತೋಷವಾಗಿದೆ. ಅಲ್ಲದೆ ಇಲ್ಲಿ ಎಲ್ಲರೂ ತ್ಯಾಗಬುದ್ಧಿಯಿಂದ ಪರಸ್ಪರ ಹೊಂದಿಕೊಂಡು ಬಾಳುವುದು ನಿಜಕ್ಕೂ ಆದರ್ಶವಾಗಿದೆ.

ಇದೆಲ್ಲಾ ಒಬ್ಬನಿಂದ ಆಗುವ ಕಾರ್ಯವಲ್ಲ. ಮಹಾಕಾರ್ಯವನ್ನು ಸಾಧಿಸಲು ಅನೇಕರ ಸ್ವಯಂಸ್ಫೂರ್ತಿ, ತ್ಯಾಗ, ಸಹಕಾರಗಳು ಬೇಕು.

ಅಂತಹ ಸದ್ಬುದ್ಧಿಯು ಎಲ್ಲರಲ್ಲಿಯೂ ಬರಲಿ. ಈ ಸಂಸ್ಥೆಯು ಮುಂದೆ ದೈವಾನುಗ್ರಹದಿಂದ ದೊಡ್ಡ ಆಧ್ಯಾತ್ಮಿಕ ಕೇಂದ್ರವಾಗಿ ಪ್ರಕಾಶಿಸಲಿ. ಒಂದು ಪೂರ್ಣಮಟ್ಟದ ಕಾಲೇಜು ಇಲ್ಲಿ ಬೆಳೆದು ಬರಲಿ'' ಎಂದು ಮುಂತಾಗಿ ಆಶೀರ್ವದಿಸಿದರು.

ಉಪನ್ಯಾಸದ ಅಂತ್ಯದಲ್ಲಿ ಎರಡು ಸಾವಿರ ರೂಪಾಯಿಗಳಿಂದ ಕೂಡಿದ ಮಂತ್ರಾಕ್ಷತೆಯನ್ನು ಪೂಜ್ಯ ಸ್ವಾಮೀಜೀಯವರು ಅತ್ಯಂತ ಪ್ರೇಮಪೂರ್ವಕವಾಗಿ ನೀಡಿ, ಮುಂದೆ ಒಳ್ಳಿತಾಗಲೆಂದು ಅನುಗ್ರಹಿಸಿದರು.

ಸಹಸ್ರಾರು ಜನ ವಿದ್ಯಾವಂತರು ಸೇರಿದ ಈ ಭವ್ಯ ಕಾರ್ಯಕ್ರಮದ ಅನಂತರ ಪೂಜ್ಯ ಸ್ವಾಮೀಜೀಯವರು ಹಲವರಿಗೆ ಮಂತ್ರಾಕ್ಷತೆ ನೀಡಿ ಹರಸಿ, ಎಲ್ಲರ ವಂದನೆಗಳ ಮಧ್ಯೆ ಪೆರಾಜೆಯ ಶ್ರೀರಾಮಚಂದ್ರಾಪುರ ಮಠಕ್ಕೆ ಮರಳಿ ಬಂದರು.

ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಜರುಗಿದ ದಶಮಾನೋತ್ಸವದ ಅಂಗವಾಗಿ ತಾ. ೧೭-೧-೭೫ರಲ್ಲು ಸಂಜೆ ಗಂ. ೬-೩೦ಕ್ಕೆ ಕಾಲೇಜಿನ ವಾರ್ಷಿಕೋತ್ಸವವು ದ. ಕ. ಜಿಲ್ಲಾ ಸೆಶನ್ಸ್ ನ್ಯಾಯಾಧೀಶರಾದ ಶ್ರೀ ಪಿ. ಎ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಂದರ್ಭದಲ್ಲಿ ಪೂಜ್ಯ ಸ್ವಾಮೀಜೀಯವರು ಗೌರವದ ಪ್ರಧಾನ ಅತಿಥಿಗಳಾಗಿ ಭಾಗವಹಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಪೂಜ್ಯ ಸ್ವಾಮೀಜೀಯವರನ್ನು ಭಕ್ತಿಯಿಂದ ಕಾಲೇಜಿನ ನಿವೇಶನದಲ್ಲಿ ಎದುರ್ಗೊಂಡು ವೇದಘೋಷದಲ್ಲಿ ಕರೆತರಲಾಯಿತು.

ಈ ಸಮಾರಂಭದಲ್ಲಿ ಪೂಜ್ಯ ಸ್ವಾಮೀಜೀಯವರು ಮತ್ತು ನ್ಯಾಯಾಧೀಶರು ಉಪಸ್ಥಿತರಾದ ಮೇಲೆ, ಅವರಿಗೆ ಗೌರವದ ಸ್ವಾಗತವನ್ನು ನೀಡಲಾಯಿತು.

ನ್ಯಾಯಾಧೀಶರ ಅಧ್ಯಕ್ಷ ಭಾಷಣವಾದ ಮೇಲೆ ಸ್ವಾಮೀಜೀಯವರು ಅನುಗ್ರಹ ಭಾಷಣ ಮಾಡಿ, ಅಧ್ಯಾಪಕ, ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನಾಡಿದರು ಸ್ವಾಮೀಜೀಯವರು ಉಪನ್ಯಾಸದ ಅಂತ್ಯದಲ್ಲಿ ಕಾಲೇಜಿಗೆ ರೂ. ೫೦೦೦ರ ಸುವರ್ಣ ಮಂತ್ರಾಕ್ಷತೆಯನ್ನು ನೀಡಿ ಕಾಲೇಜು ಅಭ್ಯುದಯದ ಪಥದಲ್ಲಿ ಮುಂದೆ ಸಾಗಲಿ – ಎಂದು ಹರಸಿದರು.

ಮರುದಿನ ಅಂದರೆ ತಾ. ೧೩-೧-೭೫ ರಂದು ಬೆಳಗ್ಗೆ ಪೂಜ್ಯ ಸ್ವಾಮೀಜೀಯವರು ಕಾಲೇಜಿನ ನಿವೇಶನಕ್ಕೆ ಮರಳಿ ಚಿತ್ತೈಸಿ ವಿವೇಕಾನಂದ ಕಾಲೇಜು ದಶಮಾನೋತ್ಸವ ಗ್ರಂಥಾಲಯದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಆಶೀರ್ವಚನ ನೀಡುತ್ತಾ ಸ್ವಾಮೀಜೀಯವರು ವಿದ್ಯೆಯ ನಿಜವಾದ ಉದ್ದೇಶವೇನೆಂಬುದನ್ನು ದುನ-

ವರಿಕೆ ಮಾಡಿಕೊಟ್ಟರು. ನೆರೆದ ವಿದ್ಯಾರ್ಥಿಗಳು, ಪೋಷಕರು ಮತ್ತು ಅಧ್ಯಾಪಕ ವರ್ಗದವರು ಅನುಗ್ರಹ ಭಾಷಣವನ್ನು ಆಲಿಸಿದರಲ್ಲದೆ ಸ್ವಾಮೀಜೀಯವರ ಆಶೀರ್ವ-ಚನಗಳನ್ನೂ ಪಡೆದುಕೊಂಡರು.

ಇವಿಷ್ಟೇ ಅಲ್ಲದೆ ಅನೇಕ ಶಾಲೆಗಳು, ಕಾಲೇಜುಗಳು ಮತ್ತು ಲೌಕಿಕ ವಿದ್ಯಾ ಸಂಸ್ಥೆಗಳು ಶ್ರೀಗಳವರ ಚರಣಧೂಳಿಯಿಂದ ಪವಿತ್ರವಾಗಿವೆ, ದಿವ್ಯಾಶೀರ್ವಾದ ದಿಂದ ಜೀವಕಳೆ ಹೊಂದಿವೆ. ಈ ಸಂಗತಿಗಳನ್ನೆಲ್ಲಾ ಗಮನಿಸಿದಾಗ, "ಧರ್ಮ ಪೀಠ ಗಳು ಹಾಗೂ ಧರ್ಮಾಚಾರ್ಯರು ಕೇವಲ ಸಂಪ್ರದಾಯಶರಣರು" ಎಂಬ ಪೂರ್ವ ಗ್ರಹಪೀಡಿತವಾದ ಜನತೆಯ ಭ್ರಮೆ ನಿರಸನವಾಗದಿರದು.

ಪುಸ್ತಕ ಪ್ರಕಾಶನ – ಪ್ರೋತ್ಸಾಹ

ಶ್ರೀ ಗುರುಮಠದ ಶಿಷ್ಯಜನತೆ ವಿಶಾಲಪ್ರದೇಶದಲ್ಲಿ ಪಸರಿಸಿದೆಯಷ್ಟೆ? ಹಳ್ಳಿ ಹಳ್ಳಿಗೆ ಮನೆಮನೆಗೆ ಚಿತ್ತೈಸಿ ಅವರೆಲ್ಲರನ್ನು ಸ್ವಧರ್ಮಾವಲಂಬಿಗಳನ್ನಾಗಿ ಮಾಡುವುದು, ಅವರೆಲ್ಲರಿಗೆ ತಮ್ಮ ಮಠ, ತಮ್ಮ ಗುರುಗಳು, ತಮ್ಮ ಧರ್ಮ ಹಾಗೂ ಸಂಸ್ಕೃತಿ ಇತ್ಯಾದಿಗಳ ಬಗೆಗೆ ಯೋಗ್ಯ ತಿಳಿವಳಿಕೆ ನೀಡುವುದು ದುಸ್ತರ – ದುಸ್ಸಾಧ್ಯ. ಸಾಕ್ಷರನಾದ ಪ್ರತಿಯೊಬ್ಬನನ್ನೂ ಜಾಗೃತಗೊಳಿಸಬಹುದಾದ ಸುಲಭ ಸಾಧನ ಪುಸ್ತಕ. ನಮ್ಮ ಸಮಾಜದ ಬಹುಸಂಖ್ಯಾತ ಜನರು ವಿದ್ಯಾವಂತರು, ಸಾಕ್ಷರರು. ಆದುದರಿಂದ ಪುಸ್ತಕ ಮಾಧ್ಯಮದ ಮೂಲಕ ಶಿಷ್ಯಸಮುದಾಯವನ್ನು ಜಾಗೃತಗೊಳಿಸಲೆಳಸಿದರು – ಶ್ರೀಗಳವರು.

ತಾವು ಯಾರು? ತಮ್ಮ ಗುರುಗಳು ಯಾರು? ತಮ್ಮದು ಭವ್ಯ ಪರಂಪರೆ ಏನಾದರೂ ಇದೆಯೇ? ನಮ್ಮ ಶ್ರೀಗುರುಪೀಠದಲ್ಲಿ ಈಗ ಯಾರು ವಿರಾಜಿಸುತ್ತಿದ್ದಾರೆ? ಶ್ರೀ ಗುರುಗಳು ಯಾರು ಹಾಗೂ ಮಠದ ಬಗೆಗೆ ಶಿಷ್ಯರು ಮಾಡಬೇಕಾದ ಕಾರ್ಯಗಳೇನಾದರೂ ಇದೆಯೇ? ಇದೇ ಮೊದಲಾದ ಸಂದೇಹ ಸಂಮೋಹಗಳಿಗೆ ಸಮರ್ಪಕವಾದ ಉತ್ತರವನ್ನು ಅರಿತುಕೊಂಡಿರುವುದು ಮಾನವನ ಮೊದಲ ಕರ್ತವ್ಯ. ಈ ವಿಷಯವನ್ನು ತಿಳಿದು ಜ್ಞಾನ ಸೌರಭ ಬೀರಲು ಶ್ರೀಗಳವರು ಅರಳಿಸಿದ ಪ್ರಥಮ ಪುಷ್ಪವೇ - 'ಹವ್ಯಕ ಸಮಾಜ ಹಾಗೂ ಗುರುಮಠದ ಇತಿಹಾಸ.'

ವಿಶೇಷ ವಿಷಯಗಳನ್ನು ಒಳಗೊಂಡ ಪೀಠಿಕೆ ಹಾಗೂ ಪರಿಶಿಷ್ಟಗಳಿಂದ ಕೂಡಿ ಈ ಪುಸ್ತಕದ ದ್ವಿತೀಯ ಮುದ್ರಣದ ಪ್ರತಿಗಳೂ ಮುಗಿದಿವೆ ಎಂಬುದು ಈ ಪುಸ್ತಕದ ಜನಪ್ರಿಯತೆಗೆ ಒಂದು ದ್ಯೋತಕ.

ಸ್ನಾನ ಸಂಧ್ಯಾವಂದನಾದಿಗಳು ಅವಶ್ಯಕವಾಗಿ ಮಾಡಲೇಬೇಕಾದ ಕಾರ್ಯಗಳು. ಉದರಂಭರಣಕ್ಕಾಗಿ ಪರಕೀಯ ವಿದ್ಯೆ – ಸಂಸ್ಕೃತಿಗಳಿಗೆ ಮಾರುಹೋದ ಜನತೆ ನಿತ್ಯ ಕರ್ಮಾನುಷ್ಠಾನವನ್ನು ಈ ಕಾಲದಲ್ಲಿ ತ್ಯಜಿಸುತ್ತಲಿದೆ. ಇಂತಹ ಎಲ್ಲರನ್ನೂ ಕರ್ತವ್ಯ ಪರಾಯಣರನ್ನಾಗಿಸಲು ಪ್ರಕಾಶಿಸಿದ ದ್ವಿತೀಯ ದಿವ್ಯಜ್ಞಾನ ದೀಪಿಕೆಯೇ - "ಬೋಧಾಯನೀಯ ಸಂಧ್ಯಾವಿಧಿ" ಎಂಬ ಸಂಧ್ಯಾವಂದನೆಯ ಪುಸ್ತಕ.

ಇವಲ್ಲದೆ ಇನ್ನೂ ಅನೇಕ ಪುಸ್ತಕಗಳನ್ನು ಬೆಳಕಿಗೆ ತರುವ ಆಲೋಚನೆಗಳು ರೂಪುಗೊಂಡು ಕಾರ್ಯೋನ್ಮುಖವಾಗುತ್ತಿವೆಯೆಂಬುದು ಇಲ್ಲಿ ಉಲ್ಲೇಖನೀಯ.

ಸ್ವತಃ ತಾವು ಧಾರ್ಮಿಕ ಗ್ರಂಥಗಳನ್ನು ಪ್ರಕಾಶನಗೊಳಿಸಿದುದಲ್ಲದೆ, ಶ್ರೀಗಳವರು ಅಂತಹ ಪುಸ್ತಕಗಳನ್ನು ಪ್ರಕಾಶನ ಪಡಿಸುವವರಿಗೂ ಸಾಕಷ್ಟು ಪ್ರೋತ್ಸಾಹವನ್ನು ನೀಡಿದ್ದಾರೆ.

"ಕನ್ನಡ ಸಂಧ್ಯಾಭಾಷ್ಯ" "ವೆಂಕಟೇಶ ಪ್ರಯೋಗ ರತ್ನಮಾಲಾ ಪ್ರಕಾಶ", 'ಶ್ರೀರಾಮಚರಿತ' 'ಭಾರತದರ್ಶನ – ಪ್ರಕಾಶನ' ಬೆಂಗಳೂರು ಇವರ ಪ್ರಕಾಶನಗಳಾದ 'ರಾಮಾಯಣ', 'ಮಹಾಭಾರತ' ಹಾಗೂ 'ಗೋ–ಆಧಾರಿತ ಅರ್ಥನೀತಿ' ಇತ್ಯಾದಿ ಸಂಸ್ಕೃತ – ಕನ್ನಡ ಪುಸ್ತಕಗಳ ಪ್ರಕಟಣೆಗಳಿಗೆ ಶ್ರೀಗಳವರಿಂದ ಸುವರ್ಣ ಮಂತ್ರಾಕ್ಷತೆ-ಆಶೀರ್ವಾದಗಳೊಂದಿಗೆ ಪ್ರೋತ್ಸಾಹ ನೀಡೋಣವಾಗಿದೆ. ಅಲ್ಲದೆ ಪ್ರಕಟಿತ ಧಾರ್ಮಿಕ ಗ್ರಂಥಗಳ ಪ್ರಚಾರ ಪ್ರಸಾರಗಳಿಗೂ ಸಾಕಷ್ಟು ಬೆಂಬಲವೀಯೋಣವಾಗಿದೆ.

ಇತ್ತೀಚೆಗೆ "ಲೋಕಸೇವಾವೃಂದ, ಉಳಿಕೆ" ಇದರ ವತಿಯಿಂದ ಒಂದು ಚಿಕ್ಕ ಹೊತ್ತಿಗೆ ಪ್ರಕಟವಾಯಿತು. 'ವಿರಾಟ್‌ರೂಪದ ಭಾರತೀಯ ಮಿಶನರಿ ಸಂಸ್ಥೆ' ಎಂಬ ಹೆಸರಿನ ಈ ಪುಸ್ತಕವನ್ನು ಶ್ರೀ ಮಡಿಯಾಲ ನಾರಾಯಣ ಭಟ್ಟರು ರಚಿಸಿದ್ದರು. ಭಾರತದ ಹಾಗೂ ಹಿಂದೂಸಮಾಜದ ಪುನರುತ್ಥಾನಕ್ಕೆ ತ್ಯಾಗಜೀವಿಗಳ, ಧರ್ಮ ಪ್ರಚಾರಕರ ಒಂದು (ಮಿಶನರಿ) ಸಂಘದ ಆವಶ್ಯಕತೆಯಿದೆ – ಎಂಬ ಅಭಿಪ್ರಾಯವನ್ನು ಅವರು ಪ್ರತಿಪಾದಿಸಿರುತ್ತಾರೆ. ಶ್ರೀಯುತರು ಆ ಗ್ರಂಥಕ್ಕೆ ಆಶೀರ್ವಚನ ಯಾಚಿಸಿ-ದ್ದಕ್ಕೆ, ಪೂಜ್ಯ ಸ್ವಾಮೀಜೀಯವರು ಆ ಪುಸ್ತಕದ ಉದ್ದೇಶ ಹಾಗೂ ಕಾರ್ಯವಿಧಾನ ವನ್ನು ಸಮರ್ಥಿಸಿ, ಅಂತಹ ಸಂಸ್ಥೆ ಬೆಳೆದು ಬರಲಿ! ಎಂದು ಆಶೀರ್ವದಿಸಿ ಸುವರ್ಣ ಮಂತ್ರಾಕ್ಷತೆಯನ್ನು ಕೂಡಾ ಅನುಗ್ರಹಿಸಿದರು ಎಂಬುದರಿಂದ ಸ್ವಾಮೀಜೀಯವರ ದೃಷ್ಟಿ ಎಷ್ಟು ವಿಶಾಲ ಹಾಗೂ ವ್ಯಾಪಕವಾಗಿದೆ ಎಂಬುದು ಅರ್ಥವಾಗುವುದು.

ಶ್ರೀಗಳವರ ಗುಣವಿಶೇಷಗಳು

ಅಸಿತಗಿರಿಸಮಂ ಸ್ಯಾತ್ ಕಜ್ಜಲಂ ಸಿಂಧುಪಾತ್ರೇ
ಸುರತರುವರಶಾಖಾ ಲೇಖನೀ ಪತ್ರಮುರ್ವೀ ।
ಲಿಖತಿ ಯದಿ ಗೃಹೀತ್ವಾ ಶಾರದಾ ಸರ್ವಕಾಲಂ
ತದಪಿ ಗುಣಗಣಾನಾಮೀಶ ಪಾರಂ ನ ಯಾತಿ ॥

ಹೀಗೆ ಶಿವನ ಮಹಿಮೆಯನ್ನು ಕೊಂಡಾಡಿದ್ದಾನೆ – ಪುಷ್ಪದಂತ. ಅಂತಹ ಲೋಕಶಂಕರನಾದ ಶಂಕರನ ಅಪರಾವತಾರರಾದ ಶ್ರೀಮಜ್ಜಗದ್ಗುರು ಶಂಕರಾಚಾರ್ಯರಿಂದ ಪ್ರತಿಷ್ಠಿತವಾದ, ಶ್ರೀರಾಮಚಂದ್ರಾಪುರ ಮಠದ ಗುರುಪೀಠದಲ್ಲಿ ವಿರಾಜಮಾನರಾದ ನಮ್ಮ ಶ್ರೀಗಳವರ ಗುಣಗಳೆಲ್ಲವನ್ನೂ ಕ್ರೋಢೀಕರಿಸುವುದು ಅಸಾಧ್ಯವಾದ ಕೆಲಸ. ಆದರೂ ಎದ್ದು ತೋರುವ – ಹೇಳಲೇ ಬೇಕಾದ, ಕೆಲವು ಗುಣಗಳ ನಿರೂಪಣೆಗೆ ಮಾಡಿದ ಪ್ರಯತ್ನದ ಫಲಸ್ವರೂಪ – ಈ ಪರಿಚ್ಛೇದ.

ಪೂಜ್ಯ ಸ್ವಾಮೀಜೀಯವರು ನಿಯಮಬದ್ಧ ಜೀವನದಿಂದಾಗಿ ಉತ್ತಮ ದೇಹಸೌಷ್ಠವವನ್ನು ಪಡೆಕೊಂಡವರು. ಆದುದರಿಂದ ಅವರಿಗೆ ದೈಹಿಕ ಅಸೌಖ್ಯವೆಂಬುದು ವಿರಳ ಪ್ರಸಂಗ.

ಹಾಗೆ ಯಾವಾಗಲೋ ಒಮ್ಮೆ ಶಾರೀರಿಕ ಬಾಧೆಗೆ ಗುರಿಯಾದರೂ ೧೦೩ ಯಾ ೧೦೪ ಡಿಗ್ರಿಗಿಂತಲೂ ಅಧಿಕ ಜ್ವರದಿಂದ ಅವರ ಮೈ ಸುಡುತ್ತಿದ್ದರೂ ಕೂಡ, ಅವರು ಎಂದೂ ತಮ್ಮ ನಿತ್ಯದ ಅನುಷ್ಠಾನವನ್ನು ಬಿಟ್ಟವರಲ್ಲ. ತ್ರಿಕಾಲದಲ್ಲಿ (ಮುಂಜಾನೆ, ಮಧ್ಯಾಹ್ನ ಹಾಗೂ ಸಾಯಂಕಾಲ) ಸ್ನಾನ, ಅನುಷ್ಠಾನ, ಪೂಜೆಗಳನ್ನು ಅವರು ಸದಾ ಮಾಡದೆ ಇರುವುದಿಲ್ಲ. ಯಾವ ಪ್ರಯಾಣಕಾಲದಲ್ಲೂ ಇದಕ್ಕೆ ಚ್ಯುತಿಯುಂಟಾಗಲು ಅವರು ಬಿಡುವುದಿಲ್ಲ.

ಎಷ್ಟೊಂದು ವ್ಯವಹಾರಗಳಿದ್ದರೂ ಎಷ್ಟು ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ಅವರು ನಿರತರಾಗಿದ್ದರೂ ಎಷ್ಟು ದೂರದ ಪಯಣದಲ್ಲಿದ್ದರೂ ಅವರ ಆಶ್ರಮಧರ್ಮದ ನಿಯಮಗಳಿಗೂ ಅವರ ಸ್ವಂತ ತಪೋನಿಷ್ಠೆಯ ದೃಷ್ಟಿಯಿಂದ ಅವರೇ ಹಾಕಿಕೊಂಡ ನಿಯಮಗಳಿಗೂ ಅವರು ಎಂದೆಂದೂ ಚ್ಯುತಿಯುಂಟಾಗಲು ಬಿಡುವುದಿಲ್ಲ.

ಮಿತವಾಗಿ ಸಾತ್ವಿಕ ಆಹಾರವನ್ನು – ಅತ್ಯಂತ ಪರಿಶುದ್ಧತೆಯಿಂದ ಭಕ್ತಿಯಿಂದ ತಯಾರಿಸಬಲ್ಲ, ಆಯ್ದ ಜನರು ಸಿದ್ಧಪಡಿಸಿದ ಆಹಾರವನ್ನು ಮಾತ್ರ ಅವರು ಸೇವಿಸುತ್ತಾರೆ. ಸಾರ್ವಜನಿಕವಾಗಿ ಅವರು ಎಂದೂ ಯಾವುದೇ ತರದ ಆಹಾರವನ್ನಾಗಲೀ

ಸ್ವೀಕರಿಸುವುದಿಲ್ಲ. ಎಡೆಯ ಸಮಯದಲ್ಲಿ ನಿಯಮಕ್ಕೆ ತಪ್ಪಿ ಕೇವಲ ಎಳನೀರನ್ನಾದರೂ ಅವರು ಸ್ವೀಕರಿಸುವುದಿಲ್ಲ.

ಹೀಗೆ ಸರ್ವಸಾಮಾನ್ಯರ ದೃಷ್ಟಿಯಿಂದ ಕಠಿನವೆಂದು ಕಾಣಬಹುದಾದ ಈ ನಿಯಮಗಳು ಅವರ ತಪೋನಿಷ್ಠೆಯ ಒಂದು ಅಂಶ ಎನ್ನಬಹುದು. ಅವರ ಇತರ ಬಗೆಯ ತಪಸ್ಸುಗಳೇ ಇಂತಹ ನಿಯಮ, ನಿಷ್ಠೆಗಳನ್ನು ಪಾಲಿಸುವ ಶಕ್ತಿಯನ್ನೂ ಆರೋಗ್ಯ ಭಾಗ್ಯವನ್ನೂ ನೀಡುವುವು.

ಇಂತಹ ಶಿಸ್ತುಬದ್ಧ ಜೀವನ ದೃಷ್ಟಿ ಅವರ ಎಳೆಯ ವಯಸ್ಸಿನಿಂದಲೇ ಬಂದಿತು ಎಂಬುದು ಅವರ ಬಾಲ್ಯದ ಚರಿತ್ರೆಯಿಂದ ತಿಳಿಯುವುದು. ಅವರ ಪೂರ್ವಾಶ್ರಮದ ಮಾತಾಪಿತರ ಋಜುತೆ, ಧಾರ್ಮಿಕ ದೃಷ್ಟಿ, ಕಷ್ಟ ಸಹಿಷ್ಣುತೆಗಳೂ ಇದಕ್ಕೆ ಸಹಾಯಕವಾಗಿರಬಹುದು. ಅವರು ದೂರದ ತಂಜಾವೂರು, ನಂಜನಗೂಡು, ಕಾಶಿ ಮೊದಲಾದೆಡೆಗಳಲ್ಲಿ ಅಧ್ಯಯನ ಮಾಡುತ್ತಿದ್ದಾಗಲೂ ಸಿನೇಮಾ, ಉಪಾಹಾರಮಂದಿರ ಮೊದಲಾದ ಶೃಂಗಾರ ಹಾಗೂ ಭೋಗಸಾಮಗ್ರಿಗಳೆಡೆಗೆ ಕಣ್ಣೆತ್ತಿಯೂ ನೋಡದಿದ್ದುದು ಅವರ ವ್ರತನಿಷ್ಠ ಜೀವನಕ್ಕೆ ಸಹಕಾರಿಯಾಗಿರಬೇಕು. ಅಲ್ಲದೆ ಅವರು ಶಿಷ್ಯರ ಅಭೀಷ್ಟ ಸಾಧನೆಗಾಗಿ, ತಪೋಬಲ ಸಂವರ್ಧನೆಗಾಗಿ ಆಗಾಗ ಕೈಗೊಳ್ಳುವ ವ್ರತಗಳು, ಉಪವಾಸ, ತಪಸ್ಸು ಮತ್ತು ಅನುಷ್ಠಾನಗಳು ಎಂಥವರಿಗೂ ಅವರ ಕುರಿತಾಗಿ ಗೌರವದ ಭಾವನೆಯನ್ನು ಮೂಡಿಸುವುದರಲ್ಲಿ ಸಂದೇಹವಿಲ್ಲ.

ವಚನಪಾಲನೆ: 'ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ' ಎಂಬಂತೆ, ನಡೆಯಂತೆ ನುಡಿ, ನುಡಿಯಂತೆ ನಡೆ ಇರುವವರು ಮಹಾತ್ಮರು ಎಂಬುದನ್ನು ಎಲ್ಲರೂ ಬಲ್ಲರು. ಎಂತಹ ಕಠಿನ ಪರಿಸ್ಥಿತಿಯಲ್ಲೂ ತಾವು ನುಡಿದ ನುಡಿ ಎರಡಾಗದಂತೆ ನಡೆದುಕೊಳ್ಳುವವರು ಪೂಜ್ಯ ಶ್ರೀಗಳವರು. **'ಪ್ರಾಣ ಜಾಯ್ ಪರ್ ವಚನ ನ ಜಾಯ್'** ಎಂದರೆ ಪ್ರಾಣ ಹೋಗಲಿ, ಆದರೆ ಕೊಟ್ಟ ಮಾತು ತಪ್ಪಲಾಗದು ಎಂಬುದು ರಘುಕುಲದ ಹಿರಿಮೆ. ರಘುಕುಲದೀಪಕನಾದ ಶ್ರೀರಾಮಚಂದ್ರನ ಆರಾಧಕರಾದ ಶ್ರೀಗಳವರು ಆ ವಂಶದ ಆದರ್ಶಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಂಡಿದ್ದಾರೆ.

ಪೂಜಾವೈಶಿಷ್ಟ್ಯ: ಪೂಜ್ಯ ಸ್ವಾಮೀಜೀಯವರು, ಮಠದಲ್ಲಾಗಲಿ, ಪಯಣದ ಕಾಲದಲ್ಲಿ ಅವರು ವಿರಮಿಸಿದ ಕಟ್ಟಡದಲ್ಲಿಯಾಗಲಿ, ಸದಾ ಅವರ ಜತೆಯಲ್ಲೇ ಇರುವ ಶ್ರೀರಾಮಚಂದ್ರವಿಗ್ರಹ ಹಾಗೂ ಶ್ರೀ ಚಂದ್ರಮೌಳೀಶ್ವರ ಲಿಂಗಾದಿಗಳಿಗೆ ಪದ್ಮಾಸನದಲ್ಲಿ ನೆಟ್ಟಗೆ ಗಂಭೀರವಾಗಿ ಕುಳಿತು ಅಭಿಷೇಕ, ಪೂಜೆ ಮಾಡುವ ವಿಧಾನ ನೋಡಿದಾಗ ಎಂಥವರ ಮನದಲ್ಲೂ ಭಕ್ತಿ ಉದಯಿಸುವುದು. ಒಂದು ಬದಿಯಲ್ಲಿ ಸಂಸ್ಥಾನದ ವೈದಿಕ ವಿದ್ವಾಂಸರು ಗಂಭೀರವಾಗಿ ವೇದಪಾರಾಯಣ ಮಾಡು–

ತ್ತಿರುತ್ತಾರೆ. ಇನ್ನೊಂದೆಡೆಯಲ್ಲಿ ಜಯಘಂಟೆಗಳ ಘೋಷ........ ಮತ್ತೊಂದೆಡೆಯಲ್ಲಿ ಪೂಜಾಮಣಿಯ ಇಂಪಿನ ನಿನಾದ.......

ಸಾಕ್ಷಾತ್ ಭಗವಾನ್ ಶಂಕರಚಾರ್ಯರೇ ಅರ್ಚಿಸುವ ಶಿವಲಿಂಗವನ್ನು ಪೂಜಿಸಲು ಅದೆಂತಹ ಪುಣ್ಯ, ಅದೆಂತಹ ಶಕ್ತಿ ಬೇಕು! ಸ್ವಾಮೀಜೀಯವರು ಪೂಜಿಸುತ್ತಿರುವಾಗ ಆ ಶಂಕರಾಚಾರ್ಯರೇ ಮತ್ತೆ ಜೀವಂತವಾಗಿ ಬಂದು ಪೂಜಿಸುತ್ತಿದ್ದಾರೇನೊ!–ಎಂದು ಭಾಸವಾಗುವುದು. ಸ್ವಾಮೀಜೀಯವರ ತೇಜಸ್ಸು, ಮುಖಭಾವ, ಕುಳಿತ ರೀತಿ, ಗಂಭೀರತೆ, ಪ್ರಸನ್ನತೆಗಳು ಆ ತೆರದಲ್ಲಿರುವುವು.

ಶ್ರೀರಾಮ, ಶ್ರೀಕೃಷ್ಣ ಮತ್ತು ಶಂಕರಾಚಾರ್ಯರು – ಇವರ ಆದರ್ಶ :

ಸ್ವಾಮೀಜೀಯವರು ಆಶ್ರಮಧರ್ಮದಂತೆ ಅದ್ವೈತಾನುಭವದಲ್ಲಿ ಇರಬೇಕಾದವರು. ಆದರೂ ಜನರಿಗೆ ಆದರ್ಶ ನೀಡಲೆಂಬಂತೆ ಅವರ ವ್ಯಕ್ತಿತ್ವದಲ್ಲಿ, ಮಾತಿನಲ್ಲಿ, ಅವತಾರಿ ಪುರುಷರಾದ ಶ್ರೀರಾಮ, ಶ್ರೀಕೃಷ್ಣ ಮತ್ತು ಶ್ರೀಶಂಕರಾಚಾರ್ಯರ ಗಾಢವಾದ ಭಕ್ತಿ ಹೊರಹೊಮ್ಮುತ್ತದೆ. ತಮ್ಮ ವ್ಯಯಕ್ತಿಕವಾದ ಮಾತುಕತೆಗಳಲ್ಲಿಹಾಗೂ ಉಪನ್ಯಾಸಗಳಲ್ಲಿ ಅವರು ಈ ಮಹಾ ಮೂರ್ತಿಗಳ ಕುರಿತು ಪ್ರಸ್ತಾವಿಸುತ್ತಾರೆ.

ಅವರ ಭಕ್ತಿಯಲ್ಲಿ ಅವಿನಾಭಾವ ಸಂಬಂಧ – ಅಂದರೆ ತಾದಾತ್ಮ್ಯ ಕಾಣುತ್ತಿರವುದು ವಿಶೇಷವಾಗಿದೆ.

ಧಾರ್ಮಿಕ ಚಿಂತನೆ : ಇಂದು ಸಮಾಜದಲ್ಲಿ ಕಾಣುತ್ತಿರುವ ಭೌತಿಕ ವಿಲಾಸವಾದವನ್ನು ನೋಡಿ ಸ್ವಾಮೀಜೀಯವರು ಸ್ವತಃ ತುಂಬಾ ನೊಂದುಕೊಳ್ಳುತ್ತಾರೆ. ಇಂತಹ ದುರವಸ್ಥೆಯಿಂದ ಜನರು ದುಃಖಿಗಳಾಗುತ್ತಾರೆ ಎಂಬುವೇ ಅವರ ನೋವಿಗೆ ಕಾರಣ.

ಆದುದರಿಂದ ಜನರು ಧರ್ಮನಿಷ್ಠರಾಗಬೇಕು ಮತ್ತು ಧರ್ಮ ಜಾಗೃತಿ ಬೆಳೆಸಿಕೊಳ್ಳಬೇಕೆಂದು ಅವರು ಆಗ್ರಹ ಪಡುತ್ತಾರೆ. ಅದಕ್ಕಾಗಿಯೇ ಅವರು ತಮ್ಮ ದಿವ್ಯ ಜೀವನವನ್ನು, ತಮ್ಮ ಜ್ಞಾನಸಿಂಹಾಸನದ ಉನ್ನತಪದವಿಯನ್ನು ಬಳಸಿಕೊಳ್ಳುತ್ತಾರೆ ಎಂಬುದಾಗಿ ನಿಸ್ಸಂದೇಹವಾಗಿ ಹೇಳಬಹುದು.

ಅವರ ಶಿಷ್ಯರಂತೂ ಆಧ್ಯಾತ್ಮಿಕ ಅನುಷ್ಠಾನ, ಸಂಧ್ಯಾವಂದನೆಗಳನ್ನು ಚೆನ್ನಾಗಿ ಮಾಡಬೇಕೆಂದು ಶ್ರೀಗಳವರು ಬಯಸುತ್ತಾರೆ. ಗಾಯಿತ್ರೀಮಂತ್ರದ ಮಹತ್ವವೇನು ಎಂಬುದಾಗಿ ಆಗಾಗ ಬೋಧಿಸುತ್ತಾರೆ.

ಇಂದು ಎಲ್ಲಾ ಬ್ರಾಹ್ಮಣರಂತೆಯೇ "ಹವಿಕ" ರಲ್ಲೂ ಆರ್ಥಿಕವಾಗಿ ಹಿಂದುಳಿದವರು ಬೇಕಾದಷ್ಟು ಮಂದಿ ಇದ್ದಾರೆ. ಅವರು ತಮ್ಮ ಮಕ್ಕಳಿಗೆ ಇಂದಿನ ತುಟ್ಟಿಯ

ಕಾಲದಲ್ಲಿ ಉಪನಯನ ಸಂಸ್ಕಾರವನ್ನು ಮಾಡಿಸಲು ಸಮರ್ಥರಲ್ಲದಿರುವುದಿದೆ. ಇವರ ಕಷ್ಟವನ್ನು ಹೇಗೆ ಪರಿಹರಿಸಬಹುದು? ಇವರ ಮಕ್ಕಳೂ ದಿವ್ಯವಾದ ಗಾಯತ್ರೀ-ಮಂತ್ರದ ಉಪದೇಶ ಪಡೆದು ಹೇಗೆ ಜನ್ಮಸಾರ್ಥಕ್ಯ ಪಡೆಯಬಹುದು? – ಇದು ಅವರ ಯೋಚನೆ. ಈ ಕಳಕಳಿಯ ಯೋಚನೆ, ಚಿಂತನೆಗಳ ಪರಿಣಾಮವೇ ಆರ್ಥಿಕವಾಗಿ ಹಿಂದುಳಿದವರಿಗಾಗಿ ಮಠದಲ್ಲಿ ಅವರು ಸಾಮೂಹಿಕ ಉಪನಯನದ ವ್ಯವಸ್ಥೆಯನ್ನು ಮಾಡಲು ಕಾರಣ.

ರಾಮನಾಮ ಯಜ್ಞ : ಯಾವನೇ ಶಿಷ್ಯನು ಒಂದು ಧಾರ್ಮಿಕ ಕಾರ್ಯಕ್ರಮವನ್ನು ನಡೆಸಲು ಉಪಕ್ರಮಿಸಿ, ಸ್ವಾಮೀಜೀಯವರೇ ಆದರ ನಾಯಕತ್ವವಹಿಸಿ ನಡೆಸಿಕೊಡಬೇಕೆಂದು ಪ್ರಾರ್ಥಿಸಿದಾಗ, ಅವರಿಗೆ ಎಷ್ಟು ತೊಂದರೆಗಳಿದ್ದರೂ ಅವು-ಗಳನ್ನು ಕಡೆಗಣಿಸಿ ಆ ಶಿಷ್ಯನ ಸಂತಸಕ್ಕಾಗಿ ಅವರು ಧಾವಿಸುತ್ತಾರೆ. ಕರ್ತೃವಿನಲ್ಲೂ ಪ್ರೇಕ್ಷಕರಲ್ಲೂ ಅತಿಥಿಗಳಲ್ಲೂ ಅಷ್ಟಾದರೂ ಉತ್ತಮವಾದ ಆಧ್ಯಾತ್ಮಿಕ ಸಂಸ್ಕಾರವಾಗಲಿ ಎಂಬುದೇ ಅವರ ಆಶಯ.

ಪುತ್ತೂರು ಬಳಿಯ ಶಿಷ್ಯರಲ್ಲೊಬ್ಬರಾದ ಶ್ರೀ ಪಡೀಲು ಕೃಷ್ಣಭಟ್ಟರು ಹೀಗೆ ಸ್ವಾಮೀಜೀಯವರನ್ನು ಬರಮಾಡಿಕೊಂಡು ಬಹಳ ಭಕ್ತಿಯಿಂದ ರಾಮನಾಮಯಜ್ಞ-ವನ್ನು ಅತ್ಯಂತ ವೈಭವದಿಂದ ನಡೆಸಿದರು. ಸ್ವಾಮೀಜೀಯವರೇ ಈ ಧಾರ್ಮಿಕ ಕಾರ್ಯಕ್ರಮದ ಸರ್ವಾಧ್ಯಕ್ಷತೆಯನ್ನು ವಹಿಸಿ, ಆಮೂಲಾಗ್ರವಾಗಿ ಎಲ್ಲವನ್ನೂ ವೈದಿಕ ವಿದ್ವಜ್ಜನರು, ಪಂಡಿತರು, ಪಾಮರರು ಎಲ್ಲರೂ ತಲೆದೂಗುವಂತೆ ನಡೆಸಿ-ಕೊಟ್ಟರೆಂಬುದರಿಂದ ಸ್ವಾಮೀಜೀಯವರ ಆಧ್ಯಾತ್ಮಿಕ ಚಿಂತನದ ರೀತಿ ಅರಿವಾಗುವುದು.

ಧಾರ್ಮಿಕಪಾಂಡಿತ್ಯ : ಯಾವುದೇ ಮುಂದುವರಿದ ಸಮಾಜದ ಧಾರ್ಮಿಕ ಮುಖಂಡತೆಯನ್ನು ವಹಿಸಿಕೊಳ್ಳುವಷ್ಟು ಗಾಢವಾದ ಧಾರ್ಮಿಕ ಪರಿಜ್ಞಾನ, ಪಾಂಡಿತ್ಯ ಸ್ವಾಮೀಜೀಯವರಿಗಿರುವುದು ಹವ್ಯಕ ಸಮಾಜದವರಿಗೊಂದು ಹೆಗ್ಗಳಿಕೆಯ ವಿಚಾರ. ವೇದ, ವೇದಾಂತ, ಸಂಸ್ಕೃತ ಸಾಹಿತ್ಯ, ವ್ಯಾಕರಣ, ನ್ಯಾಯ, ತರ್ಕ, ಮೀಮಾಂಸೆ, ಧರ್ಮಶಾಸ್ತ್ರ – ಮೊದಲಾದ ಗಾಢವಾಗಿ ಅಧ್ಯಯನ ಮಾಡಬೇಕಾದ ವಿದ್ಯೆಯ ಅಂಗ ಗಳನ್ನು ಸ್ವಾಮೀಜೀಯವರು ಆಳವಾಗಿ ಅಧ್ಯಯನ ಮಾಡಿ ಮುಗಿಸಿರುವುದಲ್ಲದೆ, ತಮ್ಮ ಜ್ಞಾನದ ದಿಗಂತವನ್ನು ನಿತ್ಯವೂ ವಿಸ್ತರಿಸುತ್ತಾ ಹೋಗುತ್ತಾರೆ. ಅವರು ಇಂತಹ ಆಧ್ಯಾತ್ಮಿಕ ಶಾಸ್ತ್ರಗಳ ಜ್ಞಾನನಿಧಿಯಾಗಿದ್ದಾರೆ.

ಬಾಲ್ಯದಲ್ಲಿ ಅವರು ಕಲಿತ ಕೃಷ್ಣಯಜುರ್ವೇದ (ತೈತ್ತಿರೀಯ ಸಂಹಿತಾ, ಬ್ರಾಹ್ಮಣ, ಆರಣ್ಯಕ ಪದಕ್ರಮಾದಿ) ಈಗಲೂ ಅವರ ಸ್ಮೃತಿಪಥದಲ್ಲಿ ಅಚ್ಚಳಿಯದೆ ಇರುವುದು ಕೌತುಕದ ವಿಚಾರ. ಘನಾಂತ ವೇದಾಧ್ಯಯನ ಮಾಡಿ ನಿತ್ಯವೂ ವೇದ-ಪಾರಾಯಣ ಮಾಡುತ್ತಿರುವ ಹೆಸರಾಂತ ಘನ ಪಾಠಿಗಳಿಗೂ ಉತ್ತರ ಕೊಡಲು ಸುಲಭ

ಸಾಧ್ಯವಾಗದ ಮಂತ್ರಭಾಗವನ್ನು ಪ್ರಶ್ನಿಸಿ ಅವರೇ ಉತ್ತರವಿತ್ತು ಎಲ್ಲರನ್ನೂ ಅಚ್ಚರಿಗೆ ಗುರಿಮಾಡುವುದಿದೆ.

ಅಧ್ಯಯನಶೀಲತೆ : ಸ್ವಾಮಿಜೀ ಅಧ್ಯಯನ ಶೀಲರು. ಹಿಂದೆ ಪಡೆದ ವಿದ್ಯೆಯಲ್ಲಿ ಮಾತ್ರ ತೃಪ್ತಿಪಟ್ಟುಕೊಂಡಿರುವುದಿಲ್ಲ ಅವರು, ವಿವಿಧ ನವೀನ ಗ್ರಂಥ-ಗಳನ್ನು ಅಧ್ಯಯನ ಮಾಡುತ್ತಾ ಹೋಗುತ್ತಾರೆ. ಧಾರ್ಮಿಕ, ಆಧ್ಯಾತ್ಮಿಕ ಗ್ರಂಥಗಳು ಮಾತ್ರವಲ್ಲ, ಜನಜೀವನನ ರೀತಿ ನೀತಿ ತಿಳಿದು ಕೊಳ್ಳಲು ಬೇಕಾದ ಇತರ ಗ್ರಂಥ-ಗಳನ್ನೂ ಅವರು ಅಭ್ಯಸಿಸುತ್ತಾರೆ.

ಅಲ್ಲದೆ, ವೃತ್ತಪತ್ರಿಕೆಗಳನ್ನು ಓದಿ ಇಂದಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳು ದೇಶದಲ್ಲೂ, ವಿಶ್ವದ ಇತರೆಡೆಗಳಲ್ಲೂ ಹೇಗಿವೆ ಎಂಬುದನ್ನೂ ಅವರು ಸಂಶೋಧನಾತ್ಮಕ, ಚಿಕಿತ್ಸಕ ದೃಷ್ಟಿಯಿಂದ ಪರಿಶೀಲಿಸುತ್ತಾರೆ. ಆಶ್ರಮ ಸ್ವೀಕಾರದ ಅನಂತರ ಅಧ್ಯಯನಕ್ಕಾಗಿ ಅವರು ಅನುಭವಿಸಬೇಕಾಗಿ ಬಂದ ಕಷ್ಟಗಳನ್ನು ಎದುರಿಸಿದುದು ಅಧ್ಯಯನ ಮಾಡುವವರಿಗೆಲ್ಲ ಆದರ್ಶಪ್ರಾಯವಾಗಿದೆ. ಮಠದಲ್ಲಿ ಉನ್ನತ ವಿದ್ಯಾಭ್ಯಾಸ ಮೊದಲಾದ ಆವಶ್ಯಕ ವಿಚಾರಗಳಿಗೆ ಬೇಕಾದ ಅನುಕೂಲತೆ ಸಾಕಷ್ಟು ಅವರಿಗೆ ಒದಗದಿದ್ದರೂ ಧೈರ್ಯಬಿಡದೆ, ವಿದ್ಯಾರ್ಜನೆಯೇ ತಮ್ಮ ಪರಮ ಧ್ಯೇಯವೆಂದು ಭಾವಿಸಿ, ಕಾಶಿಯಂತಹ ದೂರದ ಸ್ಥಳಕ್ಕೆ ಪಯಣ ಬೆಳೆಸಿ ಎಂತಹ ಕಷ್ಟಕಾರ್ಪಣ್ಯಗಳು ಎದುರಾದರೂ ಎದೆಗೆಡದೆ, ತಕ್ಕ ಸೌಕರ್ಯವಿಲ್ಲದಿದ್ದರೂ, ಅವ-ಶ್ಯಕ ಆರ್ಥಿಕ ಸಹಕಾರ ಸಕಾಲದಲ್ಲಿ ಅಲ್ಲಿ ದೊರಕದಿದ್ದರೂ, ವಿಷಮ ಜ್ವರಾದಿಗಳಿಂದ ಬಾಧೆಯನ್ನು ಅನುಭವಿಸುತ್ತಿದ್ದರೂ, ಅಧ್ಯಯನದ ಧ್ಯೇಯವನ್ನು ಬಿಡದೆ ಅದನ್ನು ಪೂರೈಸಿಯೇ ತೀರಬೇಕೆಂಬ ದೃಢವಾದ ನಿಲುಮೆಯನ್ನು ವಹಿಸಿ, ಅದನ್ನೇ ಒಂದು ತಪ-ಸ್ಸನ್ನಾಗಿ ಸಾಧಿಸಿ, ಸ್ವಾಮೀಜಿ ಉನ್ನತ ವಿದ್ಯೆಯ ಮೇಲಿನ ಗಾಢವಾದ ಪ್ರೇಮವನ್ನು ತೋರುವುದರೊಂದಿಗೆ ಒಂದು ದೈವಿಕ ಶಕ್ತಿಯೇ ಅವರ ಭವಿಷ್ಯತ್ತನ್ನು ರೂಪಿಸುತ್ತಿದೆ ಎಂಬುದನ್ನು ಅಭಿವ್ಯಕ್ತಗೊಳಿಸಿದರು.

ನಿದ್ರೆ : ಇಂದಿನ ಜನರು ತಡವಾಗಿ ಮಲಗಿ ತಡವಾಗಿ ಏಳುವರು. ಭಾರತೀಯ ಸಂಸ್ಕೃತಿಯಂತೆ ಜನಸಾಮಾನ್ಯರು ಬೇಗನೆ ಮಲಗಿ, ಪ್ರಾತಃಕಾಲ ಬೇಗನೆ ಏಳಬೇಕು. ಆದರೆ ಯೋಗಿಗಳು ಇತರ ಮನುಷ್ಯರಷ್ಟು ನಿದ್ರೆಯನ್ನು ಬಯಸುವುದಿಲ್ಲ. ಅವರು ತಡವಾಗಿ ಮಲಗಿ, ಬೇಗನೆ ಏಳುವರು. ಅಂದರೆ ೩-೪ ಗಂಟೆಗಳ ನಿದ್ರೆ ಇದ್ದರೂ ಅವರಿಗೆ ಸಾಕು.

ಪೂಜ್ಯ ಶ್ರೀಗಳವರು ಕೂಡಾ ಪ್ರಾಯಶಃ ೩-೪ ಗಂಟೆಗಳಿಗಿಂತ ಹೆಚ್ಚು ಕಾಲ ನಿದ್ರಿಸುವುದಿಲ್ಲ. ಅಂತರಂಗದ ಅನುಸಂಧಾನ, ಅಧ್ಯಯನ ಮೊದಲಾದ ರೀತಿಗಳಲ್ಲಿ ಅವರು ಏಕಾಂತದ ಸಮಯವನ್ನು ಬಳಸುತ್ತಿದ್ದಾರೆ.

ವಿದ್ವತ್ತು : ಆಧ್ಯಾತ್ಮರಂಗದಲ್ಲಿ ಮಾತ್ರವಲ್ಲ – ಇತರ ಲೌಕಿಕವಿಷಯವಲ್ಲೂ ಸ್ವಾಮೀಜೀಯವರು ವಿದ್ವಾಂಸರು. ಸಾಹಿತ್ಯ, ಶಿಕ್ಷಣ, ಶಿಲ್ಪ, ಕೃಷಿ, ಅರ್ಥಶಾಸ್ತ್ರ ಜ್ಯೋತಿಷ, ಇತಿಹಾಸ – ಮೊದಲಾದ ವಿಷಯಗಳಲ್ಲೂ ಸ್ವಾಮೀಜಿಗೆ ಪಾಂಡಿತ್ಯವಿದೆ, ಅವರು ಈ ವಿಷಯಗಳಲ್ಲೂ ತಮ್ಮ ಶಿಷ್ಯರಿಗೆ ಮಾರ್ಗದರ್ಶನ ಮಾಡಲು ಸಮರ್ಥ–ರಾಗಿದ್ದಾರೆ ಎಂಬುದು ಅಭಿಮಾನದ ವಿಚಾರ.

ಸ್ವಾಮೀಜೀಯವರು ಕನ್ನಡ ಮತ್ತು ಸಂಸ್ಕೃತಗಳಲ್ಲಿ ಮಾತ್ರವಲ್ಲದೆ, ಹಿಂದಿ, ತಮಿಳು ಭಾಷೆಗಳಲ್ಲೂ ವ್ಯವಹಾರಮಾಡಲು ಬೇಕಷ್ಟು ಪರಿಜ್ಞಾನವನ್ನು ಪಡೆದು ಕೊಂಡಿರುತ್ತಾರೆ. ಮಾತ್ರವಲ್ಲ. ಆಂಗ್ಲ ಭಾಷಾ ವಿಚಾರ ಶೈಲಿಯ ಸಾಕಷ್ಟು ಪರಿಚಯವುಳ್ಳವರೂ ಆಗಿರುತ್ತಾರೆ.

ನಯ, ವಿನಯ : ಸ್ವಾಮೀಜೀಯವರು ಹೀಗೆ ಲಕ್ಷಾಂತರ ಜನರ ಧಾರ್ಮಿಕ ಗುರುಪರ್ಯರಾಗಿದ್ದು ಉನ್ನತ ಸ್ಥಾನದಲ್ಲಿರುವವರಾದರೂ ಭಗವಾನ್ ಶಂಕರಾ–ಚಾರ್ಯರು ಸ್ಥಾಪಿಸಿದ ಜ್ಞಾನಪೀಠದ ಉತ್ತರಾಧಿಕಾರಿಯಾದರೂ ಮಹಾ ವಿದ್ವಾಂಸ–ರಾದರೂ, ಅವರಲ್ಲಿ ಒಂದಿಷ್ಟಾದರೂ ಡಾಂಭಿಕತನ ಮತ್ತು ನಿಷ್ಠುರತೆಗಳನ್ನು ಯಾರೂ ಕಾಣಲು ಸಾಧ್ಯವಿಲ್ಲ ಎಲ್ಲರನ್ನೂ ತುಂಬಾ ಮಧುರ ವಚನಗಳಿಂದ ಮಾತನಾಡಿಸುತ್ತಾರೆ. ಪ್ರತಿಯೊಬ್ಬರ ಕ್ಷೇಮ ಸಮಾಚಾರಗಳನ್ನು ವಿಚಾರಿಸುತ್ತಾರೆ. ಅಲ್ಲದೆ ಸಮಯಾವ–ಕಾಶವಿದ್ದರೆ ಚಿಕ್ಕವರು, ದೊಡ್ಡವರು ಎಂಬ ಭೇದವಿಲ್ಲದೆ ಎಲ್ಲರನ್ನು ಸರಿಯಾಗಿ ಮಾತ ನಾಡಿಸಿ ಅವರನ್ನು ಸಂತಸಪಡಿಸುತ್ತಾರೆ.

ಪ್ರೇಮ, ಕರುಣೆ : ನಯ, ವಿನಯಗಳು ಸ್ವಾಮೀಜೀಯವರಲ್ಲಿ ಬಾಹ್ಯವಾಗಿ ಕಾಣುವ ಗುಣಗಳಾದರೆ, ಪ್ರೇಮ ಕರುಣೆಗಳು ಅವರ ಅಂತರಂಗದ ಗುಣಗಳು.

ಇಡಿಯ ಜನತೆಯ ಮೇಲೆಯೇ ಅವರಿಗೆ ಮಾನವೀಯ ದೃಷ್ಟಿಯಿಂದ ತುಂಬಿದ ಪ್ರೇಮವಿದೆ. ಅದರಲ್ಲೂ ಶಿಷ್ಯಸಮಾಜದವರು ಎಂದರೆ ಅವರಿಗೆ ಎಲ್ಲಿಲ್ಲದ ವಾತ್ಸಲ್ಯ, ಅಭಿಮಾನ. ಹೃದಯಪೂರ್ವಕವಾಗಿ ಮತ್ತು ನೈಜವಾಗಿ ಅವರನ್ನು ಸ್ವಾಮೀಜೀ ಯವರು ಕಾಣುತ್ತಾರೆ.

ಶಿಷ್ಯಸಮಾಜದವರು ತುಂಬಾ ಧರ್ಮನಿಷ್ಠರಾಗಿರಬೇಕು ; ತುಂಬಾ ಶ್ರೀಮಂತ ರಾಗಿರಬೇಕು ; ಕೀರ್ತಿಶಾಲಿಗಳೂ ಆಗಬೇಕು ; ಉನ್ನತಸ್ಥಾನಾಪನ್ನರಾಗಬೇಕು ; ಅವರ ಸಕಲ ಕಷ್ಟಗಳೂ ದೂರವಾಗಬೇಕು – ಎಂದು ಭಾವಿಸಿ, ಪ್ರೇಮದಿಂದ ಆಶೀರ್ವಾದ ಪೂರ್ವಕವಾದ ಮಂತ್ರಾಕ್ಷತೆಯನ್ನು ಅವರು ನೀಡುತ್ತಾರೆ. ಶಿಷ್ಯರಲ್ಲಿ ಯಾರೂ ಎಷ್ಟೊಂದು ದೊಡ್ಡ ಸ್ಥಾನವನ್ನು ಪಡೆದರೂ, ತಾವೇ ದೊಡ್ಡ ಉನ್ನತ ಸ್ಥಾನವನ್ನು ಪಡೆದವರಂತೆ ಹಿಗ್ಗಿಕೊಂಡು, ತಮ್ಮ ಸಂತೋಷ ಉತ್ಸಾಹಗಳನ್ನು ವ್ಯಕ್ತಪಡಿಸುತ್ತಾರೆ.

ಉದಾರತೆ: ಈ ಪ್ರೇಮ ಕರುಣೆಗಳ ಕಾರಣದಿಂದಲೇ ಅವರು ಉದಾರ ಚರಿತರು. ಸಾಮಾನ್ಯವಾಗಿ ಎಷ್ಟೋ ಪೀಠಾಧಿಪತಿಗಳು ಇಂದು ಶಿಷ್ಯರಿಂದ ಕಾಣಿಕೆಗಳನ್ನು ಸ್ವೀಕರಿಸುತ್ತಾರೆಯೇ ಹೊರತು ಯಾವ ವಿಷಯಕ್ಕೂ ಕೈಯೆತ್ತಿ ದಾನ ನೀಡುವುದಿಲ್ಲ. ಶ್ರೀಗಳವರಲ್ಲಿ ಇದಕ್ಕೆ ವಿರುದ್ಧವಾಗಿ ಉದಾರತೆಯನ್ನು ನಾವು ನೋಡುತ್ತೇವೆ. ಅವರಿಂದ ಸುವರ್ಣ ಮಂತ್ರಾಕ್ಷತೆಯನ್ನು ಪಡೆದುಕೊಂಡ ಸಂಘ ಸಂಸ್ಥೆಗಳಿಗೆ ಲೆಕ್ಕವಿತಿಯಿಲ್ಲ. ಅದೇ ರೀತಿ ಉದಾತ್ತ ಧ್ಯೇಯದಿಂದ ಹೊರಟ ವ್ಯಕ್ತಿಗಳಿಗೂ ಅವರು ಸುವರ್ಣಮಂತ್ರಾಕ್ಷತೆ ನೀಡಿದ್ದಿದೆ. ಸ್ವಾಮೀಜಿ ನೀಡುವ ಮಂತ್ರಾಕ್ಷತೆಯೊಂದಿಗೆ ಸಂಘ ಸಂಸ್ಥೆಗಳಿಗೆ ಕೊಡುವ ಕೊಡುಗೆ ರೂಪಾಯಿ ೫೦ ರಿಂದ ತೊಡಗಿ ರೂಪಾಯಿ ೧೦,೦೦೦ದ ತನಕವೂ ಏರಿದೆ ಎಂಬುದು ಹಿಂದಿನ ಪುಟಗಳಿಂದ ನಾವು ತಿಳಿದಿರುತ್ತೇವೆ.

ಒಮ್ಮೆ ಶಿಷ್ಯ ಸಮಾಜದಲ್ಲಿ ಒಬ್ಬರು ಸಮಾಜಸೇವಕರು ತಮ್ಮ ಆರ್ಥಿಕ ಕಷ್ಟವನ್ನು ನಿವೇದಿಸಿಕೊಂಡರು. ಪೂಜ್ಯಗುರುಗಳನ್ನು ಅವರ ಆರ್ಥಿಕ ಕಷ್ಟ ಪರಿಹಾರವಾಗುವಂತೆ ಆಶೀರ್ವದಿಸಬೇಕೆಂದು ಪ್ರಾರ್ಥಿಸಿಕೊಂಡರು. ಶ್ರೀಗಳವರು ಕೂಡಲೇ ರೂಪಾಯಿ ೨೨೨ನ್ನು ತರಿಸಿ, ಅದರೊಂದಿಗೆ ಮಂತ್ರಾಕ್ಷತೆ ಸೇರಿಸಿ ಕೊಡುವ ಸಿದ್ಧತೆಯಲ್ಲಿದ್ದರು. ಆಗ ಆ ಮಹನೀಯರು ಹೀಗೆ ಹೇಳಿದರು – "ನಾನು ಧನದ ಅಪೇಕ್ಷೆ ಇಟ್ಟಿಲ್ಲ. ಸ್ವಾಮೀಜೀಯವರ ಆಶೀರ್ವಾದ ಇದ್ದರೆ ಸಾಕು!". ಆಗ ಯೋಚಿಸದೇನೇ ನಸುನಗುತ್ತಾ ಸ್ವಾಮೀಜಿ ಹೇಳಿದರು – "ನಾವು ಇಂತಹ ವಿಷಯಗಳಲ್ಲಿ ಬರಿಕೈಯಿಂದ ಆಶೀರ್ವಾದ ಮಾಡುವವರಲ್ಲ. ಸುವರ್ಣ ಮಂತ್ರಾಕ್ಷತೆಯನ್ನೇ ನೀಡುತ್ತೇವೆ. ಇಂದು ಒಳ್ಳೆಯ ದಿನ. ಈ ಹಣವನ್ನು ನಿನ್ನ ಪೆಟ್ಟಿಗೆಯಲ್ಲಿ ಹಾಗೆಯೇ ಇಟ್ಟುಕೋ. ನಿನ್ನ ಆರ್ಥಿಕ ಕಷ್ಟ ಪರಿಹಾರವಾಗುವುದು!" ಎಂದು ಹೇಳಿ ಸುವರ್ಣ ಮಂತ್ರಾಕ್ಷತೆಯನ್ನು ನೀಡಿಯೇ ಬಿಟ್ಟರು. ಸುವರ್ಣ ಮಂತ್ರಾಕ್ಷತೆ ಪಡೆದುಕೊಳ್ಳುವ ವ್ಯಕ್ತಿ ತಾನು ಸ್ವಾಮೀಜೀಯವರಿಗೆ ಒಂದು ಅನ್ಯಾಯ ಮಾಡುತ್ತಿದ್ದೇನೇನೋ ಎಂಬ ಭಾವನೆಯ ಜೊತೆಯಲ್ಲಿ ಆನಂದಾತಿಶಯದಿಂದ ಅದನ್ನು ಸ್ವೀಕರಿಸಿದರು. ಸ್ವಾಮೀಜೀಯವರ ಪರಮೋದಾರತೆಗೆ ಇದೊಂದು ಭವ್ಯ ನಿದರ್ಶನ.

ಶಿಷ್ಯರು ಮಠಕ್ಕೆ ಬಂದಾಗ, ತವರುಮನೆಗೆ ಮಗಳು ಬಂದಾಗ ಮಾಡುವಂತಹ ಪ್ರೇಮದ ಆತಿಥ್ಯವನ್ನು ಶ್ರೀಗಳವರು ನೀಡಿ, ತಾವು ನಿಜವಾಗಿಯೂ ತಮ್ಮ ತವರು ಮನೆಗೆ ಬಂದಿದ್ದೇವೆ ಎಂಬ ಅಭಿಪ್ರಾಯವು ಅಂತಹ ಆಗಂತುಕರಿಗೆ ಬರುವಂತೆ ಮಾಡುತ್ತಾರೆ. ಅವರ ಪರಿವಾರದವರು ಅದೇ ರೀತಿ ವರ್ತಿಸುವಂತೆ ಸ್ವಾಮೀಜೀಯವರು ಪ್ರೇರಿಸುತ್ತಾರೆ.

ವಿದ್ವತ್ ಪೋಷಣೆ: ಸ್ವಕರ್ತವ್ಯ ಕರ್ಮ ಪರಾಯಣ ವೈದಿಕ ವಿದ್ವಾಂಸರ ಬಗೆಗೆ ಸ್ವಾಮೀಜೀಯವರಿಗೆ ತುಂಬಿದ ಅಭಿಮಾನ, ಪ್ರೇಮ, ಆದ್ದರಿಂದ ಯಾವುದೇ

ರಂಗದಲ್ಲಾದರೂ ವಿದ್ವಾಂಸರಾದವರು, ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಮುಂದು ವರಿದವರು – ಮೊದಲಾದವರ ಬಗೆಗೂ ಅವರಿಗೆ ತುಂಬಾ ಪ್ರೇಮ, ಸಹಾನು– ಭೂತಿಗಳಿವೆ. ಅಂಥವರನ್ನು ತಾವಾಗಿಯೇ ಕರೆಯಿಸಿ, ಯೋಗ್ಯತಾನುಸಾರ ಮನ್ನಣೆ ನೀಡಿ, ಪ್ರೋತ್ಸಾಹಿಸಿ ಪೋಷಣೆ ನೀಡುವುದು ಅವರ ಇನ್ನೊಂದು ವೈಶಿಷ್ಟ್ಯ. **'ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಂ'** ಎಂಬಂತೆ ಅವರೇ ಸ್ವತಃ ವಿದ್ವಾಂಸರಾದ ಕಾರಣ ಇತರರ ವಿದ್ವತ್ತಿನ ಪರಿಶ್ರಮದ ಬೆಲೆ ಪೂರ್ತಿ ಅವರಿಗೆ ತಿಳಿದಿದೆ.

ಆಕರ್ಷಕ ವ್ಯಕ್ತಿತ್ವ : ಶ್ರೀಗಳವರ ಮಧುರ ವ್ಯಕ್ತಿತ್ವದಲ್ಲಿ ಒಂದು ಕಾಂತತೆ ಇದೆ. ಅವರನ್ನು ನೋಡಿದವರು ಅವರ ಕೂಡೆ ಮಾತನಾಡಿದವರು ಅವರೆಡೆಗೆ ಸ್ವಯಂ ಚಾಲಿತರಾಗಿ ಆಕರ್ಷಿತರಾಗುತ್ತಾರೆ. ಅವರನ್ನು ತತ್‌ಕ್ಷಣ ಗೌರವಿಸಲು – ಅವರಿಗೆ ವಂದಿಸಲು ಮುಂದಾಗುತ್ತಾರೆ. ಶ್ರೀಗಳವರಲ್ಲಿರುವ ವಿವಿಧ ಗುಣಗಳಲ್ಲದೆ, ಅವರಲ್ಲಿರುವ ದಿವ್ಯತೆಯು ಒಂದು ಶಕ್ತಿಯೇ ಇಂತಹ ಒಂದು ಆಕರ್ಷಣೆಗೆ ಕಾರಣವಾಗಿರಬೇಕು.

ಶ್ರೀಗಳವರು ನಕ್ಕರೆ ಅತ್ಯಂತ ಮುಗ್ಧವಾಗಿ ನಗುತ್ತಾರೆ. ಬಚ್ಚಿಡದೆ ನಗುತ್ತಾರೆ. ಆದರಿಂದಾಗಿ ಕೂಡ ಅವರು ಎಲ್ಲರಿಗೂ ಬೇಕಾದವರಾಗುತ್ತಾರೆ.

ಮತ, ಧರ್ಮ ಎಂಬ ವಿಷಯಗಳಲ್ಲಿ ಅವರ ಮೇಲೆ ಅಭಿಮಾನ ಇರುವ ಕೇವಲ ವೃದ್ಧರನ್ನು ಮಾತ್ರ ಅವರು ಆಕರ್ಷಿಸುತ್ತಾರೆ ಎಂದು ಭಾವಿಸಬಾರದು. ಯುವಕರನ್ನೂ ವಿದ್ಯಾವಂತರನ್ನೂ ಉನ್ನತಸ್ಥಾನಾಪನ್ನರನ್ನೂ ಮಕ್ಕಳನ್ನೂ ಶ್ರೀಮಂತರನ್ನೂ – ಹೀಗೆ ಎಲ್ಲರನ್ನೂ ಅವರು, ಅಯಸ್ಕಾಂತವು ಕಬ್ಬಿಣವನ್ನು ಆಕರ್ಷಿಸುವಂತೆ ಆಕರ್ಷಿಸುತ್ತಾರೆ.

ಗುಣಗ್ರಾಹಿತ್ವ : ಪೂಜ್ಯ ಶ್ರೀಗಳವರು ದೋಷಗ್ರಾಹಿಗಳಲ್ಲ, ಗುಣಗ್ರಾಹಿ– ಗಳು. ತಮ್ಮ ಬಳಿಗೆ ಬಂದ ಶಿಷ್ಯರಾಗಲೀ ಇತರರಾಗಲೀ ಅವರ ಯೋಗ್ಯತೆಯ ತೂಕವನ್ನು ಕ್ಷಣಾರ್ಧದಲ್ಲಿ ಅವರು ಮಾಡುತ್ತಾರೆ. ಅವರ ದೋಷಗಳೇನು, ದುರ್ಬಲತೆಗಳೇನು ಎಂಬುದು ಅವರಿಗೆ ಅರ್ಥವಾದರೂ, ಅದನ್ನು ಅವರ್‍ಯ ತೋರ್ಪಡಿಸದೆ ಅವರ ಗುಣಗಳನ್ನೇ ಎತ್ತಿಹಿಡಿದು ಗುಣಗಳೇ ಪ್ರಕಾಶಕ್ಕೆ ಬಂದು, ಆ ಪ್ರಕಾಶದೆಡೆಯಲ್ಲಿ ದೋಷಗಳೆಂಬ ಕತ್ತಲೆ ತಾನಾಗಿಯೇ ಮಾಯವಾಗುವಂತೆ ಮಾಡುತ್ತಾರೆ.

ಅಲ್ಲದೆ, ಯಾವುದೇ ವ್ಯಕ್ತಿಯ ಹೆಸರು ಅವರ ಕಿವಿಗೆ ಬಿದ್ದರೂ, ಅವನ ಹಿನ್ನೆಲೆಯೇನು ? ಆತನ ಧ್ಯೇಯವೇನು ? ಆತನ ಯೋಗ್ಯತೆಯೇನು ? ಆತನ ದುರ್ಬಲತೆಯೇನು ? ಎಂಬುದನ್ನು ವಿವಿಧ ಮುಖಗಳಿಂದ ಅವರು ಸಂಗ್ರಹಿಸಲು ಯತ್ನಿಸುವರು. ಒಬ್ಬನ ಮಾತಿನಿಂದ ಅವರು ಪ್ರಭಾವಿತರಾಗುವುದಿಲ್ಲ – ಇಡಿಯ ಸಮಾಜದ ಮಾತಿನಿಂದಲೂ ಅವರು ಪ್ರಭಾವಿತರಾಗುವುದಿಲ್ಲ. ಎಲ್ಲರ ಮಾತುಗಳನ್ನು

ಕೇಳಿ, ಅವುಗಳ ಸಾರಾಸಾರವನ್ನು ತಾವೇ ಪರಾಂಬರಿಸಿ, ಆ ವ್ಯಕ್ತಿಯ ಯೋಗ್ಯತೆ-ಯೇನು? ಎಂದು ಅವರು ಗುರುತಿಸಿ, ಅಂತರಂಗದ ಕವಾಟದಲ್ಲಿ ಭದ್ರವಾಗಿ ಇಟ್ಟಿರುತ್ತಾರೆ. ಆ ವ್ಯಕ್ತಿಯು ಪ್ರತ್ಯಕ್ಷವಾಗಿ ಕಣ್ಣೆದುರಿಗೆ ಬಿದ್ದಾಗ, ಅವರು ಆತನ ಕುರಿತಾಗಿ ಸಂಗ್ರಹಿಸಿದ, ಅನುಭವಗಳ ಹಿನ್ನೆಲೆಯಲ್ಲೇ ಅತನ ಕೂಡೆ ವ್ಯವಹರಿಸಿ, ಆತನ ಹೃದಯವನ್ನು ಗೆದ್ದು ಕೊಳ್ಳುತ್ತಾರೆ.

ಯಾರೂ ಯಾರ ಕುರಿತಾಗಿಯೂ ಚಾಡಿ, ತರಲೆ ಹೇಳಿ ಸ್ವಾಮೀಜೀಯವರ ಮನಸ್ಸನ್ನು ಕಲುಷಿತಮಾಡಲು ಸಾಧ್ಯವಾಗುವುದಿಲ್ಲ. ಒಬ್ಬಾತನು ನಿಜವಾಗಿಯೂ ಸಮಾಜಕ್ಕೆ ಬೇಕಾದ ವ್ಯಕ್ತಿಯಾಗಿದ್ದು, ಸಮಾಜದವರು ಕಾರಣಾಂತರಗಳಿಂದ ಆತನ ಜೀವನಾದರ್ಶಗಳನ್ನು ಗುರುತಿಸಲಾರದೆ. ಒಟ್ಟಾಗಿ, ಅವರ ಕೂಡೆ ಆತನನ್ನು ನಿಂದಿಸಿ-ದರೂ ಅವರು ಅದನ್ನು ಯಾವ ರೀತಿಯಲ್ಲೂ ಕಿವಿಗೆ ಹಾಕಿಕೊಳ್ಳದೆ "ಅವನದೇನು ತಪ್ಪು?" ಎಂದು ಮರು ಪ್ರಶ್ನೆ ಹಾಕಿ ನಿಂದಿಸಿದವರನ್ನು ದಂಗಾಗಿಸುವುದಿದೆ. ಇದು ಮಹಾ ನಾಯಕರಲ್ಲಿ ಇರಬೇಕಾದ ಗುಣಗಳಲ್ಲಿ ಒಂದು – ಎಂದು ನಿಸ್ಸಂಶಯವಾಗಿ ಹೇಳಬಹುದು.

ಸ್ವತಂತ್ರ ವಿಚಾರ ಶಕ್ತಿ: ಸ್ವಾಮೀಜೀಯವರು ಅತ್ಯಂತ ಪ್ರಾಚೀನವಾದ ಪರಂಪರೆಯ, ಸಂಸ್ಕೃತಿಯ, ಪ್ರತೀಕವಾಗಿರುವವರು – ಎಂದರೆ, ಸಂನ್ಯಾಸ ಧರ್ಮ – ಅಷ್ಟೂ ಹಳತು. ಆದರೆ ಅವರು ಪ್ರಾಚೀನತೆಯ ಎಡೆಯಲ್ಲೂ ತಮ್ಮ ತೀಕ್ಷ್ಣವಾದ ವಿಚಾರಶಕ್ತಿಯನ್ನು ಮೊಂಡಾಗಿಸಿಲ್ಲ. ಅಂಧಶ್ರದ್ಧೆ ಅವರಲ್ಲಿಲ್ಲ. ಕಾರಣ ಕೊಡ-ಲಾರದ ಯಾವ ಪಾಚೀನ ಆಚಾರ ಪದ್ಧತಿಯೂ ಅವರಲ್ಲಿಲ್ಲ.

ಎಲ್ಲಾ ವಿಷಯಗಳ ಕುರಿತು, ಅವರು ಯಾವುದೇ ಕಟ್ಟುಪಾಡಿಗೂ ಬಂಧನಕ್ಕೂ ಪೂರ್ವಾಗ್ರಹಗಳಿಗೂ ಒಳಗಾಗದೆ, ಸ್ವತಂತ್ರವಾಗಿ ವಿಚಾರ ಮಾಡುತ್ತಾರೆ. ಅದುದ-ರಿಂದಲೇ ಅವರ ವಿಚಾರಗಳಲ್ಲಿ ನವೀನತೆ ಇದೆ; ತೀಕ್ಷ್ಣತೆ ಇದೆ; ವೈಜ್ಞಾನಿಕ ದೃಷ್ಟಿಕೋನವಿದೆ; ಮಾನವ ಸ್ವಭಾವದ ತಿಳಿವಳಿಕೆಯ ಸಾರಸಂಗ್ರಹವಿದೆ.

ಮೂಲಕ್ಕೆ ಸಂಶೋಧನೆ: ಯಾವುದೇ ವಿಷಯವು ಪೂಜ್ಯ ಶ್ರೀಗಳವರ ಕುರಿತು ಪರ್ಯಾಲೋಚಿಸುವ ಬಗಲು ಆದರ ಮೂಲಕ್ಕೆ ಇಳಿದು, ಅತ್ಯಂತ ಏಕಾಗ್ರತೆ-ಯಿಂದ ವಿಚಾರ ಮಾಡುತ್ತಾರೆ. ಒಂದೇ ವಿಷಯದ ಕುರಿತು ದಣಿವಿಲ್ಲದೆ ಗಂಟೆ ಗಂಟೆಗಳ ಕಾಲ ವಿಮರ್ಶೆ ಮಾಡುತ್ತಾರೆ. ಇದರಿಂದಾಗಿ, ಯಾವುದೇ ಸಮಸ್ಯೆಯನ್ನು ಪರಿಹರಿಸುವ ಅವರ ವ್ಯಾವಹಾರಿಕ ಶಕ್ತಿಯು ಉನ್ನತವಾಗಿರುವುದು ಸ್ಪಷ್ಟ.

ರಾಜಿ ತೀರ್ಮಾನ: "ಇದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಂ | ಅಸೌ ಮಯಾ ಹತಃ ಶತ್ರುಃ ಹನಿಷ್ಯೇ ಚಾಪರಾನಪಿ|" "ಇಷ್ಟು ಸಂಪತ್ತು ನನಗಿದೆ. ಇನ್ನು ಇಷ್ಟು ಸಂಪತ್ತು ನನಗೆ ಬರಲಿದೆ. ಈ ಶತ್ರುವು ನನ್ನಿಂದ

ಕೊಲ್ಲಲ್ಪಟ್ಟನು. ಇತರರನ್ನೂ ಸಂಹಾರ ಮಾಡಿಸುತ್ತೇನೆ." ಎಂಬಂತಹ ದ್ವೇಷ ತುಂಬಿದ ವಿಚ್ಛಿದ್ರಕಾರಕ ಪ್ರವೃತ್ತಿಗಳು ಎಲ್ಲಾ ಕಡೆಯೂ ತುಂಬಿರುವ ಈ ಕಾಲದಲ್ಲಿ ವಾದ ವಿವಾದ. ವೈಮನಸ್ಸುಗಳಿಗೆ ಕಡಿಮೆಯಿಲ್ಲ.

ಇಂತಹ ಸಂದರ್ಭದಲ್ಲಿ ನ್ಯಾಯ ಪಡೆಯಲೆಂದು ಅತ್ಯುನ್ನತ ನ್ಯಾಯಾಲಯದ ತನಕವೂ ಹೋಗಿ, ಧನ, ಸಮಯ, ಶಾಂತಿಗಳನ್ನು ಕೆಡಿಸಿಕೊಳ್ಳುವ ಮಂದಿ ಬೇಕಷ್ಟು ಇದ್ದಾರೆ. ಸ್ವಲ್ಪ ತಿಳಿವಳಿಕೆಯುಳ್ಳವರು ಕೋರ್ಟಿಗೆ ಹೋಗುವ ಬದಲು ತಮ್ಮ ಎಷ್ಟೋ ಕೌಟುಂಬಿಕ ಕಲಹಗಳನ್ನು ಇಲ್ಲವೇ ನೆರೆಯವರ ಜಗಳಗಳನ್ನು ಪೂಜ್ಯ ಶ್ರೀಗಳವರ ಬಳಿಗೆ ತೀರ್ಮಾನಕ್ಕೆ ತರುವುದಿದೆ. ಅವರ ವಿವಾದದ ಮೂಲವನ್ನು ಸ್ವಾಮೀಜೀಯವರು ಗಾಢವಾಗಿ ತಿಳಿದುಕೊಂಡು ಇಕ್ಕಡೆಯವರ ವಾದ ಪ್ರತಿವಾದ-ಗಳನ್ನು ಕೇಳಿಕೊಂಡು ಜಾಣ್ಮೆಯಿಂದ ಕೌಶಲದಿಂದ ಮುಂದುವರಿಯುತ್ತಾರೆ. ಇಕ್ಕಡೆ-ಯವರನ್ನು ಪ್ರತ್ಯೇಕವಾಗಿ ಕರೆದು ಆತ್ಮೀಯವಾಗಿ ಅವರ ಕೂಡೆ ಮಾತನಾಡುತ್ತಾರೆ. ವಿವಾದವು ಹೀಗೆಯೇ ಮುಂದುವರಿದರೆ, ಅವರು ಯಾವ ತರದಲ್ಲಿ ದೀರ್ಘಕಾಲ ಕಷ್ಟ ನಷ್ಟಗಳನ್ನು ಅನುಭವಿಸಬೇಕಾದೀತು – ಎಂಬುದನ್ನು ಮನದಟ್ಟಾಗುವಂತೆ ವರ್ಣಿಸು-ತ್ತಾರೆ. ಸ್ವಾಮೀಜೀಯವರು ಸೂಚಿಸುವ ತೀರ್ಮಾನಕ್ಕೆ ಅವರು ಒಪ್ಪಿಕೊಂಡದ್ದ-ರಿಂದ, ಅವರಿಗೆ ದೀರ್ಘಾವಧಿಯಲ್ಲಿ ಏನು ಲಾಭವಿದೆಯೆಂದು ಮನಗಾಣಿಸುತ್ತಾರೆ. ತದನಂತರ ಇನ್ನೊಂದು ಕಡೆಯವರನ್ನು ಹೀಗೆಯೇ ಮಾತನಾಡಿಸುತ್ತಾರೆ.

ಎರಡು ಮೂರು ಸುತ್ತಿನ ಮಾತುಕತೆಗಳು ಆದನೇಲೆ ಇಕ್ಕಡೆಯವರ ಮನಸ್ಸು ತೀರ್ಮಾನಕ್ಕೆ ಒಡಂಬಡುವ ರೀತಿಗೆ ಬರುವುದು. ಕಡೆಯದಾಗಿ ಉಳಿಯುವ ಚಿಕ್ಕ ಪುಟ್ಟ ವಿಷಯಗಳಿಗೆ ಈರ್ವರೂ ಒಪ್ಪಿಕೊಳ್ಳುವಂತೆ ಮಾಡಿ ರಾಜಿಮುದ್ರೆ ಬೀಳುವಂತೆ ಮಾಡಿದ್ದಾರೆ.

ಈ ರೀತಿಯ ಕೌಶಲದಿಂದ, ಆತ್ಮಶಕ್ತಿಯಿಂದ ಹಲವು ಕ್ಲಿಷ್ಟವಾದ ವಿವಾದ ಗಳನ್ನು ಸ್ವಾಮೀಜೀಯವರು ಬಗೆಹರಿಸಿ, ಕ್ರಿಮಿನಲ್ ತಕ್ಷೀರು ಆಗಿ ಅನಾಹುತ-ಗಳಾಗುವುದನ್ನು ಅಥವಾ ಸಿವಿಲ್ ವ್ಯಾಜ್ಯಗಳಲ್ಲೇ ಒಂದೆರಡು ದಶಕಗಳ ತನಕ ಒದ್ದಾಡಬೇಕಾದ ಪ್ರಸಂಗಗಳನ್ನು ತಪ್ಪಿಸುತ್ತಾರೆ.

ಇಂತಹ ರಾಜಿ ತೀರ್ಮಾನಗಳಿಗಾಗಿ ಇಕ್ಕಡೆಯವರು ಪೂಜ್ಯ ಶ್ರೀಗಳವರಿಗೆ ತುಂಬಾ ಕೃತಜ್ಞರಾಗಿರುವಂತಾಗುವುದು. "ನಮ್ಮ ಕುಟುಂಬಗಳು ನೆಮ್ಮದಿಯಿಂದ ಸಹಜೀವನ ನಡೆಸುವಂತೆ, ಸುಖ ಸಮಾಧಾನದಿಂದ ಬಾಳುವಂತೆ ಆಗಲು ಶ್ರೀಗಳವರು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅವರ ಉಪಕಾರವನ್ನು ಎಂದೆಂದೂ ಮರೆಯುವುದು ಅಸಾಧ್ಯ." – ಎಂದು ತುಂಬಿದ ಹೃದಯದಿಂದ ನುಡಿಯುವ ಶಿಷ್ಯ ಜನರು ಬೇಕಷ್ಟು ಮಂದಿ ಇದ್ದಾರೆ.

ಚಾಣಾಕ್ಷತೆ : ಪೂಜ್ಯ ಶ್ರೀಗಳವರು ಧಾರ್ಮಿಕ ವಿಚಾರಗಳಲ್ಲಿ ಉತ್ತಮ ವಿದ್ವಾಂಸರಾಗಿದ್ದು, ವ್ಯವಹಾರದಲ್ಲಿ ಅವರನ್ನು ಸರಿಗಟ್ಟುವವರೇ ಇಲ್ಲ. ಯಾವುದೇ ವ್ಯವಹಾರದಲ್ಲೂ ಅವರನ್ನು ಸೋಲಿಸಲು ಯಾರಿಗೂ ಸಾಧ್ಯವಿಲ್ಲ. ಏಕೆಂದರೆ, ಲೌಕಿಕವಾದ ಪ್ರತಿಯೊಂದು ತರದ ವ್ಯವಹಾರದ ಆಗುಹೋಗುಗಳ ಕಲ್ಪನೆ ಅವರ ಮೇಧಾಶಕ್ತಿಯಲ್ಲಿದೆ. ತೀಕ್ಷ್ಣವಾದ ಬುದ್ಧಿ ಸಾಮರ್ಥ್ಯವಿರುವವರು ಅವರು. ಅವರ ಚಾಣಾಕ್ಷತೆಯೆಂಬ ಗುಣದಲ್ಲಿ ಭವಿಷ್ಯತ್ತಿನ ಕುರಿತಾಗಿ ಅವರಿಗಿರುವ ಬಹು ದೂರ-ದೃಷ್ಟಿ ಕೂಡಾ ಸೇರಿಕೊಂಡಿರುವುದು.

ಕಾರ್ಯದಕ್ಷತೆ : ಪೂಜ್ಯ ಶ್ರೀಗಳವರಲ್ಲಿ ಪ್ರಚಂಡವಾದ ಕ್ರಿಯಾಶಕ್ತಿಯಿದೆ ; ಕಾರ್ಯದಕ್ಷತೆಯಿದೆ. ಕೃಷಿ, ಗ್ರಂಥರಚನೆ, ಕಟ್ಟಡ ರಚನೆ, ಸಮಾರಂಭಗಳು, ಹೋಮ – ಹವನ, ಯಜ್ಞ – ಯಾಗಾದಿಗಳು, ಸಂಸ್ಥೆಗಳ ಸಂಘಟನೆ – ಹೀಗೆ ಯಾವುದೇ ಕಾರ್ಯವಾದರೂ ಹೇಗೆ ನಡೆಯಬೇಕು ? ಹೇಗೆ ನಡೆದರೆ ಆ ಕಾರ್ಯ ಚೆಲುವಾದೀತು ? ಎಂಬ ಕುರಿತು ಆಳವಾದ ಪರಿಜ್ಞಾನವು ಅವರಿಗಿದೆ. ಅಲ್ಲದೆ, ಯಾವ ಕೆಲಸವನ್ನು ಪೂರೈಸಲು ಯಾರು ಯೋಗ್ಯವಾದ ಜನ ? ಯಾರನ್ನು ಗೊತ್ತು ಮಾಡ-ಬೇಕು ? ಅವರಿಗೆ ಏನೇನು ವಿವರಣೆ ನೀಡಬೇಕು ? ಏನು ಎಚ್ಚರಿಕೆಯ ಮಾತು ಹೇಳಬೇಕು ? – ಇವೆಲ್ಲಾ ಅವರಿಗೆ ಗೊತ್ತು.

ಈ ಆಳವಾದ ಅನುಭವ, ಪರಿಜ್ಞಾನ ಅವರಿಗೆ ಇರುವ ಕಾರಣ ಅವರು ಕೈಹಾಕುವ ಕೆಲಸವನ್ನು – ಅದು ಚಿಕ್ಕದಿರಲಿ, ದೊಡ್ಡದಿರಲಿ, ಅತ್ಯಂತ ನಿಪುಣತೆ-ಯಿಂದ ಪೂರೈಸುತ್ತಾರೆ.

ವಾರಾಣಸಿಯ ಪಂಡಿತ ಶ್ರೀ ಗಣಪತಿ ಶಾಸ್ತ್ರಿ, ಹೆಬ್ಬಾರ – ಇವರು ಶ್ರೀಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸಿದ ಗುರುವೃಂದಕ್ಕೆ ಸೇರಿದವರಲ್ಲಿ ಪ್ರಮುಖರು. ಬ್ರಹ್ಮಚರ್ಯ ವ್ರತನಿಷ್ಠರೂ ಆರ್ಷ ವಿದ್ಯಾಪ್ರೇಮಿಗಳೂ ಆದ ಇವರು ತಮ್ಮ ಪಾಲಿನ ಎಲ್ಲ ಆಸ್ತಿಯನ್ನೂ (ಸ್ಥಿರ, ಚರ) ಶಾಸ್ತ್ರಗಳ ಉಚ್ಚ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ತಾವೇ ಸ್ಥಾಪಿಸಿ ಬೆಳೆಸಿದ ಶ್ರೀಕೃಷ್ಣ ಪರಮಾತ್ಮ ಟ್ರಸ್ಟಿಗೆ ಸಮರ್ಪಿಸಿ, ತಾವೇ ಸ್ವತಃ ಅದರ ಮುಖ್ಯ ಸಂಚಾಲಕರಾಗಿದ್ದಾರೆ !

" ಶಿಷ್ಯಾದಿಚ್ಛೇತ್ ಪರಾಜಯಂ " ಎಂಬ ನುಡಿಗನುಸಾರವಾಗಿ ತಮ್ಮಿಂದ ಶಾಸ್ತ್ರಾಧ್ಯಯನಮಾಡಿದ ಶ್ರೀಗಳು ತಮಗಿಂತ ಪರಿಣತರೆಂದೂ, ಸಮರ್ಥರೆಂದೂ, ದೂರದರ್ಶಿಗಳೆಂದೂ, ವ್ಯವಹಾರದಕ್ಷರೆಂದೂ, ಪ್ರತ್ಯಕ್ಷ ನಿದರ್ಶನಗಳಿಂದ ಪರಾಂಬರಿಸಿ ಅರಿತ ಶ್ರೀ ಹೆಬ್ಬಾರ ಶಾಸ್ತ್ರಿಗಳು ತಮ್ಮ ಸಂಸ್ಥೆಯ ಸಂಚಾಲಕತ್ವದ ಸಂಪೂರ್ಣ ಹೊಣೆಯನ್ನು ಶ್ರೀಗಳವರಿಗೆ ಹೊರಿಸಿದ್ದಾರೆ. ಇದು ಶ್ರೀಗಳ ಕಾರ್ಯದಕ್ಷತೆ ಹಾಗೂ ಆರ್ಥಿಕ ಶಾಸ್ತ್ರಗಳ ಪಾಂಡಿತ್ಯಕ್ಕೆ ಪ್ರತ್ಯಕ್ಷ ನಿದರ್ಶನವಾಗಿದೆ.

ತೀರ್ಥಹಳ್ಳಿ ಶ್ರೀ ಮಠದಲ್ಲಿ ಗೋಕರ್ಣದ ಕೊಡ್ಲಕೆರೆ ಶ್ರೀ ಶಿವರಾಮ ಭಟ್ಟರು ಕೆಲಕಾಲ ಆಡಳಿತ ನಿರ್ವಹಿಸಿದ್ದು, ಅನಂತರ ಅವರ ಮಕ್ಕಳಾದ, ಚತುರರೂ ಸಾತ್ವಿಕರೂ ಶ್ರೀ ಗುರುಪೀಠದ ಪುರೋಭಿವೃದ್ಧಿಕಾಂಕ್ಷಿಗಳೂ ಆದ ಶ್ರೀ ಕೆ. ಅನಂತ ಭಟ್ಟರು ಬಹುಕಾಲ (ಸುಮಾರು ನಾಲ್ಕು ದಶಕ ಸಂವತ್ಸರ) ಅದೇ ಮಠ ವ್ಯವಹಾರ-ವನ್ನು ಆದರ್ಶಪ್ರಾಯವಾಗಿ ನೆರವೇರಿಸಿ ಪರಿಣತರಾದವರು. ಆಡಳಿತ ಸ್ವೀಕರಿಸಿದ ಅಲ್ಪಾವಧಿಯಲ್ಲಿಯೇ ಮಠೀಯ ವ್ಯವಹಾರಗಳನ್ನು ಅರಿತು ಸಮರ್ಥರೀತಿಯಿಂದ ನಿರ್ವಹಿಸುತ್ತಲಿರುವ ಶ್ರೀಗಳ ಘನ ಯೋಗ್ಯತೆಯನ್ನು ಕಂಡ ಶ್ರೀಯುತರು ತುಂಬಿದ ಹೃದಯದಿಂದ ಶ್ರೀಗಳವರನ್ನು ಪ್ರಶಂಸಿಸುತ್ತಿರುವುದು ವೈಶಿಷ್ಟ್ಯಪೂರ್ಣವಾಗಿದೆ.

ದೃಷ್ಟಿವೈಶಾಲ್ಯ : ಸ್ವಾಮೀಜೀಯವರು ಎಂದೂ ಸಂಕುಚಿತ ದೃಷ್ಟಿಯವರಲ್ಲ. ಅತ್ಯಂತ ವಿಶಾಲದೃಷ್ಟಿ ಅವರಿಗಿದೆ.

ಮುಖ್ಯವಾಗಿ ಹವ್ಯಕ ಮಹಾಮಂಡಲಕ್ಕೆ ಅವರು ಪೀಠಾಧಿಪತಿಗಳಾಗಿದ್ದರೂ ಸಮಗ್ರವಾದ ಹಿಂದೂ ಜನಾಂಗದ ವಿಚಾರವನ್ನೇ ಅವರು ಒಟ್ಟಾಗಿ ಆಲೋಚಿಸು-ತ್ತಾರೆ. ಹಿಂದೂ ಜನಾಂಗ ಧರ್ಮನಿಷ್ಠವಾಗಬೇಕು, ಬಲಿಷ್ಠವಾಗಬೇಕು – ಎಂದು ಹಗಲಿರುಳೂ ಅವರು ಕನಸು ಕಾಣುತ್ತಾರೆ.

ತಮ್ಮ ಅಧಿಕಾರಪೀಠದ ಹೊಣೆಗಾರಿಕೆಯ ದೃಷ್ಟಿಯಿಂದ ಮಾತ್ರ ಅವರು ಶಿಷ್ಯ ಸಮಾಜದ ಅಭ್ಯುದಯ ಸಂಘಟನೆಗಳ ಕುರಿತು ಹೆಚ್ಚು ಯೋಚಿಸುತ್ತಾರೆಯೇ ಹೊರತು, ಯಾವುದೇ ಸಂಕುಚಿತ ದೃಷ್ಟಿಯಿಂದಲ್ಲ.

ಆದುದರಿಂದ ಇಡೀ ರಾಷ್ಟ್ರದ ಏಳಿಗೆಗಾಗಿ ಹಾಗೂ ಹಿಂದೂ ಜನಾಂಗದ ಅಭ್ಯುದಯಕ್ಕಾಗಿ ಶ್ರಮಿಸುವ ಎಲ್ಲ ಸಂಘ ಸಂಸ್ಥೆಗಳನ್ನೂ ಅವರು ಪ್ರೀತಿಸುತ್ತಾರೆ ಹಾಗೂ ಹರಸುತ್ತಾರೆ.

ತಮ್ಮ ದೃಷ್ಟಿಕೋನವನ್ನೂ ತಮ್ಮ ಕಾರ್ಯವಿಧಾನವನ್ನೂ ಎಲ್ಲರೂ ಒಪ್ಪಿ-ಕೊಳ್ಳಬೇಕು ಎಂಬ ಸಂಕುಚಿತತೆಯೂ ಅವರಿಗಿಲ್ಲ. ಎಲ್ಲರ ಹಿನ್ನೆಲೆಯಲ್ಲಿಯೂ ಒಂದು ಸತ್ಯವನ್ನು ಕಂಡುಕೊಳ್ಳುವ ಹೃದಯವೈಶಾಲ್ಯ ಅವರಿಗಿದೆ ಎಂಬುದು ಅತ್ಯಂತ ಆನಂದದ, ಅಭಿಮಾನದ ವಿಚಾರ.

ಸನಾತನಧರ್ಮದ ಇತರ ಸ್ವಾಮಿಗಳವರನ್ನು ಅಂದರೆ ಪೀಠಾಧಿಪತಿಗಳನ್ನು "ನಾವು ನೋಡಬೇಕಾಗಿಲ್ಲ" ಎಂಬ ಮದಾಭಿಮಾನ ಅವರಿಗಿಲ್ಲ. ಎಲ್ಲರೊಳಗೆ ಸಹಕಾರ ಒಮ್ಮತ, ತಿಳಿವಳಿಕೆ ಬೇಕೆಂಬುದೇ ಅವರ ಅಭಿಪ್ರಾಯವಾಗಿದೆ.

ಸಮಾಜದ ಸರ್ವತೋಮುಖ ಅಭಿವೃದ್ಧಿಯ ಹಿತೈಷಿಗಳೂ ವಿದ್ವಾಂಸರೂ ಉಡುಪಿಯ ಅಷ್ಟ ಮಠಾಧೀಶ್ವರರಲ್ಲೊಬ್ಬರೂ ಆದ ಪೂಜ್ಯ ಶ್ರೀಪೇಜಾವರ ಮಠಾಧೀ-

ಶರಾದ ಶ್ರೀ ವಿಶ್ವೇಶ್ವರತೀರ್ಥ ಶ್ರೀಪಾದಂಗಳವರನ್ನೂ ಪೂಜ್ಯ ಅದಮಾರು ಮಠಾಧೀಶರಾದ ಶ್ರೀ ವಿಬುಧೇಶ ತೀರ್ಥ ಶ್ರೀ ಚರಣರವರನ್ನೂ ಸ್ವಾಮೀಜೀಯವರು ತಮ್ಮ ತೀರ್ಥಹಳ್ಳಿ ಮಠದಲ್ಲೇ ಯುಕ್ತವಾದ ರೀತಿಯಲ್ಲಿ ಸತ್ಕರಿಸಿ, ಸಂಭಾಷಣೆ ನಡೆಸಿರುವರು-ಎಂಬುದರಿಂದಲೂ ಅವರ ಹೃದಯ ವೈಶಾಲ್ಯ ತಿಳಿಯುವುದು.

ಅಲ್ಲದೆ, ವರ್ತಮಾನ ಸ್ವಾಮೀಜೀಯವರು ಎಡನೀರಿನ ಹಿಂದಿನ ಸ್ವಾಮೀಜೀಯವರಾದ ಶ್ರೀ ಮದೀಶ್ವರಾನಂದ ಭಾರತೀ ಶ್ರೀಸ್ವಾಮಿಗಳವರ ಕೋರಿಕೆ ಮೇರೆಗೆ ಎಡನೀರೂ ಮಠಕ್ಕೂ ಬಿಜಯಂಗೈದರು.

ಎಡನೀರು ಮಠವು ಶ್ರೀಮದಾಚಾರ್ಯ ಶಂಕರಭಗವತ್ಪಾದರ ಪ್ರಧಾನ ಶಿಷ್ಯರುಲ್ಲೊಬ್ಬರಾದ ಪೂಜ್ಯ ಶ್ರೀ ತೋಟಕಾಚಾರ್ಯರ ಪರಂಪರೆಗೆ ಸೇರಿದೆ. ವೃದ್ಧರೂ ಸಾತ್ವಿಕರೂ ಆದ ಶ್ರೀಮದೀಶ್ವರಾನಂದ ಭಾರತೀ ಸ್ವಾಮಿಗಳವರು ತಾವು ಎಡನೀರಿನಲ್ಲಿ ನಡೆಸುವ ವಿಜೃಂಭಣೆಯ ಶ್ರೀಶಂಕರಜಯಂತಿಗೆ ಸ್ವಾಮೀಜೀಯವರು ಆಗಮಿಸುವಂತೆ ಕೇಳಿಕೊಂಡರು. ಶ್ರೀಗಳವರು ೧೯೫೪ರಲ್ಲಿ ಅಲ್ಲಿಗೆ ಚಿತ್ತೈಸಿದರು.

ಅವರ ಘನ ಅಧ್ಯಕ್ಷತೆಯಲ್ಲಿ ಶ್ರೀ ಶಂಕರಜಯಂತಿಯ ಸಮಾರಂಭವು ವೈಭವದಿಂದ ನಡೆಯಿತು. ಸ್ವಾಮೀಜೀಯವರು ವೇದ ವೇದಾಂತಾದಿ ವಿಷಯಗಳ ವಚನಾಮೃತಧಾರೆಯನ್ನು ಸುರಿಸಿ ವೃದ್ಧ ಗುರುಗಳನ್ನೂ ಸೇರಿದ ಜನರನ್ನೂ ಸಂತೋಷ ಪಡಿಸಿದರು. ಆ ಸಮಯದಲ್ಲಿ ನೆರವೇರಿದ ಸ್ವಾಮೀಜೀಯವರ ಅಡ್ಡಪಾಲಕಿ ಮೆರವಣಿಗೆ, ಮಠದ ಹಸ್ತಿದಂತ ರಚಿತ ಸುವರ್ಣ ಸಿಂಹಾಸನ ಪ್ರದರ್ಶನ, ವಿದ್ವತ್ ಸಂಭಾವನೆ, ಸನ್ಮಾನ ಸಮಾರಂಭ ಮೊದಲಾದುವುಗಳು ಎರಡೂ ಮಠಗಳ ನಡುವೆ ಅನ್ಯೋನ್ಯ ಹಿತಸಂಬಂಧ ಸಂವರ್ಧಕಗಳಾಗಿ ಕಂಗೊಳಿಸಿದುವು.

ಹೀಗೆ ಇತರ ಪೀಠಾಧಿಪತಿಗಳ ಕೂಡೆ ಸ್ವಾಮೀಜೀಯವರು ಇಟ್ಟುಕೊಂಡ ಸಂಪರ್ಕ ಸಂಬಂಧಗಳಿಂದ ಅವರ ಮನೋಗತವು ಅರ್ಥವಾಗುವುದು. **"ಮಠಾಧಿಪತಿಗಳೆಲ್ಲರೂ ಒಂದಾಗಬೇಕು. ಶಿಷ್ಯಸಮಾಜದ ಹಿತ ಸಂವರ್ಧನೆಯ ಕುರಿತು ಲಕ್ಷ್ಯ ಕೇಂದ್ರೀಕರಿಸಬೇಕು. ಮತಗಳು ಭಿನ್ನವಾದರೂ ಮತಾನುಯಾಯಿಗಳ ಮತಿ ಒಂದಾಗಬೇಕು"** – ಎಂಬುದೇ ಅವರ ಅಭಿಪ್ರಾಯ. ಹೀಗೆ ಪೂಜ್ಯ ಶ್ರೀಗಳವರ ಪ್ರಗತಿಪರ ವಿಚಾರಧಾರೆ, ಅನ್ಯಮತ ಸಹಿಷ್ಣುತೆ, ಪರಸ್ಪರ ಹಿತಸಂಬಂಧ ಸಂವರ್ಧನೆ, ಸಮಾಜ ಹಿತ ಚಿಂತನೆ – ಮೊದಲಾದ ಹೃದಯವೈಶಾಲ್ಯದ ಪರಿಚಯ ನಮಗಾಗುವುದು.

ಸ್ಮರಣಶಕ್ತಿ: ಸ್ವಾಮೀಜೀಯವರಿಗೆ ಅತ್ಯಂತ ವಿಶೇಷವಾದ ಸ್ಮರಣ ಶಕ್ತಿಯಿದೆ. ಸರ್ವಸಾಮಾನ್ಯವಾಗಿ ಯಾರಲ್ಲೂ ನಾವು ಇಂತಹ ಮಟ್ಟದ ಸ್ಮರಣ ಶಕ್ತಿಯನ್ನು ಕಾಣಲು ಸಾಧ್ಯವಿಲ್ಲ.

ಯಾವುದೇ ವ್ಯಕ್ತಿ ಒಮ್ಮೆ ಅವರ ಭೇಟಿ ಪಡೆದುಕೊಂಡು ಹೋದರೆ ಮತ್ತೆ ಆತನ ಹೆಸರು, ಕುಟುಂಬ, ಊರು, ವಿದ್ಯೆ, ಉದ್ಯೋಗ, ಆತನ ಯೋಗ್ಯತೆ – ಇತ್ಯಾದಿ ಸಕಲ ವಿಚಾರಗಳೂ ಅವರ ನೆನಪಿನ ಹಾಳೆಗಳಿಗೆ ಸೇರಿ ಹೋಗುವುವು. ತದನಂತರ ಎಷ್ಟೋ ವರ್ಷಗಳ ಮೇಲಾದರೂ ಆತನ ಭೇಟಿ ಮತ್ತೆ ಆದಾಗ ಶ್ರೀಗಳವರು ಆತನ ಹೆಸರು, ಉದ್ಯೋಗ, ಪರಿಚಯಗಳನ್ನು ಹೇಳಿಬಿಡುತ್ತಾರೆ.

ಯಾರಿಗಾದರೂ ತನ್ನ ಹೆಸರನ್ನು ಸರಿಯಾಗಿ ಪರಿಚಯವಿಟ್ಟುಕೊಂಡವರ ಮೇಲೆ ಗಾಢವಾದ ಪ್ರೇಮ, ಅಭಿಮಾನ ಬರುವುದು ಸಹಜ. ಸ್ವಾಮೀಜೀಯವರ ಶಿಷ್ಯ ಮಂಡಲಿಯಲ್ಲಿ ಎಲ್ಲರೂ ಅವರನ್ನು ಪ್ರೀತಿಸಲು ಒಂದು ಕಾರಣ ಇಂತಹ ಅಲೌಕಿಕ ನೆನಪಿನ ಶಕ್ತಿಯಾಗಿದೆ.

ಸ್ವಾಮೀಜೀಯವರು ಅಧ್ಯಯನ ಮಾಡಿದ ವೇದಮಂತ್ರಗಳಿಗೆ ಸಂಸ್ಕೃತ ಸಾಹಿತ್ಯ, ವ್ಯಾಕರಣ, ತರ್ಕ, ನ್ಯಾಯ, ಮೀಮಾಂಸೆ, ಮೊದಲಾದ ಸಕಲ ವಿದ್ಯೆಗಳನ್ನು ಅವರು ಲೀಲಾಜಾಲವಾಗಿ ಮತ್ತೆ ನೆನಪಿಗೆ ತಂದು, ಮೂಲವನ್ನು ಬಾಯಲ್ಲಿ ಹೇಳಿ ಅರ್ಥವ್ಯಾಖ್ಯಾನ ಮಾಡುತ್ತಾರೆ. ಪ್ರತಿ ಶಬ್ದದ, ಪ್ರತಿ ಅಕ್ಷರದ ಉತ್ಪತ್ತಿ ಹೇಗಾಯಿತು – ಎಂಬುದನ್ನು ಕೂಡ ಅವರು ವರ್ಣಿಸುತ್ತಾರೆ.

ಸ್ವಾಮೀಜೀಯವರು ಎಳೆಯ ವಯಸ್ಸಿನಲ್ಲಿ ಕಲಿತ ಲೌಕಿಕ ವಿದ್ಯೆಗಳಿಗೂ ಈ ಮಾತು ಅನ್ವಯಿಸುವುದು. ಅವರಲ್ಲಿರುವ ಇತರ ಪಾಂಡಿತ್ಯಗಳಿಗೂ ಈ ಮಾತು ಸರಿ ಹೊಂದುವುದು.

ಯಾವುದೇ ಘಟನೆಯನ್ನು – ಅವರ ಸ್ವಂತದ್ದಿರಲಿ ಅಥವಾ ಮಠದ ಪೂರ್ವ ಇತಿಹಾಸಕ್ಕೆ ಸಂಬಂಧಪಟ್ಟದ್ದಿರಲಿ, ಅವರು ಅದನ್ನು ವಿವರವಾಗಿ ಯಾವುದೇ ಸಮಯ-ದಲ್ಲಿ ಹೇಳುವ ಶಕ್ತಿಯನ್ನು ಪಡೆದುಕೊಂಡಿರುತ್ತಾರೆ.

ಸ್ವಾಮೀಜೀಯವರು ಒಮ್ಮೆ ಓದಿದ, ಒಮ್ಮೆ ತಿಳಿದ ಯಾವುದೇ ವಿಚಾರವನ್ನೂ ಮತ್ತೆ ಮರೆಯುವುದಿಲ್ಲ – ಎಂದರೆ ಅವರ ಸ್ಮರಣಶಕ್ತಿ ಎಷ್ಟು ಅಸಾಮಾನ್ಯವಾಗಿದೆ-ಯೆಂಬುದನ್ನು ನಾವು ತಿಳಿಯಬಹುದು.

ನಾಯಕತ್ವ : ಮೇಲೆ ಹೇಳಿದ ಸಕಲ ಗುಣಗಳ ಪರಿಣಾಮವಾಗಿ ಅವರು ದೈವೀಶಕ್ತಿಯನ್ನು ಪಡೆದುಕೊಂಡ, ಬಹಳ ಪವಿತ್ರವಾದ ಪ್ರಾಚೀನವಾದ ಜ್ಞಾನ ಸಿಂಹಾಸನವನ್ನೇರಿದ ಧರ್ಮಗುರುಗಳಷ್ಟೇ ಅಲ್ಲ – ಇಡಿಯ ಶಿಷ್ಯ ಸಮಾಜದ ಏಕಮಾತ್ರ ಅಧಿನಾಯಕರಾಗಿದ್ದಾರೆ – ಎಂದು ಮುಕ್ತ ಕಂಠದಿಂದ ಹೇಳಬಹುದು.

ಒಂದು ಬೃಹತ್ತಾದ ಉದ್ದೇಶವನ್ನು ಪೂರೈಸಲು ಯಾರು ಯಾರನ್ನು ತಮ್ಮೊಡನೆ ಸೆಳೆದುಕೊಳ್ಳಬೇಕು ? ಯಾರಿಗೆ ಯಾವ ಯಾವ ಜವಾಬ್ದಾರಿಯನ್ನು ಎಷ್ಟೆಷ್ಟು

ವಹಿಸಿಕೊಡಬೇಕು? ವಹಿಸಿಕೊಂಡ ಜವಾಬ್ದಾರಿಯನ್ನು ಅವರು ಶ್ರದ್ಧೆಯಿಂದ ಪೂರೈಸುವಂತೆ ಮಾಡುವ ಸೂತ್ರವೇನು? – ಎಂದು ಸ್ವಾಮೀಜೀಯವರು ಇಡಿಯ ಸಮಾಜಕ್ಕಾಗಿ ಇಟ್ಟುಕೊಂಡ ಧ್ಯೇಯಪೂರ್ತಿಗಾಗಿ ಶಿಷ್ಯರು ನಗುನಗುತ್ತಾ ದುಡಿಯು ವಂತೆ ಮಾಡುವ ಶಕ್ತಿಯು ಸ್ವಾಮೀಜೀಯವರಿಗಿದೆ.

ದಕ್ಷಿಣ ಕನ್ನಡದ ಪೆರಾಜೆಯ ಶ್ರೀರಾಮಚಂದ್ರಾಪುರ ಮಠದ ಸ್ಥಾಪನೆಯಲ್ಲಿ ಸ್ವಾಮೀಜೀಯವರಲ್ಲಿರುವ ಮ ಹಾ ನಾ ಯ ಕ ತ್ವ ಗು ಣ ಹಾಗೂ ಸಂಘಟನಾ ಸಾಮರ್ಥ್ಯವು ಎಲ್ಲರಿಗೂ ತಿಳಿದುಬಂದಿದೆ.

ಈ ಮಠದ ಕಾರ್ಯವನ್ನು ಭವ್ಯವಾಗಿ ಪ್ರಾರಂಭಿಸಲು ಹಲವರಿಗೆ ಅವರು ನೀಡಿದ ಪ್ರೇರಣೆಗಳ ಮಾತು ಬೇರೆಯೇ ಇದೆ. ಅಲ್ಲದೆ ಈ ಕಾರ್ಯವು ತ್ವರಿತಗತಿ-ಯಿಂದ ಮುಂದೆಸಾಗಲು ಸ್ವಾಮೀಜೀಯವರು ವಿಶೇಷವಾದ ಶಕ್ತಿಯನ್ನು ಪ್ರಕಟ-ಗೊಳಿಸಿದ್ದಾರೆ.

ಈ ಮಂಗಳೂರು ಹೋಬಳಿಗೆ ಸಂಬಂಧಪಟ್ಟ ಹಿರಿಯ ಮುಖಂಡರ ಮನವನ್ನು ನೋಯಿಸದೆ, ಅವರ ಪ್ರಾಧಾನ್ಯವನ್ನು ಒಂದಿಷ್ಟೂ ಕಡಿಮೆಗೊಳಿಸದೆಯೇ ಈ ಕಾರ್ಯ ವನ್ನು ಪೂರೈಸುವುದಕ್ಕಾಗಿ ವಿದ್ಯಾವಂತರೂ ಉತ್ತಮ ಸ್ಥಾನಾಪನ್ನರೂ ಆದ ಸಮರ್ಥ ಯುವಕರ ಒಂದು ದೊಡ್ಡ ಪಂಗಡವನ್ನೇ ಸ್ವಾಮೀಜಿ ಸಿದ್ಧಪಡಿಸಿದರು.

ಈ ಯುವಕರಲ್ಲಿ ಎಲ್ಲರೂ ಶೀಲಸಂಪನ್ನರು ಮತ್ತು ಸಮರ್ಥ ಸಮಾಜ ಸೇವೆಯಲ್ಲಿ ಧುರಂಧರರೂ ಆದರೂ ಧಾರ್ಮಿಕ ವಿಷಯಗಳ ಕಡೆಗೆ ಎಲ್ಲರೂ ಆಕರ್ಷಿಸಲ್ಪಡುವವರು ಎನ್ನಬರುವುದಿಲ್ಲ. ಆದರೆ ಸ್ವಾಮೀಜೀಯವರ ಆಕರ್ಷಕ ವ್ಯಕ್ತಿತ್ವಕ್ಕೆ, ಅವರ ನಾಯಕತ್ವಕ್ಕೆ, ಅವರಲ್ಲಿರುವ ಸಮಾಜ ಸಂಘಟನೆಯ ಕುರಿತಾದ ಶ್ರದ್ಧೆ, ಸಾಹಸ, ದೂರದೃಷ್ಟಿಗಳಿಗೆ ಆಕರ್ಷಿತರಾಗಿ ಬಂದ ಯುವಕರೇ ಬಹಳ.

ಅಂಥವರು ಹಣ ಸಂಗ್ರಹ, ಆಸ್ತಿಪಾಸ್ತಿಗಳ ಅಭಿವೃದ್ಧಿ, ಕಟ್ಟಡಗಳ ರಚನೆ. ಕೆರೆಯ ರಚನೆ – ಮೊದಲಾದ ಹತ್ತಾರು ಮುಖ್ಯ ಕಾರ್ಯಗಳಲ್ಲಿ ಟೊಂಕ ಬಿಗಿದು ದುಡಿಯುವಂತೆ ಸ್ವಾಮೀಜಿ ಮಾಡಿರುತ್ತಾರೆ. ಸಮಾಜದಲ್ಲಿ ನವೀನವಾದ ಉತ್ಸಾಹಿ ನಾಯಕರ ಒಂದು ಪೀಳಿಗೆಯನ್ನೇ ಸ್ವಾಮೀಜಿ ಸಿದ್ಧಗೊಳಿಸಿದ್ದಾರೆ.

ಶ್ರೀಗಳವರಿಂದ ಬರುವ ಯಾವುದೇ ಉದಾತ್ತ ಆದೇಶವನ್ನಾದರೂ ಅವರು ಅತ್ಯಲ್ಪ ಕಾಲದಲ್ಲೇ ಪೂರೈಸಿಬಿಡುತ್ತಾರೆ.

ಮಠ ಎಂದರೆ ನಿರುತ್ಸಾಹ ತಿರಸ್ಕಾರ ತಾಳಿದ, ವೃದ್ಧರೂ ತರುಣರೂ ಸ್ತ್ರೀಯರೂ ಬಡವ ಬಲ್ಲಿದರೂ – ಎಲ್ಲರೂ ಈಗ ಮಠ ಹಾಗೂ ಶ್ರೀಗುರುಗಳ ಕುರಿತಾದ ಒಂದು

ನವೀನವಾದ ಹಾಗೂ ಹಿಂದೆಂದೂ ಇಲ್ಲದ ಉತ್ಸಾಹ, ಅಭಿಮಾನ, ಗೌರವ ಭಕ್ತಿಗಳನ್ನು ಬೆಳೆಸಿಕೊಳ್ಳುವಂತೆ ಮಾಡಿದ್ದು ಶ್ರೀ ಗುರುಗಳ ಅಧಿನಾಯಕತ್ವಕ್ಕೆ, ಅವರ ದಿವ್ಯತೆಗೆ ಒಂದು ಭವ್ಯ ನಿದರ್ಶನವಾಗಿದೆ ಎಂದೆನ್ನಬಹುದು.

ಭಟಕಳ – ಮರವಂತೆ (ಉತ್ತರ ಕನ್ನಡ ಜಿಲ್ಲೆ) ಪ್ರಾಂತಗಳಲ್ಲಿರುವ ಶ್ರೀಮಠದ ಶಿಷ್ಯವರ್ಗಕ್ಕೆ ಸೇರಿದ ಸಕಲಾಪುರದವರು ೩೨ನೆಯ ಗುರುಗಳಾದ ಶ್ರೀ ರಾಘವೇಂದ್ರ–ಭಾರತೀ ಸ್ವಾಮಿಗಳವರ ಕಾಲದಿಂದ ಅನೇಕ ಕಾರಣಗಳಿಂದಾಗಿ ಶ್ರೀ ಸಂಸ್ಥಾನದ ಸಂಪರ್ಕಸಹವಾಸಗಳಿಂದ ಬಹುದೂರ ಇದ್ದರು. ಅಂಥವರು ಸಹ ಈಗಿನ ಶ್ರೀಗಳವರ ಆಕರ್ಷಕ ವ್ಯಕ್ತಿತ್ವ ಹಾಗೂ ನಾಯಕತ್ವದ ಯೋಗ್ಯತೆಗಳಿಂದ ಆಕೃಷ್ಟರಾಗಿ, ಅವರೆಲ್ಲರೂ ಒಂದಾಗಿ ಶ್ರೀಗುರುಗಳನ್ನು ಆದರಗೌರವಗಳಿಂದ ಆಮಂತ್ರಿಸಿ ಶ್ರದ್ಧಾ ಭಕ್ತಿ ಪುರಸ್ಸರವಾಗಿ ಸೇವೆಗೈದು, ಈಗ ಇತರ ಪ್ರದೇಶದ ಅಭಿಮಾನಿ ಶಿಷ್ಯರಂತೆ ನಡೆದು ಕೊಳ್ಳುತ್ತಿದ್ದಾರೆ.

ತೀರ್ಥಹಳ್ಳಿ, ಕೊಪ್ಪ, ಮೂಡಿಗೆರೆ, ನರಸಿಂಹರಾಜಪುರ ವಿಭಾಗದ ಶಿಷ್ಯರು ಶ್ರೀಸಂಸ್ಥಾನದೊಡನೆ ಸಾಮೂಹಿಕ ಬಳಕೆಯಿಲ್ಲದೆ ಸುಮಾರು ೫೦–೬೦ ವರ್ಷಗಳು ಉರುಳಿದ್ದುವು. ವರ್ತಮಾನ ಶ್ರೀಗಳವರಲ್ಲಿರುವ ಸಮಾಜೋನ್ನತಿ ಕಾರ್ಯದಲ್ಲಿಯ ಅತ್ಯಾಸಕ್ತಿ, ವಿದ್ಯಾಬಲ, ತಪೋನಿಷ್ಠೆ – ಇತ್ಯಾದಿಗಳಿಂದ ಆಕರ್ಷಿತರಾಗಿ ಸಮ್ಮಿಲಿತರಾಗಿ ಬಂದು, ತಾವು ಸಹ ಹಿಂದಿನವರಂತೆ ಶ್ರೀಗುರುಪೀಠಕ್ಕೆ ಅನುವರ್ತಿಗಳಾಗಿ ನಡೆದು ಕೊಂಡು ಬರುವುದಾಗಿ ವಿಜ್ಞಾಪಿಸಿಕೊಂಡು ಭಕ್ತಿಶ್ರದ್ಧಾನ್ವಿತರಾಗಿ ಸೇವೆ ಸಲ್ಲಿಸಿ, ಅವರೂ ಈಗ ಶ್ರೀಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಿದ್ದಾರೆ.

ಕೊಡಗು ಪ್ರಾಂತದ ಶಿಷ್ಯ ಸಮುದಾಯದವರಿಗೂ ಶ್ರೀಮಠದ ಸಂಪರ್ಕ–ಬಳಕೆಯಿಲ್ಲದೆ ಬಹುವರ್ಷಗಳು ಗತಿಸಿದ್ದವು. ಅವರು ಈಗಿನ ಶ್ರೀಗಳವರ ತುಂಬಿದ ಹೃದಯದ ಶಿಷ್ಯವಾತ್ಸಲ್ಯಕ್ಕೆ ಮಾರುಹೋಗಿ, ಅತ್ಯಾದರದಿಂದ ಶ್ರೀಗಳನ್ನು ಆಮಂತ್ರಿಸಿ ಸಂಭ್ರಮದಿಂದ ಸ್ವಾಗತಿಸಿ, ಅನನ್ಯಭಕ್ತಿಯಿಂದ ಸೇವೆಸಲ್ಲಿಸಿ ಶ್ರೀಗಳವರ ಕೃಪಾಶೀರ್ವಾದವನ್ನು ಪಡೆದಿದ್ದಾರೆ.

ನೀರ್ಚಾಲು (ಕೇರಳ ರಾಜ್ಯ) ಸಂಸ್ಕೃತ ವಿದ್ಯಾಲಯಕ್ಕೆ (ಈಗ ಪ್ರೌಢಶಾಲೆಯಾಗಿ ಮಾರ್ಪಟ್ಟಿದೆ.) – ಸಂಸ್ಕೃತ ಹಾಗೂ ಸಂಸ್ಕೃತಿಗಳ ಬಗೆಗೆ ಅತ್ಯಾದರ ತೋರುತ್ತಿದ್ದ ಹಿಂದಿನ ಕಾಲದಲ್ಲಿಯೂ ನಮ್ಮ ಮಠದ ಪೀಠಾಧಿಪತಿಗಳು ಸಂದರ್ಶನವಿತ್ತು ಅನುಗ್ರಹಿಸಿದ ದಾಖಲೆ ಬಹುಶಃ ಇರಲಾರದು. ಅವರೊಂದಿಗಿನ ಸಂಪರ್ಕ – ಸಂಬಂಧಗಳು ಅಷ್ಟೊಂದು ಉತ್ತಮವಾಗಿರಲಿಲ್ಲ. ಪ್ರಕೃತ ಶ್ರೀಗಳವರ ವ್ಯವಹಾರ ಕುಶಲತೆ, ವಿದ್ಯಾಪ್ರೌಢಿಮೆ, ತಪಃಪ್ರಭಾವಾದಿಗಳನ್ನು ಮನವರಿಕೆಮಾಡಿಕೊಂಡ ಈಗಿನ ಆಡಳಿತ ಮಂಡಲಿಯವರು ಶ್ರೀಗಳವರನ್ನು ಆದರದಿಂದ ಬರಮಾಡಿಕೊಂಡು ಸನ್ಮಾನ-

ಪತ್ರವನ್ನು ಸಮರ್ಪಿಸಿ, ಗೌರವಿಸಿ, ಸುವರ್ಣ ಮಂತ್ರಾಕ್ಷತಾನುಗ್ರಹವನ್ನು ಪಡೆದು ಬೀಳ್ಕೊಟ್ಟು ಧನ್ಯರಾಗಿದ್ದಾರೆ.

ಇವು, ಶಿಷ್ಯವಾತ್ಸಲ್ಯ ಪರಿಪೂರ್ಣರಾದ ಶ್ರೀಗುರುವರ್ಯರು, ದೂರವಾಗುತ್ತಾ ಬಂದ ಗುರುಶಿಷ್ಯ ಸಂಬಂಧವನ್ನು ನಿಕಟಗೊಳಿಸಿ ಅದನ್ನು ಮಧುರವಾಗಿಸಲು ಕೈ-ಗೊಂಡ ಯೋಗ್ಯ ನಾಯಕತ್ವದ ಉದಾತ್ತ ನಿದರ್ಶನಗಳು,

ಕಾಲವಿಪರ್ಯಾಸದಿಂದ ಅನೇಕ ಮಠಗಳು ಅಂದರೆ – ಅಪ್ಸರಕೊಂಡಮಠ, ಹೊನ್ನಾವರ, ಬಾನ್ಕುಳಿ ಮಠ – ಸಿದ್ದಾಪುರ, ಶ್ರೀಕೃಷ್ಣಾನಂದ ಮಠ– ಸಂಪೆಕಟ್ಟೆ ಇವೇ ಮೊದಲಾದವು ಅಧಿಪತಿಗಳಿಲ್ಲದ, ಸ್ವಾಮಿಗಳಿಲ್ಲದ ಮಠಗಳಾಗಿದ್ದವು; ಕೆಲವು ಆಗ-ತೊಡಗಿದ್ದವು. ನಮ್ಮ ಪ್ರಕೃತ ಶ್ರೀಗಳ ವಿದ್ಯೆ, ತಪಸ್ಸು, ವ್ಯಾವಹಾರಿಕ ಚಾತುರ್ಯ ನಾಯಕತ್ವದ ಸಾಮರ್ಥ್ಯ – ಇತ್ಯಾದಿ ಗುಣಗಣಗಳಿಗೆ ಮನ ಸೋತ ಆಯಾ ಮಠದ ಶಿಷ್ಯ ಜನತೆ, ತಮ್ಮ ಮಠಗಳನ್ನು ವಹಿಸಿಕೊಂಡು ಅನುಗ್ರಹಿಸಬೇಕೆಂದು ವಿಜ್ಞಾಪಿಸಿ-ದರು. ಈ ವಿಜ್ಞಾಪನೆಯನ್ನು ಮನ್ನಿಸಿ ಅಂತಹ ಮಠಗಳನ್ನು ವಹಿಸಿಕೊಂಡುದು ಅವುಗಳ ಪ್ರಗತಿಗೆ ಯೋಜನೆಗಳನ್ನು ರೂಢಿಸಿ, ಅನುಷ್ಠಾನಕ್ಕೆ ತಂದುದು – ಇವೆರಡೂ ನಾಯಕತ್ವಕ್ಕೆ, ಶ್ರೇಷ್ಠವ್ಯಕ್ತಿತ್ವಕ್ಕೆ ಹಾಗೂ ದಿವ್ಯತೆಗೆ ಉದಾಹರಣೆಗಳು.

ಕಾರವಾರ ಜಿಲ್ಲೆಯ ಸಿದ್ದಾಪುರದಲ್ಲಿ ಜಿಲ್ಲಾಮಟ್ಟದ ಒಕ್ಕಲುತನ (ಕೈಗಾರಿಕಾ) ಪ್ರದರ್ಶನದ ಏರ್ಪಾಡಾದ ಸಂದರ್ಭದಲ್ಲಿ (ಕ್ರಿ. ಶ. ೧೯೫೫) ಮಾಜಿ ಅರ್ಥಸಚಿವರಾದ ಶ್ರೀಯುತ ರಾಮಕೃಷ್ಣ ಹೆಗಡೆ ದೊಡ್ಮನೆ – ಇವರು ಪ್ರದರ್ಶನದ ಪ್ರಧಾನ ಕಾರ್ಯ-ದರ್ಶಿಗಳು. ಈ ಪ್ರದರ್ಶನಕ್ಕೆ ನಮ್ಮ ಶ್ರೀಗಳವರನ್ನೂ ಆಮಂತ್ರಿಸಬೇಕೆಂಬುದು ಆ ಭಾಗದ ಶಿಷ್ಯವೃಂದದ, ಭಜಕ ಸಮೂಹದ ಹಾರ್ದಿಕ ಅಭಿಪ್ರಾಯ. ಅದಕ್ಕಾಗಿ ಏರ್ಪಟ್ಟ ಶ್ರೀಗಳ ಸ್ವಾಗತ ಸಮಿತಿಯ ಅಧ್ಯಕ್ಷರು – ಆ ಭಾಗದ ಹಿರಿಯ ಕಾರ್ಯ-ಕರ್ತರೂ ಶ್ರೀಮಠದ ಅಭಿಮಾನಿಗಳೂ ಆದ ಶ್ರೀ ದೊಡ್ಮನೆ ನಾಗೇಶ ಹೆಗಡೆಯವರು. ಎಲ್ಲರ ಆಗ್ರಹದ ಆಮಂತ್ರಣವನ್ನು "ಅಸ್ತು" ಎಂದು ಸ್ವೀಕರಿಸಿ ಶ್ರೀಸಂಸ್ಥಾನದ ಮಾನ ಮರ್ಯಾದೆಗಳಿಗೆ ತಕ್ಕಂತೆ ಸಕಲ ಬಿರುದು ಬಾವಲಿಗಳೊಂದಿಗೆ ಸಿದ್ದಾಪುರಕ್ಕೆ ಚಿತ್ತೈಸಿ ಪ್ರದರ್ಶನದಲ್ಲಿ ಭಾಗವಹಿಸಿದ ಶ್ರೀಗಳು, ಈ ಸಂದರ್ಭದಲ್ಲಿ ಅಡಕೆ ಬೇಸಾಯಗಾರರ ಸಮ್ಮೇಳನದ ಉದ್ಘಾಟನೆ, ಬಹುಮಾನವಿತರಣೆ, ಮುಕ್ತಾಯ ಸಮಾರಂಭದ ಅಧ್ಯಕ್ಷತೆಗಳನ್ನು ನೆರವೇರಿಸಿ ಎಲ್ಲರನ್ನೂ ಆನಂದ ತುಂದಿಲರನ್ನಾಗಿಸಿದ್ದಾರೆ.

ಆಗ ಏರ್ಪಡಿಸಿದ ಸಮಸ್ತ ರಾಜವೈಭವದೊಂದಿಗೆ ನಡೆದ ಶ್ರೀಗಳವರ ತಿರ್ಯ-ಗಾಂದೋಲಿಕಾ (ಅಡ್ಡಪಾಲಕಿಯ) ಮೆರವಣಿಗೆ, ಶ್ರೀಮಠದ ಶಿಷ್ಯರು ಹೆಮ್ಮೆಪಟ್ಟು ಕೊಳ್ಳುವಂತಹ ಹಸ್ತಿದಂತ ಸಿಂಹಾಸನಪ್ರದರ್ಶನ, ಶ್ರೀಗಳವರು ಅಪ್ಪಣೆಕೊಡಿಸಿದ ಅನುಗ್ರಹ ಭಾಷಣ – ಇತ್ಯಾದಿಗಳು ಶ್ರೀಮಠದ ಘನತೆ ಗೌರವಗಳನ್ನು ಇಮ್ಮಡಿ-

ಗೊಳಿಸಿದವು. ಈ ಸಮಾರಂಭದಿಂದ ಸ್ವಾಮೀಜೀಯವರ ಜನಪ್ರಿಯತೆ ಸರ್ವವಿಧಿತ-ವಾಗುವುದು.

ಉಪದೇಶ ವೈಶಿಷ್ಟ್ಯ : ಸ್ವಾಮೀಜೀಯವರು ಅಧಿಕಾರ ಸ್ವೀಕರಿಸಿದ ಮೇಲೆ ಬೇರೆ ಬೇರೆ ಸಭೆಗಳಲ್ಲಿ ಮಾಡಿದ ಉಪನ್ಯಾಸಗಳು ಅಸಂಖ್ಯವಾಗಿವೆ.

ಪ್ರಾರಂಭದಲ್ಲಿ ಒಂದೆರಡು ನಿಮಿಷ ಅವರು ಗಂಭೀರವಾಗಿದ್ದು, ಮತ್ತೆ ಯಾವು-ದಾದರೊಂದು ಆಧಾರವಾದ ಮಂತ್ರ ಅಥವಾ ಸಂಸ್ಕೃತ ಶ್ಲೋಕವನ್ನು ಹೇಳಿ ಮತ್ತೆ ಕನ್ನಡದಲ್ಲಿ ಉಪನ್ಯಾಸ ಪ್ರಾರಂಭಿಸುತ್ತಾರೆ.

ಅವರ ಉಪನ್ಯಾಸಗಳಲ್ಲಿ ವಿಷಯಗಳು ಒಂದರ ಹಿಂದೆ ಒಂದು ಸರಪಳಿಯಂತೆ ಜೋಡಿಸಿ ಕೊಂಡು ಸಂಸಂಬದ್ಧವಾಗಿರುವುವು. ಅಲ್ಲದೆ ಅವರು ನೀಡುವ ವಿವರಗಳು, ಮನಸ್ಸಿಗೆ ನಾಟಿ ಶ್ರೋತೃಗಳನ್ನು ಮೇಲ್ಮಟ್ಟಕ್ಕೆ ತಂದು ಅವರ ಆತ್ಮವನ್ನು ವಿಕಸನ ಮಾಡುವಂತಿರುವುವು.

ಮಾತು ಮುಂದುವರಿದಂತೆ ಮಾತಿನ ಓಘ ಇನ್ನಷ್ಟು ಹೆಚ್ಚಿ ಸ್ವಾಮೀಜೀ ಯವರು ಅತ್ಯಂತ ಸ್ಫೂರ್ತಿದಾಯಕವಾಗಿ ಮಾತನಾಡುತ್ತಾರೆ. ಅವರು ಹೇಳುವ ಪ್ರತಿಯೊಂದು ವಿಷಯಕ್ಕೂ ಸನಾತನ ಧರ್ಮದ ವಿವಿಧ ಸಿದ್ಧಾಂತಗಳ ಆಧಾರವನ್ನು ನೀಡುತ್ತಾರೆ. ಅಲ್ಲದೆ ಪ್ರತಿಯೊಂದು ವಿಷಯವೂ ಏಕೆ, ಹೇಗೆ – ಎಂಬುದಾಗಿ ಸ್ಪಷ್ಟವಾಗಿ ಹೇಳುತ್ತಾರೆ.

ಸ್ವಾಮೀಜೀಯವರ ಉಪನ್ಯಾಸದಿಂದ ಯಾರೂ ನೊಂದುಕೊಳ್ಳುವುದಿಲ್ಲ. ಬದ-ಲಾಗಿ ಹೊಸ ಸ್ಫೂರ್ತಿಯನ್ನು ಪಡೆದುಕೊಳ್ಳುತ್ತಾರೆ. ಅಲ್ಲದೆ ನಾವು ಹೇಗೆ ಜೀವನ ಮಾಡಬೇಕು – ಎಂಬ ನಿರ್ಣಯಕ್ಕೆ ಬರುತ್ತಾರೆ.

ಅವರ ಮಾತುಗಳನ್ನು ನಿಶ್ಶಬ್ದವಾಗಿ, ಅಭಿಮಾನದಿಂದ, ಶ್ರದ್ಧೆಯಿಂದ ಎಲ್ಲರೂ ಕೇಳುತ್ತಾರೆ. ಕೇಳಿ ಹೊಸ ಚೇತನ ಪಡೆದುಕೊಳ್ಳುತ್ತಾರೆ.

ಅವರ ಅತ್ಯಂತ ಆಕರ್ಷಕವಾದ, ಸುಂದರವಾದ ಪದಗಳ ಜೋಡಣೆಯಿಂದ ಕೂಡಿದ ಉದಾತ್ತ ಉಪನ್ಯಾಸಗಳನ್ನು ಕೇಳುತ್ತಾ ಹೋದಂತೆ ಇವರು ನಮ್ಮ ಧಾರ್ಮಿಕ ಗುರುಗಳು ಮಾತ್ರವಲ್ಲ, ನಮ್ಮ ಸಮಾಜದ ಜನಪ್ರಿಯ ನಾಯಕರು ಎಂಬ ಅಭಿಪ್ರಾಯವು ಶ್ರೋತೃಗಳಿಗೆ ಉಂಟಾಗುವುದು ಅತ್ಯಂತ ವಿಶೇಷವಾಗಿದೆ.

ಶ್ರೀಗಳವರ ವಿದ್ವತ್ಪೂರ್ಣವಾದ ಉಪನ್ಯಾಸಗಳು ಅವರ ವಿಶೇಷವಾದ ದಿವ್ಯ ಶಕ್ತಿಗಳ ಸಾಲಿನಲ್ಲಿ ಇನ್ನೊಂದು ವಿಚಾರ ಎಂದಿಟ್ಟುಕೊಳ್ಳಬಹುದು.

ರಾಜಕೀಯ ಪರಿಜ್ಞಾನ : ವೈಯಕ್ತಿಕವಾಗಿ ಶ್ರೀಗಳವರೊಡನೆ ಮಾತ-

ನಾಡಿದಾಗ ಅವರಲ್ಲಿರುವ ಅತ್ಯಂತ ವಿಶೇಷವಾದ ರಾಜಕೀಯ ಪರಿಜ್ಞಾನ ಮತ್ತು ಅದರ ಒಳನೋಟದ ಅನುಭವವಾಗುವುದು. ಇಂದು ದೇಶದಲ್ಲಿ ಏನೇನು ವಿದ್ಯಮಾನಗಳು ನಡೆಯುತ್ತಿವೆ ಎಂಬುದನ್ನು ಅವರು ಆಮೂಲಾಗ್ರವಾಗಿ ಬಲ್ಲರು ಎಂದರೆ ಯಾರಿಗಾದರೂ ಅಚ್ಚರಿಯಾಗಬಹುದು. ಆದರೆ ಅದು ಸತ್ಯ.

ರಾಷ್ಟ್ರದೊಳಗಿನ ರಾಜಕೀಯದ ಎಲ್ಲಾ ಪ್ರವಾಹಗಳ ಸೆಳೆತವೂ ಅವರಿಗೆ ತಿಳಿದಿವೆ. ಎಲ್ಲೆಲ್ಲಿ ಏನೇನು ನಡೆದಿವೆ ಎಂಬುದು ಅವರಿಗೆ ಗೊತ್ತು. ಪ್ರಧಾನಿ ಮತ್ತು ರಾಷ್ಟ್ರಪತಿಯಿಂದ ತೊಡಗಿ, ಪ್ರತಿಯೊಂದು ರಾಜ್ಯದ ಮುಖ್ಯಮಂತ್ರಿ ಮತ್ತು ಒಬ್ಬ ಸಾಮಾನ್ಯ ಸಚಿವನ ತನಕ ಎಲ್ಲರ ಹೆಸರು, ಅವರ ಗುಣನಡತೆಗಳು, ಅವರ ಧ್ಯೇಯ ಧೋರಣೆಗಳು, ಅವರ ಶಕ್ತಿ ಸಾಮರ್ಥ್ಯಗಳು, ಅವರ ಪೂರ್ವ ಚರಿತ್ರೆ – ಇಷ್ಟನ್ನೂ ಸ್ವಾಮೀಜಿ ಹೇಳಬಲ್ಲರು.

ಅದೇ ರೀತಿ ಭಾರತದ ವಿದೇಶನೀತಿಯ ಒಳನೋಟಗಳು, ಅಂತರರಾಷ್ಟ್ರೀಯ ವಿದ್ಯಮಾನಗಳು ಮೊದಲಾದವುಗಳನ್ನು ಅವರು ವಿಮರ್ಶಿಸಬಲ್ಲರು.

ಭಾರತ ದೇಶದಲ್ಲಿ ಅಟಂಬಾಂಬು ತಯಾರಾಗುತ್ತಿದೆ ಎಂಬುದು ಎಷ್ಟೋ ಪ್ರಾಂತಗಳ ಹಾಗೂ ಕೇಂದ್ರದ ಸಚಿವರಿಗೆ ಕೂಡ ತಿಳಿಯದಿರುವಾಗ ಭಾರತದ ಪ್ರಥಮ ಅಣುಬಾಂಬು ಸ್ಫೋಟವಾಗುವ ಆರು ತಿಂಗಳ ಮೊದಲೇ ಸ್ವಾಮೀಜೀಯವರು ಶಿಷ್ಯರೊಡನೆ ಈ ಕುರಿತಾಗಿ "ಭಾರತದಲ್ಲಿ ಅಣುಬಾಂಬು ತಯಾರಾಗುತ್ತಿದೆ. ಬೇಗನೆ ಅದನ್ನು ಆಸ್ಫೋಟಿಸುತ್ತಾರೆ" ಎಂದು ಹೇಳಿದ್ದಾರೆ.

ಸ್ವಾಮೀಜೀಯವರು ಹಿಂದೀ ವೃತ್ತಪತ್ರಿಕೆಗಳನ್ನು ಆಳವಾಗಿ ಓದುತ್ತಾರೆ. ಅಲ್ಲದೆ ಅವರು ತಮ್ಮ ಧೀಶಕ್ತಿಯಿಂದ ಹಲವು ವಿಷಯಗಳನ್ನು ಮುಂದಾಗಿ ಊಹಿಸುತ್ತಾರೆ. ಈ ಊಹೆಗಳು ಸತ್ಯವಾಗುತ್ತಿವೆ.

ಸಮಾಜವನ್ನು ಓಜಸ್ವಿಯಾಗಿ ಮಾಡುವ ಕಾರ್ಯದಲ್ಲಿ ಅವರು ತಮ್ಮ ರಾಜಕೀಯ ಪರಿಜ್ಞಾನವನ್ನು ಕೂಡ ಆವಶ್ಯಕವಾದಲ್ಲಿ ಉಪಯೋಗಿಸುತ್ತಾರೆ ಎಂಬುದು ಅಭಿಮಾನದ ವಿಚಾರವಾಗಿದೆ.

ಅವರ ಶಕ್ತಿ, ಚೈತನ್ಯ : ಸ್ವಾಮೀಜೀಯವರ ವ್ಯಕ್ತಿತ್ವದಲ್ಲಿ ಪ್ರಚಂಡವಾದ ಶಕ್ತಿ ಚೈತನ್ಯಗಳು ಓತಪ್ರೋತವಾಗಿ ಹರಿಯುತ್ತಿವೆ. ಅದರಲ್ಲಿ ಆಧ್ಯಾತ್ಮಿಕ ದಿವ್ಯ ಶಕ್ತಿಯೂ ಅಡಗಿದೆ. ಅಲ್ಲದೆ ಬುದ್ಧಿ ಸಾಮರ್ಥ್ಯ ಹಾಗೂ ಇತರ ಗುಣವಿಶೇಷಗಳಿಂದ ಬಂದ ಶಕ್ತಿಯೂ ಅಡಗಿದೆ. ಸಾವಿರದುದಕ್ಕೆ ಅವಿಚ್ಛಿನ್ನವಾಗಿ ಬಂದ ಗುರುಪರಂಪರೆಯ ಪೀಠವನ್ನು ಅಲಂಕರಿಸಿದುದಲ್ಲದೆ, ಶ್ರೀ ಚಂದ್ರಮೌಳೀಶ್ವರ, ಶ್ರೀಸೀತಾರಾಮಚಂದ್ರ ಮತ್ತು ಶ್ರೀಚಕ್ರದ ಉಪಾಸನೆಯ ಶಕ್ತಿಯೂ ಸಮಾವಿಷ್ಟವಾಗಿದೆ.

ಈ ಎಲ್ಲ ಶಕ್ತಿಗಳಿಂದ ಮತ್ತು ಅವರಿಗಿರುವ ಜನಪ್ರಿಯತೆಯಿಂದ ಕೇವಲ ಶಿಷ್ಯರಿಗಷ್ಟೇ ಏಕೆ – ಇಡೀ ರಾಷ್ಟ್ರದ ನಾಯಕನಾಗುವ ಹಲವು ಗುಣಗಳು, ಶಕ್ತಿ ಸಾಮರ್ಥ್ಯಗಳು ಅವರಲ್ಲಿವೆ ಎಂಬುದು ಅತ್ಯಂತ ಅಭಿಮಾನದ ವಿಚಾರ. ಅವರಿಗಿರುವ ಇಂತಹ ಪ್ರಚಂಡವಾದ ಶಕ್ತಿಗಳು ಅವರು ಶಿಷ್ಯಸಮಾಜದ ಸರ್ವಾಂಗೀಣ ಏಳಿಗೆಗಾಗಿ ಮಾತ್ರವೇ ಸದ್ಯಃ ಉಪಯೋಗಿಸುತ್ತಿದ್ದಾರೆ ಎಂದರೆ ಶಿಷ್ಯಸಮಾಜದವರು ಅವರಿಗೆ ಎಷ್ಟು ಕೃತಜ್ಞರಾಗಿರಬೇಕು ಎಂಬುದು ಅರ್ಥವಾಗುವುದು.

ಮಹಿಮೆಗಳು

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭೂತಲೇ ।
ತದಾ ತದಾ ಮಹಾತ್ಮಾನಃ ಸಂಭವಂತಿ ಭವಾದೃಶಾಃ ॥

ಪರಮಾತ್ಮನ ಅಖಂಡ ಶಕ್ತಿಯು ವಿವಿಧ ಬಗೆಯಲ್ಲಿ ಪ್ರಕಟವಾಗುವ ಅನಂತ ಸೂತ್ರಗಳು ಕರಗತವಾದರೆ ವ್ಯಕ್ತಿಯಲ್ಲಿ ಪ್ರಚಂಡವಾದ ಶಕ್ತಿ ಸಂಚಾರವಾಗುವುದು. ಆಗ ಆ ವ್ಯಕ್ತಿಯು ಆಶ್ಚರ್ಯಕರವಾದ ಘಟನೆಗಳಿಂದ ಜನರ ಮೇಲೆ ಸತ್ಪ್ರಭಾವ ಬೀರಬಲ್ಲನು.

ಭಾರತ ದೇಶದಲ್ಲಿ ಹಿಂದಿನಿಂದಲೂ ತಪಸ್ವಿಗಳು, ಋಷಿಗಳು, ಯೋಗಿಗಳು ಜನ್ಮತಾಳಿ ಅದ್ಭುತವಾದ ಪರಮಾರ್ಥ ಸಾಧನೆ ಮಾಡಿದ್ದಾರೆ. ಇಂತಹ ಶ್ರೇಷ್ಠ ಪುರುಷರ ಸೂತ್ರಗಳಲ್ಲಿ ಕೆಲವು ಕರಗತವಾಗಿ ಅವರು ವಿಶೇಷವಾದ ಶಕ್ತಿಗಳನ್ನು ತಮ್ಮ ಬದುಕಿನಲ್ಲಿ ತೋರಿದ್ದಾರೆ ಎಂಬುದು ನಮ್ಮ ಧಾರ್ಮಿಕ ಇತಿಹಾಸದಿಂದ ತಿಳಿಯುವುದು.

ಪೂಜ್ಯ ಶ್ರೀಗಳವರು ಇಂತಹ ಒಂದು ಅದ್ಭುತವಾದ ಶಕ್ತಿಯ ಕೇಂದ್ರದ ಪೀಠವನ್ನೇರಿದವರು. ಅದರ ಮೇಲಾಗಿ ಅವರು ಸ್ವತಃ ವಿವಿಧ ಬಗೆಯ ಆಧ್ಯಾತ್ಮಿಕ ತಪಸ್ಸನ್ನು ಕೈಗೊಂಡವರು. ಆದುದರಿಂದ ಅವರಲ್ಲಿ ಸಹಜವಾಗಿಯೇ ಭಗವತ್ ಸೂತ್ರಕ್ಕೊಳಪಟ್ಟು ಕೆಲವು ದೈವೀಶಕ್ತಿಗಳು ಪ್ರಕಟವಾಗಿರುವುವು. ಆದುದರಿಂದಲೇ ಸಾಮಾನ್ಯರು ಮಾಡಲಾರದ ಮಹಾ ಕಾರ್ಯಗಳನ್ನು ಅವರು ಮಾಡುತ್ತಿದ್ದಾರೆ.

ಹಿಂದೆ ಇದೇ ಹೆಸರಿನ ಪೂಜ್ಯ ಮಠಾಧೀಶರಾದ ಶ್ರೀ ರಾಘವೇಂದ್ರ ಭಾರತೀ ಸ್ವಾಮಿಗಳವರು ಸಾಧಿಸಿದ ಮಹಾಕಾರ್ಯಗಳನ್ನು ಇವರೂ ಸಾಧಿಸಿದ್ದಾರೆ ಎಂಬುದು ಮಹತ್ತ್ವದ ವಿಷಯವಾಗಿದೆ. ಆ ಸ್ವಾಮೀಜೀಯವರು ಕ್ರಿ, ಶ. ೧೮೪೨ರಲ್ಲಿ ಆಶ್ರಮ ಸ್ವೀಕರಿಸಿ ಕ್ರಿ. ಶ. ೧೮೫೨ರಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಪ್ರಸಕ್ತ ಸ್ವಾಮಿಜೀಯವರು ಕ್ರಿ. ಶ. ೧೯೪೫ ರಲ್ಲಿ ಆಶ್ರಮ ಸ್ವೀಕರಿಸಿ ಪಟ್ಟಕ್ಕೆ ಬಂದರು. ೧೯೫೨ ರಲ್ಲಿ ೯೯ ವರ್ಷಗಳ ಅನಂತರ ಆಡಳಿತದ ಅಧಿಕಾರವನ್ನು ವಹಿಸಿಕೊಂಡರು. ಅವರು

ಕೂಡ ಪುಣ್ಯಕ್ಷೇತ್ರವಾದ ಕಾಶಿಯಲ್ಲಿ ಕೆಲವು ವರ್ಷ ವಾಸ್ತವ್ಯವಿದ್ದು ತರ್ಕ, ವೇದಾಂತಾದಿ ಶಾಸ್ತ್ರಾಧ್ಯಯನ ನಡೆಸಿದವರು.

ಅವರ ಕಾಲದಲ್ಲಿ ತೀರ್ಥಹಳ್ಳಿ ಮಠವೂ ಶ್ರೀರಾಮಚಂದ್ರಾಪುರ ಮಠಕ್ಕೆ ಬಂದರೆ, ಇವರ ಕಾಲದಲ್ಲಿ ಅದರ ಪುನಾರಚನೆಯಾಯಿತು.

ಪ್ರಸಕ್ತ ಸ್ವಾಮೀಜೀಯವರ ಕಾಲದಲ್ಲಿ ಸಮಾಜದ ಪುನಃಸಂಘಟನೆಯ ಕಾರ್ಯ ಹೇಗಾಯಿತು, ಪುರಾತನ ಮಠಗಳ ಜೀರ್ಣವಾದ ಕಟ್ಟಡಗಳ ಜೀರ್ಣೋದ್ಧಾರ ಹೇಗಾಯಿತು, ಹೊಸ ಮಠಗಳ ರಚನೆ ಯಾವ ತರವಾಯಿತು, ಇತರ ಮಠಗಳು ಹೇಗೆ ಹೊಸತಾಗಿ ಈ ಮಠಕ್ಕೆ ಸೇರಿದವು. ಸ್ವಾಮೀಜೀಯವರು ಯಾವ ಯಾವ ಮಹಾಕಾರ್ಯಗಳನ್ನು ಸಾಧಿಸಿದರು ಎಂಬಿತ್ಯಾದಿ ವಿವರಗಳನ್ನು ಈಗಾಗಲೇ ನಾವು ತಿಳಿದೆವು.

ಇವಿಷ್ಟೇ ಅಲ್ಲದೆ, ಇತರ ಹಲವು ಶಿಷ್ಯರ ಬದುಕಿನಲ್ಲಿ ಪ್ರಕೃತ ಶ್ರೀಗಳವರ ತಪಶ್ಶಕ್ತಿಯಿಂದ ನಡೆದ ಕೆಲವು ಮಹಿಮೆಗಳು ಈ ಕೆಳಗಿನಂತೆ ಉಲ್ಲೇಖನೀಯವಾಗಿವೆ.

೧. ಶ್ರೀಸಂಸ್ಥಾನದ ಅನನ್ಯ ಆರಾಧಕರು ಶ್ರೀಶಿವರಾಮ ಶಾಸ್ತ್ರಿಗಳು (ಉಂಚಗೇರಿ, ಹೊನ್ನಾವರ). ಶ್ರೀಗಳು ದುಗ್ಗೂರಿನಲ್ಲಿ (ಹೊನ್ನಾವರ) ವಾಸ್ತವ್ಯ ಮಾಡಿದಾಗ ಕಾರ್ಯಾಂತರ ನಿಮಿತ್ತ ಅನುಮತಿ ಪಡೆದು ಬೇರೆ ಕಡೆಗೆ ಹೋಗಲು ಶ್ರೀಶಿವರಾಮ ಶಾಸ್ತ್ರಿಗಳು ಬಂದಿದ್ದರು. ಆಗ ಮಧ್ಯಾಹ್ನದ ಹನ್ನೊಂದು ಗಂಟೆಯ ಸಮಯ. "ಇತರ ವಿಷಯಗಳನ್ನು ಹಿಂದಿನಿಂದ ಗಮನಿಸೋಣ. ಈ ಕೂಡಲೇ ನೀವು ಮನೆಯನ್ನು ಸೇರುವುದು ಆವಶ್ಯಕ. ಅದರಿಂದ ಒಳಿತಾಗುವುದೆಂದು ನಮಗನಿಸುತ್ತದೆ" ಎಂದು ಒತ್ತಾಯಿಸಿ ಶ್ರೀಗಳು ಪ್ರಸಾದ ಮಂತ್ರಾಕ್ಷತೆ ನೀಡಿ ಅನುಗ್ರಹಿಸಿದರು.

ಶ್ರೀ ಶಾಸ್ತ್ರಿಗಳು ಅಲ್ಲಿಂದ ಮರಳಿ ಮನೆಯನ್ನು ತಲಪುವಷ್ಟರಲ್ಲಿ ಪಕ್ಕದ ಮನೆ ಅಗ್ನಿನಾರಾಯಣನಿಗೆ ಆಹುತಿಯಾಗಿತ್ತು. ಆ ಮನೆಯಿಂದ ಬೆಂಕಿಯ ದೊಡ್ಡ ದೊಡ್ಡ ಮುದುಡೆಗಳು (ಉಂಡೆಗಳು) ಗಾಳಿಗೆ ಹಾರಿ ಬರತೊಡಗಿದ್ದವು. ಶಾಸ್ತ್ರಿಗಳ ಮನೆ ಸೋಗೆಯದು; ಪಕ್ಕದಲ್ಲಿದ್ದ ಕೊಟ್ಟಿಗೆ ಹುಲ್ಲಿನದು. ಹತ್ತಿರದಲ್ಲಿ ಒಣಗಿದ ಕರಡದ ಬಣವೆ ಇದೆ. ಸೋಗೆಯ ಅಟ್ಟಣಿಗೆ ಅದಕ್ಕೆ ತಾಗಿಯೇ ಇದೆ. ಆದುದರಿಂದ ಅವರ ಮನೆಗೂ ಅಗ್ನಿಸ್ಪರ್ಶವಾಗಲು ಹೆಚ್ಚು ತಡವಿರಲಿಲ್ಲ. ಆಗ ಶ್ರೀಶಾಸ್ತ್ರಿಗಳು ಮುಂಗಾಣದವರಾಗಿ ಶ್ರೀಗಳು ತಮಗೆ ಅನುಗ್ರಹಿಸಿದ ಪ್ರಸಾದ ಮಂತ್ರಾಕ್ಷತೆಗಳನ್ನು ಮನೆಯ ಮೇಲೆ ಎರಚಿ ಮನೆಯ ಪರಿಪೂರ್ಣ ಹೊಣೆಯನ್ನು ಶ್ರೀ ಗುರುದೇವತಾ ಸನ್ನಿಧಿಯ ಮೇಲಿರಿಸಿ, ಶ್ರೀಗುರುಸ್ಮರಣೆ ಮಾಡುತ್ತಾ ಕುಳಿತರು. ಬೆಂಕಿಯ ಮುದ್ದೆಗಳು (ಉಂಡೆಗಳು) ಬಂದು ಶಾಸ್ತ್ರಿಗಳ ಕಟ್ಟಡಗಳ ಹಾಗೂ ಅಟ್ಟಣಿಗೆಯ ಮೇಲೆ ಬಿದ್ದರೂ ಅವರ ಮನೆ ಸುರಕ್ಷಿತವಾಗಿ ಉಳಿಯಿತು. ಶ್ರೀಗಳವರ ಪರಮಾನುಗ್ರಹವೇ

ಇದಕ್ಕೆ ಕಾರಣವೆಂಬುದು ಶ್ರೀ ಶಾಸ್ತ್ರಿಗಳ ದೃಢವಾದ ನಂಬಿಕೆಯಾಗಿದೆ. ನಂಬಿದವರ ಯೋಗಕ್ಷೇಮದ ಹೊಣೆಯನ್ನು ತಾನೇ ಹೊರುವೆನು – " ಯೋಗಕ್ಷೇಮಂ ವಹಾ-ಮ್ಯಹಂ" ಎಂದು ಭಗವಂತನೇ ಉಸುರಲಿಲ್ಲವೆ ?

ಈ ಸಂದರ್ಭದಲ್ಲಿ ವಿಶೇಷ ಘಟನೆಯೊಂದರ ಉದಾಹರಣೆ ಇಲ್ಲಿ ಅಪ್ರಸ್ತುತ-ವಾಗದು. ಸಾಕಷ್ಟು ಆಸ್ತಿ ಪಾಸ್ತಿಯೂ ಹಣವೂ ಇದ್ದ ಕೃಷಿಕ ಹವ್ಯಕನೊಬ್ಬ-ನಿದ್ದನು. ಶ್ರೀಗಳವರು ತಮ್ಮ ಸಂಚಾರದ ಮಧ್ಯೆ ಒಂದು ದೇವಾಲಯದಲ್ಲಿ ತಂಗಿದ್ದಾಗ ಆತನು ಬಂದು ದರ್ಶನಮಾಡಿ, ತನ್ನ ಸಂಸಾರದ ಅಳಲನ್ನೂ ತೊಂದರೆಯನ್ನೂ ಬಿನ್ನವಿಸಿಕೊಂಡನು.

ಅವನಿಗೆ ಮೂರು ಗಂಡುಮಕ್ಕಳಿದ್ದರು. ಒಬ್ಬರಿಗೂ ವಧು ದೊರೆಯದು-ದರಿಂದ ವಿವಾಹವಾಗಲಿಲ್ಲ. ಬಹಳಷ್ಟು ಜನರಿಗೆ ಇವರ ಬಗೆಗೆ ಸದಭಿಪ್ರಾಯವಿರಲಿಲ್ಲ. ಆದುದರಿಂದಲೇ ಹೆಣ್ಣು ಕೊಡಲು ಮುಂದೆ ಬರುತ್ತಿರಲಿಲ್ಲ. ಇದರಿಂದ ನೊಂದು ಆತನು ಹರಕೆ ಹೇಳಿಕೊಂಡನು. ತನ್ನ ಗಂಡು ಮಕ್ಕಳಿಗೆ ಒಳ್ಳೆಯ ವಧುಗಳು ದೊರೆತು ಅಭಿವೃದ್ಧಿಯಾಗಬೇಕು. ತಾನು ಶ್ರೀ ಶ್ರೀಗಳವರನ್ನು ಮನೆಗೆ ಕರೆಸಿ ಶ್ರೀರಾಮದೇವರಿಗೆ ಒಂದು ಹೊನ್ನಿನ ನಾಣ್ಯ (ಪವನು) ಒಪ್ಪಿಸುತ್ತೇನೆ ಮತ್ತು ಶ್ರೀಗಳವರ ಸೇವೆ ನಡೆಸುತ್ತೇನೆ – ಎಂದುಕೊಂಡನು.

ಸ್ವಲ್ಪ ಕಾಲದಲ್ಲೇ ಅವನ ಮಕ್ಕಳಿಗೆ ಯೋಗ್ಯ ವಿವಾಹ ನಡೆಯಿತು. ಗಂಡು ಹೆಣ್ಣು ಮಕ್ಕಳೂ ಅವರಿಗಾದರು. ಅವರ ಊರಿಗೆ ಶ್ರೀಗಳವರು ಚಿತ್ತೈಸಿ ದೇವಾ-ಲಯದಲ್ಲಿ ಮೊಕ್ಕಾಂ ಆದರು. ಆದರೆ ಆತ ಶ್ರೀಗಳವರನ್ನು ಸಂದರ್ಶಿಸಲಿಲ್ಲ. ಹರಕ ಸಲ್ಲಿಸಲಿಲ್ಲ. ಶ್ರೀಗಳವರು ಆತನಿಗೆ ಕರ್ತವ್ಯವನ್ನು ಜ್ಞಾಪಿಸಿಕೊಟ್ಟರೂ ತಾನು ಹರಕೆ ನಡೆಸಲು ಸಿದ್ಧನಾಗಲಿಲ್ಲ. ತಾನು ಅದಕ್ಕೆ ಬದ್ಧನಲ್ಲವೆಂಬಂತೆ ವರ್ತಿಸಿದನು. ಅಂದೇ ಅವನಿಗೆ ರಕ್ತಸ್ರಾವದ ರೋಗ ಆರಂಭವಾಯಿತು. ಬೇರೆ ದಾರಿ ಕಾಣಲಿಲ್ಲ. ಅವನ ಬಂಧುಗಳು ಅವನ ಕುರಿತಾಗಿ ಕ್ಷಮೆ ಕೇಳಿದರು. ಕೂಡಲೆ ಅರ್ಧ ಪವನಿನ ಹರಕೆ ಸಲ್ಲಿಸಲು ಒತ್ತಾಯಿಸಿ ಒಪ್ಪಿಸಿದರು. ಆಶೀರ್ವದಿಸುವಂತೆ ಗುರುಗಳನ್ನು ಪ್ರಾರ್ಥಿಸಿದರು. ಅವನ ಮನೆಯಲ್ಲಿ ಭಿಕ್ಷೆ ನಡೆಯಿತು. ಅರ್ಧ ಹರಕೆ ಒಪ್ಪಿಸಿ ನಡೆದ ಮಾತ್ರದಿಂದಲೇ ಆ ಸಂಸಾರ ಪುನಃ ಉತ್ತಮ ಸ್ಥಿತಿಗೆ ಬಂತೆಂದು ಹೇಳಬಹುದು.

2. ಹೊನ್ನಾವರ ತಾಲೂಕು ನವಿಲಗೋಣದಿಂದ ಕಡತೋಕಕ್ಕೆ ಚಿತ್ತೈಸುವ ಮಾರ್ಗದಲ್ಲಿ ರಾತ್ರಿ ಓರ್ವ ಭಕ್ತರ ಮನೆಯಲ್ಲಿ ಶ್ರೀಗಳು ವಸತಿ ಮಾಡಿದ್ದರು. ಬೆಳಗ್ಗೆ ಶ್ರೀಗಳವರ ಸ್ನಾನಕ್ಕೆ ಅನುವುಮಾಡಿದ ಸ್ಥಳದಲ್ಲಿ ಬಂದಳಿಕೆ ಹಿಡಿದ ಒಂದು ಮಾವಿನ ಮರ ಕರಟಿ ಹೋಗುವ ಸ್ಥಿತಿಯಲ್ಲಿತ್ತು. ಅದರ ಒಣಗಿದ ಒಂದು ಟೊಂಗೆಯನ್ನು ಕಡಿದು ಸೌದೆಯಾಗಿಯೂ ಉಪಯೋಗಿಸಿಯಾಗಿತ್ತು. ಆದರೆ ಉಲ್ಲೇಖನೀಯ ಸಂಗತಿ ಎಂದರೆ – ಶ್ರೀಗಳು ಸ್ನಾನ ಮಾಡಿದ ನೀರನ್ನು ಹೀರಿದ ಆ

ಮರ ಮತ್ತೆ ಚಿಗುರಿ ಬೆಳೆದು ಇಂದು ಹೆಮ್ಮರವಾಗಿ ನಿಂತು ಸಿಹಿಯಾದ ಹಣ್ಣುಗಳನ್ನು ನೀಡುತ್ತಾ "ನೀನೊಲಿದರೆ ಕೊರಡು ಕೊನರುವುದಯ್ಯ" ಎಂಬ ಶರಣವಾಣಿಯನ್ನು ದಿಟಗೊಳಿಸಿದೆ.

೩. ಸಿದ್ಧಾಪುರ ತಾಲೂಕು (ಉತ್ತರ ಕನ್ನಡ) ಶ್ರೀ ರಾಮೇಶ್ವರ ದೇವರ ಅಷ್ಟಬಂಧ ಶಿಲಾಧ್ವಜಸ್ಥಾಪನೆ ಮೊದಲಾದ ಕಾರ್ಯಗಳು ಶ್ರೀಗಳ ಪ್ರಚೋದನೆ, ಮಾರ್ಗದರ್ಶನದಿಂದ ನೆರವೇರುತ್ತಲಿರುವಾಗ, ಮಳೆಯ ಅಭಾವದಿಂದಾಗಿ ಕೆರೆ, ಬಾವಿಗಳ ನೀರು ಸಹ ಆರುತ್ತಾ ಬಂದು, ದಿನಂಪ್ರತಿ ಸಮಾವೇಶಗೊಳ್ಳುತ್ತಿದ್ದ ಸಾವಿರಾರು ಜನರ ಊಟ ಉಪಚಾರಗಳಿಗೆ ಅತಿಶಯ ಅಡಚಣೆ ಉಂಟಾಗುವ ಸಂದರ್ಭ ತಲೆದೋರಿತು. ಆಗ ಶ್ರೀಗಳು "ನೀವು ಭಯಪಡುವುದು ಬೇಡ, ಆರಂಭಿಸಿದ ಸತ್ಕಾರ್ಯವನ್ನು ಮುಂದುವರಿಸಿ. ಎಲ್ಲವೂ ಸುಸೂತ್ರವಾಗಿ ನೆರವೇರುವುದು" ಎಂದು ಅಭಯ ನೀಡಿದರು.

ಅನಿರೀಕ್ಷಿತವಾಗಿ ಮೋಡ ಕವಿದು, ಆ ಪ್ರದೇಶದಲ್ಲಿ ಧಾರಾಕಾರವಾಗಿ ಭಾರೀ ಮಳೆ ಸುರಿದು, ಎಲ್ಲಾ ಬಾವಿ, ಕೆರೆ, ಹೊಳೆ, ಹಳ್ಳಗಳು ತುಂಬಿತುಳುಕುವಂತಾದ ಘಟನೆ, ಪ್ರತ್ಯಕ್ಷದರ್ಶಿಗಳ ಹೃದಯದಲ್ಲಿ ಇಂದಿಗೂ ಅಚ್ಚಳಿಯದಂತಿದೆ.

೪. ಬ್ರಹ್ಮೀಭೂತರಾದ ಶ್ರೀರಾಮಚಂದ್ರಭಾರತೀ ಸ್ವಾಮಿಗಳ ಆರಾಧನಾ ಕ್ರಮವನ್ನು ಜರುಗಿಸಿದ ನಂತರ ಶ್ರೀಗಳು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಕಾಶೀಕ್ಷೇತ್ರಕ್ಕೆ ಮರಳಿ ಬಿಜಯಂಗೈಯಲು ಬಯಸಿದರಷ್ಟೆ. ಆಗ ಸೇರಿದ ಶಿಷ್ಯಪ್ರಮುಖರು ಶ್ರೀಮಠೀಯ ನಗನಾಣ್ಯಗಳನ್ನೂ ಬೆಳ್ಳಿ ಬಂಗಾರಾದಿ ಅಮೂಲ್ಯವಾದ ಒಡವೆಗಳನ್ನೂ ಹರುಕು ಮುರುಕಾದ ಮಠದಲ್ಲಿ ಇಟ್ಟು ದೂರಕ್ಷೇತ್ರಕ್ಕೆ ಹೋಗುವುದು ಸಮಂಜಸವಾಗಲಾರದು – ಎಂಬಿತ್ಯಾದಿಯಾಗಿ ವಿಜ್ಞಾಪಿಸಿಕೊಂಡರು. ಅದನ್ನು ಲಕ್ಷಿಸದೆ ವಿದ್ಯಾಧನಾರ್ಜನೆಗಾಗಿ ಕಾಶೀಕ್ಷೇತ್ರಕ್ಕೆ ಪಯಣ ಬೆಳೆಸಿದರೂ ಆ ನಗನಾಣ್ಯಗಳಿಗೆ ಏನೂ ಸಂಭವಿಸದಿದ್ದುದು ಸ್ವಾಮೀಜೀಯವರ ದಿವ್ಯತೆಯ ಶಕ್ತಿಗೆ ಇನ್ನೊಂದು ನಿದರ್ಶನವಾಗಿದೆ.

ಮಾನವನು ತನಗೆ ಬಂದ ಕಷ್ಟ ಕಾರ್ಪಣ್ಯಗಳನ್ನು ದುಃಖ ದುಮ್ಮಾನಗಳನ್ನು ದೂರಮಾಡಿಕೊಳ್ಳಲು ಹಾಗೂ ತನ್ನ ಮನಸ್ಸಿನ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ತನ್ನ ಆರಾಧ್ಯ ದೇವತೆಗೆ ಶರಣುಹೋಗುವುದು, ಹರಕೆಗಳನ್ನು ಹೇಳಿಕೊಂಡು ಕೃತಾರ್ಥನಾಗುವುದು ಅನೂಚಾನವಾಗಿ ನಡೆದುಬಂದ ಪದ್ಧತಿ. ಮಹಾರೋಗಗಳ ನಿವಾರಣೆಗಾಗಿ, ಅಪೇಕ್ಷಿತ ಪುತ್ರ ಸಂತತಿ ಪ್ರಾಪ್ತಿಗಾಗಿ, ನ್ಯಾಯಾಲಯದಲ್ಲಿ ಅನುಕೂಲ ನ್ಯಾಯನಿರ್ಣಯ ಪ್ರಾಪ್ತಿಗಾಗಿ, ಶ್ರೀ ಮಠದ ಗುರುದೇವತಾ ಸನ್ನಿಧಿಯಲ್ಲಿ ಹರಕೆ – ಸೇವೆಗಳನ್ನು ಹೇಳಿಕೊಂಡು ಸಫಲವಾಗುವುದು ಪ್ರಾಚೀನ ಸಂಪ್ರದಾಯ.

ವಿದ್ಯಾಬಲದಿಂದ, ತಪಃಸ್ಸಾಮರ್ಥ್ಯದಿಂದ, ದಿವ್ಯಶಕ್ತಿಯಿಂದ, ಹಲವು ಮಹಿಮೆಗಳಿಂದ ಮೆರೆಯುತ್ತಿರುವ ವರ್ತಮಾನ ಶ್ರೀಗಳ ಸಮಯದಲ್ಲಿ, ಎಲ್ಲ ಪ್ರದೇಶದ ಶಿಷ್ಯ ಜನತೆ ಇಷ್ಟಪ್ರಾಪ್ತಿ, ಅನಿಷ್ಟನಿವಾರಣೆಗಾಗಿ ಶ್ರೀಗಳ ದಿವ್ಯ ಕರಾರ್ಚಿತ ದೇವ ಸನ್ನಿಧಾನದಲ್ಲಿ ಹರಕೆ – ಸೇವೆಗಳನ್ನು ಹೊತ್ತುಕೊಂಡು ಅಭೀಷ್ಟಗಳನ್ನು ಅತ್ಯಧಿಕ ಪ್ರಮಾಣದಲ್ಲಿ ಈಡೇರಿಸಿಕೊಂಡ ನಿದರ್ಶನಗಳು ಅನೇಕ.

೫. ಶ್ರೀಗಳ ಭಜಕರೊಬ್ಬರು (ಸಿರ್ಸಿ – ಉತ್ತರ ಕನ್ನಡ) ಶ್ರೀಗಳ ಚರಣ ದರ್ಶನ ಪಡೆಯಲು ಹಂಬಲಿಸಿ, ಶ್ರೀಗಳವರು ಸಾಧಾರಣವಾಗಿ ವಾಸ್ತವ್ಯಮಾಡಿರಬಹುದಾದ ತೀರ್ಥಹಳ್ಳಿ ಶ್ರೀಮಠಕ್ಕೆ ಮರುದಿನ ಪ್ರಾತಃಕಾಲ ಹೊರಡಲು ನಿಶ್ಚಯಿಸಿ ರಾತ್ರಿ ಮಲಗಿದ್ದರು. ಶ್ರೀಗಳವರನ್ನು ನಾಳೆ ಕಾಣಲೇ ಬೇಕೆಂಬ ಉತ್ಕಟೇಚ್ಛೆಯಿಂದೊಡಗೂಡಿದ ಅವರಿಗೆ ಸ್ವಪ್ನದಲ್ಲಿ ಶ್ರೀಗಳು ದರ್ಶನವಿತ್ತು "ತಮ್ಮ ವಸತಿ ಈಗ ಕೆಕ್ಕಾರು ಶ್ರೀ ರಘೂತ್ತಮ ಮಠದಲ್ಲಿದೆ. ಅಲ್ಲಿಗೆ ನೀನು ಪಯಣಿಸು" ಎಂದಾಯಿತು. ಅದಕ್ಕೆ ಅನುಗುಣವಾಗಿ, ಅವರು ಮರುದಿನ ತೀರ್ಥಹಳ್ಳಿಗೆ ಹೋಗದೆ ಕೆಕ್ಕಾರಿಗೆ ಹೋದರು. ಅಲ್ಲಿ ಶ್ರೀಗಳವರ ದರ್ಶನ ಭಾಗ್ಯ ಅವರಿಗೆ ಲಭಿಸಿತು. ಆಶೀರ್ವಾದ, ಮಂತ್ರಾಕ್ಷತೆಗಳನ್ನು ಪಡೆದು ಕೃತಕೃತ್ಯರಾದ ಅವರು ಶ್ರೀಗಳ ಶಿಷ್ಯವಾತ್ಸಲ್ಯವನ್ನೂ ಮಹಿಮಾತಿಶಯವನ್ನೂ ಈಗಲೂ ಎಡೆಬಿಡದೆ ಕೊಂಡಾಡುತ್ತಿದ್ದಾರೆ.

೬. ತೀರ್ಥೀಕುರ್ವಂತಿ ತೀರ್ಥಾನಿ ತೀರ್ಥರೂಪಾ ಹಿ ಸಾಧವಃ ।
ಯದಧ್ಯಾಸಿತಮರ್ಹದ್ಭಿಃ ತದ್ಧಿ ತೀರ್ಥಂ ಪ್ರಚಕ್ಷತೇ ॥

ಮಹಾಜ್ಞಾನಿಗಳಾದ ತಪಸ್ವಿಗಳಿಂದ ತೀರ್ಥಕ್ಕೆ ತೀರ್ಥತ್ವ ಪ್ರಾಪ್ತಿಯಾಗುತ್ತದೆ. ಪೂಜ್ಯರಾದ ಮಹಾವ್ಯಕ್ತಿಗಳಿಂದ ಆಶ್ರಿತ ಸ್ಥಾನವು ತೀರ್ಥ ಎಂದು ಕರೆಯಿಸಿಕೊಳ್ಳುತ್ತವೆ – ಎಂಬುದು ಆರ್ಯೋಕ್ತಿ. ಅಂದರೆ ಮಹಾಪುರುಷರು ಆಸೀನರಾದ ಸ್ಥಾನವು ಒಂದಲ್ಲೊಂದು ಬಗೆಯಿಂದ ಪ್ರವರ್ಧಮಾನಕ್ಕೆ ಬಂದು ಬಹು ಜನೋಪಯೋಗಿಯಾಗುತ್ತದೆ.

ಮೇಲಿನ ಈ ಮಾತು ಜ್ಞಾನಿಗಳೂ ತಪಸ್ವಿಗಳೂ ಆಗಿ ವಿರಾಜಿಸುತ್ತಲಿರುವ ಶ್ರೀಗುರುವರ್ಯರು ಆಸೀನರಾದ ಸ್ಥಾನಕ್ಕೆ ಅಕ್ಷರಶಃ ಅನ್ವಯಿಸುತ್ತದೆ. ಸಂಚಾರಕ್ಕೆ ಚಿತ್ತೈಸಿದಾಗ ಸಾಯಂಕಾಲದ ಸಮಯಕ್ಕೆ ವಾಯುಸೇವನೆಗೆಂದು ಊರ ಹೊರಗಿನ ಜನರ ಹಿತಸ್ಥಾನಕ್ಕೆ ಹೋಗಿ ಕೆಲಕಾಲ ಇದ್ದು ಬರುವುದು ಅವರ ವಾಡಿಕೆ. ಶ್ರೀಗಳವರ ಪವಿತ್ರ ಮಹಿಮಾತಿಶಯದಿಂದಾಗಿ ಅವರ ಪಾದಧೂಳಿ ಬಿದ್ದ ಅಂತಹ ಸ್ಥಳಗಳೆಲ್ಲವೂ ಅಭಿವೃದ್ಧಿ ಹೊಂದಿದೆಯೆಂಬುದು ಸತ್ಯವಾದ, ಅತಿಶಯೋಕ್ತಿಯಾಗದ ಸಂಗತಿ. ಉದಾಹರಣೆಗಾಗಿ —

i. ಹೊನ್ನಾವರ ತಾಲೂಕು – ಕೆಕ್ಕಾರು – (ಶ್ರೀ ಮಠದ ಸಮೀಪ) ಸಕ್ಕೇವಾರ ಪ್ರದೇಶ.

ii. ಬಂಟ್ವಾಳ ತಾಲೂಕು – ವಿಟ್ಲದ ಸಮೀಪ – ಅಪ್ಪೇರಿಪಾದೆ.

ಈಗ ಮಂಗಳೂರು ಹೋಬಳಿಯ ಶ್ರೀಮದ್ರಾಮಚಂದ್ರಾಪುರ ಮಠವು ನವೀನವಾಗಿ ನಿರ್ಮಾಣಗೊಂಡು ಆ ಭಾಗದ ಶಿಷ್ಯ ಜನತೆಯ ಕನಸನ್ನು ನನಸಾಗಿಸಿದೆ. ಇಂದು ಒಂದು ಪುಣ್ಯಕ್ಷೇತ್ರವಾಗಿ ಪ್ರಸಿದ್ಧಿಗೆ ಬಂದ ಈ ಸ್ಥಾನವು, ಅದಕ್ಕೂ ಮೊದಲು ಕೆಲಕಾಲ ವಾಯುಸೇವನೆಗಾಗಿ ಆಸೀನರಾದ ಶ್ರೀಗಳ ಪಾದಧೂಳಿಯಿಂದ ಪವಿತ್ರವಾಗಿತ್ತೆಂಬುದು ಗಮನಾರ್ಹ ವಿಷಯ.

iii. ಸಾಗರ ತಾಲೂಕಿನ ತಾಳಗುಪ್ಪೆಯ ಗೌರೀಕೆರೆಯ ಎಡಪಾರ್ಶ್ವದ ಮೇಲ್ಭಾಗವು ಶ್ರೀಗಳವರು ವಾಯುಸೇವನೆಗಾಗಿ ಕೆಲಕಾಲ ವಿಶ್ರಮಿಸುವ ಸ್ಥಳವಾಗಿತ್ತು. ಇಂದದು ಶೈವರ ಪವಿತ್ರ ಸ್ಥಾನವಾಗಿ ಅಭಿವೃದ್ಧಿ ಹೊಂದಿದೆ.

೭. ಮಂಗಳೂರು ಹೋಬಳಿಯ ಪಾಣಾಜೆ ಗ್ರಾಮದ ಗಿಳಿಯಾಲ ಮನೆತನದ ಶ್ರೀರಾಮಚಂದ್ರ ಭಟ್ಟರು (ಆರ್. ಬಿ. ಗಿಳಿಯಾಲ್) ಶ್ರೀಗಳವರ ಮೇಲೆ ನಿಸ್ಸೀಮವಾದ ಭಕ್ತಿಯನ್ನಿಟ್ಟವರು. ಅವರ ಐದು ವರ್ಷ ವಯಸ್ಸಿನ ಬಾಲಿಕೆ ಸಂಧ್ಯಾ ಎಂಬುವಳು ಒಂದು ದಿನ ಅಕಸ್ಮಾತ್ತಾಗಿ ೨೫ ಅಡಿ ಎತ್ತರದ ಮಾಳಿಗೆಯಿಂದ ಕೆಳಕ್ಕುರುಳಿ, ಪ್ರಜ್ಞಾಹೀನಸ್ಥಿತಿಯಲ್ಲಿದ್ದಳು. ಮಾತ್ರವಲ್ಲ, ಆಕೆ ಬದುಕುವ ಲಕ್ಷಣ ತೋರಿಬರುತ್ತಿರಲಿಲ್ಲ. ಆಗ, ಮಠದಲ್ಲಿ ಸ್ವಾಮೀಜೀಯವರು ಕುಂಕುಮಾರ್ಚನೆಮಾಡಿದ ಕುಂಕುಮ ಪ್ರಸಾದವನ್ನು ಆಕೆಯ ಹಣೆಗಿಟ್ಟು, ಸ್ವಾಮೀಜೀಯವರನ್ನು ಪ್ರಾರ್ಥಿಸಿಕೊಂಡರು. ಆಗ ಆಕೆ ಪ್ರಜ್ಞೆ ತಳೆದಳು. ಕೂಡಲೇ ಆಕೆಯನ್ನು ಕರೆದುಕೊಂಡು ಶ್ರೀಯುತರು ಸ್ವಾಮೀಜೀಯವರೆಡೆಗೆ ಧಾವಿಸಿದರು. ಸ್ವಾಮೀಜೀಯವರು ಆಕೆಯನ್ನು ಆಶೀರ್ವದಿಸಿದ ಮೇಲೆ, ಆಕೆ ಪೂರ್ತಿಯಾಗಿ ಚೇತರಿಸಿ ಆರೋಗ್ಯವಂತೆಯಾದಳು. ಇದಲ್ಲದೆ, ಶ್ರೀಯುತರು ತಮ್ಮ ಎಲ್ಲಾ ವ್ಯವಹಾರಗಳು ಸುಗಮವಾಗಿ ನಡೆಯುತ್ತಿರುವುದು ಶ್ರೀಗಳವರ ಆಶೀರ್ವಾದ ಅನುಗ್ರಹಗಳಿಂದಲೇ ಎಂದು ದೃಢವಾಗಿ ನಂಬಿಕೊಂಡಿದ್ದಾರೆ.

೮. ಸಾಗರದ ಕಡೆಯ ಸದ್ಗೃಹಸ್ಥರೊಬ್ಬರು ಶ್ರೀಗಳವರನ್ನು ಭಕ್ತಿ ವಿಶ್ವಾಸಗಳಿಂದ ನಂಬಿಕೊಂಡು ಬಂದವರು. ಶ್ರೀಗಳವರು ಒಮ್ಮೆ ಬೆಂಗಳೂರಲ್ಲಿ ವಾಸ್ತವ್ಯವಿದ್ದಾಗ ಕಾಣಲು ಬಂದಿದ್ದರು. ಶ್ರೀಗಳವರು ಅವರನ್ನು ತಮ್ಮೊಂದಿಗೆ ಶ್ರೀ ಮಠಕ್ಕೆ ಕರೆದುಕೊಂಡು ಹೋಗುವಂತೆ ಅಭಿಪ್ರಾಯಪಟ್ಟರು. ಆದರೆ ಅವರು ತಮಗೆ ಊರಿಗೆ ಹೋಗಲೇಬೇಕೆಂದೂ ಶ್ರೀಗಳವರು ಅನುಮತಿನೀಡಿ ಮಂತ್ರಾಕ್ಷತೆಯನ್ನು ಅನುಗ್ರಹಿಸಬೇಕೆಂದೂ ಪ್ರಾರ್ಥಿಸಿದರು. ಅದರಂತೆ, ಮತ್ತೆ ಅಪ್ಪಣೆಪಡೆದು ರೈಲಿನಲ್ಲಿ ಸಾಗರಕ್ಕೆ

ಹೊರಟರು. ಆ ರಾತ್ರಿ ಅವರಿಗೆ ರೈಲಿನಲ್ಲಿ ಹೋಗುವಾಗಲೇ ವಿಪರೀತ ಜ್ವರ, ವಾಂತಿ ಮುಂತಾದುವು ಉಂಟಾಗಿ ಎಷ್ಟೋ ಹೊತ್ತು ದೇಹಪ್ರಜ್ಞೆಯೇ ಇರಲಿಲ್ಲವಂತೆ. ಅವರ ಮೈಮೇಲೆ ಬೆಲೆಯುಳ್ಳ ಒಡವೆಗಳೂ ಇದ್ದವು. ಬಹಳ ಹೆಚ್ಚಿನ ನಗದು ಹಣವೂ ಇತ್ತು. ಇಂತಹ ಸ್ಥಿತಿಯಲ್ಲಿ ಪ್ರಯಾಣಮಾಡುವ ಏಕಾಂಗಿಯಾದ ಅವರಿಗೆ ಅಪರಿಚಿತನೊಬ್ಬನು ಬಳಿಗೆ ಬಂದು, ಆತ್ಮೀಯನಾಗಿ ಬಹು ಪ್ರೀತಿಯಿಂದ ಉಪಚಾರ ನಡೆಸಿದನು. ಅವರಿಗೆ ಯಾವುದಕ್ಕೂ ಚ್ಯುತಿಬಾರದಂತೆ, ವಸ್ತುಗಳು ಕೈ ತಪ್ಪಿ ಹೋಗದಂತೆ ಅವನು ನೋಡಿಕೊಂಡನು. ಅವರ ಮನೆಯ ವರೆಗೂ ಬಂದನು. ಒಂದು ದಿನ ಉಳಿದು, 'ಇನ್ನು ಮುಂದೆ ನಾನು ಇಲ್ಲಿಯೇ ಉಳಿಯುತ್ತೇನೆ' ಎಂದು ಸಹ ಹೇಳಿದನು. ಮರುದಿನ ಸಾಗರದ ಪೇಟೆಗೆ ಹೋದನು. ಹಾಗೆ ಹೋದವನು. ಮತ್ತೆ ಬರಲಿಲ್ಲ; ಎಲ್ಲಿಯೂ ಕಾಣಿಸಲಿಲ್ಲ. ಅಂತಹ ಅಪರಿಚಿತನು ಬಂದು ತನಗೆ ರಕ್ಷಣೆ ಸಹಾಯ ಸೇವೆಗಳನ್ನು ಮಾಡಿದುದು ಶ್ರೀ ಶ್ರೀಗಳವರ ಕೃಪಾ ದೃಷ್ಟಿಯೇ ಸರಿ – ಎಂದು ಆ ಸದ್ಗೃಹಸ್ಥರು ಇಂದಿಗೂ ದೃಢವಾಗಿ ನಂಬಿದ್ದಾರೆ.

ಮಕ್ಕಳಿಲ್ಲದ ಎಷ್ಟೋ ದಂಪತಿಗಳು ಬಂದು ಸ್ವಾಮೀಜೀಯವರ ಮುಂದೆ ಪ್ರಾರ್ಥಿಸಿ ಅವರ ಆಶೀರ್ವಾದ, ಅನುಗ್ರಹ, ಪ್ರಸಾದಗಳನ್ನು ಪಡೆದು ಪುತ್ರ ಸಂತಾನ ಪಡೆದ ಉದಾಹರಣೆಗಳು ಬಹಳ ಇರುತ್ತವೆ.

ಅಪಸ್ಮಾರ ರೋಗದಿಂದ ತೀವ್ರವಾಗಿ ಬಳಲುತ್ತಿರುವವರು ಶ್ರೀಗಳವರ ಆಶೀರ್ವಾದ ಪಡೆದು ಪೂರ್ತಿಯಾಗಿ ಗುಣವಾದ ಘಟನೆಗಳು ಇವೆ.

ಮುಗಿಯಲಾರದ ಕೋರ್ಟು ವ್ಯವಹಾರಗಳ ಜಂಜಾಟದಲ್ಲಿ ಸೋತು ಸುಣ್ಣವಾದವರು ಸ್ವಾಮೀಜೀಯವರ ಮುಂದೆ ತಮ್ಮ ಕಷ್ಟಗಳನ್ನು ನಿವೇದಿಸಿಕೊಂಡು, ಆಶೀರ್ವಾದ ಪಡೆದು, ಅನಂತರ ಎಲ್ಲವೂ ಕ್ಷಿಪ್ರವಾಗಿ ಜಯಪ್ರದವಾಗಿ ಮುಗಿದು, ಸುಖವನ್ನು ಪಡೆದ ಉದಾಹರಣಗಳಿವೆ.

ಮದುವೆಯಾಗದ ಕನ್ನಿಕೆಯರ ಕುರಿತಾಗಿ ಪ್ರಾರ್ಥಿಸಿ ಆಶೀರ್ವಾದ ಪಡೆದು, ಕೂಡಲೇ ಯಶಸ್ವಿಯಾಗಿ ಮದುವೆಯಾದ ಘಟನೆಗಳೂ ಇವೆ.

ಎಷ್ಟೋ ಜನರಿಗೆ ಸ್ವಾಮೀಜೀಯವರು ಸ್ವಪ್ನದಲ್ಲಿ ಕಾಣಿಸಿಕೊಂಡು, ಅವರ ಕಷ್ಟಗಳನ್ನು ಪರಿಹಾರಮಾಡಿದ ಉದಾಹರಣೆಗಳಿವೆ.

ಹೀಗೆ ಸ್ವಾಮೀಜೀಯವರ ತಪಃಶ್ಶಕ್ತಿಯಿಂದ ಹಲವು ಮಹಿಮೆಗಳು ನಡೆಯುತ್ತಿವೆ – ಎಂಬುದು, ಅವರ ಶಿಷ್ಯರಿಗೆ ಅಭಯನೀಡುವ ಸಂದೇಶವಾಗಿದೆ ಎನ್ನಬಹುದು.

ಒಂದು ಮುನ್ನೋಟ

ವರ್ತಮಾನ ಶ್ರೀಗಳು ಶ್ರೀಗುರುಪೀಠವನ್ನು ಆರೋಹಿಸಿದ ಅಲ್ಪಾವಧಿಯಲ್ಲಿ ಸಾಧಿಸಿದ ಹಲವಾರು ಮಹತ್ತರ ಸಾಧನೆಗಳು–ಜೀರ್ಣವಾದ ಮಠಮಂದಿರಗಳ

ಪುನರ್ನಿರ್ಮಾಣ, ಮಂಗಳೂರು ಹೋಬಳಿಯಲ್ಲಿ ನವೀನ ಮಠಸಂಸ್ಥಾಪನೆ, ಹೊಸ ಮಠಗಳ ಸ್ವೀಕಾರ, ಸಮಾಜ ಸಂಘಟನೆಗಾಗಿ ಸೇರಿಸಿದ ಅಖಿಲ ಹವ್ಯಕ ಮಹಾಧಿವೇಶನ, ಪಂಚಾಂಗ ಪ್ರಕಟನೆ, ವೈದಿಕ ಲೌಕಿಕ ವಿದ್ಯೆಗಳ ಪ್ರಚಾರಪ್ರಸಾರಗಳಿಗಾಗಿ ನೀಡಿದ-ನೀಡುತ್ತಿರುವ ಪರಿಪೂರ್ಣ ಪ್ರೋತ್ಸಾಹ, ಶಿಷ್ಯರಲ್ಲಿ ಧಾರ್ಮಿಕ ಪ್ರಜ್ಞೆ ಮೊಳೆತು ಬೆಳೆಯಲು ಕೈಗೊಂಡ ಸಮಾಜ ಸಂಚಾರ, ಉಪದೇಶಿಸಿದ ಉಪನ್ಯಾಸ ಹಾಗೂ ಅದಕ್ಕನುಗುಣವಾಗಿ ಪುಸ್ತಕ ಪ್ರಕಾಶನ– ಮೊದಲಾದವುಗಳು ಅನನ್ಯಸಾಧ್ಯ ಹಾಗೂ ಅಸಾಧಾರಣವಾದವುಗಳು.

ಹೀಗೆ ಪ್ರಗತಿಪರ ಕಾರ್ಯಗಳು ಹಲವಾರು ಜರುಗಿದ್ದರೂ ತಮ್ಮ ಶಿಷ್ಯಸಮಾಜದ ಉನ್ನತಿಗಾಗಿ ಇನ್ನೂ ಕೈಗೊಳ್ಳಲೇ ಬೇಕಾದ ಕರ್ತವ್ಯಗಳು ಬಹಳಷ್ಟು ಇವೆ ಎಂಬುದು ನಿರಂತರವಾಗಿ ಶಿಷ್ಯರ ಹಿತವನ್ನೇ ಚಿಂತಿಸುತ್ತಿರುವ ಶ್ರೀಗಳವರ ಆಶಯ. ಆದುದರಿಂದಲೇ ಇಂದಿನ ಕಿರಿಯರಾದರೂ ನಾಳಿನ ಹಿರಿಯರಾಗಿ ಆದರ್ಶ ಪುರುಷರಾಗಿ ಬಾಳಬೇಕಾಗಿರುವ ಎಳೆಯರಲ್ಲಿ ಹಾಗೂ ತರುಣರಲ್ಲಿ "ನೈತಿಕ ಬಲ ಹಾಗೂ ಧಾರ್ಮಿಕ ಪ್ರಜ್ಞೆಯ ಬೆಳವಣಿಗೆಗಾಗಿ, ಭಾರತೀಯರ ಅಮೂಲ್ಯ ಸಂಪತ್ತಾದ ವೇದ ವೇದಾಂತಾದಿ ಸಾಹಿತ್ಯ, ಸಂಸ್ಕೃತ ಮತ್ತು ಸಂಸ್ಕೃತಿ– ಇವುಗಳ ಬಗೆಗೆ ಇರಲೇಬೇಕಾದ ಆದರ ಭಾವನೆಯ ಸಂವರ್ಧನೆಗಾಗಿ, ಸದಾಚಾರ, ಸೌಶೀಲ್ಯ, ಸಚ್ಚಾರಿತ್ರ್ಯ–ಇತ್ಯಾದಿಗಳ ಹೆಚ್ಚಳಕ್ಕಾಗಿ ನವೀನ ಯೋಜನೆಗಳು ಅವರ ಕೈಯಲ್ಲಿ ರೂಪಿತವಾಗುತ್ತಿವೆ.

ಹೊಸನಗರದ ಸಮೀಪದಲ್ಲಿಯ ಪ್ರಧಾನ ಮಠ ಹಿಂದೆಯೇ ವಿಸ್ತರಿಸಿದಂತೆ ಪುನರ್ನೂತನವಾಗಿ ನಿರ್ಮಾಣಗೊಂಡಿದೆ. ಆದರ್ಶ ಗುರುಕುಲವಾಗುವ ಎಲ್ಲಾ ಅರ್ಹತೆಯನ್ನು ಅದು ಪಡೆದಿದೆ. ಅಲ್ಲಿಯೇ ಒಂದು ವೈದಿಕ ಮಹಾ ವಿದ್ಯಾಲಯವನ್ನು ಪ್ರಾರಂಭಿಸಿ ಒಂದೆಡೆಯಲ್ಲಿಯೇ ತರಬೇತಿ ಪಡೆದ ಸಂಸ್ಕೃತಜ್ಞರೂ ಧರ್ಮಶಾಸ್ತ್ರದ ಸೂಕ್ಷ್ಮವನ್ನು ಅರಿತವರೂ ಆದ ಒಂದು ಪುರೋಹಿತರ ಗುಂಪನ್ನು ನಿರ್ಮಿಸಿ– ನಮ್ಮ ಸಮಾಜದ ಧಾರ್ಮಿಕ ಆಚರಣೆಯಲ್ಲಿ ಇನ್ನೂ ಉಳಿದಿರುವ ಭಿನ್ನತೆಯನ್ನು ಹೋಗಲಾಡಿಸಿ ಏಕರೂಪತೆಯನ್ನು ತರುವುದಕ್ಕಾಗಿ ಸ್ವಾಮೀಜೀಯವರಿಂದ ವಿಚಾರ ಮಾಡಲಾಗುತ್ತಿದೆ.

ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ನಮ್ಮ ಸಮಾಜಕ್ಕೆ ಸೇರಿದ ಎಲ್ಲಾ ಪ್ರದೇಶದ ಜನರೂ ವಾಸಿಸುತ್ತಿದ್ದಾರೆ. ಅವರಿಗೆ ಮದುವೆ, ಉಪನಯನ ಮೊದಲಾದ ಧಾರ್ಮಿಕ ಕಾರ್ಯಗಳನ್ನು ಯಥೋಚಿತವಾಗಿ ನೆರವೇರಿಸಲು ಸ್ಥಳದ ಅನುಕೂಲತೆ ಇಲ್ಲದೆಯೇ ತೊಂದರೆಯುಂಟಾಗುತ್ತದೆ. ನಮ್ಮ ಗುರುಮಠದ ಶಾಲೆಯೊಂದು ಇಲ್ಲಿ ಇರಬೇಕು–ಎಂಬ ಆಕಾಂಕ್ಷೆ ಹವ್ಯಕ ಬಂಧುಗಳ ಹೃದಯದಲ್ಲಿ ಬಹುಕಾಲದಿಂದ ಮನೆಮಾಡಿದ್ದಿತು. ಈ ಭಕ್ತಿಪೂರ್ಣವಾದ ಅಪೇಕ್ಷೆಯ ಫಲವೋ ಎಂಬಂತೆ, ಪೂಜ್ಯ ಶ್ರೀಗಳವರೂ ಶ್ರೀಮದ್ರಾಮಚಂದ್ರಾಪುರ ಸಂಸ್ಥಾನದ ಒಂದು

ಮಠ, ಶ್ರೀ ರಾಮ ದೇವಾಲಯ ಮತ್ತು ಅದರ ಆಶ್ರಯದಲ್ಲಿ ಕಲ್ಯಾಣಮಂಟಪ–ಇವು ಬೆಂಗಳೂರಿನಲ್ಲಿ ಸ್ಥಾಪಿತವಾಗಬೇಕೆಂಬ ಸಂಕಲ್ಪವಿಟ್ಟುಕೊಂಡಿದ್ದರು. ಈ ಸಂಕಲ್ಪದ ಫಲ ಪಕ್ವವಾಗುವ ಕಾಲ ಹೆಚ್ಚೇನೂ ದೂರ ಹೋಗಲಿಲ್ಲ.

ಕೆಲವು ವರ್ಷಗಳಿಂದ ಬೆಂಗಳೂರು ನಿವಾಸಿಯಾಗಿ 'ವಿಶ್ವಭಾರತಿ' ಎಂಬ ಬಹುಮುಖವಾದ ಜನೋಪಯೋಗಿ ಯೋಜನೆಗಾಗಿ ಒಂದು ಸಂಸ್ಥೆಯನ್ನು ಕಟ್ಟಿಕೊಂಡು, 'ಗುರುಪ್ರಸಾದ' ಎಂಬ ಅಚ್ಚುಕೂಟವನ್ನೂ ಇಟ್ಟುಕೊಂಡು, ಸತತ ಶ್ರಮವಹಿಸಿ, ದುಡಿಯುತ್ತ ಮುಂದುವರಿಯುತ್ತಿರುವ ಶ್ರೀ ಬೋಳುಬೈಲು ಕೃಷ್ಣ ಭಟ್ಟರು ಶ್ರೀಗುರುಗಳ ಅನುಗ್ರಹವನ್ನು ಸಹಜವಾಗಿ ಆಶ್ರಯಿಸಿದರು. ಶ್ರೀಗಳವರನ್ನು ತಮ್ಮಲ್ಲಿಗೆ ೧೪–೨–೭೫ ರಂದು ಭಕ್ತಿಯಿಂದ ಸ್ವಾಗತಿಸಿ, ಪಾದಪೂಜೆ–ಸನ್ಮಾನಗಳನ್ನು ಮಾಡಿದರು. ಶ್ರೀಗಳವರು ಚಿತ್ತೈಸಿ 'ಗುರುಪ್ರಸಾದ ಮುದ್ರಣಾಲಯದ ಅಭಿವೃದ್ಧಿಗಾಗಿ ಒಂದು ಸಾವಿರ ರೂಪಾಯಿಗಳನ್ನು ಸುವರ್ಣಮಂತ್ರಾಕ್ಷತೆಯೊಂದಿಗಿತ್ತು ಹರಸಿದರು. ಆ ಮೇಲೆ, ಶ್ರೀ ಕೃಷ್ಣ ಭಟ್ಟರು ಸ್ವಯಂ ಪ್ರೇರಿತ ಶ್ರದ್ಧಾ ಭಕ್ತಿ ಪೂರ್ವಕ ತಮ್ಮ ಸಂಸ್ಥೆಯ ಹೃತ್ಪೂರ್ವಕ ಸಮ್ಮತಿಯಂತೆ, ಅದೇ ದಿನ ಶ್ರೀಮದ್ರಾಮಚಂದ್ರಾಪುರ ಮಠದ ಕಟ್ಟಡಕ್ಕಾಗಿ ಸುಮಾರು ಇನ್ನೂರಡಿ ಉದ್ದವೂ ನೂರ ಇಪ್ಪತ್ತು ಅಡಿ ಅಗಲವೂ ಉಳ್ಳ ಸುಯೋಗ್ಯ ನಿವೇಶನವೊಂದನ್ನು ಸಸಂಭ್ರಮ ಸರಳ ಸಮಾರಂಭ ಪೂರ್ವಕ ಶ್ರೀಗಳವರಿಗೆ ಸಮರ್ಪಣೆ ಮಾಡಿದರು.

ನಿವೇಶನ ಸ್ಥಳಕ್ಕೆ ಸ್ವಾಗತರಾದ ಶ್ರೀಗಳವರು ತಮ್ಮ ಹೃಷ್ಟಚಿತ್ತದಿಂದಲೂ ದಯಾದೃಷ್ಟಿಕ್ಷೇಪದಿಂದಲೂ ಪವಿತ್ರಪದವಿನ್ಯಾಸದಿಂದಲೂ 'ವಿಶ್ವಭಾರತಿ'ಯ ಅಭಿವೃದ್ಧಿಯನ್ನು ಆಶಿಸಿ ಈ ಸಂಸ್ಥೆಗೆ ಒಂದು ಸಾವಿರ ರೂಪಾಯಿಗಳ ಸುವರ್ಣ ಮಂತ್ರಾಕ್ಷತೆಯನ್ನು ಕೊಟ್ಟು ಅನುಗ್ರಹಿಸಿದರು. ಶ್ರೀಗಳವರ ಸತ್ಯಸಂಕಲ್ಪವು ಪರಿಸ್ಥಿತಿಯ ಅನುಕೂಲತೆಯನ್ನು ಹೊತ್ತುಕೊಂಡು, ಸಹಜವಾಗಿ ಶೀಘ್ರವಾಗಿ ಕಾರ್ಯಸಿದ್ಧಿಯ ಮೆಟ್ಟಿಲನ್ನು ಹೇಗೆ ಏರುತ್ತದೆ–ಎಂಬುದಕ್ಕೆ ಈ ಘಟನೆ ಒಂದು ಜ್ವಲಂತವಾದ ಸಾಕ್ಷಿಯಾಗಿದೆ.*

ನಮ್ಮದಾದ ಎಲ್ಲ ವೈದಿಕ, ಲೌಕಿಕ ವಿದ್ಯಾಸಂಸ್ಥೆಗಳಿಗೆ ಆರ್ಥಿಕ ನೆರವನ್ನು ನೀಡಿ, ಇಂದು ಎಳೆಯರಾದರೂ ನಾಳಿನ ನಾಡಿನ ಹಿರಿಯರಾಗಲಿರುವ ವಿದ್ಯಾರ್ಥಿಗಳ ನೈತಿಕ ಆಧ್ಯಾತ್ಮಿಕ ಬಲಗಳನ್ನು ಸಂವರ್ಧಿಸುವ ದೃಷ್ಟಿಯಿಂದ ಶ್ರೀಗಳವರ ಯೋಜನೆಗಳು ರೂಪಿತವಾಗುತ್ತಿವೆ.

ಸರ್ವಸಂಗಪರಿತ್ಯಾಗಮಾಡಿ ಪರಿವ್ರಾಜಕರಾಗಿ ವಿರಾಜಿಸುತ್ತಿರುವ, ಸ್ವಾತ್ಮಾ

---

* ಈ ಸಂದರ್ಭದ 'ಜ್ಞಾಪಕ ಕವಿತೆ'ಯೊಂದು ಶ್ರೀ ಟಿ. ಕೇಶವ ಭಟ್ಟರಿಂದ ವೃತ್ತ ರೂಪದಲ್ಲಿ ರಚಿತವಾಗಿದ್ದು, ಅದನ್ನು ಈ ಗ್ರಂಥದ ಅನುಬಂಧದಲ್ಲಿ ಕಾಣಬಹುದು.

ಸಂದದಲ್ಲಿ ನಲಿಯುತ್ತಿರುವ ಶ್ರೀಗಳವರಿಗೆ ಯಾವುದೊಂದರ ಅವಶ್ಯಕತೆಯಿಲ್ಲದಿದ್ದರೂ ಶಿಷ್ಯಜನತೆಯ ಸರ್ವತೋಮುಖ ಪ್ರಗತಿಗಾಗಿ, ಎಲ್ಲ ಕಾರ್ಯಭಾರದ ಹೊಣೆಯನ್ನು ನಿರ್ವಹಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯ, ಸುದೈವ. ಇದನ್ನು ಅರಿತು ನಾವು ಶ್ರೀಗಳು ನಿರೂಪಿಸಿ ಕೊಡುವ ಪ್ರಗತಿಪರ ಯೋಜನೆಗಳ ಪರಿಪೂರ್ಣ ಯಶಸ್ಸಿಗೆ ತನುಮನೋಧನಗಳಿಂದ ತ್ರಿಕರಣಪೂರ್ವಕವಾಗಿ ಮುಂದೆ ಬಂದು ದುಡಿಯುವುದು, ಕಾರ್ಯದಲ್ಲಿ ಸಹಭಾಗಿಗಳಾಗುವುದು ನಮ್ಮ ಪಾಲಿನ ಆದ್ಯ ಕರ್ತವ್ಯವಾಗಿದೆ.

ಶ್ರೀ ಮಜ್ಜಗದ್ಗುರು ಶಂಕರಾಚಾರ್ಯರ ಚರಿತ್ರೆಯಾದ 'ಶ್ರೀ ಶಂಕರ ವಿಜಯ' ದಲ್ಲಿ ಹೀಗೆ ಹೇಳಿದೆ –

ಭಗವಚ್ಛಂಕರಾಚಾರ್ಯಚರಿತಂ ಮೋಕ್ಷದಂ ಶುಭಮ್ ।
ಕಲಿತಾಪೋಪಶಮನಂ ದಿವ್ಯಜ್ಞಾನ ವರಪ್ರದಮ್ ॥

"ಶ್ರೀ ಶಂಕರಾಚಾರ್ಯರ ಚರಿತ್ರೆಯು (ಅದರ ಪಠನ, ಶ್ರವಣ, ಮನನಾದಿಗಳಿಂದ) ಮೋಕ್ಷದಾಯಕವೂ ಶುಭಪ್ರದವೂ ಕಲಿಕಲ್ಮಷ ವಿಧ್ವಂಸಕವೂ ಎಲ್ಲಕ್ಕಿಂತ ಮಿಗಿಲಾಗಿ ದಿವ್ಯಜ್ಞಾನ ವರಪ್ರದಾಯಕವೂ ಆಗಿದೆ."

ಅಸ್ಮತ್ಪೀಠೇ ಸಮಾರೂಢಃ ಪರಿವ್ರಾಡುಕ್ತಲಕ್ಷಣಃ ।
ಅಹಮೇವೇತಿ ವಿಜ್ಞೇಯಃ 'ಯಸ್ಯದೇವ' ಇತಿ ಶ್ರುತೇಃ ॥

"ನಮ್ಮ ಪೀಠವನ್ನು ಆರೋಹಿಸಿದ ಶುಚಿಯೂ ಜಿತೇಂದ್ರಿಯನೂ ವೇದವೇದಾಂಗ ವಿಶಾರದನೂ ಸರ್ವತಂತ್ರಯೋಗವಿದನೂ ಆದ ಸಂನ್ಯಾಸಾಶ್ರಮಿಯನ್ನು 'ನಾನೇ' ಎಂದೇ ಭಾವಿಸಬೇಕು" – ಏಕೆಂದರೆ,

ಯಸ್ಯದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

– ಶ್ವೇತಾಶ್ವತರೋಪನಿಷತ್,

ಎಂಬ ಶ್ರುತಿಯೇ ಇದಕ್ಕೆ ಆಧಾರವೆಂಬುದು ಶ್ರೀಮದಾದ್ಯ ಶಂಕರರ ಅಭಿಜ್ಞಾವಚನ.

ಜಗದ್ಗುರುಗಳೆಂದು ಖ್ಯಾತರಾದ ಶ್ರೀಮದಾದ್ಯಶಂಕರಾಚಾರ್ಯರಿಂದ ಸಂಸ್ಥಾಪಿತವಾದ ನಮ್ಮ ಶ್ರೀರಾಮಚಂದ್ರಾಪುರ ಮಠದ ಗುರುಪೀಠದಲ್ಲಿ ಪ್ರಕೃತ ವಿರಾಜಿಸುತ್ತಲಿರುವ ಶ್ರೀಮದ್ರಾಘವೇಂದ್ರ ಭಾರತೀ ಸ್ವಾಮಿಗಳವರು, ಶ್ರೀಮದಾದ್ಯ ಶಂಕರಾಚಾರ್ಯರು ವಿವರಿಸಿದ–

ಶುಚಿರ್ಜಿತೇಂದ್ರಿಯೋ ದಕ್ಷಃ ವೇದ ವೇದಾಂಗಪಾರಗಃ ।
ಯೋಗಜ್ಞಃ ಸರ್ವತಂತ್ರಾಣಾಮಸ್ಮದಾಸ್ಥಾನಮಾಪ್ನುಯಾತ್ ॥

ಬೆಳ್ಳಿಯ ಸಿಂಹಾಸನದಲ್ಲಿ ಕಿರೀಟಾಲಂಕೃತರಾದ ಶ್ರೀಗಳವರು

ಎಂಬಂತೆ, ಎಲ್ಲ ಲಕ್ಷಣಗಳಿಂದ ಮುಂಡಿತರಾದ ಪರಿವ್ರಾಜಕರಾಗಿರುವುದರೊಂದಿಗೆ ತರ್ಕ ವೇದಾಂತಾದಿ ವಿವಿಧ ವಿದ್ಯಾಸಂಪನ್ನರಾಗಿ, ಜೀರ್ಣವಾದ ಮಠ ಮಂದಿರಗಳ ಪುನರ್ನಿರ್ಮಾಪಕರಾಗಿ, ನವೀನಮಠಾಯತನದ ಸಂಸ್ಥಾಪಕರಾಗಿ, ವೈದಿಕ ಹಾಗೂ ಕಾಲೋಚಿತ ವಿದ್ಯೆಗಳ ಪರಿಪೋಷಕರಾಗಿ, ಕಲಿಮಲ ಕಲುಷಿತವಾದ ಜನ ಮನವನ್ನು ಪಾವನಗೊಳಿಸುವ ಸದಾಚರಣೆಯ ಪ್ರೇಕ್ಷಕರಾಗಿ, ಚಿತ್ತಾಕರ್ಷಕ ಶೈಲಿಯ ವಚನ ಸುಧೆಯಿಂದ ಚಿತ್ತಾಪಹಾರಕರಾಗಿ, ಶಿಷ್ಯ ಜನತೆಯನ್ನು ವಿವಿಧ ರೀತಿಯಿಂದ ಸಂಘಟಿಸುವ ಕುಶಲಿಗಳಾಗಿ ಕಂಗೊಳಿಸುತ್ತಿದ್ದಾರೆ.

ಇಂತಹ ಮಹಿಮಾನ್ವಿತರ ದಿವ್ಯ ಚರಿತ್ರೆಯನ್ನು ಪಠಿಸಿದ, ಶ್ರವಣಮಾಡಿದ, ಶ್ರವಣಮಾಡಿಸಿದ, ಪ್ರತಿಯೊರ್ವನೂ ಶ್ರೀ ಗುರುವರ್ಯರ ಕೃಪಾ ಕಟಾಕ್ಷಕ್ಕೆ ಪಾತ್ರನಾಗಿ ತನ್ನ ಇಹಪರಗಳೆರಡರಲ್ಲಿಯ ಶ್ರೇಯಸ್ಸು-ಪ್ರೇಯಸ್ಸುಗಳಿಗೆ, ಐಹಿಕ ಆಮುಷ್ಮಿಕ ಸುಖ ಸಂತೋಷಗಳಿಗೆ ಭಾಜನನಾಗುತ್ತಾನೆ-ಎಂಬುದು ವಾದಾತೀತ ವಿಷಯ.

ಅನುಭಾವಿಗಳೂ ಅನುಭವಿಗಳೂ ತಪಸ್ವಿಗಳೂ ಪ್ರಭಾವಶಾಲಿಗಳೂ ದಕ್ಷರೂ ಮಹಿಮಾನ್ವಿತರೂ, ಆಗಿ ಕಂಗೊಳಿಸುತ್ತಲಿರುವ ಶ್ರೀ ಶ್ರೀಗಳವರ ಶುಭಾಶೀರ್ವಾದವು ನಮ್ಮೆಲ್ಲರ ರಕ್ಷಾಕವಚವಾಗಿ ಬಹುಕಾಲ ಇರುವಂತೆಯೂ ನಾವೆಲ್ಲ ಒಂದಾಗಿ ಶ್ರೀಗಳವರ ನಿರ್ದೇಶನದಂತೆ, ಸತ್ ಪಥಾನುಯಾಯಿಗಳಾಗುವಂತೆಯೂ ನಮ್ಮ ಆರಾಧ್ಯ ದೇವರಾದ ಶ್ರೀ ಸೀತಾರಾಮಚಂದ್ರ-ಚಂದ್ರಮೌಳೀಶ್ವರರು ಅನುಗ್ರಹಿಸಲಿ !

ಶ್ರೀ ರಾಘವೇಂದ್ರಂ ಗುರುವಂಶಭೂಷಣಂ
ಶ್ರೀ ರಾಮಚಂದ್ರಂ ಸಶಿವಂ ಶಿವಂಕರಮ್ ।
ಸಂಸ್ಮೃತ್ಯ ಚೇಯಂ ಲಿಖಿತಾ ಗುರೋಃ ಕಥಾ
ಸಮರ್ಪಿತಾ ಶ್ರೀ ಗುರುಪಾದಪದ್ಮಯೋಃ ॥

ಅನುಬಂಧ ೧ — ಭಾಷಣಗಳು

[ಪೂಜ್ಯ ಶ್ರೀ ರಾಘವೇಂದ್ರಭಾರತೀ ಸ್ವಾಮಿಗಳವರು ತಮ್ಮ ಶಿಷ್ಯ ವರ್ಗಕ್ಕೆ ಸಂದರ್ಶನವನ್ನು ಕೊಡುವುದಕ್ಕಾಗಿ ಸಂಚಾರ ಕೈಗೊಂಡಾಗ, ಅಲ್ಲಲ್ಲಿ ವಿಶೇಷ ಆಹ್ವಾನಿತರಾದಾಗ, ವಿಶೇಷ ಸಭೆ-ಸಮಾರಂಭಗಳಲ್ಲಿ ಪಾಲ್ಗೊಂಡಾಗ ಮಾಡಿದ ಭಾಷಣಗಳು, ಹಿತೋಕ್ತಿಗಳು, ಅನುಗ್ರಹಗಳು, ಆಶೀರ್ವಾದಗಳು ಅನುಭವ-ಅನುಭಾವಪೂರ್ಣವಾಗಿವೆ. ಅವು ನಮ್ಮ ಜನತೆಗೆ ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಹಾಗೂ ಸಾರ್ವದೇಶಿಕ ಮೌಲ್ಯಗಳಿಂದ ಕೂಡಿವೆ. ಪ್ರಚಲಿತ ವಿವಿಧ ಸಮಸ್ಯೆಗಳಿಗೆ ಭಾರತೀಯ ತತ್ತ್ವಾನುಗುಣವಾದ ಉತ್ತರದ ರೂಪಗಳಲ್ಲಿವೆ; ಯೋಗ್ಯ ಮಾರ್ಗದರ್ಶಕಗಳಾಗಿವೆ. ಕರ್ಣಾಟಕದ ವಿವಿಧ ಪತ್ರಿಕೆಗಳಲ್ಲಿ ಸಾರರೂಪವಾಗಿ ಅವು ಅಂದಂದು ಪ್ರಕಟವೂ ಆಗಿವೆ. ಅವನ್ನೆಲ್ಲ ಒಂದೂ ಬಿಡದಂತೆ ಕೂಡಿಸಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ. ಸಾಧ್ಯವಾದವುಗಳಿಂದ ಆಯ್ದು ಕೆಲವನ್ನು ಮಾತ್ರ ಇಲ್ಲಿ ಕೊಡಲಾಗಿದೆ.]

೧. ಶ್ರೀ ಶಂಕರಜಯಂತಿಯ ಅನುಗ್ರಹ ಭಾಷಣ

[ಎಡನೀರು ಮಠದಲ್ಲಿ (೧೯೫೮) ಅಧ್ಯಕ್ಷತೆ ವಹಿಸಿದಾಗ)

ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಯಾರಿಗೆ ಪರಮಾತ್ಮನಲ್ಲಿ ಅತಿಶಯವಾದ ಭಕ್ತಿ ಇದೆಯೋ ಅಂಥವರಿಗೆ ಸಕಲ ಅರ್ಥಗಳೂ ಸಿದ್ಧಿಸುತ್ತವೆ. ಅರ್ಥವೆಂದರೆ ಇಷ್ಟವಸ್ತು. ಅದು ನಾಲ್ಕುವಿಧ. ಅದನ್ನೇ ಪುರುಷಾರ್ಥ ಚತುಷ್ಟಯವೆನ್ನುತ್ತಾರೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದು ಅವುಗಳನ್ನು ವಿಭಾಗಿಸಲಾಗಿದೆ. ಅವುಗಳಲ್ಲಿ ಮೋಕ್ಷವು ಪರಮ ಪುರುಷಾರ್ಥವೆನಿಸಿಕೊಂಡಿದೆ. ಮೋಕ್ಷವೆಂದರೆ ಸ್ವರೂಪಾವಸ್ಥಿತಿಯೆಂತಲೂ ಏಕವಿಂಶತಿ ದುಃಖ ಧ್ವಂಸವೆಂತಲೂ ಬ್ರಹ್ಮಾನಂದಾವಾಪ್ತಿಯೆಂತಲೂ ಅಂತಃಕರಣರೂಪವಾದ ಉಪಾಧಿಯ ನಾಶವೆಂತಲೂ ವರ್ಣಿತವಾಗಿದೆ. ಸಂಪತ್ತು, ಕಾಮಾದಿಗಳು ಸಾವಧಿಕವಾಗಿವೆ. ಸ್ವರ್ಗಾಧಿಪತಿಯಾದ ಇಂದ್ರನಿಗೂ ಆಯುಸ್ಸು ಅವನ ಮಾನದಲ್ಲಿ ನೂರೇ ವರ್ಷ. ಇದರಂತೆ ಬ್ರಹ್ಮಪದವಿ ಮೊದಲಾದವುಗಳೂ ಸಾವಧಿಕಗಳೇ ಆಗಿವೆ. ಅವಧಿಯೆಂದರೆ ಖಂಡಕಾಲ. ಕಾಲವು ಅಖಂಡವಾದುದು. ಸೂರ್ಯಸಂಚಾರದಿಂದ ಕಲಾ, ಕಾಷ್ಠಾ, ಮುಹೂರ್ತ, ದಿವಸ, ಪಕ್ಷ, ಋತು, ಸಂವತ್ಸರಾದಿ ಕಾಲವಿಭಾಗಗಳು ಅಖಂಡಕಾಲದಲ್ಲೇ ಕಲ್ಪಿತವಾಗಿವೆ. ಕಾಲವು ವಿಭು ಅಂದರೆ ವ್ಯಾಪಕವೂ

ನಿತ್ಯವೂ ಆಗಿವೆಯೆಂದು ತಾರ್ಕಿಕರ ಮತ. ಕಾಲವು ಉಪಾಧಿಭೇದದಿಂದ ಭೂತ ಭವಿಷ್ಯದ್ವರ್ತಮಾನವೆನಿಸುವುದಲ್ಲದೆ ಮೂರ್ತದ್ರವ್ಯಗಳ ಸಂಯೋಗದಿಂದ ವಿಭುತ್ವ ಪಡೆದು ಜಗತ್ತಿನ ಸೃಷ್ಟಿಗೆ ಕಾರಣವಾಗಿದೆ.

ಸೃಷ್ಟಿಯೆಂದರೆ ಪರಮಾತ್ಮನು ಮಾಯೆಯನ್ನು ಪ್ರಚೋದಿಸಿ ಅದರ ಯಜಮಾನನಾಗಿ ವಿವಿಧ ರೂಪಗಳಿಂದ ಸೇರಿಕೊಂಡು ನಡೆಸುವ ಲೀಲೆ. ಪರಮಾತ್ಮನೊಬ್ಬನೇ ಸಮಸ್ತ ಪ್ರಪಂಚಕ್ಕೂ ಆಧಾರನೆನಿಸಿಕೊಂಡಿದ್ದಾನೆ. ಆಧೇಯವಾದ ಇತರ ಎಲ್ಲಾ ವಸ್ತುಗಳೂ ಪರಮಾತ್ಮ ಪ್ರಚೋದನೆಯಿಂದಲೇ ಕಾರ್ಯ ಪ್ರವೃತ್ತವಾಗಿವೆ. ಪರಮಾತ್ಮನಿಗೆ ಇತರ ಯಾವ ಅಧಿಕರಣದ ಆವಶ್ಯಕತೆಯೂ ಇರುವುದಿಲ್ಲ. ದೊಡ್ಡ ವಸ್ತುವಿಗೆ ಸಣ್ಣ ವಸ್ತುವು ಆಧಾರವಾಗಲು ಸಾಧ್ಯವಿಲ್ಲ. ಪರಮಾತ್ಮನಿಗೆ ಆಧಾರವೆನಿಸಬಲ್ಲುದು ಯಾವುದೂ ಇಲ್ಲ. ಆತನು ಸ್ವತಂತ್ರನೂ ಸರ್ವಜ್ಞನೂ ನಿರ್ಲಿಪ್ತನೂ ಕಾಲಾತೀತನೂ ಸನಾತನನೂ ವಿಭುವೂ ಆಗಿರುವನು. ಇಂಥ ಪರಮಾತ್ಮನನ್ನರಿಯುವುದರಿಂದಲೇ ಪರಮ ಪುರುಷಾರ್ಥ ಸಿದ್ಧಿ. ಸಾವಧಿಕವಾದ ಸ್ವರ್ಗಾದಿಗಳಿಗಿಂತಲೂ ಈ ಅವಿನಾಶಿಯಾದ ಮೋಕ್ಷವು ಶ್ರೇಷ್ಠವಾಗಿದೆ.

ಪರಮಾತ್ಮನ ಸ್ವರೂಪವು ಗೋಚರವಾಗಬೇಕಾದರೆ ಅವಿದ್ಯೆಯ ಸಂಪರ್ಕವಿರಬಾರದು. ಅವಿದ್ಯೆ ಎಂದರೆ ಅಜ್ಞಾನ ಅಥವಾ ಮಾಯೆ, ಇದು ಪರಮಾತ್ಮನ ದರ್ಶನಕ್ಕೆ ಪ್ರತಿಬಂಧಕವಾಗಿದೆ. ಸತ್ಕರ್ಮಾನುಷ್ಠಾನದಿಂದ ಚಿತ್ತ ಶುದ್ಧಿಯಾಗಿ ಮಾಯೆಯು ತೊಲಗಿದಾಗಲೇ ಸಚ್ಚಿದಾನಂದಸ್ವರೂಪನ ದರ್ಶನವಾಗುತ್ತದೆ. ಇದನ್ನು ದೊರಕಿಸುವುದಕ್ಕಾಗಿಯೇ ಇತರ ಭಕ್ತಿ ಕರ್ಮ ಮಾರ್ಗಾದಿಗಳು ನಿರೂಪಿತವಾಗಿವೆ. ಆತ್ಮವಿದ್ಯೆಯ ಮೂಲಕವೇ ಪರಮಾತ್ಮನ ಸಾಕ್ಷಾತ್ಕಾರವು ಸಾಧ್ಯ. ಆತ್ಮವಿದ್ಯೆಗೆ ನಿವೃತ್ತಿಮಾರ್ಗವೆನ್ನುತ್ತಾರೆ. ವೇದೋಕ್ತ ಕರ್ಮಾನುಷ್ಠಾನವು ಪ್ರವೃತ್ತಿಮಾರ್ಗ. ಇದನ್ನು ಅಧಿಕಾರಕ್ಕನುಗುಣವಾಗಿ ಸಕಲರೂ ಆಚರಿಸಬೇಕು.

ಇಂಥ ಕರ್ಮಾಚರಣೆಯಲ್ಲಿ ಅನಾಸಕ್ತಿಯುಂಟಾಗಿ ಜನತೆಯು ಅಜ್ಞಾನಾವೃತವಾದಾಗ ಪರಮಾತ್ಮನು ಸ್ವತಃ ಅವತರಿಸಿ ಸನಾತನ ಧರ್ಮಮಂದಿರವನ್ನು ಜೀರ್ಣೋದ್ಧಾರಗೊಳಿಸಿ ಲೋಕಕಲ್ಯಾಣವನ್ನುಂಟುಮಾಡುತ್ತಾನೆ. ಪರಮಾತ್ಮನಿಗೆ ಕರ್ಮದ ಲೇಪವಾಗಲಿ, ಫಲಾಪೇಕ್ಷೆಯಾಗಲಿ ಇಲ್ಲ. ಆದರೂ ಲೋಕಸಂಗ್ರಹಕ್ಕಾಗಿ ಆತನು ಕರ್ಮಪ್ರವೃತ್ತನಾಗುತ್ತಾನೆ. ಧರ್ಮವು ಹ್ರಾಸವಾದಾಗ ಹಾಗೂ ಅಧರ್ಮವು ಪ್ರಬಲಗೊಂಡಾಗ ಪರಮಾತ್ಮನ ಅವತಾರದ ಅವಶ್ಯಕತೆಯುಂಟಾಗುತ್ತದೆ. ಶ್ರೀ ರಾಮಚಂದ್ರ ಶ್ರೀ ಕೃಷ್ಣಾದ್ಯವತಾರಗಳಿಂದ ಪರಮಾತ್ಮನು ಧರ್ಮೋದ್ಧಾರಮಾಡಿ ಕರ್ಮಪ್ರವೃತ್ತಿಗೆ ಮಾರ್ಗದರ್ಶಕನಾಗಿದ್ದಾನೆ.

ಪರೀಕ್ಷಿತಮಹಾರಾಜನು ಕಲಿಯನ್ನು ನಿಗ್ರಹಿಸಿದಾಗ ಕಲಿಯು "ಮದ್ಯಂ ದ್ಯೂತಂ ಸ್ತ್ರಿಯಃ ಸೂನಾ"– ಇಷ್ಟು ಕಡೆಗಳಲ್ಲಿ ಅವಕಾಶ ಕೇಳಿದನು. ಅಲ್ಲಿ ಲಜ್ಜಾವಕಾಶನಾದ

ಕಲಿಯು ಕ್ರಮೇಣ ಜಗತ್ತನ್ನೇ ಸ್ವಾಧೀನಪಡಿಸಿಕೊಂಡನು. ಹಿಂಸೆ ಬೆಳೆದು, ನಾಸ್ತಿಕತೆ ಅಂದರೆ ಲೋಕಾಯತಿಕವಾದವು ಪ್ರಬಲವಾಗಿ ಧರ್ಮವು ಅವನತಿ ಹೊಂದಿದ ಸಂದರ್ಭದಲ್ಲಿ ಪರಮಾತ್ಮನು ಬೌದ್ಧಾವತಾರ ತಾಳಿ ಹಿಂಸೆಯನ್ನೂ ನಾಸ್ತಿಕ್ಯವನ್ನೂ ನಿರ್ಮೂಲಗೊಳಿಸಿದನು. ಕ್ರಮೇಣ ಬುದ್ಧಧರ್ಮವು ಪ್ರಬಲವಾಯಿತು. ಸನಾತನ ಧರ್ಮಾನುಸಾರಿಗಳು ಕಡಮೆಯಾಗಿ, ಯಜ್ಞಯಾಗಾದಿಗಳು ನಾಮಾವಶೇಷವಾಗಿ ಅವೈದಿಕ ಮತವು ಪ್ರವೃದ್ಧವಾದಾಗ ಭಗವಾನ್ ಶಂಕರನು ಶ್ರೀ ಶಂಕರಾಚಾರ್ಯರ ರೂಪದಿಂದ ಅವತರಿಸಿದನು. ಸನಾತನ ಧರ್ಮಕ್ಕೆ ನಾಶವಿಲ್ಲ. ಏಕೆಂದರೆ, ಇದು ಯಾರಿಂದಲೂ ಸೃಷ್ಟಿಗೊಂಡುದಲ್ಲ. ಇಂಥ ಸನಾತನ ಧರ್ಮರೂಪವಾದ ವೃಕ್ಷವು ಕಮರಿಹೋಗತೊಡಗಿದಾಗ ಶ್ರೀ ಶಂಕರಾಚಾರ್ಯರು ಅದನ್ನು ಪುನರುಜ್ಜೀವನಗೊಳಿಸಿ ಲೋಕ ಕಲ್ಯಾಣವನ್ನುಂಟುಮಾಡಿದರು.

ಇಂಥ ಬಲವಾದ ಹಿನ್ನೆಲೆಯುಳ್ಳ ಶ್ರೀ ಶಂಕರಾಚಾರ್ಯರ ಅವತಾರದಿಂದ ಅಧ್ಯಾತ್ಮ ವಿದ್ಯೆಯ ಪ್ರಕಾಶವು ಜಗತ್ತನ್ನೇ ಬೆಳಗಿಸಿತು. ಅತೀಂದ್ರಿಯ ಜ್ಞಾನ ಜನ್ಯವಾದ ಶಕ್ತಿಯಿಂದ ಶ್ರೀಮದಾಚಾರ್ಯರು ವೇದಾಂತ ಗ್ರಂಥಗಳನ್ನು ರಚಿಸಿ, ಭಾರತದ ಆದ್ಯಂತ ಪಾದಯಾತ್ರೆಮಾಡಿ, ಮಂಡನಮಿಶ್ರರನ್ನು ವಾದದಲ್ಲಿ ಗೆದ್ದು, ಕಾಶ್ಮೀರಕ್ಕೆ ಹೋಗಿ ಅಣುವಾದಿಗಳನ್ನು ಜಯಿಸಿ, ಸನಾತನ ಧರ್ಮವನ್ನೂ ಅದ್ವೈತ ಸಿದ್ಧಾಂತವನ್ನೂ ಪ್ರತಿಷ್ಠಾಪಿಸಿದರು. ಅಣಿಮಾ ಮಹಿಮಾದ್ಯಷ್ಟಸಿದ್ಧಿಗಳೂ ಸರ್ವ ಶಕ್ತರಾದ ಆಚಾರ್ಯರ ಅಧೀನವಾಗಿದ್ದುವು. ಅಂಥ ಶ್ರೀ ಶಂಕರಭಗವತ್ಪಾದರು ಅವತರಿಸಿದ ಸುದಿನವಿದು. ಈ ದಿನವನ್ನು ಉತ್ಸವರೂಪವಾಗಿ ಆಚರಿಸುವುದರ ಮೂಲಕ ಸಕಲರೂ ಅವರ ಮಹತ್ತ್ವವನ್ನು ತಿಳಿದು ಆಚರಣೆಗೆ ತರಬೇಕು.

ಇಂದಿನ ಸರಕಾರವು ಜಾತ್ಯತೀತ ಧರ್ಮಾತೀತವೆನ್ನಲಾಗುತ್ತಿದೆ. ಸರಕಾರದ ದೃಷ್ಟಿಯಲ್ಲಿ ಸಕಲ ಧರ್ಮಗಳಿಗೂ ಸ್ಥಾನಮಾನಗಳು ಸಮಾನವೆಂದು ಸಾರಲಾಗಿದೆ. ಹೀಗಿರುವಾಗ ಬುದ್ಧಜಯಂತಿಗೆ ರಾಷ್ಟ್ರೀಯತೆಯನ್ನಿತ್ತು ಸರಕಾರದ ಹಣವನ್ನು ವ್ಯಯಿಸಲಾಗುತ್ತಿದೆ. ಶ್ರೀರಾಮ, ಶ್ರೀಕೃಷ್ಣ, ಶಂಕರಾಚಾರ್ಯರ ಜಯಂತಿಗಳನ್ನೂ ಸರಕಾರವು ಏಕೆ ಆಚರಿಸಬಾರದು ? ಭಾರತದ ಶೇಕಡಾ ಎಪ್ಪತ್ತಕ್ಕೂ ಮಿಕ್ಕದ ಜನರು ಸನಾತನ ಧರ್ಮಾನುಯಾಯಿಗಳಾಗಿರುವಾಗ ಬೌದ್ಧಮತಕ್ಕೆ ರಾಷ್ಟ್ರೀಯತೆ ಯನ್ನೀಯಬಹುದೆ ? ಅಹಿಂಸೆ ಸತ್ಯಾದಿಗಳನ್ನು ಜಗತ್ತಿಗೇ ಬೋಧಿಸಹೊರಟ ನಮ್ಮ ಸರಕಾರದ ಕೆಲವು ಉನ್ನತಾಧಿಕಾರಿಗಳು ಕುಕ್ಕುಟಾಂಡಭಕ್ಷಣ, ಮತ್ಸ್ಯಸೇವನ ಮುಂತಾದ ತಾಮಸ ವೃತ್ತಿಗೆ ಜನತೆ ಉತ್ತೇಜಿತವಾಗುವಂತೆ ಯತ್ನಿಸುತ್ತಿರುವರು. ನಮ್ಮ ಜನರು ಅವಿದ್ಯಾವಂತರಾಗಿ ಹಿತಾಹಿತಗಳ ಪರಿವೆಯಿಲ್ಲದೆ ಚುನಾವಣೆಯಲ್ಲಿ ಮತದಾನ ಮಾಡುವುದರ ಪರಿಣಾಮವೇ ಇದಾಗಿದೆ. ಪರಿಸ್ಥಿತಿಯು ಇದೇ ರೀತಿ ಮುಂದುವರಿಯುವುದು ರಾಷ್ಟ್ರದ ಅಹಿತಕ್ಕೆ ಕಾರಣವಾದೀತು.

ಮುಖ್ಯವಾಗಿ, ಗುರುದೇವತಾಭಕ್ತಿ ಧರ್ಮಶ್ರದ್ಧೆ ಪ್ರತಿಯೊಬ್ಬನಲ್ಲೂ ನೆಲೆಯಾಗಿರಬೇಕು. ನಾಸ್ತಿಕತೆ ಇಂದು ಸುಧಾರಿತಮನುಷ್ಯರಲ್ಲಿ ಹರಡಿದ್ದರೂ ಕಷ್ಟಬಂದಾಗ ಅವರಿಗೂ ದೇವರ ನೆನಪಾಗುತ್ತದೆ. ಎಷ್ಟೇ ಆಧುನಿಕರಾಗಿದ್ದರೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು, ಜೋರಾದ ಕಾಯಿಲೆ ವಾಸಿಯಾಗಲು, ಹಾಗೂ ಇನ್ನಿತರ ಸಂಕಷ್ಟಪರಿಸ್ಥಿತಿಗಳಿಂದ ಪಾರಾಗಲು ದೇವರನ್ನು ಗುಟ್ಟಾಗಿ ಮರೆಹೋಗುವವರಿದ್ದಾರೆ. ದೈವಭಕ್ತಿಯು ಎಲ್ಲರಲ್ಲೂ ಇರುತ್ತದೆ. ಕೆಲವರಲ್ಲಿ ಸುಪ್ತವಾಗಿದ್ದರೆ ಹಲವರಲ್ಲಿ ಉದ್ಬುದ್ಧವಾಗಿರುತ್ತದೆ. ಧರ್ಮಾಚರಣೆಯಿಂದ ಸಕಲರೂ ಅದನ್ನು ಸರ್ವಾತ್ಮನಾ ಬೆಳೆಸಿಕೊಳ್ಳಬೇಕು.

ಸನಾತನಧರ್ಮವು ಮಾನವನ ಏಳಿಗೆಯ ದಾರಿಯನ್ನು ಸರ್ವಾತ್ಮನಾ ನಿರೂಪಿಸುತ್ತಿದೆ. ಇಂಥ ಧರ್ಮವನ್ನು ಕುರಿತು ಸಕಲರೂ ಆಸಕ್ತಿವಹಿಸಿ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಶಂಕರಾಚಾರ್ಯರು ಈ ಧರ್ಮ-ಪರಂಪರೆಯು ಅನುಸ್ಯೂತವಾಗಿ ನಡೆದುಬರುವಂತೆ ಭಾರತದ ವಿವಿಧ ಭಾಗಗಳಲ್ಲಿ ಜಗದ್ಗುರುಪೀಠಗಳನ್ನು ಸ್ಥಾಪಿಸಿ, ಆ ಮಠಾಧಿಪತಿಗಳಿಗೆ ಧರ್ಮರಕ್ಷಣೆಯ ಹೊಣೆಯನ್ನೊಪ್ಪಿಸಿದ್ದಾರೆ. ಮಠಾಮ್ನಾಯದ ಮೂಲಕ ಮಠಾಧಿಪತಿಗಳ ಕರ್ತವ್ಯ ಅಧಿಕಾರಗಳನ್ನೂ ಅವರಿಗೆ ಶಿಷ್ಯರು ಸಲ್ಲಿಸತಕ್ಕ ಪೂಜ್ಯತೆ ಕಾಣಿಕೆಗಳ ವಿಚಾರವನ್ನೂ ನಿರೂಪಿಸಿದ್ದಾರೆ. ಪ್ರಕೃತದಲ್ಲಿ ಗುರುಪೀಠ ಮತ್ತು ಶಿಷ್ಯವರ್ಗದ ಪರಸ್ಪರ ಸಂಬಂಧ ಇತೋಽಪ್ಯತಿಶಯಾಭಿವೃದ್ಧಿ ಹೊಂದಿ ಶ್ರೀಮದಾಚಾರ್ಯ ಭಗವತ್ಪಾದರ ಉದ್ದೇಶ್ಯ-ವಾದ ಅದ್ವೈತಮತ ಮತ್ತು ಸನಾತನಧರ್ಮ - ಇವು ಸರ್ವಾದರಣೀಯವಾಗಿ ಬೆಳಗಬೇಕು.

ಒಟ್ಟಿನಲ್ಲಿಂದು ಧರ್ಮರಕ್ಷಣೆಯ ಹೊಣೆಯೇ ಪ್ರಧಾನವಾದುದು. ಅದಕ್ಕಾಗಿ ಶ್ರೀ ಶಂಕರಾಚಾರ್ಯರ ಉಪದೇಶಾಮೃತವನ್ನು ಸಕಲರೂ ಸವಿದು, ಧರ್ಮತತ್ಪರರಾಗ-ಬೇಕು. ಶ್ರೀ ಶಂಕರಭಗತ್ಪಾದರ ಜಯಂತಿಯ ಈ ಸಂದರ್ಭವಲ್ಲಿ ಅವರ ಮಹತ್ತ್ವ, ಅವರು ಸಾಧಿಸಿದ ಧರ್ಮೋದ್ಧಾರ ಲೋಕೋದ್ಧಾರಗಳನ್ನು ನೆನೆದು ಸಕಲರೂ ಅವರ ಉಪದೇಶವನ್ನು ಅನುಸರಿಸುವ ನಿರ್ಣಯಕ್ಕೆ ಬರಬೇಕು. ಗುರುಭಕ್ತಿ ಮತ್ತು ದೇವತಾಭಕ್ತಿಗಳನ್ನು ಬೆಳೆಸಿ ಸನಾತನ ಧರ್ಮಮಾರ್ಗದಲ್ಲಿ ನಡೆಯುವುದರಿಂದ ಲೋಕ-ಕಲ್ಯಾಣವಾಗುವುದು. ಹಾಗಾಗುವಂತೆ ಶ್ರೀರಾಮಚಂದ್ರನು ಅನುಗ್ರಹಿಸಲೆಂದು ಹಾರೈಸುತ್ತೇವೆ.

೨. ಗುರುಪೀಠದ ಗೌರವ

('ಮುನ್ನಡೆ' ಜೂನ್ ೧೯೬೪)

ಪರಮಾತ್ಮ ಪ್ರಚೋದಿತವಾದ ಪ್ರಕೃತಿಯಿಂದುಂಟಾಗಿರುವ ಪ್ರಪಂಚದಲ್ಲಿ ಜೀವಿಗಳಲ್ಲೆಲ್ಲ ಮನುಷ್ಯನೇ ಹೆಚ್ಚಿನವನಾಗಿರುವನು. ಭಗವಂತನು ಮಾನವನಿಗೆ ಮಾತ್ರ ಪಾಪ-ಪುಣ್ಯ, ಧರ್ಮಾಧರ್ಮಗಳ ವಿಚಾರದ ಹೊಣೆಯನ್ನು ಸೃಷ್ಟ್ಯಾರಂಭ-ದಿಂದಲೇ ಹೊರಿಸಿದ್ದಾನೆ. ಪುಣ್ಯವಿದ್ದರೆ ಮಾತ್ರ ಗುರು ದೇವತಾ ಸೇವೆಗೆ ಬುದ್ಧಿಯೂ ಅವಕಾಶವೂ ಉಂಟಾಗುವುವು.

ಭಾರತ, ರಾಮಾಯಣಾದಿ ಪುರಾಣಗಳನ್ನೂ ಇತಿಹಾಸಗಳನ್ನೂ ಅವಲೋಕಿ-ಸಿದರೆ, ಈ ಮಾತು ಸಂಪೂರ್ಣವಾಗಿ ಮನವರಿಕೆಯಾಗುವಂತಿವೆ. ಇತಿ+ಹ+ಆಸ ಅಂದರೆ "ಈ ಪ್ರಕಾರವಾಗಿ ನಡೆದಿತ್ತು" ಎಂದರ್ಥ. ಹಿಂದಿನವರು ಯಾವುದೇ ಸ್ವಾರ್ಥಕ್ಕಾಗಿ ಸುಳ್ಳನ್ನು ಸರ್ವಥಾ ಹೇಳಿದವರಲ್ಲ. ಸತ್ಯ ಅಹಿಂಸೆ ಮುಂತಾದ ಸದ್ಗುಣಗಳು ಅವರಲ್ಲಿ ಮೈಗೂಡಿದ್ದುವು. ಮಹರ್ಷಿಗಳಂತೂ ಶಮದಮಾದಿ ನಿಯಮ ನಿಷ್ಠರಾಗಿದ್ದು ಪ್ರಪಂಚದ ಎಲ್ಲ ವಸ್ತುಗಳ ಲಕ್ಷಣಗಳನ್ನೂ ತಮ್ಮ ಬುದ್ಧಿಸೂಕ್ಷ್ಮತೆ-ಯಿಂದ ಅರಿತುಕೊಂಡು, ತಾವೂ ಕೃತಾರ್ಥರಾದುದಲ್ಲದೆ ಮುಂದಿನವರಿಗೂ ಸನ್ಮಾರ್ಗ-ದರ್ಶನ ಮಾಡಿರುವ ಮಹಾತ್ಮರಾಗಿರುವರು. ಲೋಕದೊಳಗಿನ ಎಲ್ಲ ಜನರೂ ವಸ್ತುಗಳೂ ಸಾಮಾನ್ಯವಾಗಿ ಮಾಯಾಧೀನವಾದವುಗಳಾಗಿವೆ. ಆ ಮಾಯೆಯ ಪ್ರಭುವಾದ ಪರಮಾತ್ಮನನ್ನು ಅರಿತರೆ ಮಾತ್ರ, ಹಿಂದಿನ-ಇಂದಿನ-ಮುಂದಿನ ಎಲ್ಲ ಪರಿಸ್ಥಿತಿಗಳ ನಿಜಾಂಶವನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು. ಪ್ರಾಚೀನ ಮಹಾಮುನಿಗಳೆಲ್ಲರೂ ತಮ್ಮ ಜ್ಞಾನಸಂಪನ್ನತೆಯ ಮೂಲಕವೇ ಮಾಯೆಯಿಂದ ಮುಕ್ತರಾಗಿ, ತಾವು ಆನಂದ ವನ್ನು ಅನುಭವಿಸಿ, ವಿವೇಕಶಾಲಿಗಳಿಗೂ ಆನಂದಸಾಧನೆಯ ಮಾರ್ಗವನ್ನು ಉಪ-ದೇಶಿಸಿದರು. ಇಂದಿನ ಭೌತಿಕ ವಿಜ್ಞಾನಿಗಳು ಅನೇಕಾನೇಕ ಸಂಶೋಧನೆಗಳನ್ನು ನಡೆಸಿ, ವ್ಯಾವಹಾರಿಕ ಸಾಧನ-ಸಲಕರಣೆಗಳಲ್ಲಿ ಪ್ರಗತಿಯನ್ನು ಸಾಧಿಸಿರುವರಾದರೂ ಮಹರ್ಷಿಗಳಂತೆ ಲೋಕಾಂತರದಲ್ಲಿ ತೇಜೋಮಯ ವಾಯುಮಯ ಶರೀರಧಾರಿ-ಗಳೊಡನೆ ಸಮಾನಯೋಗ್ಯತೆಯಿಂದ ವ್ಯವಹರಿಸಲು ಇನ್ನೂ ಸಮರ್ಥರಾಗಿಲ್ಲ. ಹಾಗಾಗುವುದು ಸಾಧ್ಯವೂ ಇಲ್ಲ. ಒಬ್ಬನು ಇನ್ನೊಬ್ಬನ ನಿರ್ಣಯವು ತಪ್ಪೆಂದು ತನ್ನ ಬುದ್ಧಿಬಲದಿಂದ ಸಾಧಿಸಹತ್ತಿರುವನು. ಭೌತಿಕ ವಿಚಾರವೇ ಹೀಗೆ. ಯಾವಾ-ಗಲೂ ನಿರ್ದಿಷ್ಟ ವಾದಾತೀತ ನಿರ್ಣಯಕ್ಕೆ ನಿಲ್ಲಲಾರದು. "ಯಸ್ಮಿನ್ ವಿಜ್ಞಾತೇ ಸರ್ವಂ ವಿಜ್ಞಾತಂ ಭವತಿ" (ಉಪನಿಷತ್)-ಯಾವ ಚಿದಾನಂದ ಸ್ವರೂಪನಾದ ಆತ್ಮನಿಂದ ಎಲ್ಲವೂ ತಿಳಿದುಬರುವುದೋ ಆ ಆತ್ಮನ ಅರಿವು ಮಾಡಿಕೊಳ್ಳುವುದೇ ಮಾನವನ ಪರಮ ಧ್ಯೇಯ. ಸತ್ಯಶೀಲರಾಗಿರುವವರೂ ಪರಂಪರಾಗತ ಕುಲದೇವತಾ

ಕುಲಗುರು ಶ್ರದ್ಧಾಭಕ್ತಿಸಂಪನ್ನರಾಗಿರುವುದೂ ಎಲ್ಲವನ್ನೂ ತಿಳಿಯುವ ಪಡೆಯುವ ಏಕಮೇವ ರಾಜಮಾರ್ಗ. ಯುಗದಿಂದ ಯುಗಕ್ಕೆ ಕ್ರಮಿಸಿದಂತೆ, ಮಾನವನ ಬುದ್ಧಿಯೂ ಆಚರಣೆಯೂ ಸ್ಥಿತ್ಯಂತರಗಳನ್ನು ಹೊಂದುತ್ತ ಬಂದಿರುವುದಾದರೂ ವಿವೇಕಿಗಳಾದವರು ವೇದಶಾಸ್ತ್ರ ಪರಂಪರಾರ್ಜೆಯಗಳನ್ನು ಗೌರವಿಸುತ್ತ ನಡೆದು-ಕೊಂಡು ಬಂದು ಸಂಪೂರ್ಣಹಿತವನ್ನು ಸಾಧಿಸಿಕೊಳ್ಳುತ್ತಲೇ ಬಂದಿರುತ್ತಾರೆ. ಸಂಸಾರವು ಅನಾದಿಯೆಂದು ಶಾಸ್ತ್ರಜ್ಞರು ಸಾರುತಾ ಬಂದಿರುವಾಗ, ಕೋಟಿಗಟ್ಟಲೆಯೋ ವರ್ಷಗಳು ಸಂದವೆಂದೂ ಆದರೆ ನಿರ್ದಿಷ್ಟ ಕಾಲನಿರ್ಣಯ ಸಾಧ್ಯವಿಲ್ಲವೆಂದೂ ಬಗೆಬಗೆಯಾಗಿ ಅಭಿಪ್ರಾಯಪಟ್ಟು ಪೂರ್ವಶಾಸ್ತ್ರ ನಿರ್ಣಯಕ್ಕೆ ಬಂದು ಮುಟ್ಟುವಂತಾಗಿದೆ. ಪ್ರಾಚೀನರು ಸಮುದ್ರವನ್ನು "ರತ್ನಾಕರ"ವೆಂದು ಕರೆದುದು ಯಥಾಯೋಗ್ಯವಾದುದೆಂದು ಈಗಿನ ಸಂಶೋಧಗಳ ಅಭಿಪ್ರಾಯವೂ ಆಗಿರುವುದು ಗಮನಾರ್ಹವಾಗಿದೆ. "ಅಣೋ-ರಣೀಯಾನ್ ಮಹತೋ ಮಹೀಯಾನಾತ್ಮಾ ಗುಹಾಯಾಂ ನಿಹಿತೋಽಸ್ಯ-ಜಂತೋಃ" (ಉಪನಿಷತ್) ಸೂಕ್ಷ್ಮಾತ್ ಸೂಕ್ಷ್ಮವೂ ಮಹತ್ತಿಗಿಂತ ಮಹತ್ತರವೂ ಆಗಿರುವ ಪರಮಾತ್ಮನನ್ನು ಗುರುತಿಸುವುದರಲ್ಲಿ ತಮ್ಮ ಸೂಕ್ಷ್ಮಬುದ್ಧಿಯನ್ನೂ ಜೀವನ ಸರ್ವಸ್ವ-ವನ್ನೂ ವಿನಿಯೋಗಿಸಿದ ನಮ್ಮ ಪೂರ್ವಜರಾದ ಮಹರ್ಷಿಗಳ ವಚನವೇ ಸರ್ವೋತ್ಕೃಷ್ಟವೂ ದೋಷರಹಿತವೂ ಆಗಿದೆಯೆನ್ನುವುದರಲ್ಲಿ ಸಂದೇಹಕ್ಕೆ ಎಡೆಯಿಲ್ಲ. ಮಹರ್ಷಿಗಳು ಅಸತ್ಯ, ಅನ್ಯಾಯ, ಪ್ರತಾರಕ ವಚನಗಳಿಗೆ ಭಯಪಡುವಷ್ಟು ಇನ್ನಾವು ದಕ್ಕೂ ಅಂಜುತ್ತಿರಲಿಲ್ಲ. ಸುಮಾರು ಒಂದೂಕಾಲು ಸಾವಿರ ವರ್ಷಗಳ ಹಿಂದೆ ಒಮ್ಮೆ ವೇದಶಾಸ್ತ್ರಾದಿಗಳಲ್ಲಿ ಶ್ರದ್ಧಾದರಗಳು ಜನತೆಯಲ್ಲಿ ಕಡಿಮೆಯಾಗುತ್ತ ಬಂದಿರುವಾಗ ಶ್ರೀ ಶಂಕರಭಗತ್ಪಾದರು ಅವತರಿಸಿ, ಭಾರತದಲ್ಲೆಲ್ಲ ಸಂಚಾರ ಕೈಕೊಂಡು ಮಾನವ ಕಲ್ಯಾಣಕ್ಕಾಗಿ ಸನಾತನ ಧರ್ಮತತ್ತ್ವಗಳನ್ನು ಪುನರುಜ್ಜೀವನಗೊಳಿಸಿದರು. ತಮ್ಮ ತತ್ತ್ವೋಪದೇಶಗಳು ಅನೂಚಾನವಾಗಿ ನಡೆಯುತ್ತಿರಬೇಕೆಂಬ ಧ್ಯೇಯದಿಂದ ಅಲ್ಲಲ್ಲಿ ಗುರುಪೀಠಗಳನ್ನು ಸ್ಥಾಪಿಸಿದರು. ಅಲ್ಲದೆ, ಆ ಗುರುಪೀಠಗಳ ಆದೇಶಗಳಂತೆ ನಡೆಯುವುದರಲ್ಲಿಯೇ ಶಿಷ್ಯಕೋಟಿಯ ಕಲ್ಯಾಣವಿದೆಯೆಂಬುದನ್ನೂ ಮನವರಿಕೆಮಾಡಿ-ಕೊಟ್ಟರು. ಅಂದಿನಿಂದ ಇಂದಿನ ವರೆಗೂ ಅಖಂಡವಾಗಿ ನಡೆದುಬಂದಿರುವ ಆ ಧರ್ಮಾಚಾರ್ಯಪೀಠಗಳ ಆದೇಶಗಳು ಶಿಷ್ಯವೃಂದಕ್ಕೆ ಕ್ರಮಪ್ರಾಪ್ತವಾದ ಸೂಕ್ತ ಮಾರ್ಗದರ್ಶಕಗಳಾಗಿವೆ.

"ಧರ್ಮೋ ಮೂಲಂ ಮನುಷ್ಯಾಣಾಂ....ಶಾಸನಂ ಸರ್ವತೋಽಧಿಕಂ" ಎಂಬಂತೆ ಮನುಷ್ಯನಿಗೆ ಧರ್ಮವು ಅತ್ಯವಶ್ಯ, ಧರ್ಮಾಚಾರ್ಯರ ಆದೇಶಗಳೇ ಸರ್ವಾಧಿಕವಾದ ಶಾಸನಗಳು. ಶಿಷ್ಯ ಜನರು ತಮ್ಮ ಗುರುಪೀಠದ ಆದೇಶಾಭಿಪ್ರಾಯ ಗಳಂತೆ ನಡೆದುಕೊಂಡು ಕರ್ಮಾಚರಣನಿರತರಾಗುವುದು ಕರ್ತವ್ಯವೂ ಕಲ್ಯಾಣಕರವೂ ಆಗಿದೆಯೆಂಬುದನ್ನು ಹೊಸತಾಗಿ ಹೇಳಬೇಕಾಗಿಲ್ಲ. ಜ್ಯೋತಿಷ್ಯವು ಧರ್ಮಶಾಸ್ತ್ರಕ್ಕೂ ಸಂಬಂಧಿಸಿದ್ದು, ಎಂದಾದರೂ ಆವೆರಡರ ಮತಗಳಲ್ಲಿ ಭಿನ್ನತೆ-ವಿರೋಧ ಕಂಡುಬಂದರೆ,

ಬೋಧಾಯನರು ಹೇಳಿದಂತೆ – (ಪರಸ್ಪರ ವಿರೋಧೇ ತು ಜ್ಯೋತಿಷೋಕ್ತಾಗಮೋಕ್ತಯೋಃ । ಜ್ಯೋತಿಷೋಕ್ತಂ ವಿಹಾಯೈವ ಸ್ಮೃತಿಚೋದಿತಮಾಚರೇತ್ ॥) ಸ್ಮೃತಿವಚನದಂತೆಯೇ ನಡೆದುಕೊಳ್ಳಬೇಕು. ಹೀಗೆ, ಧರ್ಮನಿರ್ಣಯವು ಆರ್ಷವಾಕ್ಯ ಸಮನ್ವಯದಿಂದ ನಡೆದುಬಂದಿರುವುದು. ಹಾಗೆ, ನಿರ್ಣಯಿಸಲು ಧರ್ಮಜ್ಞರ ಪರಿಷತ್ತಿನ ಅಥವಾ ಆತ್ಮಜ್ಞರೊಬ್ಬರ ನಿರ್ಣಯವೇ ಸಾಮಾನ್ಯವೆಂಬುದರಲ್ಲಿ ಸರ್ವಥಾ ಸಂದೇಹವಿಲ್ಲ. ಕಾರಣ, ಧರ್ಮಸೂಕ್ಷ್ಮವನ್ನರಿತು, ನಾವು ಸಮಾಜದ ಧರ್ಮಾಚರಣೆಯ ಕಾಲನಿರ್ಣಯಾನುಕೂಲತೆಗೆ ಪರಂಪರಾನುಗುಣ ಹಾಗೂ ಶಾಸ್ತ್ರಸಮ್ಮತವಾದ ಪಂಚಾಂಗವನ್ನು ಪ್ರಕಟಿಸಲು "ಧಾರ್ಮಿಕ ಪಂಚಾಂಗ" ಸಮಿತಿಯೊಂದನ್ನು ನಿರ್ದೇಶಿಸಿದ್ದು, ಆ ಸಮಿತಿಯವರು ಈ ವರ್ಷದಿಂದಲೇ ಪಂಚಾಂಗ ಪ್ರಕಟನ ಕಾರ್ಯವನ್ನು ಪ್ರಾರಂಭಿಸಿದರು. ಅವರು ಪ್ರಕಟಿಸಿದ ಪಂಚಾಂಗದ ಪ್ರತಿಗಳು ಎಲ್ಲ ಕಡೆಯ ನಮ್ಮ ಶಿಷ್ಯವೃಂದಕ್ಕೂ ಸಕಾಲದಲ್ಲಿ ದೊರೆಯುವಂತೆ ಮಾಡಬೇಕೆಂಬ ಸಂಕಲ್ಪವನ್ನಿಟ್ಟುಕೊಂಡಿತ್ತಾದರೂ ಸಮಯಾವಕಾಶಗಳಿಲ್ಲದ ಮೂಲಕ ಅನುಕೂಲವಾಗಲಿಲ್ಲ. ಮುಂದೆ ಯೋಗ್ಯವ್ಯವಸ್ಥೆ ಮಾಡಲು ನಿರ್ಧರಿಸಿದ್ದು, ಸಕಲರೂ ಆ ಧಾರ್ಮಿಕ ಪಂಚಾಂಗದಂತೆ ಸಕಲ ಧರ್ಮಕರ್ಮಾಚರಣೆಗಳನ್ನು ನಡೆಸಿ ಶ್ರೀ ಗುರುಪೀಠದ ಅಪ್ಪಣೆಯಲ್ಲಿ ಶ್ರದ್ಧೆಯಿಟ್ಟು ವಿವೇಕಿಗಳಾಗಿ ಪಡೆಯಲೇ ಬೇಕಾದ ಶ್ರೀ ಗುರುದೇವ ತಾನುಗ್ರಹದ ಮೂಲಕ ಶ್ರೇಯೋಭಾಗಿಗಳಾಗಲೆಂದು ಶ್ರೀ ರಾಮಸ್ಮರಣಪೂರ್ವಕ ಹರಸುತ್ತೇವೆ.

೩. ಕರ್ತವ್ಯಯುಕ್ತ ಉತ್ತಮ ಜೀವನ

('ರಾಷ್ಟ್ರಮತ' ೧೦-೨-೧೯೫೬)

ಪ್ರಪಂಚದಲ್ಲಿ ಬಹುವಿಧವಾದ ಪ್ರಾಣಿಗಳನ್ನು ನಾವು ಕಾಣುತ್ತೇವಾದರೂ ಸಾರಾಸಾರ ವಿಚಾರದಿಂದ ತನ್ನ ಹಿತವನ್ನು ಸಾಧಿಸಿಕೊಳ್ಳಲು ಮನುಷ್ಯನು ಮಾತ್ರ ಸಮರ್ಥನು. ಈ ಮಾನವನ ಐಹಿಕ ಆಮುಷ್ಮಿಕ ಅಭಿವೃದ್ಧಿಗೆ ಹೇತುಭೂತವಾದುದೇ ಧರ್ಮವು. ಆದುದರಿಂದಲೇ 'ನ ರಾಜ್ಯಂ ನ ಚ ರಾಜಾಸೀತ್ ನ ದಂಡ್ಯೋ ನ ಚ ದಾಂಡಿಕಃ। ಧರ್ಮೇಣೈವ ಪ್ರಜಾಃ ಸರ್ವಾಃ ರಕ್ಷಂತಿ ಸ್ಮ ಪರಸ್ಪರಂ ॥' ಎಂಬ ವಚನಾನುಸಾರ ಅತಿ ಹಿಂದಿನ ಕಾಲದಲ್ಲಿ ಸದಾಚರಣೆಯನ್ನು ಅನುಷ್ಠಾನಮಾಡಲು ಯಾರೂ ಯಾರಿಗೂ ಒತ್ತಾಯದಿಂದ ಹೇಳಬೇಕಾದ ಪರಿಸ್ಥಿತಿ ಇರಲಿಲ್ಲ. ಕಾರಣ, ರಾಜನ ಆಳ್ವಿಕೆಯಾಗಲೀ ರಾಜ್ಯವಾಗಲೀ ಇರಲೇ ಇಲ್ಲ – ಧರ್ಮವೇ ಎಲ್ಲರನ್ನೂ ಆಳುತ್ತಿತ್ತು. ಎಂದರೆ ಧರ್ಮದ ಪರಿಜ್ಞಾಪಕ ವಿದ್ಯೆಯು ಪ್ರಚಾರ ಸಾಕಷ್ಟಿದ್ದುದರಿಂದ ವಿಧಿ ವಿಹಿತ ಧರ್ಮದ ಮಹತ್ತ್ವವನ್ನು ಸರ್ವರೂ ಅರಿತಿದ್ದು ತದನುಷ್ಠಾನ ಪರಾಯ-ಣರಾಗಿದ್ದರು. ಅಂತಹ ಸಮಯದಲ್ಲಿ ಜನತೆಯಲ್ಲಿ ಅಶಾಂತತೆಯಾಗಲಿ, ಪರಸ್ವಾಪ-ಹಾರವಾಗಲಿ, ದುರ್ಭಿಕ್ಷವಾಗಲಿ, ಅನ್ಯಾಯಸಾಧಕ ಪಥಪ್ರವೃತ್ತಿಯಾಗಲಿ ಸರ್ವಥಾ ಇದ್ದಿಲ್ಲ. ಕ್ರಮೇಣ ಯುಗಪ್ರಭಾವದಿಂದ ಶಾಸನದ ಆವಶ್ಯಕತೆಯುಂಟಾಯಿತು. ಆಗ ಮರೀಚಿ, ದಕ್ಷಪ್ರಜಾಪತಿ, ಮನು – ಮುಂತಾದ ರಾಜರ್ಷಿಗಳು ಧಾರ್ಮಿಕ ಮತ್ತು ವ್ಯಾವಹಾರಿಕ ಸತ್ತೆಯಿಂದ ರಾಜರಾಗಿ ಆಳಲು ಪ್ರಾರಂಭಿಸಿದರು. ಮತ್ತು ದಿವ್ಯಶಕ್ತಿಯಿಂದೊಡಗೂಡಿದ ವೇದಮಾರ್ಗಾನುಸಾರಿಗಳಾದ ಸ್ಮೃತಿ ಶಾಸ್ತ್ರಾದಿಗಳ ಆದೇಶಾನುಸಾರವಾಗಿ, ಜನತೆಯ ಹಿತವನ್ನು ಸಾಧಿಸಿದರು.

ಹೀಗೆ ಕಾಲ ಕಳೆಯುತ್ತಿರಲು ಕಲಿಮಹತ್ತ್ವವಶಾತ್ ರಾಜರ ಮೂಲಕವೂ ಧಾರ್ಮಿಕ ನ್ಯಾಯ ನಿರ್ಣಯವು ದೊರೆಯುವುದು ದುಸ್ಸಾಧ್ಯವಾದ ಕಾರಣ, ಭಗವಾನ್ ಶಂಕರನು 'ಶಂಕರಾಚಾರ್ಯ' ರೂಪದಿಂದ ಈ ಪವಿತ್ರ ಕರ್ಮಭೂಮಿಯಲ್ಲಿ ಲೋಕಾನುಗ್ರಹವನ್ನೇ ಪ್ರಧಾನ 'ಧ್ಯೇಯವಾಗಿಟ್ಟುಕೊಂಡು ಅವತಾರ ಹೊಂದಿ ದೇಶದ ಚತುರ್ದಿಕ್ಕುಗಳಲ್ಲಿಯೂ ಧರ್ಮೋಪದೇಶಕರಾದ ಆಚಾರ್ಯ' ರನ್ನು ನಿಯಮಿಸಿ, ಅಂಥವರಿಂದಲೇ ಧರ್ಮನಿರ್ಣಯವು ದೊರೆಯುವಂತೆ ವ್ಯವಸ್ಥೆಮಾಡಿ-ದನು. ಅಂತಹ ಧರ್ಮಾಚಾರ್ಯರೆಂದರೆ, "ಆಚಿನೋತಿ ಚ ಶಾಸ್ತ್ರಾರ್ಥಂ ಆಚಾರೇ ಸ್ಥಾಪಯತ್ಯಪಿ। ಸ್ವಯಮಾಚರತೇ ಯಸ್ತು ತಮಾಚಾರ್ಯಂ ಪ್ರಚಕ್ಷತೇ" ಯಾರು ಸ್ವತಃ ತರ್ಕ ವೇದಾಂತಾದಿ ಗಹನ ಶಾಸ್ತ್ರಾಭ್ಯಾಸಮಾಡಿ, ತದುಪದಿಷ್ಟ ಧರ್ಮವನ್ನು ತಾವು ಆಚರಿಸುವುದಲ್ಲದೆ, ಜನತೆಯು ಆಚರಿಸುವಂತೆ ಉಪದೇಶ ಮೂಲಕ ಯತ್ನಿಸುವರೋ ಅವರೇ ಆಚಾರ್ಯರು.

ಧರ್ಮಾಚಾರ್ಯರು, ಸ್ವತಃ ಕರ್ಮದ ನಿರ್ವಹಣೆ ಮಾಡುತ್ತಾ ತಮ್ಮ ವಿಭಾಗಕ್ಕೆ ಸೇರಿದ ಶಿಷ್ಯ ಮತ್ತು ಭಕ್ತಜನರಿಗೆ ಕರ್ತವ್ಯಗಳ ಪರಿಜ್ಞಾನ ಕೊಡುವವರು. ಇವರು ಸಾಮಾನ್ಯವಾಗಿ ಗುರುಗಳೆಂದೂ ಅಥವಾ ಮಠಾಧೀಶರೆಂದೂ ಅನೇಕ ಹೆಸರನ್ನು ಪಡೆದಿರುವರು. 'ಗುರು'ಶಬ್ದವು ಅನೇಕ ಅರ್ಥಗಳ ಬೋಧವನ್ನುಂಟುಮಾಡುವುದು. ಆದಿತ್ಯಾದಿ ಗ್ರಹಗಳಲ್ಲಿ ಪಂಚಮ ಗ್ರಹವೂ, ತಂದೆಯೂ, ಉಪನಯನ ಮಾಡಿದವನೂ, ವಿದ್ಯಾದಾತನೂ, ಅನ್ನದಾತನೂ, ಭಯದಿಂದ ರಕ್ಷಿಸಿದವನೂ ಗುರುವೆನಿಸಿಕೊಳ್ಳುವನು. ಹೀಗೆ ಅನೇಕ ವಸ್ತು ಬೋಧಕವಾಗಿದ್ದರೂ ಗುರುಶಬ್ದವು 'ಗುಕಾರಸ್ತ್ವಂಧಕಾರಃ ಸ್ಯಾತ್ ರುಕಾರಸ್ತನ್ನಿರೋಧಕಃ' ಯಾರು ಅಜ್ಞಾನವೆಂಬ ಕತ್ತಲೆಯನ್ನು ನಿವೃತ್ತಿ-ಪಡಿಸಿ, ಜ್ಯೋತಿರ್ಮಯನಾದ ಪರಮಾತ್ಮತ್ವಕ್ಕೆ ಕೊಂಡೊಯ್ಯಲು ಸಮರ್ಥರೋ ಅವರನ್ನೇ ರೂಢಿಶಕ್ತಿಯಿಂದ ಬೋಧಿಸುವುದು.

ಶಿಷ್ಯರಿಂದ ವಿತ್ತ ಸಂಗ್ರಹಿಸಲು ಯತ್ನಿಸುವ ಗುರುಗಳು ಸುಲಭವಾಗಿ ಸಿಗಬಲ್ಲರು. 'ಶಿಷ್ಯಚಿತ್ತಾಪಹಾರಕಾಃ' ಎಂಬಂತೆ ಶಿಷ್ಯರ ಮನಸ್ತಾಪ ಪರಿಮಾರ್ಜನೆಯನ್ನು ನಿರ್ವಹಿಸಿ, ಚಿತ್ತಕ್ಕೆ ಪ್ರಕಾಶವನ್ನು ಪೊಂದಿಸಲು ಸಮರ್ಥರಾದ ಗುರುಗಳು ವಿರಳ.

ಗುರುಗಳು ಸಂಚಾರ ಕ್ರಮ ಕೈಕೊಳ್ಳುವುದು ಧನಸಂಗ್ರಹಕ್ಕಲ್ಲ; ಕರ್ತವ್ಯ ಕರ್ಮ ಘಟಕವಾದ ಧರ್ಮತತ್ತ್ವೋಪದೇಶ ದ್ವಾರಾ, ದುರ್ಲಭವಾದ ಮನುಷ್ಯಜನ್ಮ-ದಲ್ಲಿ ಪುರುಷನು ಸಾಧಿಸಲರ್ಹವಾದ ಧರ್ಮದ ಜಾಗೃತಿಯುಂಟಾಗಲೆಂದು.

"ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ" ಎಂಬ ಮಾತಿದೆ. ಸುಖಕ್ಕಾಗಿ ದುಡಿಯುವುದು ಮಾನವನ ಸ್ವಭಾವ. ಹೀಗಿರುವಾಗ ಸುಖ ಸಾಧನವಾದ ಪುಣ್ಯದ ಉತ್ಪತ್ತಿಗೆ ಕಾರಣವಾದ ಅನುಷ್ಠಾನವನ್ನು ನಡೆಸಿದರೆ 'ಯತಃ ಅಭ್ಯುದಯ ನಿಃಶ್ರೇಯಸಸಿದ್ಧಿಃ' ಎಂಬ ಧರ್ಮಶಬ್ದಾರ್ಥದ ಫಲರೂಪವಾಗಿ ಇಹದಲ್ಲಿ ಅಭ್ಯುದಯವೂ ಪರದಲ್ಲಿ ನಿಃಶ್ರೇಯಸಾತ್ಮಕ ಮೋಕ್ಷವೂ ಪ್ರಾಪ್ತವಾದೀತು.

"ಶೌಚಂ ದಾನಂ ತಪಃ ಶ್ರದ್ಧಾ ಗುರುಸೇವಾ ಕ್ಷಮಾ ದಯಾ। ವಿಜ್ಞಾನಂ ವಿನಯಃ ಸತ್ಯಮಿತಿ ಧರ್ಮ ಸಮುಚ್ಚಯಃ" ಎಂಬ ವಚನಾನುಸಾರ ಸಾಮಾನ್ಯ ಧರ್ಮರೂಪವಾದ ಶೌಚವೂ ದಾನವೂ ತಪಸ್ಸೂ ಆಸ್ತಿಕತೆಯೂ ಗುರುಸೇವೆಯೂ ಬಾಹ್ಯ ಅಭ್ಯಂತರ ರೂಪ ಇಂದ್ರಿಯನಿಗ್ರಹವೂ ದಯೆಯೂ ಪಾಂಡಿತ್ಯವೂ ವಿನಯವೂ ಪ್ರತಿಯೊಬ್ಬ ವ್ಯಕ್ತಿಗೆ ಅತ್ಯವಶ್ಯಕವಾದದ್ದು. ಇಂದ್ರಿಯನಿಗ್ರಹಾದಿ ವಿಶಿಷ್ಟ ಗುಣ-ಪುಷ್ಕಂಥವನೇ ಜಗತ್ತಿನಲ್ಲಿ ಶ್ರೇಷ್ಠತ್ವ ಪಡೆಯುವನು. ಇದಕ್ಕೆ ಶಂಕರಾಚಾರ್ಯರು, ಭಗವಾನ್ ಶ್ರೀ ರಾಮಚಂದ್ರ – ಮುಂತಾದವರನ್ನು ದೃಷ್ಟಾಂತವಾಗಿ ಕಾಣಬಹುದು.

ಪರಮಾತ್ಮನು ಮನುಷ್ಯನಿಗೆ ಅನುಗ್ರಹಿಸಿರುವ ಬುದ್ಧಿ, ಕೃತ್ಯಾಕೃತ್ಯ ವಿವೇಕ ಸಾಮರ್ಥ್ಯವನ್ನು ಪರಿಗಣಿಸಿದಾಗ, ಇತರ ಯಾವ ಪ್ರಾಣಿಗಳೂ ಇಂತಹ ಸಾಮರ್ಥ್ಯ-

ವನ್ನು ಪಡೆದಿಲ್ಲವೆನ್ನುವುದು ಗೋಚರಿಸದಿರದು. ಆದುದರಿಂದಲೇ ರಾಮ ಕೃಷ್ಣಾದಿ ಅವತಾರಗಳಲ್ಲಿ ತೋರಿಸಿದ ಸಾಮರ್ಥ್ಯವನ್ನು ಇತರ ಅವತಾರಗಳಲ್ಲಿ ಭಗವಂತನು ಪ್ರಕಟಿಸಿರುವುದಿಲ್ಲವೆಂಬುದು ಗಮನಿಸತಕ್ಕದ್ದಾಗಿದೆ. ಹೀಗೆ ಇತರ ಜಂತುವಿಗೆ ಅಲಭ್ಧವಾದ ಬುದ್ಧಿ, ವಿವೇಕಶಕ್ತಿಗಳು ಪರಮಾತ್ಮನ ಕರುಣೆಯಿಂದ ಪ್ರಾಪ್ತವಾಗಿರು-ವಾಗ ಉತ್ತಮ ಫಲ ಪಡೆಯುವುದು ಸರ್ವರ ಕರ್ತವ್ಯ.

ಸಾಮಾನ್ಯವಾಗಿ ಎಲ್ಲಾ ರಾಷ್ಟ್ರಗಳಲ್ಲಿಯೂ ಒಂದಲ್ಲೊಂದು ರೀತಿಯಿಂದ ಕರ್ತವ್ಯಬೋಧಕರು (ಗುರುಗಳು) ಇದ್ದೇ ಇರುತ್ತಾರೆ. ನಮ್ಮ ಭಾರತದಲ್ಲಿ ಈ ಧರ್ಮಬೋಧೆಯು ವಿಶಿಷ್ಟತರದ್ದಾಗಿದೆ. ಸಾಮಾನ್ಯವಾಗಿ ಧರ್ಮಗ್ರಂಥಗಳು ಸಂಸ್ಕೃತಭಾಷೆಯಲ್ಲಿ ಅಡಕವಾಗಿವೆ. ಸಂಸ್ಕೃತ ಭಾಷಾಧ್ಯಯನವೇ ಧರ್ಮ ಮತ್ತು ಸಂಸ್ಕೃತಿಯನ್ನರಿಯಲು ಸಾಧನಮಾರ್ಗ.

ನಮ್ಮಲ್ಲಿ ಸಂಸ್ಕೃತ ಭಾಷಾಭ್ಯಾಸವು ತೀರ ಕೆಳಮಟ್ಟಕ್ಕಿಳಿದಿದೆ. ಸರಕಾರ-ದವರು ಈವರೆಗೆ ಇದಕ್ಕೆ ಸರಿಯಾದ ಪ್ರೋತ್ಸಾಹ ಕೊಟ್ಟಿಲ್ಲ. ಇತ್ತೀಚೆಗೆ ಸಂಸ್ಕೃತ ವಿದ್ಯಾರ್ಜನೆಗೆ ಕೆಲಮಟ್ಟಿಗೆ ಸಹಕಾರ ದೊರೆಯುತ್ತಿದ್ದರೂ ಜನತೆ ಮತ್ತು ಸರಕಾರದವರ ಪೂರ್ಣ ಪ್ರೋತ್ಸಾಹವಿಲ್ಲದೆ ಸಂಸ್ಕೃತಭಾಷೆಯ ಪ್ರಯೋಜನವು ಎಲ್ಲರಿಗೂ ತಕ್ಕಷ್ಟು ದೊರೆಯದಾಗಿದೆ. ಒಟ್ಟಿನಿಂದ ಈ ಭಾಷಾಭಿವೃದ್ಧಿಯ ಬಗ್ಗೆ ವಿಶೇಷ ಗಮನ ಕೊಡತಕ್ಕದ್ದು ಅತ್ಯವಶ್ಯವಾಗಿದೆ.

ವಿವೇಕಶಕ್ತಿ ಪಡೆಯಲರ್ಹನಾದ ಮಾನವನು ಸ್ವಧರ್ಮಾಚರಣೆಯಿಂದ ತನ್ನ ಐಹಿಕಾಮುಷ್ಮಿಕ ಹಿತವನ್ನು ನ್ಯಾಯಧರ್ಮದಲ್ಲಿ ಸಂಪಾದಿಸಲು ಸಮರ್ಥನು.

ಅತ್ಯಂತ ಭಕ್ತಿ ಶ್ರದ್ಧಾಪುರಸ್ಸರವಾಗಿ ಶ್ರೀಗುರು ಶ್ರೀ ಸೀತಾರಾಮ ಚಂದ್ರಾದಿ ದೇವತಾಸೇವೆ ನಡೆಸುವವರಿಗೆ ಉತ್ತಮ ಮಾರ್ಗ ಪ್ರವೃತ್ತಿಯನ್ನೂ ಸುಖಸಮೃದ್ಧಿ-ಗಳನ್ನೂ ಉಂಟುಮಾಡಲೆಂದು ಶ್ರೀ ಸೀತಾರಾಮ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇವೆ.

ಸರ್ವೇ ಚ ಸುಖಿನಃ ಸಂತು
ಸರ್ವೇ ಸಂತು ನಿರಾಮಯಾಃ ।
ಸರ್ವೇಭದ್ರಾಣಿ ಪಶ್ಯಂತು
ಮಾ ಕಶ್ಚಿತ್ ದುಃಖಭಾಗ್ಭವೇತ್
॥ ಶುಭಂ ಭೂಯಾಚ್ಚ ಸರ್ವತಃ ॥

೪. ಭಾರತೀಯ ಸಂಸ್ಕೃತಿ

('ರಾಷ್ಟ್ರಮತ' ೯-೭-೧೯೫೬)

ವಿಶ್ವವಿಖ್ಯಾತ ಸಂಸ್ಕೃತಿಗಳಲ್ಲಿ ಭಾರತೀಯ ಸಂಸ್ಕೃತಿಗೆ ಗಣ್ಯಸ್ಥಾನವಿದೆ. ಸಂಸ್ಕೃತಿಯೆಂದರೇನು ? ಸಂಸ್ಕೃತ ಭಾಷೆಯ ಶಬ್ದಗಳಿಗೆ ನಾನಾಮುಖಗಳಾದ ಅರ್ಥಗಳಿವೆ. ನಾವು ಬಹು ಸುಲಭವಾಗಿ ಯುರೋಪಿನ ಸಂಸ್ಕೃತಿ, ಇಸ್ಲಾಮ್ ಸಂಸ್ಕೃತಿ, ಹಿಂದೂ ಸಂಸ್ಕೃತಿ ಇತ್ಯಾದಿ ಶಬ್ದಗಳನ್ನು ಪ್ರಯೋಗಿಸುತ್ತೇವೆ. ಸಂಸ್ಕೃತಿ ಶಬ್ದದ ಅರ್ಥವನ್ನು ಸ್ವಲ್ಪದರಲ್ಲಿ ಹೇಳಿ ಮುಗಿಸುವಷ್ಟು ಸುಲಭವಾಗಿ ಅದಿಲ್ಲ. ಸಮಯಾವಕಾಶ, ಸ್ಥಳ, ಯೋಗ್ಯತೆಗಳಿಗೆ ತಕ್ಕಂತೆ ಇಲ್ಲಿ ಸ್ವಲ್ಪ ವ್ಯಾಖ್ಯಾನಿಸಬಹು-ದಾಗಿದೆ. ರೂಢಿಶಕ್ತಿ ಅಥವಾ ಸಾಮುದಾಯಿಕ ಶಕ್ತಿಯಿಂದ ಈ ಶಬ್ದಕ್ಕೆ ಸಂಪ್ರದಾಯ, ಪದ್ಧತಿ, ನಡತೆ, ರೀತಿ ಪಾರಂಪರ್ಯ ವರ್ತನೆ, ಆಚಾರ – ಇತ್ಯಾದಿ ಅರ್ಥಗಳನ್ನು ಕಟ್ಟಿಕೊಳ್ಳಬಹುದು. ರೂಢಿಯ ಅರ್ಥವಲ್ಲದೆ ಯೋಗಾರ್ಥವೆಂಬುದು ಇನ್ನೊಂದಿದೆ. ಯೋಗಬಲದಿಂದ ಉಂಟಾಗುವ ಅರ್ಥವನ್ನು ಪರ್ಯಾಲೋಚಿಸಿದರೆ "ಸಮ್ಯಕ್ ಕರೋತಿ ಇತಿ ಸಂಸ್ಕೃತಿಃ" ("ಸಮ್ ಪರಿಭ್ಯಾಂ ಕರೋತೌ ಭೂಷಣೇ ಸಮವಾಯೇ ಚ" – ವ್ಯಾಕರಣ ಸೂತ್ರ) ಉತ್ತಮ ಕೃತಿ, ಚೆನ್ನಾಗಿರುವ ಚೇಷ್ಟೆ, ಶ್ರೇಷ್ಠತಮವಾದ ಕೆಲಸ, ಶ್ರೇಷ್ಠ ಅಲಂಕಾರ, ಭೂಷಣ ಇತ್ಯಾದಿ ಅರ್ಥಗಳಾಗುತ್ತವೆ. ಯಾವ ಉತ್ತಮ ಕೆಲಸಗಳಿಂದ ಸಭ್ಯತೆ ಸಮಾಜ ಶೋಭೆಗಳು ಅಧಿಕವಾಗಿ ಬೆಳಗುವವೋ ಮತ್ತು ಕಲ್ಯಾಣಕಾರಕಗಳೋ ಅವನ್ನು ಸಂಸ್ಕೃತಿ ಎನ್ನಬಹುದು.

ಸಂದರ್ಭವನ್ನು ಅನುಸರಿಸಿ ಶಬ್ದಗಳಿಗೆ ಅರ್ಥಮಾಡುವುದು ಉಚಿತ, ಹರಿ-ಶಬ್ದಕ್ಕೆ ವಿಷ್ಣು, ಸಿಂಹ, ಇಂದ್ರ ಮುಂತಾದ ಹಲವು ಅರ್ಥಗಳಿವೆ. ಆದರೆ ಹರಿಯನ್ನು ಸ್ಮರಿಸು ಎಂದಾಗ ಸಿಂಹವನ್ನು ನೆನಸುವುದಿಲ್ಲ. ಸಂಸ್ಕೃತಿಯು ಮನುಷ್ಯನನ್ನು ಪಶುವರ್ಗದಿಂದ ಪೃಥಕ್ಕರಿಸಿ ಸರ್ವ ಪ್ರಾಣಿಗಳಲ್ಲಿ ಮನುಷ್ಯನು ಶ್ರೇಷ್ಠನೆನ್ನುವುದನ್ನು ತೋರಿಸುತ್ತದೆ. ಆಹಾರ, ನಿದ್ರೆ, ಭಯ, ಮೈಥುನಗಳು ಮನುಷ್ಯನಿಗೂ ಪಶುವಿಗೂ ಸಮಾನವಾಗಿರುವಾಗ ಮನುಷ್ಯನ ಮನುಷ್ಯತ್ವವು ಅವನ ಸಂಸ್ಕೃತಿಯಿಂದ ವ್ಯಕ್ತವಾಗ ಬೇಕು. ಆದುದರಿಂದಲೇ ಸಧರ್ಮ, ಸಮಾನಸಂಸ್ಕೃತಿಗಳಿಂದ ಕೂಡಿದ ಮನುಷ್ಯರ ಸಮುದಾಯಕ್ಕೆ ಸಮಾಜವೆಂದೂ ಪಶುಗಳ ಸಮುದಾಯ ಅಥವಾ ಸಮೂಹಕ್ಕೆ ಸಮಜ ಎಂದೂ ಸಂಸ್ಕೃತ ವಾಙ್ಮಯದಲ್ಲಿ ಸಮಾಜ ಮತ್ತು ಸಮಜ ಶಬ್ದಗಳ ವ್ಯವಹಾರವು ಸುಪ್ರಸಿದ್ಧವಾಗಿದೆ. ಪ್ರಪಂಚದ ಇತರ ಯಾವ ಪ್ರಾಣಿಯಲ್ಲಿಯೂ ಇಲ್ಲದ ಜ್ಞಾನವೆಂಬ ವಿಶೇಷ ಸಾಧನವನ್ನು ಮನುಷ್ಯನಿಗೆ ಮಾತ್ರ ಕೊಡಲಾಗಿದೆ. ಈ ಜ್ಞಾನವನ್ನು ಕೊಡುವುದರ ಜೊತೆಗೆ ಪರಮಾತ್ಮನು ಮನುಷ್ಯನ ತಲೆಯ ಮೇಲೆ ಹಲವು ಹೊಣೆಗಳನ್ನೂ ಹೊರಿಸಿದ್ದಾನೆ. ಮನುಷ್ಯನಾಗಿ ಹುಟ್ಟಿದುದಕ್ಕೆ, ಮಾಡಿಯೇ

ತೀರಬೇಕಾದ ಕರ್ತವ್ಯಭಾಗಗಗಳೇ ಆ ಹೊಣೆಗಳು. ನಮ್ಮ ಪೂರ್ವಜರು ಅವನ್ನು ಯಜ್ಞವೆಂಬ ಹೆಸರಿನಿಂದ ಕರೆದಿದ್ದಾರೆ. ಅಗ್ನಿಯಲ್ಲಿ ದೇವತೋದ್ದೇಶದಿಂದ ಹವಿಸ್ಸನ್ನು ಕೊಡುವುದು ಮಾತ್ರವೇ ಯಜ್ಞವಲ್ಲ. ನಾನಾ ತೆರನಾದ ಯಜ್ಞಗಳಿವೆ. 'ಯಜ್' ಧಾತುವಿಗೆ ಅನೇಕ ಅರ್ಥಗಳಿವೆ.

ರಾಜ್ಯದ ಆಡಳಿತದಲ್ಲಿ ಅರ್ಥಮಂತ್ರಿ ಎಂದು ಮುಂತಾದ ಅಧಿಕಾರಿಭೇದದಿಂದ ಬೇರೆ ಬೇರೆ ಕರ್ತವ್ಯ ಭಾಗಗಳು (ವಿಶೇಷವಾಗಿ ಮಾಡಿಯೇ ತೀರಬೇಕಾದವುಗಳು) ಅವರವರ ಮೈಮೇಲೆ ಹೇಗೆ ಬಿದ್ದಿರುತ್ತವೆಯೋ ಅದರಂತೆಯೇ ಪ್ರತಿಯೊಬ್ಬ ಮನುಷ್ಯನಿಗೂ ಕರ್ತವ್ಯಎಂಬುದು ಇದೆ. ಅದು ಈಶ್ವರಾಜ್ಞೆ ಎಂದರೂ ಸಲ್ಲುತ್ತದೆ. ಭಾರತೀಯ ನಾಗರಿಕನು ತನ್ನ ಕರ್ತವ್ಯವೇನೆಂಬುದನ್ನು ತಿಳಿಯದೆ ವಿದೇಶೀಯ ಸಂಪರ್ಕದಿಂದ ಪ್ರಕೃತಿಗೆ ವಿರುದ್ಧವಾಗಿ ಹೋರಾಡಲು ತೊಡಗಿದ್ದಾನೆ. ವಿಧ್ವಂಸಕ ಹಾಗೂ ವಿಸ್ಫೋಟಕಗಳಾದ ಕೃತ್ರಿಮ ಸಾಧನಗಳಿಂದ ಜಗತ್ತು ಕುಂದಲಿಕ್ಕೆ ಮೊದಲು ಮಾಡಿದೆಯೋ ಎಂಬ ಹಾಗೂ ತೋರುತ್ತದೆ. ಈಗ ಕೃತ್ರಿಮ ಮಳೆ, ಕೃತ್ರಿಮ ಮಕ್ಕಳು, ಕೃತ್ರಿಮ ಜಾನುವಾರುಗಳು, ಎಲ್ಲವೂ ಕೃತ್ರಿಮಗಳಾಗಿ ಉದಯಕ್ಕೆ ಬರುತ್ತದೆ. 'ಸ್ವಾಭಾವಿಕಾತ್ ಕೃತ್ರಿಮಮನ್ಯದೇವ" ಎಂಬ ಮಾತನ್ನು ನೀವು ಕೇಳಿರಬಹುದು. ಸಾಧನವು ಕೃತ್ರಿಮವಾದ್ದಾದರೆ ಅದರಿಂದ ಸಾಧ್ಯವಾದುವೆಲ್ಲ ಕೃತ್ರಿಮವಾದ್ದೇ ಆಗಿರಬೇಕೆಂಬುದೂ ಒಂದು ನ್ಯಾಯ. ಒಂದು ರೋಗವನ್ನು ನಿರ್ಮೂಲಿಸುವೆನೆಂದು ಶಸ್ತ್ರಕ್ರಿಯೆಗೆ ಹೊರಟ ಆಧುನಿಕ ವೈದ್ಯನು ತನ್ನ ಶಸ್ತ್ರಕ್ರಿಯೆ-ಯಿಂದ ಮತ್ತೆ ನಾಲ್ಕು ರೋಗಗಳಿಗೆ ಆಮಂತ್ರಣವನ್ನು ಕೊಡುತ್ತಾನೆ. ಭಾರತೀಯ-ನಾದ ಆಯುರ್ವೇದ ತಜ್ಞನು ಅದೇ ರೋಗಕ್ಕೆ ನಿದಾನವನ್ನು ಮೊದಲು ಕಂಡುಹಿಡಿದು ಅದರ ಬೇರನ್ನೇ ಕಿತ್ತೊಗೆಯುವನು. ಯಂತ್ರಸಾಧನಗಳನ್ನು ತನ್ನ ಸೇವೆಗೆಂದು ಗೊತ್ತುಪಡಿಸಿಕೊಂಡ ನವನಾಗರಿಕನು ಯಂತ್ರಗಳ ಸೇವಕನಾದನು. ಅಥವಾ ಯಂತ್ರಗಳು ತನ್ನ ಸೇವೆಮಾಡಲಿ ಎಂದುಕೊಂಡ ಮನುಷ್ಯನು, ಯಂತ್ರಗಳಿಗೆ ತಾನೇ ಬಲಿಯಾಗಿ ಸಂದನು. ಭಾರತೀಯನ ಶ್ರೇಷ್ಠತೆಯು ಆ ರೀತಿಯದ್ದಲ್ಲ, ಸಮಬುದ್ಧಿ. ಅಹಿಂಸೆ, ಸತ್ಯ, ಶೌಚ, ಇಂದ್ರಿಯ ಸಂಯಮ, ಕ್ಷಾಂತಿ, ಅನಸೂಯೆ, ಅಕಾರ್ಪಣ್ಯ, ನಿಸ್ಪೃಹತೆ – ಈ ಗುಣಗಳಿಂದ ಕೂಡಿದ ಶುದ್ಧಾಚಾರವು ನಮಗೆ ಅಲಂಕಾರ. ಅದುವೇ ಭಾರತೀಯನ ಹೆಗ್ಗುರುತು. ಅದುವೇ ನಮ್ಮ ಈ ಸಂಸ್ಕೃತಿ ಶಬ್ದದ ಫಲಸ್ವರೂಪವಾದ ಅರ್ಥ. ಈ ವಿಧದ ಆಚರಣೆಯೇ ಲೋಕಕ್ಕೆ ಕ್ಷೇಮವನ್ನು ಉಂಟುಮಾಡುತ್ತದೆ.

ಈ ಆತ್ಮಗುಣದ ಅಥವಾ ಆತ್ಮವಿಶ್ವಾಸದ ಬಲದಿಂದಲೇ ಏಕಾಗಿರಬಾರದು ? ಕಳೆದ ಅನಾವೃಷ್ಟಿಯ ವೇಳೆಯಲ್ಲಿ ತೀರ್ಥಹಳ್ಳಿಯ ಶಿವಾಲಯದಲ್ಲಿ ಪರ್ಜನ್ಯ ಮಂತ್ರವನ್ನು ಜಪಿಸಿ ಮಳೆ ಬೀಳಿಸಲಾಗಿದೆ. ನೀವು ಈ ವಿಷಯವನ್ನು ಬೇರೆ ಜನರಿಂದಲೂ ಕೇಳಿ ಯಥಾರ್ಥವಿದ್ದರೆ ನಂಬಿಕೊಳ್ಳಬಹುದು.

ಶಾಂತಿ, ಸೌಹಾರ್ದ, ಅಹಿಂಸೆ – ಈ ಮಂತ್ರಗಳನ್ನು ಎಲ್ಲ ಕಡೆಗಳಲ್ಲಿ ಹೇಳಲಾ–ಗುತ್ತದೆ. ಎಲ್ಲರೂ ಶಾಂತಿಪಾಲನೆಗಾಗಿ ಹೆಣಗಾಡುತ್ತೇವೆ ಎನ್ನುತ್ತಾರೆ. ದೇಶ ವಿದೇಶಗಳ ರಾಜಕೀಯ ರಂಗವಲ್ಲಿ ಕೂಡ ಇದೇ ಮಾತು ಪ್ರಮುಖ ಮುಂದಾಳುಗಳಿಂದ ಹೊರಡುತ್ತಿರುತ್ತದೆ. ಆದರೆ ಆಚರಣೆಯಲ್ಲಿ ಒಳಗೊಳಗೇ ಸೈನ್ಯಸಂಗ್ರಹ, ವಿಧ್ವಂಸಕ ಜಲಜನಕ, ವಿಷಜನಕ, ಮಾರಣಾಸ್ತ್ರಗಳ ನವನವೀನ ಸಂಶೋಧನೆಗಳು ನಡೆಯುತ್ತಿ–ರುತ್ತವೆ. ಇದು ಬರೀ ಬಾಯಿಯ ಶಾಂತಿಯಲ್ಲದೆ ಮತ್ತೇನು? ಎಲ್ಲವೂ ಕೃತ್ರಿಮವಾಗಿಯೇ ತೋರುತ್ತವೆ. ಕೃತ್ರಿಮ ಫಲವನ್ನೇ ಅವರು ಉಣ್ಣುವರೆಂಬುದನ್ನು ಬೇರೆ ಹೇಳಬೇಕೆ? ಜನಮತಕ್ಕೆ ಬೆಲೆ ಕೊಡಲಾಗುವ ಈ ಕಾಲದಲ್ಲಿ ಜನಮತವನ್ನು ಕೃತ್ರಿಮ ರೀತಿಯಿಂದಲೇ ಸಂಗ್ರಹಿಸುತ್ತಾರೆ. ಶ್ರೀ ಪ್ರಭುದತ್ತ ಬ್ರಹ್ಮಚಾರಿಗಳು ನೆಹರು ಅವರಿಗೆ ವಿರೋಧ ಪಾರ್ಟಿಯವರಾಗಿ ಹೆಸರು ಕೊಟ್ಟಿದ್ದಾಗ ಜಯಾಪಜಯಗಳ ಕುರಿತು ಪತ್ರಿಕೆಗಳೇ ಹೇಗೆ ಕೂಗಿಕೊಂಡಿದ್ದವು, ಏನೆಲ್ಲ ನಡೆದಿದೆ – ಎಂಬುದನ್ನು ನೀವು ಓದಿರುವಿರಿ.

ಸತ್ಯ ಅಹಿಂಸೆ ಶಾಂತಿಗಳಿದ್ದಲ್ಲಿ ನಿರ್ಭಯವಿರಲೇ ಬೇಕು. ಬಸವನೊಡನೆ ಬಾಲವೂ ಹೋಗುವಂತೆ ಅಹಿಂಸೆಯ ಜೊತೆಗೆ ನಿರ್ಭಯವೂ ಹಿಂದಿನಿಂದ ಇರಲೇಬೇಕು. ಶಾಂತಿ ಪಾಠಗಳನ್ನು ಬಾಯಿಯಿಂದ ತೋರಿಕೆಗೆ ಮಾತ್ರ ಜಪಿಸುವ ಎಲ್ಲಾ ರಾಷ್ಟ್ರಗಳೂ ಇಂದು ಭಯದಿಂದ ನಡುಗುತ್ತಲೇ ಇವೆ. ಇದೇಕೆ? ಅಹಿಂಸೆ, ನಿರ್ಭಯ ಇವು ಒಂದನ್ನು ಬಿಟ್ಟು ಮತ್ತೊಂದು ಇರಲಾರವಷ್ಟೆ. ಅಹಿಂಸೆ ಇದ್ದಲ್ಲಿ ನಿರ್ಭಯ ಇರಲೇ ಬೇಕು. ಎಲ್ಲಿ ಅಹಿಂಸೆ ಇಲ್ಲ, ಅಲ್ಲಿ ನಿರ್ಭಯವಿಲ್ಲ; ಪ್ರತ್ಯುತ ಭಯವೇ ಇರುತ್ತದೆ. ಅಮೇರಿಕವು ಸೈನಿಕ ಒಪ್ಪಂದವನ್ನು ಏಕೆ ಮಾಡುತ್ತದೆ? ಅಹಿಂಸಾ ಮಂತ್ರವನ್ನು ಜಪಿಸುವ ನಿರ್ಭಯ ರಾಷ್ಟ್ರಕ್ಕೆ ಸೈನಿಕರ ಅವಶ್ಯಕತೆಯೆ? ರಷ್ಯವು ತಟಸ್ಥ ರಾಷ್ಟ್ರ–ಗಳನ್ನು ಹೆಚ್ಚು ಮಾಡುವುದರ ರಹಸ್ಯವೇನು? ಅವು ಒಂದು ಇನ್ನೊಂದಕ್ಕೆ ಬೆದರುತ್ತವೆ. ಅವಕ್ಕೆ ಆಕ್ರಮಣ ಮನೋವೃತ್ತಿಯು ಬಿಟ್ಟು ಹೋಗಿಲ್ಲ. ಆದುದ–ರಿಂದಲೇ ಪರಕೀಯ ಆಕ್ರಮಣದ ಭಯವೂ ಬೇಕಾದಷ್ಟು ಇವೆ.

ಸ್ತ್ರೀಯರಿಗೆ ಸ್ವಾತಂತ್ರ್ಯ ಬೇಕೆನ್ನುತ್ತಾರೆ. ಹಿಂದೂಕೋಡು ಮಸೂದೆ ಮುಂದೆ ಬರುವುದು ಇದಕ್ಕೆ ತುಂಬಾ ಅನುಕೂಲವೆಂದು ಇಂದಿನ ಶಿಕ್ಷಿತ ಮಹಿಳೆಯರೂ ನಂಬಿದ್ದಾರೆ. ಅಂತಹರು ಇದರ ಪರಿಣಾಮವನ್ನು ಸ್ವಲ್ಪ ಲಕ್ಷಿಸಬೇಕು. ದಾಂಪತ್ಯ ವಿಚ್ಛೇದವನ್ನೇ ತಕ್ಕೊಳ್ಳಿರಿ. ಜಂನೆಯ ವಯಸ್ಸಿನಲ್ಲಿ ವಿಚ್ಛೇದಮಾಡಿಸಿಕೊಂಡರೆ ಮತ್ತೆ ಆ ಸ್ತ್ರೀಯ ಗತಿ? ಇಂತಹ ಅನೇಕ ಪ್ರಶ್ನೆಗಳು ಇವೆ. ಯಾರಾದರೂ ಸಮರ್ಪಕವಾಗಿ ಉತ್ತರಿಸಬಲ್ಲಿರಾ? ಸ್ತ್ರೀಯರ ಸ್ವಾತಂತ್ರ್ಯಕ್ಕೆ ಧಕ್ಕೆ ಬರಲಿಲ್ಲವೆಂದೇ ಹೇಳಬಲ್ಲೆವು. ಹೆಚ್ಚು ವಾದಿಸುವುದಾದರೆ ಸ್ತ್ರೀಯರಿಗಿರುವ ಸೌಲಭ್ಯವು ಭಾರತದಲ್ಲಿ ಪುರುಷರಿಗೆ ಸರ್ವಥಾ ಇಲ್ಲವೆಂಬುದನ್ನು ಒಪ್ಪಲೇಬೇಕಾದೀತು. ಸ್ತ್ರೀಯರನ್ನು ಕುರಿತು

'ನೀನು ಗದ್ದೆ ಉಳು, ಕೋರ್ಟು ಕಚೇರಿಗಳಲ್ಲಿ ಅಲೆದಾಡು' ಇವೇ ಮೊದಲಾಗಿ ಯಾವನೊಬ್ಬನೂ ಅಂತಹ ಹೊರೆಗಳನ್ನು ಸ್ತ್ರೀಗೆ ಹೊರಿಸುವುದಿಲ್ಲ. ಜೀವನ ಸಂಗ್ರಾಮದ ಮುಖ್ಯ ಹೋರಾಟವೆಲ್ಲವೂ ಹಾಗೂ ಪರಿಶ್ರಮದ ದೊಡ್ಡ ದೊಡ್ಡ ಹೊರೆಗಳೆಲ್ಲವೂ ಪುರುಷನ ಮೇಲೆಯೇ ಬಿದ್ದಿವೆ. ಅರ್ಥಾತ್ "ಜವಾಬ್ದಾರೀ" ಹೊರೆಯು ಪುರುಷನ ತಲೆಯ ಮೇಲೆಯೇ ಇದೆ. ಮುಂದಿನ ಉತ್ತಮ ಜನಾಂಗದ ತಯಾರಿಕೆ, ಶಿಶುಪೋಷಣೆ, ಮನೆಯೊಳಗೇ ಇದ್ದು ಮಾಡತಕ್ಕ ಲಲಿತಕಾರ್ಯ– ಇವುಗಳೆಲ್ಲ ಸ್ತ್ರೀಯರ ಪಾಲಿನವು. ಸ್ತ್ರೀಯರಷ್ಟು ಶಾಂತಿ ಸಮಾಧಾನಗಳಿಂದ ಮಕ್ಕಳನ್ನು ನೇರವಾದ ದಾರಿಗೆ ಹಚ್ಚುವ ಕೆಲಸವು ಪುರುಷನಿಗೆ ಸಾಧ್ಯವಿಲ್ಲ. ಅಂತಹ ಸ್ಥೈರಣೆ ಪುರುಷನಿಗಿಲ್ಲ. ಮಕ್ಕಳು ಅತ್ತರೆ, ಗಲಾಟೆ ಮಾಡಿದರೆ, ಗುಲ್ಲೆಬ್ಬಿಸಿ ಶಾಂತಿ ಭಂಗಮಾಡಿದರೆ, ಒಮ್ಮೆ ಸ್ಥೈರಣೆಯ ವಾಕ್ಯಗಳನ್ನು ನುಡಿದಾನು, ಕೇಳಿದರಾಯಿತು, ಕೇಳದೆ ಹೋದರೆ ಖಟಾಟೋಪದಿಂದ ಗದರಿಸಿ ಬಡಿದು ಭಂಗಿಸಿ ನೂಕಿಬಿಟ್ಟಾನು. ಅಂತಹ ವಿಷಯದಲ್ಲಿ ಸ್ತ್ರೀಯರ ಸ್ಥೈರಣೆ, ಶಾಂತಿ, ಸಮಾಧಾನಗಳು ಇವನಿಗೆ ಎಲ್ಲಿಂದ ಬಂದಾವು ? ಶಿಕ್ಷಿತರೆನ್ನಿಸಿಕೊಂಡ ಈಗಿನ ಪುರುಷರಿಗೆ ಧರ್ಮ, ಆಚಾರ ಪದ್ಧತಿ, ಮಡಿ, ಮೈಲಿಗೆ, ಭಕ್ತಿ – ಇವುಗಳ ಕುರಿತು ಸ್ತ್ರೀಯರಷ್ಟು ಖಂಡಿತವಾಗಿ ಗೊತ್ತಿಲ್ಲ. ಊಟಕ್ಕೆ ಕುಳಿತಾಗ ಮೊದಲಾಗಿ, ಕಡುಬು ಎಲೆಮೇಲೆ ಬೀಳುವುದನ್ನು ನೋಡಿ ಇಂದು ಚೌತಿ, ಇಂದು ಹಬ್ಬ, ಇಂದು ಸಂಕ್ರಮಣ, ಅಮಾವಾಸ್ಯೆ – ಎಂಬುದನ್ನು ಶಿಕ್ಷಿತ ಯುವಕನು ಗೃಹಿಣಿಯಿಂದ ತಿಳಿಯುತ್ತಾನೆ. ಆಚಾರದ ಗಂಧವೂ ಇಲ್ಲದ ಅಂತಹ ಪುರುಷನು ಈ ಹೆಣ್ಣಿಗೆ ಮರುಳಾಗುತ್ತಾನೆ. ಮದುವೆಯಾಗಿ ಬಂದ ನವಯುವತಿಯು ಮಡಿಯನ್ನುಡುವುದು, ದೀಪ ಉರಿಸುವುದು, ರಂಗವಲ್ಲಿ ಹಾಕುವುದು, ಹೊಸ್ತಿಲ ಮೇಲೆ ಪ್ರಾತಃ ಕಾಲದಲ್ಲಿ ಹೂವುಗಳನ್ನಿಟ್ಟು ನಮಸ್ಕರಿಸಿ ಪ್ರಸಾದವನ್ನು ಮುಡಿದುಕೊಳ್ಳುವುದು – ಇವುಗಳನ್ನೆಲ್ಲ ತನಗೆ ತಿಳಿಯದಿದ್ದರೂ ಪರಂಪರಾಪದ್ಧತಿ–ಯಂತೆ ಅಥವಾ ಹಿರಿಯ ಮುತ್ತೈದೆಯರ ಸೂಚನೆಯಂತೆಯಾದರೂ ಮಾಡುತ್ತಾಳೆ. ಅವಳಿಗೆ ಒಲಿದ ತರುಣನು ಆಕೆಯ ಸಹವಾಸದಿಂದ ದೇವರ ತಲೆಗೆ ಮಧ್ಯಾಹ್ನದಲ್ಲಿ ಒಂದಿಷ್ಟು ನೀರು ಹೊಯ್ಯುವುದೋ ಕಾಲು ತೊಳೆದು ಮಡಿಯುಟ್ಟುಕೊಳ್ಳುವುದೋ ಅಥವಾ ಕೈ ಮುಗಿದು ಧ್ಯಾನಿಸುವುದೋ ಮಡಿಯುಟ್ಟು ಊಟಕ್ಕೆ ಕುಳಿತುಕೊಳ್ಳು–ವುದೋ ಇವೇ ಮುಂತಾದ ಪದ್ಧತಿಯನ್ನು ಅನುಸರಿಸುತ್ತಾನೆ. ಸನಾತನ ಸಂಸ್ಕೃತಿ ಎಂಬುದು ಇಷ್ಟಾದರೂ ಉಳಿದಿದ್ದರೆ ಅದು ಸ್ತ್ರೀಯರಿಂದಲೇ ಪ್ರಾಯಶಃ ಉಳಿದಿದೆ. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" "ಸ್ತ್ರೀಯಃ ಶ್ರಿಯೋ ಗೃಹಸ್ಯೋಕ್ತಾಃ" ಇತ್ಯಾದಿಯಾಗಿ ಮನು ಹೇಳಿದ್ದಾನೆ. ಸ್ಮೃತಿಕಾರರು ಹೀಗೆ ಹೇಳಿದ ಮೇಲೆ ಸ್ತ್ರೀಯರ ಪೂಜ್ಯತೆಯೇನು ಸಾಮಾನ್ಯವೆ? ಆ ಕುರಿತು ಇನ್ನೂ ಹೇಳುವೆವು.

ಭಾರತೀಯ ಆಶ್ರಮಧರ್ಮಗಳನ್ನು ವಿಚಾರಿಸಲಾಗಿ ನಾಲ್ಕನೆಯದಾದ ಸಂನ್ಯಾಸಾಶ್ರಮವೆಂಬುದು ಕಡೆಯ ಮೆಟ್ಟಿಲಿನದು ಮತ್ತು ಸಮಸ್ತ ಜನರಿಂದ ಪೂಜ

ನೀಯವಾದುದು. ಸಂನ್ಯಾಸಿಯು ಯಾರನ್ನೂ ನಮಸ್ಕರಿಸಬೇಕಾಗಿಲ್ಲ. ಪರಿವ್ರಾಜಕರು ಸರ್ವತಂತ್ರ ಸ್ವತಂತ್ರರು. ಮಠಾಧೀಶ್ವರರಾದ ನಮ್ಮಂತಹವರು ಸ್ವಕೀಯ ಅಭ್ಯುದಯಕ್ಕಾಗಿಯೋ ತಮ್ಮ ಗ್ರಹಚಾರ ದೋಷನಿವೃತ್ತಿಗಾಗಿಯೋ ಏನೊಂದನ್ನೂ ಮಾಡುವುದಿಲ್ಲ. ಲೋಕಕಲ್ಯಾಣಕ್ಕಾಗಿ ಮಾಡುತ್ತಾರೆ. ಎಲ್ಲರಿಗಿಂತಲೂ ಮೇಲಿನ ಸ್ಥಾನವು ಸಂನ್ಯಾಸಿಗೆ ಕೊಡಲ್ಪಟ್ಟಿದೆ. ತನ್ನ ಪೂರ್ವಾಶ್ರಮದ ಜನಕನು ಇದಿರಲ್ಲಿ ಬಂದರೂ ಸಂನ್ಯಾಸಿಯು ಅವನಿಗೆ ನಮಸ್ಕರಿಸಬೇಕಾಗಿಲ್ಲ. ಹೆತ್ತ ತಾಯಿಯನ್ನು ಕಂಡರೆ ತಾನು ತ್ರಿಭುವನತಿಲಕನೇ ಆಗಿದ್ದರೂ ಆ ಸಂನ್ಯಾಸಿ ಆಕೆಗೆ ಎರಗಲೇ ಬೇಕು. ನಮಸ್ಕರಿಸಲೇ ಬೇಕು. ಆದುದರಿಂದ ತಾಯಿಯ ಸ್ಥಾನವು ತಂದೆಯ ಸ್ಥಾನಕ್ಕಿಂತಲೂ ಮಿಗಿಲಾದುದೆಂಬುದನ್ನು ಒಂದು ದೃಷ್ಟಿಯಲ್ಲಿ ಒಪ್ಪಿಕೊಳ್ಳಬೇಕು. ಸ್ತ್ರೀಯರು ಮನೆಯೊಳಗೆ ಇರುವರೆಂಬ ಮಾತ್ರದಿಂದ ಹೀನೆಯರೆಂದಾಗಲೀ ಹೊರಗಿನ ವ್ಯವಹಾರ ಕ್ಷೇತ್ರದಲ್ಲಿದ್ದ ಮಾತ್ರಕ್ಕೆ ಅಹೀನೆಯರೆಂದಾಗಲೀ ಯಾರೂ ಭಾವಿಸಬೇಡಿರಿ. ಅಮೂಲ್ಯವಾದ ವಜ್ರ ವೈಡೂರ್ಯ ಮೊದಲಾದವನ್ನು ಪ್ರಾಯಃ ಭದ್ರವಾಗಿಯೇ ಇಡಲಾಗುತ್ತದೆ. ಸ್ತ್ರೀಯರು, ರತ್ನಸಮಾನರು ಅಥವಾ ರತ್ನಗಳೇ. ಉತ್ತಮ ಸ್ತ್ರೀಯರು, ಕುಲಕುಮಾರಿಕೆಯರು, ಸಾಧ್ವೀಮಣಿಯರು, ರಾಷ್ಟ್ರದ ಅಲಂಕಾರಗಳು. ರಾಷ್ಟ್ರಗಳು ಕುಲಯುವತಿಯರಿಂದ ಭೂಷಿಸಲ್ಪಡುತ್ತವೆ. ಅವರು ಕೆಟ್ಟರೆ, ರಾಷ್ಟ್ರದ ಅಲಂಕಾರ ಕೆಟ್ಟಿತು. ಇಂತಹ ಉಚ್ಚೋಚ್ಚಸ್ಥಾನದಲ್ಲಿ ಮೆರೆಯುತಕ್ಕ, ಮಿನುಗತಕ್ಕ, ಸ್ತ್ರೀಯರು ಇಂದು ಸೈನಿಕೆಯರಾಗಿಯೋ ಇನ್ನೊಂದಾಗಿಯೋ ನಿರಂಕುಶರಂತೆ ನೀತಿ ನಿಯಮಗಳಿಲ್ಲದೆ ಓಡಾಡುತ್ತಿರುವುದು ಭಾರತಕ್ಕೆ ಲಾಂಛನವೇ ಸರಿ

ಭಾರತೀಯ ಸಂಸ್ಕೃತಿ, ಭಾರತೀಯ ಸಭ್ಯತೆ ಎಂದರೆ ಸಂಪ್ರದಾಯದ ಯಾಂತ್ರಿಕ ಅನುಕರಣವೆಂದೂ ಭಾರತೀಯರೆಂದರೆ ಸಂಪ್ರದಾಯಶರಣರಾದ ಮನುಷ್ಯರು – ಎಂದರೆ ಸಂಪ್ರದಾಯವನ್ನು ಸ್ವಲ್ಪವೂ ತಪ್ಪದೆ ಅನುಸರಿಸಬೇಕೆನ್ನುವ ಯಾಂತ್ರಿಕ ಮನುಷ್ಯರು ಅಥವಾ ರೂಢಿವಾದಿಗಳೆಂದೂ ವಿಚಾರಶಕ್ತಿ, ವಿಮರ್ಶಕಸ್ವಭಾವ, ಚಿಕಿತ್ಸಕ ಬುದ್ಧಿ ಇವರಲ್ಲಿ ಕೆಡಿಲು ಎಂದೂ ಕೆಲವರ ಹೇಳಿಕೆಯಿದೆ ದೂರದೃಷ್ಟಿ, ಚಿಕಿತ್ಸಕ ಬುದ್ಧಿ ಇತ್ಯಾದಿಗಳು ಯಾರಿಗಿವೆ ಎಂಬುದನ್ನು ನೋಡೋಣ. ನಮ್ಮದೇಶಕ್ಕೆ ಘಟನಾ ಸೂತ್ರವನ್ನು ಲಕ್ಷಲಕ್ಷವೋ ಇನ್ನೆಷ್ಟೋ ಹಣ ವೆಚ್ಚಮಾಡಿ ಬಹುಪ್ರಯತ್ನದಿಂದ ಬಹಳ ವಿಮರ್ಶಿಸಿ, ಅನೇಕ ದೂರದರ್ಶಿಗಳು ಸೇರಿ ತಯಾರಿಸಿದ್ದಿವೆ. ಅಷ್ಟು ಖರ್ಚು ತಗಲಿಸಿ, ಆ ರೀತಿ ಪರಿಶ್ರಮಪಟ್ಟು, ತಯಾರಿಸಿದ ಆ ಶಾಸ್ತ್ರಸೂತ್ರಗಳು ಪರಿಶುದ್ಧವಾಗಿ ಶಾಶ್ವತವಾಗಿ ತಯಾರಾಗಿವೆ ಎನ್ನಲು ಇನ್ನೂ ಬರುವಂತಿಲ್ಲ. ಜಮೀನು ದಾರೀ ಉನ್ಮೂಲನದ ಕಾನೂನಿಗೆ ವಿರೋಧವಾಗಿ ಸುಪ್ರೀಮ್ ಕೋರ್ಟ್ ಮೊನ್ನೆ ಮೊನ್ನೆ ತೀರ್ಪು ಕೊಟ್ಟಿತು. ಇನ್ನು ಅದನ್ನು ತಿದ್ದಬೇಕು. ಗೋವಧನಿಷೇಧವು ಘಟನೆಯಲ್ಲಿ ಇದೆ. ಪರಂತು ಅದನ್ನು ಜಾರಿಗೆ ತರಬೇಕೆಂದು ಹಲವಾರು ಮುಂದಿ ಪೆಟ್ಟುತಿಂದು ಜೈಲಿಗೆ ಹೋಗಿ ಪಡಬಾರದ ಯಾತನೆಗಳನ್ನು ಅನುಭವಿಸಬೇಕಾಯಿತು.

ಘಟನಾಸೂತ್ರಗಳ ಅಪೂರ್ಣತೆಯನ್ನು ಇಲ್ಲಿ ಏತಕ್ಕೆ ಪ್ರಸ್ತಾಪಿಸಿದುದೆಂದರೆ, ನಮ್ಮಲ್ಲಿ ಭಾರತೀಯ ಸಭ್ಯತೆಗೆ ಸರಿಯಾದ ರಾಜ್ಯಾಡಳಿತಕ್ಕೆ ಅಥವಾ ಅವಕ್ಕಿಂತಲೂ ಮಹತ್ತಾದ ಕೆಲಸಕ್ಕೆ ಬೇಕಾಗುವ ಬೌದ್ಧಿಕ ಸಾಧನಗಳಿಗಾಗಲೀ ರಾಜನೀತಿಗ್ರಂಥಗಳಿಗಾಗಲೀ ದಾರಿದ್ರ್ಯವಿಲ್ಲ. ಚಾಣಕ್ಯನೀತಿ, ಬೃಹಸ್ಪತಿನೀತಿ, ಕಾಮಂದಕೀ ನೀತಿ, ಶುಕ್ರನೀತಿ–ಮೊದಲಾದ ರಾಜನೀತಿ ಗ್ರಂಥಗಳನ್ನು ಬರೆದ ಮಹಾನುಭಾವರು ಸ್ವಯಂಪ್ರಭೆಯಿಂದ ಬೆಳಗುತ್ತಿರುವ ಆ ಗ್ರಂಥಗಳನ್ನು ಬರೆಯುವಾಗ, ರಾಜ್ಯದ ಅಥವಾ ಪ್ರಜೆಗಳ ಹಣ ಒಂದಿಷ್ಟನ್ನೂ ವ್ಯಯಮಾಡಿಲ್ಲ. ಪೈ ಖರ್ಚಿಲ್ಲದೆ, ನಿಃಸ್ವಾರ್ಥಬುದ್ಧಿಯಿಂದ ಬರೆದ ಆ ಗ್ರಂಥಗಳು ಇಂದಿಗೂ ಪ್ರಯೋಗಕ್ಕೆ ತಕ್ಕುದಾಗಿ ಶತ ಶತಮಾನಗಳಿಂದ ಯಾವನೊಬ್ಬನ ತಿದ್ದುಪಡಿಯೂ ಇಲ್ಲದೆ ಇದ್ದಂತೆಯೇ ಬೆಳಗುತ್ತಿವೆ. ಅವುಗಳಲ್ಲಿ ಏನು ಹೇಳಿದೆ ಎಂಬುದನ್ನು ತಿಳಿಯುವ ಅಪೇಕ್ಷೆಯಾದರೂ ಎಷ್ಟು ಮಂದಿ ದೇಶ ಪ್ರೇಮಿಗಳಿಗಿದೆ? ತಮ್ಮನ್ನು ದೊಡ್ಡದು ಮಾಡಿಕೊಂಡು ಮಾತಾಡುವ ದೇಶದ ಭಾಗ್ಯವಿಧಾತರಿಗೆ ಸಮುದ್ರದಾಚೆಯ ವಿಧರ್ಮೀಯರ ಅಪೂರ್ಣ ಮತ್ತು ಅರ್ಥರಹಿತ ಘಟನೆಗಳನ್ನು ಬಹುದ್ರವ್ಯವ್ಯಯದಿಂದ ಇಲ್ಲಿ ತಂದು ಭಟ್ಟಿ ಇಳಿಸಬೇಕಾಯಿತು.

ನಾವು ಪ್ರಕೃತ ಸಂಘಟಿತರಾಗಬೇಕಾದುದು ಎಲ್ಲದಕ್ಕಿಂತ ಮುಖ್ಯವಾದ ಕೆಲಸ. ಒಂದೆಡೆಯಲ್ಲಿ ಜನರು ಸೇರಿದ ಮಾತ್ರಕ್ಕೆ ಸಂಘಟನೆಯಾಗಲಿಲ್ಲ. ಸಂಘಟನೆ ಎಂದರೆ "ಏಕಾತ್ಮತೆ". ಒಂದೇ ಭಾವನೆ ಎಲ್ಲರಲ್ಲಿ ಮೂಡಿ ಬರಬೇಕು. ದೇಶಕಲ್ಯಾಣಕ್ಕೆ ಇದು ಮುಖ್ಯ ಸಾಧನ. ಹಿಂದಿನ ಕಾಲದಲ್ಲಿ ಅಂತಹ ಸಂಘಟನೆಯಿಂದ ಮಾತ್ರವೇ (ರಾಜನಿಲ್ಲದೆಯೇ)ಸುಕ್ಷೇಮದಿಂದ ಎಲ್ಲವೂ ನಡೆಯುತ್ತಿತ್ತು. ನೋಡಿರಿ.

ನ ರಾಜ್ಯಂ ನೈವ ರಾಜಾಽಽಸೀತ್ ನ ದಂಡೋ ನ ಚ ದಾಂಡಿಕಃ ।
ಧರ್ಮೇಣೈವ ಪ್ರಜಾಃ ಸರ್ವೇ ರಕ್ಷಂತಿ ಸ್ಮ ಪರಸ್ಪರಂ ॥

ಅರ್ಥವು ಸ್ಪಷ್ಟ. ಸಮಾಜವು ಸುಸಂಘಟಿತವಾಗಿದ್ದರೆ ಸಂಸ್ಕೃತಿಯು ಸುರಕ್ಷಿತವಾಗಲು ಶಕ್ಯವಿದೆ. ಸಂಸ್ಕೃತಿ ಎಂದರೆ ಧರ್ಮ, ಶೌಚ, ಅಹಿಂಸಾ, ಸತ್ಯ, ಅನಸೂಯಾ–ಎಂಬ ಐದು ಗುಣಗಳಿಂದ ಕೂಡಿದ ಕರ್ಮ, ಅಥವಾ ಈ ಒಂದೊಂದೂ ತತ್ತ್ವಗಳನ್ನೊಳಗೊಂಡ ಎಲ್ಲಾ ಕರ್ಮಗಳ ಸಮುಚ್ಚಯ. ಧರ್ಮಾಚಾರ್ಯ ಪೀಠದಲ್ಲಿ ಸಂಸ್ಥಿತರಾದ ನಮಗೆ ಅಂದರೆ ಯತಿಗಳಿಗೆ, ಅಧರ್ಮ ನಿರ್ಮೂಲನ, ಧರ್ಮೋದ್ಧಾರ – ಇವುಗಳು ಕರ್ತವ್ಯಗಳಾಗಿವೆ. ನಾವು ವ್ಯವಹಾರಕ್ಕೆ ಸಂಬಂಧಿಸಿದವರಿಗೆ ನ್ಯಾಯದಾನವನ್ನು ಕೊಡುವವರಲ್ಲ. ವ್ಯವಹಾರಕ್ಕೆ ರಾಜದಂಡವಿದೆ. ಧರ್ಮದಂಡದ ಸರ್ವಸ್ವಾಮ್ಯವು ನಮಗೆ ಮೀಸಲು. ಹಾಗಿದ್ದರೂ ವ್ಯವಹಾರವು ಧರ್ಮವನ್ನು ಮೀರಿದಾಗ ನಾವೇ ಕೇಳುವವರಿದ್ದೇವೆ. ವಿಚಾರವಂತರಾಗಿದ್ದು ಧರ್ಮಕ್ಕೆ ತಪ್ಪಿ ನಡೆದಾಗ ಗುರುಪೀಠದಿಂದ ಮಾರ್ಗದರ್ಶನವಾಗಬೇಕು.

ಗುರುರಾತ್ಮವತಾಂ ಶಾಸ್ತಾ ರಾಜಾ ಶಾಸ್ತಾ ದುರಾತ್ಮನಾಮ್ ।
ಅಥ ಪ್ರಚ್ಛನ್ನಪಾಪಾನಾಂ ಶಾಸ್ತಾ ವೈವಸ್ವತೋ ಯಮಃ ॥

ವಿಚಾರವಂತರು ಧರ್ಮದಿಂದ ಸಮಾಜವನ್ನು ಕಟ್ಟಲಿ. ಸ್ತ್ರೀಯರು ಉತ್ತಮ ಗುಣ ನಡತೆ ಶೀಲ ಸತ್ಸ್ವಭಾವಗಳಿಂದ ಸಂಸ್ಕೃತಿಯನ್ನು ಬೆಳಗಲಿ. ಧರ್ಮಕ್ಕೆ ಜಯವಾಗಲಿ.

೫. ಗೀರ್ವಾಣವಾಣಿಯ ಮಹತ್ತ್ವ

('ರಾಷ್ಟ್ರಮತ' ೪-೫-೧೯೫೬)

ಗೀರ್ವಾಣವಾಣಿ ಎಂದರೆ ದೇವತೆಗಳ ಮಾತು ಎಂದರ್ಥ. ಇದೇ ಸಂಸ್ಕೃತವೆಂದು ಪ್ರಖ್ಯಾತವಾಗಿದೆ. ಸಂಸ್ಕೃತ ಭಾಷೆಗೂ ಭಾರತೀಯ ಸಂಸ್ಕೃತಿಗೂ ಧರ್ಮಕ್ಕೂ ಪರಸ್ಪರ ನಿಕಟ ಸಂಬಂಧವಿದೆ.

ಮಾನವಧರ್ಮದ ಪರಿಜ್ಞಾನವಾಗಬೇಕಾದರೆ ಮಾನವಸೃಷ್ಟಿಯ ಕಡೆಗೆ ಹೊರಳಬೇಕಾದೀತು. ಸಚ್ಚಿದಾನಂದಸ್ವರೂಪಿಯಾದ ಪರಮಾತ್ಮನು ಶಕ್ತಿಯ ಸಂಪರ್ಕದಿಂದ ಅಂಡರೂಪಿಯಾದ ಹಿರಣ್ಯಗರ್ಭನನ್ನು ಸೃಷ್ಟಿಸಿದನು. ಆತ್ಮಬುದ್ಧಿ ಪ್ರಕಾಶನಾದ ಪರಮಾತ್ಮನಿಂದ ಸೃಷ್ಟನಾದ ಹಿರಣ್ಯಗರ್ಭನು ಸಪ್ತದ್ವೀಪವೇ ಆದಿಯಾಗಿ ಉಳ್ಳ ಸಕಲ ಚರಾಚರಗಳನ್ನು ಸೃಷ್ಟಿಸಿದನು. ಚರವಸ್ತು ಘಟಕನಾದ ಮಾನವನ ಶ್ರೇಷ್ಠತ್ವ ಅಥವಾ ವೈಶಿಷ್ಟ್ಯದ ದ್ಯೋತಕವಾಗಿ ಮಾನವೇತರ ಪ್ರಾಣಿಗಳಿಗಿಲ್ಲದ ದುರ್ವಹವಾದ ಧಾರ್ಮಿಕ ಹೊಣೆಯನ್ನು ಇವನಿಗೇ ಹೊರಿಸಿವೆ. ಈ ಮಾನವನು ತನ್ನ ಕರ್ತವ್ಯ ಕರ್ಮವನ್ನರಿಯದೆ ಸ್ವಚ್ಛಂದ ಪ್ರವೃತ್ತನಾದಲ್ಲಿ ಆತನಿಗೂ ಇತರ ಪಶುಗಳಿಗೂ ವಿಶೇಷ ವ್ಯತ್ಯಾಸ ಕಾಣಿಸಲಾರದು. ಹೀಗಿರುವುದರಿಂದ ಪ್ರಭುಸಮ್ಮಿತವಾದ ವೇದವು ಮಾನವನಿಗೆ ಆಜ್ಞಾರೂಪವಾದ ವಿಧಿಮೂಲಕವಾಗಿ ಧರ್ಮವನ್ನು ಬೋಧೆ ಮಾಡುತ್ತಿರುವುದು. ಈ ಧರ್ಮವು ತಾತ್ತ್ವಿಕವಾಗಿ ಏಕರೂಪವಾಗಿದ್ದರೂ ಯುಗಭೇದ ಮೂಲಕವಾಗಿ ಪುರುಷ ಸಾಮರ್ಥ್ಯ ಭೇದವುಂಟಾದುದರಿಂದ ಅನುಷ್ಠಾನದಲ್ಲಿ ಸಹ ಕೃತತ್ರೇತಾದಿಯುಗಗಳಲ್ಲಿ ಭೇದವನ್ನು ಪಡೆಯಿತು. ಪಾಪಪುಣ್ಯಗಳ ಮಾನವಜನ್ಮ ಪ್ರಾಪ್ತವಾಗುವುದರಿಂದ ಪರಮಪುರುಷಾರ್ಥವೆಂಬ ಅಂತಿಮ ಗುರಿಯ ಸಾಧನೆಯಲ್ಲಿ ಜೀವಿಯು ಪರಮಾತ್ಮನ ಅತಿಸಮೀಪ ಸ್ಥಾನವನ್ನು ಪಡೆದಿರುವನು. ಹೀಗಿರುವುದರಿಂದಲೇ ಮನುಷ್ಯನಿಗೆ ಚೈತನ್ಯ ಸ್ವರೂಪಿಯಾದ ಪರಬ್ರಹ್ಮನಿಂದ ವಿಶಿಷ್ಟ ಬುದ್ಧಿ ಹಾಗೂ ಕೃತ್ಯಾಕೃತ್ಯ ವಿವೇಕವು ಲಭಿಸುತ್ತದೆ.

ನೂಲಿನ ಧರ್ಮಗಳಾದ ರೂಪ - ಸ್ಪರ್ಶ - ಗಂಧಾದಿಗಳನ್ನು ಬಟ್ಟೆಯು ಪಡೆಯುವಂತೆ, ಮಾನವನು ಪರಮಾತ್ಮನಿಗೆ ಅತಿಸಮೀಪನಾದುದರಿಂದಲೇ ಪರಮಾತ್ಮನಿಗಿರುವಂತೆ ವಿಶಿಷ್ಟ ಜ್ಞಾನೇಚ್ಛಾ ಕ್ರಿಯಾಶಕ್ತಿಗಳನ್ನು "ಕಾರಣಗುಣಾಃ ಕಾರ್ಯಮನುಸಂಕ್ರಾಮಂತಿ" ಎಂಬ ವಚನಾನುಸಾರ ಪಡೆದಿರುವನು. ಪುರುಷನ ಅವಶ್ಯಕರ್ತವ್ಯವಾದ ಯಾವ ಧರ್ಮವಿದೆಯೋ ಅದಕ್ಕೆ ಸನಾತನ ಧರ್ಮವೆನ್ನುವರು. ಸದಾ + ತನಃ = ಸನಾತನಃ ಭೂತಭವಿಷ್ಯದ್ವರ್ತಮಾನರೂಪ ಕಾಲತ್ರಯದಲ್ಲೂ

ಇರುವಂಥಾದ್ದಕ್ಕೆ ಸನಾತನ ಧರ್ಮವೆನ್ನುತ್ತಾರೆ. ಧರ್ಮಾನುಷ್ಠಾನದಲ್ಲಿ ವೃದ್ಧಿ-ಹ್ರಾಸಗಳು ತೋರಿ ಬರಬಹುದಾದರೂ ಸನಾತನಧರ್ಮವೆಂದೂ ನಷ್ಟವಾಗುವುದಿಲ್ಲ. ಶ್ರೀಮಚ್ಛಂಕರಾಚಾರ್ಯ ಭಗವತ್ಪಾದರು ಪ್ರಾಕ್ತನವಾದ ಕಮರಿಹೋಗುತ್ತಲಿರುವ ಮರಕ್ಕೆ ನೀರು ಮಣ್ಣು ಗೊಬ್ಬರ ಮೊದಲಾದವುಗಳನ್ನು ಹಾಕಿ ನವಸಂಜೀವಿನಿ-ಯನ್ನಿತ್ತು ಹೆಚ್ಚು ಫಲಾದಿಗಳನ್ನು ಪಡೆಯುವಂತೆ ಪುಣ್ಯಭೂಮಿಯಾದ ಭಾರತದಲ್ಲಿ ಸನಾತನವಾದ ಧರ್ಮದ ಪುನರುದ್ಧಾರವನ್ನು ಮಾಡಿದರಲ್ಲದೆ, ಅದ್ವೈತ ತತ್ತ್ವದ ಅನುಭವವನ್ನು ಪಡೆದುಕೊಳ್ಳುವವರ ಸಂಖ್ಯೆ ಸೀಮಿತವಾಗತೊಡಗಿದಾಗ ಇತರ ಧರ್ಮದವರೊಡನೆ ವಾದಿಸಿ ಅದ್ವೈತದ ಮೇಲ್ಮೆಯನ್ನು ಸಿದ್ಧಗೊಳಿಸಿದರು. ಇಸ್ಲಾಂ ಕ್ರೈಸ್ತಮತಗಳು ಆಯಾ ಶಕಪುರುಷರಿಂದ ಸ್ಥಾಪಿಸಲ್ಪಟ್ಟವೆ. ಸನಾತನಧರ್ಮವು ಯಾರಿಂದಲೂ ಹುಟ್ಟಿದ್ದಲ್ಲ. ಅದು ನಿತ್ಯ. ಯಾವುದಕ್ಕೆ ಜನ್ಮವಿದೆಯೊ ಅದಕ್ಕೆ ಮರಣವಿದೆ. ಸನಾತನಧರ್ಮಕ್ಕೆ ಇವೆರಡೂ ಇಲ್ಲ. ಸದ್ಧರ್ಮಾನುಷ್ಠಾನದಿಂದ ಸತ್ಫಲವು ಲಭಿಸುತ್ತದೆ. ಮಾನವನ ಪ್ರಾಕ್ತನ ಕರ್ಮಗಳ ಫಲವಾದ ಪಾಪಪುಣ್ಯಗಳು ಕಷ್ಟಸುಖಗಳಿಗೆ ಕಾರಣಗಳಾಗಿರುತ್ತವೆ.

ಇಂಥ ಧರ್ಮದ ತಿರುಳನ್ನೂ ಭಾರತೀಯ ಸಂಸ್ಕೃತಿಯ ಸೂಕ್ಷ್ಮ ತತ್ತ್ವವನ್ನೂ ಗೀರ್ವಾಣವಾಣಿ ಪ್ರಚಾರಪಡಿಸುತ್ತಾ ಬಂದಿದೆ. ಬ್ರಹ್ಮನ ಮುಖದಿಂದ ವೇದಗಳು ಸಂಸ್ಕೃತದಲ್ಲೇ ಹೊರಬಂದಿವೆ. ನಮ್ಮ ಎಲ್ಲಾ ಪುರಾಣೇತಿಹಾಸಾದಿಗಳು ಹಾಗೂ ಸಂಪೂರ್ಣ ಧರ್ಮತತ್ವ ಸಂಸ್ಕೃತದಲ್ಲಿದೆ. ಅದನ್ನು ಕಲಿಯುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಬ್ರಿಟಿಷರ ದಾಸ್ಯದಲ್ಲಿ ತೊಳಲುತ್ತಿದ್ದಾಗ ತಮ್ಮ ಹೊಟ್ಟೆ ಹೊರೆಯಲಿಕ್ಕಾಗಿ ನಮ್ಮವರು ಇಂಗ್ಲಿಷಿಗೆ ಮಾರುಹೋದರು. ಇಂದೂ ಇಂಗ್ಲಿಷೇ ನಮ್ಮಲ್ಲಿ ಪ್ರಚಾರದಲ್ಲಿದೆ. ಇಂಗ್ಲಿಷ್ ಪ್ರಚಾರಕ್ಕೆ ಬ್ರಿಟಿಷ್ ಸರಕಾರದ ಪ್ರೋತ್ಸಾಹ ಮತ್ತು ಅಧಿಕಾರಿಗಳ ಪ್ರಾಬಲ್ಯಗಳೇ ಕಾರಣ. ಯಾರಿಗೆ ಯಾವುದರಲ್ಲಿ ಇಷ್ಟವೊ ಅದಕ್ಕೆ ಅವರಿಗೆ ಪ್ರೋತ್ಸಾಹ ಸಿಗುತ್ತದೆ. ಸಂಸ್ಕೃತಾಭಿಮಾನಿಗೆ ಸಂಸ್ಕೃತಜ್ಞರನ್ನು ಕಂಡರೆ ಸಂತೋಷ. ಇಂಗ್ಲಿಷ್ ಪ್ರೇಮಿಗೆ ಇಂಗ್ಲಿಷ್ ಬಲ್ಲವನ ಮೇಲೆ ಆದರ. ಸಂಸ್ಕೃತ ವೇದಪಾಠಶಾಲೆ, ಸಂಸ್ಕೃತ ವಿದ್ಯಾಲಯಗಳ ಮೇಲೆ ನಮ್ಮಂಥವರಿಗೆ ಆದರವು ಸ್ವಾಭಾವಿಕ.

ಮನುಷ್ಯರೆಲ್ಲರಿಗೂ ಬುದ್ಧಿಯಿದ್ದರೂ ಅದನ್ನು ಸದುಪಯೋಗಪಡಿಸಿಕೊಳ್ಳಲು ತರ್ಕಮೀಮಾಂಸಾವೇದಾಂತಾದಿ ಶಾಸ್ತ್ರಗಳ ಅಧ್ಯಯನವು ಅತ್ಯವಶ್ಯವಾಗಿದೆ. ಶಾಸ್ತ್ರಗಳ ಪರಿಜ್ಞಾನವಿಲ್ಲದೆ ಮಾಡಿಕೊಂಡ ಸಿದ್ಧಾಂತವು ಫಲಕಾರಿಯಾಗಲಾರದು. ಪಾಶ್ಚಾತ್ಯವಿದ್ಯೆಯ ಅನುಭವದಿಂದ ನಮ್ಮ ಧರ್ಮ ಶಾಸ್ತ್ರಾದಿಗಳ ಮೇಲೆ ಆರೋಪ ಹೊರಿಸಿದರೆ ಅದು ಯಥಾರ್ಥವಾಗಲಾರದು. ಯಾಕೆಂದರೆ, ಯಾವುದೇ ಒಂದು

ನಿರ್ಣಯಕ್ಕೆ ಬರಬೇಕಾದರೆ ಎರಡೂ ತತ್ತ್ವಗಳನ್ನು ತದ್ಬೋಧಕವಿದ್ಯೆಯ ಅನುಷ್ಠಾನ-ದಿಂದ ಅರಿತುಕೊಳ್ಳಬೇಕು. ಇಂದಿನವರಲ್ಲಿ ಈ ರೀತಿ ಬುದ್ಧಿಯನ್ನುಪಯೋಗಿಸುವವರು ಕಡಮೆ. ಬುದ್ಧಿಯು ಎಂಟು ಗುಣಗಳುಳ್ಳದ್ದು.

ಶುಶ್ರೂಷಾ ಶ್ರವಣಂ ಚೈವ ಗ್ರಹಣಂ ಧಾರಣಂ ತಥಾ ।
ಊಹಾಪೋಹೋऽರ್ಥವಿಜ್ಞಾನಂ ತತ್ತ್ವಜ್ಞಾನಂ ಚ ಧೀಗುಣಾಃ ॥

ಕೇಳುವ ಇಚ್ಛೆ ಮೊದಲಾಗಿ ಬೇಕು. ಅದು ಮಾತ್ರ ಇದ್ದರೆ ಸಾಕೆ? ಕೇಳಬೇಕು. ಕೇಳಿದಂತೆಯೇ ಅದನ್ನು ಗ್ರಹಣಮಾಡಿಕೊಳ್ಳಬೇಕು. ಅನಂತರ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆ ಮೇಲೆ ಆ ಕುರಿತು ತರ್ಕಮಾಡಬೇಕು. ವಿಚಾರವನ್ನು ಮಥಿಸಬೇಕು. ಅನಂತರ ಅರ್ಥಜ್ಞಾನವಾಗಬೇಕು. ಆ ಮೇಲೆ ತತ್ತ್ವವಿಜ್ಞಾನ. ಇಂಥ ಗುಣಗಳಿಂದ ಬುದ್ಧಿಯ ಉಪಯೋಗವನ್ನು ಪಡೆದುಕೊಳ್ಳಬೇಕು. ಇಂಥವರಿಗೆ ಬುದ್ಧಿವಂತರೆಂದರೆ ಸಲ್ಲುವುದು. ಇಂಥವರೇ ಧರ್ಮದ ರಹಸ್ಯವನ್ನು ಶಾಸ್ತ್ರಾರ್ಥಗಳಿಂದ ಅರಿತು ಆಚರಿಸುವರಲ್ಲದೆ, ಬೋಧಿಸಲು ಶಕ್ತರಾಗುತ್ತಾರೆ. ಇಂಥ ಶಾಸ್ತ್ರಾರ್ಥ-ಗಳನ್ನರಿಯಲು ಸಂಸ್ಕೃತವು ಬೇಕೇ ಬೇಕು.

ಸ್ವಾತಂತ್ರ್ಯ ಬಂದ ಮೇಲೆ ನಮ್ಮಲ್ಲಿ ಸಂಸ್ಕೃತ ಪ್ರಚಾರದ ಬಗ್ಗೆ ತುಂಬ ಯತ್ನಗಳು ನಡೆದಿವೆ; ನಡೆಯುತ್ತಿವೆ. ಕುರುಕ್ಷೇತ್ರದಲ್ಲಿ ಒಂದು ಸಂಸ್ಕೃತ ವಿಶ್ವವಿದ್ಯಾ-ನಿಲಯವನ್ನು ಸ್ಥಾಪಿಸುವುದಕ್ಕೆ ಎಷ್ಟೆಷ್ಟೋ ಯತ್ನಗಳು ನಡೆದರೂ ಕೇಂದ್ರ ಶಿಕ್ಷಾಮಂತ್ರಿಗಳೊಬ್ಬರ ಬೆಂಬಲ ಹಾಗೂ ಅನುಮತಿ ದೊರೆಯದೆ ಅದಿನ್ನೂ ಸ್ಥಾಪಿತವಾಗಿಲ್ಲ. ಅಂತೂ ಬೇಗನೆ ಸ್ಥಾಪನೆಗೊಳ್ಳಬಹುದೆನ್ನಿ. ಹೀಗೆಯೇ ಉತ್ತರಪ್ರದೇಶದಲ್ಲಿ ಈಗಿನ ಮುಖ್ಯಮಂತ್ರಿ ಸಂಪೂರ್ಣಾನಂದರು ಹಿಂದೆ ಸಂಸ್ಕೃತ ಕಾಲೇಜೊಂದನ್ನು ಸ್ವಪ್ರಯತ್ನದಿಂದ ಸ್ಥಾಪಿಸಿದ್ದಾರೆ. ಹಿಂದೂ ವಿಶ್ವವಿದ್ಯಾಲಯವಲ್ಲದೆ ಕಾಶಿಯಲ್ಲಿ ಇದೊಂದು ಕೇವಲ ಸಂಸ್ಕೃತಕ್ಕಾಗಿಯೇ ಮೀಸಲಾದ ವಿಶಿಷ್ಟ ವಿದ್ಯಾಸಂಸ್ಥೆ. ಈಗ ಸಂಪೂರ್ಣಾನಂದರು ಅದನ್ನು ವಿಶ್ವವಿದ್ಯಾನಿಲಯವನ್ನಾಗಿ ವಿಶಾಲಪಡಿಸುವ ಪ್ರಯತ್ನದಲ್ಲಿದ್ದಾರೆ. ನಮ್ಮ ರಾಷ್ಟ್ರಪತಿ ಪ್ರಭೃತಿಗಳು "ಸಂಸ್ಕೃತವು ಅತ್ಯಗತ್ಯ. ಅದರ ಪ್ರಚಾರ ಹೆಚ್ಚಬೇಕು" ಎಂದು ಸಾರುತ್ತಿದ್ದಾರೆ. ಸದ್ಯವೇ ಕೇಂದ್ರ ಸರಕಾರವು

ವಿಶ್ವವಿದ್ಯಾಲಯವು, ಕಾಲೇಜ್ ಮೊದಲಾದವುಗಳಲ್ಲಿ ಸಂಸ್ಕೃತದ ಮುಂದಿನ ಅಭಿವೃದ್ಧಿಯನ್ನು ಕುರಿತು ವಿಚಾರಿಸಲು ಸಮಿತಿಯೊಂದನ್ನು ನೇಮಿಸಿದೆ. ಹಿಂದಿಗೆ ರಾಷ್ಟ್ರಭಾಷೆಯ ಸ್ಥಾನವನ್ನು ಕೊಡುವುದಾಗಿ ನಿರ್ಣಯವಾಗಿದೆ. ಹಿಂದಿಗೆ ಅಂಥ ಗೌರವವನ್ನರ್ಪಿಸಿದರೆ ಅದು ಸಂಸ್ಕೃತಕ್ಕೆ ಸೇರಿದುದೆನ್ನಬಹುದು. ಹಿಂದಿಯು ಸಂಸ್ಕೃತನಿಷ್ಠವೇ ಆಗಿದೆ. ಅಂತೂ ಅನತಿಕಾಲದಲ್ಲಿಯೇ ಹಿಂದಿಯ ಪ್ರಚಾರ ಬೆಳೆದಂತೆಯೇ ಸಂಸ್ಕೃತದ ಪ್ರಚಾರವೂ ನಡೆಯಲು ಸಾಧ್ಯವಿದೆ. ಸಂಸ್ಕೃತವನ್ನಭ್ಯಸಿಸಿ ಸ್ವಧರ್ಮಸಂಸ್ಕೃತಿಗಳನ್ನರಿತು ಮಾನವರು ಸನ್ಮಾರ್ಗಪ್ರವೃತ್ತರಾಗುವುದು ಅತ್ಯಂತ ಅವಶ್ಯವಾಗಿದೆ. ಆದಕ್ಕಾಗಿ ಎಲ್ಲರೂ ಸಂಸ್ಕೃತಾಭ್ಯಾಸವನ್ನು ಮಾಡಬೇಕು. ಭಾರತೀಯ ಸಂಸ್ಕೃತಿಯನ್ನು ಬೆಳಗಿಸಬೇಕು.

೬. ಶ್ರೀ ರಾಮನವಮಿಯ ಅನುಗ್ರಹ ಭಾಷಣ

('ರಾಷ್ಟ್ರಮತ' ೪-೫-೧೯೫೬)

ದುರ್ಲಭವಾದ ಮನುಷ್ಯಜನ್ಮದ ಮಹತ್ತ್ವವನ್ನೆಲ್ಲರೂ ಅರಿತಿರುವುದಿಲ್ಲ. ಮನುಷ್ಯತ್ವವೂ ಮುಮುಕ್ಷುತ್ವವೂ ಮಹಾಪುರುಷ ಸಂಶ್ರಯವೂ ಪುಣ್ಯವಿಶೇಷದಿಂದಲೇ ಲಭಿಸಲು ಸಾಧ್ಯ. ಮಾನವನಿಗೆ ಸುಖ ಬೇಕೆನಿಸುವುದು ಸಹಜ. ಆದರೆ ಸುಖವನ್ನು ದೊರಕಿಸುವ ಮಾರ್ಗದಲ್ಲಿ ಮತಭೇದವನ್ನು ಕಾಣುತ್ತೇವೆ. ಯಾವ ಆನಂದವು ಯಾವ ಕಾಲದಲ್ಲಿಯೂ ಸ್ವಲ್ಪವೂ ವ್ಯತ್ಯಸ್ತವಾಗದೋ, ಅದೇ ನಿಜವಾದ ಸುಖವು. ಅಂಥ ಸುಖವು ಲಭಿಸಬೇಕಾದರೆ ಮಾನವನು ಧರ್ಮಪರನಾಗಿರಬೇಕು. ಕಾರಣವಿಲ್ಲದೆ ಕಾರ್ಯವಿಲ್ಲ. ಧರ್ಮವಿಲ್ಲದಿದ್ದರೆ ಸುಖದ ಪ್ರಾಪ್ತಿಯಿಲ್ಲ.

ರಾಮರಾಜ್ಯದ ಮಹತ್ತ್ವ

"ಸರ್ವಂ ಮುದಿತಮೇವಾಸೀತ್, ರಾಮೇ ರಾಜ್ಯಂ ಪ್ರಶಾಸತಿ" ಶ್ರೀರಾಮನ ರಾಜ್ಯದಲ್ಲಿ ಎಲ್ಲೆಲ್ಲೂ ಆನಂದದ ಹೊಳೆ ಹರಿಯುತ್ತಿತ್ತು. ಶಾಂತಿ ಸುಭಿಕ್ಷೆಗಳು ನೆಲೆಗೊಂಡಿದ್ದುವು. "ವೀತರಾಗಾ ಹ್ಯಶೋಕಾಶ್ಚ" ಸಕಲರೂ ರೋಗವಿದೂರರೂ ಶೋಕರಹಿತರೂ ಆಗಿದ್ದರು. ಅಕಾಲಮರಣ, ತಂದೆ ಇರುವಾಗ ಮಗನ ಸಾವು, ಸ್ತ್ರೀಯರಿಗೆ ವೈಧವ್ಯಯೋಗ – ಒಂದೂ ರಾಮರಾಜ್ಯದಲ್ಲಿರಲಿಲ್ಲ. ಆಧ್ಯಾತ್ಮಿಕ, ಆದಿ-ದೈವಿಕ,ಆದಿಭೌತಿಕಗಳೆಂಬ ತ್ರಿವಿಧ ದುಃಖಗಳೂ ಅವರನ್ನು ಬಾಧಿಸುತ್ತಿರಲಿಲ್ಲ. ಎಲ್ಲರೂ ಪರಸ್ಪರ ಪ್ರೇಮದಿಂದಿದ್ದರು. ಎಲ್ಲೆಲ್ಲೂ ಆನಂದವೇ ಆನಂದ! ಹೀಗಾಗಲು ಕಾರಣ-ವೇನು? ಇಂದೇಕೆ ಅಂಥ ಆನಂದವಿಲ್ಲ? ರಾಮರಾಜ್ಯದ ಕೂಗು ಇಂದೂ ಕೇಳಿಸುತ್ತಲಿಲ್ಲವೆ? ಆದರೆ ಅದೇಕೆ ಲಭಿಸಿಲ್ಲ? ರಾಮರಾಜ್ಯದಲ್ಲಿ ಅಷ್ಟು ಆನಂದವಿರ-ಬೇಕಾದರೆ, ಅದರ ಕಾರಣವೇನೆಂದು ವಿಚಾರಿಸಬೇಕು. "ಸರ್ವೇ ಧರ್ಮರತೋಽಭ-ವತ್" ಎಲ್ಲರೂ ಧರ್ಮಪರರಾಗಿದ್ದರೆಂಬುದೇ ಇಷ್ಟೆಲ್ಲಾ ಆನಂದಕ್ಕೆ ಮೂಲಕಾರಣ. ಧಾರ್ಮಿಕಬುದ್ಧಿ ಪ್ರಜೆಗಳಲ್ಲಿ ಸದಾ ಜಾಗೃತವಾಗಿತ್ತು. ಯಾರೂ ಯಾರಿಗೂ ಅನ್ಯಾಯವೆಸಗುತ್ತಿರಲಿಲ್ಲ. ಧರ್ಮದ ಭದ್ರವಾದ ಬುನಾದಿಯಲ್ಲಿ ಕಟ್ಟಿದ ರಾಜ್ಯವು ಆನಂದಾಗಾರವಾಗಿರುತ್ತದೆಂಬುದಕ್ಕೆ ಶ್ರೀ ರಾಮರಾಜ್ಯವೇ ಯೋಗ್ಯವಾದ ನಿದರ್ಶನ.

"ರಾಜಾ ಕಾಲಸ್ಯ ಕಾರಣಂ" ರಾಜನಲ್ಲಿರುವ ಸದ್ಭಾವನೆ, ದುರ್ಭಾವನೆಗಳು ಪ್ರಜೆಗಳಲ್ಲಿ ಮೂಡಿಬರುವುದು ಸಹಜ. ಧರ್ಮಪರರಾದ ರಾಜರ ಆಳಿಕೆಯಲ್ಲಿ ಪ್ರಜೆಗಳು ಸೌಖ್ಯದಿಂದಿರುತ್ತಾರೆ. ರಾವಣನಂಥವರು ಶಾಸ್ತ್ರವೇತ್ತರೂ ಪರಾಕ್ರಮಿ-ಗಳೂ ತಪಸ್ವಿಗಳೂ ಆಗಿದ್ದರೂ ಧರ್ಮವಿರುದ್ಧಾಚರಣೆಯಿಂದ ಪತನಹೊಂದಿದರು.

ಅಧಿಕಾರ, ಸಂಪತ್ತು, ವಿಷಯೋಪಭೋಗಗಳು ಅನುಭವಿಸಿದಷ್ಟೂ ಹೆಚ್ಚು ಬೇಕೆಂಬ ಕಾಮನೆಯನ್ನುಂಟುಮಾಡುತ್ತವೆ. ಉರಿಯುತ್ತಿರುವ ಬೆಂಕಿಗೆ ತುಪ್ಪಸುರಿದಾಗ ಅದು ಧಗಧಗಿಸುವಂತೆ, ಕಾಮಾಗ್ನಿ ಮತ್ತಷ್ಟು ಪ್ರಜ್ವಲಿಸುತ್ತದೆ. ಅಂಥ ಧರ್ಮವಿರುದ್ಧ ಕಾಮನೆಗೆ ಮನಸೋಲದೆ ಶಾಸ್ತ್ರವಿಹಿತ ಕರ್ಮಗಳಿಂದ ನಿಜವಾದ ಸುಖವನ್ನು ದೊರಕಿಸಲು ವಾಙ್ಮನಃ ಕಾಯಗಳಿಂದ ಯತ್ನಿಸಬೇಕು.

ಉತ್ತರ ಪ್ರದೇಶದಲ್ಲಿ ಪುರಾತತ್ತ್ವ ಸಂಶೋಧಕರು ಕಂಡುಹಿಡಿದ ಶಿಲಾಲೇಖ-ವೊಂದರಲ್ಲಿ ಶ್ಲೋಕವೊಂದು ಹೀಗಿದೆ.

ಭೂಯೋ ಭೂಯೋ ಭಾವಿನೋ ಭೂಮಿಪಾಲಾಃ
ನತ್ವಾ ನತ್ವಾ ಯಾಚತೇ ರಾಮಚಂದ್ರಃ ।
ಸಾಮಾನ್ಯೋಽಯಂ ಧರ್ಮಸೇತುರ್ನರಾಣಾಂ
ಕಾಲೇ ಕಾಲೇ ಪಾಲನೀಯೋ ಭವದ್ಭಿಃ ॥

"ಎಲೈ ಆಗಾಗ ಹುಟ್ಟುತ್ತಿರುವ ರಾಜರುಗಳೇ, ನಿಮ್ಮನ್ನು ನಮಿಸಿ ರಾಮಚಂದ್ರನು ಕೇಳಿಕೊಳ್ಳುತ್ತಿದ್ದಾನೆ. ಪ್ರಪಂಚವು ಸಮುದ್ರರೂಪವಾಗಿದೆ. ಧರ್ಮವೇ ಈ ಮಹಾಸಾಗರವನ್ನು ದಾಟಿಸುವ ಸೇತುವೆ. ಇದನ್ನೆಲ್ಲರೂ ಪಾಲಿಸಿಕೊಂಡು ಬರಬೇಕು". ಇದರ ಅನುಷ್ಠಾನವೇ ಲೋಕಕಲ್ಯಾಣ ಕಾರಣವೆಂದೂ, ಶಾಂತಿ-ತುಷ್ಟಿಪುಷ್ಟಿಸಾಧಕವೆಂದೂ ತಿಳಿದ ಶ್ರೀರಾಮಚಂದ್ರನು ಇತರ ರಾಜರಿಗೆ ಇದನ್ನು ಬೋಧಿಸಿದ್ದಾನೆ. ಈ ಭೂಮಿಯೆಂದಾದರೂ ಒಬ್ಬನ ಆಡಳಿತಕ್ಕೊಳಪಡುವುದೆಂದಿಲ್ಲ. "ಬಹುಭಾರ್ಯಾಂ ಚ ಮೇದಿನೀಮ್" ಭೂಮಿಯು ಬಹುರಾಜರ ಪತ್ನಿಯಾಗುವಂತೆ ಆಕೆಗೆ ಪಾರ್ವತಿಯ ಶಾಪವಿದೆ. ಈ ರಾಜರೆಲ್ಲರನ್ನೂ ಸಂಬೋಧಿಸಿ ಧರ್ಮವನ್ನು ಪಾಲಿಸಿರೆಂದು ಶ್ರೀರಾಮನು ಉಪದೇಶಿಸಿದ್ದಾನೆ.

ಶ್ರೀ ರಾಮನು ಇಂಥ ರಾಜ್ಯಭಾರವನ್ನು ಹತ್ತು ಸಾವಿರ ವರ್ಷಗಳ ಕಾಲ ನಡೆಸಿದ್ದಾನೆ. ಕಾಶಿಯಲ್ಲಿ ದಶಾಶ್ವಮೇಧಘಾಟ್ ಎಂಬುದಿದೆ. ಇಲ್ಲಿ ಶ್ರೀರಾಮನು ಹತ್ತು ಅಶ್ವಮೇಧಗಳಲ್ಲಿ ಎಲ್ಲಾ ರಾಜರನ್ನು ಸೋಲಿಸಿ ಧರ್ಮ ಪ್ರಚಾರ ಮಾಡಿದ್ದಾನೆ. ಇಂಥ ಧರ್ಮದ ಅನುಷ್ಠಾನವನ್ನು ಶ್ರದ್ಧಾಪೂರ್ವಕ ಮಾಡಿದರೆ ಸದಾ ಸುಖವು ಲಭಿಸುತ್ತವೆ.

ಶ್ರೀ ರಾಮಮೂರ್ತಿಯ ಪೂಜೆ

ಶ್ರೀ ರಾಮಚಂದ್ರನು ದಂಡಕಾರಣ್ಯದಿಂದ ಹೋಗುವಾಗ, ಮಹರ್ಷಿ ಅಗಸ್ತ್ಯರು ಪಡೆದುಕೊಂಡು, ಅವರಿಂದ ವರದಮಹರ್ಷಿಗಳ ಮೂಲಕ ಶಂಕರಾಚಾರ್ಯರಿಗೆ

ಲಭಿಸಿದ್ದು, ವಿದ್ಯಾನಂದಾಚಾರ್ಯಾದಿ ಹಲವಾರು ಮಂದಿ ಪರಮಹಂಸಪರಿವ್ರಾಜಕರಿಂದ ಪೂಜಿಸಲ್ಪಟ್ಟ ಈ ಪಟ್ಟಾಭಿರಾಮ ಮೂರ್ತಿಯು ಅನಂತಶಕ್ತಿಸಂಪನ್ನವಾಗಿ ಭಕ್ತರ ಸಕಲೇಷ್ಟಾರ್ಥಗಳನ್ನು ಪೂರೈಸುತ್ತದೆ. ಇದಕ್ಕೆ ಅಪರಿಮಿತ ಉದಾಹರಣೆಗಳಿವೆ.

ಮೂರ್ತಿಪೂಜೆಯು ಶಾಸ್ತ್ರಸಮ್ಮತ ಸಂಪ್ರದಾಯಗಳಲ್ಲೊಂದು
ಅರ್ಚಕಸ್ಯ ತಪೋಯೋಗಾದರ್ಚನಸ್ಯಾತಿಶಾಯನಾತ್ ।
ಆಭಿರೂಪ್ಯಾಚ್ಚ ಬಿಂಬಾನಾಂ ದೇವಸ್ಸಾನ್ನಿಧ್ಯಮೃಚ್ಛತಿ ॥

ಅರ್ಚಕನ ತಪಸ್ಸು, ಅರ್ಚನೆಯ ಅತಿಶಯತೆ, ಬಿಂಬಗಳ ಆನುರೂಪ್ಯ – ಇವುಗಳಿಂದ ಮೂರ್ತಿಯಲ್ಲಿ ದೇವತ್ವವುಂಟಾಗುತ್ತದೆ. ಮೂರ್ತಿಯಲ್ಲಿ ದೇವರನ್ನಾಹ್ವಾನಿಸಿ ಪೂಜಿಸುವುದೊಂದು ಕ್ರಮವಾದರೆ, ಸ್ವಯಮುದ್ಭವಿಸಿದ ಮೂರ್ತಿಯ ಪೂಜೆ ಮತ್ತೊಂದು ವಿಧಾನ. ಮೊದಲನೆಯದಕ್ಕೆ ಯಾವುದೂ ಬೇಕಿಲ್ಲ. ಇಂಥ ಮೂರ್ತಿಯಲ್ಲಿ ಭಕ್ತಿಯಿಂದ ದೇವತ್ವವನ್ನು ಕಾಣುವುದು ಶ್ರೇಯೋನಿದಾನವಾಗಿದೆ.

"ಪೂಜ್ಯೇಷ್ವನುರಾಗೋ ಭಕ್ತಿಃ" ಪೂಜ್ಯರಲ್ಲಿ ಅನುರಾಗವೇ ಭಕ್ತಿ. ಅದು ಸಾಧ್ಯಸಾಧನರೂಪವಾದುದು. ಅದರಲ್ಲಿ ಸಾಧನಭಕ್ತಿ ಒಂಬತ್ತು ವಿಧ.

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥

ವಿಷ್ಣುವಿನ ವಿಚಾರ ಕೇಳುತ್ತಿದ್ದಂತೆ ಕೀರ್ತನೇಚ್ಛೆ ಪ್ರಬಲವಾಗುತ್ತದೆ. ಕೀರ್ತನೆಯೊಂದಿಗೆ ಸ್ಮರಣವು ಆಗಿಯೇ ತೀರುತ್ತದೆ. ಹೀಗೆ ಪಾದಸೇವೆ, ಅರ್ಚನ, ವಂದನ, ದಾಸ್ಯಗಳಿಂದ ಸಖ್ಯವು ಪರಿಪುಷ್ಟವಾಗುತ್ತದೆ. ಸಖ್ಯವು ಹೆಚ್ಚಿ ಆತ್ಮನಿವೇದನೆ ಮಾಡಿಕೊಳ್ಳುವುದೆಂದರೆ ಭಕ್ತಿಯ ಪರಾಕಾಷ್ಠೆಯೆನಿಸುವುದು.

ಇಂಥ ಅನನ್ಯ ಭಕ್ತಿಯಿಂದ ಶ್ರೀರಾಮಚಂದ್ರನನ್ನು ಪೂಜಿಸಬೇಕು, ಸಕಲಗುಣಪರಿಪೂರ್ಣನಾದ ಶ್ರೀರಾಮಚಂದ್ರನ ಆದರ್ಶವನ್ನು ಸ್ವೀಕರಿಸಿ ಧರ್ಮಬುದ್ಧಿಯಿಂದ ಎಲ್ಲರೂ ನಡೆದುಕೊಂಡು ಐಹಿಕಾಮುಷ್ಮಿಕ ಶ್ರೇಯಸ್ಸನ್ನು ಪಡೆಯುವಂತಾಗಲಿ !

೭. ಮಾನವನ ಕರ್ತವ್ಯ

'ರಾಷ್ಟ್ರಮತ' (೧೮-೫-೧೯೫೬)

ಭೂಲೋಕದಲ್ಲಿ ಪ್ರಾಣಿಕೋಟಿಗಳ ಉತ್ಪತ್ತಿಸಂಖ್ಯೆಯು ಎಂಬತ್ತ ನಾಲ್ಕು ಲಕ್ಷಗಳೆಂದು ಪರಿಗಣಿಸಲ್ಪಟ್ಟಿದೆ. ಇವುಗಳಲ್ಲಿ ಪ್ರಧಾನವಾಗಿ ನಾಲ್ಕು ವಿಭಾಗಗಳು. ಮೊಟ್ಟೆಯಿಂದ ಉತ್ಪನ್ನವಾಗುವವುಗಳು ಅಂಡಜಗಳೆಂದೂ ಬೆವರಿನಿಂದ ಹುಟ್ಟುವ ಮತ್ಕುಣಾದಿಗಳು ಸ್ವೇದಜಗಳೆಂದೂ ಬೀಜದಿಂದ ಮೊಳಕೆಯೊಡೆದು ಜನಿಸುವ ವೃಕ್ಷಾದಿಗಳು ಉದ್ಭಿಜ್ಯಗಳೆಂದೂ, ಯೋನಿಜ ಪ್ರಾಣಿಗಳು ಜರಾಯುಜಗಳೆಂದೂ ಹೇಳಲ್ಪಡುತ್ತವೆ. ಮಾನವೇತರ ಪ್ರಾಣಿಗಳಿಗೆ ಪಾಪಪುಣ್ಯಗಳನ್ನುಂಟುಮಾಡುವ ಯಾವುವೇ ಕರ್ಮದ ಜ್ಞಾನವಿಲ್ಲ. ಕೇವಲ ಹಿಂದಿನ ಕರ್ಮಫಲಗಳನ್ನನುಭವಿಸುವುದೇ ಅವುಗಳ ಕರ್ತವ್ಯ. ಮಾನವರಿಗೆ ಮಾತ್ರ ಹಿಂದೆ ಆಚರಿಸಿದ ದುಷ್ಕರ್ಮದ ಫಲವಾದ ಪಾಪವನ್ನು ದೂರಪಡಿಸಿಕೊಳ್ಳಲಿಕ್ಕೂ ಸುಖವನ್ನುಂಟುಮಾಡುವ ಪುಣ್ಯಕರ್ಮಗಳನ್ನಾಚರಿಸಲಿಕ್ಕೂ ಅಧಿಕಾರ ಅವಕಾಶಗಳುಂಟು. ಈ ಸೃಷ್ಟಿಯ ಆರಂಭದಲ್ಲಿ ಆದಿಪುರುಷನು ಹಿರಣ್ಯಗರ್ಭನನ್ನು ಸೃಷ್ಟಿಸಿ ಜ್ಞಾನರಾಶಿಯಾದ ವೇದವನ್ನುಪದೇಶಿಸಿದನು. ಇಂಥ ವೇದವು ಸಂಸ್ಕೃತ ಭಾಷೆಯಲ್ಲಿ ಗಹನವಾದ ಶೈಲಿಯಲ್ಲಿದೆ. ಇದರ ಸರಿಯಾದ ಅರ್ಥವನ್ನರಿಯಲು ತಪಸ್ಸು, ಶಾಸ್ತ್ರಾಭ್ಯಾಸಾದಿಗಳು ಬೇಕು.

ವೇದಾರ್ಥವನ್ನು ಬಲ್ಲವರಲ್ಲಿ ರಾಜರ್ಷಿ ಮನುವು ಶ್ರೇಷ್ಠನು. ಮಹರ್ಷಿಗಳೊಮ್ಮೆ ಈತನಲ್ಲಿ ಜನಹಿತಕ್ಕಾಗಿ ಧರ್ಮವನ್ನುಪದೇಶಿಸುವಂತೆ ಕೇಳಿಕೊಂಡರು. ಆಯಾ ವರ್ಣ ಮತ್ತು ಆಶ್ರಮಕ್ಕನುಗುಣವಾಗಿ ಧರ್ಮವನ್ನವನು ತಿಳಿಸಿದ್ದಾನೆ. "ಶ್ರುತಿಸ್ಮೃತ್ಯುದಿತಂ ಧರ್ಮಮನುತಿಷ್ಠನ್ ಹಿ ಮಾನವಃ। ಇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಾಂ ಗತಿಮ್" ಶ್ರುತಿಸ್ಮೃತಿಪುರಾಣಾದಿಗಳು ತಿಳಿಸುವಂತೆ ಆಚರಿಸುವ ಮಾನವನು ಈ ಲೋಕದಲ್ಲಿ ಸುಖವನ್ನೂ ಕೀರ್ತಿಯನ್ನೂ ಸದ್ಗತಿಯನ್ನೂ ಪಡೆಯುತ್ತಾನೆ. "ಸಂಧ್ಯಾ ಸ್ನಾನಂ ಜಪೋ ಹೋಮಃ ದೇವತಾನಾಂ ಚ ಪೂಜನಮ್। ಆತಿಥ್ಯಂ ವೈಶ್ವದೇವಂ ಚ ಷಟ್ ಕರ್ಮಾಣಿ ದಿನೇ ದಿನೇ" ಎಂದು ಪರಾಶರರು ವಿಧಿಸಿದಂತೆ ಧರ್ಮಾನುಷ್ಠಾನವನ್ನೆಲ್ಲರೂ ಮಾಡಬೇಕು. ಧರ್ಮವೆಂದರೆ ವೇದ ವಿಹಿತವಾದ ಕರ್ಮ. ಅವುಗಳಲ್ಲಿ ನಿತ್ಯ, ನೈಮಿತ್ತಿಕ, ಕಾಮ್ಯಗಳೆಂದು ಭೇದಗಳುಂಟು. ಸ್ನಾನ, ಸಂಧ್ಯಾವಂದನೆ, ಅಗ್ನ್ಯುಪಾಸನೆ, ದೇವತಾಪೂಜೆ, ಅತಿಥಿ ಸತ್ಕಾರ, ವೈಶ್ವದೇವ, ಇವುಗಳನ್ನು ಅಧಿಕಾರಾನುಸಾರ ಆಚರಿಸಲೇಬೇಕು. ಈಗೀಗ ದೇಹ ಅಶುಚಿಯೆನಿಸಿದಾಗ ಸ್ನಾನ, ಅವಕಾಶ ಸಿಕ್ಕಿದಾಗ ಮಾತ್ರ ಸಂಧ್ಯಾವಂದನೆ- ಇತ್ಯಾದಿಗಳನ್ನು ಮಾಡಿದರಾಯಿತು ಎಂಬ ಭಾವನೆ ಬೆಳೆಯುತ್ತಾ ಇದೆ. ಆದರಿಂದ ಮಾನವನಿಗೆ ಸರ್ವಥಾ ಸುಖ ಸಿಗಲಾರದು. ಮಹರ್ಷಿಗಳು ನಿತ್ಯಕರ್ಮಾದಿಗಳನ್ನಾ-ಚರಿಸಿರೆಂದು ಕೇವಲ ಲೋಕಕಲ್ಯಾಣ ದೃಷ್ಟಿಯಿಂದ ಉಪದೇಶಿಸಿರುವರು.

ಅತಿಥಿಯೆಂದರೆ ಅಕಸ್ಮಾತ್ ಮನೆಗೆ ಬಂದವನು. ವೈಶ್ವದೇವಾನಂತರ ಅತಿಥಿಗಳ ನಿರೀಕ್ಷೆ ಮಾಡಬೇಕು. ಅಕಸ್ಮಾತ್ ವೈಶ್ವದೇವ ಪೂರ್ವದಲ್ಲಿ ಬ್ರಹ್ಮಚಾರಿ ವಾನಪ್ರಸ್ಥ ಯತಿಗಳು ಬಂದು ಭಿಕ್ಷೆ ಕೇಳಿದರೂ ಆ ಬಗ್ಗೆ ತೆಗೆದಿಟ್ಟು ಅವರಿಗೆ ಭಿಕ್ಷೆ ಕೊಡಬೇಕೆಂದು ವಿಧಿಯಿದೆ. "ಯಥಾ ವಾಯುಂ ಸಮಾಶ್ರಿತ್ಯ ವರ್ತಂತೆ ಸರ್ವಜಂತವಃ। ತಥಾ ಗೃಹಸ್ಥಮಾಶ್ರಿತ್ಯ ವರ್ತಂತೇ ಸರ್ವ ಆಶ್ರಮಾಃ" ಗೃಹಸ್ಥನು ದೇವ ಬ್ರಾಹ್ಮಣೋದ್ದೇಶಪೂರ್ವಕ ಅನ್ನಶಾಕಪಾಕಾದಿಗಳನ್ನು ತಯಾರಿಸುವಂತೆ ಬ್ರಹ್ಮಚರ್ಯಾದಿ ಇತರ ಆಶ್ರಮದವರು ಸ್ವತಃ ಆಹಾರವನ್ನು ತಯಾರಿಸಬಾರದು. ವಾಯುವು ಎಲ್ಲಾ ಪ್ರಾಣಿಗಳ ಜೀವನಕ್ಕೆ ಎಷ್ಟು ಮುಖ್ಯವೋ ಗೃಹಸ್ಥರು ಇತರರಿಗೆ ಅಷ್ಟೇ ಆಧಾರಭೂತರು. ಆದುದರಿಂದ ಗೃಹಸ್ಥರು ಅಕಸ್ಮಾತ್ ಬಂದಿರುವ ಅತಿಥಿ-ಗಳನ್ನೂ ಕರೆದು ಬಂದಿರುವ ಅಭ್ಯಾಗತರನ್ನೂ ಆದರೋಪಚಾರಗಳಿಂದ ಸಂತೋಷ ಪಡಿಸಬೇಕು. ಸಂತರ್ಪಣೆಯೆಂದರೆ ಸಂತೋಷಪಡಿಸುವುದೆಂದರ್ಥ. ಕೇವಲ ಪರೋಪಕಾರ ಇಲ್ಲವೇ ಸ್ವಕರ್ತವ್ಯ ಎಂಬ ಭಾವನೆಯಿಂದ ಮಾಡುವ ಅನ್ನದಾನವು ಶ್ರೇಷ್ಠವಾದುದು. ಅನ್ನವೆಂದರೆ ಬ್ರಹ್ಮವೇ. ಆಹಾರವಸ್ತುಗಳೆಲ್ಲಾ ಅನ್ನಶಬ್ದ ವಾಚ್ಯಗಳು. ಎಲ್ಲಾ ಪ್ರಾಣಿಗಳಿಗೂ ಆಹಾರ ಬೇಕು. ಆಹಾರದ ಕೆಲ ಭಾಗ ಸ್ತ್ರೀ ಪುರುಷರಲ್ಲಿ ಕ್ರಮವಾಗಿ ಶೋಣಿತರಕ್ತರೂಪವಾಗಿ ಪರಿಣಮಿಸುವುದು. ಅವುಗಳ ಸಂಯೋಗದಿಂದ ಜಂತುಗಳ ಉತ್ಪತ್ತಿಯಾಗುವುದು. ಪ್ರಾಣಿಗಳ ಉತ್ಪತ್ತಿಗೆ ಅನ್ನವೇ ಕಾರಣ. ಅನ್ನಕ್ಕೆ ಮಳೆ (ಪರ್ಜನ್ಯ) ಕಾರಣ, ಮಳೆಗೆ ಯಜ್ಞವು ಕಾರಣ ಯಜ್ಞವು ಕರ್ಮದಿಂದ, ಅಂಥ ಕರ್ಮವು ಬ್ರಹ್ಮ ಮೂಲಕವಾದುದು. ಹೀಗೆ ಪರಂಪರೆಯಿಂದ ಅನ್ನವೆಂದರೆ ಬ್ರಹ್ಮವೇ ಸರಿ.

ಇಂಥ ಅನ್ನದಾನದ ಪುಣ್ಯವು ಸುಖವನ್ನೀಯುವುದು. ಬ್ರಹ್ಮನಿಂದ "ಯಥಾ ಕರ್ಮ ಯಥಾ ಶ್ರುತಂ" ಯಾವ ಪ್ರಾಣಿಗಳ ಪಾಪಪುಣ್ಯಗಳು ಎಷ್ಟೆಷ್ಟಿವೆಯೋ ತದನುಗುಣವಾಗಿ ಅವುಗಳು ಸೃಷ್ಟಿಸಲ್ಪಟ್ಟಿವೆ. ಎಲ್ಲಾ ಆನಂದಮಯ ಪರಮಾತ್ಮನೇ. ಆದರೆ ಉಪಾಧಿಯಿಂದ ನಾನು ತಾನೆಂಬ ಭಾವನೆ ಬೆಳೆಯುತ್ತದೆ. ಆತ್ಮಸಾಕ್ಷಾತ್ಕಾರವು ಥಟ್ಟನೆ ಆಗಲಾರದಾದರೂ ವೇದೋದಿತ ನಿಷ್ಕಾಮಕರ್ಮಾಚರಣೆಯಿಂದ ಜ್ಞಾನ-ವುಂಟಾಗುತ್ತದೆ. ಅದೇ ಮೋಕ್ಷಕ್ಕೆ ಕಾರಣವಾಗಿದೆ. ಮನುಷ್ಯನು ಪುರುಷಾರ್ಥ ಸಾಧಿಸಲೇಬೇಕು. ಅದಕ್ಕೆ ವೇದಾನುಸಾರ ಶಾಸ್ತ್ರೋಪದೇಶದಂತೆ ಆಚರಣೆ ಬೇಕು.

"ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ। ನ ಸ ಸಿದ್ಧಿಮವಾ-ಪ್ನೋತಿ ನ ಸುಖಂ ನ ಪರಾಂ ಗತಿಮ್" ಶಾಸ್ತ್ರವಿಧಿಯನ್ನು ಬಿಡುವವನು ಸುಖವನ್ನೂ ಸದ್ಗತಿಯನ್ನೂ ಪಡೆಯಲಾರನು. ಅದಕ್ಕಾಗಿಯೇ ರಾಜರ್ಷಿ ಮನುವು ಧರ್ಮಸಮ್ಮತ-ವಾಗಿ ನಡೆಯಲು ತಿಳಿಸಿರುವನು. ತಮ್ಮ ತಮ್ಮ ಕರ್ತವ್ಯಗಳನ್ನರಿತು ಸಕಲರು ಆಚರಿಸಿ ತನ್ಮೂಲಕ ಶ್ರೇಯೋಭಾಗಿಗಳಾಗುವಂತೆ ಶ್ರೀರಾಮಚಂದ್ರನು ಅನುಗ್ರಹಿಸಲಿ!

೮. ಧರ್ಮಾಚರಣೆಯ ರಹಸ್ಯ

('ರಾಷ್ಟ್ರಮತ' ೨೪-೧-೧೯೩೪)

ಧರ್ಮಾನುಸರಣೆಯು ಮಾನವ ಜೀವಿತದ ಮುಖ್ಯ ಲಕ್ಷ್ಯ. ವೇದವಿಹಿತವಾದ ಧರ್ಮವೇ ಅನುಷ್ಠಾನಕ್ಕೆ ಅರ್ಹವಾಗಿದೆ. ಭಗವಾನ್ ವೇದವ್ಯಾಸರು ಪರ್ವತಾ-ಕಾರವಾಗಿದ್ದ ವೇದರಾಶಿಯನ್ನು ಸಂಗ್ರಹಿಸಿ ಮಾನವರಿಗೆ ಶ್ರೇಯಃಪ್ರದವಾಗುವಂತೆ ವ್ಯವಸ್ಥೆಗೊಳಿಸಿದ್ದಾರೆ. ವೇದಗಳು ಪ್ರಭುವಿನಂತೆ ಮಾನವರಿಗೆ ಧರ್ಮಾನುಷ್ಠಾನ ಹಾಗೂ ಅಧರ್ಮನಿವೃತ್ತಿಗೆ ಪ್ರಚೋದನೆಯನ್ನೀಯುತ್ತಿವೆ. "ಹೀಗೆ ಮಾಡಬೇಕು, ಹೀಗೆ ಮಾಡಬಾರದು" ಎಂಬುವನ್ನು ವೇದಗಳು ಬೋಧಿಸುತ್ತಿವೆ. ಧರ್ಮಾಧರ್ಮಗಳ ಸಮಗ್ರರಹಸ್ಯವೂ ಪಾರಮಾರ್ಥಿಕ ಪರಿಜ್ಞಾನ ಸರ್ವಸ್ವವೂ ವೇದಗಳಲ್ಲಿ ತುಂಬಿದೆ. ಇಂಥ ವೇದೋಕ್ತವಾದ ಧರ್ಮವನ್ನು ಪ್ರತಿಯೊಬ್ಬರೂ ಅನುಷ್ಠಾನಕ್ಕೆ ತರಬೇಕು.

ಧರ್ಮಾನುಷ್ಠಾನದಿಂದ ಐಹಿಕ ಪಾರಲೌಕಿಕ ಸುಖಗಳನ್ನೂ, ಸಕಲ ಇಷ್ಟಾರ್ಥ-ಗಳನ್ನೂ, ಸಂಪತ್ತನ್ನೂ ಮಾನವನು ಪಡೆಯುತ್ತಾನೆಂದು ವೇದವ್ಯಾಸರು ಹೇಳಿದ್ದಾರೆ. ಕಬ್ಬಿಗಾಗಿ ಹಾಯಿಸಿದ ನೀರಿನಿಂದ ಸಮೀಪದಲ್ಲೇ ಹುಲ್ಲು ಮೊದಲಾದವುಗಳಿಗೆ ಪ್ರಯೋಜನ ದೊರಕುವುದು ಅನುಭವಸಿದ್ಧ. ಆದರೆ ಹುಲ್ಲನ್ನು ಬೆಳೆಸುವುದಕ್ಕಾಗಿ ನೀರು ಹಾಯಿಸುವುದಲ್ಲ. ಹುಲ್ಲೂ ಕಬ್ಬಿನ ಜೊತೆಗೆ ಪುಷ್ಟವಾದರೆ ದನಗಳಿಗೆ ಉಪಯುಕ್ತವೇ. ಅಂತೆಯೇ ಧರ್ಮವು ಮುಖ್ಯ. ಅದರ ಅನುಸರಣೆಯಿಂದ ಸುಖಸಂಪತ್ತುಗಳ ಲಾಭವೇ ಪ್ರಧಾನವಾದರೆ ಧರ್ಮವು ಗೌಣವಾಗಿ ನಾಶ ಹೊಂದು-ತ್ತದೆ. ಇದು ಸರಿಯಲ್ಲ. ಧರ್ಮವು ಪ್ರಧಾನವಾಗಿದ್ದು ಅದೇ ಲಕ್ಷ್ಯವಾಗಿದ್ದು ಆಚರಿಸಲ್ಪಟ್ಟರೆ ಇತರ ಫಲಗಳು ಆನುಷಂಗಿಕವಾಗಿ ಪ್ರಾಪ್ತವಾಗಿಯೇ ಬಿಡುತ್ತವೆ. ಇದನ್ನೆಲ್ಲರೂ ಗಮನಿಸಬೇಕು.

ಜಗತ್ತಿನಲ್ಲಿಂದು ಭೌತಿಕವಾದವು ಬಲವಾಗಿದೆ. 'ಸ್ವಭಾವಂ ಭೂತಚಿಂತಕಾಃ' ಎಂಬಂತೆ ಪ್ರತಿಯೊಂದಕ್ಕೂ ಪ್ರಕೃತಿಯೇ ಕಾರಣವೆಂದು ಭೌತಿಕವಾದಿಗಳ ಮತ. ಪ್ರಕೃತಿಯ ವಿಪರ್ಯಾಸಕ್ಕೆ ಧರ್ಮದ ನ್ಯೂನಾತಿರೇಕಗಳೇ ಕಾರಣವೆಂದು ಸನಾತನಿಗಳ ಸಿದ್ಧಾಂತ. ಆದರೂ ಭೂತವಾದಿಗಳು ಇದನ್ನು ಮರೆತಿದ್ದಾರೆ. ಪಂಚ ಭೂತಗಳಿಂದ ಮಾನವನು ಅಸ್ತಿತ್ವಕ್ಕೆ ಬಂದಿದ್ದಾನೆ. ಈ ಭೂತಗಳ ಶಕ್ತಿಯಿಂದಲೇ ಮಹಾ ವಿಧ್ವಂಸಕಾಸ್ತ್ರಗಳನ್ನು ನಿರ್ಮಾಣ ಮಾಡಿ ಮಾನವನು ವಿಕಟಾಟ್ಟಹಾಸಕ್ಕೆ ತೊಡಗಿದ್ದಾನೆ. ಅಧ್ಯಾತ್ಮವಾದದ ತಿರಸ್ಕಾರದಿಂದ ಧರ್ಮದ ವ್ಯತಿಕ್ರಮದಿಂದ ಮಾನವನು ಅಧಃಪಾತ ಹೊಂದುವುದು ನಿಶ್ಚಿತ. ಹಿಂದೆದಾನವರು ತಮ್ಮ ಆಸುರೀಶಕ್ತಿ-ಯಿಂದ ಜಗತ್ತನ್ನೇ ತಳಮಳಗೊಳಿಸಿದುದೂ ದೈವೀಶಕ್ತಿಯ ಅವತಾರದಿಂದ ಲೋಕಕ್ಕೆ

ಕಲ್ಯಾಣವಾಗಿದೆ. ಇಂದಾದರೂ ಅದೇ ದೈವೀಶಕ್ತಿಯ ಅವತಾರವು ಅನಿವಾರ್ಯ ಧರ್ಮವಿದ್ದಲ್ಲಿ ಜಯವಿದೆ; ದೈವೀಶಕ್ತಿಯಿದೆ. ಅಂಥ ಧರ್ಮದ ಪರಿಪಾಲನೆಯಿಂದಲೇ ಈಗ ಮಹಾನರ್ಥದಿಂದ ಲೋಕವನ್ನು ಪಾರುಗೊಳಿಸುವುದು ಸಾಧ್ಯ.

ಲೋಕವಲ್ಲಿಂದು ಧರ್ಮೋಪದೇಶವೆಂಬುದು ಸಾಮರ್ಥ್ಯಹೀನರ ಮಾತೆಂದು ಗಣಿಸಲಾಗುತ್ತಿದೆ. ಶಾಂತಿಯು ಅಶಕ್ತರ ಆಯುಧವೆನ್ನಲಾಗುತ್ತಿದೆ. ಇದು ತಪ್ಪು. ಧರ್ಮವು ಸಕಲ ಜಗತ್ತನ್ನೇ ಆಧರಿಸಿಕೊಂಡಿದೆ. ಉತ್ತಮ ಕರ್ಮಾನುಷ್ಠಾನ ಮಾಡುವವನಿಗೆ ಎಂದೂ ದುರ್ಗತಿಯಿಲ್ಲ. ತನ್ನ ಕರ್ಮವನ್ನು ಶ್ರದ್ಧಾ ಪೂರ್ವಕ ಮಾಡುವುದರಿಂದ ಧರ್ಮವು ಸಿದ್ಧಿಸುತ್ತದೆ. ವೇದವಿಹಿತವಾದ ಸತ್ಯ ಧರ್ಮದ ಅನುಷ್ಠಾನವೇ ಧರ್ಮವೆನಿಸುತ್ತದೆ.

ಇಂದು ಧರ್ಮದ ಹೆಸರಿನಲ್ಲಿ ಕಲಹ ಕೋಲಾಹಲಗಳು ಸಂಭವಿಸುತ್ತಿರುವುದನ್ನು ಜನರು ಮರೆತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಪ್ರತಿಯೊಬ್ಬನೂ ಸ್ವಾರ್ಥಾ-ಸೂಯೆಗಳನ್ನು ಬಿಟ್ಟು ಸ್ವಕರ್ತವ್ಯಪರಾಯಣನಾಗಿ ಆಚಾರ್ಯೋಪದೇಶದಂತೆ ವರ್ತಿಸಿದಲ್ಲಿ ಅಶಾಂತಿಯು ತಲೆದೋರಲಾರದು. ಆಚಾರ್ಯರ ಮಾತಿನಲ್ಲಿ ಗೌರವ ಬುದ್ಧಿಯನ್ನಿರಿಸಿಕೊಂಡು ಸತ್ಕರ್ಮದಲ್ಲಿ ಪ್ರವೃತ್ತನಾದ ಮಾನವನಿಗೆ ಸದಾ ಶ್ರೇಯಸ್ಸು ಉಂಟಾಗುತ್ತದೆ. ಭೌತಿಕವಾದದ ಆಘಾತದಿಂದ ಎಚ್ಚತ್ತು, ಸನಾತನ ಧರ್ಮವನ್ನು ಸರ್ವಾತ್ಮನ ಆಧರಿಸಿ, ಧರ್ಮ ಭೂಮಿಯಾದ ಭಾರತದಲ್ಲಿ ಧರ್ಮವೀರರಾಗಿ ಮೆರೆದು ಜಗತ್ತಿಗೆ ಬಂದೊದಗಿದ ವಿಪತ್ತನ್ನು ದೂರಮಾಡಲು ಸರ್ವರೂ ಬದ್ಧಕಂಕಣರಾಗಬೇಕು. ಅದಕ್ಕಾಗಿ ಆಸ್ತಿಕತೆಯನ್ನೂ ಧಾರ್ಮಿಕ ಜಾಗೃತಿಯನ್ನೂ ಸಕಲರೂ ಪಡೆಯುವಂತೆ ಶ್ರೀರಾಮಚಂದ್ರನು ಅನುಗ್ರಹಿಸಲಿ.

****

೯. ಮಾನವನ ಪರಮ ಧ್ಯೇಯ

('ರಾಷ್ಟ್ರಮತ' ೨೬-೬-೧೯೬೪)

ಪರಮಾತ್ಮ ಪ್ರಚೋದಿತವಾದ ಪ್ರಕೃತಿಯಿಂದುಂಟಾದ ಪ್ರಪಂಚದಲ್ಲಿ ಮಾನವ ಲೋಕದೊಳಗಿನ ಜೀವಿಗಳೊಳಗೆ ಮನುಷ್ಯನೇ ಬುದ್ಧಿವಿಶೇಷದಿಂದ ಹೆಚ್ಚಿನವನು. ಭಗವಂತನು ಈ ಮಾನವನಿಗೇನೇ ಪಾಪ, ಪುಣ್ಯ, ಧರ್ಮ, ಅಧರ್ಮಗಳ ವಿಚಾರದ ಹೊಣೆಯನ್ನು ಸೃಷ್ಟ್ಯಾರಂಭದಿಂದಲೇ ಹೊರಿಸಿರುವನು. ಪುಣ್ಯವಿಶೇಷವಿದ್ದರೆ ಮಾತ್ರ ಗುರುದೇವತಾಸೇವೆಗೆ ಬುದ್ಧಿಯೂ ಅವಕಾಶವೂ ದೊರಕುವುದು.

ಭಾರತ ರಾಮಾಯಣಾದಿ ಇತಿಹಾಸಗಳನ್ನು ಅವಲೋಕಿಸಿದರೆ ಈ ವಿಷಯ ಸಂಪೂರ್ಣ ಮನವರಿಕೆಯಾಗುತ್ತದೆ. "ಇತಿ+ಹ+ಆಸ"- ಎಂದರೆ ಈ ಪ್ರಕಾರವಾಗಿ ನಡೆದಿತ್ತು" ಎಂದರ್ಥ. ಹಿಂದಿನವರು ಯಾವುದೇ ಸ್ವಾರ್ಥಕ್ಕಾಗಿ ಸುಳ್ಳನ್ನು ಸರ್ವಥಾ ಹೇಳಿದವರಲ್ಲ. ಸತ್ಯ, ಅಹಿಂಸೆ ಮುಂತಾದ ಸದ್ಗುಣಗಳು ಅವರಲ್ಲಿ ಮೈಗೂಡಿದ್ದವು. ಮಹರ್ಷಿಗಳಂತೂ ಶಮ ದಮಾದಿ ನಿಯಮನಿಷ್ಠರಾಗಿದ್ದು ಪ್ರಪಂಚದ ಎಲ್ಲಾ ವಸ್ತುಗಳ ಗುಣ ಲಕ್ಷಣಗಳನ್ನೂ ತಮ್ಮ ಬುದ್ಧಿಸೂಕ್ಷ್ಮತೆಯಿಂದ ಅರಿತು ತಾವೂ ಕೃತಾರ್ಥರಾಗಿ ಮುಂದಿನವರಿಗೂ ಸನ್ಮಾರ್ಗದರ್ಶನ ಮಾಡಿದ ಮಹಾತ್ಮರಾಗಿರುವರು. ಸಾಮಾನ್ಯವಾಗಿ ಲೋಕದ ಎಲ್ಲಾ ಪರಿಸ್ಥಿತಿಗಳ ನಿಜವೇನು ? ಎಂದು ತಿಳಿಯಲು ಸಾಧ್ಯ. ಜ್ಞಾನಸಂಪನ್ನತೆಯ ಮೂಲಕ ಋಷಿಗಳು ಮಾಯೆಯಿಂದ ನಿವೃತ್ತರಾಗಿ ತಾವೂ ಆನಂದವನ್ನನುಭವಿಸಿ ವಿವೇಕಿಗಳಿಗೆ ಆನಂದವುಂಟಾಗುವ ಮಾರ್ಗವನ್ನು ಉಪದೇಶಿಸಿರುವರು. ಈಗಿನ ಭೌತಿಕ ವಿಜ್ಞಾನಿಗಳು ಎಷ್ಟೇ ಸಂಶೋಧನೆ ನಡೆಸಿ ವ್ಯಾವಹಾರಿಕ ಸಲಕರಣೆಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದರೂ ಮಹರ್ಷಿಗಳಂತೆ ಲೋಕಾಂತರದಲ್ಲಿ ತೇಜೋಮಯ, ವಾಯುಮಯ, ಶರೀರಧಾರಿಗಳೊಡನೆ ಸಮಾನ-ಯೋಗ್ಯತೆಯಿಂದ ವ್ಯವಹರಿಸಲು ಶಕ್ತರಾಗಿಲ್ಲ. ಹೀಗೆ ಸಮರ್ಥರಾಗಲು ಸಾಧ್ಯವೂ ಇಲ್ಲ. ಒಬ್ಬನ ನಿರ್ಣಯವನ್ನು ಇನ್ನೊಬ್ಬನು ತನ್ನ ಬುದ್ಧಿಬಲದಿಂದ ತಪ್ಪುನಿರ್ಣಯ-ವೆಂದು ಸಾಧಿಸಿ ತೋರಿಸುತ್ತಲೇ ಬಂದಿರುವನು.

ಭೌತಿಕ ವಿಚಾರವೇ ಹೀಗೆ. ಯಾವಾಗಲೂ ಒಂದು ನಿರ್ಣಯಕ್ಕೆ ನಿಲ್ಲಲಾರದು.

"ಯಸ್ಮಿನ್ ವಿಜ್ಞಾತೇ ಸರ್ವಂ ವಿಜ್ಞಾತಂ ಭವತಿ" (ಉಪನಿಷತ್)

ಯಾವ ಚಿದಾನಂದ ಸ್ವರೂಪ ಆತ್ಮನನ್ನು ಅರಿತರೆ ಎಲ್ಲವೂ ತಿಳಿದುಬರುವುದೋ ಅದನ್ನು ತಿಳಿಯುವುದೇ ಮಾನವನ ಪರಮ ಗುರಿ. ಸತ್ಯ ಶೀಲರಾಗಿರುವುದೂ

ಪರಂಪರೆಯಾಗಿ ಬಂದ ಕುಲದೇವರಲ್ಲಿ ಕುಲಗುರುಗಳಲ್ಲಿ ಭಕ್ತಿ ಶ್ರದ್ಧೆಯಿಂದ ನಡೆದುಕೊಳ್ಳುವುದೂ ಎಲ್ಲವನ್ನು ತಿಳಿಯಲೂ ಪಡೆಯಲೂ ಹೆದ್ದಾರಿಯಾಗಿವೆ. ಯುಗ-ಯುಗಕ್ಕೆ ಮಾನವನ ಬುದ್ಧಿಯೂ ಆಚರಣೆಯೂ ಸ್ಥಿತ್ಯಂತರಗಳನ್ನು ಹೊಂದುತ್ತ ಬರುತ್ತಿದ್ದರೂ ವಿವೇಕಿಗಳು ವೇದ, ಶಾಸ್ತ್ರ, ಆರ್ಷ ಪರಂಪರೆಗಳನ್ನು ಗೌರವಿಸುತ್ತ ನಡೆದುಕೊಂಡು ಬಂದು ಸಂಪೂರ್ಣ ಹಿತವನ್ನು ಸಾಧಿಸಿಕೊಳ್ಳುತ್ತಾರೆ. ಶಾಸ್ತ್ರಜ್ಞರು ಸಂಸಾರವು ಅನಾದಿಯೆಂದು ಸಾರುತ್ತ ಬಂದಿರುವಾಗ ಭೌತಿಕ ವಿಜ್ಞಾನಿಗಳು ಈ ಭೂಲೋಕಕ್ಕೆ ಸಾವಿರಾರು ವರ್ಷ ಕಳೆಯಿತೆಂದೂ ಲಕ್ಷಾಂತರ ವರ್ಷ ಸಂದಿತೆಂದೂ ಕೋಟಿ ವರ್ಷ ಗತಿಸಿತೆಂದೂ, ನಿರ್ದಿಷ್ಟ ಕಾಲನಿರ್ಣಯ ಸಾಧ್ಯ ಇಲ್ಲೆಂದೂ ಬಗೆಬಗೆಯಿಂದ ಅಭಿಪ್ರಾಯಪಟ್ಟ ಪೂರ್ವಶಾಸ್ತ್ರನಿರ್ಣಯಕ್ಕೇ ಬಂದು ಮುಟ್ಟಿ-ದಂತಾಗಿದೆ. ಸಮುದ್ರಕ್ಕೆ "ರತ್ನಾಕರ" ವೆಂಬ ಹೆಸರನ್ನಿಟ್ಟಿರುವುದು ಈಗೀಗ ಸಂಶೋಧನೆಯಿಂದ ನಿಜವೆಂದು ಅಭಿಪ್ರಾಯಕ್ಕೆ ಬಂದಿರುವುದೂ ಗಮನಾರ್ಹವಾಗಿದೆ.

"ಅಣೋರಣೀಯಾನ್ ಮಹತೋ ಮಹೀಯಾನ್
ಆತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋಃ"

(ಉಪನಿಷತ್)

ಸೂಕ್ಷ್ಮಾತ್ ಸೂಕ್ಷ್ಮವೂ ಮಹತ್ತಿಗಿಂತ ಮಹತ್ತರವೂ ಆದ ಪರಮಾತ್ಮನನ್ನು ಗುರುತಿಸುವುದರಲ್ಲಿ ತಮ್ಮ ಸೂಕ್ಷ್ಮಬುದ್ಧಿಯನ್ನೂ ಜೀವನ ಸರ್ವಸ್ವ ವಿನಿಯೋಗಿಸಿದ (ಸೂಕ್ಷ್ಮದರ್ಶಿಭಿಃ) ನಮ್ಮ ಪೂರ್ವಜರಾದ ಮಹರ್ಷಿಗಳ ವಚನವೇ ಸರ್ವೋತ್ಕೃಷ್ಟವೂ ದೋಷರಹಿತವೂ ಆಗಿದೆ ಎಂಬುದರಲ್ಲಿ ಸಂದೇಹಕ್ಕೆಡೆಯಿಲ್ಲ.

ಮಹರ್ಷಿಗಳು ಅಸತ್ಯ, ಅನ್ಯಾಯ, ಪ್ರತಾರಕ ವಚನಗಳಿಗೆ ಬಯಪಡುವಷ್ಟು ಇನ್ನಾವುದಕ್ಕೂ ಭಯಪಡತಕ್ಕವರಲ್ಲ. ವೇದ ಶಾಸ್ತ್ರಾದಿಗಳಲ್ಲಿ ಶ್ರದ್ಧೆ ಆದರಣೆಗಳು ಕಡಮೆಯಾಗುತ್ತ ಬಂದು ಉಪನಿಷದ್ಧರ್ಮನಿಷ್ಠೆಯು ಈಗಿನಷ್ಟು ಕುಂದುಬಂದಿರುವ ಸಾಮಾನ್ಯ ಒಂದೂಕಾಲು ಸಾವಿರ ವರ್ಷಗಳ ಹಿಂದೆ ಶ್ರೀ ಶಂಕರ ಭಗವತ್ಪಾದರು ಅವತರಿಸಿ ಭಾರತಾದ್ಯಂತ ಸಂಚಾರ ಕೈಗೊಂಡು ಮಾನವಕಲ್ಯಾಣಕ್ಕಾಗಿ ಧರ್ಮ ತತ್ತ್ವಗಳನ್ನು ಪುನರುಜ್ಜೀವನ ಗೊಳಿಸಿದರು. ಧರ್ಮಾಚರಣೆ ತತ್ತ್ವೋಪದೇಶಗಳು ನಿರಂತರ ನಡೆದು ಬರುವಂತೆ ಅಲ್ಲಲ್ಲಿ ಗುರುಪೀಠವನ್ನು ಸಂಸ್ಥಾಪಿಸಿ. ಗುರುಪೀಠದ ಆದೇಶವಂತೆ ನಡೆಯುವುದೇ ಶಿಷ್ಯರಿಗೆ ಹಿತಾವಹವೆಂದು ಕರ್ತವ್ಯವನ್ನು ಆದೇಶಿಸಿದಂತೆ ಈವರೆಗೂ ಆ ರೀತಿ ನಡೆದುಬರುತ್ತಿರುವುದು ಎಲ್ಲರಿಗೂ ವಿದಿತ ವಿಷಯವಷ್ಟೆ? ಧರ್ಮಾಚಾರ್ಯ ಪೀಠದವರ ಆದೇಶವು ಶಿಷ್ಯರಿಗೆ ಕ್ರಮಪ್ರಾಪ್ತವಾದ ಸೂಕ್ತ ಮಾರ್ಗ ದರ್ಶನವಾಗಿದೆ.

"ಧರ್ಮೋ ಮೂಲಂ ಮನುಷ್ಯಾಣಾಂ........ ಶಾಸನಂ ಸರ್ವತೋಽಧಿಕಂ" (ಮಠಾಮ್ನಾಯ) (ತಾತ್ಪರ್ಯ: ಮನುಷ್ಯನಿಗೆ ಧರ್ಮವು ಅತ್ಯವಶ್ಯವು. ಅದು ಆಚಾರ್ಯರನ್ನು ಅವಲಂಬಿಸಿರುತ್ತದೆ. ಧರ್ಮಾಚಾರ್ಯರ ಆದೇಶವು ಶಿಷ್ಯರಿಗೆ ಸರ್ವಾಧಿಕವಾದ ಶಾಸನವಾಗಿರುತ್ತದೆ. ಆಯಾ ಶಿಷ್ಯಸಮಾಜಕ್ಕೆ ಆಯಾ ಗುರುಪೀಠದ ಆಜ್ಞಾ ಅಭಿಪ್ರಾಯಗಳು ಆಚರಣೀಯ ಹಾಗೂ ಅನುಕರಣೀಯ. ಜ್ಯೋತಿಷ್ಯವು ಧರ್ಮಶಾಸ್ತ್ರಕ್ಕೂ ಸಂಬಂಧಿಸಿದ್ದು. ಧರ್ಮಶಾಸ್ತ್ರ ಜ್ಯೋತಿಷ್ಯಗಳ ಸಂಬಂಧವಾಗಿ ಬೋಧಾಯನರ ವಚನವು ಗಮನಾರ್ಹವಾಗಿದೆ. "ಪರಸ್ಪರವಿರೋಧೇ ತು ಜ್ಯೋತಿಷೋಕ್ತಾಗಮೋಕ್ತಯೋಃ। ಜ್ಯೋತಿಷೋಕ್ತಂ ವಿಹಾಯೈವ ಸ್ಮೃತಿಚೋದಿತಮಾಚರೇತ್''॥ ಜ್ಯೋತಿಷಕ್ಕೂ ಧರ್ಮಶಾಸ್ತ್ರಕ್ಕೂ ವಿರೋಧ ಬಂದಾಗ ಸ್ಮೃತಿವಚನದಂತೆ ನಡೆಯುವುದೇ ಧರ್ಮವು ಎಂದು ಹೇಳಿರುತ್ತಾರೆ. ಹೀಗೆ ಧರ್ಮನಿರ್ಣಯವು ಆರ್ಷವಾಕ್ಯಸಮನ್ವಯದಿಂದ ನಡೆದುಬಂದಿರುವುದು. ಮತ್ತು ಹಾಗೆ ನಿರ್ಣಯಿಸಲು ಧರ್ಮಜ್ಞರ ಪರಿಷತ್ತು ಅಥವಾ ಆತ್ಮಜ್ಞರೊಬ್ಬರ ನಿರ್ಣಯವು ಸರ್ವಮಾನ್ಯವೆಂಬುದರಲ್ಲಿ ಸಂದೇಹವಿಲ್ಲ. ಕಾರಣ ಧರ್ಮಸೂಕ್ಷ್ಮವನ್ನರಿತು ನಾವು ಸಮಾಜದ ಧರ್ಮಾಚರಣೆಯ ಕಾಲ ನಿರ್ಣಯಾನುಕೂಲಕ್ಕೆ ಪರಂಪರಾನುಗುಣ ಹಾಗೂ ಶಾಸ್ತ್ರಸಮ್ಮತವಾದ ಪಂಚಾಂಗವನ್ನು ಪ್ರಕಟಿಸಲು "ಧಾರ್ಮಿಕ ಪಂಚಾಗ" ಸಮಿತಿಯೊಂದನ್ನು ನಿರ್ದೇಶಿಸಿದ್ದು, ಅವರು ಈ ವರ್ಷದಿಂದ ಪಂಚಾಂಗವನ್ನು ಪ್ರಕಟಿಸಲು ಪ್ರಾರಂಭಿಸಿರುವರು. ಎಲ್ಲ ಕಡೆಯ ಶಿಷ್ಯರಿಗೂ ಇದನ್ನು ವಿತರಣೆ ಮಾಡಿಸುವ ಸಂಕಲ್ಪವಿದ್ದರೂ ಸಮಯಾವಕಾಶ ಸಾಲದ್ದರಿಂದ ಈ ವರ್ಷ ಅನುಕೂಲವಾಗಿಲ್ಲ. ಮುಂದಿನಿಂದ ಈ "ಧಾರ್ಮಿಕ ಪಂಚಾಂಗ"ದಂತೆ ಸಕಲರೂ ತಮ್ಮ ತಮ್ಮ ಧರ್ಮಾಚರಣೆ ನಡೆಸುತ್ತಾ ಬಂದು ಗುರುಪೀಠದವರ ಅಪ್ಪಣೆಯಲ್ಲಿಯೂ ಧರ್ಮಾಚರಣೆಯಲ್ಲಿಯೂ ಭಕ್ತಿಶ್ರದ್ಧೆಯಿಂದ ಪ್ರವೃತ್ತರಾಗಿ, ವಿವೇಕಿಯಾದ ಮಾನವನು ಶ್ರೀಗುರು ದೇವತಾನುಗ್ರಹದ ಮೂಲಕ ಪಡೆಯಲೇಬೇಕಾದ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳಲಿ !

೧೦. ಧರ್ಮಭಾವನೆಯೇ ಮಾನವತೆ

('ಮುನ್ನಡೆ' ೧೨-೩-೧೯೭೪)

''ಪ್ರತಿಯೊಬ್ಬನೂ ತಾನು ನಿರಂತರವೂ ಅಖಂಡ ಸುಖವನ್ನೇ ಅನುಭವಿಸಬೇಕೆಂದು ಅಪೇಕ್ಷಿಸುತ್ತಾನೆ. ಆ ಅಪೇಕ್ಷೆಯನ್ನು ಈಡೇರಿಸಿಕೊಳ್ಳುವ ಹೇತುವಿನಿಂದ ಹಗಲಿರುಳೆನ್ನದೆ ಹಲವು ಮುಖವಾಗಿ ಹೆಣಗಾಡುತ್ತಲಿರುತ್ತಾನೆ. ಆದರೆ, ಯಾವನೊಬ್ಬ ಮನುಷ್ಯನೂ ಅಂತಹ ಅಖಂಡ ಸುಖವನ್ನು ಪಡೆಯಲಾರದವನಾಗಿದ್ದಾನೆ. ಸುಖವೆನ್ನುವದು ಪುಣ್ಯದ ಫಲವು; ದುಃಖವೆನ್ನುವದು ಪಾಪದ ಫಲವು. ಯಾವನ ಪುಣ್ಯಸಂಗ್ರಹವು ಹೆಚ್ಚು ಪ್ರಮಾಣದಲ್ಲಿರುವದೋ ಅವನು ಹೆಚ್ಚು ಸುಖವನ್ನು ಹೊಂದುವನು. ಪಾಪದ ಪ್ರಮಾಣವೇ ಹೆಚ್ಚಿನದಾಗಿದ್ದರೆ ಕಷ್ಟದ ಪ್ರಮಾಣವೇ ಹೆಚ್ಚುವದು. ಪಾಪಪುಣ್ಯಗಳು ಕಣ್ಣಿಗೆ ಕಾಣಿಸುವಂಥವುಗಳಲ್ಲ. ಅವುಗಳಿಗೆ ಆಕಾರವಿಲ್ಲ. ಅವು ವಸ್ತುಗಳಲ್ಲ. ಅವು ಹೇಗಿರುತ್ತವೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಅವುಗಳ ಫಲಗಳಾದ ಕಷ್ಟ ಸುಖಗಳಾದರೂ ಕಣ್ಣಿಗೆ ಕಾಣಿಸುವಂಥವುಗಳಲ್ಲ. ಅವುಗಳ ಪರಿಣಾಮ ಮನಸ್ಸಿನ ಮೇಲಾಗಿ ಅನುಭವಕ್ಕೆ ಬರುತ್ತಿರುತ್ತದೆ. ಒಬ್ಬನು ಸುದೃಢನೂ ಸ್ಫುರದ್ರೂಪಿಯೂ ಆಗಿದ್ದಾನೆಂದು ಕಾಣಿಸಿದ ಮಾತ್ರಕ್ಕೆ ಆತನು ಸುಖಿಯೆಂದು ಹೇಳಲು ಸಾಧ್ಯವಿಲ್ಲ. ಹಲವಾರು ಬಗೆಯ ಚಿಂತೆ, ನೋವು ಮೊದಲಾದವುಗಳು ಆವನ ಮನಸ್ಸನ್ನು ಮುತ್ತಿರಬಹುದು. ಅದರಂತೆಯೇ ಕಣ್ಣಿಗೆ ಬಡಕನಾಗಿ, ಕುರೂಪಿಯಾಗಿ ಕಾಣಿಸುವವರೆಲ್ಲರೂ ದುಃಖಿಗಳೇ ಎಂದು ಎನ್ನಲೂ ಬರುವಂತಿಲ್ಲ. ಅವರು ಮಾನಸಿಕವಾಗಿ ನೆಮ್ಮದಿಯನ್ನು ಹೊಂದಿರಬಹುದಾಗಿದೆ. ಆದುದರಿಂದ ಯಾವನು ಹೆಚ್ಚು ಸುಖವನ್ನು ಬಯಸುತ್ತಾನೋ ಆತನು ಹೆಚ್ಚು ಪುಣ್ಯ ಸಂಗ್ರಹಿಸಲು ಪ್ರಯತ್ನಿಸಬೇಕು. ಪುಣ್ಯವೆಂದರೆ ಸತ್ಕಾರ್ಯಗಳು ಎಂದು ಸಾಮಾನ್ಯವಾಗಿ ಹೇಳಬಹುದು. ಒಳ್ಳೆಯ ಕೆಲಸಗಳನ್ನು ಮಾಡುವುದರಿಂದ ಮನಸ್ಸಿಗೆ ಸಮಾಧಾನ...ನೆಮ್ಮದಿ ಉಂಟಾಗುತ್ತದೆ. ಅಂಥ ಸತ್ಕಾರ್ಯಗಳನ್ನು ಮಾಡುವುದಕ್ಕೆ ಆಚಾರ - ವಿಚಾರಗಳಲ್ಲಿ ಪರಿಶುದ್ಧತೆಯನ್ನು ಹೊಂದಿರಬೇಕಾಗುತ್ತದೆ. ಡಾಂಭಿಕತನವು ಫಲಕಾರಿಯಾಗಲಾರದು. ಅಂತಹ ಪರಿಶುದ್ಧತೆಯುಂಟಾಗ ಬೇಕಾದರೆ ದಯೆ, ಸತ್ಯ, ಪ್ರಾಮಾಣಿಕತೆ ಮೊದಲಾದ ಸದ್ಗುಣಗಳನ್ನು ಬೆಳೆಸಿಕೊಳ್ಳುವುದವಶ್ಯ. ಅಂಥ ಸದ್ಗುಣಗಳು ಬಲಗೊಳ್ಳಬೇಕಾದರೆ, ದೈವಭಕ್ತಿ, ಧರ್ಮಶ್ರದ್ಧೆ ಹಾಗೂ ಸಂಸ್ಕೃತಿಯ ಅರಿವು ಸದಾ ಜಾಗೃತವಾಗಿರ ಬೇಕಾಗುತ್ತದೆ. ಆದಕ್ಕಾಗಿಯೇ ನಮ್ಮ ಹಿರಿಯರು 'ಸ್ವಧರ್ಮೇ ನಿಧನಂಶ್ರೇಯಃ" ಎಂದು ಸಾರಿದುದು. ಧರ್ಮ ಭಾವನೆ - ಧರ್ಮ ಶ್ರದ್ಧೆಯಿಲ್ಲದಿದ್ದರೆ ಅವನಲ್ಲಿ ಮಾನವೀಯತೆಯು ಮೂಡಿ ಬರಲಾರದು; ಆತನು ಮಾನವನೆಂದೆನಿಸಲಾರನು.

ನಮ್ಮ ಧರ್ಮವು ಪುರಾತನವೂ ಶ್ರೇಷ್ಠವೂ ಸತ್ವಯುತವೂ ಆದುದಾಗಿದೆ. ಅಂತೆಯೇ ಅದೆಷ್ಟೋ ಆಕ್ರಮಣಗಳನ್ನು ಎದುರಿಸಿಯೂ ಇಂದಿಗೂ ತಲೆಯೆತ್ತಿ ನಿಂತಿದೆ. ಮುಂದೆಯೂ ತಲೆಯೆತ್ತಿಯೇ ನಿಲ್ಲುವುದೆನ್ನುವದರಲ್ಲಿ ಯಾವ ಸಂದೇಹವೂ ಇಲ್ಲ. ಪರಧರ್ಮಸಹಿಷ್ಣುತೆಯೇ ನಮ್ಮ ಧರ್ಮದ ಜೀವಾಳ. ನಮ್ಮ ಧರ್ಮವು ಎಲ್ಲ ಧರ್ಮಗಳನ್ನೂ ಗೌರವಿಸುತ್ತಿದೆಯೇ ಹೊರತು ಎಂದೂ ದ್ವೇಷಿಸುತ್ತಿಲ್ಲ. ಧರ್ಮಾಂತರವನ್ನು ಪುರಸ್ಕರಿಸುತ್ತಿರುವುದೇ ಆ ಮಾತಿಗೊಂದು ನಿದರ್ಶನ. ಧರ್ಮಾಂತರವನ್ನು ನಿಷೇಧಿಸುವುದೆಂದರೆ ಧರ್ಮವನ್ನು ಕ್ಷೀಣಗೊಳಿಸಿ-ದಂತಾಗುವದು. ಹಾಗಾಗದೆ, ಅನ್ಯಧರ್ಮಗಳೂ ಬೆಳೆಯುತ್ತಿರಲೆಂಬುದೇ ನಮ್ಮ ಧರ್ಮದ ಉದ್ದೇಶವಾಗಿದೆ. ಜನರೆಲ್ಲರೂ ಅವರವರ ಧರ್ಮಗಳಲ್ಲಿ ಶ್ರದ್ಧೆಯಿಟ್ಟು ಅವನ್ನು ಪಾಲಿಸಿಕೊಳ್ಳುತ್ತ ಪೋಷಿಸಬೇಕು. ಯಾವ ಕಾಲಕ್ಕೂ ತನ್ನತನವನ್ನು ಯಾರೂ ಕಳೆದುಕೊಳ್ಳಬಾರದು. ಅದನ್ನು ಕಾಪಾಡಿಕೊಂಡು ಬಲಗೊಳಿಸಿಕೊಳ್ಳ-ಬೇಕು. ಅದೇ ಕಾಲಕ್ಕೆ ಅನ್ಯ ಧರ್ಮಗಳನ್ನು ತುಚ್ಛೀಕರಿಸದಂತೆ ಹೀನಾಯಿಸದಂತೆ ಎಚ್ಚರವಹಿಸಬೇಕು. ಇದೇ ನಮ್ಮ ಹಿಂದೂಧರ್ಮದ ವೈಶಿಷ್ಟ್ಯ.

ನಮ್ಮ ವಿಚಾರ, ಮಾತು, ಕೃತಿ ಹಾಗೂ ನಡೆ ಇವುಗಳಲ್ಲಿ ಹೊಂದಾಣಿಕೆಯಿರ-ಬೇಕು. ವಿಚಾರವೊಂದು, ಮಾತು ಮತ್ತೊಂದು, ಕೃತಿ ಇನ್ನೊಂದು ಹಾಗೂ ನಡೆ ಬೇರೆಯೇ ಆದರೆ ಶ್ರೇಯಸ್ಸು ಸರ್ವಥಾ ದೊರಕಲಾರದು. ಆದುದರಿಂದ, ಪ್ರತಿಯೊಬ್ಬನೂ ಹೃದಯದ ಶ್ರೀಮಂತಿಕೆಯನ್ನು ಬೆಳೆಸಿಕೊಳ್ಳಲು ಯತ್ನಿಸಬೇಕು. ಒಳ್ಳೆಯ ನಡತೆಯನ್ನಿಟ್ಟುಕೊಳ್ಳಬೇಕು. ಹೀಗಾಗಬೇಕಾದರೆ, ದೈವಭಕ್ತಿ, ಧರ್ಮಶ್ರದ್ಧೆ, ಪಾಪಭೀತಿ – ಇವು ಇರಬೇಕಾಗುತ್ತದೆ. ಒಮ್ಮೊಮ್ಮೆ ಒಬ್ಬನಲ್ಲಿಯ ಅವಿಚಾರ, ಅದೂರದರ್ಶಿತ್ವ, ಅಸಮರ್ಥತೆ, ಅನಾಚಾರ – ಇತ್ಯಾದಿ ದೋಷಗಳು ಅವನೊಬ್ಬನ ಅವನತಿಗಷ್ಟೇ ಕಾರಣವಾಗುಳಿಯದೆ, ಬಹುಸಂಖ್ಯಾಕರನ್ನೂ ದುರ್ಗತಿ-ಗೀಡುಮಾಡಿ ಬಿಡುವವು. ಈ ಮಾತು ಒಂದು ಸಮಾಜದ, ಜನಾಂಗದ, ರಾಜ್ಯದ ಇಲ್ಲವೇ ದೇಶದ ಧುರೀಣತ್ವ ವಹಿಸಿರುವವರ ಮಟ್ಟಿಗಂತೂ ಶತಶಃ ಸತ್ಯ.

ನಮ್ಮ ಮಟ್ಟಿಗೆ ಹೇಳುವುದಾದರೆ, ನಮ್ಮಂಥ ಧರ್ಮಾಧಿಕಾರಿಗಳು, ಧರ್ಮಪೀಠಗಳು, ಧರ್ಮಗಳು ಇತ್ಯಾದಿಗಳೆಲ್ಲ ಶಿಷ್ಯಕೋಟಿಯ ಕ್ಷೇಮಾಭಿ ವೃದ್ಧಿಗಾಗಿಯೇ ಉಂಟು. ಶಿಷ್ಯವೃಂದದ ಕಲ್ಯಾಣವೇ ನಮ್ಮ ಕಲ್ಯಾಣ. ಆ ಕಾರಣಕ್ಕಾಗಿಯೇ ಶ್ರೀ ಸಂಸ್ಥಾನವು ವರ್ಷದಲ್ಲಿ ಹೆಚ್ಚಿನ ಕಾಲ ಸಂಚಾರದಲ್ಲಿಯೇ ಇದ್ದು ಶಿಷ್ಯಲೋಕದಲ್ಲಿ ಧರ್ಮಜಾಗೃತಿ ಮಾಡುತ್ತ ಅವರ ಕಲ್ಯಾಣಕಾರೀ ಉಪ-ಕ್ರಮಗಳನ್ನು ಪ್ರೇರೇಪಿಸುತ್ತ ಬಂದಿರಲಾಗುತ್ತಿದೆ. ಈ ಭಾಗದಲ್ಲಿಯ ನಮ್ಮ ಶಿಷ್ಯವೃಂದದಲ್ಲಿ ಸಂಸ್ಥಾನದ ಬಗೆಗೆ ಅಭಿಮಾನ, ಶ್ರೀಗಳಲ್ಲಿ ಪೂಜ್ಯಭಾವನೆ, ಧರ್ಮ ಕಾರ್ಯಗಳಲ್ಲಿ ಶ್ರದ್ಧೆ ಇರುತ್ತಿರುವುದನ್ನು ಶ್ರೀಸಂಸ್ಥಾನವು ಗಮನಿಸಿದೆ. ಈ ಸಲ,

ಸಮಾಧಿಸ್ಥ ಪರಮ ಪೂಜ್ಯ ಶ್ರೀರಾಮಚಂದ್ರಭಾರತೀ ಶ್ರೀ ಸ್ವಾಮಿಯವರ ಆರಾಧನೆಯು ಇಲ್ಲಿ ನಡೆಯುತ್ತಲಿರುವುದು ಈ ಭಾಗದ ಶಿಷ್ಯಕೋಟಿಯ ಮಹಾಭಾಗ್ಯವೆಂದೇ ಹೇಳಬೇಕು. ಅಂತಹ ಅವಕಾಶವೊಂದನ್ನು ಈ ಭಾಗದ ಜನರಿಗೆ ಒದಗಿಸಿಕೊಡಲು ಸ್ವಯಂ ಪ್ರೇರಣೆಯಿಂದ ಮುಂದಾದ ನಿಮ್ಮ ಬುದ್ಧಿಯು ಸರ್ವಥಾ ಶ್ಲಾಘನೀಯ-ವಾಗಿದೆಯಷ್ಟೇ ಅಲ್ಲ, ಅದು ಶ್ರೇಯೋಭಿವೃದ್ಧಿಗೂ ಕಾರಣವೆಂದು ಬೇರೆಯಾಗಿ ಹೇಳಬೇಕಾಗಿಲ್ಲ. ಈ ಭಾಗದ ಜನರು ದೇವರು, ಧರ್ಮ, ಸಂಸ್ಕೃತಿ, ಗುರು, ಹಾಗೂ ಗುರುಮಠಗಳಲ್ಲಿ ಇಟ್ಟುಕೊಂಡಿರುವ ಶ್ರದ್ಧೆಯನ್ನು ಉಳಿಸಿಕೊಂಡು ಇನ್ನೂ ಹೆಚ್ಚು ಶ್ರೇಯಸ್ಸಿಗೆ ಪಾತ್ರರಾಗಲೆಂದು ಶ್ರೀ ನಾರಾಯಣ ಸ್ಮರಣಪೂರ್ವಕವಾಗಿ ಆಶೀರ್ವದಿಸಲಾಗುತ್ತಿದೆ.

೧೧. ವಾರ್ಷಿಕೋತ್ಸವದ ಅಧ್ಯಕ್ಷ ಭಾಷಣ

ಸತ್ಯಸಾಯಿ ವಿಹಾರ ಜೂನಿಯರ್ ಕಾಲೇಜ್

(ಮುಡಿಯಾಲ: ತಾ|| ೧೧-೧-೧೯೭೫)

ಧರ್ಮರಕ್ಷಣೆಗಾಗಿ ಪರಮಾತ್ಮನ ಅನೇಕ ಅವತಾರಗಳು ಆಗಿವೆ, ಆಗುತ್ತಿವೆ. ಆಯಾ ಕಾಲಕ್ಕೆ ಅನುಗುಣವಾಗಿ ಭಗವಂತನು ಬೇರೆ ಬೇರೆ ರೂಪಗಳಲ್ಲಿ ಅವತರಿಸಿ, ಅಧರ್ಮವನ್ನು ಹೋಗಲಾಡಿಸಿ ಧರ್ಮವನ್ನು ರಕ್ಷಿಸುತ್ತಾನೆ. ನದಿಯಲ್ಲಿ ನೀರು ಹರಿಯುತ್ತಿರುವಾಗ ಹೊಸ ನೀರು ಬರುವಂತೆ, ಸನಾತನವಾದ ವೈದಿಕ ಧರ್ಮದಲ್ಲಿ ಹೊಸ ವಿಚಾರಧಾರೆ ಬಂದಿರಬಹುದು. ಇದರಿಂದ ನಮ್ಮ ಧರ್ಮದ ನಿತ್ಯತೆಗೆ ಅಪೋಹವೇನೂ ಇಲ್ಲ. 'ಪರಿವರ್ತಿನಿ ಸಂಸಾರೇ' ಎಂದು ಹೇಳುವಂತೆ, ಅಲ್ಪಸ್ವಲ್ಪ ಬದಲಾವಣೆ ಆಗಬಹುದು. ಪ್ರತಿ ಜೀವಿಗಳ ಹೃದಯದಲ್ಲಿಯೂ ಆತ್ಮನಿದ್ದಾನೆ. ತಾನು ಯಾರು ಎಂಬುದನ್ನು ಮಾತ್ರ ಮನುಷ್ಯನು ತಿಳಿದುಕೊಂಡಿಲ್ಲ. ತಾನು ಆತ್ಮನಿಗಿಂತ ಬೇರೆಯಾದವನು ಎಂದು ತಿಳಿದುಕೊಂಡು ನಾನಾಕಷ್ಟಗಳಿಗೆ ಗುರಿಯಾಗಿ-ದ್ದಾನೆ. ತನ್ನ ನಿಜಸ್ವರೂಪವನ್ನರಿಯುವುದೇ ಜ್ಞಾನ. ಇಂತಹ ಜ್ಞಾನ ಯಾರಿಗುಂಟಾಗಿದೆಯೋ ಅವನೇ ಜ್ಞಾನಿ - 'ಜ್ಞಾನೀ ತ್ವಾತ್ಮೈವ ಮೇ ಮತಂ' ಎಂದು ಶ್ರೀ ಕೃಷ್ಣನು ಭಗದ್ಗೀತೆಯಲ್ಲಿ ನುಡಿದು, ಜ್ಞಾನಿಗೂ ಆತ್ಮನಿಗೂ ಭೇದವಿಲ್ಲ-ವೆಂದು ತಿಳಿಸಿದ್ದಾನೆ

ಧರ್ಮಾಧರ್ಮಗಳ ಮಿಶ್ರಣದಿಂದ ಜೀವಿಯು ಮನುಷ್ಯನಾಗಿ ಹುಟ್ಟುತ್ತಾನೆ. 'ಉಭಾಭ್ಯಾಂ ಮಾನುಷಂ ಜನ್ಮ' ಎಂದು ಹೇಳಿರುವುದು ಇದಕ್ಕಾಗಿ. ಆದುದರಿಂದ ಮನುಷ್ಯನಾಗಿ ಹುಟ್ಟಿದ ಮೇಲೆ ಸುಖದುಃಖಗಳ ಪ್ರಾಪ್ತಿ ತಪ್ಪಿದ್ದಲ್ಲ. ಭೌತಿಕ ವಿಜ್ಞಾನವು ಎಷ್ಟು ಬೆಳೆದರೂ ಮಾನಸಿಕವಾದ ಶಾಂತಿ ದೊರೆಯದು. ಉದಾಹರಣೆಗೆ, ವಿಜ್ಞಾನದಲ್ಲಿ ಆಶ್ಚರ್ಯಕರವಾದ ಪ್ರಗತಿಯನ್ನು ಸಾಧಿಸಿರುವ ಅಮೇರಿಕದಲ್ಲಿ ಜೀವನವು ಅಶಾಂತಿಮಯವಾಗಿದೆ. ಶಾಂತಿಯಿಲ್ಲದಿದ್ದ ಮೇಲೆ ಸುಖವೆಲ್ಲಿ? 'ಅಶಾಂತಸ್ಯ ಕುತಃ ಸುಖಮ್?' ವಾಸ್ತವವಾಗಿ ಹೇಳುವುದಾದರೆ, ವಿಜ್ಞಾನ ಸುಲಭ. ಆತ್ಮಜ್ಞಾನ ಕಷ್ಟ. ವಿಜ್ಞಾನವು ಸಂಶೋಧನೆ, ವಿದ್ಯೆಯಲ್ಲ.

ರಾತ್ರಿ ಮಲಗಿದವನು ಬೆಳಗ್ಗೆ ಹಾಸಿಗೆಯಿಂದ ಏಳುತ್ತಾನೆಂಬ ಭರವಸೆ ಎಲ್ಲಿದೆ? ಆದುದರಿಂದ ಧರ್ಮಕಾರ್ಯವನ್ನು 'ನಾಳೆ' ಎಂದು ಮುಂದೆ ಹಾಕದೆ, ಮಾಡುತ್ತಲೇ ಹೋಗಬೇಕು. ಒಳ್ಳೆಯ ದಾರಿಯನ್ನು ಹಿಡಿಯುವುದೇ ನಮ್ಮ ಧ್ಯೇಯವಾಗಿರಬೇಕು. ಲೌಕಿಕ ವಿದ್ಯೆ ಜೀವನೋಪಾಯಕ್ಕೆ ಅವಶ್ಯಬೇಕು. ಅದರ ಜೊತೆಗೆ ಧರ್ಮಾಚರಣೆ ಇರಬೇಕೆಂಬುವನ್ನು ಮರೆಯಬಾರದು.

ಬಾಲಕರ ಮನಸ್ಸು ಎಳೆಯ ಬಿದಿರು ಇದ್ದಂತೆ. ತಂದೆತಾಯಿಗಳೂ ಉಪಾಧ್ಯಾಯರೂ ಅವರ ಮನಸ್ಸನ್ನು ಬಗ್ಗಿಸಿ ಸನ್ಮಾರ್ಗಕ್ಕೆ ತಿರುಗಿಸಬಹುದು. ಬೆಳೆದ ಬಿದಿರು ಬಗ್ಗದು.

ಕ್ರಿ. ಶ. ೧೯೬೭ ರಲ್ಲಿ ನಾವು ಇಲ್ಲಿಗೆ ಬಂದಿದ್ದೆವು. ಆಗ ಲೋಕಸೇವಾ ವೃಂದ ಎಂಬ ಚಿಕ್ಕ ಸಂಸ್ಥೆ ಇತ್ತು. ೮–೧೦ ವರ್ಷಗಳಲ್ಲಿ ಇದು ಇಷ್ಟು ವಿಶಾಲವಾಗಿ ಬೆಳೆದಿದೆ. ಇದರ ಪ್ರಮುಖರು ಬಹಳ ತ್ಯಾಗಮಾಡಿ ಇದನ್ನು ಕಟ್ಟಿದ್ದಾರೆ. ಇದೊಂದು ಅದ್ಭುತವೇ. ಒಳ್ಳೆಯ ಕಾರ್ಯಕ್ಕೆ ದೈವಸಹಾಯ ಒದಗುತ್ತದೆ. ಅಭಿಮಾನ ಉಕ್ಕಿಬಂದರೆ ಭಾರತೀಯರು ಎಂತಹ ಸಾಹಸ ಕಾರ್ಯವನ್ನು ಮಾಡಬಲ್ಲರೆಂಬುದಕ್ಕೆ ಈ ಸಂಸ್ಥೆ ನಿದರ್ಶನ. ಭರತಖಂಡವು ಜಗತ್ತಿಗೆ ಉಪದೇಶಕೊಡುವ ಸ್ಥಿತಿಯಲ್ಲಿ ಹಿಂದೆ ಇತ್ತು. ಪರಕೀಯರ ಆಕ್ರಮಣದಿಂದ ಬುದ್ಧಿವಿಕಾಸಕ್ಕೆ ಕೊರತೆಯಾಯಿತು. ಸ್ವತಂತ್ರಭಾರತ ಮುಂದೆ ತನ್ನ ಉನ್ನತ ಸ್ಥಾನವನ್ನು ಮತ್ತೆ ಗಳಿಸಲೆಂದು ಹಾರೈಸುತ್ತೇವೆ.

೧೨. 'ಆರಾಧನೆ' ಎಂಬ ಸ್ಮರಣ ಸಂಚಿಕೆಯ ಪ್ರಕಾಶನ

(ವರದಹಳ್ಳಿ : ತಾ|| ೨೫-೪-೭೫)

ಭಾರತ ದೇಶವು ಪುಣ್ಯಭೂಮಿ. ಇಲ್ಲಿರುವ ಪುಣ್ಯಕ್ಷೇತ್ರಗಳು ಅಸಂಖ್ಯ. ಈ ವರದಹಳ್ಳಿ ಅಂತಹ ಒಂದು ಪುಣ್ಯಕ್ಷೇತ್ರ. ಚಿತ್ತಶುದ್ಧಿಯ ಮೂಲಕ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ಪುಣ್ಯಕ್ಷೇತ್ರದ ದರ್ಶನ ವಾಸಗಳು ಸಹಕಾರಿಗಳಾಗುತ್ತವೆ. ಆತ್ಮನಾದರೋ ಅಣುವಿಗಿಂತ ಅಣು, ಮಹತ್ತಿಗಿಂತ ಮಹಾನ್, 'ಅಣೋರಣೀಯಾನ್ ಮಹತೋ ಮಹೀಯಾನ್'. 'ಗುಹಾಯಾಂ ನಿಹಿತಃ' ಆತ್ಮನು ಗುಹೆಯಲ್ಲಿ ನೆಲಸಿದ್ದಾನಂತೆ. ಗುಹೆಯೆಂದರೆ ಮನಸ್ಸು. 'ಮನಸೈವಾನುದ್ರಷ್ಟವ್ಯಃ' ಎಂದಿರುವುದು ಇದಕ್ಕಾಗಿ. ಪರಮಾತ್ಮನು ಈ ದೇಹವನ್ನು ಸೃಜಿಸಿ ಇದರಲ್ಲಿಯೇ ಪ್ರವೇಶಿಸಿದನಂತೆ. 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್' ಆತ್ಮನು ಜ್ಞಾನರೂಪನೆಂದೂ ಜ್ಞಾನಾಶ್ರಯನೆಂದೂ ಶಾಸ್ತ್ರಕಾರರು ಹೇಳುತ್ತಾರೆ ವೇದಾಂತದ ಪ್ರಕಾರ ಅವನು ಜ್ಞಾನರೂಪನೇ. ಆತ್ಮವಿಚಾರ ಅತ್ಯಂತ ಕಠಿನ. ಭೌತಿಕ ವಿಜ್ಞಾನದಿಂದ ಆತ್ಮನನ್ನರಿಯುವುದು ಶಕ್ಯವಿಲ್ಲ.

ಆತ್ಮವಸ್ತುವಿನ ಸಾನ್ನಿಧ್ಯದಿಂದಲೇ ಈ ದೇಹಕ್ಕೆ ಬೆಲೆ ಇದೆ, ಪಾವಿತ್ರ್ಯವಿದೆ. ಆತ್ಮಶೂನ್ಯವಾದೊಡನೆ ದೇಹವು ಕೊಳೆತು ದುರ್ಗಂಧಮಯವಾಗುತ್ತದೆ. ಭೌತಿಕವಾದಿಗಳು ಹೇಳುವ ದೇಹೋಪಾಸನೆ ಎಷ್ಟು ಕ್ಷುದ್ರವಾದದ್ದೆಂದು ಇದರಿಂದ ನಾವು ತಿಳಿಯಬಹುದು. ಮಂತ್ರಸಿದ್ಧಿಯನ್ನು ಪಡೆದುಕೊಂಡಿರುವವನೇ ಬ್ರಾಹ್ಮಣ. ಇಂಥ ಬ್ರಾಹ್ಮಣನನ್ನು ಅನುಲಕ್ಷಿಸಿ ಶ್ರೀಕೃಷ್ಣನು 'ಬ್ರಾಹ್ಮಣಾಮಮ ದೇವತಾಃ' ಎಂದು ಹೇಳಿದ್ದಾನೆ. ಪಂಡಿತನೆಂಬ ಶಬ್ದಕ್ಕೆ ಆತ್ಮಜ್ಞಾನಿಯೆಂಬುದೇ ಮುಖ್ಯಾರ್ಥ. ಮಾಯೆಯ ಆವರಣದಿಂದ ಮನುಷ್ಯನು ಆತ್ಮನನ್ನು ಅರಿಯದವನಾಗಿದ್ದಾನೆ. ಈಶ್ವರನು ಮಾಯಾಶಕ್ತಿಯಿಂದ ಜಗತ್ತನ್ನು ನಿರ್ಮಿಸಿದ್ದರೂ ಅವನಿಗೆ ಮಾಯೆ ಅಧೀನವಾಗಿದೆ.

ಇಂದ್ರಿಯಗಳು ನಮ್ಮ ವಶಕ್ಕೆ ಬರದಿರುವುದರಿಂದಲೇ ಮನುಷ್ಯನು ದುಃಖಪರಂಪರೆಯಲ್ಲಿ ಪರದಾಡುತ್ತಾನೆ. ಅವುಗಳನ್ನು ವಶಪಡಿಸಿಕೊಳ್ಳಲು ಸದಾ ಸದ್ವಿಷಯಗಳನ್ನೇ ಧ್ಯಾನಿಸುತ್ತಿರಬೇಕು. ವೈದಿಕ ಕರ್ಮಗಳನ್ನು ನಿಷ್ಠೆಯಿಂದ ಆಚರಿಸುತ್ತಿರುವುದೇ ಇಂದ್ರಿಯಗಳ ಸದ್ವಿಷಯಪ್ರವರ್ತನೆಗೆ ದಾರಿ. ಶ್ರೀರಾಮನು ತಂದೆಯ ಮಾತಿಗೆ ಬೆಲೆಕೊಟ್ಟು ರಾಜ್ಯವನ್ನು ತ್ಯಜಿಸಿ ಅರಣ್ಯಕ್ಕೆ ಹೋದನು. ಮರ್ಯಾದಾ ಪುರುಷೋತ್ತಮನಾದ ಶ್ರೀರಾಮನಿಗೆ ತಂದೆಯ ಆಜ್ಞೆಯ ವಿಷಯವಾಗಿ

ಅಷ್ಟು ಗೌರವ ಇರುವಾಗ, ವೇದದ ಆಜ್ಞೆಯ ವಿಷಯವಾಗಿ ನಮಗೆ ಗೌರವವಿರ-ಬೇಕೆಂದು ಹೇಳಬೇಕಾದ್ದೇನಿದೆ ?

ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ |
ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ||

ಎಂದು ಪ್ರಹ್ಲಾದನು ಪರಮಾತ್ಮನನ್ನು ಪ್ರಾರ್ಥಿಸಿಕೊಂಡಿದ್ದಾನೆ. "ವಿವೇಕ ಹೀನರಿಗೆ ವಿಷಯಸುಖಗಳಲ್ಲಿ ನಿರಂತರವಾಗಿ ಯಾವ ಪ್ರೀತಿ ಇರುವುದೋ ಅಂಥ ಪ್ರೀತಿ ನಿನ್ನಲ್ಲಿ ನನಗಿರಲಿ. ಸದಾ ನಿನ್ನನ್ನು ಧ್ಯಾನಿಸುತ್ತಿರುವ ನನ್ನ ಹೃದಯದಿಂದ ಅದು ದೂರವಾಗದಿರಲಿ."

"ನಮ್ರತ್ವೇನೋನ್ನಮಂತಃ" ಎಂಬಂತೆ ಸಜ್ಜನರು ವಿನಯಗುಣದಿಂದಲೇ ಉನ್ನತಿಯನ್ನು ಪಡೆಯುತ್ತಾರೆ. ವಿನಯಗುಣದ ಸಾಕಾರಮೂರ್ತಿಗಳಾದ ಶ್ರೀಧರ-ಸ್ವಾಮಿಗಳೇ ಇದಕ್ಕೆ ಉದಾಹರಣೆ.

೧೩. ಆಶೀರ್ವಚನ

ಪೂಜ್ಯ ಶ್ರೀಧರಸ್ವಾಮಿಗಳವರ ಆರಾಧನಾ ಸಂದರ್ಭದಲ್ಲಿ

(ವರದಹಳ್ಳಿ : ತಾ|| ೨೬-೪-೭೫)

ಮನುಷ್ಯನಿಗೆ ಯಾವುದು ಅಭ್ಯುದಯ ನಿಃಶ್ರೇಯಸಗಳನ್ನು ತಂದುಕೊಡುವುದೋ ಅದು ಧರ್ಮ. ಅಭ್ಯುದಯವು ಲೌಕಿಕವಾದ ಸುಖಸಂಪತ್ತು. ಇದು ಸಾವಧಿ. ಇದಕ್ಕೆ ಮಿತಿಯುಂಟು. ಕಾಲದ ಪರಿಮಾಣಕ್ಕೆ ಅಭ್ಯುದಯವು ಒಳಪಟ್ಟಿದೆ. ಸ್ವರ್ಗವೂ ಸಹ ಸಾವಧಿಯೇ. ನಿರವಧಿಯಾದದ್ದು ಮೋಕ್ಷ. ಇದು ಅಲೌಕಿಕ. ಈ ಎರಡು ಬಗೆಯ ಶ್ರೇಯಸ್ಸಿಗೂ ಕಾರಣವಾದದ್ದು ಧರ್ಮ.

ಯನ್ನ ದುಃಖೇನ ಸಂಭಿನ್ನಂ ನ ಚ ಗ್ರಸ್ತಮನಂತರಂ ।
ಅಭಿಲಾಷೋಪನೀತಂ ಚ ತತ್ಸುಖಂ ಸ್ವಃಪದಾಸ್ಪದಂ ॥

ಎಂದು ಹೇಳಿ ಮೀಮಾಂಸಕರು ಸ್ವರ್ಗವನ್ನು ಎಷ್ಟು ಕೊಂಡಾಡಿದ್ದರೂ ಅದು ಸಾವಧಿಕವಾದ್ದರಿಂದ ಮುಖ್ಯವಲ್ಲ. ಸ್ವರ್ಗಾಧಿಪತಿಯಾದ ಇಂದ್ರನ ಪದವಿಯೇ ಸ್ಥಿರವಲ್ಲ. ಆದ್ದರಿಂದ ಶ್ರೀ ಶಂಕರಾಚಾರ್ಯರು ಮೋಕ್ಷವನ್ನು ಪರಮಪುರುಷಾರ್ಥ ಎಂದು ಸಾರಿದರು.

ಧರ್ಮದ ಪುನರುತ್ಥಾನಕ್ಕಾಗಿ ಭಗವಂತನು ಅವತರಿಸುತ್ತಾನೆ. ಅವತಾರಗಳಲ್ಲಿ ಆವೇಶಾವತಾರ ಎಂಬುದೊಂದು ಬಗೆ, ಕಪಿಲ, ವ್ಯಾಸ ಮೊದಲಾದವರು ಇದರಲ್ಲಿ ಸೇರುತ್ತಾರೆ. ಶ್ರೀ ಶಂಕರಾಚಾರ್ಯರು ಈಶ್ವರನ ಆವೇಶಾವತಾರ. ವೈದಿಕವೃಕ್ಷಕ್ಕೆ ಆಚಾರ್ಯರು ನೀರು ಹೊಯ್ದು ಬೆಳೆಸಿದರು. ತಮ್ಮ ಕಾರ್ಯವು ಶಾಶ್ವತವಾಗಿ ನಡೆಯುತ್ತಿರಲೆಂದು ಮಠವನ್ನು ಸ್ಥಾಪಿಸಿದರು. ಶ್ರೀಮದ್ರಾಮಚಂದ್ರಾಪುರ ಮಠವು ಆಚಾರ್ಯರ ಪರಂಪರೆಯಲ್ಲಿ ಬಂದದ್ದು. ಶ್ರೀ ಶಂಕರಾಚಾರ್ಯರಿಂದ ಇದುವರೆಗೆ ಈ ಶಿಷ್ಯಪರಂಪರೆ ಕ್ರಮವಾಗಿ ನಡೆದುಬಂದಿದೆ. ಯಾವ ಸಮಯದಲ್ಲಿಯೂ ವಿಚ್ಛಿನ್ನವಾಗಿಲ್ಲ. ಇತರ ಮಠಗಳಿಗಿಂತ ಇದರಲ್ಲಿರುವ ಒಂದು ವೈಶಿಷ್ಟ್ಯ ಇದು.

ಈ ದಿನ ಪುರುಷಸೂಕ್ತದಿಂದ ಅಗ್ನಿಯಲ್ಲಿ ಹವನ ನಡೆದಿದೆ. ಇಂತಹ ವೈದಿಕ ಕರ್ಮ ಚಿತ್ತಶುದ್ಧಿಯನ್ನುಂಟುಮಾಡಿ ಮನುಷ್ಯನ ಸದ್ಭಾವನೆಯನ್ನು ಬೆಳೆಸುತ್ತದೆ. 'ಅಗ್ನಿಮುಖಾ ವೈದೇವಾಃ' ಎಂಬ ವಚನವಿದೆಯಷ್ಟೆ. ಅಗ್ನಿಯ ಮುಖದಲ್ಲಿ ಅರ್ಪಿಸಲಾದ ಹವಿಸ್ಸು ದೇವತೆಗಳಿಗೆ ತಲಪುತ್ತದೆ. ಇದನ್ನು ಆಸ್ತಿಕರಾದ ನಾವು ನಂಬಲೇಬೇಕು. ಜಗತ್ತೆಲ್ಲವೂ ದೈವಾಧೀನವಾದುದರಿಂದ ದೇವತೆಗಳ ಸಂತೃಪ್ತಿಯಿಂದಲೇ ಜಗತ್ತಿನಲ್ಲಿ ಸಂತುಷ್ಟಿ ಬೆಳೆಯುತ್ತದೆ.

ಮಾನವನನ್ನು ಸೃಷ್ಟಿಸಿದ ಮೇಲೆ ಬ್ರಹ್ಮನ ಸೃಷ್ಟಿಕ್ರಿಯೆ ಪೂರ್ಣವಾಯಿತಂತೆ. ವಿಶಿಷ್ಟವಾದ ಬುದ್ಧಿ ಶಕ್ತಿಯೂ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಪೂರ್ಣತೆಯೂ ಮಾನವನಲ್ಲಿರುವುದರಿಂದ ಮನುಷ್ಯಜನ್ಮ ಇತರ ಜನ್ಮಗಳಿಗಿಂತ ಶ್ರೇಷ್ಠವಾದದ್ದು. ಇಂತಹ ಉತ್ತಮ ಜನ್ಮ ಬಂದಾಗ, ಅದರ ಸದುಪಯೋಗವನ್ನು ಮಾಡಿಕೊಳ್ಳಬೇಕು. ಹಾಗಿಲ್ಲದೆ ಪಶುಪಕ್ಷಿಗಳಂತೆ ನಡೆದುಕೊಂಡಲ್ಲಿ, ಆ ಮನುಷ್ಯನಿಗಿಂತ ಅವಿವೇಕಿ ಇನ್ನಾರು? ನಮಗೆ ಸದ್ಬುದ್ಧಿಯನ್ನು ಕೊಡುವಂತೆ ಭಗವಂತನನ್ನು ಪ್ರಾರ್ಥಿಸಿ-ಕೊಳ್ಳಬೇಕು.

ನ ದೇವಾ ದಂಡಮಾದಾಯ ರಕ್ಷಂತಿ ಪಶುಪಾಲವತ್ ।
ಯಂ ತು ರಕ್ಷಿತುಮಿಚ್ಛಂತಿ ಸದ್ಬುದ್ಧ್ಯಾ ಯೋಜಯಂತಿ ತಮ್ ॥

"ದೇವತೆಗಳು ದನಕಾಯುವವನಂತೆ ಕೋಲನ್ನು ಹಿಡಿದು ನಿಮ್ಮನ್ನು ಕಾಪಾಡುವುದಿಲ್ಲ. ಯಾರನ್ನು ರಕ್ಷಿಸಲು ಅವರಿಗೆ ಮನಸ್ಸಾಗುತ್ತದೆಯೋ ಅವನಿಗೆ ಸದ್ಬುದ್ಧಿಯನ್ನು ಕೊಡುತ್ತಾರೆ".

ಶ್ರೀಧರಸ್ವಾಮಿಗಳು ಅನುಷ್ಠಾನಪರರು, ತಪಸ್ವಿಗಳು, ಶ್ರೀರಾಮನ ಭಕ್ತರು ಶ್ರೀರಾಮನ ಸ್ಥಾನಕ್ಕೆ ಬಂದು ನೆಲಸಿದರು. ಜನರಿಗೆ ಸನ್ಮಾರ್ಗವನ್ನು ಬೋಧಿಸಿದರು. ಶ್ರೇಯಸ್ಸನ್ನು ಪಡೆಯಲು ಹಲವಾರು ದಾರಿಗಳು. ಮಾರ್ಗವು ಭಿನ್ನವಾದರೂ ಗುರಿ ಒಂದೇ. ರುಚಿಭೇದವೇ ಮಾರ್ಗಭೇದಕ್ಕೆ ನಿಮಿತ್ತ.

ಆದರೆ,

'ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ'

ಎಂಬಂತೆ ಗಮ್ಯಸ್ಥಾನ ಸಕಲ ಸಜ್ಜನರಿಗೂ ಪರಮಾತ್ಮನೇ.

ವೈದಿಕಧರ್ಮ ಎಂದಿಗೂ ನಶಿಸುವುದಿಲ್ಲ. ಕಾಲಮಹಿಮೆಯಿಂದ ಒಮ್ಮೊಮ್ಮೆ ಕ್ಷೀಣಿಸಿದಂತೆ ಕಾಣಬಹುದು. 'ಧರ್ಮಸ್ಯ ಪ್ರಭುರಚ್ಯುತಃ' ನಿತ್ಯನಾದ ಪರಮಾತ್ಮನು ಯಾವ ಧರ್ಮಕ್ಕೆ ಪ್ರಭುವೋ ಆ ಧರ್ಮ ನಶಿಸುವುದೆಂದರೇನು?

ಮಹಾತ್ಮರ ಅಮೃತವಾಣಿಯಿಂದ ಜನರಿಗೆ ಸದ್ಬುದ್ಧಿಯುಂಟಾಗುತ್ತದೆ. ನಾರದರ ಉಪದೇಶದಿಂದ ಪ್ರಹ್ಲಾದನಿಗೆ ಭಗವಂತನಲ್ಲಿ ಅಸಾಧಾರಣವಾದ ಭಕ್ತಿ ಉದಯಿಸಿತು. ಭಕ್ತಿಯ ಬಲದಿಂದಲೇ ಅವನು 'ಸ್ತಂಭೇ ಪುಮಾಂಸಂ ನ ಮೃಗಂ ನ ಮಾನುಷಂ' ಎಂಬಂತೆ ಸಾಕ್ಷಾತ್ ನರಸಿಂಹಮೂರ್ತಿಯನ್ನು ಕಾಣಲು ಸಾಧ್ಯ-ವಾಯಿತು. ಹಾಗೆ ಭಕ್ತಿಯನ್ನು ಬೆಳೆಸಲು ಅನೇಕ ಸಂಸ್ಥೆಗಳು ದೇಶದಲ್ಲಿ ವಿಸ್ತರಿಸುವುದು ಒಳ್ಳೆಯದೇ. ವರದಹಳ್ಳಿಯ ಈ ಸಂಸ್ಥೆ ಜನರಲ್ಲಿ ದೈವಭಕ್ತಿಯನ್ನು ಪ್ರಚೋದಿಸಿ ಪ್ರೇಯಸ್ಸಿನಿಂದ ಶ್ರೇಯಸ್ಸಿಗೆ ದಾರಿಯನ್ನು ತೋರಿಸುವಂತಾಗಲಿ – ಎಂದು ಹಾರೈಸುತ್ತೇವೆ.

ಅನುಬಂಧ - ೨

ವಿಚಾರದರ್ಶನ

ಧರ್ಮದ ಹೊಣೆ ಮನಶ್ಶಕ್ತಿಯ ನಿಯಂತ್ರಣ

ಮನುಷ್ಯನ ಮನಸ್ಸಿನ ಶಕ್ತಿ ಅಗಾಧ. ಅದನ್ನು ನಿಯಂತ್ರಿಸುವುದು ಧರ್ಮದ ಹೊಣೆ. ಆ ಹೊಣೆ ಇರದಿದ್ದರೆ ಈ ಮನಸ್ಸಿನ ಶಕ್ತಿ ವಿನಾಶಕಾರಿಯಾಗುತ್ತದೆ. ಅದರಿಂದಾಗಿ ಜನಮನದಲ್ಲಿ ಜನಜೀವನದಲ್ಲಿ ಧರ್ಮದ ಹೊಣೆ ಮೂಡಿ ಬರಬೇಕಾಗಿದೆ.

✳

ಸಂಯಮ ಮೂಡಿ ಬರಲಿ

ಪ್ರೀತಿ ಭಕ್ತಿಗಳು ಇದ್ದಲ್ಲಿ ಸಂಯಮ ಮೂಡಿ ಬರುತ್ತದೆ. ಇಂದಿನ ಸಮಾಜದಲ್ಲಿ ತೀವ್ರವಾಗಿ ಹಬ್ಬಿರುವ ದೊಡ್ಡ ಮೀನು ಸಣ್ಣ ಮೀನನ್ನು ನುಂಗುವಂತಹ ಪರಿಸ್ಥಿತಿ ಮಾಯವಾಗಿ ಸಂಯಮದ ವಾತಾವರಣ ಮೂಡಿ ಬರಬೇಕು.

✳

ಧರ್ಮದ ಅಡಿಗಲ್ಲು

ಅಡಿಗಲ್ಲು ಶಿಥಿಲವಾದರೆ ಕಟ್ಟಡ ಶಿಥಿಲವಾಗುವಂತೆ ಧರ್ಮದ ಅಡಿಗಲ್ಲು ಕುಸಿದಾಗ ಸಮಾಜವೂ ಕುಸಿಯುತ್ತದೆ. ಪಾಶ್ಚಾತ್ಯರು ನಮ್ಮ ಒಳ್ಳೆಯದನ್ನೆಲ್ಲ ತೆಗೆದುಕೊಂಡು ಬದಲಿಯಾಗಿ ಕೆಡುಕನ್ನೇ ನೀಡಿದರು. ಇಂದಿನ ನಮ್ಮ ಸಂಕಲ್ಪಗಳಿಗೆಲ್ಲ ಅದೇ ಕಾರಣ.

✳

ಗೋರಕ್ಷಣೆಯ ಕುರಿತು

ನಮ್ಮ ಪವಿತ್ರ ಭಾರತ ಭೂಮಿಯಲ್ಲಿ ಪ್ರಾಚೀನಕಾಲದಿಂದಲೂ 'ಗಾವೋ ಮೇ ಮಾತರಃ ಸಂತು' ಎಂಬಂತೆ ಗೋವನ್ನು ಗೌರವಿಸುತ್ತಿರುವುದು ಸರಿಯಷ್ಟೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯಬಂದು ಎರಡು ದಶಕಗಳು ಗತಿಸಿವೆ. ಅನೇಕ ವರ್ಷಗಳಿಂದಲೇ ಗೋಹತ್ಯಾ ನಿಷೇಧಕ್ಕಾಗಿ ಅನೇಕರು ಪ್ರದರ್ಶನ ಮುಂತಾದ ಅನೇಕ ರೀತಿ ಪ್ರತಿಭಟನೆ ಕೈಕೊಂಡಿದ್ದಾರೆ. ಆದರೆ ಭಾರತ ಸರಕಾರ ಈವರೆಗೆ ಸಂಪೂರ್ಣ ಪ್ರತಿಬಂಧ ಘೋಷಿಸದೆ ಇರುವುದು ಅತೀವ ವಿಷಾದಾಸ್ಪದ.

ರವಿವಂಶತಿಲಕ ದಿಲೀಪನಂತಹ ರಾಜರಿಗೆ, ಗೋ-ದ್ವಿಜ–ಸುರಾರ್ತಿ ಹರನಾದ ಮಾಯಾಧೀಶ್ವರನಾದ ಶ್ರೀ ಕೃಷ್ಣಪರಮಾತ್ಮನೇ ಮುಂತಾದವರಿಗೆ ಜನ್ಮವಿತ್ತ ಈ

ಭಾರತವರ್ಷವು ಸ್ವತಂತ್ರ ಜನತಾಶಾಸನದಿಂದ ಕೂಡಿಯೂ ಗೋರಕ್ತಸಿಕ್ತವಾಗುತ್ತಿರುವುದು ಭಾರತೀಯ ಸಂಸ್ಕೃತಿಯುಳ್ಳ ಹಾಗೂ ರಾಷ್ಟ್ರದ ಅಭಿಮಾನ ಆಸಕ್ತಿಯುಳ್ಳ ಜನತೆಗೆ ಸಹಿಸಲು ಅಸಾಧ್ಯವಾದೀತು.

ಗೋವಧೆಯ ನಿಷೇಧಕ್ಕಾಗಿ ಜನತೆ ಎಚ್ಚತ್ತು ತನ್ನ ಕರ್ತವ್ಯವೆಂದು ಅಹಿಂಸಾತ್ಮಕ ಪ್ರಚೋದನೆಗಳಿಂದ ಪ್ರತಿಭಟನೆ ವ್ಯಕ್ತಪಡಿಸಿದರೆ, ಇದು ರಾಜಕೀಯ ಲಾಭದ ವಿಷಯವಾಗದು.

"ಯಾನ್ಯಸ್ಮಾಕಂ ಸುಚರಿತಾನಿ" ಎಂಬ ಶ್ರುತಿವಚನದಂತೆ ಯುಗಾಂತರಗಳಿಂದಲೂ ಭಾರತೀಯರ ಭಕ್ತಿ ಶ್ರದ್ಧಾದ್ಯೋತಕದ ಗೋವಿನ ಸೇವಾ ರೂಪವಾಗಿ ಗೋವಧನಿಷೇಧಾರ್ಥವಾಗಿ ಕೈಗೊಳ್ಳತಕ್ಕ ಅಹಿಂಸಾತ್ಮಕ ಪ್ರದರ್ಶನಾದಿಗಳು ಭಾರತೀಯರ ಕರ್ತವ್ಯವಾದವುಗಳು. ಕಾಮಧೇನುವಿನ ಅಪಹರಣ ಮಾತ್ರದಿಂದಲೇ ಸಹಸ್ರಬಾಹುವಿನ ಸಂತಾನ ಅವನತಿ ಹೊಂದಿರುವುದು ಐತಿಹಾಸಿಕ ವಿದಿತ ವಿಷಯ.

ಒಂದು ಸಮಯದಲ್ಲಿ ಸಮಸ್ತ ಭೂಮಂಡಲದ ನಾಗರಿಕರಿಗೆ ಗುರುವಿನ ಸ್ಥಾನ ಪಡೆದ ಭಾರತದ ಜನಶಾಸನವೇ ಈ ರೀತಿ ಜನತೆಯ ಅಸಂತೋಷ ಅಸಮಾಧಾನಕ್ಕೆ ಆಸ್ಪದವಾಗುವದು ಯುಕ್ತವಾಗಲಾರದು. ಕಾರಣ, ಇನ್ನೂ ಹೆಚ್ಚಿನ ಜನತೆಯ ಅಸಮಾಧಾನ–ಅಸಂತೋಷಗಳಿಗೆ ಅವಕಾಶವಾಗಗೊಡದೆ ಶೀಘ್ರದಲ್ಲೇ 'ಗೋವಧೆ ನಿಷೇಧ' ಘೋಷಣೆಗೆ ಸ್ವತಂತ್ರಭಾರತದ ಜನತಾ ಸರಕಾರವು ಪ್ರವೃತ್ತವಾಗಿ ತನ್ಮೂಲಕ ದೇಶವು ಸುಖಸಮೃದ್ಧಿ ಹೊಂದಲೆಂದು ಹಾರೈಸುತ್ತೇವೆ.

✳

ಆಸುರೀ ಶಕ್ತಿಯ ಉಬ್ಬರದಿಂದ ಉದ್ಧಾರವಾಗದು

ಇತ್ತಿತ್ತ ಆಸುರೀಶಕ್ತಿ ಎಲ್ಲೆಲ್ಲಿಯೂ ತಲೆಯೆತ್ತಿರುವ ಲಕ್ಷಣಗಳು ಕಾಣಿಸಹತ್ತಿವೆ. ಅಂಥ ಆಸುರೀಶಕ್ತಿಯ ಉಬ್ಬರದಿಂದ ಕ್ಷೇಮವುಂಟಾಗಲಾರದು; ಉದ್ಧಾರವಾಗದು. ಆಸುರೀಶಕ್ತಿಯನ್ನು ಬೆಳೆಸಿ ಸಂಪತ್ತನ್ನೂ ಪ್ರಭುತ್ವವನ್ನೂ ಪಡೆದು, ಶಾಶ್ವತವಾಗಿ ಸುಖದಿಂದ ಬಾಳಬಹುದೆಂಬ ವಿಚಾರ ಕೇವಲ ಭ್ರಮೆ. ಈ ಮಾತಿಗೆ ಪುರಾಣಗಳಲ್ಲಿ ಅನೇಕ್ಟೋ ಉದಾಹರಣೆಗಳು ದೊರೆಯುತ್ತವೆ. ತೀರ ಇತ್ತೀಚೆಯ ಐತಿಹಾಸಿಕ ಜೀವಂತ ಉದಾಹರಣೆ ಹಿಟ್ಲರನದು. ಆಸುರೀಶಕ್ತಿಯಿಂದ ತನ್ನ ಪ್ರಭುತ್ವವನ್ನು ಸ್ಥಾಪಿಸಬೇಕೆಂದಿದ್ದ ಆತನ ಆಶಾಗೋಪುರ ಕುಸಿದು ನೆಲಸಮವಾಯಿತು. ಅಷ್ಟೇ ಅಲ್ಲ, ಕೊನೆಗೆ ತನಗೆ ತಾನೇ ಗುಂಡುಹೊಡೆದು ಮರಣವನ್ನಪ್ಪಬೇಕಾಗಿಬಂತು.

ಆಸುರೀಶಕ್ತಿಯ ಉಬ್ಬರವನ್ನು ಮಳೆಗಾಲದ ಮಹಾಪ್ರವಾಹಕ್ಕೆ ಹೋಲಿಸ-ಬಹುದು. ಅದು ಭೀಕರವೂ ಮಾರಕವೂ ಆದುದು. ಆದರೆ ಶಾಶ್ವತವಾದುದಲ್ಲ. ಕೆಲಕಾದಲ್ಲೇ ಪ್ರವಾಹದ ಭೀಕರತೆ ಅಡಗುವುದು. ರಾಡಿ ನೀರು ತಿಳಿಯಾಗುವುದು. ಮಾರಕತೆ ಅಳಿಯುವುದು.

✳

ದೇವರಾಜ್ಯದ ನೀತಿ

ಲೋಕಕ್ಕೆ ದುಷ್ಟಶಕ್ತಿಯಿಂದ ಗಂಡಾಂತರವುಂಟಾದಾಗಲೆಲ್ಲ ಪರಮಾತ್ಮನು ಅವತರಿಸಿ ಲೋಕರಕ್ಷಣೆಮಾಡುತ್ತ ಬಂದಿದ್ದಾನೆ. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ – ಇದೇ ದೇವರಾಜ್ಯದ ನೀತಿ.

✳

ದೈವ ಭಕ್ತಿ

ದೈವಾನುಗ್ರಹವಿದ್ದವರಿಗೆ ಭೀತಿಯಿಲ್ಲ. ಅವರು ಬದುಕುವರು. ಶ್ರೀ ಕೃಷ್ಣನಿಗೆ ಪಾಂಡವರ ಮೇಲೆ ಪ್ರಾಣದಷ್ಟು ಪ್ರೀತಿ. ಹಾಗಾಗಲು ಅವರಲ್ಲಿದ್ದ ದೈವಭಕ್ತಿಯೇ ಕಾರಣ. ಇಂದಿನ ವಾತಾವರಣದಲ್ಲಿ ಆಸ್ತಿಕರಿಗೆ ಕಷ್ಟವಾಗುತ್ತಿರಬಹುದಾದರೂ ಅದು ಶಾಶ್ವತವಾದುದಲ್ಲ; ತಾತ್ಕಾಲಿಕವಾದುದು. ಶಾಶ್ವತ ಸುಖ – ಶಾಂತಿಗಳನ್ನು ಬಯಸುವವರು ದೈವಭಕ್ತಿಯನ್ನು ಬೆಳೆಸಿಕೊಳ್ಳಬೇಕಾದುದು ಅಗತ್ಯ.

✳

ಇಂದಿನ ಶಿಕ್ಷಣ

ಇಂದಿನ ಶಾಲಾ ಕಾಲೇಜುಗಳಲ್ಲಿ ಸಿಗುತ್ತಿರುವ ಶಿಕ್ಷಣ ಅಪೂರ್ಣವಾದುದು. ಅದು ಪೂರ್ಣ ಬದಲಾಗಬೇಕೆಂಬ ಅಭಿಪ್ರಾಯ ಸರ್ವತ್ರ ವ್ಯಕ್ತವಾಗತೊಡಗಿದೆ. ಗಲಾಟೆ, ಗದ್ದಲ, ಗೊಂದಲ, ಘೇರಾವೊ, ಪುಂಡಾಟಿಕೆ – ಇತ್ಯಾದಿಗಳನ್ನು ಮಾಡಿದರೆ ಬೇಕಾದುದನ್ನು ಪಡೆಯಬಹುದೆಂಬ ಭಾವನೆ ವಿದ್ಯಾರ್ಥಿಗಳಲ್ಲಿ ಬಲಗೊಳ್ಳುತ್ತದೆ. ಶಿಕ್ಷಣದ ಅಡಿಪಾಯವೇ ಸರಿಯಿಲ್ಲದಿದ್ದುದೇ ಇದಕ್ಕೆಲ್ಲ ಕಾರಣ. ದೇವರು ಅಂತ ಒಬ್ಬನಿದ್ದಾನೆ, ಆತನ ಇಚ್ಛೆಯಂತೆ ಎಲ್ಲವೂ ನಡೆಯುತ್ತಿದೆ – ಎನ್ನುವ ಭಾವನೆ ಅವರಲ್ಲಿ ಹುಟ್ಟಿ ಬೆಳೆಯುತ್ತಿಲ್ಲ. ಪರಮಾತ್ಮನ ಅನುಗ್ರಹವಿಲ್ಲದೆ ತಮ್ಮ ಕಲ್ಯಾಣ-ವಾಗದೆನ್ನುವ ಮಾತನ್ನು ಅವರು ಮರೆಯುತ್ತಿದ್ದಾರೆ. ಇದು ಶುಭಲಕ್ಷಣವಲ್ಲ.

✳

ಭಗವದನುಗ್ರಹಕ್ಕೆ ದಾರಿ

ಮಹಾತ್ಮರಿಂದ, ಅವರ ಸೇವೆಯಿಂದ ಅವರ ಅನುಯಾಯಿಗಳು ಸತ್ಪುರಷ-ರಾಗುತ್ತಾರೆ. ಸಂನ್ಯಾಸಿಗಳು ಮಾನವ ಸಮಾಜದ ಉನ್ನತಿಗಾಗಿಯೇ ಇದ್ದವರು. ಭಗವತ್‌ಸೇವೆ, ಭಗವದ್ಭಕ್ತಸೇವೆ – ಇವು ಭಗವದನುಗ್ರಹ ಪ್ರಾಪ್ತಿಗೆ ಸಮೀಪದ ಸುಲಭದ ದಾರಿ. ಅಂತೆಯೇ ವಿಷ್ಣುಸ್ವರೂಪರಾದ ಯತಿಗಳನ್ನು ವಂದಿಸಬೇಕು, ಗೌರವಿಸಬೇಕು.

✵

ವಿಗ್ರಹಾರಾಧನೆ – ದೈವಾನುಗ್ರಹ

ಪರಮಾತ್ಮನು ನಿರಾಕಾರನಾದರೂ ನಮ್ಮಲ್ಲಿ ಅವನ ಬಗೆಗೆ ಶ್ರದ್ಧೆಹುಟ್ಟಲು, ಹುಟ್ಟಿ ಬೆಳೆಯಲು, ಬೆಳೆದು (ಆನಂದರೂಪನಾದ) ಅವನನ್ನು ಸೇರಲು ವಿಗ್ರಹಾರಾಧನೆ ತಯಾರಿಸಿಕೊಂಡು, ಅವನ್ನು ಪ್ರತಿಷ್ಠಾಪಿಸಿ, ಭಕ್ತಿಯಿಂದ ಅರ್ಚಿಸುತ್ತೇವೆ. ಅರ್ಚನೆ ಮಾಡುವವನು ಪ್ರಥಮತಃ ಮಂತ್ರೋಪದೇಶ ಪಡೆದುಕೊಳ್ಳಬೇಕು. ಸಿದ್ಧಿ ಪಡೆದವರನ್ನು ಸೇವಿಸಬೇಕು. ಸಿದ್ಧಿ ಪಡೆದವರಿಂದಲೇ ವಿಗ್ರಹ ಪ್ರತಿಷ್ಠೆ ಮಾಡಿಸಬೇಕು. ಅದು ನಿಜವಾದ ವಿಗ್ರಹ ಪ್ರತಿಷ್ಠಾಪನೆ. ಪ್ರತಿಷ್ಠಾಪಿತ ವಿಗ್ರಹದಲ್ಲಿ ದೇವತ್ವವನು. ತುಂಬುತ್ತೇವೆ. ದೇಹ ಮತ್ತು ಆತ್ಮ ಬೇರೆಬೇರೆಯಾಗಿದ್ದರೂ ಎರಡನ್ನೂ ಸೇರಿಸಿಯೇ 'ಮನುಷ್ಯ' ಎನ್ನುತ್ತೇವೆ. ಹಾಗೆಯೇ ವಿಗ್ರಹದಲ್ಲಿ ಆಕಾರ ಬೇರೆ, ದೇವತ್ವ ಬೇರೆ. ದೇವತ್ವವನ್ನು ತುಂಬದೆ ಇರುವ ವಿಗ್ರಹ ಎಷ್ಟೇ ಸುಂದರವಾಗಿದ್ದರೂ ಅದು ಕೇವಲ ಗೊಂಬೆ.

ದೈವವು ಮಂತ್ರಾಧೀನ. ಮಂತ್ರವು ಸಿದ್ಧಿಯ ಅಧೀನ. ಮಂತ್ರಸಿದ್ಧಿ ಪಡೆದವರು ಮಾತ್ರ ವಿಗ್ರಹದಲ್ಲಿ ದೈವತ್ವವನ್ನು ತುಂಬಲು ಸಮರ್ಥರು. ದೈವತ್ವ ತುಂಬಿದ ವಿಗ್ರಹದಲ್ಲಿ ಶಕ್ತಿಯುಂಟಾಗುತ್ತದೆ. ಅದರ ಅರ್ಚನೆಯಿಂದ ಅನುಗ್ರಹ ಶಕ್ತಿಯುಂಟಾಗುತ್ತದೆ. ಅದರ ಅರ್ಚನೆಯಿಂದ ಅನುಗ್ರಹ ಪ್ರಾಪ್ತವಾಗುತ್ತದೆ. ದೈವಾನುಗ್ರಹ ದೊರೆತರೇ ಪ್ರಯತ್ನಕ್ಕೆ ಫಲ ಲಭಿಸುವುದು.

✵

ಕರ್ತವ್ಯ ನಿರ್ವಹಣೆ

ಮಾನವ ಜನ್ಮ ದುರ್ಲಭವಾದುದು. ಪೂರ್ವಾರ್ಜಿತ ಪುಣ್ಯ ಸಂಚಯದಿಂದ ಮಾತ್ರ ಮಾನವ ಜನ್ಮ ಲಭಿಸುವುದು. ಆದುದರಿಂದ ಮಾನವನು ತನ್ನ ಕರ್ತವ್ಯಗಳನ್ನು

ಸಮರ್ಥರೀತಿಯಲ್ಲಿ ಪಾಲಿಸಬೇಕು. ಸಮರ್ಪಣ ಭಾವನೆಯಿಂದ ನಿರ್ವಹಿಸಬೇಕು. ದೇಹವಿರುವವರೆಗೂ ಕರ್ತವ್ಯದ ಹೊಣೆ ಇದ್ದೇ ಇರುವುದು.

ಯತಿದರ್ಶನದಿಂದ ಪುಣ್ಯಸ್ಥಳಗಳು ಅಭಿವೃದ್ಧಿಹೊಂದುತ್ತವೆ, ಮುಂದೆ ಬರುತ್ತವೆ ಮತ್ತು ಪ್ರಸಿದ್ಧಿ ಪಡೆಯುತ್ತವೆ.

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತ ಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶ ಸಂಭವಮ್

ಅನುಬಂಧ ೩

ಗುರು - ಶಿಷ್ಯ ಸಂಬಂಧದ ಮಹತ್ತ್ವ

ಶ್ರೀ ಸಚ್ಚಿದಾನಂದ ಸ್ವರೂಪವೇ ಈ ಜಗತ್ತಿಗೆ ಸ್ವತಂತ್ರವಾದ ಮೂಲತತ್ತ್ವವೆಂಬುದು ವೇದಾಂತ ಸಿದ್ಧಾಂತವಾಗಿದೆ. ಕೇವಲ ಅಚೇತನವಾಗಿ ಜಡ ಸ್ವರೂಪಗಳಾದ ಪ್ರಕೃತಿ ಮತ್ತು ಪ್ರಾಕೃತ ಪದಾರ್ಥಗಳಿಂದ ತನ್ನನ್ನು ಆಚ್ಛಾದಿಸಿ ಎಲ್ಲಾ ಭಾಗಗಳಲ್ಲಿಯೂ ಸದ್ರೂಪ ಮತ್ತು ಚಿದ್ರೂಪಗಳಿಂದಲೂ ಇನ್ನು ಕೆಲವುಕಡೆ ಸದ್ರೂಪ, ಚಿದ್ರೂಪ ಮತ್ತು ಆನಂದರೂಪಗಳಿಂದಲೂ ಲೇಶ ಮಾತ್ರ ಕಾಣಿಸಿಕೊಳ್ಳುತ್ತಾ, ಆ ಸಚ್ಚಿದಾನಂದರೂಪ ಪರಮಾತ್ಮನೇ ಜಗದ್ರೂಪವಾಗಿ ನಟಿಸುತ್ತಾನೆ. ಸರ್ವರಿಗೂ ಪ್ರತ್ಯಕ್ಷನಾಗಿರುತ್ತಾನೆಂಬುದು ಶ್ರೀ ಆಚಾರ್ಯ ಶಂಕರ ಭಗವತ್ಪೂಜ್ಯಪಾದರಿಂದ ಉಪದಿಷ್ಟವಾದ ವೇದಾರ್ಥವಾಗಿದೆ. ಜಗತ್ತಿನಲ್ಲಿ ಕಲ್ಲು, ಮಣ್ಣು ಮೊದಲಾದ ನಿರ್ಜೀವ ಪದಾರ್ಥಗಳನ್ನು ನೋಡಿದರೆ ಅವು ಸದ್ವಸ್ತುಗಳೆಂದು ಮಾತ್ರ ಕಂಡುಬರುತ್ತವೆ. ಅವು ಚಿದಾನಂದರೂಪಗಳಾಗಿ ಸಾಧಾರಣ ಬುದ್ಧಿಗೆ ಪ್ರಕಟವಾಗಿರುವುದಿಲ್ಲ. ಪರಂತು, ಬ್ರಹ್ಮಸ್ತಂಬ ಪರ್ಯಂತ ಪ್ರಾಣಿಗಳನ್ನು ನೋಡಿದರೆ, ಅವು ಚೇತನಗಳೆಂದೂ ದುಃಖವಿಲ್ಲದಿರುವಾಗ ಆನಂದ ಸ್ವರೂಪಾವಿರ್ಭಾವವುಳ್ಳವುಗಳೆಂದೂ ಎಲ್ಲರಿಗೂ ತಿಳಿಯಬಹುದಾಗಿದೆ. ಈ ಪ್ರಕಾರ ಲೋಕದಲ್ಲಿ ಅಲ್ಲಲ್ಲಿ ಆಯಾ ರೀತಿಯಲ್ಲಿ ಎಲ್ಲರಿಗೂ ತಕ್ಕಮಟ್ಟಿಗೆ ಆವೃತ ಅನಾವೃತವಾಗಿ ಕಂಡುಬರುವ ಸಚ್ಚಿದಾನಂದ ಸ್ವರೂಪವು ಎಲ್ಲಾ ಪ್ರಕೃತಿ ಮತ್ತು ಪ್ರಾಕೃತ ಪದಾರ್ಥಗಳ ಅಧಿಷ್ಠಾನವಾಗಿ ಅಂತರ್ಬಾಹ್ಯ ವ್ಯಾಪಿಸಿದಂತಿದ್ದೂ ಪರಮಾರ್ಥತಃ ಜಡ ಪದಾರ್ಥ-ಗಳಿಂದ ಬೇರೆಯಾಗಿ ಅಸಂಗ, ಅನಂತ, ಅಖಂಡ ಅದ್ವಿತೀಯವಾಗಿ ಸರ್ವಜ್ಞ, ಸರ್ವಶಕ್ತ, ಸರ್ವಾಂತರ್ಯಾಮೀ ಏಕಮೇವ ಪೂರ್ಣಾನಂದವಾಗಿರುವುದೆಂದು ಬ್ರಹ್ಮವಾದಿಗಳ ಅಭಿಪ್ರಾಯ. ಸಚ್ಚಿದಾನಂದ ಸ್ವರೂಪದ ಈ ಮಹಾಮಹಿಮ ಸ್ವತಃ ಸರ್ವಸಮರ್ಥ. ಪರಮಾರ್ಥಸ್ಥಿತಿಯು ವೇದಪ್ರಮಾಣದಿಂದಲೇ ಪ್ರಥಮತಃ ತಿಳಿಯಲಾಗುವುದು. ಆದುದರಿಂದ ಪ್ರಕೃತಿ ಮತ್ತು ಪ್ರಾಕೃತ ಪದಾರ್ಥಗಳೇ ಸಚ್ಚಿದಾನಂದ ಸ್ವರೂಪವೆಂಬುದು, ಜಡಚೇತನ ವಿವೇಕವಿಲ್ಲದ ಪ್ರಾಚೀನ ಅಥವಾ ಅರ್ವಾಚೀನ ಜಡವಾದವು ವೇದಪ್ರಮಾಣ ಹೀನರಾದ ಕಾರಣ ದೀನರಾದ ಜಡವಾದಿಗಳ ಬುದ್ಧಿ ಜಾಡ್ಯವೇ ಸರಿ! ಪ್ರಕೃತಿಯ ಮೇಲೆ ವಿಜಯ ಹೊಂದುವೆವೆಂಬ ಉದ್ಯೋಗಿಗಳ ಪ್ರವೃತ್ತಿಗಳಿಗೆ ಇದು ವ್ಯಾಘಾತಗೊಳಿಸುವ ವಾದವಾಗಿದೆ.

ಈ ರೀತಿಯಲ್ಲಿ ಎಲ್ಲಾ ಜಗತ್ತಿಗೇ ಸ್ವತಂತ್ರವಾದ ಮೂಲತತ್ತ್ವವು ಸಚ್ಚಿದಾನಂದಸ್ವರೂಪವೇ ಎಂದು ಪ್ರಮಾಣಿತವಾಗಿರಲು, ಜಗದೊಳಗಿನ ನಾವೆಲ್ಲರೂ ಆ ಮೂಲತತ್ತ್ವದ ಅಂಶಗಳೇ ಎಂದು ಹೇಳಬೇಕಾದ್ದೇನು? ಮೃಣ್ಮಯ ಪದಾರ್ಥಗಳೆಲ್ಲಾ

ಮಣ್ಣೇ ಸರಿ ಎಂಬುದು ತಿಳಿವ ದೃಷ್ಟಾಂತವಾಗಿದೆಯಲ್ಲವೆ? ಹಾಗೆಯೇ ಚಿನ್ಮಯ ಜೀವಗಳೆಲ್ಲಾ ಚಿದ್ರೂಪಗಳಾಗಿರಬೇಕಾದ್ದು ಸಹಜವೇ ಸರಿ. ತಥಾಪಿ, ಅನೇಕಾತ್ಮ ವ್ಯವಹಾರದಿಂದುಂಟಾದ ಭ್ರಾಂತಿ ನಿರಸನಾರ್ಥವಾಗಿ ಆ ಸಚ್ಚಿದಾನಂದಸ್ವರೂಪವೇ ನಮ್ಮೆಲ್ಲರ ಆತ್ಮಾ ಎಂದು ವೇದಾಂತವು ಪ್ರತಿಪಾದನೆ ಮಾಡಿದೆ. ಅಂಶಗಳಾದ ನಾವು ಅಂಶಿಯಾದ ಪೂರ್ಣಾನಂದ ಸ್ವರೂಪವಾಗಿ ಬುದ್ಧಿಯಲ್ಲಿ ಪ್ರಕಾಶಿಸಲು ಆಶ್ರಯಿಸ-ಬೇಕಾದ ಬ್ರಹ್ಮವಿದ್ಯಾ ಸಾಧನಗಳನ್ನೂ ವೇದಾಂತವು ಪ್ರತಿಪಾದಿಸುವುದಾಗಿದೆ.

ಇನ್ನೊಂದುಕಡೆ ಜಗತ್ತಿನ ಎಲ್ಲಾ ಪ್ರಾಣಿಗಳ ಸ್ವೈರ ಉದ್ಯೋಗಗಳನ್ನೂ ಆಲೋಚಿಸಿ ನೋಡಿದರೆ, ಅವುಗಳೂ ತಮ್ಮ ತಮ್ಮ ಬುದ್ಧಿಗಳಿಗೆ ಆವೃತ ಅನಾವೃತವಾಗಿ ಕಂಡುಬರುವ ಆ ಸಚ್ಚಿದಾನಂದ ಸ್ವರೂಪವನ್ನು ಪುರುಷಾರ್ಥ ರೂಪದಲ್ಲಾಗಲೀ ಪುರುಷಾರ್ಥಾಭಾಸರೂಪದಲ್ಲಾಗಲಿ, ಅನಾವೃತವಾಗಿ ಅನುಭವಿಸುತ್ತವೆ ಎಂದು ತಿಳಿಯುವುದು. ಪಶುಪಕ್ಷಿಗಳಾಗಲೀ, ಮ್ಲೇಚ್ಛರಾಗಲಿ ಯಕ್ಷರಕ್ಷೋಭೂತ, ಮನುಷ್ಯ, ದೇವ ಮುಂತಾದವರಾಗಲೀ, ತೃಣಗುಲ್ಮಾದಿಗಳಿಂದಾರಂಭಿಸಿ, ಎಲ್ಲಾ ಸ್ಥಾವರ ಜಂಗಮಗಳೂ ತಮಗೆ ತಿಳಿದಂತೆ ಆನಂದಾನುಭವವನ್ನು ಕೊಡುವ ವಸ್ತುಗಳನ್ನು ಉತ್ಪನ್ನ ಮಾಡುವುದರಲ್ಲೇ ಅಥವಾ ಸ್ವಾಧೀನ ಪಡಿಸುವುದರಲ್ಲೇ ಯಾವ-ಜ್ಜೀವ ಹಗಲಿರುಳೂ ಉದ್ಯುಕ್ತವಾಗಿರುವುದು ಕಂಡುಬರುತ್ತದೆ. ಈ ರೀತಿಯಲ್ಲಿ ಲೋಕದಲ್ಲಿ ಸಚ್ಚಿದಾನಂದ ಸ್ವರೂಪವು ಎಲ್ಲರನ್ನೂ ಮರುಳು ಮಾಡಿದೆ. ವೇದ ಪ್ರಮಾಣಿತವಾದ ಸಚ್ಚಿದಾನಂದ ಸ್ವರೂಪ ಸ್ವತಃ ಸರ್ವ ಸಮರ್ಥ ಪರಮಾರ್ಥ ಸ್ಥಿತಿಯನ್ನು ಅಪಲಾಪಿಸುವ ನಾಸ್ತಿಕರು ಕೂಡ, ಲೌಕಿಕ, ಮಾರ್ಗಗಳಿಂದಲೇ ಅದರ ಲೇಶ ಮಾತ್ರವಾದ ವಿಷಯಾನಂದ ಮೊದಲಾದ ಅಸ್ತವ್ಯಸ್ತ ಸ್ವರೂಪಕ್ಕೆ ಮರುಳಾಗಿಯೇ ಅಲೆಯುತ್ತಿರುವರು. ಎಲ್ಲಾ ಕೃಷಿ ವಾಣಿಜ್ಯಾದಿ ವ್ಯವಸಾಯಗಳೂ ಶಿಲ್ಪ ಕಲ್ಪನೆಗಳೂ ಯಂತ್ರ ತಂತ್ರ ಶೋಧನೆಗಳೂ ರಾಜ್ಯ ಕ್ರಾಂತಿಗಳೂ ಧರ್ಮ ಕರ್ಮಗಳೂ, ಔಷದ, ಮಂತ್ರತಪಃ ಸಮಾಧಿಗಳೂ ಹೆಚ್ಚೇಕೆ? ಚೌರ್ಯ, ದ್ಯೂತ, ಮದ್ಯ, ವ್ಯಭಿಚಾರಾದಿ ಕಾಮಜ ವ್ಯಸನಗಳೂ ಹಿಂಸಾ, ಅರ್ಥಪಾರುಷ್ಯ, ದಂಡ ಪಾರುಷ್ಯ - ಮೊದಲಾದ ಕ್ರೋಧಜ ವ್ಯಸನಗಳೂ ಪುರುಷಾರ್ಥರೂಪದಲ್ಲಾಗಲೀ ಪುರುಷಾರ್ಥಾಭಾಸರೂಪದಲ್ಲಾಗಲೀ ಆನಂದ ಸ್ವರೂಪಕ್ಕೆ ಮರುಳಾಗಿಯೇ ಹೇಗಾದರೂ ನಡೆಯುತ್ತಿರುವುವು. ಎಲ್ಲಾ ತರದಲ್ಲಿ ಶ್ರಮಪಟ್ಟು ಬಳಲಿ ವಿಫಲವಾದರೂ ಕೊನೆಗೆ ನಿದ್ರೆಯಿಂದಾದರೂ ಆ ಸಚ್ಚಿದಾನಂದಸ್ವರೂಪವನ್ನು ಮೋಹಾಚ್ಛಾದಿತವಾಗಿಯಾದರೂ ಹೇಗೂ ಆಗಿಂದಾಗ್ಗೆ ಅನುಭವಿಸದೆ ಯಾರಿಂದಲೂ ಇರಲಾಗದು.

ಆದರೆ ತಮ್ಮ ತಮ್ಮ ರುಚಿಗನುಸಾರವಾಗಿ ನಡೆಸಿದ ಈ ಎಲ್ಲಾ ಸ್ವೈರ ಉದ್ಯೋಗಗಳ ಕೊನೆಗೆ ಫಲಶ್ರುತಿ ಏನು? ಅನಾದಿ ಜನ್ಮ ಮರಣ ಪರಂಪರೆಯಿಂದ ಚತುರಶೀತಿ (೮೪) ಲಕ್ಷ ಯೋನಿಗಳಲ್ಲಿ ಕುಣಿದಾಡಿ ಆಯಾ ಯೋನಿಗನುಸಾರವಾಗಿ

ಇಂಥಾ ಉದ್ಯೋಗಗಳಿಂದ ಶ್ರಮಪಟ್ಟು ಇನ್ನೂ ಕಡೆಗಾಣದಂತಿದೆ. ಇಂಥಾ ಉದ್ಯೋಗಗಳಿಂದ ವೈಷಯಿಕ, ಆಭ್ಯಾಸಿಕ, ಮನೋರಥಿಕ, ಅಥವಾ ಅಭಿಮಾನಿಕ ಸುಖಗಳ ರೂಪದಲ್ಲಿ ಪುರುಷಾರ್ಥವಾಗಿಯೋ, ಪುರುಷಾರ್ಥಾಭಾಸವಾಗಿಯೋ ಉದ್ಯೋಗಾನುರೂಪ ಆನಂದಾವಾಪ್ತಿಯಾದಂತೆ ಸ್ವಲ್ಪಕಾಲ ಕಂಡುಬಂದರೂ ಅದು ಕಣ್ಣೆದಿರು ನೋಡುತ್ತಿರುವಂತೆಯೇ ಮಾಯವಾಗಿ ಪುನಃ ಮೊದಲಿನಂತೆಯೇ ಶೂನ್ಯತೆಗೆ ಪಾತ್ರವಾಗಬೇಕಾಗಿದೆ. "ತದ್ಯಥೇಹ ಕರ್ಮಚಿತೋ ಲೋಕಃ ಕ್ಷೀಯತೇ ಏವಮೇವಾಮುತ್ರ ಪುಣ್ಯಚಿತೋ ಲೋಕಃ ಕ್ಷೀಯತೇ" ದೃಷ್ಟ ಸುಖಗಳಂತೆಯೇ ಇಂಥಾ ಶ್ರುತಸುಖಗಳೂ ಅವಿಶುದ್ಧಿ, ಕ್ಷಯ, ಅತಿಶಯಗಳಿಂದ ದೂಷಿತಗಳಾಗಿವೆ. ಆದುದರಿಂದ ಈ ರೀತಿಯಲ್ಲಿ ಪ್ರಾಪ್ತವಾದದ್ದರ ನಾಶ ಆದಿಗಳಿಂದ ಕೇವಲ ವಿಕಲನಾಗ-ಬೇಕಾದದ್ದೊಂದೇ ಹೆಚ್ಚಿನ ಲಾಭವಾಗಿದೆಯಷ್ಟೆ! ಪುನಃ ಪುನಃ ಅಂಥಾ ಉದ್ಯೋಗ-ಗಳನ್ನು ನಡೆಸಿದರೂ ಅದರಿಂದ ಕೊನೆಹೊಂದುವ ಸಮಾಚಾರವಿಲ್ಲ. ಯಾವ ಜನ್ಮದಲ್ಲಿ ಬಂದರೂ ಅಲ್ಲಿನ ಸಂಸಾರ ಸಾಮಗ್ರಿಗಳನ್ನು ಸಂಗ್ರಹಿಸಿ ಪುತ್ರ ಮಿತ್ರ ಕಲತ್ರಗಳನ್ನು, ಸೇರಿಸಿ ಆನಂದವೆಂದು ಮನ್ನಿಸುತ್ತಾ ಇದ್ದಂತಾಗಿ ಆ ಶೇಖರಿಸಿದ್ದನ್ನೆಲ್ಲಾ ಅಷ್ಟರಲ್ಲೇ ಬಿಟ್ಟು ಪುನಃ ಮತ್ತೊಂದು ಕಡೆ ಜನ್ಮವೆತ್ತಿ ಅದೇ ರೀತಿ ಮಾಡುತ್ತಾ ಎಷ್ಟೋ ತರದ ದುರ್ಮರಣಗಳನ್ನೂ ವಿಪತ್ತಿಗಳನ್ನೂ ಇಚ್ಛಿಸದೆಯೇ ಬಂದು ಸೇರಿದ ಅಸಹ್ಯ ವೇದನೆಗಳನ್ನೂ ಪರವಶನಾಗಿ ಅನುಭವಿಸುತ್ತಾ ಅಲ್ಲಲ್ಲಿ ದುಡಿದು ಮಾಡಿದ ಎಲ್ಲಾ ಪರಾಕ್ರಮಗಳನ್ನೂ ಪ್ರಗತಿಗಳನ್ನೂ ಬುದ್ಧಿಮತ್ತೆಗಳನ್ನೂ ಯಾರೂ ಹೇಳುವವರೂ ಕೇಳುವವರೂ ಇಲ್ಲದಂತೆ ನಡುವೆ ಮಾಡಿದ್ದನ್ನು ಕೈಬಿಡುತ್ತಾ ಇನ್ನೂ ಅದೇ ಪ್ರಕಾರ ಅಲೆಯುತ್ತಿರುವುದು ಮುಗಿಯದಂತಾಗಿದೆ. ಜಡಭರತನು ಸಂಸಾರಿಗಳ ಇಂಥಾ ಉದ್ಯೋಗಗಳಿಂದ ಕಣ್ಣೀರು ಸುರಿಸುವಂತಹ ದುರ್ದೆಶೆಗಳುಂಟಾಗುವುದನ್ನು ವರ್ಣಿಸಿ, ಕೊನೆಗೆ ಹೀಗೆ ಹೇಳಿರುವನು –

ತಾಂಸ್ತಾನ್ ವಿಪನ್ನಾನ್ ಸ ಹಿ ತತ್ರ ತತ್ರ
ವಿಹಾಯ ಜಾತಂ ಪರಿಗೃಹ್ಯ ಸಾರ್ಥಃ ।
ಆವರ್ತತೇಽದ್ಯಾಪಿ ನ ಕಶ್ಚಿದತ್ರ
ವೀರಾಧ್ವನಃ ಪಾರಮುಪೈತಿ ಯೋಗಂ ॥

ಈ ಪ್ರಕಾರ ಕಡೆಗಾಣದ ವ್ಯರ್ಥ ಉದ್ಯೋಗಗಳುಳ್ಳ ಜನ್ಮ ಮರಣ ಪ್ರವಾಹವೇ "ಅಪಾರ ಸಂಸಾರ ಸಾಗರ" ವೆಂಬ ಹೆಸರು ಧರಿಸಿರುವುದು. ಇಂಥಾ ದುಃಖಪ್ರವಾಹ ನಿವೃತ್ತಿಯಾಗಬೇಕಾದರೆ ಯಾವ ಆನಂದ ಸ್ವರೂಪಾವಾಪ್ತಿಗಾಗಿ ಎಲ್ಲರೂ ಆಸೆ ಪಡುವರೋ ಆ ಸಚ್ಚಿದಾನಂದ ಪರಮಾತ್ಮನ ಸರ್ವಜ್ಞ, ಸರ್ವಶಕ್ತಿ, ಸರ್ವಾಂತ-ರ್ಯಾಮೀ ಪ್ರಕೃತಿ ಮತ್ತು ಪ್ರಾಕೃತಪದಾರ್ಥಗಳಿಂದ ಪೃಥಕ್, ಅಸಂಗ, ಅನಂತ, ಅಖಂಡ, ಏಕಮೇವ, ಪೂರ್ಣಾನಂದಸ್ವರೂಪ, ಪರಮಾರ್ಥ ಸ್ಥಿತಿಯೊಡನೆ

ಅಂಶಗಳಾದ ಜೀವಗಳಿಗೆ ಸ್ವತಃ ಸಿದ್ಧನಾದ ಐಕ್ಯವನ್ನು ಪ್ರತ್ಯಕ್ಷೀಕರಿಸಿ ಅದರಲ್ಲಿ ಶಾಶ್ವತಸ್ಥಿತಿಗೊಳಿಸುವುದೊಂದೇ ಉಪಾಯ; ಅದಕ್ಕೋಸ್ಕರ ಶಾಸ್ತ್ರೋಕ್ತ ಬ್ರಹ್ಮವಿದ್ಯಾ ಸಾಧನೋಪಾಯಗಳೇ ಶರಣಗಳೆಂದು ಎಲ್ಲಾ ಶ್ರುತಿಸ್ಮೃತಿ ಪುರಾಣೇತಿಹಾಸಗಳೂ ಸಾರಿ ಹೇಳುತ್ತಿವೆ. ಈ ಪ್ರಕಾರ ಸ್ವಾತ್ಮಾಭೇದೇನ ಪೂರ್ಣ ಸಚ್ಚಿದಾನಂದಸ್ವರೂಪ ಸಾಕ್ಷಾತ್ಕಾರವೆಂಬ ಬ್ರಹ್ಮವಿದ್ಯಾ ಮತ್ತು ಅದರ ಉಪಾಯ ಸಾಧನೆಗಳೂ ಗುರು ಮತ್ತು ಈಶ್ವರಕೃಪೆಯಿಂದಲೇ ಸಾಧ್ಯ. ಆಚಾರ್ಯೋಪಾಸನೆಯೂ ಭಗವದು-ಪಾಸನೆಯೂ ಇಲ್ಲದೆ ಎಂದಿಗೂ ಅವು ಸಾಧ್ಯವಾಗಲಾರವೆಂದು ಈ ಮುಂದಿನ ಶ್ರುತಿವಾಕ್ಯಗಳು ಸ್ಪಷ್ಟವಾಗಿ ಬಹಳ ಕಳಕಳಿಯಿಂದ ತಿಳಿಸುತ್ತವೆ.

ಆಚಾರ್ಯವಾನ್ ಪುರುಷೋ ವೇದ ।
ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಆದುದರಿಂದಲೇ ಮನುಷ್ಯ ಶರೀರವನ್ನು ಪಡೆದು ಗುರುಭಕ್ತಿ ಮತ್ತು ಭಗವ-ದ್ಭಕ್ತಿಗಳ ಮೂಲಕ ಪರಮಾರ್ಥ ಸಾಧನೆಗಳನ್ನು ಸಂಪಾದಿಸಿ ಸಂಸಾರ ಸಾಗರದಿಂದ ಪಾರಾಗದೆ ಹೋದರೆ ಆತನು ಆತ್ಮಘಾತಿಯಾಗುವನೆಂದು ಶ್ರೀಕೃಷ್ಣನು ಉದ್ಧವನಿಗೆ ಉಪದೇಶ ಮಾಡಿದ್ದಾನೆ—

ನೃದೇಹಮಾದ್ಯಂ ಸುಲಭಂ ಸುದುರ್ಲಭಂ
ಪ್ಲವಂ ಸುಕಲ್ಪಂ ಗುರು ಕರ್ಣಧಾರಂ ।
ಮಯಾನುಕೂಲೇನ ನಭಸ್ವತೇರಿತಂ
ಪುಮಾನ್ ಭವಾಬ್ಧಿಂ ನ ತರೇತ್ ಸ ಆತ್ಮಹಾ ॥

ಇದೂ ಅಲ್ಲದೆ,

ಏವಂ ಗುರೂಪಾಸನಯೈಕ ಭಕ್ತ್ಯಾ
ವಿದ್ಯಾಕುಠಾರೇಣ ಶಿತೇನ ಧೀರಃ ।
ವಿವೃಶ್ಚ್ಯ ಜೀವಾಶಯಮಪ್ರಮತ್ತಃ
ಸಂಪದ್ಯ ಚಾತ್ಮಾನಮಥ ತ್ಯಜಾಸ್ತ್ರಂ॥

ಇತ್ಯಾದಿ ಸಾವಿರಾರು ಉಪದೇಶಗಳು ಎಲ್ಲೆಲ್ಲೂ ಕಾಣುವವು.

ಅನಾದಿ ಅಜ್ಞಾನದಿಂದ ಮೂಢನಾದ ಪ್ರಾಣಿಯು ಆ ಸರ್ವಸಮರ್ಥ ಪೂರ್ಣಾ-ನಂದ ಸಚ್ಚಿದಾನಂದದಿಂದ ಅಂತರ್ಬಾಹ್ಯ ಆಧಾರಿತನಾಗಿದ್ದೂ ಅದು ಅಡಗಿರುವ

ಕಾರಣ ಅಜ್ಞನಿಗೆ "ಗುರು ಬಿನಾ ಕೌನ ಬತಾವೇ ಭಾಟ್" ಗುರುವನ್ನು ಬಿಟ್ಟರೆ ಬೇರೆ ಪಥಪ್ರದರ್ಶಕರು ಯಾರು ? ವೇದವೂ ಇದನ್ನೇ ಹೇಳುತ್ತದೆ.

ಹೆಚ್ಚೇಕೆ ! ಭಗವದ್ಭಕ್ತಿಗೆ ಕೂಡ ಗುರುವೇ ಪಥಪ್ರದರ್ಶಕನು. ಆದುದರಿಂದಲೇ ಶ್ರೀಮಧುಸೂದನ ಸರಸ್ವತಿಯವರು 'ಭಗವದ್ಭಕ್ತಿ ರಸಾಯನ' ಗ್ರಂಥದಲ್ಲಿ 'ಪ್ರಥಮಂ ಮಹತಾಂ ಸೇವಾ' ಎಂಬುದಾಗಿ ಭಗವದ್ಭಕ್ತಿಯ ಆರಂಭಸೋಪಾನವನ್ನು ಹೇಳಿರುತ್ತಾರೆ. ಶ್ರೀಕೃಷ್ಣ ಪರಮಾತ್ಮನೂ ಗುರುಸೇವೆಯಿಂದಲೇ ಭಾಗವತ ಧರ್ಮಗಳನ್ನು ಕಲಿಯಬೇಕೆಂದು ಹೇಳಿರುತ್ತಾನೆ. ಅತ ಏವ 'ಶಿವೇ ರುಷ್ಟೇ ಗುರುಸ್ತ್ರಾತಾ ಗುರೌ ರುಷ್ಟೇ ನ ಕಶ್ಚನ' ಎಂಬುದು ಯಥಾರ್ಥವಾಗಿದೆ. ಪಥಪ್ರದರ್ಶಕನೇ ವಿರುದ್ಧನಾದರೆ ಆ ಪಥದಿಂದ ನಡೆದು ಪ್ರಾಪ್ತವ್ಯನಾಗಬೇಕಾದ ಸ್ವಾಮಿಯ ಪ್ರಾಪ್ತ್ಯಾಶೆಯು ಆ ಮೇಲೆ ಎಲ್ಲಿಂದ ? ಆದುದರಿಂದ ಆಚಾರ್ಯೋಪಾಸನೆಯೇ ಎಲ್ಲಾ ಶ್ರೇಯಸ್ಸುಗಳಿಗೂ ಪ್ರಥಮ ಕಾರಣವಾಗಿರುವುದು. ಸಂಸಾರದಲ್ಲಿ ಅಲ್ಪಸ್ವಲ್ಪ ದುಃಖಗಳನ್ನು ದೂರ ಮಾಡುವವುಗಳಂತೆ ಕಾಣಿಸಿಕೊಳ್ಳುವ ಅಪರ-ವಿದ್ಯೆಗಳ ಗುರುತ್ವ ಮಹಿಮೆಗಳೇ ಅಪಾರವಾಗಿರಲು, ಪರವಿದ್ಯೆಯು ಸದ್ಗುರುವಿನ ಆಚಾರ್ಯೋಪಾಸನೆಯ ಮಹಿಮೆಯು ತುಲನೆಯೇ ಇಲ್ಲದ್ದಾಗಿದೆ- ಎಂದು ಸ್ವಯಂ ಶ್ರೀ ಆಚಾರ್ಯ ಶಂಕರ ಭಗವತ್ಪೂಜ್ಯಪಾದರೇ ಹೇಳಿರುವರು—

ದೃಷ್ಟಾಂತೋ ನೈವದೃಷ್ಟಸ್ತ್ರಿಭುವನಜಠರೇ ಸದ್ಗುರೋರ್ಜ್ಞಾನದಾತುಃ ।
ಸ್ಪರ್ಶಶ್ಚೇತ್ತತ್ರಕಲ್ಪ್ಯಃ ಸನಯತಿ ಯದಹೋ ಸ್ವರ್ಣತಾಮಶ್ಮಸಾರಂ ॥
ನ ಸ್ಪರ್ಶತ್ವಂ ತಥಾಪಿ ಶ್ರಿತಚರಣಯುಗೇ ಸದ್ಗುರುಃ ಸ್ವೀಯ ಶಿಷ್ಯೇ
ಸ್ವೀಯಂ ಸಾಮ್ಯಂ ವಿಧತ್ತೇ ಭವತಿ ನಿರುಪಮಸ್ತೇನವಾಽ ಲೌಕಿಕೋಽಪಿ ॥

ಸಚ್ಚಿದಾನಂದ ಪರಮಾತ್ಮನು ಈ ಜಗತ್ತಿಗೆ ಸ್ವತಂತ್ರ ಮೂಲತತ್ತ್ವನಾದ ಕಾರಣ ಅವನಲ್ಲಿ ಜಗತ್ತಿನ ಜಗತ್ ಸ್ವರೂಪವೂ, ಸರ್ವಶಕ್ತನಾದ ಕಾರಣ ಜಗತ್ತಿನ ಪಾಲಕಸ್ವರೂಪವೂ, ಅಂತರ್ಯಾಮೀ ನಿಯಾಮಕನಾದ ಕಾರಣ ಜಗತ್ತಿನ ಸಂಹಾರಕ ಸ್ವರೂಪವೂ ಇದ್ದಂತೆ, ಅವನೇ ಸರ್ವಜ್ಞನಾದ ಕಾರಣ ಉಪದೇಶಕ ಗುರು ಸ್ವರೂಪವೂ ಮೂಲದಲ್ಲಿ ಅವನದೇ ಆಗಿರುವುದು. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" "ಸ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್" ಇತ್ಯಾದಿ ಪ್ರಮಾಣಗಳು ಮೂಲದಲ್ಲಿ ಸರ್ವವಿದ್ಯೆಗಳಿಗೂ ಈಶಾನನಾದ ಆ ಪರಮಾತ್ಮನದೇ ಗುರುಸ್ವರೂಪವೆಂದು ಪ್ರತಿಪಾದಿಸುತ್ತಿವೆ.

'ವೇದವಿದೇವ ಚಾಹಂ'

ಕಿಂ ವಿಧತ್ತೇ ಕಿಮಾಚಷ್ಟೇ ಕಿಮನೂದ್ಯ ವಿಕಲ್ಪಯೇತ್ ।
ಇತ್ಯಾದಿ ಹೃದಯಂ ಲೋಕೇ ನಾನ್ಯೋ ಮದ್ವೇದ ಕಶ್ಚನ ॥

ಎಂದು ಶ್ರೀ ಕೃಷ್ಣನು ಹೇಳಿದಂತೆ ಆ ಸರ್ವಜ್ಞನ ವೇದವಾಕ್ಯಾರ್ಥವನ್ನು ಅವನೇ ತಿಳಿದವನಾಗಿ ಉಪದೇಶಿಸಬಲ್ಲನಲ್ಲದೆ ಬೇರೆ ಯಾರು ಸ್ವತಂತ್ರವಾಗಿ ಉಪದೇಶಿಸಿ-ದರೂ ಅದು ಸರಿಯಾಗದು. ಅತಃ ವಾಯು ಶೇಷ ಮೊದಲಾದವರು ಉಪದೇಶಿಸಿದ ವೇದಾರ್ಥಕ್ಕಿಂತ ಸ್ವಯಂ ಆ ಪರಮಾತ್ಮನೇ ಉಪದೇಶಿಸಿದ ವೇದಾರ್ಥ ನಿರ್ಣಯವೇ ಪ್ರಾಮಾಣ್ಯೇನ ಸ್ಥಾಪಿತವಾಗುವುದು. ಬ್ರಹ್ಮತತ್ತ್ವವೂ ಇಂದ್ರನ ದೃಷ್ಟಿಯಿಂದ ಅಂತರ್ಹಿತವಾದಾಗ ಅಲ್ಲಿಯೇ ಸಹಚರಿಯಾಗಿ ಕಾಣಸಿಕ್ಕಿದ ಉಮಾಹೈಮವತಿಯು ಇಂದ್ರನ ಬ್ರಹ್ಮಜಿಜ್ಞಾಸೆಗೆ 'ಸಾ ಬ್ರಹ್ಮೇತಿ ಹೋವಾಚ' ಎಂದು ಕೊಟ್ಟ ಉತ್ತರವು ಕೇನೋಪನಿಷತ್ತಿನಲ್ಲಿ ಉಮಾ ಸಹಚರವಾದ ಶಂಕರಸ್ವರೂಪವು ಬ್ರಹ್ಮತತ್ವವೇ ಎಂದು ತಿಳಿಸುವುದು. ತದನುಸಾರ ಬ್ರಹ್ಮ ತತ್ತ್ವವೇ 'ಚತುರ್ಭಿಃ ಸಹ ಶಿಷ್ಯೈಸ್ತು ಶಂಕರೋಽವತರಿಷ್ಯತಿ' ಇತ್ಯಾದಿ ಪ್ರಮಾಣಗಳಿಗನುಸಾರವಾಗಿ ಶ್ರೀ ಆಚಾರ್ಯ ಶಂಕರ ಭಗವತ್ಪಾದರಾಗಿ ಅವತರಿಸಲು ಅವರ ಉಪದೇಶವು ಸ್ವಯಂ ಪರಮಾತ್ಮನು ಉಪದೇಶಿಸಿದ ವೇದಾರ್ಥ ನಿರ್ಣಯವಾದ ಕಾರಣ ಬಲ್ಲವನ ಉಪದೇಶವಾಗಿದ್ದು "ವಕ್ತ್ರಾರಮಾಸಾದ್ಯ ಯಮೇವ ನಿತ್ಯಾ ಸರಸ್ವತೀ ಸ್ವಾರ್ಥಸಮನ್ವಿತಾಭೂತ್" ಎಂದೂ 'ಆಚಾರ್ಯಾಃ ಶಂಕರಾಚಾರ್ಯಾಃ ಸಂತು ಮೇ ಜನ್ಮ ಜನ್ಮನಿ' ಎಂದೂ ಹಿತಪ್ರಿಯವಾಗಿ ಸಂಮಾನನೀಯವಾದ ಅದ್ವೈತ ಸಂಪ್ರದಾಯದ ಗುರು ಮಹಿಮೆ-ಯು ಸರ್ವೋತ್ಕೃಷ್ಟವಾಗಿರುವುದು. ಈ ಪ್ರಕಾರ ಸ್ವಯಂ ಸಚ್ಚಿದಾನಂದ ಪರ-ಮಾತ್ಮನ ಮೌಲಿಕ ಗುರುಸ್ವರೂಪದಲ್ಲೇ ಆಚಾರ್ಯೋಪಾಸನೆಯನ್ನು ಮಾಡುವ ಸೌಭಾಗ್ಯವು ಈ ಸಂಪ್ರದಾಯದಲ್ಲೇ ಒದಗಿರಲು ಅದನ್ನು ಮನಸಾ ವಾಚಾ ಕರ್ಮಣಾ ಭಕ್ತಿ ಶ್ರದ್ಧೆಯಿಂದ ಸೇವಿಸಿ ಕೃತಕೃತ್ಯನಾಗದ ಶಿಷ್ಯನಿಗಿಂತ ಭಾಗ್ಯಹೀನ ನಾದವನು ಈ ಜಗತ್ತಿನಲ್ಲಿ ಇನ್ನಾರು ?

ಅಂತೂ ಸಚ್ಚಿದಾನಂದ ಪರಮಾತ್ಮನ ಎರಡು ತರದ ಉಪಾಸನೆಗಳು, – ಯಥಾ ದೇವೇ ತಥಾ ಗುರೌ' ಇತ್ಯಾದಿ ಮಾತುಗಳಲ್ಲಿ ಹೇಳಿವೆ. ಗುರು ಸ್ವರೂಪದಲ್ಲೊಂದು ಆ ಪೈಕಿ ಗುರು ಸ್ವರೂಪದಲ್ಲಿ ಪರಮಾತ್ಮೋಪಾಸನೆಯೇ ಸರ್ವ ಶ್ರೇಯಸ್ಸುಗಳಿಗೂ ಆರಂಭವಾಗಿರುವುದು. ಅಂಥಾ ಗುರುಸ್ವರೂಪವು ಮೂಲದಲ್ಲಿ ಪರಮಾತ್ಮನದೇ ಆಗಿದ್ದು ಬೇರೆ ಎಲ್ಲರೂ ಅವನಿಂದ ಸಾಕ್ಷಾತ್ಪರಂಪರೆಯಿಂದ ಜ್ಞಾನವನ್ನೂ ಸಾಮ್ಯ-ವನ್ನೂ ಪಡೆದವರಾಗಿಯೂ ತತ್ ಸ್ಥಾನಾಪನ್ನರಾಗಿಯೂ ಗುರುತ್ವವನ್ನು ಮಾಡು ತ್ತಾರೆ, 'ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ' ಎಂದು ಶಾಸ್ತ್ರದಲ್ಲಿ ಹೇಳಿರುವುದು. ಮೂರ್ತಿಯಲ್ಲಿ ಮಾಡಿದ ಪೂಜೋಪಚಾರಗಳು ದೇವತೆಗೆ ಹೋಗಿ ಸೇರುವಂತೆ ಇಂಥವರಲ್ಲಿ ಮಾಡಿದ ಆಚಾರ್ಯೋಪಾಸನೆಯು ಆಚಾರ್ಯ ಮತ್ತು ಪರಮೇಶ್ವರ ಇಬ್ಬರ ಪ್ರಸಾದವನ್ನೂ ಒದಗಿಸುವಂಥಾ ಶ್ರೇಯಃಸಾಧನ ವಾಗಿದೆ. ಈ ಎಲ್ಲಾ ಕಾರಣಗಳಿಂದಲೇ ಭಗವದ್ಗೀತೆಯಲ್ಲಿ 'ಅಮಾನಿತ್ವಂ' ಇತ್ಯಾದಿ ಆರಂಭಿಸಿ 'ಏತಜ್ಜ್ಞಾನಮಿತಿ ಪ್ರೋಕ್ತಂ' ಎಂದು ಕ್ಷೇತ್ರಜ್ಞ ಸಾಧನಗಳನ್ನು ಹೇಳು

ವಾಗ ಶ್ರೀ ಕೃಷ್ಣನು 'ಆಚಾರ್ಯೋಪಾಸನಂ' ಎಂದು ಎಣಿಸಿರುತ್ತಾನೆ. ಈ ಪ್ರಕಾರ ಪರಮಾರ್ಥ ಸಾಧನೆಗೋಸ್ಕರ ಗುರುಶಿಷ್ಯ ಸಂಬಂಧದ ಮಹತ್ತ್ವವು ಎಷ್ಟು ವರ್ಣಿಸಿದರೂ ಪೂರೈಸದು. ಇತರ ಅಪರ ವಿದ್ಯಾಸಾಧನಗಳಲ್ಲಿಯೂ 'ಗುರುಶುಶ್ರೂಷಯಾ ವಿದ್ಯಾ, 'ಶುಶ್ರೂಷುರಧಿಗಚ್ಛತಿ' ಇತ್ಯಾದಿ ಪ್ರಸಿದ್ಧವಾಗಿದೆ. ಮತ್ತೆ ಪರವಿದ್ಯೆಯ ಸಾಧನೆಗಳಲ್ಲಿ ಬೇರೆ ಹೇಳಬೇಕಾದ್ದೇನು?

ಶ್ರೀ ಸಚ್ಚಿದಾನಂದ ಪರಮಾತ್ಮನು ತನ್ನಲ್ಲಿರುವ ಜಗದ್ಗುರುತ್ವವನ್ನು ಪ್ರಜೆಗಳ ತಾಯಿ, ತಂದೆ ಮೊದಲಾದ ಹಿರಿಯರ ಲಾಗಾಯ್ತು ಅಧ್ಯಾಪಕ, ಗುರು, ಧಾರ್ಮಿಕ ರಾಜ, ಆಚಾರ್ಯ, ಋಷಿ, ಮಹರ್ಷಿ, ಮುನಿ, ಮನು ಇತ್ಯಾದಿ ಬ್ರಹ್ಮದೇವರ ತನಕ ಶ್ರೇಷ್ಠ ಪೂರ್ವಜರಲ್ಲೆಲ್ಲಾ ವಿಭಾಗಿಸಿ ಸ್ಥಾಪಿಸಿರುವನು. ಜನ್ಮವೆತ್ತಿದ ಪ್ರಾಣಿಯು ಸರ್ವಪ್ರಥಮ ತಾಯಿಯಿಂದಲೇ ಎಷ್ಟೋ ಶಿಕ್ಷಣಗಳನ್ನು ಪಡೆಯುವುದು. ಆ ಮೇಲೆ ತಂದೆಯಿಂದ ಮೊದಲು ಮಾಡಿ ವೇದಾರ್ಥ ವ್ಯಾಖ್ಯದ್ವಾರಾ ಆಚಾರ್ಯರಿಂದಲೂ ಶಾಸ್ತ್ರದ್ವಾರಾ ಋಷಿ, ಮುನಿ, ಮನು, ಬ್ರಹ್ಮ ಮೊದಲಾದವರಿಂದಲೂ ಶಿಕ್ಷಣಗಳನ್ನು ಹೊಂದಿ ಶಿಕ್ಷಿತನಾಗುವನು. ಸ್ತ್ರೀಯರಿಗೆ "ಪತಿಸೇವಾ ಗುರೌ ವಾಸಃ' 'ಪತಿರೇಕೋ ಗುರುಃ ಸ್ತ್ರೀಣಾಂ' ಇತ್ಯಾದಿ ಶಾಸ್ತ್ರಗಳು ಪತಿ ಮತ್ತು ಪತಿಯ ಹಿರಿಯರು ಗುರು-ಗಳೆಂದೂ, ಅವರಿಂದ ಎಷ್ಟೋ ಹಿತಾಹಿತ ಶಿಕ್ಷಣಗಳು ಸ್ತ್ರೀಯರಿಗೆ ಪಡೆಯಬೇಕಾಗಿ-ರುವುವೆಂದೂ ಸಾರುತ್ತಿವೆ. ಈ ಪ್ರಕಾರ ಪರಮಾತ್ಮನು ಪ್ರಾಣಿಗಳಿಗೆ ಅಲ್ಲಲ್ಲಿ ಸದಾಚಾರಗಳನ್ನೂ ಪರಂಪರೆಗಳನ್ನೂ ಶಾಸ್ತ್ರಾರ್ಥಗಳನ್ನೂ, ಲೋಕ, ವೇದ, ಸಮಯಸಿದ್ಧಗಳಾದ ಹಲವು ವ್ಯವಹಾರಗಳನ್ನೂ ಹೇಳಿಕೊಟ್ಟು ತಿದ್ದುವುದಕ್ಕಾಗಿಯೇ ಇವರಲ್ಲೆಲ್ಲಾ ತನ್ನ ಗುರುತ್ವವನ್ನು ಹಂಚಿರುವನು, ಇಷ್ಟು ವ್ಯವಸ್ಥೆ ಮಾಡಿಯೂ ಕಾಲ ಕ್ರಮೇಣ ಮೋಹಾಚ್ಛಾದಿತವಾಗಿ ವಿಪರೀತ ಬೋಧನೆಗಳು ಹರಡಿ ಹೋದರೆ, ಪುನಃ ಸಾಧುಗಳಿಗೆ ವಸ್ತು ಸ್ಥಿತಿಯನ್ನು ಬೋಧಿಸುವುದಕ್ಕಾಗಿ ಸ್ವಯಂ ಪರಮಾತ್ಮನೇ ಅವತರಿಸುವನು. ಇದಲ್ಲದೆ ಭಾಗವತದೊಳಗೆ ಅವಧೂತ ಗುರುದೇವ ದತ್ತಾತ್ರೇಯನು ೨೪ ಗುರುಗಳ ಕಥೆಯಲ್ಲಿ ಹೇಳಿದಂತೆ ಅನ್ವಯ-ದಿಂದಾಗಲೀ ವ್ಯತಿರೇಕದಿಂದಾಗಲೀ ಒಂದು ರೀತಿಯಲ್ಲಿ ಯಾವುದಾದರೊಂದು ಶಿಕ್ಷಣಕ್ಕೆ ನಿಮಿತ್ತತ್ವವೆಂಬ ಗುರುತ್ವವು ಅನ್ವಯ ವ್ಯತಿರೇಕ ಲೌಕಿಕ ಪ್ರಮಾಣಗಮ್ಯ-ಗಳಾಗಿರುವ ವಿಷಯಗಳ ಮಟ್ಟಿಗೆ ಆಗಬಹುದಷ್ಟೇ! ಈಗಿನ ಭೌತಿಕ ಶೋಧಗಳಿಗೆಲ್ಲಾ ಆಯಾ ಜಡ ಭೌತಿಕಗಳೇ ಈ ರೀತಿ ಗುರುಸ್ಥಾನಗಳಾಗಬಹುದು. ಪರಂತು, ಶಬ್ದೈಕ ಗಮ್ಯ ಶಾಸ್ತ್ರಾರ್ಥಗಳಿಗೆ ಉಪದೇಶಕತ್ವ ಸ್ವರೂಪದ ಗುರುತ್ವವೇ ಬೇಕು. ತತ್ರಾಪಿ ಇತರ ಶಾಸ್ತ್ರಾರ್ಥ ಅಪರ ವಿದ್ಯೆಗಳ ಉಪದೇಶಕರಿಗಿಂತ ಬ್ರಹ್ಮ ವಿದ್ಯೋಪದೇಶಕರಾದ ಆಚಾರ್ಯರ ಮಹಿಮೆಯು ಎಲ್ಲರಿಗಿಂತಲೂ ಮಿಗಿಲಾಗಿರುವುದು. ಅತ ಏವ :-

ಅಜ್ಞಾನಾಂತರ್ಗಹನಪತಿತಾನಾತ್ಮ ವಿದ್ಯೋಪದೇಶೈಃ
ತ್ರಾತುಂ ಲೋಕಾನ್ ಭವದವಶಿಖಾತಾಪಪಾಪಚ್ಯಮಾನಾನ್ ।

ಮುಕ್ತ್ವಾ ಮೌನಂ ವಟವಿಟಪಿನೋ ಮೂಲತೋ ನಿಷ್ಪತಂತೀ
ಶಂಭೋರ್ಮೂರ್ತಿಶ್ಚರತಿ ಭುವನೇ ಶಂಕರಾಚಾರ್ಯರೂಪಾ ॥

ಎಂಬಂತೆ ಶ್ರೀ ಆಚಾರ್ಯ ಶಂಕರ ಭಗವತ್ಪೂಜ್ಯಪಾದರ ಆಚಾರ್ಯತ್ವವು ಅತುಲನೀಯವಾಗಿರುವುದು.

ಅಸ್ಮತ್ಪೀಠೇ ಸಮಾರೂಢಃ ಪರಿವ್ರಾಡುಕ್ತ ಲಕ್ಷಣಃ ।
ಅಹಮೇವೇತಿ ವಿಜ್ಞೇಯೋ "ಯಸ್ಯದೇವ" ಇತಿ ಶ್ರುತೇಃ ॥

(ಶ್ರೀಮಠಾಮ್ನಾಯಸೇತು)

ಎಂದು ಅವರ ಅಜ್ಞೆಯಂತೆ ತತ್ಪೀಠಾರೂಢರಾದ ಯತೀಶ್ವರರುಗಳ ಉಪಾಸನೆಯು ಅದೇ ಆಚಾರ್ಯರ ಮಹದುಪಾಸನೆಯಾಗಿರುವುದು. ಅಲ್ಲದೆ ಬ್ರಾಹ್ಮಣ ಸಂನ್ಯಾಸಿಗಳು "ವರ್ಣಾನಾಂ ಬ್ರಾಹ್ಮಣೋ ಗುರುಃ" "ಆಶ್ರಮಾಣಾಂ ಚ ಸಂನ್ಯಾಸೀ" ಎಂಬುದಕ್ಕನುಸಾರವಾಗಿ ಸಹಜವಾಗಿಯೇ ಗುರುತ್ವ ಉಳ್ಳವರು. ಅವರ ನಾರಾಯಣ ಸ್ವರೂಪವು ಎಲ್ಲರಿಗೂ ಎಷ್ಟೋ ಸದುಪದೇಶಗಳನ್ನೂ ಸತ್ ಶಿಕ್ಷಣ-ಗಳನ್ನೂ ದರ್ಶನ ಮಾತ್ರದಿಂದಲೂ ಕೊಡುವ ತ್ಯಾಗ ಆದರ್ಶವಾಗಿರುವುದು. ಹೀಗಿರಲು ಎಲ್ಲರ ಶ್ರೇಯಸ್ಸನ್ನು ಚಿಂತಿಸುವ ಪೀಠಾರೂಢ ಆಚಾರ್ಯರ ವಿಷಯದಲ್ಲಿ ಹೇಳಬೇಕಾದ್ದೇನು?

ಈ ರೀತಿಯಿಂದ ಎಲ್ಲಾ ತರದಲ್ಲೂ ಪ್ರಾಣಿಗಳ ಜೀವನವೆಲ್ಲಾ ಇಂಥಾ ಗುರುಸ್ಥಾನಗಳ ಪಥಪ್ರದರ್ಶನಗಳಿಂದಲೇ ಸಾಧ್ಯವಾಗುವುದು. ಅದಿಲ್ಲದೆ ಲೋಕ ವ್ಯವಹಾರವೇ ನಡೆಯಲಾರದು. ಹಿಂದಿನವರೆಲ್ಲಾ ದಡ್ಡರೆಂದೂ ಮುಂದಿನವರೆಲ್ಲಾ ಜಾಣರೆಂದೂ ದುರಹಂಕಾರ ಪಡುವ ಆಧುನಿಕರಿಗೂ ವಾಸ್ತವದಲ್ಲಿ ಸ್ವಲ್ಪ ನಿರಭಿಮಾನದಿಂದ ಆಲೋಚಿಸಿ ನೋಡಿದರೆ, ಈ ಎಲ್ಲಾ ಗುರುಸ್ಥಾನಗಳಿಂದಲೇ ಅವರ ವ್ಯವಹಾರ ನಿರ್ವಾಹವು ಆಗುವುದು ಎಂದು ತಿಳಿದು ಬರಬಹುದು. ಯಾವುದೊಂದು ವಿಷಯದಲ್ಲೂ ಆ ವಿಷಯದ ಅಜ್ಞನಿಗೆ ಅದರ ತಜ್ಞನು ಗುರುವಾಗುವನು. ಆದರೆ ರಾಗ ಪ್ರಾಪ್ತಗಳೂ ಲೌಕಿಕ ಪ್ರಮಾಣ ಗಮ್ಯಗಳೂ ಆದ ವಿಷಯಗಳಲ್ಲಿ ಅನ್ಯಥಾ ಸಿದ್ಧವಾದ ಆ ಗುರುತ್ವದ್ದೇನು ಮಹತ್ವ? ಗುರುಕೃಪೆಯಿಂದಲೇ ಗಮ್ಯಗಳಾದ ಶಬ್ದೈಕ ಗಮ್ಯ ಆಚಾರ, ವ್ಯವಹಾರ, ಪ್ರಾಯಶ್ಚಿತ್ತ – ಮೊದಲಾದ ಧರ್ಮಕರ್ಮ ಮತ್ತು ಪರಾಪರ ವಿದ್ಯೆಗಳ ವಿಷಯದಲ್ಲಿ, ತತ್ರಾಪಿ ಬ್ರಹ್ಮವಿದ್ಯೆಯ ವಿಷಯದಲ್ಲಿ ಗುರುವೇ ಅನನ್ಯಗತಿಯಾಗಿರುವನು. ಪರಮಾರ್ಥ ಸಾಧನಗಳಾದ ಶಬ್ದೈಕ ಗಮ್ಯ ಸನ್ಮಾರ್ಗ, ಸದ್ವಿದ್ಯೆಗಳ ವಿಷಯದಲ್ಲಿ ಜೀವನು ಸಹಜವಾಗಿಯೇ ರುಚಿ ಇಲ್ಲದವನೂ ವಿಮುಖನೂ ಆದ ಅಜ್ಞನಾಗಿರುವನು. ಅವನಿಗೆ ಆಗಮಗಮ್ಯ ವಿಷಯಗಳಲ್ಲಿ

ರುಚಿಯೂ ಜಿಜ್ಞಾಸೆಯೂ ಶ್ರದ್ಧೆಯೂ ತಿಳಿವಳಿಕೆಯೂ ಗುರುಸೇವೆಯಿಂದಲೇ ಜನ್ಮ ಜನ್ಮಾಂತರದಲ್ಲಾದರೂ ಪ್ರಾಪ್ತಗಳಾಗಬೇಕಾಗಿವೆ.

ಯದತ್ರ ಸೌಷ್ಠವಂ ಕಿಂಚಿತ್ ತದ್ಗುರೋರೇವ ಮೇ ನ ಹಿ ।
ಯದತ್ರಾಸೌಷ್ಠವಂ ಕಿಂಚಿತ್ ತನ್ಮಮೈವ ಗುರೋರ್ನಹಿ ॥

ಎಂದು ಮಧುಸೂದನ ಸರಸ್ವತಿಯವರು ಗ್ರಂಥಾಂತರದಲ್ಲಿ ಕೊಟ್ಟ ಒಂದು ಶ್ಲೋಕದಲ್ಲಿ ಈ ವಿಷಯವು ಸ್ಪಷ್ಟವಾಗುವುದು. ಅವಿದ್ಯೋಪಾಧಿಯು ಜೀವನದಾದ ಕಾರಣ ಸಹಜವಾಗಿ ಅದರಿಂದ ಅವನಿಗೆ ಅಧರ್ಮ, ಅಜ್ಞಾನ, ಅವೈರಾಗ್ಯ ಅನೈಶ್ವರ್ಯ ಇತ್ಯಾದಿ ದುರ್ಗುಣಗಳೇ ಅವನದಾಗಿ ದೊರಕುವುವು. ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಮೂಲಕ ಸದ್ಗುಣಗಳೊಂದೂ ಸಹಜವಾಗಿ ಅವನದಾಗಿರದು. ಆದುದರಿಂದ ಈ ಜೀವನ ಕೃತಿಯಲ್ಲಿ ಯಾವುದೊಂದು ಸೌಷ್ಠವವು ಸದ್ಗುಣಗಳಿದ್ದರೂ ಅದು ಇಹ ಜನ್ಮನಿ ಜನ್ಮಾಂತರೇ ವಾ ಗುರುಸ್ಥಾನಗಳಿಂದ ತಿದ್ದಲ್ಪಟ್ಟು ಶಿಕ್ಷಿತಗಳಾದವುಗಳೇ! ಯಾವುದೊಂದು ಅಸೌಷ್ಠವವು ದುರ್ಗುಣವು ಇದ್ದರೂ ಅದು ಜೀವನ ಉಪಾಧಿಯಲ್ಲಿ ಸಹಜತಃ ಇರುವುದೇ. ಆದಕಾರಣ ಗುರುಸ್ಥಾನದಿಂದ ಶಿಕ್ಷಿತವಾಗಬೇಕಾದ್ದಿಲ್ಲ. ಒಬ್ಬನಿಂದ ಒಂದು ದುರ್ಗುಣವನ್ನು ಕಲಿತುಕೊಂಡಂತೆ ತೋರಿದರೂ ಅದು ಜೀವೋಪಾಧಿಯಲ್ಲಿ ಸಹಜಸಿದ್ಧವಾದುದರಿಂದ ಗುರುವಿನಿಂದ ಕಲಿತು ಬಂದುಂತಾಗುವುದಿಲ್ಲ. ಆದುದರಿಂದ ಯಾವ ಪುರುಷಾರ್ಥಗಳ ಸದ್ಗುಣಗಳೇ ಆಗಲಿ, ಅವು ಜೀವನನೇ ಎಂದು ಮೇಲಿನ ಶ್ಲೋಕದ ವ್ಯಾಪಕಾರ್ಥವು.

ನಾರದನು ತಾನು ಪೂರ್ವಜನ್ಮದಲ್ಲಿ ಒಬ್ಬ ಶೂದ್ರ ಬಾಲಕನಾಗಿದ್ದು ಒಂದು ವರ್ಷ ಚಾತುರ್ಮಾಸ್ಯದಲ್ಲಿ ತನ್ನ ಗ್ರಾಮದೊಳಗೆ ಸ್ಥಿತರಾದ ಯೋಗಿಗಳ ಸೇವಾ ಶುಶ್ರೂಷೆ ಮಾಡುತ್ತಾ ಅವರಿಂದ ಅನುಶಾಸಿತವಾದ ನಿಯಮನಿಷ್ಠೆ, ಪ್ರಸಾದ ನಿರ್ಮಾಲ್ಯಸೇವನೆ, ಉಪದೇಶ, ಹರಿಕಥಾಶ್ರವಣ ಮೊದಲಾದ ಆಚಾರ್ಯೋಪಾಸನೆಯಿಂದ ಆ ಯೋಗಿಗಳಾದ ಆಚಾರ್ಯರ ಬ್ರಹ್ಮವಿದ್ಯಾ ಭಗವದ್ಭಕ್ತಿ ಮತ್ತು ಅದಕ್ಕೋಸ್ಕರ ಬೇಕಾದ ಶಾಸ್ತ್ರೋಕ್ತ ಆಚಾರ ವ್ಯವಹಾರ ಪ್ರಾಯಶ್ಚಿತ್ತ ಮೊದಲಾದ ಧರ್ಮ ಕರ್ಮಗಳಲ್ಲಿ ರುಚಿಯೂ ಭಕ್ತಿ ಶ್ರದ್ಧೆ ಅಭಿಮಾನಗಳೂ ಉಳ್ಳವನಾದೆನೆಂದು ಹೇಳಿರುವನು. ಈ ಆಚಾರ್ಯೋಪಾಸನೆಯ ಮಹಿಮೆ ಮನೋವಿಜ್ಞಾನಕ್ಕನುಸಾರವಾಗಿರುವುದೆಂದು ವಿಜ್ಞರಿಗೆ ತಾನಾಗಿ ಜ್ಞಾಪನೆಗೆ ಬರಬಹುದಾಗಿದೆ. ಯಾರು ಯಾರ ಉಪಾಸನೆಯನ್ನು ಮಾಡುವರೋ ಅವರು ಅವರ ಉಪಾಸ್ಯರ ಗುಣಗಳಲ್ಲಿ ರುಚಿಯುಳ್ಳವರಾಗುವರು ಎಂಬುದಕ್ಕೆ ಹೆಚ್ಚು ಸಂದೇಹಕಾರಣವೇನಿದೆ? ಮ್ಲೇಚ್ಛರ ರುಚಿ ಮತ್ತು ವ್ಯಸನಗಳನ್ನು ಅಭಿನಿವೇಶದಿಂದ ಹೊಂದುವುದು ಪ್ರತ್ಯಕ್ಷವಾಗಿಲ್ಲವೆ?

ಹೀಯತೇ ಹಿ ಮತಿಸ್ತಾತ ಹೀನೈಃ ಸಹ ಸಮಾಗಮಾತ್ ।
ಸಮೈಶ್ಚ ಸಮತಾಮೇತಿ ವಿಶಿಷ್ಟೈಶ್ಚ ವಿಶಿಷ್ಟತಾಮ್॥

ಆಚಾರ್ಯ ಶ್ರೀ ಶಂಕರ ಭಗವತ್ಪೂಜ್ಯಪಾದರಂಥ ಜಗದ್ಗುರುಗಳು ಉಪದೇಶಿಸಿದ ಗುಣಗಳಲ್ಲಿ ರುಚಿಯೂ ಶ್ರದ್ಧೆಯೂ ಉಂಟಾಗಬೇಕಾದರೆ ಅವರ ಸಂಪ್ರದಾಯ ಪ್ರಾಪ್ತ ಆಚಾರ್ಯೋಪಾಸನೆಯೇ ಅದಕ್ಕೆ ಆರಂಭದಿಂದ ಕೊನೆತನಕ ಆವಶ್ಯಕವಾದ ಅಖಂಡ ಸೋಪಾನವು.

"Bharatwarsha would have ceased to be Bharat several centuries ago and would never have survived the murderous sword, the religious intolerance of the successive invaders if Shri Shankara had not lived the life that he lived, and taught the lesson which he taught."

ಎಂಬುದಾಗಿ ಶ್ರೀ ಶಿವಾನಂದಬ್ರಹ್ಮಚಾರಿಯವರು ನುಡಿದುದುಯಥಾರ್ಥ. ಭಾರತವರ್ಷವನ್ನೆಲ್ಲಾ ಪುನರುದ್ಧರಿಸಿ ಅದ್ವೈತಭಾಷ್ಯ ಮಹಾಗ್ರಂಥಗಳ ರಚನೆಯನ್ನೂ ಅನೇಕ ಮಹಾಪುರುಷಾರ್ಥ ಪರಾಕ್ರಮಗಳನ್ನೂ ಬಾಲ್ಯದಿಂದ ೩೨ ವರ್ಷದೊಳಗೇ ನಡೆಸಿ ಮುಗಿಸಿದ ಮಹಾಯೋಗೇಶ್ವರ ಆಚಾರ್ಯ ಶ್ರೀ ಶಂಕರ ಭಗವತ್ಪೂಜ್ಯ ಪಾದಂಗಳವರ ವೈದಿಕ ಆದರ್ಶಗಳಲ್ಲೂ ಧರ್ಮಕರ್ಮ ಸನ್ಮಾರ್ಗಗಳಲ್ಲೂ ರುಚಿ, ಶ್ರದ್ಧೆ, ಭಕ್ತಿಗಳು ಉಂಟಾಗಿ ಹಾಗೇ ನಡೆದು ಅವನ್ನೆಲ್ಲಾಪಡೆದು ಕೃತಕೃತ್ಯನಾಗಬೇಕಾದರೆ ಆ ಜಗದ್ಗುರುವಿನ ಆಜ್ಞೆಗೆ ಅನುಸಾರವಾಗಿ ಆಚಾರ್ಯೋಪಾಸನೆಯನ್ನೇ ಮಾಡಬೇಕಾಗಿದೆ. ಅಲ್ಲವಾದರೆ ಸಂಸಾರದೊಳಗೆ ತನ್ನ ಅಜ್ಞೆಯನ್ನೂ ಸಹ ತಿಳಿಯದ ಅಜ್ಞನರನಿಗೆ, ನರನಿಂದ ನಾರಾಯಣನಾಗುವೆನೆಂಬ ಮಹತ್ವಾಕಾಂಕ್ಷೆಯು ಎಂದಿಗೂ ಮನದೊಳಗೆ ತಲೆದೋರದು. ಮೊದಲು ಹೇಳಿದಂತೆ ಸಚ್ಚಿದಾನಂದ ಪರಮಾತ್ಮನು ಎಲ್ಲಾ ಪ್ರಾಣಿಗಳಿಗೂ ಅಧಿಕಾರಾನುರೂಪ ಪುರುಷಾರ್ಥ ಪಥ ಪ್ರದರ್ಶನಕ್ಕಾಗಿ ಅವರವರ ತಾಯಿ ತಂದೆಗಳಿಂದಾರಂಭಿಸಿ ಬ್ರಹ್ಮದೇವರ ಪರ್ಯಂತ ಗುರುಸ್ಥಾನಗಳನ್ನು ಸ್ಥಾಪಿಸಿ ಸೃಷ್ಟ್ಯಾದಿಯಿಂದ ಮಾಡಿಕೊಟ್ಟ ವ್ಯವಸ್ಥೆಯಲ್ಲಿ ಅನೇಕ ಕಾರಣಗಳಿಂದ ಅವ್ಯವಸ್ಥೆಯುಂಟಾದಾಗ ಪುನಃ ಸ್ಥಾಪನೆಯನ್ನು ಮಾಡಿಬರಲು ಕೊನೆಗೆ ಕಲಿಯುಗದಲ್ಲಿ ಬೌದ್ಧಕಾಲದ ದುರ್ಬೋಧನೆಗಳಿಂದ ಅವ್ಯವಸ್ಥೆಯಾದಾಗ ಆ ಪರಮಾತ್ಮನೇ ಪುನಃ ಜಗದ್ಗುರು ಆಚಾರ್ಯ ಶ್ರೀಶಂಕರ ಭಗವತ್ಪೂಜ್ಯಪಾದರಾಗಿ ಅವತರಿಸಿ, ಪರಂಪರಾ ಪ್ರಾಪ್ತವಾದ ತತ್ತ್ವದೃಷ್ಟಿಯನ್ನೂ ಶ್ರೇಯೋಮಾರ್ಗಗಳನ್ನೂ ಸ್ಥಿರವಾಗಿ ಸ್ಪಷ್ಟಗೊಳಿಸಿ, ಹಿಂದಿನಿಂದ ನಡೆದು ಬಂದ ತಾಯಿ ತಂದೆ ಮೊದಲಾದ ರಾಜರ ವರೆಗಿನ ಎಲ್ಲಾ ಗುರುಸ್ಥಾನಗಳನ್ನೂ ಆಚಾರ್ಯ ಗುರುಸ್ಥಾನಕ್ಕೆ ಅನುಗತರಾಗುವಂತೆ ಸ್ಥಾಪಿಸಿ, ಎಲ್ಲಾ ಭಾರತೀಯ ಪ್ರಜೆಗಳಿಗೂ ಜಗತ್ತಿಗೂ ಶ್ರೇಯಃಸಾಧನಕ್ಕಾಗಿ ಆಯಾ ಶಂಕರಾ

ಚಾರ್ಯ ಪೀಠ ಪರಂಪರಾಗತರಾದ ಯತೀಶ್ವರರ ರೂಪದಲ್ಲಿ ಆಚಾರ್ಯ ಗುರುಸ್ಥಾನವನ್ನು ನಿಯಮಿಸಿ, ಆಯಾ ಆಚಾರ್ಯ ಗುರುಸ್ಥಾನದಿಂದ ಆಚಾರ ವ್ಯವಹಾರ ಪ್ರಾಯಶ್ಚಿತ್ತ ಮೊದಲಾದ ಶ್ರೇಯೋ ಮಾರ್ಗಗಳಲ್ಲಿ ಶ್ರದ್ಧಾ, ಭಕ್ತಿ, ರುಚಿಗಳನ್ನು ಹೊಂದುವವರಾಗಿಯೂ ಏಕ ಜನ್ಮದಿಂದಲೋ ಅನೇಕ ಜನ್ಮಗಳಿಂದಲೋ ಯಥಾಕ್ರಮ ಯಥಾಧಿಕಾರ ಭಗವದ್ಭಕ್ತಿಯನ್ನೂ ಬ್ರಹ್ಮ ವಿದ್ಯೆಯನ್ನೂ ಪಡೆದು ಕೃತಕೃತ್ಯರಾಗುವಂತೆ ಅನುಗ್ರಹ ಮಾಡಿದನು. ಈ ಪ್ರಕಾರ ಎಲ್ಲರ ಅನುಗ್ರಹ ಪ್ರಸಂಗದಲ್ಲಿ ಆ ಪರಮಾತ್ಮನ ಕೃಪಾಪಾತ್ರವಾದ 'ಹವ್ಯಕ ಬ್ರಾಹ್ಮಣ ಸಮಾಜ'ವು ಗೋಕರ್ಣದ ರಘೂತ್ತಮ ಮಠದಲ್ಲಿ ಸ್ಥಾಪಿತರಾದ ಮಠಪರಂಪರೆಯ ಬಿರುದಾವಲೀಭೂಷಿತರಾದ ಶ್ರೀವಿದ್ಯಾನಂದಾಚಾರ್ಯರು ಮೊದಲಾಗಿ ಬಂದಿರುವ ಸಾಂಪ್ರತ ಶ್ರೀರಾಮಚಂದ್ರಾಪುರ ಮಠದ ಗುರುಪರಂಪರೆಯೆಂದು ಪ್ರಸಿದ್ಧವಾಗಿರುವ ಗೋಕರ್ಣ ಮಂಡಲಾಚಾರ್ಯ ಪರಂಪರೆಯೇ ಅದಕ್ಕೆ ಆಚಾರ್ಯ ಗುರುಸ್ಥಾನ ವಾಗಿರುವುದೆಂದು ನಿಯಮಿಸಿ ಭಗವತ್ಪೂಜ್ಯಪಾದರಿಂದ ಅನುಗೃಹೀತವಾಯಿತು. ಅಂದಿನಿಂದ ಆ ಸಮಾಜದೊಳಗಿನ ತಾಯಿ ತಂದೆ ಅಧ್ಯಾಪಕ ಗುರು ಮೊದಲಾದ ಇತರ ಗುರುಸ್ಥಾನಗಳೆಲ್ಲಾ ಆಚಾರ್ಯ ಸ್ಥಾನಕ್ಕೆ ಅನುಗತವಾಗಿನಡೆದು, ಆ ಸಮಾಜವು ಈ ಆಚಾರ್ಯ ಗುರುಸ್ಥಾನದಿಂದ ಆಚಾರ ವ್ಯವಹಾರಪ್ರಾಯಶ್ಚಿತ್ತ ಮೊದಲಾದ ಶ್ರೇಯೋಮಾರ್ಗಗಳಲ್ಲಿ ಅನುಶಾಸಿತವಾಗಿ ಆಚಾರ್ಯೋಪಾಸನೆಯಿಂದ ಶ್ರದ್ಧಾಭಕ್ತಿರುಚಿಗಳನ್ನು ಹೊಂದಿ ಭಗವದ್ಭಕ್ತಿ ಬ್ರಹ್ಮವಿದ್ಯೆಗಳನ್ನು ಯಥಾಕ್ರಮ ಯಥಾಧಿಕಾರ ಪಡೆದು ಕೃತಕೃತ್ಯರಾಗುವ, ಹವ್ಯಕ ಬ್ರಾಹ್ಮಣ ಸಮಾಜದ ಆಚಾರ್ಯ ಗುರುಪರಂಪರೆಯೊಡನೆ ಆ ಸಮಾಜಕ್ಕಿರುವ ಗುರು, ಶಿಷ್ಯ ಸಂಬಂಧದ – ಇತರ ಸಮಾಜದೊಳಗಿನ ಗುರುಪರಂಪರಾಗತ ಸ್ಥಾನಗಳಿಂದಲೂ ಅನುಸರಣೀಯವಾದ – ಮಹತ್ತ್ವವನ್ನು ಶಾಸ್ತ್ರೋಕ್ತ ಸ್ವರೂಪದಲ್ಲಿ ಇಲ್ಲಿ ಲಕ್ಷ್ಯೈಕ್ಷೆ ತರಲಾಗಿರುವುದು.

ಈ ಪ್ರಕಾರ ಭವತ್ಪೂಜ್ಯಪಾದರಂಥ ಜಗದ್ಗುರು ಆಚಾರ್ಯರು ಅನುಗ್ರಹಿಸಿದ ಪೀಠಾಭಿಮಾನವೂ ಆಚಾರ್ಯೋಪಾಸನೆಯೂ ಅದರಿಂದಾದ ಭಕ್ತಿ ಶ್ರದ್ಧಾ ರುಚಿಗಳೂ ಲೋಕಯಾತ್ರೆಗಾಗಿ ಯಾವ ವ್ಯವಸಾಯದಲ್ಲಿರುವಾಗಲೂ ಸದಾ ಶ್ರೇಯೋಮಾರ್ಗದ ಸ್ಮೃತಿಕೊಟ್ಟು ಭಕ್ತಶಿಷ್ಯನನ್ನು ಮೇಲ್ಗಡೆಗೆ ಎತ್ತಿ ಧರಿಸುತ್ತಿರುವುದು. ಇಂಥಾ ಜನ್ಮಸಾರ್ಥಕ್ಯಗೊಳಿಸುತ್ತಿರುವ ಲಾಭವು ಆಚಾರ್ಯೋಪಾಸನೆಯಿಲ್ಲದೆ ದೊರಕುವ ಬೇರೆ ಮಾರ್ಗವೇ ಇರುವುದಿಲ್ಲ. ಇಷ್ಟಲ್ಲದೆ ಇನ್ನೂ ತಂತ್ರ, ಯೋಗ, ಧರ್ಮ ಮೊದಲಾದ ಶಾಸ್ತ್ರಗಳಲ್ಲಿ ಹೇಳಿರುವ ದೃಷ್ಟಿದೀಕ್ಷಾ ಸ್ಪರ್ಶದೀಕ್ಷಾ ಮೊದಲಾದ ಗುರುಶಿಷ್ಯ ಸಂಬಂಧದ ಮನೋವೈಜ್ಞಾನಿಕ ಮಹತ್ತ್ವಗಳನ್ನು ವಿಸ್ತಾರವಾಗಿ ಬರೆದರೆ ಸ್ವತಂತ್ರ ಒಂದು ಪುಸ್ತಕವೇ ಆಗುವುದು. ಈ ರೀತಿಯಲ್ಲಿ ಶ್ರೇಯೋಮಾರ್ಗದ ದೃಷ್ಟಿಯಿಂದ ಗುರುಶಿಷ್ಯ ಸಂಬಂಧದ ಮಹತ್ತ್ವವು ದೃಷ್ಟಾದೃಷ್ಟ ವಿಧದಲ್ಲೂ ವರ್ಣಿಸಿ ಪೂರೈಸದು.

ಸದ್ಗುರು ಭಕ್ತಿಯಿಂದ ಧೃತಿಯುಂಟಾಗುವುದೆಂದೂ ಅನೇಕ ಮಾನಸ ಶಾರೀರ ರೋಗ ನಿವೃತ್ತಿಯಾಗುವುದೆಂದೂ ಗುರುತಿರಸ್ಕಾರದಿಂದ ಮದಗರ್ವಸಹಚರಗಳಾದ ಮೋಹ ವಿಸ್ಮೃತಿಗಳುಂಟಾಗುವುದೆಂದೂ ಗುರುದ್ವೇಷದಿಂದ ಉನ್ಮಾದ, ಕುಷ್ಠ, ಅಪಸ್ಮಾರಾದಿ ರೋಗಗಳೂ ಅನೇಕ ಕುಯೋನಿಜನ್ಮಗಳೂ ದೊರಕುವುದೆಂದೂ ಸಾಹಿತ್ಯ, ರಸಶಾಸ್ತ್ರ, ಆಯುರ್ವೇದ, ಮೊದಲಾದವುಗಳಲ್ಲಿ ಹೇಳಿರುವುದನ್ನು ಈ ಪ್ರಸಂಗದಲ್ಲಿ ಮರೆಯಬಾರದು. ಮಠದ ಪರಂಪರೆಯ ಇತಿಹಾಸದಲ್ಲೂ ಇಂಥಾ ಘಟನೆಗಳು ಕಾಣಸಿಗುವವು ಎಂದಿಷ್ಟೇ ಈಗ ಇಲ್ಲಿ ಸಂಕೇತಕ್ಕಾಗಿ ಸಾಕು.

ಪರಮಾರ್ಥಶ್ರೇಯೋ ಮಾರ್ಗದಲ್ಲಿ ಭಕ್ತಿಶ್ರದ್ಧಾ ರುಚಿಯುಂಟಾಗುವುದಕ್ಕೂ ಭಗವದ್ಭಕ್ತಿಯುಂಟಾಗುವುದಕ್ಕೂ ಆಚಾರ್ಯೋಪಾಸನೆಯು ಅತ್ಯಾವಶ್ಯಕವೆಂಬುದನ್ನು ಮೇಲೆ ಬರೆದಾಗಿದೆ. ಅಲ್ಲದೆ ಅರ್ಥಕಾಮ ಸಿದ್ಧಿಗೂ ಆಚಾರ್ಯೋಪಾಸನೆಯು ಅನಿವಾರ್ಯವೆಂಬ ಅಂಶವನ್ನು ಗಮನದಲ್ಲಿಡಬೇಕಾಗಿದೆ. ತದನುಸಾರವಾಗಿಯೇ ಗುರು ಸೇವೆಯು ಭುಕ್ತಿ, ಮುಕ್ತಿ, ಫಲಪ್ರದವೆಂದು ವಿಧಿಸಲ್ಪಟ್ಟಿದೆ—

ಗುರುಮೂಲಾಃ ಕ್ರಿಯಾಃ ಸರ್ವಾಃ ಭುಕ್ತಿಮುಕ್ತಿಫಲಪ್ರದಾಃ ।
ತಸ್ಮಾತ್ಸೇವ್ಯೋ ಗುರುರ್ನಿತ್ಯಂ ಮುಕ್ತ್ಯರ್ಥಂ ಸುಸಮಾಹಿತೈಃ ॥

(ವೈದ್ಯನಾಥೀಯೇ ವ್ಯಾಸಃ)

ಗುರು ಮಹಿಮೆಯನ್ನು ಎಷ್ಟು ವರ್ಣಿಸುವುದು? "ಆಜ್ಞಾ ಗುರೂಣಾಂ ಹ್ಯವಿಚಾರಣೀಯಾ" ಗುರುಗಳ ಆಜ್ಞೆಯನ್ನು ಪ್ರಶ್ನೆವಿಲ್ಲದೆ 'ತಥಾಸ್ತು' ಎಂದು ಅನುಷ್ಠಿಸಬೇಕು. ವ್ರತ ನೇಮ ಧರ್ಮ ಕರ್ಮಗಳಿಗೆ ವಿರುದ್ಧವಾಗಿ ಗುರುವಿನ ಆಜ್ಞೆಯಿಂದ ಏನಾದರೂ ಮಾಡಬೇಕಾಗಿ ಬಂದರೆ, ಅದರಿಂದ ವ್ರತನಿಯಮ ಭಂಗವಾಗದೆಂದು ಧರ್ಮಶಾಸ್ತ್ರವು ಅವ್ರತಘ್ನಗಳಲ್ಲಿ ಗುರು ಆಜ್ಞೆಯನ್ನು ಎಣಿಸುತ್ತದೆ. ಗುರುಸ್ವರೂಪವು ಮೂಲದಲ್ಲಿ ಸರ್ವಜ್ಞ ಪರಮಾತ್ಮನದೇ ಆಗಿದೆಯೆಂದು ನಾವು ಹಿಂದೆ ಆಲೋಚಿಸಿರುವೆವು. ಆದುದರಿಂದ ಸರ್ವಸಮರ್ಥ ಆ ಗುರುಸ್ವರೂಪದ ಮಹಿಮೆಯಲ್ಲಿ ಎಳ್ಳಷ್ಟೂ ಅತಿಶಯೋಕ್ತಿ ಇರುವುದಿಲ್ಲ.

'ಭೂತಾರ್ಥವ್ಯಾಹೃತಿಃ ಸಾ ಹಿ ನ ಸ್ತುತಿಃ ಪರಮೇಷ್ಠಿನಃ।'

ಹಾಗಾದರೆ ಗುರುಸ್ಥಾನದಲ್ಲಿದ್ದು ಗುರುತ್ವ ಮಾಡುವವರು ಏನು ಮಾಡಿದರೂ ಸರಿಯೇ? ಮೂಲದ ನಿರಂಕುಶ ಗುರುಮಹಿಮೆಯ ದುರುಪಯೋಗವನ್ನು ಸ್ಥಾನಾಪನ್ನರು ಮಾಡಿದರೂ ಅದು ಹಾಗೇನೇ ಒಪ್ಪಬೇಕಾದ್ದೊ? ಎಂಬ ಪ್ರಶ್ನೆ ಸಹಜವಾಗಿ ಉತ್ಪನ್ನವಾಗುವುದು. ವಿಶೇಷವಾಗಿ ವ್ಯಕ್ತಿಸ್ವಾತಂತ್ರ್ಯವು ಮಿತಿಮೀರಿದ ಈ ಕಾಲ

ದಲ್ಲಿ ಪರಮಾರ್ಥಕ್ಕಿಂತಲೂ ಇಂಥ ಪ್ರಶ್ನೆಗಳಲ್ಲೇ ನಮ್ಮೆಲ್ಲರ ಬುದ್ಧಿಯು ನಿಪುಣವಾಗಿದೆ. ಯದ್ಯಪಿ—

ಮಂತ್ರೇ ತೀರ್ಥೇ ದ್ವಿಜೇ ದೈವೇ ದೈವಜ್ಞೇ ಭೇಷಜೇ ಗುರೌ ।
ಯಾದೃಶೀ ಭಾವನಾ ಯತ್ರ ಸಿದ್ಧಿರ್ಭವತಿ ತಾದೃಶೀ ॥

ಫಲಸಿದ್ಧಿಗೆ ಗುರುಮಹಿಮೆಯ ಭಾವನೆಯೇ ಸಾಮಗ್ರೀಘಟಕವಾಗಿದೆಯಲ್ಲದೆ ಗುರುಸ್ಥಾನಾಪನ್ನರ ವಸ್ತುಸತ್ ಮಹಿಮೆಯೋ ಗುಣಗಳೋ ಕಾರಣವಲ್ಲವೆಂದು ಹೇಳಿದೆ. ಏಕಲವ್ಯನಿಗೆ ಮೃಣ್ಮಯ ದ್ರೋಣಾಚಾರ್ಯರಿಂದ ಸಿದ್ಧಿಯಾದುದು ಗುರುಮಹಿಮೆಯ ಭಾವನೆಯಿಂದಲ್ಲದೆ ಆ ಮಣ್ಣಿನ ಗುರುಮೂರ್ತಿಯಲ್ಲಿ ಮಹಿಮೆಯಾಗಲೀ ವಸ್ತುಸತ್ ಗುಣಗಳಾಗಲೀ ಏನು ? ಸ್ಥಾನಾಪನ್ನರು ಬೇಕಾದರೆ ಮಹಿಮೆಯನ್ನೂ ಗುಣಗಳನ್ನೂ ಸಂಪಾದಿಸಿಕೊಳ್ಳಲಿ ! ಅದಿಲ್ಲದೆಯೂ ಉಪಾಸಕನಿಗೆ ಉಪಾಸನೆ ಸಫಲವಾಗಬಹುದಾದ ಕಾರಣ, ಉಪಾಸಕನಿಗೆ ಅದರಿಂದೇನು ? ಅತಃ ಸ್ತ್ರೀಯರಿಗೆ ವಿಧಿವತ್ ಪಾಣಿಗೃಹೀತ ಪತಿಯೂ ಉಪಾಸಕನಿಗೆ ವಿಧಿವತ್ ಪ್ರತಿಷ್ಠಿತವಾದ ಮೂರ್ತಿಯೂ ಧರ್ಮಶಾಸ್ತ್ರದಲ್ಲಿ ಅವ್ಯವಹಾರ ಕಾರಣವಾಗಿ ಹೇಳಿದ ಪತಿಯ ಪಾತಿತ್ಯವೂ ಅಥವಾ ಮೂರ್ತಿಯ ಖಂಡಿತ, ಸ್ಫುಟಿತ ಇತ್ಯಾದಿ ಕಾರಣಗಳೂ ಅಲ್ಲದೆ ಬೇರೆ ಯಾವ ಕುಂದುಕೊರತೆ ಇದ್ದರೂ ಕಾರಣವಿಲ್ಲದಾಗ ಮಾಡಿದ ಆಚಾರ್ಯೋಪಾಸನೆಯೂ ಉಪಾಸಕನಿಗೆ ಸಿದ್ಧಿದಾಯಕವೇ ಆಗಿರುವುದು. ಅಂಥವರ ಪ್ರತ್ಯಕ್ಷ ಆಚರಣೆಗಳಲ್ಲಿ ಬೇಕಾದರೆ "ಯಾನ್ಯಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ ನೋ ಇತರಾಣಿ" ಎಂಬಷ್ಟೇ ಅನುಕರಣೀಯವಾಗಬಹುದಷ್ಟೇ ! ತಥಾಪಿ ಸ್ವಯಂ ತಮ್ಮ ಪುರುಷಾರ್ಥಗಳಲ್ಲಿ ಸಂತೋಷದಿಂದ ಸಮಾಹಿತರಾಗಿದ್ದು ಶಿಷ್ಯರ ಸಂಶಯುಚ್ಛೇದನ ಮತ್ತು ಹಿತಾಥಾನಾರ್ಥ ದರ್ಶನವನ್ನು ಮಾಡುತ್ತಿರುವುದಕ್ಕೂ ತದರ್ಥವಾಗಿ ವಿದಗ್ಧ ವ್ಯವಹಾರವನ್ನು ನಡೆಸುತ್ತಿರುವುದಕ್ಕೂ ಗುರುಸ್ಥಾನಾಪನ್ನರನ್ನು ತಮ್ಮ ತಮ್ಮ ಗುರುಸ್ಥಾನದ ತರಗತಿಗನುಸಾರವಾಗಿ ಕರ್ತವ್ಯ ನಿರ್ದೇಶ ಮಾಡುತ್ತಿರುವ ಧರ್ಮಶಾಸ್ತ್ರವೂ ಶ್ರೀ ಭಗವತ್ಪೂಜ್ಯಪಾದರು ಗುರುಸ್ಥಾನಾಪನ್ನರಿಗೆ ಮಾಡಿರುವ ಅನುಶಾಸನಗಳೂ ಉತ್ತರದಾಯಿತ್ವಗಳೂ ಅವರ ಕರ್ತವ್ಯಗಳನ್ನು ನಿರ್ಧರಿಸುತ್ತಲೇ ಇವೆ.

ಈ ಪ್ರಕಾರ ತಾಯಿಯಿಂದಾರಂಭಿಸಿ ಎಲ್ಲಾ ಗುರುಸ್ಥಾನಗಳ ಗುರು ಶಿಷ್ಯ ಸಂಬಂಧದ ಮಹತ್ತ್ವವನ್ನು ಆಲೋಚಿಸಲಾಯಿತು. ತಾಯಿ ತಂದೆ ಮೊದಲಾದ ಹಿರಿಯರು, ಅಧ್ಯಾಪಕ ಗುರು (ಸ್ತ್ರೀಯರಿಗೆ ಪತಿ ಮತ್ತು ಪತಿಯ ಹಿರಿಯರು) ಧಾರ್ಮಿಕ ರಾಜ, ಆಚಾರ್ಯ, ಋಷಿ – ಮೊದಲಾಗಿ ಬ್ರಹ್ಮದೇವರ ವರೆಗಿನ ಗುರುಸ್ಥಾನವು ಶ್ರೇಷ್ಠವಾದುದು.

“ಮಂತ್ರವ್ಯಾಖ್ಯಾಕೃದಾಚಾರ್ಯಃ” “ಆಚಾರ್ಯ ಆಚಾರಂ ಗ್ರಾಹಯತ್ಯಾಚಿನೋತ್ಯರ್ಥಾನಾಚಿನೋತಿ ಬುದ್ಧಿಮಿತಿ ವಾ”

ಆಚಿನೋತಿ ಚ ಶಾಸ್ತ್ರಾರ್ಥಂ ಆಚಾರೇ ಸ್ಥಾಪಯತ್ಯಪಿ |
ಸ್ವಯಮಾಚರತೇ ಯಸ್ಮಾತ್ ತಮಾಚಾರ್ಯಂ ಪ್ರಚಕ್ಷತೇ ||

ಇತ್ಯಾದಿ ವ್ಯುತ್ಪತ್ತಿಗನುಸಾರವಾಗಿ ಪರಂಪರಾ ಪ್ರಾಪ್ತವಾದ ವೇದಶಾಸ್ತ್ರಾರ್ಥಗಳ ತಾತ್ಪರ್ಯವನ್ನು ನಿರ್ಣಯಿಸಿ ಆಚರಣೆಯಲ್ಲಿ ಸ್ಥಿರಪಡಿಸಿದ ಆಚಾರ್ಯರಿಗೆ ಅನುಗತರಾಗಿಯೇ ರಾಜರ ತನಕ ಗುರುಸ್ಥಾನಗಳು ತಮ್ಮ ತಮ್ಮ ಕಾರ್ಯಗಳಲ್ಲಿ ನಡೆದುಕೊಳ್ಳುವುದು ಸಮಾಜಕ್ಕೆ ಹಿತಕರವಾಗುವುದು. ಆ ನಿರ್ಣಯಗಳೇ ಎಲ್ಲರಿಗೂ ಉಪಜೀವ್ಯಗಳಾಗಿರುವುವು. ಇಲ್ಲವಾದರೆ ಎಲ್ಲರೂ ಶ್ರೇಯೋಮಾರ್ಗಗಳಿಂದ ಚ್ಯುತರಾಗುವರು. ಆದುದರಿಂದ ಆಚಾರ್ಯ ಗುರುಸ್ಥಾನವು ಈ ಇತರ ಗುರುಸ್ಥಾನಗಳಿಗೆಲ್ಲಾ ಪಥಪ್ರದರ್ಶಕವಾಗಿ ಅನುಸರಣೀಯವೂ ಶ್ರೇಷ್ಠವೂ ಆಗಿರುವುದು.

ಧರ್ಮೋ ಮೂಲಂ ಮನುಷ್ಯಾಣಾಂ ಸ ಚಾಚಾರ್ಯಾವಲಂಬನಃ |
ತಸ್ಮಾದಾಚಾರ್ಯಸುಮಣೇಃ ಶಾಸನಂ ಸರ್ವತೋಽಧಿಕಮ್ ||

ಅಸ್ಮತ್ ಪೀಠೇ ಸಮಾರೂಢಃ ಪರಿವ್ರಾಡುಕ್ತಲಕ್ಷಣಃ ।
ಅಹಮೇವೇತಿ ವಿಜ್ಞೇಯಃ 'ಯಸ್ಯದೇವ' ಇತಿ ಶ್ರುತೇಃ ॥

ಅನುಬಂಧ - ೪

ಸ್ತುತಿಗಳು

೧ ಸಂಸ್ಕೃತ

೨ ಕನ್ನಡ

೧. ಶ್ರೀ ರಾಘವೇಂದ್ರಭಾರತೀಗುರುವರ ಸಂಕ್ಷಿಪ್ತಚರಿತ್ರಮ್

ಭಜಕಾನಾಂ ಕಲ್ಪತರುರ್ಭಾರತೀ ಪೀಠಮಂಡನಃ ।
ಭಜತಾಂ ಕಾಮಧೇನುಃ ಶ್ರೀ ರಾಘವೇಂದ್ರೋ ವಿರಾಜತೇ ॥ ೧

ಗೋಕರ್ಣ ಮಂಡಲೇ ಪುಣ್ಯೇ ಶಂಕರಾಚಾರ್ಯ ನಿರ್ಮಿತೇ ।
ಗುರುಪೀಠೇ ಸುವಿಖ್ಯಾತೋ ರಾಘವೇಂದ್ರೋ ವಿರಾಜತೇ ॥ ೨

ಆಚಾರ್ಯೈಃ ಶಂಕರೈರ್ದತ್ತಾನ್ ಪೂಜ್ಯರಾಮಾದಿವಿಗ್ರಹಾನ್ ।
ಚಂದ್ರಮೌಲಿಂ ಚ ಸಂಪೂಜ್ಯ ರಾಘವೇಂದ್ರೋ ವಿರಾಜತೇ ॥ ೩

ರಾಮಚಂದ್ರಯತೇಃ ಶಿಷ್ಯೋ ರಾಮಚಂದ್ರಪದಾರ್ಚಕಃ ।
ರಾಮಚಂದ್ರಪುರಸ್ಥೋಽಯಂ ರಾಘವೇಂದ್ರೋ ವಿರಾಜತೇ ॥ ೪

ಪಿತಾ ಗಣಪತಿರ್ಯಸ್ಯ ಮಾತಾ ಮೂಕಾಂಬಿಕಾ ಸತೀ ।
ವಸಿಷ್ಠಗೋತ್ರಸಂಜಾತೋ ರಾಘವೇಂದ್ರೋ ವಿರಾಜತೇ ॥ ೫

ಸದ್ವಿಪ್ರವಂಶ ಸಂಭೂತೋ ವೇದವೇದಾಂಗಪಾರಗಃ ।
ಶಿಷ್ಯಮುಖ್ಯೈಸ್ಸಮಾಹೂತೋ ರಾಘವೇಂದ್ರೋ ವಿರಾಜತೇ ॥ ೬

ಷಡ್ವರ್ಷಕಾಲಪರ್ಯಂತಾ ಕಾಶ್ಯಾಂ ಸ್ಥಿತ್ವಾ ಜಗದ್ಗುರುಃ ।
ಅಧೀತ ಶಾಸ್ತ್ರನಿಚಯೋ ರಾಘವೇಂದ್ರೋ ವಿರಾಜತೇ ॥ ೭

ಸಂಸ್ಥಾಪ್ಯ ಸ್ವಾಶ್ರಯೇ ಚೈತಾಂ ಪಾಠಶಾಲಾಂ ಮಹಾಮತಿಃ ।
ಇತರಾಶ್ಚಾಪಿ ಸಂಪೋಷ್ಯ ರಾಘವೇಂದ್ರೋ ವಿರಾಜತೇ ॥ ೮

ತತ್ರ ತತ್ರ ಹಿ ನಿರ್ಮಾಪ್ಯ ದೇವಾಗಾರಾಣಿ ಸನ್ಮತಿಃ
ದೇವಮೂರ್ತಿಃ ಪ್ರತಿಷ್ಠಾಪ್ಯ ರಾಘವೇಂದ್ರೋ ವಿರಾಜತೇ ॥ ೯

ಸಾಹ್ಯೇನ ಸರ್ವಶಿಷ್ಯಾಣಾಂ ಜೀರ್ಣಾನ್ ಸ್ವೀಯಾನ್ ಮಠಾನ್ ಗುರುಃ ।
ನೂತನತ್ವೇನ ನಿರ್ಮಾಪ್ಯ ರಾಘವೇಂದ್ರೋ ವಿರಾಜತೇ ॥ ೧೦

ಪ್ರಾಂತೇ ತು ಮಂಗಳೂರಾಖ್ಯೇ ರಾಮಚಂದ್ರಾಭಿಧಂ ಶುಭಮ್ ।
ಸಂಸ್ಥಾಪ್ಯ ನೂತನಮಠಂ ರಾಘವೇಂದ್ರೋ ವಿರಾಜತೇ ॥ ೧೧

ಮಠೀಯಂ ಕ್ರಮುಕೋದ್ಯಾನಂ ವ್ರೀಹಿಕ್ಷೇತ್ರಂ ಪುರಾತನಮ್
ಸೂತ್ನಯತ್ನೇನ ಸಂಪೋಷ್ಯ ರಾಘವೇಂದ್ರೋ ವಿರಾಜತೇ ॥ ೧೨

ಸಿಖಿಲಾನ್ ಹವ್ಯಕಾನ್ ಧೀಮಾನ್ ಮೇಲಯಿತ್ವಾಧಿವೇಶನೇ ।
ಸಂವರ್ಧ್ಯ ಚೈಕತಾಂ ತೇಷು ರಾಘವೇಂದ್ರೋ ವಿರಾಜತೇ ॥ ೧೩

ಶಾಸ್ತ್ರ ಸಿದ್ಧಾಂತ ನಿರ್ಣೀತಂ ಪಂಚಾಂಗಂ ಧಾರ್ಮಿಕಂ ಶುಭಮ್
ಪ್ರಕಾಶ್ಯ ಸವಿತೇವೋರ್ವ್ಯಾಂ ರಾಘವೇಂದ್ರೋ ವಿರಾಜತೆ ॥ ೧೪

ಲೌಕಿಕೀನಾಂ ಹಿ ವಿದ್ಯಾನಾಂ ಸಂಸ್ಥಾನಾಂ ಚ ಪ್ರವರ್ಧನೇ ।
ಭೂರಿಸ್ವರ್ಣಾಕ್ಷತಾನ್ ದತ್ವಾ ರಾಘವೇಂದ್ರೋ ವಿರಾಜತೇ ॥ ೧೫

ವೇದಶಾಸ್ತ್ರ ಪುರಾಣಾನಾಂ ಪುಸ್ತಕಾನಾಂ ಪ್ರಕಾಶನೇ ।
ಪ್ರದಾಯ ಪೂರ್ಣಂ ಪ್ರೋತ್ಸಾಹಂ ರಾಘವೇಂದ್ರೋ ವಿರಾಜತೇ ॥ ೧೬

ಕೃತ್ವಾ ಸಂಚರಣಂ ಸ್ವೀಯೇ ವಿಶಾಲೇ ಶಿಷ್ಯಮಂಡಲೇ ।
ಸಂಬೋಧಯನ್ ಧರ್ಮಮಾರ್ಗಂ ರಾಘವೇಂದ್ರೋ ವಿರಾಜತೇ ॥ ೧೭

ಲೋಕೋತ್ತರೇಣ ದಿವ್ಯೇನ ಮಹಿಮ್ನಾ ಸ್ವೇನ ಭೂಯಸಾ ।
ಅನುಗೃಹ್ಣನ್ ಮಹಾತೇಜಾಃ ರಾಘವೇಂದ್ರೋ ವಿರಾಜತೇ ॥ ೧೮

ರಾಮಚಂದ್ರಮಠೇ ಪುಣ್ಯೇ ಸ್ವೇಷ್ಟದೇವಂ ಸಮರ್ಚಯನ್ ।
ರಮಮಾಣಃ ಸ್ವಾತ್ಮ ಬೋಧೇ ರಾಘವೇಂದ್ರೋ ವಿರಾಜತೇ ॥ ೧೯

ಪಠನಂ ಸ್ತವನಸ್ಯಾಸ್ಯ ರಾಘವೇಂದ್ರ ಮಹಾಯತೇಃ ।
ಸರ್ವಸಂಪತ್ಕರಂ ಕಷ್ಟನಾಶಕಂ ಮೋಕ್ಷದಾಯಕಮ್ ॥ ೨೦

ಅಡಕೋಳೀತ್ಯುಪಾಹ್ವೇನ ಮೂರೂರು ಗ್ರಾಮವಾಸಿನಾ ।
ವಿದುಷಾ ರಾಮಕೃಷ್ಣೇನ ರಚಿತಾ ಸ್ತೋತ್ರಮಾಲಿಕಾ ॥ ೨೧

— ವಿದ್ವಾನ್ ರಾಮಕೃಷ್ಣ, ಅಡ್ಕೋಳಿ, ಮೂರೂರು

೨. ಶ್ರೀ ರಾಘವೇಂದ್ರ ನತಿಃ

ವೇದವೇದಾಂಗ ವೇದಾರ್ಥ ನ್ಯಾಯಸಾಂಖ್ಯ ವಿಶಾರದಮ್ ।
ಗೋಕರ್ಣ ಮಂಡಲಾಚಾರ್ಯಂ ರಾಘವೇಂದ್ರಂ ಭಜಾಮ್ಯಹಮ್ ॥ ೧

ಬಾಲ್ಯೇಽಧೀತ ಸಮಸ್ತವೇದ ನಿಚಯೋ ಯಃ ಪ್ರಾಪ್ತವಂಶಶ್ರಿಯಂ ।
ವೈರಾಗ್ಯೇಣ ವಿಹಾಯ ಪೂರ್ಣ ಮನಸಾ ಭೇಜೇ ತುರೀಯಂ ಪದಮ್ ॥
ಈಡ್ಯೋ ವಿಶ್ವವಿಭೂತಿವಂದಿತ ಪದೋ ವಿದ್ವಜ್ಜನೈರಾವೃತಃ ।
ಸೋಽಯಂ ಚಾತ್ರ ವಿಭಾತಿ ದೇಶಿಕವರಃ ಶ್ರೀರಾಘವೇಂದ್ರೋ ಯತಿಃ॥ ೨

ಕಾಶ್ಯಾಂ ವತ್ಸರ ಸಪ್ತಕೇನ ವಿಧಿವದ್ವೇದೋದಿತೇ ಸತ್ಪಥೇ
ವೇದಾಂತಾದಿ ಸಮಸ್ತ ಶಾಸ್ತ್ರನಿಚಯಾತ್ ಸಂಪ್ರಾಪ್ಯ ಬೋಧ ಶ್ರಿಯಮ್
ವಿದ್ವದ್ವೃಂದಸಮರ್ಚಿತೈಕಚರಣಃ ನಿರ್ಗತ್ಯ ತಸ್ಮಾತ್ ತತಃ
ಶಿಷ್ಯಾನುಗ್ರಹ ವಾಂಛಯಾ ವಿಚರತಿ ಶ್ರೀ ರಾಘವೇಂದ್ರೋ ಗುರುಃ ॥ ೩

ಶ್ರೀರಾಮಚಂದ್ರಪುರ ಭದ್ರ ಮಠಾಭ್ರಚಂದ್ರ
ಶ್ರೀ ರಾಘವೇಂದ್ರಯತಿಪುಂಗವ ದೇಶಿಕೇಂದ್ರ ॥
ಶ್ರೀ ರಾಮಚಂದ್ರ ಪದಪಂಕಜಸಕ್ತಭೃಂಗ
ನಿತ್ಯಂ ಸ್ತುಮೋಽಘಹರ ದೇವ ಭವತ್ಪದಾಬ್ಜಮ್ ॥ ೪

ಸಂಸಾರಾರ್ಣವತಾರಕಾಯ ಯತಯೇ ಭಕ್ತೇಷ್ಟಸಂದಾಯಿನೇ
ಅದ್ವೈತಾಮೃತ ವರ್ಷಿಣೇಽಮಿತವಿದೇ ಸಂದೇಹಸಂಹಾರಿಣೇ ॥
ವಿಷ್ಣುಬ್ರಹ್ಮ ಶಿವಾತ್ಮಕಾಯ ಯತಯೇ ಪಾಪೌಘ ವಿಧ್ವಂಸಿನೇ
ಶ್ರೀಮದ್ರಾಘವ ಭಾರತೀಂದ್ರ ಯತಯೇ ಭಕ್ತ್ಯಾರ್ಪಿತೇಯಂ ನತಿಃ ॥ ೫

— **ವಿದ್ವಾನ್ ರಾಮಕೃಷ್ಣ,** ಅಡ್ಕೋಳಿ, ಮೂಡೂರು

೩. ಶ್ರೀ ಗುರ್ವಷ್ಟಕಮ್

ಕೈಲಾಸಾದ್ರಿಸಿತೋನ್ನತದ್ವಿಪರದಪ್ರೋತ್ಕೀರ್ಣ ಸಿಂಹಾಸನೇ
ಭಾಸ್ವದ್ಭಾಲವಿಭೂತಿಭಸ್ಮಮುಷಿತಸ್ವರ್ಗಾಪಗಾವಿಭ್ರಮಮ್ ।
ಸಂಧ್ಯಾಂಭೋದ ನಿಭಾಂಬರದ್ಯುತಿಪರಾವೃತ್ತಾರ್ದ್ರದಂತಿತ್ವಚಂ
ಭ್ರಾಜಂತಂ ಗುರು ರಾಘವೇಂದ್ರಮಪರಂ ಶಂಭುಂ ಶುಭಾಂಗಂ ನಮಃ ॥ ೧

ಚಿನ್ಮುದ್ರಾವಿನಿವಾರಿತಾಖಿಲ ಜಗಜ್ಜೀವೇಶಭೇದಭ್ರಮಂ
ರುದ್ರಾಕ್ಷಾ ಕ್ಷರ ಲಕ್ಷಿತೌಪನಿಷದ ಶ್ರೀಮಂಡಿತೋರೋಗಲಮ್ ।
ಸ್ಮೇರಾಸ್ಯೋದಿತ ಚಂದ್ರಿಕಾಶಮಿತ ಸಂಸಾರಾಂಧಕಾರೋದಯಮ್
ನಾಮಂ ನಾಮಮಹೋ ಮಹೋಽನ್ವಹಮಹಂ ಮೋಹಾಹಿ ಮುಕ್ತ್ಯೋಽ
ಭವಮ್ ॥ ೨

ಜಗದಿದಮತಿಚಿತ್ರಂ ಕಲ್ಪಿತಂ ಚಿತ್ತಭಿತ್ತೌ
ಅವಿತಥಮಿತಿ ಮತ್ವಾ ಶೋಕಮೋಹಪ್ರಲೋಭೈಃ ।
ಕಲುಷಿತಚರಿತಂ ಮಾಂ ಬೋಧಯನ್ ಬ್ರಹ್ಮಸತ್ಯಂ
ಗುರುವರ ಇಹ ವಂದ್ಯೋ ರಾಘವೇಂದ್ರೋ ಯತೀಂದ್ರಃ ॥ ೩

ಗೃಹಸುತಧನದಾರಾಃ ಕಾರಕಾಶ್ಚಿತ್ತಶಾಂತೇಃ
ಇತಿ ವಿಕಲಮತೀನಾಮಿಂದ್ರಿಯಾರ್ಥೇ ರತಾನಾಮ್ ।
ಶ್ರುತಿವಚನಸಹಸ್ರೈರ್ಮಾರ್ಜಯನ್ ಮೋಹಲಿಪ್ತಿಂ
ಸ ಜಯತಿ ಗುರುರಾಜೋ ರಾಘವೇಂದ್ರೋ ಯತೀಂದ್ರಃ ॥ ೪

ಮಮ ಮನಸಿ ಸದಾಸ್ತಾಂ ರಕ್ತವಸ್ತ್ರಂ ಮಹಾಸ್ತ್ರಂ
ಭವಗಹನ ವಿದಾರಂ ಜ್ಞಾತವೇದಾಂತ ಸಾರಮ್ ।
ಅಚಲನಿಯಮನಿಷ್ಠಂ ವ್ಯಾಘ್ರಚರ್ಮಾಸನಸ್ಥಂ
ಮಹಿತಮಮಿತತೇಜಸ್ತೀರ್ಥಹಳ್ಳೀ ಮಠಸ್ಥಮ್ ॥ ೫

ಸದಯಮುದಯಮಾನಸ್ವರ್ಣಪದ್ಮಾಭಿರಾಮಂ
ರಘುವರ ಪದಯುಗ್ಮಂ ಶ್ರದ್ಧಯಾಭ್ಯರ್ಚಯಂತಮ್ ।
ಕರಕಲಿತಸುಮಾನಾಂ ಭಕ್ತಿ ಮುಕ್ತಾಸನಾನಾಂ
ಉಪಹೃತಿಭಿರುಪಾಸ್ಯಂ, ರಾಘವೇಂದ್ರಂ ನಮಾಮಿ ॥ ೬

ನಿಖಿಲಭುವನಗೋಪ್ತುಃ ಪಾವನಂ ಚಂದ್ರಮೌಲೇಃ
ಹೃದಯಮುಕುರಬಿಂಬೇ ಸ್ವರ್ಪಿತಂ ದಿವ್ಯರೂಪಮ್ ।
ತದಹಮಿತಿ ಮನೀಷಾಭಾವಿತಂ ಪೂಜಯಂತಂ
ಗುರುವರಮಿಹ ಭಕ್ತ್ಯಾ ವಿಸ್ಮಿತಃ ಸ್ತೌಮಿ ನಿತ್ಯಮ್ ॥ ೭

ಪ್ರಥಿತಚರಯಶಸ್ಕಂ ಹವ್ಯಕಬ್ರಹ್ಮವೃಂದಂ
ಕಲಿಮಲಬಲಜುಷ್ಟಂ ಹವ್ಯಕವ್ಯೇಷ್ವಸಂಗಮ್ ।
ಪಟುಮೃದುಭಿರಧೃಷ್ಯೈಃ ಸ್ಥಾಪಯನ್ ಯೋ ವಚೋಭಿಃ
ವಿಚರತಿ ಭುವಿ ಧರ್ಮೇ ತಂ ಸ್ತುವೇ ದೇಶಿಕೇಂದ್ರಮ್ ॥ ೮

ರಾಘವೇಂದ್ರಸ್ಯ ಚರಿತಂ ರಮಣೀಯ ಕಥಾಮೃತಮ್ ।
ಪೀತ್ವಾ ನಿರ್ವಿಷ್ಟಹೃದಯಃ ಕಷ್ಟನಾಶ್ಚರ್ಯಸಂಭೃತಃ ॥ ೯

ರಾಘವೇಂದ್ರ ಯತೀಶಂ ಶ್ರೀರಾಮಚಂದ್ರಮಠೇಶ್ವರಮ್ ।
ರಾಮಚಂದ್ರ ಪದಾಂಭೋಜ ಮಧು ಸಂಪ್ಲುತಮಾನಸಮ್ ॥ ೧೦

ಗುರ್ವಷ್ಟಕೇನ ತುಷ್ಟಾವ ಸ್ಪಷ್ಟಯನ್ ಭಕ್ತಿಮಾತ್ಮನಃ ।
ಇಷ್ಟದಃ ಕಷ್ಟಹಾಪಿ ಸ್ಯಾದಷ್ಟಮೂರ್ತಿ ಸಮೋ ಗುರುಃ ॥ ೧೧

— **ವಿದ್ವಾನ್ ಎನ್. ರಂಗನಾಥ ಶರ್ಮಾ,** ಬೆಂಗಳೂರು

೪. ಯತಿರಾಜ ಷಟ್ಕಮ್

ಶ್ರೀರಾಮಚಂದ್ರಶರವೇಗಸಮುತ್ಥನದ್ಯಾ
ಸ್ತೀರೇ ಕೃತಾಭಿರುಚಿರರ್ಚಿತ ರಾಮಮೂರ್ತಿಃ ।
ತೀವ್ರೇಣ ದೀರ್ಘತಪಸಾವಸಿ ಭಕ್ತಲೋಕಾನ್
ಶ್ರೀರಾಘವೇಂದ್ರ ಯತಿರಾಜ ನಮೋ ನಮಸ್ತೇ ॥ ೧

ಶ್ರೀಚಂದ್ರಮೌಲಿಪರಿಪೂಜನಪೂತಚಿತ್ತ
ಶ್ಚಿತ್ತಾಪಹಾರ ಪಟುಭಿರ್ವಚಸಾಂ ವಿಲಾಸೈಃ ।
ಚಿತ್ತಾಪಮೇವ ಹರಸೇ ಭಜತಾಂ ಜನಾನಾಂ
ಶ್ರೀರಾಘವೇಂದ್ರ ಯತಿರಾಜ ನಮೋ ನಮಸ್ತೇ ॥ ೨

ಶ್ರೀ ಶಂಕರಾರ್ಯ ಕರುಣಾವರುಣಾಲಯೇನ
ಪ್ರಾಗ್ ದರ್ಶಿತೌಪನಿಷದೀ ಸರಣಿಃ ಶುಭಾಯ ।
ತಾಮದ್ಯ ಬೋಧಯಸಿ ನಷ್ಟದೃಶೋಽಸ್ಮದಾದೀನ್
ಶ್ರೀರಾಘವೇಂದ್ರ ಯತಿರಾಜ ನಮೋ ನಮಸ್ತೇ ॥ ೩

ಸರ್ವಾಸು ದಿಕ್ಷು ಪರಿಕಲ್ಪ್ಯ ಮಠಾನಶೇಷಂ
ಧರ್ಮಂ ಪುನಃ ಶ್ರುತಿಮತಂ ದೃಢಯನ್ ಧರಿತ್ರ್ಯಾಮ್ ।
ವಿಭ್ರಾಜಸೇಽಧ್ವನಿ ಚಿರಂ ಮಹತಾಂ ಗುರೂಣಾಂ
ಶ್ರೀರಾಘವೇಂದ್ರ ಯತಿರಾಜ ನಮೋ ನಮಸ್ತೇ ॥ ೪

ಶಾಂತೇನ ಶಿಷ್ಟವಚಸಾ ಮನಸಾ ಸ್ಥಿರೇಣ
ಕ್ಷಾಂತೇನ ಕಾಂತವಪುಷಾ ಮಹಸೋಜ್ಜ್ವಲೇನ ।
ದಾಂತೇನ ತೇ ಸುಚರಿತೇನ ಸಮಸ್ತ್ವಮೇವ
ಶ್ರೀರಾಘವೇಂದ್ರಯತಿರಾಜ ನಮೋ ನಮಸ್ತೇ ॥ ೫

ಯತಿಪತಿ ನುತಿಮೇತಾಮನ್ವಹಂ ಯೇ ಪಠಂತಿ
ಶ್ರುತಿತತಿಭಿರುದೀತಂ ವಸ್ತು ತೇ ಸಂಸ್ತುವಂತಿ ।
ಗುರುರಿಹ ಪರದೈವಂ ಬ್ರಹ್ಮ ಖಲ್ವಕ್ಷಿಗಮ್ಯಂ
ಗತಿಮಥ ಪರಮಾಂ ತೇ ಯಾಂತಿ ಸಂತಸ್ತತೋಽಂತೇ ॥ ೬

— ವಿದ್ವಾನ್ ಎನ್. ರಂಗನಾಥಶರ್ಮಾ, ಬೆಂಗಳೂರು

೫. ಶ್ರೀ ಗುರುಸ್ತವಃ

ಶ್ರೀರಾಮಚಂದ್ರ ಚರಣಾರ್ಚನ ಸಕ್ತಚಿತ್ತಂ
ಕಾಮಾದಿ ಷಡ್ರಿಪುಕುಲಾಂಧತಮಿಸ್ರಮಿತ್ರಮ್ ।
ಸೋಮಾಂಶು ಭಾಸುರತನುಂ ದಿನಕೃತ್ಪ್ರಕಾಶಂ
ಶ್ರೀರಾಮಚಂದ್ರ ಪುರವಾಸಿಯತೀಂದ್ರಮೀಡೇ ॥ ೧

ವೈರಾಗ್ಯಮೇವ ಯತಿರೂಪಧರಂ ತಪಶ್ಚ
ರ್ಯಾಸಕ್ತಮಾತ್ಮನಿಹಿತಸ್ವಮನಸ್ಕ ಸೌಮ್ಯಮ್ ।
ನಾಸ್ತಿಕ್ಯ ಕಾನನದವಾಗ್ನಿ ವಿದೂರಪಾಪಂ
ತೇಜಸ್ವಿನಂ ಯತಿವರಂ ಶಿರಸಾ ಪ್ರಣೌಮಿ ॥ ೨

ಕಾಷಾಯದಂಡಧರ ಹವ್ಯಕವೃಂದವಂದ್ಯಂ
ದ್ವೇಷಾದಿದೋಷರಹಿತಂ ಭವರೋಗವೈದ್ಯಮ್ ।
ಶಾಂತಂ ನಿತಾಂತ ಮಭಯಂ ಭುವಿ ರಾಜಮಾನಂ
ಸ್ವಾಂತೇ ಸ್ಮರಾಮಿ ಗುರು ಪಾದಮನನ್ಯಭಕ್ತ್ಯಾ ॥ ೩

ಅದ್ವೈತ ತತ್ತ್ವಪರಿಬೋಧಕ ಮಾತ್ಮವಿದ್ಯಾ
ಬದ್ಧಾದರಂ ವಿದಿತದರ್ಶನ ಸರ್ವಧರ್ಮಮ್ ।
ಶುದ್ಧಾಂತರಂಗಮಪವರ್ಗದಮಾನಮಾಮಿ
ಶ್ರೀರಾಘವೇಂದ್ರಪದಪೂರ್ವಕಭಾರತೀಂ ತಂ ॥ ೪

ಪಾಪಾದ್ರಿ ಭೇದನವಿಧೌ ಕುಲಿಶಾಯಮಾನಂ
　　ದ್ವೇಷಾಬ್ಧಿ ಶೋಷಣವಿಧೌ ವಡವಾಯಮಾನಮ್
ಇಷ್ಟಾರ್ಥ ಸಂವಿತರಣೇ ಸುರಭೂಜಕಲ್ಪಂ
　　ಶ್ರೀರಾಘವೇಂದ್ರಯತಿರಾಜಮಹಂ ಭಜಾಮಿ ॥ ೫

ಪ್ರತಿದಿನಮಪಿ ಶಿಷ್ಯೈಃ ಸೇವ್ಯಮಾನಾಂಘ್ರಿಯುಗ್ಮಂ
　　ಶ್ರಿತಜನಪರಿತೋಷಂ ಸಾಧಯಂತಂ ನಿತಾಂತಮ್ ।
ವ್ರತನಿರತಮುದಾತ್ತಂ ಭಕ್ತವೃಂದೇಷ್ಟದಂ ತಂ
　　ಜಿತವಿಷಯಸುಖಂ ಶ್ರೀ ಶ್ರೀಯತೀಶಂ ನಮಾಮಿ ॥ ೬

ಸಂಸಾರಾಂಬು ನಿಧಿನಿಮಜ್ಜಮಾನ ಮಾನ
　　ಸಂ ಮಾಮುದ್ಧರ ಸದಯಂ ಯತೀಶ ಶಿಷ್ಯಮ್ ।
ಸಂಕೀರ್ತಿರ್ನಹಿ ಭವದೀಯ ಭಕ್ತಿವಶ್ಯಃ
　　ಸಂತ್ರಸ್ತೋ ನ ಭವತಿ ದುಃಖಬಾಧ್ಯಮಾನಃ ॥ ೭

— ವಿದ್ವಾನ್ ಎಸ್. ತಿರುಮಲೇಶ್ವರ ಭಟ್ಟ, ಶಿರೋಮಣಿ

೬. ಶ್ರೀರಾಘವೇಂದ್ರಭಾರತೀಗುರುಗೀತಾಷ್ಟಕಮ್

ರಾಮಚಂದ್ರ ಪುರ್ಯಧೀಶಮಾರ್ಯಧರ್ಮ ಪಾಲಕಂ
　　ರಾಮಚಂದ್ರ ಚಂದ್ರಮೌಲಿ ತೀರ್ಥಸೇವನಾಮಲಮ್ ।
ರಾಮಚಂದ್ರ ಭಾರತೀ ಗುರುಪ್ರಸಾದ ಸಂಭವಂ
　　ರಾಘವೇಂದ್ರಭಾರತೀಗುರುಂ ಸದಾ ಸ್ಮರಾಮ್ಯಹಮ್ ॥ ೧

ವಿಶ್ವಭೂತಯೇ ಕೃತಾವತಾರಮಾತ್ಮರೂಪಿಣಂ
　　ವಿಶ್ವಶಾಂತಯೇ ಯಜಂತಮೀಶ್ವರಂ ಮುನೀಶ್ವರಮ್ ।
ವಿಶ್ವಸಂಸ್ತುತಂ ದಿಗಂತ ಪೂರ್ಣಕೀರ್ತಿ ಸಂಪದಂ
　　ರಾಘವೇಂದ್ರಭಾರತೀಗುರುಂ ಸದಾ ಸ್ಮರಾಮ್ಯಹಮ್ ॥ ೨

ಬ್ರಹ್ಮಚರ್ಯ ಪಾಲನ ಪ್ರಭಾವದಿವ್ಯ ತೇಜಸಂ
　　ಬ್ರಹ್ಮಕರ್ಮ ಪಾಲನ ಪ್ರಭಾವ ಶುದ್ಧಚೇತಸಮ್ ।
ಬ್ರಹ್ಮನಿಷ್ಠಮಿಷ್ಟ ಸಿದ್ಧಿದಾಯಕಂ ದಯಾಮಯಂ
　　ರಾಘವೇಂದ್ರಭಾರತೀ ಗುರುಂ ಸದಾ ಸ್ಮರಾಮ್ಯಹಮ್ ॥ ೩

ಪೀತರಕ್ತ ಮಂಬರಂಧರಂತಮಾಶಿಖಾನಖಂ
ಪೂರ್ತಪಾದುಕಾಭಿರಾಮ ಪೂಜ್ಯಪಾದ ಪಂಕಜಮ್ ।
ಶ್ವೇತ ಭಸ್ಮಲಿಪ್ತ ಫಾಲಪಟ್ಟ ಭೂಷಿತಾನನಂ
ರಾಘವೇಂದ್ರ ಭಾರತೀಗುರುಂ ಸದಾ ನಮಾಮ್ಯಹಮ್॥ ೪

ಹಸ್ತಿದಂತ ಸಿದ್ಧಸಿಂಹಪೀಠ ಮಂಡಿತಾಸನಂ
ರತ್ನಕರ್ಣ ಕುಂಡಲೋಜ್ವಲತ್ಕಿರೀಟಧಾರಿಣಮ್ ।
ಸ್ವರ್ಣಸೂತ್ರ ಬದ್ಧಶಂಕರಾಕ್ಷ ಮಾಲಿಕಾಗಲಂ
ರಾಘವೇಂದ್ರಭಾರತೀಗುರುಂ ಸದಾ ಸ್ಮರಾಮ್ಯಹಮ್ ॥ ೫

ಆಧಿದೈವಿಕಾಧಿತಾಪ ನಾಶನಂ ತಪೋನಿಧಿಂ
ಕ್ರೋಧಕಾಮ ಲೋಭಮೋಹಗರ್ವ ಮತ್ಸರಾಂತಕಮ್ ।
ಭೂತ ಭಾವಿಕಾಲವಿಜ್ಞಮಜ್ಞತಾನಿಶಾಹರಂ
ರಾಘವೇಂದ್ರಭಾರತೀಗುರುಂ ಸದಾ ಸ್ಮರಾಮ್ಯಹಮ್ ॥ ೬

ಸರ್ವವೇದ ಪಾರಗಂ ಪುರಾಣಪಂಡಿತೇಶ್ವರಂ
ತರ್ಕಸಿಂಹಮರ್ಥಶಾಸ್ತ್ರಕೋವಿದಂ ಸುಭಾಷಿಣಮ್ ।
ಧರ್ಮಶಾಸ್ತ್ರವಿದ್ವರಂ ಸ್ವಧರ್ಮ ಕರ್ಮನಿಷ್ಠುರಂ
ರಾಘವೇಂದ್ರ ಭಾರತೀಗುರುಂ ಸದಾ ಸ್ಮರಾಮ್ಯಹಮ್ ॥ ೭

ಹವ್ಯಕವ್ಯದಾನಶೂರ ಹವ್ಯಕಾಧಿದೈವತಂ
ಶಿಷ್ಯಮಂಡಲಾಭಿವೃದ್ಧಿ ಕಾರ್ಯ ಬದ್ಧಕಂಕಣಮ್ ।
ಪುಣ್ಯಸಂಚಯಪ್ರಲಬ್ಧ ರಾಜಯೋಗವೈಭವಂ
ರಾಘವೇಂದ್ರಭಾರತೀಗುರುಂ ಸದಾ ಸ್ಮರಾಮ್ಯಹಮ್ ॥ ೮

— ಶ್ರೀ ಗೋಪಾಲ ಸೂರ್ಯನಾರಾಯಣ ಭಟ್ಟ, ಕೆಕ್ಕಾರು

೭. ಗುರುನುತಿಃ

ವೇದಸ್ಯ ಶಾಸ್ತ್ರಸ್ಯ ಸನಾತನಸ್ಯ
ಧರ್ಮಸ್ಯ ಪಂಥಾನಮಿಹ ಪ್ರತನ್ವನ್ ।
ರಕ್ಷಾಕರಃ ಪಂಡಿತಮಂಡಲಾನಾಂ
ಸಂಶೋಭತೇ ರಾಮಪದಾಬ್ಜಭಕ್ತಃ ॥ ೧

ಜೀರ್ಣಾನ್ ಮಠಾನ್ ನೂತ್ನತಯಾ ವಿರಚ್ಯ
ಛಾತ್ರಾಂಶ್ಚ ಶಾಸ್ತ್ರೇಷು ಚಿರಂ ವಿನೀಯ ॥
ವೇದಸ್ಯ ಧರ್ಮಂ ಪರಿತಃ ಪ್ರಸಾರಯನ್
ಜಗದ್ಗುರುಃ ಸಾರ್ಥಕ ನಾಮಭಾಗಯಾವ್ ॥ ೨

ಲೋಕೇ ಗುರೂಣಾಂ ವಿಷಯೇಷ್ವವಜ್ಞಾಂ
ಕೇಷಾಂಚಿದಾಲಕ್ಷ್ಯ ಕದಾಚಿದುದ್ಗತಾಮ್ ।
ತತ್ತ್ವಾರ್ಥ ದೀಪ ಪ್ರಭಯಾ ಸುದೂರಂ
ಅಪಾಸ್ಯ ನೂನಂ ಗುರುರಾಡುದೇತಿ ॥ ೩

— ಭಜಕ, ಮಂಗಳೂರು ಹೋಬಳಿ

೮. ರಾಘವೇಂದ್ರಭಾರತೀ ಗುರುಸ್ತುತಿಃ

ರಾಮಚಂದ್ರ ಪುರ್ಯಧೀಶಮಾರ್ಯಧರ್ಮಪಾಲಕಂ
ರಾಮಬಾಣ ಜಾತ ನಿಮ್ನಗಾಪ್ರತೀರವಾಸಿನಮ್ ।
ಯೋಗನಿಷ್ಠಮಂಬುಜಾಸನಾದಿಮೂರ್ತಿರೂಪಿಣಂ
ರಾಘವೇಂದ್ರಭಾರತೀಗುರೂತ್ತಮಂ ಸದಾ ಭಜೇ ॥ ೧

ರಾಮಚಂದ್ರ ಪಾದಪದ್ಮಪೂಜನೇ ಚ ತತ್ಪರಂ
ಚಂದ್ರಮೌಳಿ ದಿವ್ಯಲಿಂಗಪೂಜಕಂ ನಿರಂತರಮ್ ।
ಹವ್ಯಕ ದ್ವಿಜಾತಿವರ್ಗ ಧರ್ಮ ಮಾರ್ಗದರ್ಶಕಂ
ರಾಘವೇಂದ್ರಭಾರತೀ ಗುರೂತ್ತಮಂ ಸದಾ ಭಜೇ ॥ ೨

ಸಾಮದಾನ ಭೇದದಂಡಕೋವಿದಂ ಸುಬುದ್ಧಿದಂ
ಕಾಮಕೋಪಮೋಹಲೋಭವರ್ಜಿತಂ ಸುಪೂಜಿತಮ್ ।
ಚಾರುಚಂದ್ರ ಚಂದ್ರಿಕಾಸ್ಮಿತಾನನೇಂದುಸಂಯುತಂ
ರಾಘವೇಂದ್ರಭಾರತೀ ಗುರೂತ್ತಮಂ ಸದಾ ಭಜೇ ॥ ೩

ದಿವ್ಯಶಕ್ತಿಸಂಪದಾ ವಿರಾಜಮಾನಮದ್ವಯಂ
ಭಕ್ತವರ್ಗಪಾಲನೇ ಸದಾ ಪ್ರಯತ್ನಶಾಲಿನಮ್ ।
ಕಾಮಿತಾರ್ಥದಾಯಿನಂ ಕರಸ್ಥದಂಡಶೋಭಿನಂ
ರಾಘವೇಂದ್ರಭಾರತೀಗುರೂತ್ತಮಂ ಸದಾ ಭಜೇ ॥ ೪

ಚಾರುಭಾಲಭಾಸಮಾನ ಭಸ್ಮಪುಂಡ್ರ ಮಂಡಿತಂ
ಚಾರುಯೋಗ ವಿದ್ಯಯಾ ವಿರಾಜಮಾನ ಮಾನಸಮ್ ।
ಚಾರುಸಿಂಹ ಪೀಠ ಮಧ್ಯಶೋಭಿಕಾಯಮೀಶ್ವರಂ
ರಾಘವೇಂದ್ರಭಾರತೀ ಗುರುಂ ಸದಾ ಸ್ಮರಾಮ್ಯಹಮ್ ॥ ೫

ಭಕ್ತವರ್ಗ ಚಂಚರೀಕ ಸೇವ್ಯಪಾದ ಪಂಕಜಂ
ನಿತ್ಯತೃಪ್ತಮಿಂದಿರೇಶರೂಪಿಣಂ ತಪಸ್ವಿನಮ್ ।
ಬಂಧ ಮೋಕ್ಷಕಾರಣಂ ಭವಾಟವೀಹುತಾಶನಂ
ರಾಘವೇಂದ್ರಭಾರತೀಗುರೂತ್ತಮಂ ಸದಾ ಭಜೇ ॥ ೬

ಆದಿಶಂಕರಾರ್ಯಪೀಠ ಶೋಭಮಾನ ವಿಗ್ರಹಂ
ಆದಿಶಂಕರಾರ್ಯಕಾರ್ಯಸಾಧಕಂ ನಿರಂತರಮ್ ।
ಆದಿಶಂಕರಾರ್ಯರೂಪಮಂಧಕಾರ ನಾಶಕಂ
ರಾಘವೇಂದ್ರಭಾರತೀ ಗುರೂತ್ತಮಂ ಸದಾ ಭಜೇ ॥ ೭

ರಾಮತತ್ತ್ವ ಬೋಧಕಂ ರಸಾಂಬುವೃಷ್ಟಿವರ್ಷಕಂ
ರಾಮನಾಮತತ್ಪರಂ ರಘೂತ್ತಮಾತ್ತಚೇತಸಮ್ ।
ರೋಗತಾಪನಾಶಕಂ ಸಮಸ್ತದೇವವಂದಿತಂ
ರಾಘವೇಂದ್ರಭಾರತೀಗುರೂತ್ತಮಂ ಸದಾ ಭಜೇ ॥ ೮

ರಾಘವೇಂದ್ರಭಾರತೀಗುರೂತ್ತಮಸ್ಯ ಚಾಷ್ಟಕಂ
ಶ್ರದ್ಧಯಾ ಪಠಂತಿ ಯೇ ದಿನೇ ದಿನೇ ಪ್ರಭಾತಕೇ ।
ಶ್ರೀರಘೂತ್ತಮಸ್ಯ ಚಾಶಿಷಾ ಪ್ರಪೂರಿತಾ ಹಿ ತೇ
ರೋಗಶೋಕವರ್ಜಿತಾಃ ಭವೇಯುರಿಷ್ಟಸಂಪದಾ ॥ ೯

— ವಿದ್ವಾನ್ ಮಹಾಬಲೇಶ್ವರ ಶರ್ಮಾ,
ಹಾಳ್ತಕಟ್ಟಾ: ಸಿದ್ದಾಪುರ

೯. ಶ್ರೀ ಗುರುಸ್ತೋತ್ರಮಾಲಾ

ರಾಮಚಂದ್ರಪುರಾಧೀಶಂ ಸತ್ಯಧರ್ಮರತಂ ಗುರುಮ್ ।
ಅಧ್ಯಾತ್ಮಭಾಸ್ಕರಂ ವಂದೇ ಪರಿಪೂರ್ಣಗುಣಾರ್ಣವಮ್ ॥ ೧

ಜಯತು ಜಯತು ಪೂಜ್ಯಃ ಸರ್ವಲೋಕೇಷ್ಟದಾಯೀ
ಜಯತು ಜಯತು ಭಕ್ತೈರ್ಭಕ್ತಿಪುಷ್ಪೈಃ ಸುಸೇವ್ಯಃ ।
ಜಯತು ಜಯತು ವಿದ್ಯಾಗರ್ವಿತಾನಾಂ ನಿಯಂತಾ
ಜಯತು ಜಯತು ತತ್ತ್ವಾಲೋಕ ದೀಪ್ತಾವಿಲಾಸಃ ॥ ೨

ಭ್ರಮರಾಃ ಕುಸುಮಾಸಕ್ತಾಃ ಚಕೋರಾಃ ಚಂದ್ರಿಕಾರತಾಃ ।
ಮಯೂರಾಃ ಜಲದಾಸಕ್ತಾಃ ವಯಂ ತ್ವದ್ದರ್ಶನೇ ರತಾಃ ॥ ೩

ಧರ್ಮಪ್ರಸಾರಾಯ ಹರಿತ್ಸು ಯಾತುಃ
ಶ್ರೀರಾಘವೇಂದ್ರಸ್ಯ ಯಶೋಽಧಿಗಂತುಃ ।
ಆರಾಧಯಾಮಃ ಚರಣಾರವಿಂದೇ
ಯತ್ಸ್ಪೃಷ್ಟಶಾಲೇಯಮಭೂತ್ ಸುಪೂತಾ ॥ ೪

— ಪದ್ಯಾಣ ವೆಂಕಟೇಶ್ವರ ಭಟ್ಟ, ದ. ಕ.

೧೦. ಶ್ರೀ ರಾಘವೇಂದ್ರ ದಶಕಂ

ವಿದ್ಯಾನಾಂ ನಿಲಯಃ ಸಮಸ್ತಜಗತಾಂ ಸನ್ಮಾನಪಾತ್ರಂ ಸದಾ
ಶಾಸ್ತ್ರಾಣಾಂ ನಿಧಿರೇಷ ಸರ್ವನಿಗಮಜ್ಞಾನಾಕರಃ ಶ್ರೀಕರಃ ।
ಏತಾದೃಗ್ ಯತಿಪುಂಗವಸ್ತ್ರಿಭುವನೇ ನೋ ಜಾತು ದೃಷ್ಟಃ ಕ್ವಚಿತ್
ಆದ್ಯಃ ಶಂಕರ ಏವ ನೂನಮುದಿತಃ ಶ್ರೀ ರಾಘವೇಂದ್ರಾತ್ಮನಾ ॥ ೧

ಅದ್ಯ ಪ್ರಭೃತ್ಯವನಿವಂದ್ಯ ತವಾಸ್ಮಿ ದಾಸಃ
ಶ್ರೀರಾಘವೇಂದ್ರ ಗುರುದೇವ ಮಹೀಸುರೇಂದ್ರ ।
ಜಾತೋಽಹಮದ್ಯ ನನು ವಿಸ್ಮೃತಸರ್ವಖೇದಃ
ಸಂದರ್ಶನೇನ ಭವತೋ ಭುವನೇಡಿತಸ್ಯ ॥ ೨

ನೇತಾ ಭವಾನಖಿಲಹವ್ಯಕಮಂಡಲಸ್ಯ
ಶ್ರೋತಾ ಭವಾನಖಿಲಶಾಸ್ತ್ರಪುರಾಣರಾಶೇಃ ।
ತ್ರಾತಾ ಭವಾನಖಿಲದೀನಜನಾವಲೀನಾಂ
ಕೋ ನಾಮ ವೇತ್ತಿ ಭವತೋ ಮಹಿಮಾನಮೀಡ್ಯಮ್ ॥ ೩

ಶಾಂತ ಸ್ವರೂಪ ವರವಿಪ್ರಸರೋಜಭಾಸ್ವನ್
ಶ್ರೀ ರಾಘವೇಂದ್ರ ಭವತಃ ಕರುಣಾಪ್ರಭಾವಾತ್ ।
ಸರ್ವೇ ಸ್ವಧರ್ಮನಿರತಾಃ ಸಫಲೋದ್ಯಮಾಶ್ಚ
ನಿತ್ಯಂ ಭವೇಮ ಸುಖಿನೋ ಭವದೀಯ ಶಿಷ್ಯಾಃ ॥ ೪

ಅದ್ವೈತ ತತ್ತ್ವಸಲಿಲಾಕರಪಾರದೃಶ್ವಾ
ತ್ವಂ ವಿಶ್ವಪಾವನಯಶೋ ವದತಾಂ ವರೇಣ್ಯಃ ।
ತುಲ್ಯಂ ತ್ವಯಾ ಯತಿವರಂ ಜಗತೀತಲೇಽಸ್ಮಿನ್
ಪಶ್ಯಾಮಿ ನಾಹಮಪರಂ ಕರುಣಾಂಬುರಾಶಿಮ್ ॥ ೫

ಛಾತ್ರಾನಹೋ ಜಡಮತೀನಪಿ ಪಾಠಯಿತ್ವಾ
ವಿದ್ವಜ್ಜನಾಗ್ರಸರತಾಂ ನಯಸೇ ಮಹಾತ್ಮನ್ ।
ಕೋ ನಾಮ ವೇದ ಭವತೋ ಮಹಿಮಾನಮೇತಂ
ಲೋಕತ್ರಯಪ್ರಸೃತಭೂರಿಯಶಃ ಪ್ರಕಾಶ ॥ ೬

ಧಿಯಂ ಮದೀಯಾಂ ಗುರುರಾಘವೇಂದ್ರಃ
ಪ್ರಚೋದಯಾತ್ ಶ್ರೇಷ್ಠತಮಾಯ ಕರ್ಮಣೇ ।
ಅಪಾರ ಸಂಸಾರ ಸಮುದ್ರಸೇತುಂ
ತತ್ಪಾದ ಪಾಂಸುಂ ಶಿರಸಾ ವಹಾಮಿ ॥ ೭

ಪ್ರಶಾಂತಮೂರ್ತಿಂ ಸುವಿಶಾಲಕೀರ್ತಿಂ
ಸ್ವಶಿಷ್ಯವೃಂದಾವನ ಬದ್ಧದೀಕ್ಷಮ್ ।
ಜಗದ್ಗುರುಂ ಹವ್ಯಕ ವೃಂದನಾಥಂ
ಪ್ರಣೌಮಿ ನಿತ್ಯಂ ಪ್ರಣತಾಘಘ್ನಮ್ ॥ ೮

ಕಾರುಣ್ಯನೀರ ನಿಧಯೇ ನಿಧಯೇ ಗುಣಾನಾಂ
ಭೂದೇವ ವಂಶಗುರವೇ ಗುರವೇ ಗುರೂಣಾಮ್ ।
ಯೋಗೀಂದ್ರರಾಜಮಣಯೇ ಮಣಯೇ ಬುಧಾನಾಂ
ಶ್ರೀರಾಘವೇಂದ್ರ ಯತಯೇ ಯಮಿನೇ ನಮಸ್ತೇ ॥ ೯

ವಂದೇ ಸೋಽಹಂ ಸಕಲವಿಬುಧೈರೀಡಿತಂ ಸರ್ವಕಾಲಂ
ವೇದಾಂಭೋಧಿಂ ಸದಯ ಹೃದಯಂ ರಾಘವೇಂದ್ರಂ ಯತೀಂದ್ರಮ್
ಭೂಯೋ ಭೂಯೋ ಮಧುರ ಮಧುರಂ ಯಸ್ಯ ನಾಮಾಮೃತಂ ತೇ
ಪಾಯಂ ಪಾಯಂ ಮಮ ಹಿ ರಸನಾ ವಿಂದತೇ ನೈವ ತೃಪ್ತಿಮ್ ॥ ೧೦

(ಶತಕದಿಂದಾಯ್ದ ದಶಕ)

— ಟಿ. ನಾರಾಯಣ ಭಟ್ಟ, ಕಾಸರಗೋಡು

೧೧. ಶ್ರೀಮದ್ರಾಘವೇಂದ್ರ ಭಾರತೀ ಸ್ತೋತ್ರಂ

ನಮಸ್ತೇ ಬ್ರಹ್ಮರೂಪಾಯ ನಮಸ್ತೇ ಭಕ್ತಬಾಂಧವ ।
ನಮಸ್ತೇ ಯೋಗಿರಾಜಾಯ ಗುರುರಾಜಾಯ ತೇ ನಮಃ ॥ ೧

ನಮಸ್ತೇ ಶಾಂತ ರೂಪಾಯ ನಮಸ್ತೇ ಸತ್ಯರೂಪಿಣೇ ।
ಕೋಟಿಸೂರ್ಯ ಪ್ರಕಾಶಾಯ ಗುರುರಾಜಾಯ ತೇ ನಮಃ ॥ ೨

ನಮಸ್ತೇ ಚಿತ್ಸ್ವರೂಪಾಯ ಶಿವಾದ್ಯಖಿಲರೂಪಿಣೇ ।
ನಮಸ್ತೇ ರಾಮಭಕ್ತಾಯ ಗುರುರಾಜಾಯ ತೇ ನಮಃ ॥ ೩

ನಮಸ್ತೇ ಗುಣಪೂರ್ಣಾಯ ನಿರ್ಗುಣಾಯ ಗುಣಾತ್ಮನೇ ।
ನಮಸ್ತೇ ಲೋಕವಂದ್ಯಾಯ ಗುರುರಾಜಾಯ ತೇ ನಮಃ ॥ ೪

ನಮಸ್ತೇ ಜ್ಞಾನರೂಪಾಯ ನಮೋ ವಿಜ್ಞಾನರೂಪಿಣೇ ।
ನಮಸ್ತೇ ಯತಿವರ್ಯಾಯ ಗುರುರಾಜಾಯ ತೇ ನಮಃ ॥ ೫

ನಮಸ್ತೇ ರಾಘವೇಂದ್ರಾಯ ನಮಸ್ತೇ ಸಾಧುರೂಪಿಣೇ ।
ನಮಸ್ತೇ ಕರುಣಾಸಿಂಧೋ ಗುರುರಾಜ ನಮೋಽಸ್ತು ತೇ ॥ ೬

ತುಂಗಾತಟನಿವಾಸಾಯ ಶಿಷ್ಯರಕ್ಷಾಯ ವಂದನಮ್
ನಮಸ್ತೇ ರಾಜಯೋಗೀಂದ್ರ ಗುರುರಾಜಾಯ ವಂದನಮ್ ॥ ೭

ಶ್ಲೋಕಪುಷ್ಪಮಿದಂ ತುಭ್ಯಮರ್ಪಯಾಮಿ ಗುರೂತ್ತಮ ।
ಸ್ವೀಕೃತ್ಯ ಕೃಪಯಾ ಮಹ್ಯಂ ದೇಹಿ ಸೌಭಾಗ್ಯಮವ್ಯಯಮ್ ॥ ೮

ಶ್ಲೋಕಾಷ್ಟಕಮಿದಂ ದೇವ ತವ ಪೂಜ್ಯಪದಾಬ್ಜಯೋಃ ।
ಅರ್ಪಿತಂ ಭಕ್ತಿಭಾವೇನ ಸ್ವೀಕುರುಷ್ವ ದಯಾನಿಧೇ ॥ ೯

— ಶ್ರೀಮತಿ ಸುಬ್ಬಿ ಗಣೇಶ ಭಟ್ಟ, ಕೆಕ್ಕಾರು

೧೨. ಶ್ರೀ ಸದ್ಗುರುವಂದನಮ್

ಪೂಜ್ಯಾಯ ಸಜ್ಜನತತೇರಸುಖಾಪನೇತ್ರೇ
ಶ್ರೀರಾಮಚಂದ್ರ ಪುರಮಂದಿರ ಧರ್ಮನೇತ್ರೇ ।
ಶ್ರೀರಾಮನಾಮಮಹಿಮಾತಿಶಯಾಧಿವೇತ್ರೇ
ಸೇಯಂ ನತಿರ್ಹೃದಯತೋಽಸ್ತ್ವತಿಭಕ್ತಿಪೂರ್ಣಾ ॥ ೧

ಶ್ರೀರಾಮಚಂದ್ರಭಜಕಃ ಪ್ರಥಮೋ ಜಗತ್ಸು
ಶ್ರೀರಾಘವೇಂದ್ರಯತೀರೇಷ ದಯಾಸಮುದ್ರಃ ।
ಸರ್ವಪ್ರಜಾಕುಶಲಸಕ್ತಸುಚಿತ್ತವೃತ್ತಿಃ
ಶ್ರೀ ಸ್ವಾಮಿರಾಟ್ ಸ ಜಯತಾತ್ ಇಹ ವಿದ್ವದಗ್ರ್ಯಃ ॥ ೨

ಜಯತಿ ಸಕಲ ಪೂಜ್ಯಃ ಶ್ರೀಗುರುರ್ಹವ್ಯಕಾನಾಂ
ಜಗತಿ ಮಹಿತನಾಮಾ ರಾಘವೇಂದ್ರೋ ಯತೀಂದ್ರಃ ।
ನಿಖಿಲ ವಿಬುಧವಂದ್ಯಃ ಧರ್ಮರಕ್ಷಾ ಪ್ರವೀಣಃ
ಭುವನ ಕುಶಲಹೇತುಃ ಶಿಷ್ಯಹೃತ್ಪದ್ಮಭಾನುಃ ॥ ೩

ವೇದಾಂತೇ ತರ್ಕಶಾಸ್ತ್ರೇಽಪ್ಯತಿ ನಿಶಿತಮತಿಂ ಪಾಣಿನೀಯೇ ಸಮರ್ಥಂ
ಮೀಮಾಂಸಾಕೋವಿದಾಗ್ರ್ಯಂ ಪ್ರವಚನ ನಿಪುಣಂ ಸರ್ವವಿದ್ಯಾಪ್ರಬುದ್ಧಮ್ ।
ಸಾಕಾರಂ ಭಾಗಧೇಯಂ ಸಕಲಜನಿನುತಾಂ ಸರ್ವಲೋಕಾಭಿರಾಮಂ
ವಂದೇ ಭಕ್ತ್ಯಾಯತೀಂದ್ರಂ ತೃಷಿತ ಜನಮನಶ್ಚಾತಕಾಭ್ರಂ ಶರಣ್ಯಮ್ ॥ ೪

— ಎನ್. ಭೀಮ ಭಟ್ಟ, ಕಸ್ಮಾನ

೧. ಪದ್ಯಪಂಚಕಂ

(ದಿನಾಂಕ ೧೪–೨–೧೯೭೫ ರಂದು ಬೆಂಗಳೂರಿನ "ವಿಶ್ವಭಾರತಿ" ಬಹುಮುಖ ಯೋಜನೆಯ ವಸತಿ ನಿರ್ಮಾಣ ಸ್ಥಳಕ್ಕೆ ಶ್ರೀಮದ್ರಾಘವೇಂದ್ರ ಭಾರತೀ ಮಹಾಸ್ವಾಮಿಗಳವರನ್ನು ಸ್ವಾಗತಿಸಿ, ಶ್ರೀಮಠಕ್ಕಾಗಿ ಭವ್ಯ ನಿವೇಶನವೊಂದನ್ನು ಭಕ್ತಿ ಶ್ರದ್ಧಾಪೂರ್ವಕ ಅರ್ಪಿಸಿದ ಸಂದರ್ಭದ 'ಜ್ಞಾಪಕ ಕವಿತೆ'. ವಿವರಕ್ಕಾಗಿ ಪುಟ ೧೦೨ ನೋಡಿ)

ಶಾರ್ದೂಲ ವಿಕ್ರೀಡಿತಂ

ಶ್ರೀಮದ್ಧರ್ಮ ಸುಧಾಂಬುರಾಶಿ ಮಥನಾಮ್ನಾಯಾದ್ರಿ ಕೂರ್ಮೋಪಮ
ಶ್ರೀಮಚ್ಛಂಕರ ದೇಶಿಕೇಂದ್ರ ಗುರುವರ್ಯಾಚ್ಛಿನ್ನ ಶಿಷ್ಯಾನ್ವಯ ।
ವ್ಯೋಮಾರ್ಕೋಪಮ ಭಾರತೀಂದ್ರ ಮಹಿಮ ಶ್ರೀ ರಾಘವೇಂದ್ರಾಭಿಧ
ಸ್ವಾಮೀಂದ್ರಗ್ರ್ಯ ಜಯಾರ್ಥಮಕ್ಕೆ ಬೆಸಗೊಂಡಾ ಹೃದ್ಗತಂ ಸ್ವಾಗತಂ ॥ ೧

ಕರ್ಣಾಟಸ್ಥಿತ ಬೆಂಗಳೂರನಗರ ಶ್ರೀ ಶೋಭಿತಂ ಸತ್ಕೃತಿ
ಸ್ವರ್ಣಾಗಾರಯುತಂ ಬುಧಾಳಿವಿಹಿತಂ ದೇವಾಲಯ ಶ್ರೀಮಠಾ ।
ಕೀರ್ಣಂ ಲೇಖಕ ಬಂಧುವೃಂದ ಸುಕಲಾ ವಿದ್ವಜ್ಜನಕ್ಕಾಗರಂ
ತೂರ್ಣಂ ರಂಜಿಕೆ ವಿಶ್ವಭಾರತಿ ಸದಾಶೀರ್ವಾದದಿಂ ಶ್ರೀಗಳಾ ॥ ೨

ಮತ್ತೇಭ ವಿಕ್ರೀಡಿತಂ

ನಯದಿಂ ಪ್ರಾರ್ಥಿಸೆ ವಿಶ್ವಭಾರತಿ ಮಹೋದ್ದೇಶಾತ್ಮವಾಗಿರ್ಪ ಸಂ
ಸ್ಥೆಯ ಕಾರ್ಯಕ್ಷಮ ಕೃಷ್ಣಭಟ್ಟರದೊ ಬಂದಿರ್ ಸ್ವಾಮಿಗಳ್ ಭಕ್ತಿಗಾ ।
ಣ್ಯೆಯ ರೂಪಿಂ ಮಠಕೊರ್ನಿವೇಶನಮನೀಯಲ್ ಮೆಚ್ಚಿ ಕೊಂಡಿರ್ ಕೃಪಾ
ಶ್ರಯರಂ ಮಾಡಿದಿರೆಲ್ಲ ಶಿಷ್ಟರನದೇಂ ಸೌಭಾಗ್ಯಮೋ ದಾನದಾ ॥ ೩

ಕರೆವಂತಾದುದು ಕಾಮಧೇನು ಸುಧೆಯಂ ಕಲ್ಪದ್ರುಮಂ ಸ್ವೇಷ್ಟಮಂ
ಸುರಿವಂತಾದುದು ನೀತಿ ಧರ್ಮಸುಖಸಂಪಜ್ಜಾಹ್ನವೀ ತೋಯಮಂ ।
ಪರಿವಂತಾದುದು ಸಜ್ಜನರ್ ಮೆರೆಯೆ ದೇವರ್ ಕೂರೆ ನಲ್ಗಬ್ಬಿಗರ್
ಬರೆವಂತಾದುದು ಸಜ್ಜಗದ್ಗುರುಗಳಾ ಸಂದೇಶ ಸೌಭಾಗ್ಯದಿಂ ॥ ೪

ಧರೆಯೇಂ ಶ್ರೀಗುರುಪಾದಕರ್ಪಣೆ! ಮಠಕ್ಕೆಂದಿತ್ತುದೇ! ಕೃಷ್ಣಭ
ಟ್ಟರೆ ತಾನೀಯೆ ನಿವೇಶವಂ ಗುರುಗಳೇಂ ಕಯ್ಕೊಂಡರೇ! ತತ್ಸ್ಥಳಂ!
ಪಿರಿದೇಸುಗ್ಗಡವೋ? ಸುಯೋಗ್ಯವೊ? ಎನುತ್ತಂ ಕೇಳಲೇವೇಡ ಕ
ಣ್ದೆರೆದಲ್ಲೀಕ್ಷಿಸು ನೆಟ್ಟ ಕಂಬದುದಿಯೊಳ್ ಪ್ರಾಲೇಖ್ಯಮಂ ವಾಕ್ಯಮಂ || ೫

ಕಂದ

ಪದ್ಯಂ ಭಕ್ತಿಗುಣದೆ ನಿರ
ವದ್ಯಂ ಪಂಚಾಂಗುಲೀಯಕರನಮನಂ ಹೃ |
ದ್ವೇದ್ಯಂ ಪಂಚಕಮನಿದಂ
ಸದ್ಯಃ ಕವಿ ಕೇಶವಂ 'ಕನೀಯಂ' ಪೇಳ್ದಂ

— **ಟಿ. ಕೇಶವ ಭಟ್ಟ**

೨. ಶ್ರೀಗುರುಭಕ್ತಿದ್ವಾದಶಕದ್

ಕಂದ ||

ಸ್ಥಿರ ಚರ ಕೋಟ್ಯನು ಕೋಟಿ
ಸ್ಥಿರೆಯಲ್ಲೆಲ್ಲಿಡೆಯೊಳಿರ್ದೊಡಂ ಕಾಣಿಸದಾ |
ಪರತಮನನರಿವ ಕಣ್ಣಂ
ಕರುಣಿಪ ಗುರುಗಳ ಪದಾಂಬುಜಕ್ಕೆರಗಿದಪೆಂ || ೧

ಮಚ್ಚಿತ್ತ ಭ್ರಮರಕೆ ಗುರು
ಸಚ್ಚಿತ್ಕರುಣಾಮರಂದಯುತ ಪದಕಂಜ |
ಪ್ರಚ್ಛಾಯೆಯಾಶ್ರಯಮೆ ಸಲೆ
ಮೆಚ್ಚೆನಿಸುತ್ತಿರ್ಕೆ ತೊರೆಗೆ ನಿರ್ಮಧುಸುಮಮಂ || ೨

ಅಕ್ಕರಗಲಿಸಿದವಂ ಗುರು
ವಕ್ಕುಂ ವ್ಯಾಕರಣ ಕಾವ್ಯಕಲೆವಿನ್ನಣಮಂ |
ದಿಕ್ಕರಿಯಿಸೆ ಗುರುವರ್ಯಂ
ತಕ್ಕಿಂ ಪರಮಾರ್ಥದಂ ಪರಂಗುರುವಕ್ಕುಂ || ೩

ಯಮನಿಯಮಂಗಳುಮಂ ಶಮ
ದಮಮುಂ ಧೃತಿಶೌರ್ಯಸಾಹಸಂಗಳುಮಂ ಮ |
ತ್ತಮಿತೈಹಿಕ ಪಾರಮಿಕಾ
ರ್ಥಮನೀಪೆಯನಿತ್ತ ಗುರುವೆ ಸದ್ಗುರುವಕ್ಕುಂ || ೪

ನತಜನತೆಗೆ ಮಂತ್ರಫಲಾ
	ಕ್ಷತದಿಂದಕ್ಷತಫಲಂಗಳಂ ಪ್ರೀತಿಸಮ |
ನ್ವಿತಮನದಿಂದಂ ಕರುಣಿಪ
	ವಿತರಣಗುಣ ಗುರುಗಳೀಗೆ ಮುದದೊಳಭಯಮಂ || ೫

ಗುಣಿಗಳ ಗಣಿಗಳ್ ವಿದ್ಯೆಯ
	ಪಣಮುಳ್ಳರ್ ಜನಹಿತಾರ್ಥರಾರಾಣತಿಯಂ |
ಪಣೆಬೊಟ್ಟಾಗಿಯೆ ಕೊಳ್ವರ್
	ಮಣಿವೆಂ ತದ್ಗುರುವರೇಣ್ಯರಡಿದಾವರೆಗಾಂ || ೬

ಶ್ರಿತಜನಮನಸ್ತಮೋಹ
	ರ್ಪತಿಯಂ ಪ್ರಿಯಹಾಸ ಮಲ್ಲಿಕಾಸುಮವರ್ಷ |
ವ್ರತಿಯಂ ಯತಿಯಂ ಮತಿಯಂ
	ಗತಿಯಂ ಶಕ್ತಿಯನೆ ಬಯಸಿ ಗೆಯ್ವೆಂ ನುತಿಯಂ || ೭

ನಿರ್ವಿಘ್ನ ಬೊಮ್ಮಂ ಪಾಲಿಪ
	ಧರ್ಮಶ್ರೀವರನಳಿಯಿಪ ರುದ್ರನುಮೆಂಬೀ |
ಮುಮ್ಮೂರ್ತಿರೂಪ ಗುರುಗಳ
	ನೊರ್ಮೊದಲಾಂ ನೋಡಿ ಪಾಪಕಾನತನಪ್ಪೆಂ || ೮

ಸಿರಿಯಂ ಕಂಗಡೆ ನುಡಿಯೊಳ್
	ಸರಸತಿಯಂ ಮನದೆ ಕರುಣೆವೆಣ್ಣಂ ಕಂಡಿ |
ಲ್ಲಿರೆನೆಂದುಳಿದಾರಂ ಜಸ
	ಸಿರಿ ದಿಕ್ಕರಿಯೇರ್ದಳಾ ಗುರುಗೆ ಕುಂಬಿಡುವೆಂ || ೯

ವಿಧಿಲಿಖಿತಮಾವುದಾದೊಡ
	ಮದರಿಂದೇತರ್ಕೆ ಭೀತಿ ? ಗುರುವರ ಕರುಣಾ |
ಸ್ಪದನಾದನಾಗದು ದು
	ರ್ವಿಧಿಯಂ ತಿದ್ದುವುದು ಮಾಳ್ಪುದಖಿಳೋನ್ನತಿಯಂ || ೧೦

ಕರುಣಾರಸಯುತಮಂ ಗುರು
	ಚರಣಾಬ್ಜವನಾಂತ ಚಿತ್ತನಾನನದೊಳ್ ಸ |
ಕ್ಕರೆ ಜೇನಮರ್ದುಗಳಂ ಟಿ
	ಕ್ಕರಿಗಳೆವಾ ವಾಕ್ಪಟುತ್ವಮಪ್ಪುದು ನಿಸದಂ || ೧೧

ಎಂದಾನಪ್ಪೆಂ ಸತ್ಕೃತಿ
ಯೆಂದಪ್ಪೆಂ ಸಕಲಶಾಸ್ತ್ರಮತಿ ಬಂಧುರ ಹೃತ್ ।
ಸುಂದರನುಂ ಶ್ರೀ ಕಂಧರ
ಮಂದಿರನುಂ ಗುರುವೆ ತೋರಿಪುದು ಸತ್ಪಥಮಂ ॥ ೧೨

ಶ್ರೀರಾಮಚಂದ್ರ ಕರುಣಾ
ಕಾರ ಶ್ರೀ ರಾಘವೇಂದ್ರ ಭಾರತಿಯುವರಾ
ಚಾರು ಚರಣಾಬ್ಜಕಿದು ಕವಿ ।
ತಾರಸ ಸುಮಹಾರಮರ್ಪಿತಂ ಕೇಶವನಿಂ ॥ ೧೩

— ಟ. ಕೇಶವ ಭಟ್ಟ

೩. ಗುರುವೇ ಎನ್ನನು ರಕ್ಷಿಸು

ರಾಗ – ಕಲ್ಯಾಣಿ ! ಅಷ್ಟತಾಳ

ಗುರುವೇ ಎನ್ನನು ರಕ್ಷಿಸು । ಕಷ್ಟಗಳ ಸಾ ।
ಗರವ ಬೇಗನೆ ದಾಟಿಸು ॥ ಪಲ್ಲವಿ ॥
ಸಿರುತ ನಿನ್ನಯ ಪಾದ
ಸರಸಿಜ ಮಧುಪನಾ
ಗಿರುವೆನೆನ್ನಯ ಮನ
ಪರಿಶುದ್ಧಗೊಳುವಂತೆ ॥ ಗುರುವೇ ॥ ೧

ಜ್ಞಾನವನೆನಗೆ ನೀಡು । ಸದ್ಗುಣದಭಿ ।
ಮಾನವನೆನ್ನೊಳಗೆ ಕೂಡು ॥
ಧ್ಯಾನ ಧಾರಣೆಯು ಸೋ
ಪಾನವನರಿಯೆನ
ನೂನ ರಾಗದೊಳಿಷ್ಟ
ದಾನದ ವರವಿತ್ತು ॥ ಗುರುವೇ ॥ ೨

ಮೂರು ಲೋಕದೊಳಿರುವ । ಸದ್ಗುಣಗಣ ।
ಸೇರಿ ಮೆರೆಯುತಿರುವ ॥
ಶ್ರೀರಾಮಚಂದಿರ
ಚಂದ್ರಮೌಳೀಶ್ವರ
ಚಾರು ಚರಣ ಭಕ್ತಿ
ಸಾರಸ್ವರೂಪನೆ ॥ಗುರುವೇ॥ ೩

ಚಂದ್ರ ಸೂರ್ಯರ ತೇಜದಿ । ಲೋಕವಿದಂಶು ।
ಸಾಂದ್ರವಾಗುವ ತೆರದಿ ॥
ರುದ್ರ ಗುಣಾಂಭೋಧಿ
ಚಂದ್ರಮ ಶ್ರೀರಾಮ
ಚಂದ್ರಪುರದ ರಾಘ
ವೇಂದ್ರಭಾರತೀಸ್ವಾಮಿ ॥ಗುರುವೇ॥ ೪

—ಟಿ. ಕೇಶವ ಭಟ್ಟ

೪. ನಿತ್ಯದಲ್ಲಿ ನೆನೆಯಿರೆಲ್ಲ

ಉತ್ಸಾಹಗತಿ – ರೂಪಕತಾಳ

ನಿತ್ಯದಲ್ಲಿ ನೆನೆಯಿರೆಲ್ಲ ಗುರುಪದಾರವಿಂದವ
ಭೃತ್ಯರಾಗಿ ಸೇವೆಯೆಸಗಿ ಗಳಿಸಿರಾನಂದವ ॥ಪಲ್ಲವಿ॥
ಗುರುವೇ ಬ್ರಹ್ಮ ಗುರುವೆ ವಿಷ್ಣುಗುರುವೆ ದೇವನೀಶ್ವರಂ ।
ಗುರು ಪರಬ್ರಹ್ಮವೆಂದು ನಮಿಸುವುದು ನಿರಂತರಂ ।
ಮೆರೆವ ಸರ್ವವಿಧಚರಾಚರಂಗಳಲ್ಲಿ ತುಂಬಿದ
ಪರಮಪುರುಷ ಪದವ ತೋರುತಿರುವರಯ್ಯ ಸರ್ವದಾ ॥ ೧

ಇರುಳಿನಿಂದ ಬೆಳಕಿನೆಡೆಗೆ ಮಿಥ್ಯೆಯಿಂದ ಸತ್ಯಕೆ
ಮರಣದಿಂದವಮೃತದೆಡೆಗೆ ಜಡತೆಯಿಂದ ಜ್ಞಾನಕೆ ।
ನಿರುತ ದುಃಖದಿಂದ ಸುಖಕೆ ನಡೆಸುವ ಮಹಾತ್ಮರಂ
ಪರಮಭಕ್ತಿಯಿಂದ ಭಜಿಸಿ ವಾಕ್ಸುಧಾಸಮೇತರಂ ॥ ೨

ಶಂಕರಾರ್ಯಶಿಷ್ಯವಂಶ ವಾರ್ಧಿವರ್ಧನಕ್ಕೆ ಯೇ
ಶಾಂಕರಂ ಗೋಕರ್ಣಮಂಡಲಾಭ್ರಸೂರ್ಯತೇಜರಂ ।
ಸಂಕಟಾದ್ರಿ ವಜ್ರ ವಾಕ್ಪ್ರಸಾದರಂ ಪ್ರಬೋಧರಂ
ಓಂಕಾರ ಮಂತ್ರರಂ ರಘೂತ್ತಮಮಠ ಸುಸ್ಥಿರಂ ॥ ೩

ಸರ್ವಶಿಷ್ಯಜನಹಿತಾರ್ಥ ಚಿಂತನಾಪ್ರವೃತ್ತರಂ
ಸರ್ವಸೌಖ್ಯಮಾರ್ಗ ಬೋಧನಾರ್ಥ ಕಾರ್ಯಕರ್ತರಂ ।
ಸರ್ವದಾರ್ಚಿತ ಶ್ರೀ ಚಂದ್ರಮೌಳಿ ರಾಮಚಂದ್ರರಂ
ಖರ್ವರಹಿತ ಭಕ್ತಿಯಿಂದ ಸ್ವಾಮಿ ರಾಘವೇಂದ್ರರಂ ॥ ೪

— ಟಿ. ಕೇಶವ ಭಟ್ಟ

೫. ಶ್ರೀರಾಮ ಶೋಭಾನೆ
(ಸರಳಾರ)

ಮಂಗಲಂ । ಜಯ । ಮಂಗಲಂ ॥ ಪಲ್ಲವಿ ॥
ಮಂಗಲಂ ರಾಮಚಂದ್ರಾಪುರ ವಾಸಗೆ
ಮಂಗಲಂ ಶ್ರೀಗುರು ಪೂಜಿತಗೇ ॥ ಮಂಗಲಂ ॥ ॥ ಅನುಪಲ್ಲವಿ ॥

ಭೂತಳದೊಳಯೋಧ್ಯಾಪುರದೊಳು ಜಲ
ಜಾತಸಖಾನ್ವಯದೊಳಗುದಿಸಿ ।
ಖ್ಯಾತನಾದಗೆ ದಶರಥನೃಪ ಸೂನುಗೆ
ಸೀತಾಪತಿಗೆ ಮಹಾತ್ಮನಿಗೇ ॥ ಮಂಗಲಂ ॥ ೧

ಅನುಜ ಲಕ್ಷ್ಮಣ ಸಹ ಮುನಿಮಖ ರಕ್ಷಿಸಿ
ದನುಜೆ ತಾಟಕಿಯನು ಸಂಹರಿಸಿ ।
ವನಿತೆಯಹಲ್ಯೆಯನುದ್ಧರಿಸಿಯೆ ಮತ್ತೆ
ಜನಕನ ಪುರವನು ಸೇರಿದಗೇ ॥ ಮಂಗಲಂ ॥ ೨

ಹರನ ಧನುವನೆತ್ತಿ ಮುರಿದಿಕ್ಕುತ ಸೀತಾ
ತರುಣಿಯ ವರಿಸಿ ಬರುತ ಪಥದಿ ।
ಪರಶುರಾಮನ ಗರ್ವಭಂಗನೆಸಗಿ ತನ್ನ
ಪುರವ ಸೇರಿದ ಸೀತಾವರಗೆ ॥ ಮಂಗಲಂ ॥ ೩

ಗುರುವಂತೆ ಮತಿಯುತನಿಳೆಯಂತೆ ಸಹಿಪನು
ಹರಿಯಂತೆ ಶೂರನು ಗುಣಯುತನು ।
ನರರೊಳಿನ್ನಾರಿಲ್ಲವಿವನಂತೆಯೆಂಬಂತೆ
ಕೊರತೆಯಿಲ್ಲದನಾಗಿ ಮೆರೆದವಗೇ ॥ ಮಂಗಲಂ ॥ ೪

ಪಿತನ ವಚನ ರಕ್ಷಣೆಗೆ ರಾಜ್ಯವ ಬಿಟ್ಟು
ಅನುಜ ಲಕ್ಷ್ಮಣ ಸೀತೆಯರೊಡನೆ ।
ವನದೊಳಗೀರೇಳಬ್ದವಿರುವೆನೆಂಬ
ಮನದೊಳು ತೆರಳಿದ ಸುಚರಿತಗೇ ॥ ಮಂಗಲಂ ॥ ೫

ನಾರುಮಡಿಯು ಜಟಾಧಾರಣೆ ಫಲಮೂಲಾ
ಹಾರವು ಪರ್ಣಕುಟಿಯ ವಾಸ ।
ಭೂರಿಧನುರ್ಬಾಣಗಳಿಂ ಶೋಭಿಸುತ
ಘೋರಾರಣ್ಯದಿ ಕಳೆದಿರುವನಿಗೇ ॥ ಮಂಗಲಂ ॥ ೬

ಭೀಕರ ವೃಕ ಶಾರ್ದೂಲ ದ್ವಿಪ ಹರಿ
ಸೂಕರ ಮೃಗ ಪನ್ನಗ ಖಗದ ।
ನಾಕಭೀಕರರುಳ್ಳ ವಿಪಿನಕಂಜದೆಯೇ ಲೋ
ಕೈಕನೆಂಬದದಿ ಮೆರೆದವಗೇ ॥ ಮಂಗಲಂ ॥ ೭

ಧರೆಯನೊಲ್ಲದೆ ಪರಿವಾರ ಸಹಿತ ರಾಮು
ಚರಣವ ಕಂಡು ಕರೆಯೆ ಬಂದ ।
ಭರತನು ಧಾಳಿತಂದಿಹನೆಂದು ಲಕ್ಷ್ಮಣ
ಕೆರಳಲವನ ಸಂತಯಿಸಿದಗೇ ॥ ಮಂಗಲಂ ॥ ೮

ಪಟ್ಟವೇರೆನು ನಾನು ಕೈಗೊಳು ರಾಜ್ಯವ
ನೆಟ್ಟನೆ ಹಿಂದಿರುಗೆಂದೆನುತ ।
ಕಟ್ಟೊತ್ತಯಿಪ ಭರತಂಗೆ ಪಾದುಕೆಗಳ
ಕೊಟ್ಟು ಬೋಧಿಸಿದ ಶ್ರೀರಾಮನಿಗೇ ॥ ಮಂಗಲಂ ॥ ೯

ಕೆಟ್ಟ ರಕ್ಕಸಿ ಕಿವಿಮೂಗನರಿಯೆ ಬಂದ
ದುಷ್ಟರ ಸವೆದು ಕಪಟಮೃಗವ ।
ಅಟ್ಟ ಮುಂದಕೆ ಬರೆ ಸೀತೆಯನೊಯ್ದಂಥ
ದುಷ್ಟನನರಸುತ ಬಂದವಗೇ ॥ ಮಂಗಲಂ ॥ ೧೦

ದುರುಳರಾವಣನೊಳು ಸೆಣಸಿ ಮೋಸದಿ ಕೆಡೆ
ದುರುಳಿ ಬಿದ್ದಿರುವ ಜಟಾಯುವಿನಿಂ।
ತರುಣಿಯ ಪರಿಯರಿತವನಿಗೆ ಕರುಣಿಸಿ
ಪರಮಗತಿಯನೊಲಿದಿತ್ತವಗೇ ॥ ಮಂಗಲಂ ॥ ೧೧

ಅಂಜನಾತನಯನಿಗೊಲಿದು ಸುಗ್ರೀವನ
ಅಂಜಿಕೆ ಕಳೆದು ನೇಹದಿ ಕೂಡಿ ।
ಭಂಜಿಸಿ ವಾಲಿಯ ಕಿಷ್ಕಿಂಧೆಯನಿತ್ತ
ಕಂಜಲೋಚನ ರಘುರಾಮನಿಗೇ ॥ ಮಂಗಲಂ ॥ ೧೨

ಲಂಕೆಗೆ ಹನುಮನು ಲಂಘಿಸಿ ಸುತ್ತಿ ನಿ
ಶ್ಶಂಕೆಯಿಂದಸುಗೆಯ ಬನಕೈದೆ।
ಮುಂಕಂಡವನು ಕೊಟ್ಟ ರಾಮಮುದ್ರಿಕೆಯನು
ತಾಂ ಕೊಂಡ ಸೀತೆಯ ವಲ್ಲಭಗೇ ॥ ಮಂಗಲಂ ॥ ೧೩

ಜನಕಜೆಗೊರೆದು ಧೈರ್ಯವನವಳಿಂ ಚೂಡಾ
ಘನಮಣಿ ಪಡೆದುದ್ಯಾನವ ಮುರಿದು
ಅನಲಗೆ ಪುರವಿತ್ತು ಬಂದಾಂಜನೇಯಗೆ
ಘನಪದವಿಯನೊಲಿದಿತ್ತವಗೇ ||ಮಂಗಲಂ|| ೧೪

ಸೇತು ಬಂಧಿಸಿ ಸರ್ವವಾನರ ಸೇನಾಸ
ಮೇತ ಲಂಕೆಗೆ ಧಾಳಿಯನೆಸಗೆ
ಓತು ವಿಭೀಷಣ ಪೇಳಿದ ನೀತಿಯ
ಮಾತ ಮೀರಿದ ರಾವಣಸರಿಗೇ ||ಮಂಗಲಂ|| ೧೫

ದುಷ್ಟಾಗ್ರಜನ ಬಿಟ್ಟು ಶರಣಾಗತನಾದ
ಶಿಷ್ಟವಿಭೀಷಣನನು ಮೆಚ್ಚಿ
ಹೃಷ್ಟಮನದೆ ಪತಿಕರಿಸಿ ಮುಂದಣ ಲಂಕಾ
ಪಟ್ಟವನಾತಸಿಗಿತ್ತವಗೇ ||ಮಂಗಲಂ|| ೧೬

ವಿಧವಿಧ ರಾಕ್ಷಸಶಿರವ ಚೆಂಡಾಡುತ
ವಧಿಸಿಯೆ ಕುಂಭಕರ್ಣಾದ್ಯರನು
ಮುದಮುಖ ದಶಶಿರನನು ಸಂಹರಿಸಿದ
ತ್ರಿದಶ ಸನ್ನುತ ರಘುವೀರನಿಗೇ ||ಮಂಗಲಂ|| ೧೭

ದೇವತೂರ್ಯವು ಜಯರವದಿಂ ಮೊಳಗಲು
ಪೂವಳೆ ಸುರಿಯೆ ವಿಭೀಷಣನ
ಠೀವಿಯಿಂ ಗದ್ದುಗೆಯೇರಿಸಿ ಮೆರೆದಿಹ
ದೇವರ ದೇವ ಶ್ರೀರಾಮನಿಗೇ ||ಮಂಗಲಂ|| ೧೮

ಪ್ಲವಗನಾಯಕರ ಕೊಂಡಾಡಿ ವಿಬುಧಜನ
ನಿವಹಕಭಯವಿತ್ತು ಲೋಕವಲಿ
ತವದಂತೆ ನೀತಿ ಸುಧರ್ಮವಿದ್ಯೆಗಳ ಪ್ರೈ
ಭವವಾಗುವಂತೆಸಗಿರುವನಿಗೇ ||ಮಂಗಲಂ|| ೧೯

ಸೀತೆಯನಗ್ನಿಪರೀಕ್ಷೆಯ ಗೈದು ವಿ
ನೀತೆಯನಂದು ಪರಿಗ್ರಹಿಸಿ
ಕೋತಿಬಳಗ ಕೂಡಿ ನಗರಕ್ಕೆ ಪುಷ್ಪಕ
ವಾತಾಧ್ವಯಾನದಿ ತೆರಳಿದಗೇ ||ಮಂಗಲಂ|| ೨೦

14)

ಹದಿನಾಲ್ಕುವರುಷ ಕಳೆದುದಿನ್ನದೇಕೆ ಬಾ
ರದಿಹನಗ್ರಜನೆಂದು ದುಃಖದಲಿ
ಕುದಿದಗ್ನಿಗಿಳಿವೆನೆಂಬನುಜ ಭರತನನ್ನು
ಮುದದಿ ತಡೆದ ರಘುರಾಮನಿಗೇ ||ಮಂಗಲಂ|| ೨೧

ಮತ್ತಯೋಧ್ಯೆಯ ಸಿಂಹಾಸನವನು ಸಿತ
ಛತ್ರಚಾಮರ ಗೀತನೆಸೆಯುತಿರೆ
ಋತ್ವಿಜ ಮಂತ್ರಘೋಷದೊಳೇರಿ ಮೆರೆದಿಹ
ಸತ್ಸ್ವರೂಪ ಶ್ರೀರಾಮನಿಗೇ ||ಮಂಗಲಂ|| ೨೨

ಬಲದೊಳು ವತ್ಸಲಲಕ್ಷ್ಮಣನೆಡದಲಿ
ಯೊಲಿದಿಹ ಜಾನಕಿ ಮುಂದುಗಡೆ
ನೆಲದಿ ಕೈಮುಗಿದು ಮಾರುತಿಯಿರೆ ಮೂಲೋಕ
ನಲಿವುಗೊಳ್ಳಲು ರಂಜಿಸಿದವಗೇ ||ಮಂಗಲಂ|| ೨೩

ರಾಮಸೋಮರ ಭಕ್ತಿ ಸದ್ಧರ್ಮಸಂಸ್ಕೃತಿ
ಪ್ರೇಮವೈಭವ ಸಮಭಾವದಲಿ
ಆಮಯವಿರದೆ ಚಿರಾಯು ಬದುಕುವಂತೆ
ರಾಮ ರಾಜ್ಯದ ಜಸಗೂಡಿದಗೇ ||ಮಂಗಲಂ|| ೨೪

ಶ್ರೀರಾಮಚಂದ್ರಾಪುರ ಮಠ ಗುರುವರ
ಸಾರಾಧಿತ ಶ್ರೀ ರಾಘವೇಂದ್ರ ।
ಭಾರತೀಸ್ವಾಮಿ ಸದಾರ್ಚಿತ ಚರಣಗೆ
ಕಾರ್ಮಿಕಗೆ ಸುಖಕಾರಣಗೇ ||ಮಂಗಲಂ|| ೨೫

— **ಟಿ. ಕೇಶವ ಭಟ್ಟ**

೬. ಗುರುಮಠ ಚರಿತ್ರೆ

ಧವಳಾರ – ತ್ರಿವುಡೆ

(ಧಾಟಿ: ರಂಗನ ಪರಿಣಯ....ಎಂಬಂತೆ)

ವೇದವನುದ್ಧರಿಸಿದ ವೇದ ಪುರುಷನ
    ಪಾದಾಂಬುಜಕೆ ನಮಿಸಿ। ನಿರ್ವಿಘ್ನಲಂ
ಬೋದರನನು ಧ್ಯಾನಿಸಿ। ವಿದ್ಯಾದೇವಿ
    ಗಾದರದಲಿ ವಂದಿಸಿ। ಗುರುಜನರ ನೆನೆಸಿ।
ಮೇದಿನಿಯೊಳದ್ವೈತ ತತ್ತ್ವದ
    ವೇದಮತವನು ನಿಲಿಸಿ ಮೆರೆದಿರು
ವಾದಿಶಂಕರಶಿಷ್ಯಕುಲದೊಳ
    ಗಾದ ಹವ್ಯಕ ಗುರುಮಠದ ಪು
ಣ್ಯೋದಯದ ಚರಿತೆಯೊರೆವೆನು ॥ ೧

    ಕಾಲಟಿಯೊಳು ಜನ್ಮತಾಳಿ ಸಕಲವಿದ್ಯೆ
ಬಾಲತ್ವದೊಳೆ ಗಳಿಸಿ। ಧರ್ಮೋದ್ಧಾರ
    ಶೀಲದೆ ಮನವಿರಿಸಿ। ವಾದಿಗಳನು
ಲೀಲೆಯಿಂದಲೆ ಸೋಲಿಸಿ। ಮಠಗಳನು ಸ್ಥಾಪಿಸಿ।
    ಮೇಲು ಶಿಷ್ಯರ ನಿಲಿಸಿ ಧರ್ಮವಿ
ಶಾಲತತ್ತ್ವದ ಪಥದೆ ತರಲನು
    ಕೂಲಗೊಳಿಸುತ ವಿವಿಧ ಕೃತಿಗಳ
ಹೇಳಿದಾದಿಯ ಶಂಕರರ ಪದ
    ಮೂಲಕ್ಕೆ ಮಣಿದು ನುಡಿವೆನು ॥ ೨

ಮೆರೆವ ಮಂಡನಮಿಶ್ರರದೆ ಶಂಕರರಿಂದ
    ವರ ಸಂನ್ಯಾಸವ ತಾಳುತ। ಸುರೇಶ್ವರಾ
ಖ್ಯರು ಶೃಂಗೇರಿಯೊಳಿರುತ। ತಮ್ಮಯ ಶಿಷ್ಯ
    ವರ ವಿದ್ಯಾಸಂಪದಯುತ। ಧರೆಯ ಚರಿಸುತ್ತ।
ಬರುತ ಕಾಂಚಿಯೊಳಲ್ಲಿ ಚಕ್ರೋ
    ದ್ಧರಣವನು ಕಾಮಾಕ್ಷಿದೇವಿಯು
ನಿರಿಸಿ ತೆರಳುತ ಪರಮತಂಗಳ
    ತರಿದು ಶ್ರೀಗಿರಿಗೆಯ್ದಿ ಪೂಜಿಸಿ
ಬಿಸು ಮಲ್ಲಿಕಾರ್ಜುನನನಂದು ॥ ೩

ಪೊರಟು ಗೋಕರ್ಣಕ್ಕೈತರುತ ಮಹಾಬಲೇ
ಶ್ವರನನರ್ಚಿಸಿ ರಾಜಿಪ । ಋಷ್ಯಾಗಸ್ತ್ಯ
ಮರಶಿಷ್ಯರೆಂದೆನಿಪ । ವರದಮುನಿ
ವರರು ನಿಚ್ಚಪು ಪೂಜಿಪ । ರಾಮಲಿಂಗಗಳ
ಗುರುವನುಗ್ರಹವೆಂದು ಕುಡೆ ಸ್ವೀ
ಕರಿಸಿ ವಿದ್ಯಾನಂದರಿಗೆ ಕೊ
ಟ್ಟರುವೊಲಿದು ತಚ್ಚಂದ್ರಮೌಳೀ
ಶ್ವರ ಸಹಿತ ಶತಶೃಂಗದೊಳು ಮಠ
ವಿರಚಿಸುತ ನೆಲಸಿ ಇರುವಂತೆ ॥ ೪

ಎಲೆ ವಿದ್ಯಾನಂದ ನೀಂ ನೆಲಸು ಸಂತತ ಮಹಾ
ಬಲನ ದರ್ಶನಗೈಯುತ । ಗೋಕರ್ಣ ಮಂ
ಡಲದಾಚಾರ್ಯನೆಯಾಗುತ । ಹವ್ಯಕ ದ್ವಿಜ
ಕುಲಕೆ ಮಾರ್ಗವ ತೋರುತ । ಮಠವ ರಕ್ಷಿಸುತ ।
ಸಲೆ ವರದ ಮುನಿಯಿತ್ತ ವಿಗ್ರಹ
ಗಳನು ಚಂದ್ರಮೌಳೀಶಲಿಂಗವ
ನೊಲವಿನಿಂದರ್ಚಿಸುವುದೆನ್ನುತ
ತಿಳಿಸಿದಾದಿಯ ಶಂಕರರ ನುಡಿ
ತಲೆಯೊಳಗೆ ಪೊತ್ತು ಮೆರೆದನು ॥ ೫

ಸ್ತುತ್ಯ ವಿದ್ಯಾನಂದಾಚಾರ್ಯಾಗ್ರ ಶಿಷ್ಯರು
ನಿತ್ಯಾನಂದಾಚಾರ್ಯರು । ಧಾರ್ಮಿಕ ಶೀಲ ।
ಸುಸ್ಥಿರಮತಿಯವರು । ತದಾಚಾರ್ಯ
ರುತ್ತಮ ಕುಲಶಿಷ್ಯರು । ಮೆರೆದಿಹರವರೊಳು ।
ನಿತ್ಯ ಶಿಷ್ಯಾವಳಿಯ ಹಿತದಾ
ಸಕ್ತಿಯಿಂ ಶಶಿಮೌಳಿ ರಾಮರ
ಭಕ್ತಿಯಿಂ ಪೂಜಿಸುವ ನಿರ್ಮಲ
ಚಿತ್ತ ಶ್ರೀಮದ್ರಾಘವೇಂದ್ರರು
ನಿತ್ಯದಲಿ ನಮ್ಮ ಸಲಹಲಿ ॥

—'ಕವಿಕನೀಯಂ' ಟಿ. ಕೇಶವ ಭಟ್ಟ

೭. ಗುರುಭಜನೆ

ಜಯ ಜಯ ಶ್ರೀರಾಮಚಂದ್ರ ಮೌಳೀಶ
ಜಯ ಜಯ ಶ್ರೀರಾಮಚಂದ್ರಾಪುರೀಶ ॥ ಪಲ್ಲವಿ ॥

ಶಾಂತಿಸ್ವರೂಪ ಪುಣ್ಯಪ್ರದೀಪ
ಪ್ರಸನ್ನಮುಖ ದೂರೀಕೃತಕೋಪ ।
ಪರಿಹೃತತಾಪ ಮಧುರಾಲಾಪ
ರಾಮಚಂದ್ರಪದ ಸರಸಿಜಮಧುಪ ॥ ೧

ಷಡ್ವೈರಿಗಳನು ಜಯಿಸಿದ ಮುಕ್ತ
ಜ್ಞಾನ ವೈರಾಗ್ಯದ ವಾರ್ಧಿ ವಿರಕ್ತ ।
ಯೋಗಸಾಧನೆಯ ಗೈದಿಹ ಶಕ್ತ
ರಾಘವೇಂದ್ರಭಾರತಿ ಗುಣಯುಕ್ತ ॥ ೨

ಐಹಿಕ ಸುಖ ತಾನೆಂಬುದನಿತ್ಯ
ಪಾರಮಾರ್ಥಿಕ ಸುಖವೇ ನಿತ್ಯ ।
ಘನತತ್ತ್ವವ ಬೋಧಿಸ ಕೃತಕೃತ್ಯ
ರಾಘವೇಂದ್ರಭಾರತಿಯತಿ ಸ್ತುತ್ಯ ॥ ೩

ನ್ಯಾಯಶಾಸ್ತ್ರವೇದಾಂತ ವಿಶಾರದ
ಸತ್ವರಜಸ್ತಮ ಗುಣಗಳ ಮೀರಿದ ।
ಶಿಷ್ಯವೃಂದಕತಿಹಿತವನು ಕೋರಿದ
ರಾಘವೇಂದ್ರಭಾರತಿಯತಿ ಕೋವಿದ ॥ ೪

ಹವ್ಯಕ ದ್ವಿಜವೃಂದಾರ್ಚಿತ ಚರಣ
ಸ್ವರ್ಣಖಚಿತ ರುದ್ರಾಕ್ಷಾಭರಣ ।
ಶಿಷ್ಯಕೋಟಿಯಘಸಂಕುಲ ಹರಣ
ರಾಘವೇಂದ್ರ ಭಾರತಿಯತಿ ಶರಣ ॥ ೫

ಕಾಷಾಯಾಂಬರ ಸುಂದರವೇಷ
ಭಸ್ಮಭೂಷಿತಾನನ ಹೃತದೋಷ ।
ಆಧ್ಯಾತ್ಮಿಕ ಚಿಂತನ ಪರಿತೋಷ
ರಾಘವೇಂದ್ರ ಭಾರತಿ ಮಹಾಪುರುಷ ॥ ೬

ಮಾನವಧರ್ಮವ ಶ್ರೀಹರಿಕಾರ
　　ದೀನಪಲಿತರಲಿ ಕರುಣೆಯಪಾರ ।
ಶಾಂತಿಸಂಯಮಗಳ ದಿವ್ಯಾವತಾರ
　　ರಾಘವೇಂದ್ರ ಭಾರತಿಯತಿಪ್ರವರ ॥ ೭

ಹಸ್ತಿದಂತ ಸಿಂಹಾಸನ ಶೋಭಿತ
　　ವೈರಾಗ್ಯದ ಯತಿರೂಪ ಸುಚರಿತ ।
ಪರಮಹಂಸ ವರಬಿರುದಾಲಂಕೃತ
　　ರಾಘವೇಂದ್ರಭಾರತಿ ಗುಣಭರಿತ ॥ ೮

— ಕೊಡಂಕೂರು ತಿರುಮಲೇಶ್ವರ ಭಟ್ಟ

೮. ಕಾವ್ಯ ಕಾಣಿಕೆ

ಬೆಳಕ ತೋರಲಿ ಧರ್ಮದೀವಿಗೆಯೊಳಿತ ನೀಡಲಿ ಬಾಳಿಗೆ
　　ಜ್ವಲಿಸಿ ಉರಿಯಲಿ ಪ್ರಾಣದೀವಿಗೆ ಸೇವೆಯಾಗಲಿ ನಾಡಿಗೆ ॥ ಪಲ್ಲವಿ ॥

ಸುತ್ತುಮುತ್ತಲು ವೋಡ ಮುಸುಕಿದೆ ಅಂಧಕಾರವು ಕವಿದಿವೆ
　　ಸ್ವಾರ್ಥಜೀವನ ವ್ಯರ್ಥಜೀವನ ಬದುಕ ದುರ್ಬಲಗೊಳಿಸಿದೆ ।
ಭೀತಿಕಳೆಯುತ ಗಗನದೆತ್ತರ ಬೆಳೆಸಿ ನಿಲ್ಲಲಿ ಪೌರುಷ
　　ಪ್ರಕಟವಾಗಲಿ ಸ್ವಾಭಿಮಾನವು ಉಳಿಸಿ ಬೆಳೆಸುವ ಸಾಹಸ ॥ ೧

ಎತ್ತ ನೋಡಿದರತ್ತಕಾಣುವ ಅಂಧಕಾರದ ತೊಲಗಿಸಿ
　　ಸುಪ್ತಶಕ್ತಿಯನೆದ್ದು ನಿಲ್ಲಿಸಿ ನವಸಮಾಜವ ನಿರ್ಮಿಸಿ ।
ನಿದ್ದೆಮಾಡಿದ ನಮ್ಮಜನಗಳ ಹಿಡಿದು ಸಲೆ ಬಡಿದೆಬ್ಬಿಸಿ
　　ಗುರುಪರೇಣ್ಯರೆ ರಾಘವೇಂದ್ರರೆ ದಿವ್ಯದಾರಿಯ ತೋರಿಸಿ ॥ ೨

ಗುರುಪರಂಪರೆ ನಮ್ಮದಾಗಿದೆ ಭವ್ಯಸಂಸ್ಕೃತಿ ನಮಗಿದೆ
　　ಪುಣ್ಯವಂತರು ಭಾಗ್ಯವಂತರು ದಿವ್ಯಜ್ಞಾನದ ಅರಿವಿದೆ ।
ರಾಮಚಂದ್ರನ ಅಭಯಹಸ್ತವು ನಮಗೆ ರಕ್ಷಣೆ ನೀಡಿದೆ
　　ಗುರುವರೇಣ್ಯರ ಅಮರವಾಣಿಯು ನಮಗೆ ಚೇತನವಾಗಿದೆ ॥ ೩

ಮಂಗಳೂರಿನ ನಮ್ಮ ಹೋಬಳಿ ಆಯಿತಿಂದಿಗೆ ಪಾವನ
ರಾಮಚಂದ್ರನ ಚರಣಕಮಲಕೆ ನಡೆಯಲೆಂದಿಗೂ ಅರ್ಚನ ।
ಗುರುವರೇಣ್ಯರ ಮಾರ್ಗದರ್ಶನ ದೊರೆವುದೆಮಗಿದು ಅನುದಿನ
ಧನ್ಯರಾದೆವು ಮಾನ್ಯರಾದೆವು ನಮ್ಮ ಹೋಬಳಿ ಜನಗಣ ॥ ೪

ಸೋಲನರಿಯದ ನಮ್ಮ ಮೈಮನವಿಂದು ಜಾಗೃತವಾಗಿದೆ
ಹಗೆಯನೆದುರಿಸಿ ಬಗ್ಗುಬಡಿಯುವ ಧೈರ್ಯಸಾಹಸವೆಮಗಿದೆ ।
ನಾವು ಕಟ್ಟಿದ ನಮ್ಮ ಮಠವಿದು ಇದುವೆ ಗುರುವಿಗೆ ಕಾಣಿಕೆ
ಹರಸಿ ಆಶೀರ್ವದಿಸಿ ಶಿಷ್ಯರ ಇದುವೆ ನಮ್ಮಯ ಕೋರಿಕೆ ॥ ೫

— **ಕೆ. ರಾಮ ಭಟ್ಟ,** ಉರಿಮಜಲು

೯. ಸ್ವಾಗತ

ಶಿಷ್ಯವೃಂದ ಕೂಡಿಬರಲು
ಕರದಿ ಪುಷ್ಪ ಹಿಡಿದು ತರಲು ।
ಶಿರವ ಬಾಗಿ ಇಲ್ಲಿ ನಿಲಲು
ಗುರುವೆ ಸ್ವಾಗತ ॥ ೧

ರಾಮಚಂದ್ರ ಪುರದ ಒಡೆಯ
ರಾಘವೇಂದ್ರಸ್ವಾಮಿ ಸದಯ ।
ಸೇವೆ ಪಡೆದು ತೋಷವೊಂದಿ
ಗುರುವೆ ಸ್ವಾಗತ ॥ ೨

ಶರಾವತಿಯ ತೀರದಿಂದ
ಮುಡಿಯ ತೀರ್ಥ ನಮಗೆ ತಂದ ।
ಜಗದ ಪೂಜ್ಯ ನಮ್ಮ ಗುರುವೆ
ತಮಗೆ ಸ್ವಾಗತ ॥ ೩

ಕೋಟಿಸೂರ್ಯ ತೇಜರೂಪ
ಸತ್ಯಧರ್ಮ ನ್ಯಾಯದೀಪ ।
ಭೃತ್ಯಸೇವೆ ಪಡೆವ ಪೂಜ್ಯ
ಗುರುವೆ ಸ್ವಾಗತ ॥ ೪

ಪ್ರಾರ್ಥಿಸೆವು ಕ್ಷೇಮಕೆಂದು
    ಸಂಜೆ ಸಮಯ ಮಣಿಯುತಿಹೆವು।
ದೇವ ನಿಮಗೆ ಭಕ್ತಿಯಿಂದ
    ಗುರುವೆ ಸ್ವಾಗತ॥ ೫

ನಿಮ್ಮ ಪಾದ ಪೂಜೆಯಿಂದ
    ನಿಮ್ಮ ತತ್ತ್ವಬೋಧೆಯಿಂದ।
ಬ್ರಹ್ಮಕುಲವು ಬೆಳಗೆ ಚಂದ
    ಗುರುವೆ ಸ್ವಾಗತ॥ ೬

—ಟಿ. ಎಸ್. ಗಣಪಯ್ಯ, ಬಳ್ಳಾರಿ

೧೦. ಸ್ವಾಗತಗೀತೆ

ಸ್ವಾಗತವು ಗುರುವರ್ಯ ಹವ್ಯಕಮಹಾಚಾರ್ಯ
ಸ್ವಾಗತವು ಸದ್ಗುರು ಯತೀಂದ್ರ ಕರುಣಾಸಾಂದ್ರ
ಸ್ವಾಗತವು ಶ್ರೀರಾಘವೇಂದ್ರ ಭಗವಚ್ಚರಣ ಸಕಲ ವಿದ್ಯಾಭೂಷಣ।
ಸ್ವಾಗತವು ವಿಮಲಗುಣ ಪೂರ್ಣ ಯೋಗಿವರೇಣ್ಯ
ಸ್ವಾಗತವು ಭಕ್ತಜನ ಜಲರಾಶಿ ಹಿಮಕಿರಣ
ಸ್ವಾಗತವು ಶ್ರೀರಾಮಚಂದ್ರಪುರಸಂಸ್ಥಾನ ಸಿಂಹಾಸನಾಧೀಶ್ವರ॥ ೧

ನಿನ್ನ ದರುಶನವೆಮ್ಮ ಪೂರ್ವಜನ್ಮದ ಸುಕೃತ
ನಿನ್ನ ದರ್ಶನವು ಶುಭಸೂಚನವು ಗುರುವರನೆ
ನಿನ್ನ ದರ್ಶನವು ರವಿಯುದಯವೆಮ್ಮಯ ಪಾಪವೆಂಬ ಕತ್ತಲ ಮೊತ್ತಕೆ।
ನಿನ್ನ ಚರಣಾಂಬುಜ ರಜಸ್ಪರ್ಶದಿಂ ವಿಪ್ರ
ರುನ್ನತಿಯು ಹವ್ಯಕದ್ವಿಜತತಿಯು ಪಾವನವು
ಧನ್ಯತೆಯ ಕುರುಹೆಮ್ಮ ಚರ್ಮಚಕ್ಷುಗಳಿಂದ ನಿಮ್ಮ ದರ್ಶನ ಭಾಗ್ಯವು॥ ೨

ಜಯತು ಮಂಗಲ ರೂಪ ಜಯತು ಮಹಿಮಕಲಾಪ
ಜಯತು ಚಿದ್ಘನಮೂರ್ತಿ ಲೋಕವಿಶ್ರುತ ಕೀರ್ತಿ
ಜಯ ಜಯ ಶ್ರೀರಾಮಚಂದ್ರ ಭಕ್ತಶ್ರೇಷ್ಠ ಜಯತು ಶಿಷ್ಯೋದ್ಧಾರಕ।
ಜಯತು ಭವಭಯಹಾರ ಜಯತು ದುರಿತವಿದೂರ
ಜಯ ನಿರ್ಮಲ ಪ್ರೇಮ ಜಯತು ಪುಣ್ಯಸುನಾಮ
ಜಯ ಜಯ ಶ್ರೀರಾಮಚಂದ್ರಪುರ ಸಂಸ್ಥಾನ ಸಿಂಹಾಸನಾಧೀಶ್ವರಾ॥ ೩

—ಬಲನಾಡು ಸುಬ್ಬಣ್ಣ ಭಟ್ಟ, ಪುತ್ತೂರು, (ದ.ಕ.)

೧೧. ಶ್ರೀ ರಾಘವೇಂದ್ರಭಾರತೀ ಶರಣು

ಪರಮಹಂಸ ಪರಿವ್ರಾಜಕರೆನಿಸಿ
ಶಂಕರಾರ್ಯ ವರಪೀಠದಿ ನೆಲಸಿ ।
ರಾಮಚಂದ್ರ ಪುರಮಠದಲಿ ಶೋಭಿಪ
ರಾಘವೇಂದ್ರಭಾರತಿ ಶರಣು ॥ ೧

ರಾಘವೇಶ್ವರರ ಕರದಿಂ ಜನಿಸಿದ
ರಾಮಚಂದ್ರಭಾರತಿ ಯತಿಯ ।
ಪರಮಪೂಜ್ಯ ಕರಕಮಲಜರೆನಿಸಿಹ
ರಾಘವೇಂದ್ರಭಾರತಿ ಶರಣು ॥ ೨

ಸಾಗರಪ್ರಾಂತದ ಕರೂರಸೀಮೆಯ
ಮಾಗಲು ಗ್ರಾಮದ ಗಣಪತಿಯಿಂ ।
ಮೂಕಾಂಬೆಯ ವರ ಉದರದಿ ಜನಿಸಿಹ
ರಾಘವೇಂದ್ರಭಾರತಿ ಶರಣು ॥ ೩

ವೇದ ವೇದಾಂಗ ವೇದಾಂತಗಳೊಂದಿಗೆ
ಸಾಂಖ್ಯ ನ್ಯಾಯ ಶಾಸ್ತ್ರಗಳರಿತು ।
ವಿದ್ಯಾಘನದಿಂ ರಾಜಿಸುತಿರುತಿಹ
ರಾಘವೇಂದ್ರಭಾರತಿ ಶರಣು ॥ ೪

ಪಾಠಶಾಲೆಗಳ ಸ್ಥಾಪಿಸಿ ಪೋಷಿಸಿ
ಸಂಸ್ಕೃತ ವೈದಿಕ ವಿದ್ಯೆಗಳ ।
ಶಾಸ್ತ್ರಗಳೊಂದಿಗೆ ಕಲಿಸುತಲಿರುತಿಹ
ರಾಘವೇಂದ್ರಭಾರತಿ ಶರಣು ॥ ೫

ಮಠಕಟ್ಟಡಗಳ ಜೀರ್ಣೋದ್ಧಾರವ
ಶಿಷ್ಯರ ನೆರವಿಂದೇರ್ಪಡಿಸಿ ।
ಪವಾಡಪುರುಷರೆಂದೆನಿಸಿಹ ಗುರುವರ
ರಾಘವೇಂದ್ರಭಾರತಿ ಶರಣು ॥ ೬

ಮಂಗಳೂರ ಕಡೆ 'ಪೆರಾಜೆ' ಮಾಣಿಯೊಳ್
ಧರ್ಮಧ್ವಜದವೊಲ್ ಶೋಭಿಸಿಹ ।
ನವೀನಮಠವನು ಸ್ಥಾಪಿಸಿ ಮೆರೆದಿಹ
ರಾಘವೇಂದ್ರಭಾರತಿ ಶರಣು ॥ ೭

ಹವ್ಯಕಮಹಾಧಿಪೇಶನ ಸೇರಿಸಿ
ಧಾರ್ಮಿಕ ಪಂಚಾಂಗವ ಬರೆಸಿ ।
ಸಮಾಜವನು ಸಂಘಟಿಸುತ ರಾಜಿಪ
ರಾಘವೇಂದ್ರಭಾರತಿ ಶರಣು ॥ ೮

ಭಜಕರ ಮನದಿಂಗಿತವನು ಅರಿತು
ಸ್ವಜನ ವಿಜನ ಭೇದವ ಮರೆತು ।
ಭೂವಮಾನಂದವನೆಲ್ಲರಿಗೀಯುವ
ರಾಘವೇಂದ್ರಭಾರತಿ ಶರಣು ॥ ೯

ಗುರುವರ ಪರಮಾನುಗ್ರಹಕಿಂತಲು
ಗುರುತರ ಜಗದೊಳಗಿನ್ನಿಲ್ಲ ।
ಕರುಣೆಯೊಳೆಮ್ಮನು ರಕ್ಷಿಸು ಗುರುವರ
ರಾಘವೇಂದ್ರಭಾರತಿ ಶರಣು ॥ ೧೦

ಗುರುವರಛಾತ್ರಾವಾಸದಿ ನೆಲಸಿ
ನ್ಯಾಯ ಶಾಸ್ತ್ರ ಸಾಹಿತ್ಯವ ಪಠಿಸಿ ।
ಶ್ರೀ ಗುರುವರಚರಣಕೆ ಶರಣಾಗಿಹ
'ರಾಮಕೃಷ್ಣ' ಕೃತವಿದು ಶರಣು ॥ ೧೧

ಗೋಕರ್ಣ ಮಂಡಲಾಚಾರ್ಯನೆನಿಸಿಹ ಬುಧಗೆ
ರಾಮಚಂದ್ರಾರ್ಚೆಯೊಳು ನಿರುತಲಿರುವವಗೇ ।
ರಾಮಚಂದ್ರಾಪುರದ ಧರ್ಮ ಪೀಠದ ಮಣಿಗೆ
ಮಂಗಳವು ಗುರು ರಾಘವೇಂದ್ರಭಾರತಿಗೇ ॥ ೧೨

— ವಿದ್ವಾನ್ ರಾಮಕೃಷ್ಣ, ಅಡ್ಕೋಳಿ, ಮೂರೂರು

೧೨. ನಮೋ ಗುರುನಾಥ

ನಮೋ ಗುರುನಾಥ। ನಮೋ ವಿಶ್ವಖ್ಯಾತ
ನಮೋ ಭಕ್ತ ಪ್ರೀತ। ನಮೋ ರಾಮದೂತ ॥ ಪಲ್ಲವಿ ॥

ಬಂದೆ ನಿನ್ನ ಬಳಿಗೆ। ತಂದೆ ಗುರುವರೇಣ್ಯ
ಕಂದಳನ್ನು ಸಲಹೊ। ಮಂದಹಾಸದಿಂದ ॥ ೧

ಕರೆಮ ಮನ್ನಿಸಯ್ಯ। ಕರುಣಾದೃಷ್ಟಿಯಿಂದ
ಶಿರವ ಬಾಗಿ ಬೇಳ್ಪೆ। ಸ್ವಾಮಿ ಪರಮ ಹಂಸ ॥ ೨

ವೇದ ಸಾರವನ್ನು। ಬೋಧಿಸುವ ಮತಿಯೆ
ಮೋದದಿಂದ ನಿನ್ನ। ಪಾದ ಸೇವೆ ಗೈವೆ ॥ ೩

ಭಕ್ತಿಹೀನೆ ನಾನು। ಮುಕ್ತಿ ದಾತ ನೀನು
ಭಕ್ತಿ ಮುಕ್ತಿ ಕೊಟ್ಟು। ಭಕ್ತೆಯನ್ನು ಸಲಹೊ ॥ ೪

ಶ್ರೀಮತಿ ಸುಬ್ಬಿ ಗಣೇಶ ಭಟ್ಟ

೧೩. ಗುರುವರೇಣ್ಯ ರಕ್ಷಿಸಯ್ಯ

('ಶಿವಪ್ಪ ಕಾಯೋ ತಂದೆ' — ಎಂಬಂತೆ)

ಗುರುವರೇಣ್ಯ ರಕ್ಷಿಸಯ್ಯ ಚರಣಕೆರಗಿ ಬೇಡ್ವೆನಯ್ಯ
ನಿರುತ ಭಕ್ತಿಜ್ಞಾನ ವಿತ್ತು । ಕಾಪಾಡಯ್ಯ ।
ಗುರುವೇ । ಕಾಪಾಡಯ್ಯ ॥ ಪಲ್ಲವಿ ॥

ಭಜಿಸಲರಿಯೆ ನಿನ್ನ ಚರಣ । ಸ್ಮರಿಸಲರಿಯೆ ನಾ
ಪರಿಪರಿಯಲಿ ನಿನ್ನ ಸ್ತೋತ್ರ । ಮಾಡಲರಿಯೆ ನಾ
ಗುರುವೇ । ಕಾಪಾಡಯ್ಯ ॥ ೧

ಸಂದಿತುತ್ಸಾಹವೆಲ್ಲ । ನಿಂದ್ಯಕರ್ಮದಲ್ಲಿ
ಕಂದಳ ತಪ್ಪನ್ನು ತಿದ್ದಿ । ಕಾಪಾಡಯ್ಯ ।
ಗುರುವೇ । ಕಾಪಾಡಯ್ಯ ॥ ೨

ತಂದೆ ತಾಯಿ ಬಂಧು ನೀನೆ । ಎಂದು ತಿಳಿದೆ ನಾ
ಇಂದು ನಿನ್ನ ಮರೆಯ ಹೊಕ್ಕೆ । ಬೇಡಿಕೊಂಬೆ ನಾ ॥ ೩

— ಶ್ರೀಮತಿ ಸುಬ್ಬಿ ಗಣೇಶ ಭಟ್ಟ

೧೪. ಕರುಣಿಸೊ ವರಗಳನು

('ದೇವುಜ ದಿವ್ಯಮತಿ। ಸರಸ್ವತಿ' ಎಂಬಂತೆ)

ಕರುಣಿಸೊ ವರಗಳನು। ಶ್ರೀಗುರುವರ
ಕರುಣಿಸೊ ವರಗಳನು ॥ ಪಲ್ಲವಿ ॥

ಕರುಣಿಸೊ ವರಗಳ ಚಿರಮಾಂಗಲ್ಯವ
ಚರಣಕೆ ಎರಗುವೆನು। ಶ್ರೀಗುರುವರ
ಚರಣಕೆ ಎರಗುವೆನು ॥ ೧

ಭುವಗಿರಿವಾಸನೆ ಬುಧಜನ ಪ್ರೀಯನೆ
ಭವವನು ಹರಿಸುವನೆ। ಶ್ರೀಗುರುವರ
ಭವವನು ಹರಿಸುವನೇ ॥ ೨

ಪರಮುದಯಾಳುವೆ ಪಾದವ ನಂಬಿದೆ
ಪೊರೆವುದು ನೀಯೆನ್ನ। ಶ್ರೀಗುರುವರ
ಪೊರೆವುದು ನೀಯೆನ್ನ ॥ ೩

ಶಂಕರರೂಪನೆ ಸಂಕಟಹಾರನೆ
ಕಿಂಕರ ಪಾಲಕನೆ। ಶ್ರೀಗುರುವರ
ಕಿಂಕರ ಪಾಲಕನೆ ॥ ೪

ಶ್ರೀಮತಿ 'ಬಬ್ಬಿ ಗಣೇಶ ಭಟ್ಟ

೧೫. ಭಕ್ತಿ ಫಲವ ನೀಡು

('ನಾ ನಿನ್ನ ದಾಸನಯ್ಯ' ಎಂಬಂತೆ)

ಭಕ್ತಿ ಫಲವ ನೀಡಯ್ಯ ! ಶ್ರೀ ಗುರು ರಾಯ
ಭಕ್ತಿ ಫಲವ ನೀಡಯ್ಯ ॥ ಪಲ್ಲವಿ ॥

ಭಕ್ತಿ ಫಲವ ನೀಡು ಭಕ್ತರ ಕಾಪಾಡು
ಚಿತ್ತ ಶುದ್ಧಿಯನಿತ್ತು । ಮುಕ್ತಿಯ ಕೊಡು ಕೊಡು ॥ ೧

ಅಜ್ಞಾನವ ಬಿಡಿಸೋ । ನಿನ್ನಯ ದಿವ್ಯ
ನಾಮಾಮೃತವ ಕುಡಿಸೋ
ಸಜ್ಜನ ಪಾಲನೆ ಸದ್ಗುರು ದೇವನೆ
ಸದ್ಭಾವದಲಿ ನಿನ್ನ ಮರೆಹೊಕ್ಕು ಬೇಡುವೆ ॥ ೨

ಸಾಧು ಜನೋದ್ಧಾರನೆ । ಸರ್ವೇಶನೆ
ಸದ್ಗುಣ ಭೂಷಿತನೆ
ಸಚ್ಚಿದಾನಂದ ಸದ್ಗತಿಯನು ಪಾಲಿಸೋ
ಮತಿಯಿಲ್ಲದಿರುವ ಈ । ಸುತೆಗೆ ನೀ ಸತತವು ॥ ೩

ಶ್ರೀಮತಿ ಸುಬ್ಬಿ ಗಣೇಶ ಭಟ್ಟ

೧೬. ಮಂಗಲಂ

(ಧಾಟಿ : 'ಚಂದ್ರಶೇಖರ ಚಂದ್ರಶೇಖರ ಚಂದ್ರಶೇಖರ ಪಾಹಿಮಾಂ' – ಎಂಬಂತೆ)

ಮಂಗಲಂ ಜಯ ಮಂಗಲಂ ಶುಭ
ಮಂಗಲಂ ಗುರು ದೇವಗೆ ।
ಮಂಗಲಂ ಜಯ ಮಂಗಲಂ ಶುಭ
ಮಂಗಲಂ ಸರ್ವೇಶಗೆ ॥ ಪಲ್ಲವಿ ॥

ಭೂಸುರ ಪ್ರಿಯ ಭುವನವಂದಿತ ಭಯನಿವಾರಕ ಮಂಗಲಂ
ಭವಭಯವ ಪರಿಹರಿಸಿ ನಮ್ಮನು ಪೊರೆವ ಸದ್ಗುರು ಮಂಗಲಂ ॥ ೧

ಸತ್ಯಧರ್ಮವ ಬೋಧಿಸುವ ಶ್ರೀ ಸುಗುಣಮೂರ್ತಿಯೆ ಮಂಗಲಂ
ನಿತ್ಯನಿರ್ಮಲ ನಿಗಮಗೋಚರ ಸ್ವಾಮಿ ಭಾರತಿ ಮಂಗಲಂ ॥ ೨

ಕಾವಿ ಬಟ್ಟೆಯ ಧರಿಸಿ ಶೋಭಿಪ ರಾಘವೇಂದ್ರಗೆ ಮಂಗಲಂ
ಆರುವೈರಿಯ ಗೆಲಿದ ಶ್ರೀ ಗುರು ಸಾರ್ವಭೌಮಗೆ ಮಂಗಲಂ ॥ ೩

ಧಾತ್ರಿಯೊಳು ಪೆಸರಾದ ಪಾವನ ತೀರ್ಥಹಳ್ಳಿಯ ಮಠದಲಿ
ರಾಜಿಸುವ ಗುರು ರಾಘವೇಂದ್ರಗೆ ಮಂಗಲಂ ಶುಭ ಮಂಗಲಂ ॥ ೪

ಶ್ರೀಮತಿ ಸುಬ್ಬಿ ಗಣೇಶ ಭಟ್ಟ

೧೭. ಮಂಗಲಂ

ರಘು ಮಠ ಶ್ರೀ ರಾಘವೇಂದ್ರರ
ನಘಹರಿಸಬೇಕೆಂದು ನಮಿಸಿದೆ
ಬಗೆ ಬಗೆಯ ಪ್ರಾರ್ಥಿಸಿದೆ ನಾಂ ಗುರು ಭಕ್ತಿಯಿರಲೆಂದು ।

ಹಗರಣವೆಯಾಗಿರುವ ಸಂಸಾ
ರಿಗಳ ಮಧ್ಯದಿ ಸಿಲುಕಿದೆನ್ನಯ
ನಿಗಮ ಮೂರುತಿ ರಕ್ಷಿಪುದು ಹಗಲಿರುಳು ವಂದಿಸುವೆ ॥ ೧

ಮಂಗಳಂ ಗುರು ರಾಘವೇಂದ್ರಗೆ
ಮಂಗಳಂ ಗುರು ಪುಣ್ಯಸಾಂದ್ರಗೆ
ಮಂಗಳಾಕರ ನಾಥ ತುಂಗಾತೀರವಾಸನಿಗೆ ।

ಮಂಗಳಂ ಶ್ರೀ ರಾಮಚಂದ್ರಗೆ
ಮಂಗಳಂ ಪಾಡುತ್ತ ಸೇವಿಪ
ಮಂಗಳಾಕರ ರಘುಮಠದ ಸಂಪೂರ್ಣಚಂದ್ರನಿಗೆ ॥ ೨

'ಭಕ್ತ' — ಸಿರ್ಸಿ (ಉ.ಕ)

—: ಶ್ರೀ ರಾಮಚಂದ್ರಾರ್ಪಣಮಸ್ತು :—

ಅನುಬಂಧ ೫

ಲೇಖಕರು :

ಪಂಡಿತ ಗಣಪತಿ ಶಾಸ್ತ್ರೀ ಹೆಬ್ಬಾರ

(ಶ್ರೀ ಕೃಷ್ಣಾಶ್ರಮ ಸ್ವಾಮೀಜೀ)

ರಾಮ್.ಘಾಟ್, ವಾರಾಣಸೀ

ಉತ್ತರ ಪ್ರದೇಶ.

೧. ಅಹಿಚ್ಛತ್ರದ ವರ್ತಮಾನ ಸ್ಥಾನ ನಿರ್ಣಯ.

೨. ಶ್ರೀಶಂಕರಾಚಾರ್ಯರ ಪೀಠ ಸ್ಥಾಪನೆ ಮತ್ತು ಆವಶ್ಯಕತೆ.

೩. ಸಮಾಜ ರಕ್ಷಣೆಯ ಆವಶ್ಯಕತೆ.

೧. ಅಹಿಚ್ಛತ್ರದ ವರ್ತಮಾನ ಸ್ಥಾನ ನಿರ್ಣಯ

ಹವ್ಯಕ ಬ್ರಾಹ್ಮಣ ಸಮಾಜದ ಇತಿಹಾಸದೊಳಗೆ ಆ ಸಮಾಜವು ಅಹಿಚ್ಛತ್ರ-ದಿಂದ ಗೋರಾಷ್ಟ್ರದಲ್ಲಿ ಆವಾಹಿಸಿ ಸ್ಥಾಪಿಸಲ್ಪಟ್ಟಿರುವುದೆಂದು ಬರೆಯಲ್ಪಟ್ಟಿರುವುದು. ಆ ಪೈಕಿ ಅಹಿಚ್ಛತ್ರವೆಂಬ ಪ್ರದೇಶವು ಯಾವುದೆಂದು ಅದರ ವರ್ತಮಾನ ಪರಿಚಯವನ್ನು ಪಡೆಯುವ ಕುತೂಹಲವು ಹಲವರಿಗೆ ಉಂಟಾಗಬಹುದು. ಈ ವಿಷಯದಲ್ಲಿ ಕೆಳಗಿನ ವಿಚಾರವು ಮನನೀಯವಾಗಿದೆ.

ಮಹಾಭಾರತದೊಳಗೆ ಮಹಾರಾಜ ದ್ರುಪದ ಮತ್ತು ದ್ರೋಣಾಚಾರ್ಯರ ಸಂಬಂಧವಾಗಿ ಒಂದು ಇತಿಹಾಸವು ಬಂದಿರುವುದು. ಮಹಾರಾಜ ದ್ರುಪದ ಮತ್ತು ದ್ರೋಣಾಚಾರ್ಯ ಇಬ್ಬರೂ ವಿದ್ಯಾರ್ಥಿದಶೆಯಲ್ಲಿ ಸಹಪಾಠಿಗಳಾಗಿ ಒಂದೇಸ್ಥಳದಲ್ಲಿ-ದ್ದರು. ಮುಂದೆ ದ್ರುಪದನು ತನ್ನ ಪಾಂಚಾಲ ದೇಶದ ರಾಜನಾದ ಬಳಿಕ ದ್ರೋಣಾಚಾರ್ಯರು, ದ್ರುಪದನು ತನ್ನ ಮಿತ್ರನೆಂದು ಭಾವಿಸಿ, ಮೈತ್ರಿಗನುರೂಪವಾದ ನಡವಳಿಕೆಗಳನ್ನು ಬಯಸಿದಾಗ ದ್ರುಪದನು ಗರ್ವದಿಂದ "ರಾಜ್ಯವಿಲ್ಲದ ಒಡ ಬ್ರಾಹ್ಮಣನು ರಾಜನಿಗೆ ಮಿತ್ರನಾಗುವುದೆಂದರೇನು !" ಎಂದು ತಿರಸ್ಕರಿಸಿದನು.

ಹೀಗೆ ಅಪಮಾನ ಹೊಂದಿದ ದ್ರೋಣಾಚಾರ್ಯರು ಮುಂದೆ ಅರ್ಜುನ ಮುಂತಾದ ಪಂಚಪಾಂಡವ ಮತ್ತು ಕೌರವರಿಗೆ ವಿದ್ಯಾಭ್ಯಾಸ ಮುಗಿಸಿದ ಬಳಿಕ ಸಮರ್ಥರಾದ ಶಿಷ್ಯರಿಂದ ಗುರುದಕ್ಷಿಣೆಯಾಗಿ ದ್ರುಪದನನ್ನು ಸಜೀವ ಬಂಧನಮಾಡಿ ತಂದು ಕೊಡಬೇಕೆಂದು ಅಪೇಕ್ಷಿಸಿದೊಡನೆ, ಅರ್ಜುನನು ದ್ರುಪದನನ್ನು ಸೆರೆಹಿಡಿದು ತಂದು ಇದಿರು ನಿಲ್ಲಿಸಿದಾಗ ದ್ರೋಣಾಚಾರ್ಯರು "ಎಲೈ ದ್ರುಪದನೆ, ಈಗ ನೀನು ನನ್ನಿಂದ ಗೆಲ್ಲಲ್ಪಟ್ಟು ರಾಜ್ಯವಿಲ್ಲದವನಾದ್ದರಿಂದ ನನ್ನ ಮಿತ್ರತ್ವಕ್ಕೆ ಅರ್ಹನಾಗುವುದ-ಕ್ಕಾಗಿ ನಿನಗೆ ಅರ್ಧರಾಜ್ಯವನ್ನು ಬಿಟ್ಟುಕೊಡುತ್ತೇನೆ. ಭಾಗೀರಥೀ ನದಿಯ ದಕ್ಷಿಣ ಭಾಗಕ್ಕೆ ನೀನು ರಾಜನಾಗು, ಉತ್ತರ ಭಾಗಕ್ಕೆ ನಾನು ರಾಜನಾಗುವೆನು. ಈಗಲಾದರೂ ನಾನೊಬ್ಬ ನಿನ್ನ ಮಿತ್ರನೆಂಬುದನ್ನು ಒಪ್ಪುವಿಯೋ ?" ಎಂದಾಗ ದ್ರುಪದನು "ಇದರಲ್ಲಿ ಆಶ್ಚರ್ಯವೇನಿಲ್ಲ. ಮಹಾತ್ಮನಾದ ನಿನ್ನೊಡನೆ ತ್ರಿಕಾಲದಲ್ಲೂ ಶಾಶ್ವತವಾದ ಪ್ರೀತಿಯನ್ನು ಬಯಸುತ್ತೇನೆ" ಎಂದು ಹೇಳಿದನು. ಆಗ ದ್ರೋಣಾಚಾರ್ಯರು ದ್ರುಪದನನ್ನು ಬಂಧಮುಕ್ತನನ್ನಾಗಿ ಮಾಡಿ ಸತ್ಕರಿಸಿ ಕಳಿಸಿದರು. ಉತ್ತರ ಪಾಂಚಾಲವನ್ನು ತಮ್ಮದನ್ನಾಗಿ ಮಾಡಿಕೊಂಡರೆಂದಿದೆ.

"ರಾಜಾಸಿ ದಕ್ಷಿಣೇ ತೀರೇ ಭಾಗೀರಥ್ಯಾಹಮುತ್ತರೇ"

(ಮಹಾಭಾರತ ಆ|| ಪ|| ಅ|| ೧೪, ಶ್ಲೋ|| ೭೪)

ದಕ್ಷಿಣೋತ್ತರ ಪಾಂಚಾಲದ ಸೀಮೆ ಈ ಪ್ರಕಾರ ವಿಂಗಡಿಸಲ್ಪಟ್ಟಿದೆ.

ಶ್ಲೋ|| ಮಾಕಂದೀಮಥ ಗಂಗಾಯಾಸ್ತೀರೇ ಜನಪದಾಯುತಾಂ|
ಸೋಽಧ್ಯಾವಸೀದ್ದೀನಮನಾಃ ಕಾಂಪಿಲ್ಯಂ ಚ ಪುರೋತ್ತಮಮ್ ||
ದಕ್ಷಿಣಾಂಶ್ಚಾಪಿ ಪಾಂಚಾಲಾನ್ ಯಾವಚ್ಚರ್ಮಣ್ವತೀ ನದೀ |
ದ್ರೋಣೇನ ಚೈವ ದ್ರುಪದಃ ಪರಿಭೂಯಾಥ ಪಾಲಿತಃ || (ಶ್ಲೋ|| ೭೭-೭೮)
ಅಹಿಚ್ಛತ್ರಂ ಚ ವಿಷಯಂ ದ್ರೋಣಃ ಸಮಭಿಪದ್ಯತ |
ಏವಂ ರಾಜನ್ನಹಿಚ್ಛತ್ರಾ ಪುರೀ ಜನಪದಾಯುತಾ |
ಯುಧಿನಿರ್ಜಿತ್ಯ ಪಾರ್ಥೇನ ದ್ರೋಣಾಯ ಪ್ರತಿಪಾದಿತಾ ||
(ಮ|| ಭಾ|| ಆ|| ಪ|| ಅ|| ೧೩೮, ಶ್ಲೋ|| ೮೧-೮೨)

ಈ ಆಧಾರಗಳ ಮೇಲಿಂದ ಪಾಂಚಾಲ ದೇಶವು ಚರ್ಮಣ್ವತೀ (ವರ್ತಮಾನ ಚಂಬಲಾ) ನದಿಯಿಂದ ಹಿಮಾಲಯದ ಬುಡದ ವರೆಗೆ ವಿಸ್ತೃತವಾಗಿದ್ದು ಅವನ್ನು ಗಂಗಾನದಿಯ ದಕ್ಷಿಣೋತ್ತರ ಎರಡು ಭಾಗಗಳನ್ನಾಗಿ ಕಲ್ಪಿಸಿ, ದ್ರೋಣಾಚಾರ್ಯರು ದಕ್ಷಿಣ ಪಾಂಚಾಲವನ್ನು ದ್ರುಪದನಿಗೆ ಕೊಟ್ಟು, ಉತ್ತರ ಪಾಂಚಾಲವನ್ನು ತನ್ನ ರಾಜ್ಯವನ್ನಾಗಿಟ್ಟುಕೊಂಡರು. ರಾಜಧಾನಿ ಅಹಿಚ್ಛತ್ರಾ ಪುರಿಯಾಗಿತ್ತು. ಈ ಪ್ರಕಾರ ಉತ್ತರ ಪಾಂಚಾಲ ಅಂದರೆ ಈಗಿನ ರೋಹಿಲ್ ಖಂಡ (ಮಹಾಭಾರತದೊಳಗಿನ ರೋಹಿತಕಾರಣ್ಯ) ಅರ್ಥಾತ್ ಬರೇಲೀ, ರಾಮನಗರ ಮೊದಲಾದ ಪ್ರದೇಶಗಳೇ ಅಹಿಚ್ಛತ್ರ ಪ್ರದೇಶವೆಂದು ಹೇಳಬಹುದಾಗಿದೆ.

ಮಹಾಭಾರತದೊಳಗೆ ಅಹಿಚ್ಛತ್ರ ಪ್ರದೇಶವು ಅಹಿಕ್ಷೇ(ಕ್ಷ)ತ್ರವೆಂದೂ ಪುರಿಯು ಛತ್ರವತೀ ಎಂದೂ ಒಂದೆರಡು ಕಡೆ ಬಂದಿದೆ.

"ಆವಶೀರಾಂಶ್ಚಯೋಧ್ಯಾಂಶ್ಚ ಅಹಿಕ್ಷತ್ರಾಂಶ್ಚ ಸೋಽಜಯತ್ |
ಪೂರ್ವಾಂ ದಿಶಂ ವಿನಿರ್ಜಿತ್ಯ ವತ್ಸ ಭೂಮಿಂ ತಥಾಽಗಮತ್ ||
(ಮ|| ಭಾ|| ವನಪ|| ಅ|| ೨೫೫, ಶ್ಲೋ|| ೮.)

ಈ ಉಲ್ಲೇಖದಿಂದ ಅಹಿಚ್ಛತ್ರವು ಹಸ್ತಿನಾಪುರಕ್ಕಿಂತ ಪೂರ್ವದಿಕ್ಕಿಗೆ ಇರುವುದು ಸ್ಥಿರವಾಗುತ್ತದೆ. ಈ ಪ್ರದೇಶದ ರಾಜಧಾನಿಯಾದ ಅಹಿಚ್ಛತ್ರಾಪುರಿಗೆ

ಸೋಽರ್ಷತೋ ದ್ರುಪದೋ ನಾಮ ಛತ್ರವತ್ಯಾಂ ನರೇಶ್ವರಃ |
ತಸ್ಮಾದಾಕೃಷ್ಯ ತದ್ರಾಜ್ಯಂ ಮಮ ಶೀಘ್ರಂ ಪ್ರದೀಯತಾಂ ||

'ಛತ್ರವತೀ' ಎಂಬುದಾಗಿ ಆದಿಪರ್ವ ಅ|| ೧೬೫ ಶ್ಲೋ|| ೨೦ರಲ್ಲಿ ಬಂದಿದೆ.

ತಥಾ ರೋಹಿತಕಾರಣ್ಯಂ ಮರುಭೂಮಿಶ್ಚ ಕೇವಲಾ ।
ಅಹಿಚ್ಛತ್ರಂ ಕಾಲಕೂಟಂ ಗಂಗಾಕೂಲಂ ಚ ಭಾರತ ॥

ಈ ಪ್ರಕಾರ ಮ॥ ಭಾ॥ ಉದ್ಯೋಗಪರ್ವ ಅ॥ ೧೯, ಶ್ಲೋ॥ ೨೯-೩೨ ರಲ್ಲಿಯೂ ಅಹಿಚ್ಛತ್ರ ಪ್ರದೇಶದ ಉಲ್ಲೇಖವಿದೆ. ಈ ಶ್ಲೋಕಗಳಲ್ಲಿರುವ ರೋಹಿತಕಾರಣ್ಯವೇ ಈಗಿನ ರೋಹಿಲಖಂಡವೆಂದಾಗಿರಬೇಕು.

ಈ ವಿಷಯದಲ್ಲಿ ಮಹಾಭಾರತದ ಪ್ರಮಾಣದಂತೆ ಜೈನ ಬೌದ್ಧ ಸಾಹಿತ್ಯಕಾರರ ಉಲ್ಲೇಖಗಳನ್ನೂ ಮಧ್ಯಕಾಲದ ಇತಿಹಾಸಗಳನ್ನೂ ಸೇರಿಸಿ ವಿಚಾರ ನಡೆಸಿದ ಎಲ್ಲಾ ಭಾರತೀಯ ಅಥವಾ ಯೂರೋಪೀಯ ಜಾತಕರ ನಿರ್ಣಯಗಳ ನಿಷ್ಕರ್ಷವನ್ನೇ ಶ್ರೀ ನಂದಲಾಲ್ ದೇವ್, ಎಂ.ಎ., ಬಿ.ಎಲ್. ಎಂಬವರು ಬರೆದ "The Geographical Dictionary of Ancient & Medieval India" ಎಂಬ ಗ್ರಂಥದಿಂದ ಉದ್ಧರಣಗಳನ್ನು ಕೊಟ್ಟು, ಆಧುನಿಕ ಕಾಲದ ವಿಚಾರ ಸಮುಚ್ಚಯವನ್ನು ಅವಿರುದ್ಧವಾಗಿ ಕಾಣಿಸಲಾಗುವುದು.

1. Panchala-Rohit Khand: Panchala was originally the country north and south west of Delhi from the foot of the Himalayas to the river Chambal, but it was afterwards divided into North and South Panchala respected by the Ganges. The capital of the former was Ahichhatra, and that of the latter was Kampilya. South Panchala was the Kingdom of Raja Drupada whose daughter Droupadi was married to the five Pandavas. Makandi was also the name of another capital of South Panchala extending from the Southern Bank of The Ganges to the river Charmanvati or Chambal (M. Bh Adi.P Ch. 148) and North Panchala extended from the Ganges to the Himalayas. Kanouj also was the capital of Panchala at the time of Buddha.

(Rhys. Devid's "Buddist India" P. 27)

2. Ahichhatra-Ramnagar, twenty miles west of Bareli in Rohitkhand. The name of Ahichhatra is at

present confused to the great fortress in the lands of Alampurkot and Nauratganj. It was the capital of North Panchala or Rohitkhand. *(Dr. Führer M. A., & Cunningham Anc Geo. P. 359)* It was also called Chatravati *(M. Bh. Adi. P. Ch. 148)*. It is Ahichhatra of the insoreptiom. *(Epigraphia India Vol. II, P. 432 note by Führer)*. It is also called Ahichhatra. *(M. Bh. Vanaparva Ch. 255)*. In Jain words Ahichhatra is said to be the principal town of the country called Jangala which therefore was another name for North Panchala *(See Weber's Indicha Studies X, P. 398)*

Ahichhatra and Ahikshetra are the same.

ಇಷ್ಟು ವಿಚಾರಗಳಿಂದ ಸಂಕ್ಷೇಪವಾಗಿ ಅಹಿಚ್ಛತ್ರ ಪ್ರದೇಶವು ನಿಶ್ಚಯಿಸಲಾಗಬಹುದೆಂದು ಆಲೋಚಿಸಬೇಕು.

೨. ಶ್ರೀ ಶಂಕರಾಚಾರ್ಯ ಪೀಠ ಸ್ಥಾಪನೆ ಮತ್ತು ಅವಶ್ಯಕತೆ.

ಸಚ್ಚಿದಾನಂದ ಸ್ವರೂಪವಾದ ಜಗನ್ಮೂಲ ತತ್ತ್ವವೇ ಸೃಷ್ಟಿ ಕರ್ತನಾದ ಕಾರಣ ಮಾತೃಪದವೂ ಪಿತೃಪದವೂ ಮೂಲತಃ ಆ ಪರಮಾತ್ಮನದೇ ಆಗಿರುವುದು. ಆತನೇ ಸರ್ವಸಮರ್ಥನಾದ ಕಾರಣ ರಾಜಪದ ಧರ್ಮರಾಜಪದ ಮೊದಲಾದ ಶಾಸಕ ಪಾಲಕ ಪದಗಳೂ ಆತನದೇ ಸ್ವತಃಸಿದ್ಧಗಳಾಗಿರುವುದು. ಹಾಗೇನೇ ಆತನೇ ಸರ್ವಜ್ಞನಾದ ಕಾರಣ ಜ್ಞಾನೋಪದೇಶಕತ್ವವೂ, ಜ್ಞಾನಸಾಧನಗಳಾದ ಆಚಾರ, ವ್ಯವಹಾರ, ಪ್ರಾಯಶ್ಚಿತ್ತ ಮೊದಲಾದ ಧರ್ಮೋಪದೇಶಕತ್ವವೂ ಆಗಿರುವುದು. ಆಚಾರ್ಯ ಪದವಾದರೋ ಆ ಜಗದ್ಗುರುವಿನದೇ ಸಂಪೂರ್ಣ ಸಿದ್ಧವಾಗಿರುವುದು. "ತ್ವಮೇವ ಮಾತಾ ಚ ಪಿತಾ ತ್ವಮೇವ" "ಬಂಧುರ್ಗುರುರಹಂ ಸಖೇ" "ನಾ ವಿಷ್ಣುಃ ಪೃಥಿವೀ-ಪತಿಃ" ಇತ್ಯಾದಿ ಶಾಸ್ತ್ರವಚನಗಳು ಇದನ್ನೇ ಸಾರಿ ಹೇಳುತ್ತವೆ. ಕೃತಯುಗಾರಂಭದ ಕೆಲವು ಕಾಲದ ವರೆಗೆ ಎಲ್ಲಾ ಪ್ರಜೆಗಳೂ ತಾವಾಗಿಯೇ ನ್ಯಾಯವರ್ತಿಗಳಾಗಿರು-ತ್ತಿದ್ದು ರಾಜ ರಾಜ್ಯವ್ಯವಸ್ಥೆಯ ಅಪೇಕ್ಷೆಯೇ ಬೇಕಾಗಿರಲಿಲ್ಲವೆಂದು ಮಹಾಭಾರತ ದೊಳಗೆ ಇತಿಹಾಸ ಬಂದಿದೆ.

ನೈವ ರಾಜ್ಯಂ ನ ರಾಜಾಸೀತ್ ನ ದಂಡೋ ನ ಚ ದಾಂಡಿಕಃ |
ಧರ್ಮೇಣೈವ ಪ್ರಜಾಃ ಸರ್ವಾಃ ಪಾಲ್ಯಮಾನಾಃ ಪರಸ್ಪರಂ || ಇತಿ.

ಆ ಮೇಲೆ ಮನು ಮಹಾರಾಜನನ್ನು ಮೊದಲು ಮಾಡಿ ರಾಜ್ಯವ್ಯವಸ್ಥೆಯು ಆವಶ್ಯಕತೆಗನುಸಾರವಾಗಿ ಪ್ರಾರಂಭಿಸಲಾಯಿತು. ಹಾಗೇನೇ ಮನು ಮತ್ತು ಶತ-ರೂಪಾ ಈ ದಂಪತಿಗಳಿಂದ ಮೊದಲು ಮಾನಸ ಸೃಷ್ಟಿಯೇ ಇರುತ್ತಿದ್ದ ಕಾರಣ-ಮನುಷ್ಯರಲ್ಲಿ ಮೈಥುನಜನ್ಯ ಮಾತಾಪಿತೃಪದವಿರಲಿಲ್ಲವೆಂದೂ ಇತಿಹಾಸದಿಂದ ತಿಳಿದು ಬರುತ್ತದೆ. ಆದರೂ ಜ್ಞಾನೋಪದೇಶಕನಾದ ಆಚಾರ್ಯ ಪದವು ಇಲ್ಲದ ಕಾಲವೇ ಸೃಷ್ಟಿಯೊಳಗೆ ತೀರದು ಬರುವುದಿಲ್ಲ.

"ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ |
ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ||"

ಬ್ರಹ್ಮದೇವನ ಸೃಷ್ಟಿಯಾದೊಡನೆ ಭಗವಂತನು ಆತನಿಗೆ ಉಪದೇಶ ಕೊಟ್ಟು ಆಚಾರ್ಯ ಪದದ ಅವಶ್ಯಕತೆಯನ್ನು ಸರ್ವದಾ ಕಾಣಿಸಿರುವನು. ಅಜ್ಞಾನವು ಅನಾದಿ ಯಾದ ಕಾರಣ ಯಾವುದೊಂದು ವಿಷಯದಲ್ಲೂ ತಿಳಿಯದವನು ತಿಳಿದವನ

ಆಚಾರ್ಯರ್ತ್ವದಿಂದ ಜ್ಞಾನವನ್ನು ಹೊಂದದೆ ಆಯಾ ವಿಷಯದ ಏನೊಂದು ಪುರುಷಾರ್ಥವನ್ನೂ ಸಾಧಿಸಲಾರನು.

ಅಂಥಾ ಆಚಾರ್ಯ ಪದವು ಪರಮಾತ್ಮನಿಂದ ಅನೇಕ ಕಾಲದಲ್ಲಿ ಅನೇಕ ದೇವ ಋಷಿ ಮುನಿಗಳಿಂದ ಪರಂಪರೆಗಳಾಗಿ ಲೋಕದೊಳಗೆ ಉದಯಿಸಿ ಕೆಲವು ಅಸ್ತವಾಗಿವೆ, ಕೆಲವು ಪರಂಪರೆಗಳು ಇನ್ನೂ ನಡೆಯುತ್ತಿವೆ. ಅದರೊಳಗೆ ನಮ್ಮೆಲ್ಲರ ಅದ್ವೈತ ವಿದ್ಯಾಪ್ರಧಾನವಾದ ಆಚಾರ್ಯ ಪರಂಪರೆಯೂ ಒಂದು ಮುಖ್ಯವಾದುದು.

ನಾರಾಯಣಂ ಪದ್ಮಭುವಂ ವಸಿಷ್ಠಂ ಶಕ್ತಿಂಚ ತತ್ಪುತ್ರಪರಾಶರಂ ಚ ।
ವ್ಯಾಸಂ ಶುಕಂ ಗೌಡಪದಂ ಮಹಾಂತಂ ಗೋವಿಂದ ಯೋಗೀಂದ್ರ-
ಮಥಾಸ್ಯಶಿಷ್ಯಂ ॥
ಶ್ರೀ ಶಂಕರಾಚಾರ್ಯ ಮಥಾಸ್ಯಪದ್ಮಪಾದಂ ಚ ಹಸ್ತಾಮಲಕಂ ಚ-
ಶಿಷ್ಯಂ ।
ತಂತ್ರೋಟಕಂ ವಾರ್ತಿಕಕಾರಮನ್ಯಾನಸ್ಮದ್ಗುರೂನ್ ಸಂತತಮಾನ-
ತೋಸ್ಮಿ ॥

ಈ ಮೊದಲಾಗಿ ಬಂದು ಮುಂದುವರಿಸಿದೆ ಈ ಪರಂಪರೆಯೊಳಗೆ ಸಂನ್ಯಾಸಿಗಳೂ ಗೃಹಸ್ಥರೂ ಮೊದಲಾದ ಎಲ್ಲಾ ತರದ ಆಶ್ರಮದವರೂ ಕಂಡು ಬರುತ್ತಿದ್ದಾರೆ. "ಅಸ್ಮದ್ಗುರೂನ್"ಎಂಬುದಾಗಿ ಹೇಳಿದ ಪಂಗಡದಲ್ಲಿ ಅದ್ವೈತ ವಿದ್ಯಾ ಮತ್ತು ತತ್ಸಾಧನ ಆಚಾರ, ವ್ಯವಹಾರ, ಪ್ರಾಯಶ್ಚಿತ್ತ ಮೊದಲಾದ ಧರ್ಮೋಪದೇಶವನ್ನು ಮಾಡುವ ಅಧ್ಯಾಪಕರಿಗೂ ಪ್ರವೇಶವಿದೆ. ಆದ್ದರಿಂದ ಸಮಾನ ನ್ಯಾಯೇನ ಸಮಾಜದ ಸಾಮಾಜಿಕ ಆಡಳಿತವನ್ನು ಶಂಕರಾಚಾರ್ಯರ ಕಾಲಕ್ಕಿಂತ ಮೊದಲಿನ ಕಾಲದಲ್ಲಿ ನೋಡುತ್ತಿದ್ದ ಸಭಾಹಿತ, ಮಧ್ಯಸ್ಥ ಮೊದಲಾದ ಧರ್ಮಾಧಿಕಾರಿಗಳೂ ಅನಾದಿ ಕಾಲದಿಂದ ಬಂದ ಆಚಾರ್ಯ ಪದದ ಕಾರ್ಯ ಕರ್ತರೇ ಆಗಿದ್ದರು.

ಇಲ್ಲಿ ವಿಚಾರಿಸತಕ್ಕದ್ದೇನೆಂದರೆ:— ಶ್ರೀ ಶಂಕರಾಚಾರ್ಯರ ಕಾಲದಿಂದ ಈ ಆಚಾರ್ಯ ಪದದ ಎಲ್ಲಾ ಕಾರ್ಯಭಾರಗಳನ್ನೂ ಕೇಂದ್ರೀಕರಿಸಿ ಸಂನ್ಯಾಸಾಶ್ರಮಸ್ಥ-ರಾದ ಯತಿವರರ ಸ್ವಾಧೀನ ಮಾಡಿ ಸಮಾಜದೊಳಗಿನ ಬೇರೆ ಎಲ್ಲಾ ಮಾತಾ ಪಿತಾ ಮತ್ತು ಪೂರ್ವಪ್ರಾಪ್ತ ಸಭಾಹಿತ, ಮಧ್ಯಸ್ಥ ಮೊದಲಾದ ಮತ್ತೂ ಇತರ ಯೋಗ್ಯತೆ ಯುಳ್ಳ ಮಹಾನುಭಾವರೂ ಆಯಾ ಕಾಲದ ರಾಜ್ಯಸಂಸ್ಥೆಗಳೂ ಆ ಯತಿವರರ ಮಾರ್ಗ ದರ್ಶನದಿಂದ ಸಾಮಾಜಿಕ ಆಡಳಿತಗಳನ್ನು ನಡೆಸುವಂತೆ ಆಚಾರ್ಯ ಪೀಠ-ವನ್ನು ಸ್ಥಾಪಿಸಿ ನಿಯಮಿಸಲು ಕಾರಣವೇನಿರಬಹುದು? ಯತಿಗಳಾದ ಬಳಿಕ ಮಠ ಶಿಷ್ಯಸಂಗ್ರಹ, ಛತ್ರ ಚಾಮರ ಮೊದಲಾದ ವೈಭವ ಇತ್ಯಾದಿ ಪ್ರವೃತ್ತಿಗಳಿಗೆ ಪ್ರಮಾಣವೇನು? ಇತ್ಯಾದಿ.

ಈ ವಿಷಯದಲ್ಲಿ ಅನೇಕ ದೃಷ್ಟಿಗಳಿಂದ ವಿವೇಚಿಸಬೇಕಾಗುವುದು. ಆದರೆ ಎಲ್ಲಾ ವಿವೇಚನೆಗಳಲ್ಲೂ ಇದೊಂದು ವಿಷಯವನ್ನು ಮಾತ್ರ ಮರೆಯಬಾರದು. ಏನೆಂದರೆ, ಈ ಆಚಾರ್ಯ ಪೀಠ ಸ್ಥಾಪನೆಯಿಂದ ಮಾತಾ, ಪಿತಾ, ಮೊದಲು ಮಾಡಿ ರಾಜ್ಯಕರ್ತರ ವರೆಗಿನ ಯಾವುದೊಂದು ಪದವೂ ರದ್ದು ಮಾಡಲ್ಪಟ್ಟಿಲ್ಲ. ಕೇವಲ ಆಚಾರ್ಯ ಪೀಠದ ಅಧೀನವಾಗಿ, ಆಚಾರ್ಯರ ಉಪದೇಶಾನುಸಾರವಾಗಿ ಸಮಾಜದ ಆಡಳಿತಗಳನ್ನು ಪೀಠದ ಪರವಾಗಿ ಮಾಡುತ್ತಿರಬೇಕೆಂದು ನಿಯಮಿಸಿರುವುದಷ್ಟೇ. ಎಲ್ಲರ ಮೇಲೂ ಆಚಾರ್ಯರ ನೇತೃತ್ವವನ್ನು ಇರಿಸಿ ಎಲ್ಲಾ ಕಾರ್ಯಭಾರಗಳೂ ಏಕಸೂತ್ರಬದ್ಧಗಳಾಗಿ ವ್ಯವಸ್ಥಾಪಿಸಲ್ಪಟ್ಟವು. ಆಯಾ ಪದಗಳಲ್ಲಿರುವ ಯೋಗ್ಯ ಕಾರ್ಯಕರ್ತರು ಆಚಾರ್ಯಪೀಠಕ್ಕನುಕೂಲವಾಗಿ ಸಹಯೋಗವನ್ನು ಮಾಡುತ್ತಿರಬೇಕೆಂದೂ ಆಚಾರ್ಯಪೀಠವೂ ಅವರ ಸಹಯೋಗವನ್ನು ಯಥೋಚಿತವಾಗಿ ಸ್ವೀಕರಿಸಿ ನಡೆಸಬೇಕೆಂದೂ ಈ ವ್ಯವಸ್ಥೆಯಲ್ಲಿ ಅಪೇಕ್ಷಿತವೇ ಆದರೂ ಸಂಭವಿಸದ ಪ್ರಸಂಗಗಳಲ್ಲಿ ಆಚಾರ್ಯಪೀಠವು ಸ್ವತಂತ್ರವೇ.

ಈ ರೀತಿಯಾದ ವ್ಯವಸ್ಥೆ ಮಾಡಲು ಕಾರಣಗಳು ಏನಿರಬಹುದೆಂದರೆ :—

೧. ಸಮಾಜದ ಎಲ್ಲಾ ಧಾರ್ಮಿಕ, ಸಾಮಾಜಿಕ, ಉಪಾಸನಾ, ಕರ್ಮ, ಜ್ಞಾನಸಂಬಂಧೀ ಆಡಳಿತಗಳೂ ನಡವಳಿಕೆಗಳೂ ನಿರ್ಗುಣ ಬ್ರಹ್ಮವಿದ್ಯಾಧಿಕಾರಿಗಳಾದವರ ಆಚಾರ್ಯತ್ವದಿಂದ ದಿಗ್ದರ್ಶನವನ್ನು ಹೊಂದಿ ಮಾಡಬೇಕಾಗುವುದೆಂದು ಸಿದ್ಧಾಂತವಿರುವುದು. ವೇದಾಂತ ಕಲ್ಪತರು ಟೀಕಾ ಪರಿಮಲ ಗ್ರಂಥದೊಳಗೆ ಈ ಪ್ರಕಾರ ನಿರೂಪಿಸಿದೆ—

"ಉಚ್ಯತೇ ಸಗುಣ ವಿದ್ಯಾಪೇಕ್ಷಿಣಾಂ ಅಂಗಾವಬದ್ಧೋಪಾಸನಾಪೇಕ್ಷಿಣಾಂ ಕೇವಲ ಕರ್ಮಠಾನಾಂ ಚ ತದನುಷ್ಠಾನ ಪ್ರಕಾರಾದ್ಯವಗತಿಃ ವಿಚಾರಿತೈಚ್ಛಾಸ್ತ್ರೇಭ್ಯೋ ಗುರುಭ್ಯೋऽನ್ವೇಷಣೀಯಾ, ಗತ್ಯಂತರಾಭಾವಾತ್ । ಅಭ್ಯುಪಗಮ್ಯತೇ ಹಿ ಕರ್ಮ ವಿಚಾರ ಪ್ರಾಚೀನ ಸಂಧ್ಯಾವಂದನಾದ್ಯಯನ ನಿಯಮಾದ್ಯನುಷ್ಠಾನಾರ್ಥಂ ನಿಷಾದರಥಕಾರ ಸ್ಥಪತೀಷ್ಟ್ಯಾಧಾನಾನುಷ್ಠಾನಾರ್ಥಂ ಚ ತತ್ತದವಗತಿಃ ಸ್ವಯಮ ವಿಚಾರಿತ ತತ್ತದ್ವ್ಯಾಖ್ಯಾನಾದೇವ ಹಿತೈಷಿ ವಚನಮಾತ್ರಾದಿತಿ ॥"

(ಬ್ರಹ್ಮಸೂತ್ರ ಜಿಜ್ಞಾಸಾಧಿ – ಕಲ್ಪತರು ಪರಿಮಲ ಪು. ೬೦)

ಯದ್ಯಪಿ ಇದರೊಳಗೆ ಸಂನ್ಯಾಸಾಶ್ರಮಸ್ಥರಾದ ನಿರ್ಗುಣ ಬ್ರಹ್ಮವಿದ್ಯಾಧಿಕೃತರೇ ಪಥಪ್ರದರ್ಶಕರಾಗಬೇಕೆಂದು ಹೇಳಿಲ್ಲ. ಸಾಧನ ಚತುಷ್ಟಯ ಸಂಪನ್ನರಾದ ಗೃಹಸ್ಥಾಶ್ರಮದವರಿಗೂ ನಿರ್ಗುಣ ಬ್ರಹ್ಮವಿದ್ಯಾಧಿಕಾರವಿರುವುದು. ಆದ್ದರಿಂದ

ಅಂಥವರ ಆಚಾರ್ಯತ್ವದಿಂದ ನಡೆಸುವುದೂ ಶಕ್ಯವೇ ಸರಿ. ಉಷಸ್ತಿ, ಚಾಕ್ರಾಯಣ, ಜನಕ, ಯಾಜ್ಞವಲ್ಕ್ಯ ಮೊದಲಾದವರ ಅನುಮತಿಯನ್ನು ಪಡೆದು ಕಾರ್ಯ ನಡೆಸಿದ ಉದಾಹರಣೆಗಳು ಉಪನಿಷತ್ತುಗಳಲ್ಲಿ ಬಂದಿವೆ. ತಥಾಪಿ ಸಂನ್ಯಾಸಾಶ್ರಮವು ನಿರ್ಗುಣ ಬ್ರಹ್ಮೋಪಾಸನೆಗಾಗಿಯೇ ವಿಧಿಸಲ್ಪಟ್ಟಿದ್ದಾದ್ದರಿಂದಲೂ ಮತ್ತು ಅಂಥಾ ದೃಷ್ಟಿ ಕೋಣದಿಂದ ಸಂನ್ಯಾಸಾಶ್ರಮವು ಇತರ ಎಲ್ಲಾ ಆಶ್ರಮಗಳಿಗಿಂತ ಉತ್ತಮವೆಂದು "ತ್ರಯೋ ಧರ್ಮಸ್ಕಂಧಾ—ಬ್ರಹ್ಮಸಂಸ್ಥೋ ಅಮೃತತ್ವಮೇತಿ" ಮುಂತಾದ ಶ್ರುತಿ-ತಾತ್ಪರ್ಯವು ಪರಾಮರ್ಶಾಧಿಕರಣದೊಳಗೆ ನಿರ್ಣೀತವಾದ್ದರಿಂದಲೂ ಸಂನ್ಯಾಸಿಯಾದ ಆಚಾರ್ಯರ ದಿಗ್ದರ್ಶನವು ಉತ್ತಮವೆಂದರೆ ಅಯುಕ್ತವಾಗದು. ಬೇರೆ ಆಶ್ರಮ-ದವರಿಗೆ ಅವರವರ ಕಾರ್ಯಭಾರದ ತಡೆಗಳು ಇರಲು ನಿರ್ಗುಣ ಬ್ರಹ್ಮವಿದ್ಯಾ ತತ್ಪರ-ವಾಗಿ ವಿಹಿತವಾದ ಸಂನ್ಯಾಸಾಶ್ರಮವು ಈ ಕಾರ್ಯಭಾರಕ್ಕೆ ಅಧಿಕ ನಿರಾಬಾಧವಾಗಿರ ಬಹುದು. ತಮ್ಮ ಬ್ರಹ್ಮವಿದ್ಯಾಧಿಕಾರವನ್ನೂ ಗಳಿಸಿಕೊಳ್ಳುತ್ತಾ ಇದ್ದು, ಬಾಕಿ ಶಿಷ್ಯವರ್ಗದ ಆಚಾರ್ಯತ್ವದ ಭಾರವನ್ನೂ ವಹಿಸುವುದು ಸಾಧಾರಣ ಉತ್ತರ-ದಾಯಿತ್ವದ ಕಾರ್ಯವಲ್ಲ. ಬಹಳ ಕಠಿಣವಾದದ್ದೆಂದು ವಿವೇಚಕರಿಗಷ್ಟೇ ತಿಳಿಯ ಬಹುದು. ಆದ್ದರಿಂದ ಅಂಥಾ ಮಹಾಭಾರವನ್ನು ಇತರ ಎಲ್ಲಾ ಪ್ರಪಂಚಗಳೊಡನೆ ನಿರಾಬಾಧವಾಗಿ ನಡೆಸಲು ಸಮರ್ಥರಾದವರು ಪೂರ್ವ ಯುಗಗಳಲ್ಲಿ ಧಾರಾಳವಾಗಿ-ದ್ದಾಗ ಒಂದು ಸ್ಥಿರ ವ್ಯವಸ್ಥೆಯ ಅಪೇಕ್ಷೆ ಇಲ್ಲದಿರಬಹುದಾದರೂ ಈಗ ಸತ್ವಗುಣದ ಸಾಮರ್ಥ್ಯ ಕ್ಷೀಣವಾಗುತ್ತಿರುವ ಈ ಕಲಿಕಾಲದಲ್ಲಿ ಆ ಭಾರವನ್ನು ತತ್ಪರವಾದ ಆಶ್ರಮದಲ್ಲಿ ವ್ಯವಸ್ಥಾಪಿಸುವುದು ಅದಷ್ಟು ದೀರ್ಘ ಕಾಲ ಸುವ್ಯವಸ್ಥೆಗೆ ಸ್ಥೈರ್ಯಕ್ಕೆ ಕಾರಣವಾಗುವುದು. ಯಾವ ರೀತಿಯಲ್ಲಿ ಪೂರ್ವ ಯುಗಗಳಲ್ಲಿ ಎಲ್ಲರೂ ಎಲ್ಲಾ ವೇದಶಾಖೆಗಳನ್ನೂ ಅಧ್ಯಯನ ಮಾಡುತ್ತಿದ್ದು, ಕಲಿಯುಗಾರಂಭದಲ್ಲಿ ವೇದವ್ಯಾಸರು "ದೃಷ್ಟ್ವಾ ಪುಂಸೋಽಲ್ಪಮೇಧಸಃ" ಮುಂದೆ ಸಾಮರ್ಥ್ಯ ಕಡಿಮೆಯಾಗುವುದನ್ನು ತಿಳಿದು ಪ್ರಾಧಾನ್ಯೇನ ಒಂದೊಂದು ಶಾಖಾಧ್ಯಯನದ ವ್ಯವಸ್ಥೆಯನ್ನು ವಿಂಗಡಿಸಿದರೋ ಅದೇ ರೀತಿಯಾಗಿ ಶ್ರೀ ಭಗವತ್ಪಾದರು ಸಮಾಜದ ಆಡಳಿತೆಯ ಆಚಾರ್ಯತ್ವವನ್ನು ನಿರ್ಗುಣ ಬ್ರಹ್ಮವಿದ್ಯಾ ತತ್ಪರವಾದ ಆಶ್ರಮದಲ್ಲಿ ವ್ಯವಸ್ಥಾಪಿ-ಸಿರಬಹುದು. ಆದ್ದರಿಂದಲೇ 'ಷಟ್ಸ್ಥಾಪನಾಚಾರ್ಯ, ವ್ಯಾಖ್ಯಾನ ಸಿಂಹಾ-ಸನಾಧೀಶ್ವರ' ಇತ್ಯಾದಿ ಬಿರುದಾವಳಿಗಳು ಪೀಠಾಚಾರ್ಯರಿಗಿರುವುದು.

೨ ಇನ್ನೊಂದು ಕಾರಣವು ಶ್ರೀಮದಾಚಾರ್ಯರ 'ಮಠಾಮ್ನಾಯ' ಗ್ರಂಥ ದೊಳಗೆ ತಾನಾಗಿ ನಿರೂಪಿಸಿರುವುದು.

"ಧರ್ಮೋ ಮೂಲಂ ಮನುಷ್ಯಾಣಾಂ ಸ ಚಾಚಾರ್ಯಾವಲಂಬನಃ ।
ತಸ್ಮಾದಾಚಾರ್ಯ ಸುಮಣೇಃ ಶಾಸನಂ ಸರ್ವತೋಧಿಕಂ ॥
ಆಚಾರ್ಯ ಕ್ಷಿಪ್ತದಂಡಾಸು ಕೃತ್ವಾ ಪಾಪಾನಿ ಮಾನವಾಃ ।
ನಿರ್ಮಲಾಃ ಸ್ವರ್ಗಮಾಯಾನ್ತಿ ಖಲಃ ಸುಕೃತಿನೋ ಯಥಾ ॥

"ಶಾಸ್ತಾಚಾರ್ಯೋಪದೇಶೋ ದಂಡಶ್ಚ ಪಾಲ್ಯತೇ
ತಸ್ಮಾದ್ರಾಜಾಚಾರ್ಯೌ ನ ನಿಂದ್ಯೌ ನ ನಿಂದ್ಯೌ"
ಇತ್ಯೇವಂ ಮನುರಪ್ಯಾಹ ಗೌತಮೋಽಪಿ ವಿಶೇಷತಃ ।
ವಿಶಿಷ್ಟ ಶಿಷ್ಟಾಚಾರೋಽಪಿ ಮೂಲಾದೇವಪ್ರಸಿದ್ಧ್ಯತಿ ॥

ತಸ್ಮಾತ್ಸರ್ವಪ್ರಯತ್ನೇನ ಶಾಸನಂ ಸರ್ವಸಮ್ಮತಂ ।
ಆಚಾರ್ಯಸ್ಯ ವಿಶೇಷೇಣ ಔದಾರ್ಯಾಂತರ ಭಾಗಿನಃ ॥

ಧರ್ಮಪದ್ಧತಿರೇಷಾ ಹಿ ಜಗತಸ್ಥಿತಿಹೇತವೇ ।
ಸರ್ವ ವರ್ಣಾಶ್ರಮಾಣಾಂ ಹಿ ಯಥಾ ಶಾಸ್ತ್ರಂ ವಿಧೀಯತೇ ॥

ಕೃತೇ ವಿಶ್ವಗುರುರ್ಬ್ರಹ್ಮಾ ತ್ರೇತಾಯಾಮೃಷಿಸತ್ತಮಃ ।
ದ್ವಾಪರೇ ವ್ಯಾಸ ಏವಸ್ಯಾತ್ ಕಲಾವತ್ರ ಭವಾಮ್ಯಹಂ ॥
(ಭಗವತ್ಪಾದಕೃತ ಮಠಾಮ್ನಾಯ)

ಅರ್ಥಾತ್ ರಾಜಕೀಯ ಆಡಳಿತೆಗೊಳಪಟ್ಟ ವಿಷಯಗಳಲ್ಲಿ ಅಪರಾಧವಾದಾಗ ಪ್ರಜೆಗಳು ರಾಜಕೀಯ ದಂಡವನ್ನು ಹೊಂದಿ ನಿರ್ಮಲವಾಗುವಂತೆ ಧಾರ್ಮಿಕ, ಸಾಮಾಜಿಕ ಮೊದಲಾದ ಆಚಾರ್ಯರ ಆಡಳಿತೆಗೊಳಪಟ್ಟ ವಿಷಯಗಳಲ್ಲಿ ಅಪರಾಧವಾದಾಗ ಪ್ರಜೆಗಳು ಆಚಾರ್ಯ ಶಾಸನವನ್ನು ಪಡೆದು ಶುದ್ಧರಾಗುವರು. ರಾಜಾ ಆಚಾರ್ಯ ಇವರಿಬ್ಬರ ಕಣ್ಣುತಪ್ಪಿಸಿಕೊಂಡರೆ ಆಗ ಧರ್ಮರಾಜನು ಶಾಸ್ತಾ ಎಂದು ಹೇಳಿದೆ.

ಗುರುರಾತ್ಮವತಾಂ ಶಾಸ್ತಾ ರಾಜಾ ಶಾಸ್ತಾ ದುರಾತ್ಮನಾ ।
ಅಥ ಪ್ರಚ್ಛನ್ನ ಪಾಪಾನಾಂ ಶಾಸ್ತಾ ವೈವಸ್ವತೋ ಯಮಃ ॥

ಅತಃ ಆಚಾರ್ಯ ಶಾಸನವು ಧರ್ಮಶುದ್ಧಿಯಾಗಿ ಆತ್ಮೋನ್ನತಿಸಾಧನೆಗೆ ಆವಶ್ಯಕವಾಗಿರುವುದೆಂದು ಮನು ಮತ್ತು ಗೌತಮ ಇಬ್ಬರೂ ವಿಶೇಷತಃ ಹೇಳಿರುವರು. ಈ ಪ್ರಕಾರ ಸಮಾಜದ ಧರ್ಮಶುದ್ಧಿ ಆತ್ಮೋನ್ನತಿಗೋಸ್ಕರ ಅತ್ಯಾವಶ್ಯಕವಾದ ಆಚಾರ್ಯ ಶಾಸನವು ಅಧಿಕಾರಸಂಪನ್ನರಾದ ಯಾವ ಆಶ್ರಮದ ಆಚಾರ್ಯರದಾದರೂ ಆಗಬಹುದೆಂದಿದ್ದರೂ ಮೊದಲನೆ ಪ್ರಶ್ನದಲ್ಲಿ ಸಮರ್ಥಿತವಾದಂತೆ ಕ್ಲಪ್ತವಾದ ನಿರ್ಗುಣ ಬ್ರಹ್ಮವಿದ್ಯಾ ತತ್ಪರ ಸಂನ್ಯಾಸಾಶ್ರಮಸ್ಥರಾದ ಆಚಾರ್ಯಪೀಠದ್ದೇ ಆಗುವುದು ಉತ್ತಮವೂ ಸ್ಥಿರವೂ ನಿರ್ಬಾಧವೂ ಆಗಿರುವುದು.

೩. ಮೂರನೇ ಕಾರಣವು ಈ ಪ್ರಕಾರವಿರಬಹುದು– ಸಮಾಜದ ಆಡಳಿತ-ಗಳನ್ನು ನೋಡುವವರಿಗೆ ಶಾಸ್ತ್ರಾನುಸಾರ ನ್ಯಾಯ, ಆಚಾರ, ವ್ಯವಹಾರ,

ಪ್ರಾಯಶ್ಚಿತ್ತ ಸಂಬಂಧವಾದ ನಿರ್ಣಯಗಳನ್ನು ಆಗಿಂದಾಗ್ಯೆ ಮಾಡಬೇಕಾಗಿಬರುವದು. ಈ ಕಾರ್ಯಗಳಲ್ಲಿ ಶಾಸ್ತ್ರಜ್ಞರ ಅಧಿಕಾರವಿರುವುದು.

ರಾಗದ್ವೇಷ ವಿನಿರ್ಮುಕ್ತಾಃ ಸಪ್ತ ಪಂಚ ತ್ರಯೋಽಪಿ ವಾ ।
ಯತ್ರೋಪವಿಷ್ಟಾಃ ವಿಪ್ರಾಃ ಸ್ಯುಃ ಸಾ ಯಜ್ಞಸದೃಶೀ ಸಭಾ ॥
ದಶಾವರಾವಾ ಪರಿಷತ್ ಯಂ ಧರ್ಮಂಪರಿಕಲ್ಪಯೇತ್ ।
ತ್ರ್ಯವರಾವಾಪಿ ವೃತ್ತಸ್ಥಾಸ್ತಂಧರ್ಮಂ ನ ವಿಚಾಲಯೇತ್ ॥
ಏಕೋಽಪಿ ವೇದವಿದ್ಧರ್ಮಂ ಯಂ ವ್ಯವಸ್ಯೇದ್ದ್ವಿಜೋತ್ತಮಃ ।
ಸವಿಜ್ಞೇಯಃ ಪರೋಧರ್ಮೋನಾಜ್ಞಾನಾ ಮುದಿತೋಽಯುತೈಃ ॥

ಇತ್ಯಾದಿ ರೀತ್ಯಾ ವಿದ್ವತ್ ಪರಿಷದಾಗಲೀ, ಏಕೋಽಪಿ ವೇದಶಾಸ್ತ್ರಜ್ಞ ವಿದ್ವಾನ್ ಆಗಲೀ ರಾಗದ್ವೇಷ ಬಿಟ್ಟು ನಿರ್ಣಯ ಮಾಡುವವರಾಗಬೇಕೆಂದಿರುವುದು. ಇತರಾಶ್ರಮದಲ್ಲಿರುವವರು ಪುತ್ರ, ಮಿತ್ರ, ಕಲತ್ರ, ಬಂಧು, ಬಾಂಧವ ಮೊದಲಾದ ಸಂಬಂಧಗಳ ಕಾರಣ ಚತುರ್ಥಾಶ್ರಮದವರಿಗಿಂತ ಹೆಚ್ಚು ದಾಕ್ಷಿಣ್ಯಕ್ಕೂ ಪಕ್ಷಪಾತಕ್ಕೂ ಅವಸರವುಳ್ಳವರಾಗುವುದು ಸಹಜವಾದದ್ದು. ಇತರ ಆಶ್ರಮಗಳಲ್ಲಿ ನಿರ್ಗುಣ ಬ್ರಹ್ಮವಿದ್ಯಾಧಿಕಾರಿಗಳಂತೆ ರಾಗ ದ್ವೇಷ ಬಿಟ್ಟು ನಿಷ್ಪಕ್ಷಪಾತ ಕಾರ್ಯಕರ್ತರಾಗಲಾರರೆಂದು ಅರ್ಥವಲ್ಲ. ಚತುರ್ಥಾಶ್ರಮಸ್ಥ ವಿದ್ವಾನ್ ಆಚಾರ್ಯರು ಅಂಥಾ ಸ್ಥಿತಿಗೆ ಹೆಚ್ಚು ಅವಸರವುಳ್ಳವರಾದವರೆಂದು, ಅಂಥಾ ಆಚಾರ್ಯರ ಪಥಪ್ರದರ್ಶನದೊಳಗೆ ಅವಶ್ಯವಿದ್ದಲ್ಲಿ ವಿದ್ವತ್ ಪರಿಷತ್ತೂ ಸೇರಿ, ಇಲ್ಲದಲ್ಲಿ ಏಕೋಽಪಿವಿದ್ವಾನ್ ಆಚಾರ್ಯರೇ ನಿರ್ಣಯಗಳನ್ನು ಮಾಡಿ ಆಡಳಿತಗಳನ್ನು ಸಮಾಜೋಪಕಾರಕ್ಕಾಗಿನಡೆಸುವದು ಆಚಾರ್ಯಪೀಠಸ್ಥಾಪನೆಯ ಒಂದು ಕಾರಣವಾಗಿರಬಹುದು.

ಚತ್ವಾರೋ ವೇದಧರ್ಮಜ್ಞಾಃ ಪರ್ಷತ್ ತ್ರೈವಿದ್ಯಮೇವ ವಾ ।
ಸಾ ಬ್ರೂತೇ ಯಂ ಸಧರ್ಮಃ ಸ್ಯಾದೇಕೋವಾಧ್ಯಾತ್ಮವಿತ್ತಮಃ ॥

ಎಂಬ ಯಾಜ್ಞವಲ್ಕ್ಯ ವಚನವೂ ಆತ್ಮವಿದ್ಯಾಧಿಕಾರ ಸಂಪನ್ನನಾದ ಧರ್ಮಶಾಸ್ತ್ರಜ್ಞನನ್ನೊಬ್ಬನನ್ನು ನಿರ್ಣಾಯಕನೆಂದು ಹೇಳಿ, ಆತನು ಧರ್ಮನಿರ್ಣಯ ಕಾರ್ಯದಲ್ಲಿ ಬೇರೆಯವರಿಗಿಂತ ಹೆಚ್ಚು ಯೋಗ್ಯನಾದವನೆಂದು ಮೇಲೆ ಹೇಳಿದ ಕಾರಣವನ್ನು ಸಮರ್ಥಿಸುತ್ತದೆ.

೪. ನಾಲ್ಕನೇ ಕಾರಣವೇನೆಂದರೆ ಭಗವತ್ಪಾದ ಶಂಕರಾಚಾರ್ಯರ ಪೂರ್ವದಲ್ಲಿ ಸಮಾಜಗಳಲ್ಲಿಲ್ಲಾ ವೈದಿಕ ಅಥವಾ ಅವೈದಿಕ ಅನೇಕ ಮತಮತಾಂತರದ ಆಚಾರ್ಯತ್ವ ಮಾಡುವವರು ಸಮಾಜವನ್ನೇ ಅನೇಕ ಸತ್ ಅಸತ್ ಪಂಥಗಳಲ್ಲಿ ಒಯ್ದುಕೊಂಡು ಪ್ರಾಮಾಣಿಕ ಸನ್ಮಾರ್ಗದಲ್ಲಿ ಭ್ರಾಂತಿಯನ್ನುಂಟು ಮಾಡಿದ್ದರು.

ಎಷ್ಟೋ ಜನರು ದಂಭದಿಂದ ಸಿದ್ಧರೆಂದೂ ತತ್ತ್ವಜ್ಞರೆಂದೂ ಕಾಣಿಸಿಕೊಂಡು ಶಿಷ್ಯಸಂಗ್ರಹ ಮಾಡಿ ಸ್ವಾರ್ಥಸಾಧನ ಮಾಡುವವರು ಯಾವಾಗಲೂ ಜಗದೊಳಗೆ ಆಗುತ್ತಿರುತ್ತಾರೆ. ಅಂಥಾ ಧೂರ್ತರನ್ನು ಸ್ವಯಂ ತಿಳಿದು ಪರೀಕ್ಷಿಸಿ ನಿರ್ಣಯಿಸಲು ಸಮಾಜದ ಪ್ರತ್ಯೇಕ ವ್ಯಕ್ತಿಯೂ ಸಾಕಷ್ಟು ತತ್ತ್ವಜ್ಞನೂ ಚಾತುರ್ಯವುಳ್ಳವನೂ ಸ್ವಯಂ ಪರೀಕ್ಷಿಸಿ ನಿರ್ಣಯಿಸುವುದಕ್ಕೆ ಲೋಕಯಾತ್ರೆಯೊಳಗೆ ವ್ಯಾಸಕ್ತನಾಗಿದ್ದು ಸಾಕಷ್ಟು ಸಮಯವುಳ್ಳವನೂ ಆಗಿರುವುದಿಲ್ಲ. ಅಂಥಾ ಸ್ಥಿತಿಯಲ್ಲಿ ಪಥಭ್ರಷ್ಟನಾಗುವ ಅವ್ಯವಸ್ಥೆಯುಂಟಾಗಬಾರದೆಂದು ಯೋಚಿಸಿ ಶ್ರೀ ಭಗವತ್ಪಾದರು ''ನಾರಾಯಣಂ ಪದ್ಮಭುವಂ'' ಇತ್ಯಾದಿ ಪರಂಪರೆಯಿಂದ ಪ್ರಾಪ್ತವಾದ ವೈದಿಕ ಪರಂಪರೆಯ ಪ್ರಾಮಾಣಿಕತ್ವವನ್ನು ಸರ್ವಪ್ರಕಾರಗಳಿಂದ ಎಲ್ಲಾ ದೇಶದ ವಿದ್ವಾಂಸರುಗಳಲ್ಲಿಯೂ ಸ್ಥಿರಪಡಿಸಿ ಆ ಪರಂಪರೆಯ ಆಚಾರ್ಯತ್ವವನ್ನು ಪೀಠಸ್ಥಾಪನೆಯಿಂದ ದೃಢಪಡಿಸಿದರು ಆದರಿಂದ ಸುಜ್ಞ, ಅಜ್ಞ, ಎಲ್ಲಾ ವ್ಯಕ್ತಿಗಳಿಗೂ ಈ ಆಚಾರ್ಯಪೀಠಗಳಿಂದ ಹೊರಟ ಆಚಾರ್ಯತ್ವವನ್ನು ಅಪ್ರಾಮಾಣಿಕವೆಂದು ತಿಳಿಯಬಹುದಾಗಿದೆ.

ಈ ರೀತಿಯಾಗಿ ಸ್ಥಾಪಿತವಾದ ಆಚಾರ್ಯಪೀಠವು ಆಯಾ ಕಾಲದಲ್ಲಿ ತನ್ನ ಅಧಿಕೃತ ಸಮಾಜದೊಳಗಿನ ವ್ಯಕ್ತಿಯಾಗಲೀ, ಹೊರಗಿನ ವ್ಯಕ್ತಿಯಾಗಲೀ ಮೇಲೆ ಹೇಳಿದ ಈ ಆಚಾರ್ಯಪೀಠದ ಪರಂಪರೆಗೆ ಅಸಮ್ಮತವಾದ ಗುರುತ್ವವನ್ನು ಸಮಾಜ-ದೊಳಗೆ ಶ್ರದ್ಧಾಲು ಜನಗಳ ಮೇಲೆ ಪ್ರಭಾವಿಸಿ ಸ್ಥಾಪಿಸತೊಡಗಿದರೆ ಅದರ ನಿವಾರಣೆ ಮಾಡುವದೂ ಆ ನಿವಾರಣೆಯನ್ನನುಸರಿಸಿ ಸಮಾಜವು ನಡೆಯುವದೆಂಗೂ ಪೀಠಸ್ಥಾಪನೆಯ ಉದ್ದೇಶವು ಕಂಡು ಬರುವದು.

೫. ಇನ್ನೂ ಒಂದು ಕಾರಣವನ್ನು ಊಹಿಸಬಹುದಾಗಿದೆ. ಸಂನ್ಯಾಸಾಶ್ರಮವು ಅತ್ಯಂತ ಕಲಿಕಾಲಕ್ಕೆ ನಿಷಿದ್ಧವಾಗಿದ್ದರೂ

"ಯಾವದ್ವರ್ಣ ವಿಭಾಗೋಽಸ್ತಿ ಯಾವದ್ವೇದಃ ಪ್ರವರ್ತತೇ ।
ಸಂನ್ಯಾಸಂಚಾಗ್ನಿಹೋತ್ರಂ ಚ ತಾವತ್ಕುರ್ಯಾತ್ ಕಲೌ ಯುಗೇ ॥"
(ದೇವಲಃ)

ಎಂಬುದಾಗಿ ವೇದಾಧ್ಯಯನ ವರ್ಣ ವಿಭಾಗಗಳಿರುವ ತನಕ ಅದು ಶಾಸ್ತ್ರಾನು-ಮತವಾಗಿರುವದು. ಆದರೆ ಭಗತ್ಪೂಜ್ಯಪಾದರ ಕಾಲದಲ್ಲಿ ಸಮಾಜವು ಅದನ್ನು ಅಶಾಸ್ತ್ರೀಯವೆಂದು ಭ್ರಮಿಸಿ ನಿಷೇಧಿಸಲಾರಂಭಿಸಿತು. ದೊಡ್ಡ ದೊಡ್ಡ ಶಾಸ್ತ್ರಜ್ಞರೇ ಈ ರೀತಿಯಾಗಿ ಭ್ರಾಂತಿ ಹೊಂದಿದ ಬಳಿಕ ಈ ಚತುರ್ಥಾಶ್ರಮ ಪರಂಪರೆಯು ಅದನ್ನು ದೀರ್ಘಕಾಲ ರಕ್ಷಿತವಾಗಿರುವದು ಹೇಗೆ ಎಂದು ಆಲೋಚಿಸಿಯೂ ಶ್ರೀ ಶಂಕರಾಚಾರ್ಯ ಪೀಠಗಳು ಸ್ಥಾಪಿತಗಳಾಗಿರಬಹುದು. ಈ ಪರಂಪರಾ ರಕ್ಷಣದಿಂದ

ವೇದಾಂತಾದಿ ಶಾಸ್ತ್ರಾಧ್ಯಯನ ಪರಂಪರೆಯೂ ಶ್ರವಣ, ಮನನ, ನಿಧಿಧ್ಯಾಸರೂಪ ಸಂನ್ಯಾಸ ಧರ್ಮವೂ ಸಂನ್ಯಾಸಿಗಳ ನಿಮಿತ್ತವಾಗಿ ಉಂಟಾಗುವ ಲೋಕಕಲ್ಯಾಣಗಳೂ ಸುದೀರ್ಘ ಕಾಲದ ವರೆಗೂ ಲಭಿಸಬಹುದು.

ಈ ಪ್ರಕಾರ ಇನ್ನೂ ಅನೇಕ ಕಾರಣಗಳು ವಿದ್ವಾಂಸರಿಂದ ಊಹಿಸಲ್ಪಡ ಬಹುದು. ಏವಂ ಚ ಸಮಾಜ ಹಿತಕಾರಕವಾದ ಬೇರೆ ಎಲ್ಲಾ ಪದಗಳಂತೆ ಇದೂ ಅತಿಶಯವಾಗಿ ರಕ್ಷಣೀಯವಾಗಿರುವುದೆಂದು ಸಿದ್ಧವಾಗುವುದು.

ಈ ರೀತಿಯಲ್ಲಿ ಆಚಾರ್ಯ ಪೀಠ ಸ್ಥಾಪನೆ ಮಾಡಿಯೂ ಆ ಪೀಠದಲ್ಲಿ ಆರೂಢರಾದವರು ಕೆಲವರು ಯೋಗ್ಯರಾಗಿ ಬಾರದೆಹೋದರೆ ಅದರಿಂದಲೂ ಅನರ್ಥಗಳಾಗುತ್ತಿವೆಯೆಂದು ಆಕ್ಷೇಪಿಸುವವರಿಗೆ, ಅದು ವ್ಯಕ್ತಿಯ ದೋಷವೇ ಹೊರತು ವ್ಯವಸ್ಥೆಯ ದೋಷವಲ್ಲವೆಂದು ತಿಳಿಯಬಹುದಾದ ಉತ್ತರವನ್ನು ಶ್ರೀ|| ಕರಪಾತ್ರೀ ಸ್ವಾಮಿ ಮೊದಲಾದವರು ಸಹ ಕೊಡುತ್ತಿರುವುದು ನ್ಯಾಯವಾಗಿದೆ. ಆಚಾರ್ಯಪೀಠದ ವ್ಯಕ್ತಿಯೊಂದೆ ಏನು? ಮಾತಾ, ಪಿತಾ, ಅಧ್ಯಾಪಕ, ಗುರು, ಪುರೋಹಿತ, ರಾಜಕೀಯ ಪದಾಧಿಕಾರಿ, ರಾಜ ಮೊದಲಾದ ಎಲ್ಲಾ ಪದಗಳಲ್ಲೂ ಅಯೋಗ್ಯ ವ್ಯಕ್ತಿಗಳು ಪ್ರಜಾತಂತ್ರ ಮೊದಲಾದ ವರ್ತಮಾನ ಪದ್ಧತಿಗಳಲ್ಲೂ ಕಾಣುವುದಿಲ್ಲವೇ? ಹಾಗೆಂದು ಈ ಎಲ್ಲಾ ಪದಗಳನ್ನು ಲೋಪಿಸುವುದಾಗಲೀ, ತಿರಸ್ಕರಿಸುವುದಾಗಲೀ, ವ್ಯವಸ್ಥೆಯನ್ನು ಇಲ್ಲಗೊಳಿಸುವುದಾಗಲೀ ಸಾಧ್ಯವಿದೆಯೆ? ಶಿಷ್ಯರಾಗಿಯೂ ಪ್ರಜೆಗಳಾಗಿಯೂ ಸಂತತಿಗಳಾಗಿಯೂ ಇರುವವರು ಅಯೋಗ್ಯರಾಗಿ-ರುವುದಿಲ್ಲವೆ? ಆಕ್ಷೇಪಕರು ತಮ್ಮ ಕರ್ತವ್ಯಾನುಷ್ಠಾನದ ಕಡೆಗೂ ನೋಡಿದರೆ ತುಂಬಾ ಸಮಾಧಾನವು ಕಂಡು ಬರಬಹುದೆಂದು ವೈದ್ಯ ಗ|| ಸ|| ಪಾಟೀಲ, ಬರಿಗೆ ಎಂಬವರು ಬರೆದಿರುವ ಉತ್ತರವೂ ("ಮಠಾಧಿಪತಿಗಳೂ, ಸಮಾಜದ ಹೊಣೆಯೂ" ಎಂಬ ಲೇಖ) ಈ ವಿಷಯದಲ್ಲಿ ಮನನ ಮಾಡತಕ್ಕದ್ದಾಗಿದೆ. ಆದ್ದರಿಂದ ಆಚಾರ್ಯ-ಪದವಾಗಲೀ, ಇತರ ಪದವಾಗಲೀ ಅದರಲ್ಲಿ ಆರೂಢನಾಗಿರುವ ಅಯೋಗ್ಯ ವ್ಯಕ್ತಿಗಳನ್ನು ಸಾಧಾರಣವಾದ ಅಯೋಗ್ಯತೆಗಳಾದರೆ, ಅರ್ಥಾತ್ ಶಾಸ್ತ್ರಗಳಲ್ಲಿ ಪಾತಿತ್ಯವನ್ನೂ, ಅವ್ಯವಹಾರ್ಯತೆಯನ್ನೂ ಹೇಳಿರುವದಕ್ಕಿಂತ ಲಘುವಾದ ಅಯೋಗ್ಯತೆಗಳಾದರೆ ಸ್ವಲ್ಪಕಾಲ ಯೋಗ್ಯ ಸಹಾಯಕ ದ್ವಾರಾ ಸುಧಾರಿಸಿಕೊಂಡು ಯೋಗ್ಯತೆಯನ್ನು ಹೆಚ್ಚಿಸುತ್ತಾ ನಡೆದು ಮುಂದೆ ಹೆಚ್ಚಿನ ಯೋಗ್ಯತೆಯನ್ನು ಹೊಂದಿದ ವ್ಯಕ್ತಿಯನ್ನು ಆ ಪದದೊಳಗೆ ತರುವ ಪ್ರಯತ್ನ ಮಾಡುವದೇ ಎಲ್ಲಾ ಪದಗಳ ವಿಷಯದಲ್ಲೂ ಸಮಾಧಾನವಾಗಿರುವದು. ಪಾತಿತ್ಯಾದ್ಯಾಪಾದಕ ಅಯೋಗ್ಯತೆಗಳಾದರೆ ಮಾತ್ರ ಉಚಿತ ನಿವೃತ್ತಿಯನ್ನು ಶಾಸ್ತ್ರಜ್ಞ ವಿದ್ವತ್ ಸಮಾಜದ ನಿರ್ಣಯದಂತೆ ಮಾಡುವದು ಎಲ್ಲರ ಕರ್ತವ್ಯವಾಗಿದೆ.

ಹೀಗೆ ಹೇಳಿದರೆ ಅದರ ಅರ್ಥ ಉತ್ತರದಾಯಿತ್ವವುಳ್ಳ ಪದಗಳಲ್ಲಿ ಅಯೋಗ್ಯ ವ್ಯಕ್ತಿಗಳಿರಬೇಕೆಂದು ಆಗುವುದಿಲ್ಲ.

ಶುಚಿರ್ಜಿತೇಂದ್ರಿಯೋ ವೇದ ವೇದಾಂಗಾದಿ ವಿಶಾರದಃ |
ಯೋಗಜ್ಞಃ ಸರ್ವತಂತ್ರಾಣಾಮಸ್ಮದಾಸ್ಥಾನಮಾಪ್ನುಯಾತ್ ||
ಉಕ್ತಲಕ್ಷಣಸಂಪನ್ನಃ ಸ್ಯಾಚ್ಚೇನ್ಮತ್ಪೀಠ ಭಾಗ್ಭವೇತ್ |
ಅನ್ಯಥಾರೂಢಪೀಠೋಽಪಿ ನಿಗ್ರಹಾರ್ಹೋ ಮನೀಷಿಣಾಂ ||

(ಮಠಾಮ್ನಾಯ)

ಎಂಬುದಾಗಿ ಸ್ವಯಂ ಭಗವತ್ಪಾದರು ಹೇಳಿರುವರು. ಆದ್ದರಿಂದಲೇ ಎಷ್ಟೋ ಪೀಠಸ್ಥರು ಈ ಎಲ್ಲಾ ಯೋಗ್ಯತೆಗಳನ್ನೂ ಹೆಚ್ಚಿಸಿಕೊಳ್ಳುವುದರಲ್ಲಿ ಯಾವಾಗಲೂ ತತ್ಪರರಾಗಿ ಯತ್ನಿಸುತ್ತಿರುವುದು ಕಂಡುಬರುವುದು. ತದನುಸಾರವಾಗಿ ಅವರ ದಿಗ್ದರ್ಶನವನ್ನನುಸರಿಸಿ ಸಮಾಜವು ತನ್ನ ಯೋಗ್ಯತೆಯನ್ನು ಹೆಚ್ಚಿಸುವ ಪ್ರಯತ್ನ ದಲ್ಲಿ ಅನುಕೂಲವಾಗಿರಬೇಕಾದ್ದು - ಎಂಬ ಉತ್ತರವೇ ಇಂಥಾ ಆಕ್ಷೇಪಗಳಿಗೆ ಎಲ್ಲಾ ಪದಗಳ ಪರವಾಗಿ ಎಲ್ಲರಿಗೂ ಕೊಡಬೇಕಾಗಿರುವದು.

ಇನ್ನೀಗ ಇಷ್ಟೆಲ್ಲಾ ವಿಚಾರಗಳಿದ್ದರೂ ಸರ್ವಸಂಗ ಪರಿತ್ಯಾಗವನ್ನು ಮಾಡಿ ಸಂನ್ಯಸ್ತರಾದವರಿಗೆ ಈ ಆಚಾರ್ಯಪೀಠದ ಎಲ್ಲಾ ವೈಭವ ಪ್ರಪಂಚವು ಶಾಸ್ತ್ರ ಸಮ್ಮತವೇ ? ಎಂಬುದನ್ನು ಆಲೋಚಿಸುವಾ.

ಸಂನ್ಯಾಸವೆಂದು ಒಂದೇ ಹೆಸರಿನಲ್ಲಿ ಅನೇಕ ಭೂಮಿಕಾಭೇದದಿಂದ ಒಳಭೇದ-ಗಳುಂಟಾಗಿವೆ. ವಿವಿದಿಷಾ ಸಂನ್ಯಾಸ, ವಿದ್ವತ್ಸಂನ್ಯಾಸವೆಂದೂ ಪುನಃ ಕುಟೀಚಕ, ಬಹೂದಕ, ಹಂಸ, ಪರಮಹಂಸವೆಂದೂ ಆತುರಸಂನ್ಯಾಸವೆಂದೂ ಇನ್ನೂ ಅನೇಕ ಭೇದಗಳೂ, ಆಯಾ ಭೇದಗಳ ವಿಧಿನಿಷೇಧಗಳೂ ಬೇರೆಬೇರೆಯಾಗಿ ಶಾಸ್ತ್ರದೊಳಗೆ ಬಂದಿರುವದನ್ನು ವಿವೇಚಿಸದೆ, ಸಾಮಾನ್ಯ ವಚನಗಳನ್ನೂ ಎಲ್ಲಾ ತರದ ಸಂನ್ಯಾಸಿ-ಗಳಿಗೂ ಸಮಾನವೆಂದು ತಿಳಿದು ಆಕ್ಷೇಪಿಸುವದು ತಪ್ಪಾಗುವದು. ವಿಧಿನಿಷೇಧಗಳು ಬೇರೆ ತರದವಾಗಿವೆ.

ಯತಿಗಳಾದ ಬಳಿಕ ಆಚಾರ್ಯತ್ವವನ್ನು ಮಾಡುವ ಅಧಿಕಾರವಿಲ್ಲವೆಂದಾದರೆ ಸಂಪ್ರದಾಯ ಪರಂಪರೆಯ ರಕ್ಷಣೆಯು ಆಗುವ ಮಾರ್ಗವೇನು ?

ಶಿವಪುರಾಣ ಕೈಲಾಸ ಖಂಡ ಸ॥ ೧೮, ಶ್ಲೋ॥ ೭ ರಲ್ಲಿ--.

ಗುರುತ್ವಂ ಕಥನೋಽನೇಷಾಂ ಯತೀನಾಂ ಭಾವಿತಾತ್ಮನಾಂ |
ಜೀವಾನಾಂ ಭೋಗಮೋಕ್ಷಾದಿ ಸಿದ್ಧಿಃ ಸಿದ್ಧ್ಯತಿ ಯಸ್ತತಾತ್ ||

ಎಂದು ಪ್ರಶ್ನೆಮಾಡಿ ಉತ್ತರವಾಗಿ ಯೋಗಪಟ್ಟದ ವಿಧಿಯನ್ನು ಹೇಳಿದ್ದಾರೆ.

ಯೋಗಪಟ್ಟಂ ಪ್ರವಕ್ಷ್ಯಾಮಿ ಗುರುತ್ವಂ ಯೇನ ಜಾಯತೇ । ಇತ್ಯಾದಿ ।

ಯೋಗಪಟ್ಟ ವಿಧಿಯೊಳಗೆ ಆಶ್ರಮಕೊಡುವ ಗುರುವು ಶಿಷ್ಯನಾದ ಸಂನ್ಯಾಸಿಗೆ ಗುರುತ್ವವನ್ನು ಕೊಟ್ಟು ವ್ಯಾಖ್ಯಾನ ಸಿಂಹಾಸನದಲ್ಲಿ ಕೂರಿಸಿ, ಎಲ್ಲಾ ಅಧಿಕಾರಗಳಿಂದ ಅಧಿಕೃತನನ್ನಾಗಿ ಮಾಡುತ್ತಾನೆ.

ತತಶ್ಚ ದೇಶಿಕಃ ಪ್ರೀತ್ಯಾ ನಾಮಶ್ರೀಪಾದ ಸಂಜ್ಞಿತಂ ।
ಛತ್ರಂ ಚ ಪಾದುಕಾಂ ದದ್ಯಾತ್ ಪೂರ್ವಾಕಲ್ಪ ವಿಕಲ್ಪಿತಂ ॥
ವ್ಯಾಖ್ಯಾಕೃತ್ವಂ ಚ ಕರ್ಮಾದಿ ಗುರ್ವಾಸನ ಪರಿಗ್ರಹಂ ।
(ಅ॥ ೧೯, ಶ್ಲೋ॥ ೪೭.)

ಶಿವಪುರಾಣದೊಳಗೆ ಅನ್ಯತ್ರ ಹೇಳಿದೆ :—
ಅಥ ತಸ್ಮೈ ಗುರುರ್ದದ್ಯಾತ್ ರಾಜೋಪಕರಣಾನ್ಯಪಿ ।
ಆಚಾರ್ಯಪದವೀಂ ಪ್ರಾಪ್ತೋ ರಾಜ್ಯಂಚಾಪಿ ಯತೋರ್ಹತಿ ॥
ಅಥಾನುಶಾಸನಂ ಕುರ್ಯಾತ್ ಪೂರ್ವೈರಾಚರಿತಂ ಯಥಾ ।
ಯಥಾಚ ಶಿವಶಾಸ್ತ್ರೋಕ್ತಂ ಯಥಾ ಲೋಕೇಷು ಪೂಜ್ಯತೇ ॥
ಅಗ್ನಿಪುರಾಣದೊಳಗೆ ಶಿಬಿಕಾ ಮುಕುಟ ಆದಿಗಳೂ ವಿಧಿಸಲ್ಪಟ್ಟಿವೆ.

ಉಷ್ಣೀಷಂ ಯೋಗಪಟ್ಟಂ ಚ ಮುಕುಟಂ ಕರ್ತರೀಂ [1]ಘಟೀಂ ।
ಅಕ್ಷಮಾಲಾಂ ಪುಸ್ತಕಾದಿ ಶಿಬಿಕಾದ್ಯಾಧಿಕಾರಿಕಂ ॥
ದೀಕ್ಷಾ ವ್ಯಾಖ್ಯಾ ಪ್ರತಿಷ್ಠಾದ್ಯಂ ಜ್ಞಾತ್ವಾದ್ಯ ಪ್ರಭೃತಿ ತ್ವಯಾ ।
ಸುಪರೀಕ್ಷ್ಯ ವಿಧಾತವ್ಯಮಾಜ್ಞಾಂಸಂಶ್ರಾವಯೇದಿತಿ ॥
(ಅಗ್ನಿ ಪು॥ ಅ॥ ೯, ಶ್ಲೋ॥ ೧೧-೧೧)

ಈಶಾನ ಗುರುದೇವ ಪದ್ಧತಿಯೊಳಗೂ ದೀಕ್ಷಾಧಿಕಾರದಲ್ಲಿ—
[1]ತತಃ ಸಂಯೋಜಯೇಚ್ಛಿಷ್ಯಮಧಿಕಾರೇಣ ಸಾಧನೈಃ ।
[2]ಕಟಕಂಚೋತ್ತರೀಯಂ ಚ ಛತ್ರಂ ಚಾಮರಪಾದುಕೇ ॥
ಪುಸ್ತಕಂ ಚಾಕ್ಷಸೂತ್ರಂಚ [3]ಭೃಂಗಾರಂ ಯಾನವಾಹನೇ ।
ಅನ್ಯಚ್ಚ ರಾಜಚಿಹ್ನಂ ಯತ್ಸರ್ವಮರ್ಹತಿ ಸಾಧಕಃ ॥
ಆಚಾರ್ಯಸ್ಯಾಪಿ ತುಲ್ಯೋಽಯಮಧಿಕಾರಃ ಪರಿಚ್ಛದೇ ।
ವಿಶೇಷಸ್ತಸ್ಯಮುಕುಟ ಉಷ್ಣೀಷಂ ಕರಣೀ ತಥಾ ॥
(ಸಾಧಕ ದೀಕ್ಷಾಧಿಕಾರ ಉತ್ತರಾರ್ಧ ೧೯ ಪಟಲ)

---

1. ಕೌಪೀನ 2. ಕಡಗ 3. ಚಿನ್ನದ ಗಿಂಡಿ

ಈ ರೀತಿಯಾಗಿ ಆಚಾರ್ಯಪದವಿಯಲ್ಲಿ ಲೋಕಕಲ್ಯಾಣವನ್ನು ಮಾಡುವದ-ಕ್ಕಾಗಿರುವ ಸಂನ್ಯಾಸಿಗಳ ವಿಧಿನಿಷೇಧದ ವಿಶೇಷ ವಿಧಿಗಳಿರುತ್ತವೆ. ಈ ವೈಭವಗಳೆಲ್ಲಾ ಪೀಠಾಧೀಶರಿಗೆ ತಮ್ಮ ಆಸಕ್ತಿ ನಿಮಿತ್ತವಾಗಿರದೆ, ತಮ್ಮ ಜ್ಞಾನಯೋಗ ಮತ್ತು ಶಿಷ್ಯ-ಸಮುದಾಯದ ಕಲ್ಯಾಣಸಾಧನೆಗಾಗಿ ಇರುವವು. ಶ್ರೀಭಗವತ್ಪಾದರು ಆಚಾರ್ಯ ಪದವಿಯ ವೈಭವವನ್ನು ಕುರಿತು ಹೇಳಿರುವದೇನೆಂದರೆ—

ಕೇವಲಂ ಧರ್ಮಮುದ್ದಿಶ್ಯ ವಿಭವೋ ಬಾಹ್ಯಚೇತಸಾಂ ।
ವಿಹಿತಶ್ಚೋಪಕಾರಾಯ ಪದ್ಮಪತ್ರನಯಂ ವ್ರಜೇತ್ ॥

(ಮಠಾಮ್ನಾಯ)

ಅರ್ಥಾತ್ ಬಹಿರ್ಮುಖರಾದ ಶಿಷ್ಯರ ಉಪಕಾರಾರ್ಥ ವೈಭವವು ಧರ್ಮೋ-ದ್ದೇಶದಿಂದಿರುವದಲ್ಲದೆ ಬೇರೆ ಕಾರಣವಿಲ್ಲ. ಪೀಠಸ್ಥರು ಪದ್ಮಪತ್ರಗಲ್ಲಿ ಜಲದಂತೆ ಇರಬೇಕು. ಅಂದರೆ ಎಲ್ಲಾ ವ್ಯವಹಾರಗಳನ್ನು ಯೋಗ್ಯವಾಗಿ ನಡೆಸಿಕೊಂಡೂ ಅಲಿಪ್ತರಾಗಿರಬೇಕೆಂದು ತಾತ್ಪರ್ಯವು.

ಜ್ಞಾನ ವೈರಾಗ್ಯ ಪ್ರಧಾನವಾದ ಜೀವನವು— ೧. ತನ್ನ ತನ್ನ ಶ್ರೇಯಃ ಸಾಧನಕ್ಕಾಗಿ, ೨. ಕಿಂವಾ ತನ್ನ ಶ್ರೇಯಸ್ಸನ್ನು ಸಾಧಿಸಿಕೊಂಡು ಲೋಕಕಲ್ಯಾಣ ಸಾಧನಕ್ಕಾಗಿ, ೩. ಅಥವಾ ಪರಮ ಅಂತರ್ಮುಖತೆಯ ಉತ್ಕೃಷ್ಟ ಪರಿಪಾಕವಾದಾಗ ದೇಹಭಾವವೂ ಇಲ್ಲದ ಅವಧೂತ ಸ್ಥಿತಿಯಲ್ಲಾಗಿ ವೆಚ್ಚವಾಗುವುದು ತಿಳಿದು-ಬರುತ್ತದೆ. ಆಚಾರ್ಯಪೀಠದಲ್ಲಿರುವವರ ಮೇಲೆ ಈ ಪೈಕಿ ತಮ್ಮ ಶ್ರೇಯಸ್ಸಾಧನೆ ಯೊಂದಿಗೆ ಲೋಕ ಕಲ್ಯಾಣವನ್ನು ಚಿಂತಿಸುವ ಕಾರ್ಯಭಾರವು ಸ್ಥಾಪಿತವಾಗಿದೆ. ಇಷ್ಟು ದೊಡ್ಡ ಭಾರವನ್ನು ನಡೆಸಲು ಆವಶ್ಯಕವಾದ ಸಾಮಗ್ರಿಗಳಾದ್ದರಿಂದ ಶಾಸ್ತ್ರಸಮ್ಮತವಾಗಿವುದು ನ್ಯಾಯವೆಂದು ಯಾರಿಗೂ ತಿಳಿದುಬರಬಹುದು. ಆದ್ದರಿಂದ ಶ್ರೀ ಶಂಕರಾಚಾರ್ಯ ಪೀಠಸ್ಥಾಪನೆಗಳಾಗಿದ್ದು ಆಚಾರ್ಯ ಮತ್ತು ಶಿಷ್ಯರ ಸಹಯೋಗದಿಂದ ಮನುಷ್ಯಲೋಕದ ಎಲ್ಲಾ ವ್ಯವಹಾರಗಳ ಮುಖ್ಯ ಪ್ರಯೋಜನ-ವಾದ ಶ್ರೇಯಃಸಾಧನವೂ ಲೋಕಕಲ್ಯಾಣವೂ ನೀತಿಮತ್ತೆಯೂ ಮತ್ತು ಸಮಾಜ ಸಂಘಟನೆಯೂ ವೈದಿಕ ಮಾರ್ಗಾನುಸಾರವಾಗಿ ನಡೆಯುತ್ತಿರಬೇಕೆಂದು ಅವರ ಮಹತ್ತ್ವವಿರುವುದು.

* * *



ಹವ್ಯಕ ಮಂಡಲ

೩. ಸಮಾಜ ರಕ್ಷಣೆಯ ಆವಶ್ಯಕತೆ

ಒಂದೇ ಸಮಾನವಾದ ಧರ್ಮದಲ್ಲಿ ಅಧಿಕೃತವಾಗಿರುವ ಜನಾಂಗವು ಒಂದು ಸಮಾಜವೆಂದೆನಿಸಿಕೊಳ್ಳುವದು. "ಸಮಾಜೋಽಥ ಸಧರ್ಮಿಣಾಂ" ಎಂದು ಕೋಶ. ತದನುಸಾರವಾಗಿ ಶ್ರುತಿ, ಸ್ಮೃತಿ, ಸದಾಚಾರ ಪ್ರಮಾಣಗಳಿಂದ ಮೀಮಾಂಸಾ ನಿರ್ಣೀತವಾದ ಹಿಂದೂಧರ್ಮವೊಂದೇ ನಮಗೆಲ್ಲಾ ಸಮಾನವಾಗಿ ಇರುವ ಕಾರಣ, ನಾವು ಹಿಂದೂಗಳೆಲ್ಲಾ ಹಿಂದೂಸಮಾಜವೆಂದೆನಿಸಿಕೊಳ್ಳುವೆವು. ಸಮಾನ ಧರ್ಮದವರಾಗಿಲ್ಲದ ಕಾರಣ ಒಂದು ಸಂತೆಯೊಳಗೆ ಸೇರಿದ ಜನರಿಗೆಲ್ಲಾ ಒಂದು ಸಮಾಜವೆಂದು ಹೇಳುವುದಿಲ್ಲ. ಒಂದು ಸಮಾಜವು ಅನೇಕ ಜಾತಿಯವರು ಒಡಗೂಡಿ ಆದರೆ ವ್ಯಾಪಕ ಸಮಾಜವಾಗುವದು. ಒಂದೇ ಜಾತಿಯವರಾದರೆ ಸಮಾಜವು ಅಂತರ್ಗತ ಸಮಾಜವಾಗುವದು. ಹಿಂದೂ ಸಮಾಜ, ಶೈವ ಸಮಾಜ, ವೈಷ್ಣವ ಸಮಾಜ ಇತ್ಯಾದಿಗಳು ಕ್ರಮೇಣ ಹಿಂದೂಧರ್ಮ, ಶೈವಧರ್ಮ, ವೈಷ್ಣವ ಧರ್ಮ ಮೊದಲಾದ ಸಮಾನ ಧರ್ಮದವರಾಗಿದ್ದು ಅನೇಕ ಜಾತಿಯು ಒಡಗೂಡಿ ಆಗಿರುವದು. ಹವ್ಯಕ ಬ್ರಾಹ್ಮಣ ಸಮಾಜವು ಎಲ್ಲಾ ಹಿಂದುಗಳೊಡನೆ ಹಿಂದೂ ಧರ್ಮದವರಾದ ಕಾರಣ, ಹಿಂದೂ ಸಮಾಜದವರಾಗಿದ್ದಂತೆಯೇ ತನ್ನ ಅವಾಂತರ ಜಾತೀಯ ಧರ್ಮಾಚಾರ ವ್ಯವಹಾರಗಳಿಂದಾಗಿ ಒಂದೇ ಜಾತೀಯ ಅವಾಂತರ ಸಮಾಜವೂ ಆಗಿರುವದು. ಅಂತೂ ಧರ್ಮಾಚಾರ ಬಂಧನಗಳನ್ನು ಬಿಟ್ಟು ಒಂದು ಜನಾಂಗವು ಸಮಾಜವಾಗಲಾರದು.

ಸಮಾಜದ ರಕ್ಷಣವೆಂದರೇನು? ಒಂದು ಸಮಾಜವು ತನ್ನ ಯಾವ ಧರ್ಮಾಚಾರ ವ್ಯವಹಾರಗಳಿಂದಾಗಿ ಸಮಾಜವೆನ್ನಿಸಿರುವದೋ ಆ ಧರ್ಮಾಚಾರ ವ್ಯವಹಾರಗಳ ಪ್ರವರ್ತನಗಳು ಆ ಸಮಾಜದಲ್ಲೆಲ್ಲಾ ಜಾಗೃತವಾಗಿದ್ದು ನಡೆಯುತ್ತಿರುವಂತೆ ಮಾಡುವದೇ ಸಮಾಜರಕ್ಷಣೆ. ಈ ಪ್ರಕಾರ ಮಾಡುವದರ ಕಾರಣ ಸಮಾಜದಲ್ಲೆಲ್ಲಾ ತನ್ನ ಧರ್ಮಾಚಾರ ವ್ಯವಹಾರಗಳನ್ನನುಸರಿಸಿ ಅವುಗಳಲ್ಲಿ ಸ್ವಾಭಿಮಾನದಿಂದಲೇ ನಡವಳಿಕೆಗಳು ನಡೆಯುವಂತಾದರೆ ಅದು ಉತ್ತಮ. ಸಮಾಜ ದಂಡದಭಯದಿಂದಲೋ, ಲೋಕಲಜ್ಜೆಯಿಂದಲೋ ಆದರೆ ಅದು ಮಧ್ಯಮ. ಹೇಗಾದರೂ ತಾತ್ಕಾಲಿಕ ಆಡಳಿತೆಗೋಸ್ಕರ "ಅನುವಿಧೇಯ ಸ್ಥೇಯಃ ಸತ್ಯ ಪುರುಷವತೀ ಜನತಾ ಸಭಾ" ಎಂಬ ಲಕ್ಷಣದ ಅಧಿಕಾರಿ ವರ್ಗವು ಸಮಾಜಕ್ಕೆ ಆವಶ್ಯಕವಾಗುವದು. ಅರ್ಥಾತ್ ಧರ್ಮಾಚಾರ, ವ್ಯವಹಾರ, ಪ್ರಾಯಶ್ಚಿತ್ತಗಳ ವಿಷಯವಾಗಿ ನಿರ್ಣಯಿಸಬೇಕಾದ ಪ್ರಸಂಗ (ಸ್ಥೇಯಾಸ್) ಮಧ್ಯಸ್ಥನೂ ಸತ್ಯರೂ ಶಾಸ್ತ್ರ, ಶಿಷ್ಟಾಚಾರಾದಿಗಳಿಂದ ನಿರ್ಣಯಿಸಬೇಕು. ನಿರ್ಣೀತವಾದಂತೆ ನಡೆಯಲು ಮಾತನ್ನು ಅನುವಿಧೇಯ (ಸಮರ್ಥ)ನ ಹಿಂಬಾಲಿಸಬೇಕು. ಆಚಾರ್ಯ ಪೀಠಸ್ಥನೆ

ಆದಲಾಗಾಯ್ತು ಈ ಎಲ್ಲಾ ಕಾರ್ಯಭಾರಗಳೂ ಕಾರ್ಯಕರ್ತರುಗಳೂ ಆಚಾರ್ಯಾ-ಧೀನವಾಗಿ ಮಾಡಲ್ಪಟ್ಟ ಕೆಲವು ಪ್ರಸಂಗಗಳಲ್ಲಿ ರಾಜನ ಬೆಂಬಲ ಬೇಕಾಗಿ ಬಂದರೂ, ಪ್ರಾಯಶಃ ಸಮಾಜವೇ ಅನುವಿಧೇಯವಾಗಿ ನಿಂತು ಆಚಾರ್ಯಪೀಠಕ್ಕೆ ಬೆಂಬಲ ಕೊಟ್ಟು ಪೀಠದಿಂದ ತನ್ನ ಆಡಳಿತೆಯನ್ನು ನಡೆಸಿಕೊಳ್ಳುತ್ತಾ ಬಂದಿದೆ. ಏವಂಚ ಆಚಾರ್ಯಪೀಠ ಪ್ರಧಾನವಾದ ವ್ಯವಸ್ಥೆಯಿಂದಾಗಲೀ ಅಥವಾ ತದರ್ಥ ನಿಯಮಿತ-ವಾದ ಇತರ ವ್ಯವಸ್ಥೆಯಿಂದಾಗಲೀ, ಆಯಾ ಕಾಲದಲ್ಲಿ ನಿಯತವಾದ ವ್ಯವಸ್ಥೆಗಳಿಂದ ಆಯಾ ಕಾಲದಲ್ಲಿ ಆಳಲ್ಪಟ್ಟವರೂ ತನ್ನ ಧರ್ಮಾಚಾರ ವ್ಯವಹಾರ ಬಂಧನಗಳನ್ನು ನಡೆಸುತ್ತಿರುವುದೇ ಸಮಾಜರಕ್ಷಣೆ.

ಇನ್ನೀಗ ಸಮಾಜರ್ವಾದ್ದು ಆಗಬೇಕಾದ್ದೇನು ? ಈ ಧರ್ಮಾಚಾರ ವ್ಯವಹಾರ ಬಂಧನಗಳನ್ನು ನಡೆಸದೆ ವ್ಯಕ್ತಿಸ್ವಾತಂತ್ರ್ಯದಿಂದ ಇಚ್ಛಾನುಸಾರವಾಗಿ ನಡೆದರೆ ಆಗದೆ? ಎಂದರೆ ಗಂಭೀರವಾಗಿ ಆಲೋಚಿಸಬೇಕಾದ್ದು, ಮಹಾಪುಣ್ಯಾತ್ಮರ ಸಂಗತಿಯನ್ನೊಂದು ಬಿಟ್ಟು ಸರ್ವಸಾಧಾರಣ ಮಾನವ ಸ್ವಭಾವವನ್ನು ಆಲೋಚಿಸಿ ನೋಡಿದರೆ ಅದು ಸಹಜವಾಗಿ ನಿಮ್ನಪ್ರವಾಹಿಯಾಗಿರುವುದು. ಮನುಷ್ಯನು ಪೌರುಷದಿಂದ ಪ್ರಯತ್ನಿಸದೆ ಶಿಥಿಲವಾಗಿ ಬಿಟ್ಟರೆ ದೋಷ ಪ್ರವೃತ್ತಿಗಳೇ ಸ್ವೇಚ್ಛೆ-ಯಿಂದ ಹೆಚ್ಚಾಗಿ ಬೆಳೆಯುವವು.

ಉತ್ಪತ್ತ್ಯೈವ ಹಿ ಕಾಮೇಷು ಪ್ರಾಣೇಷು ಸ್ವಜನೇಷು ಚ ।
ಆಸಕ್ತಮನಸೋ ಮರ್ತ್ಯಾ ಆತ್ಮನೋಽನರ್ಥ ಹೇತುಷು ॥
ನತಾನ ವಿದುಷಃ ಸ್ವಾರ್ಥಂ ಭ್ರಾಮ್ಯತೋ ವೃಜಿನಾಧ್ವನಿ ।
ಕಥಂ ಯುಂಜ್ಯಾತ್ ಪುನಸ್ತೇಷು ತಾಂಸ್ತಮೋ ವಿಶತೋ ಬುಧಃ ॥

ಎಂಬುದಾಗಿ ಜನ್ಮಜನ್ಮಾಂತರದಿಂದಲೂ ಈ ಸ್ವೈರಾಸಕ್ತಿಯು ಬಂದಿರುವುದೆಂದು ಹೇಳಿದೆ. ಆಧುನಿಕ ಮನೋವಿಜ್ಞಾನಿಗಳಿಗೂ ಈ ಸ್ಥಿತಿ ತಿಳಿಯದುದಂತಿಲ್ಲ. ಶ್ರುತಿ, ಸ್ಮೃತಿ, ಸದಾಚಾರಪ್ರಾಪ್ತವಾದ ಧರ್ಮಾಚಾರ ಬಂಧನಗಳನ್ನು ಬಿಡಬೇಕೆಂದು ಹೇಳುವವರೂ ಸಹ ಆ ಸ್ಥಾನದಲ್ಲಿ ಬಹುಮತವೆಂದಾಗಲೀ, ಪ್ರಜಾತಂತ್ರವೆಂದಾಗಲೀ ಇನ್ನೂ ಅನೇಕ ತರದ ವರ್ತಮಾನವಾದಗಳೆಂದಾಗಲೀ ಬಂಧನಗಳನ್ನು ಸ್ಥಾಪಿಸಿ ನಡೆಸಬೇಕೆಂದು ಹೇಳದೆ ಯಥೇಚ್ಛವೆಂದು ಬಿಟ್ಟುಬಿಡುವುದಿಲ್ಲ. ರಶ್ಯಾದೊಳಗಿನ ಸಾಮ್ಯವಾದವೇ ಆದರೂ ಅವರಂತೆ ಸ್ವೇಚ್ಛೆಯಾಗಿ ಎಲ್ಲರೂ ನಡೆದುಕೊಳ್ಳುವವ-ರಾಗುತ್ತಾರೆಂದು ದೂರ ಭವಿಷ್ಯದ ಸ್ವಪ್ನವನ್ನು ಅವರು ಹೇಳಿ ತಮ್ಮವಾದದ ಕಡೆಗೆ ಜನರನ್ನು ಮೋಹಿಸುವ ಪ್ರಯತ್ನ ಮಾಡುತ್ತಿರುವರಾದರೂ, ಅವರು ತಮ್ಮ ಬಂಧನ ಗಳಲ್ಲಿ ಜನರನ್ನು ನಿಯಂತ್ರಿಸುವ ಉದ್ಯೋಗವನ್ನು ಮಾತ್ರ ಇನ್ನೂ ಬಿಡುವವರಾಗಿಲ್ಲ. ಆದ್ದರಿಂದ ಜ್ಞಾನದಿಂದಾಗಲೀ ಶೌರ್ಯ, ಶೌಚಾಚಾರ, ಗುರುಭಕ್ತಿ, ಶ್ರುತಪ್ರಭಾವ, ಲೋಕಲಜ್ಜಾ, ಮನೋರಥ ಸಿದ್ಧಿ, ಅಭಿಮಾನ, ಇಹಪರ ದಂಡದ ಭಯ

ಮೊದಲಾದ್ದರಿಂದಾಗಲೀ ಅಪೇಕ್ಷಿತಗಳಾದ ಬಂಧನಗಳ ವಿಷಯದ ವರೆಗೂ ಪ್ರವರ್ತನಗಳುಂಟಾಗಬಹುದೆಂಬುದು ತತ್ಕಾಲ ಸರ್ವಸಮ್ಮತವಾದ ಸಿದ್ಧಾಂತವಾಗಿದೆ.

ಈ ಪ್ರಕಾರ ಅಪೇಕ್ಷಿತವಾದ ಬಂಧನಗಳಲ್ಲಿ ಧರ್ಮಾಚಾರ, ವ್ಯವಹಾರ, ಪ್ರಾಯಶ್ಚಿತ್ತಗಳೆಂಬಷ್ಟು ಬಂಧನ ಪ್ರಾವರ್ತನಗಳು ಮಾತಾ, ಪಿತಾ ಮೊದಲಾದ ಎಲ್ಲಾ ಆಚಾರ್ಯಸ್ಥಾನಗಳ ಆಡಳಿತೆಗಳಲ್ಲಿ ವಿಭಕ್ತಗಳಾಗಿದ್ದರೂ ನೇತೃತ್ವವು ಆಚಾರ್ಯಪೀಠದ ಅಧೀನವಾಗಿ ಮಾಡಲ್ಪಟ್ಟಿದೆ. ಇತರ ಸ್ವರಾಷ್ಟ್ರ, ಪರರಾಷ್ಟ್ರ ಸಂಬಂಧಿ ಬಂಧನಗಳು ರಾಜ್ಯವ್ಯವಸ್ಥಾಪಕನಾದ ಶಾಸಕನ ಅಧೀನವಾಗಿ ಮಾಡಲ್ಪಟ್ಟಿವೆ. ಇವರಿಂದ ಉಳಿದು ಹೋದ ವಿಷಯಗಳಲ್ಲಿ ವೈವಸ್ವತ ಮನುವೇ ಶಾಸಕನೆಂದು ಶಾಸ್ತ್ರದೊಳಗೆ ಹೇಳಿದೆ.

ಗುರುರಾತ್ಮವತಾಂ ಶಾಸ್ತಾ ರಾಜಾಶಾಸ್ತಾ ದುರಾತ್ಮನಾಂ ।
ಅಥ ಪ್ರಚ್ಛನ್ನ ಪಾಪಾನಾಂ ಶಾಸ್ತಾ ವೈವಸ್ವತೋ ಮನುಃ ॥

ಎಂಬ ಶಾಸ್ತ್ರಾನುಸಾರವಾಗಿ ಜಗನ್ನಿಯಂತನಾದ ಪರಮಾತ್ಮನೇ ಈ ರೀತಿಯಾಗಿ ಆಡಳಿತೆಯ ವಿಷಯ ವಿಭಾಗ ಮಾಡಿರುವನಾದರೂ ಆಧುನಿಕರು ಅಜ್ಞಾನಮದಮಾನ-ಗಳಿಂದಾಗಿ ಎಲ್ಲವೂ ರಾಜ್ಯಸಂಸ್ಥೆಯ ವಿಷಯಗಳೇ ಎಂದು ತಿಳಿದು ರಾಜ್ಯಸಂಸ್ಥೆಯು ಇಷ್ಟವಿದ್ದಂತೆ ನಡೆಸಬಹುದೆಂದು ಭ್ರಮಿಸುತ್ತಾರೆ. ಶಾಸ್ತ್ರಾಧೀನ ಧರ್ಮಾಚಾರ, ವ್ಯವಹಾರ, ಪ್ರಾಯಶ್ಚಿತ್ತಾದಿ ಬಂಧನಗಳು ಬೇಕಾಗಿಲ್ಲವೆಂದೂ ವೈವಸ್ವತ ಮನುವಿನ ಶಾಸನವು ಸುಳ್ಳೆಂದೂ ವಾದಿಸುತ್ತಾರೆ. ಅದರಿಂದ ಮನುಷ್ಯನ ನ್ಯಾಯನಿಷ್ಠಾ, ನೀತಿಮತ್ತಾ ಇತ್ಯಾದಿ ಸುಖಸಂತೋಷದ ಸಾಧನಗಳನ್ನು ನೆಲೆನಿಲ್ಲಿಸಲು ಯಾವುದೊಂದು ಮೂಲಾ-ಧಾರ ಅಂಕುಶವೂ ಇಲ್ಲದಂತಾಗಿ ಅಶಾಂತಿಯಲ್ಲಿ ಅವಿಶ್ವಾಸವು ರಾಜ್ಯಮಾಡುತ್ತಿದೆ. ಅನೇಕ ಪಕ್ಷ, ಉಪಪಕ್ಷಗಳಿಂದ ರಾಜ್ಯವ್ಯವಸ್ಥೆಯು—

ಯಸ್ಮಿನ್ ದೇಶೇಯ ಆಚಾರೋ ವ್ಯವಹಾರಶ್ಚ ಯಾದೃಶಃ ।
ತಥೈವ ಪರಿಪಾಲ್ಯೋಽಸೌ ಯದಾ ವಶಮುಪಾಗತಃ ॥

ಎಂಬ ಅಂಶದಲ್ಲೂ ಅಸ್ಥಿರವಾಗಿ ನಡೆಸಲ್ಪಟ್ಟು ನ್ಯಾಯಾನ್ಯಾಯವೇ ತಿಳಿಯ-ದಂತಾಗಿದೆ. ರಾಜ್ಯಾಧಿಕಾರಿಗಳ ಪ್ರತಿಜ್ಞೆಗಳ ಮೂಲ್ಯವಾಗಲೀ, ಯಾವುದೊಂದು ವ್ಯವಹಾರವಾಗಲೀ ತಮಾಷೆಯಾಗಿದೆ. ಆದ್ದರಿಂದ ಎಲ್ಲಾ ವಿಜ್ಞಾನದ ಅನ್ವೇಷಣ ಆವಿಷ್ಕಾರಗಳೂ ಇಂಥಾ ಅಶಾಂತಿಯನ್ನು ಬೆಳೆಸುವ ದುರುಪಯೋಗದಲ್ಲೇ ಹೆಚ್ಚಾಗಿ ಪರ್ಯವಸಾನವಾಗಿವೆ. ಪೂರ್ವೋಕ್ತ ಬಂಧನಗಳನ್ನನುಸರಿಸುವ ಹಳೇ ಜನರಲ್ಲೇ ಈಗಲೂ ಅಲ್ಪಸ್ವಲ್ಪ ಶಾಂತಿಯನ್ನು ಕಾಣಬಹುದಲ್ಲದೆ, ಈಗಿನ ಬುದ್ಧಿವಂತರೆಂಬವ-ರಲ್ಲೆಲ್ಲಾ ಪ್ರಾಯಃ ತಿಳಿಯದಷ್ಟು ಅಶಾಂತಿಯ ರಾಜ್ಯವಾಗಿದೆ.

ಭಾರತದೊಳಗಿನ ಆಧುನಿಕರು ಯಾವ ಪಾಶ್ಚಾತ್ತ್ಯರ ಅನುಕರಣದಿಂದಾಗಿ ಇಂಥಾ ಶಾಂತಿಭಂಗದೊಳಗೆ ಬಿದ್ದಿರುವರೋ, ಆ ಪಾಶ್ಚಾತ್ತ್ಯರಲ್ಲಿರುವ ದುಃಸ್ಥಿತಿಯನ್ನು ಅಲ್ಲಿರುವ ವಿಚಾರವಂತರ ಹೇಳಿಕೆಯಿಂದಲೇ ಕಾಣಿಸುವದು ಹೆಚ್ಚು ವಿಶ್ವಾಸಾರ್ಹವಾದ ಕಾರಣ Donald Ayres Piatt ಸಾಹೇಬನು "Phylosophy, Pragmatism and Human Bondage" ಎಂಬ ಹೆಸರಿನ ಲೇಖನದಲ್ಲಿ—

"Presidential address delivered before the twenty-second annual meeting of the Pacific Division of the American Phylosophical Association at Slanford University, California December 27-28-29—1948" ಕೊಟ್ಟ ಲೆಕ್ಚರಿನ ಭಾಗವನ್ನು "The Phylosophical Review" ಎಂಬ ಪತ್ರಿಕೆಯಿಂದ ಉದಾಹರಿಸುತ್ತೇವೆ.

"Tha Human Situation Today"

With this general statement of aims let us begin with a report of The Human Situation in its own terms earning, toward the lower limit of the fact-conjecture continuance of course commenting where thus seems necessary but putting our Phylosophical Theories as far as possible in abeyance, and putting ourselves in readyness to find what is strange in what has been familar.

Almost wherever I turn today, whether novelists, poets and dramatists whose Authority rests on knowledge by intimacy of acquaintance, whether to political.

ಆಧುನಿಕರೆಲ್ಲಾ ಈಗ ವಿಜ್ಞಾನದ ಮೇಲಿನ ಗರ್ವದಿಂದ ನಾನಾತರದ ಯಂತ್ರ ಶಸ್ತ್ರಾಸ್ತ್ರಗಳನ್ನು ಆವಿಷ್ಕರಿಸುವುದರಲ್ಲಿ ಅಹಮಹಮಿಕೆಯಾಗಿ ಪ್ರಯತ್ನಿಸುತ್ತಿದ್ದಾರೆ. ಆದರೆ ಶಾಂತಿ ಸ್ಥಾಪನೆಗೋಸ್ಕರ ಬೇಕಾದ ಉಪಾಯವು ಇವುಗಳಿಗಿಂತ ಮೊದಲು ಸ್ಥಾಪಿಸಬೇಕಾಗಿಲ್ಲವೇ? ಅದಕ್ಕೆ ಬದಲಾಗಿ ಈ ಆವಿಷ್ಕಾರಗಳೆಲ್ಲಾ ಇನ್ನಷ್ಟು ಅಶಾಂತಿಗೇ ಪೋಷಕಗಳಾಗಿ ಕಂಡುಬರುವುದಿಲ್ಲವೇ? ಕೇವಲ ಪಾರಲೌಕಿಕದ

ಅರ್ಥ-ಕಾಮಗಳಷ್ಟೇ ಸತ್ಯವೆಂದು ಒಪ್ಪಿಕೊಂಡು ಧರ್ಮ, ಅಪವರ್ಗ ಬಂಧನಾದಿಗಳನ್ನು ಕಿತ್ತೊಗೆದು, ಯಮನ ಶಾಸನವೇ ಸುಳ್ಳೆಂದು ಹೇಳುವ ಈಗಿನ ಬುದ್ಧಿವಂತರು, ನ್ಯಾಯನಿಷ್ಠರೂ ನೀತಿವಂತರೂ ಆಗುವ ಸಂಭವ ಹೇಗೆ? ಇಂಥಾ ಬಂಧನಗಳಿಂದಾಗಿ ನ್ಯಾಯನಿಷ್ಠರೂ ನೀತಿವಂತರೂ ರಾಜ್ಯದಲ್ಲಿ ಉಂಟಾಗುತ್ತಿದ್ದರು. ಅವರ ಅಧೀನವಾಗಿ ರಾಷ್ಟ್ರ ಶಾಸನವಾಗಿದ್ದರೆ ಮಾತ್ರ ಅದು ಶಾಂತಿಸ್ಥಾಪನೆಗೆ ಉಪಯೋಗಿಯಾಗಬಹುದಲ್ಲದೆ ನಿರಂಕುಶರಾದವರ ಶಾಸನವು ಅಶಾಂತಿಗೇ ಕಾರಣವಾಗುವುದು. ಶಾಸನ ಸಭೆಯೆಂಬ ಹೆಸರಿನಲ್ಲಿ ಏಕತ್ರಸೇರಿದ ನಿರಂಕುಶರಾದ ಧೂರ್ತರು ಮನಸ್ಸಿಗೆ ಬಂದಂತೆ ಶಾಸನ ನಿಯಮಗಳನ್ನುಂಟು ಮಾಡಿ ನ್ಯಾಯಾನ್ಯಾಯವನ್ನೇ ಬದಲಾಯಿಸಬಹುದೆಂಬ ಸ್ಥಿತಿಯಾಗಿರಲು ಯಾರೊಬ್ಬನೂ ನಿರಂಕುಶನಾದವನು ತನ್ನ ಯಮ-ನಿಯಮ, ನ್ಯಾಯ-ನೀತಿ, ಸ್ಥಿತಿಗಳನ್ನು ಸಂಯಮದಿಂದ ಸಾಧಿಸಿಕೊಳ್ಳಲು ಪ್ರಯತ್ನಿಸದೆ ನ್ಯಾಯಾನ್ಯಾಯವ್ಯವಸ್ಥೆಗಳನ್ನೇ ಬದಲಾಯಿಸುವುದಕ್ಕೋಸ್ಕರ ಪಕ್ಷಪ್ರಚಾರ ಮಾಡತೊಡಗುವನು. ಆದ್ದರಿಂದ ರಾಜ್ಯಸಂಸ್ಥೆಯೂ ಆಟದ ಬೊಂಬೆಯಂತೇ "ಧೂರ್ತಲುಂಠನ" ವಿಷಯವಾಗಿ ಇನ್ನಷ್ಟು ಸತತ ಅಶಾಂತಿಗೇ ಕಾರಣವಾಗುತ್ತಿದೆ - ಇಂಥಾ ಸ್ಥಿತಿಯಲ್ಲಿ :—

ಅಭಯಂ ಸತ್ತ್ವಸಂಶುದ್ಧಿರ್ಜ್ಞಾನಯೋಗ ವ್ಯವಸ್ಥಿತಿಃ |
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಂ ||
ಅಹಿಂಸಾ ಸತ್ಯಮಕ್ರೋಧಸ್ತ್ಯಾಗಶ್ಶಾಂತಿರಪೈಶುನಂ |
ದಯಾ ಭೂತೇಷ್ವಲೋಲ್ತ್ವಂ....

ಎಂದು ಮುಂತಾಗಿ ಹೇಳಿದ ನ್ಯಾಯನಿಷ್ಠೆಯ ಸ್ಥಾಪನೋಪಾಯವೇನೆಂದು ಯೋಚಿಸದೆ ನಡೆಯುವ ಆವಿಷ್ಕಾರಗಳು—

ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ |
ಪ್ರಭವಂತ್ಯುಗ್ರ ಕರ್ಮಾಣಃ ಕ್ಷಯಾಯ ಜಗತೋಽಹಿತಾಃ ||

ಎಂಬ ನಾಶಕ್ಕೇ ಕಾರಣಗಳಾಗುತ್ತಿವೆ. ಆದ್ದರಿಂದ ಆಧುನಿಕರು ತಮ್ಮ ನಿರಂಕುಶ ದೃಷ್ಟಿಯನ್ನಾದರೂ ಬಿಟ್ಟು ಬಿಡಬೇಕು; ಅಲ್ಲವಾದರೆ ಅವರ ಅಂಥಾ ದೃಷ್ಟಿ ಇದ್ದಂತೇ ನ್ಯಾಯ - ನ್ಯಾಯನಿಷ್ಠೆಯನ್ನು ಸ್ಥಿರಗೊಳಿಸುವ ಉಪಾಯವನ್ನಾದರೂ ಸಂಪಾದಿಸಿ ಸ್ಥಿರಪಡಿಸಿಕೊಳ್ಳಬೇಕು. ಸಾಮ್ಯವಾದ, ಸಮಾಜವಾದ ಮೊದಲಾದವುಗಳು ನಿರಂಕುಶ ದೃಷ್ಟಿ ಇದ್ದಂತೇ ಶಾಂತಿ ಸ್ಥಾಪನೆಗೆ ಸಾಕಷ್ಟು ಉಪಾಯಗಳಿಂದೂ ಆಚಾರ್ಯ ಸ್ಥಾನದ ಮತ್ತು ಪರಲೋಕದ ಆಡಳಿತೆಯ ಶಾಸ್ತ್ರೋಕ್ತ ಬಂಧನಗಳು ಬೇಕಾಗಿಲ್ಲವೆಂದೂ ಹೇಳಿದರೆ ಅದಿನ್ನೂ ಪ್ರಯೋಗಾವಸ್ಥೆಯಲ್ಲಿರುವ ಮಾತಷ್ಟೆ. ಸಾವಿರಾರು ವರ್ಷಗಳ ಪರೀಕ್ಷೆಯಾಗಿ ಸಿದ್ಧವಾಗುವ ತನಕ

ಇದುವರೆಗೆ ಬಂದಿರುವ ಉಪಾಯಗಳನ್ನು ಬಿಟ್ಟು ಕೂತರೆ "ಇತೋ ಭ್ರಷ್ಟಸ್ತತೋ ಭ್ರಷ್ಟಃ" ಎಂಬ ಸ್ಥಿತಿಯಾಗವುದು. ನಮ್ಮ ಈಗಿನ ಭಾರತೀಯ ರಾಜ್ಯ ಸಂಸ್ಥೆಯು ಕಣ್ಣು ಮುಚ್ಚಿ ಪಾಶ್ಚಾತ್ಯಾನುಕರಣದಲ್ಲಿ ನಿರತವಾಗಿದೆಯಷ್ಟೇ ಅಲ್ಲದೆ ಈಗ ಬಂದಿರುವ ಅಶಾಂತಿಯ ನಿವೃತ್ತಿಯ ಉಪಾಯವನ್ನು ಕಾಣುವುದಿಲ್ಲ. ಸ್ಕೂಲ್ ಕಾಲೇಜುಗಳಲ್ಲಿ ನಡೆಯುತ್ತಿರುವ ಅಶಾಂತಿಯ ಸಮಾಚಾರಗಳೂ ರಾಜ್ಯ ಕರ್ಮಚಾರಿಗಳ ಲಂಚ ಖೋರಿಯ ಸಮಾಚಾರಗಳೂ ದೇಶದೊಳಗೆ ಕೊಲೆ ಕೊಳೆಗಳ ಸಮಾಚಾರಗಳೂ ಎಲ್ಲ ತರದ ವ್ಯಸನಾಭಿವೃದ್ಧಿಗಳೂ ರಾಜ್ಯ ಸಂಸ್ಥೆಗೇ ತಡೆಯಲು ಸಾಧ್ಯವಾಗದಷ್ಟು ಕಂಡು ಬರುತ್ತಿದೆ. ಗೋವಧೆ, ಹಿಂದೂ ಸಂಸ್ಕೃತಿನಾಶ ಇತ್ಯಾದಿಗಳ ವಿಷಯದಲ್ಲಿ ದೊಡ್ಡ ಅಧಿಕಾರಿಗಳೇ ದುರಾಗ್ರಹಿಗಳಾಗಿದ್ದರೆ ರಾಜ್ಯ ಸಂಸ್ಥೆಯ ವಿಚಾರ ಮತ್ತು ಶಾಸನ ನಿಯಮಗಳಿಂದ ಎಲ್ಲರಿಗೂ ನಿರಂಕುಶರಾಗುವ ಅವಸರಗಳನ್ನೇ ಬೆಳೆಸಿದಂತಾಗುತ್ತದೆ. ಆದ್ದರಿಂದ ಹೊಸ ಉಪಾಯಗಳು ಸಾವಿರಾರು ವರ್ಷ ಪರೀಕ್ಷಿತವಾಗಿ ಸ್ಥಿರವಾಗುವ ತನಕವಾದರೂ ಹಿಂದಿನಿಂದ ಬಂದಿರುವ ಉಪಾಯಗಳನ್ನು ಬಿಡದೆ ಶಾಂತಿ ಸ್ಥಾಪನೆ ಮಾಡಬೇಕಾದ್ದು ಬುದ್ಧಿವಂತರ ಕರ್ತವ್ಯ.

ಚಲತ್ಯೇಕೇನ ಪಾದೇನ ತಿಷ್ಠತ್ಯೇಕೇನ ಬುದ್ಧಿಮಾನ್ ।
ನಾಸಮೀಕ್ಷ್ಯ ಪರಂ ಸ್ಥಾನಂ ಪೂರ್ವಸ್ಥಾನಂ ಪರಿತ್ಯಜೇತ್ ॥

ವಸ್ತುತಃ ಆಲೋಚಿಸಿದರೆ ಎಲ್ಲಾ ಆವಿಷ್ಕಾರಗಳಿಗಿಂತಲೂ ಮೊದಲಾಗಿ ಸೃಷ್ಟ್ಯಾರಂಭದಿಂದಲೇ ಸೃಷ್ಟಿಕರ್ತನು ಶಾಂತಿ ಸ್ಥಾಪನೆಯ ಉಪಾಯಗಳನ್ನು ಶ್ರುತಿ ಮೊದಲಾದ ಅಪೌರುಷೇಯಗಳ ಮೂಲಕ ಉಪದೇಶಗಳ ರೂಪದಲ್ಲಿ ಕೊಟ್ಟಿರುತ್ತಾನೆಂದೂ ಅವುಗಳಲ್ಲಿ ಕಾಣಿಸಿದ ಆಚಾರ ವ್ಯವಹಾರ ಪ್ರಾಯಶ್ಚಿತ್ತ ಮೊದಲಾದ ಬಂಧನ, ಆಚಾರ್ಯ ಸ್ಥಾನಾಧೀನ ಶಾಸನ ಮತ್ತು ಪರಲೋಕ ಶಾಸನಗಳ ಹೊರತು ಅವುಗಳನ್ನು ಬಿಟ್ಟು ನಿರಂಕುಶ ರಾಜ್ಯಶಾಸನವೂ ಸಹ ಉಪಯೋಗವಿಲ್ಲನೆಂದೂ, ಈ ವಿಷಯದಲ್ಲಿ ಅವುಗಳೇ ವೈಜ್ಞಾನಿಕಗಳೆಂದೂ ಇರುವ ಸಿದ್ಧಾಂತವನ್ನು ಶ್ರದ್ಧಾಭಕ್ತಿಯುಕ್ತವಾಗಿ ಶಾಸ್ತ್ರೋಕ್ತ ತರ್ಕ ಪ್ರಮಾಣಾದಿಗಳಿಂದ ಶ್ರಮಪಟ್ಟು ಈಶ್ವರಾನುಗ್ರಹದಿಂದ ತಿಳಿದುಕೊಳ್ಳಬೇಕಾದ್ದಿದೆ. ಮ್ಲೇಚ್ಛರಿಗೆ ಈ ವಿಷಯ ತಿಳಿದು ಮಾನ್ಯವಾದರೆ ಆಮೇಲೆ ನಾವು ಮನ್ನಿಸಬಹುದೆಂದೂ ಕುಳಿತರೆ ಆಗುವಂತಿಲ್ಲ.

ರಾಜ್ಯ ಸಂಸ್ಥೆಯ ಕಾರ್ಯ ಸಂಚಾಲನಕ್ಕಾಗಿ ಪ್ರಜೆಗಳಿಂದ ನಿರ್ವಾಚಿತರಾಗಿ ಹೋಗುವವರು ತಾವು ನಿರ್ವಾಚಿತರಾಗಬೇಕೆಂದು ಒಂದೇ ನಿಮಿತ್ತವನ್ನು ಎದುರಿಟ್ಟುಕೊಂಡು ಜನರೆದುರು ಇಲ್ಲದ ಕರ್ತವ್ಯಗಳನ್ನೆಲ್ಲಾ ಮಾಡುತ್ತೇವೆಂದು ಪ್ರತಿಜ್ಞೆ ಮಾಡಿಬಿಡುವರು. ಆ ಮೇಲೆ ನಿರ್ವಾಚಿತರಾದ ಬಳಿಕ ಹಿಂದಿನ ಪ್ರತಿಜ್ಞಾ ಘೋಷಣೆಗಳನ್ನೆಲ್ಲಾ ಮರೆತು ಸ್ವಾರ್ಥಪರರಾಗಿ ವಿರುದ್ಧ ಅನಿಷ್ಟಗಳನ್ನು ಮಾಡಿದರೆ ಈಗಿನ ವ್ಯವಸ್ಥೆಗಳಲ್ಲಿ ಏನು ಪ್ರತೀಕಾರವಿದೆ? ಮುಂದೆ ಬೇರೆಯವರನ್ನು ನಿರ್ವಾಚಿಸಿದರೂ

ಈ ದುರವಸ್ಥೆ ಮುಂದಿನವರಲ್ಲಿ ಆಗದಂತೆ ಏನು ಉಪಾಯ? ಮುಂದೆ ನಿರ್ವಾಚಿತನಾಗವೇ ಹೋದರೂ ಒಮ್ಮೆ ನಿರ್ವಾಚಿತನಾಗಿ ಸ್ವಾರ್ಥ ಸಾಧಿಸಿ ಕೂತರೆ ಅವನಿಗೆ ಕೆಡುಕೇನು ಬಂತು? ಈ ರೀತಿಯಾಗಿ ಹೊಸ ಹೊಸ ವಂಚಕರಿಂದ ವಂಚಿತರಾಗದೆ ಉತ್ತರದಾಯೀ ಶಾಸನ ವ್ಯವಸ್ಥೆ ಬೇಕೆಂದಿದ್ದರೆ ಇಂಥಾ ಪ್ರವೃತ್ತಿಗಳಲ್ಲಿ ಭಯವಿರ-ಬೇಕು. ಕೌಟಿಲೀಯ ಅರ್ಥಶಾಸ್ತ್ರವು ಅಂಥಾ ಅಪರಾಧಿಗಳಿಗೆ ಸಮಾಜ ದಂಡದ ಭಯವನ್ನು ವಿಧಿಸಿರುತ್ತದೆ. ಅರ್ಥಾತ್ ಅಂಥವನ ವಿಷಯದಲ್ಲಿ ಸಮಾಜದ ಆಡಳಿತೆಯನ್ನು ನಡೆಸುವದರ ಕಡೆ ನಿರ್ವಾಚಕರು ನಿವೇದಿಸಬೇಕೆಂದೂ ಸಮಾಜದ ಆಡಳಿತಗಾರರು ಸತ್ಯವನ್ನು ತಿಳಿದು ಸಮಾಜ ದಂಡ ಕೊಟ್ಟು ಬಹಿಷ್ಕರಿಸಬೇಕೆಂದೂ ವಿಧಿಸಿದೆ. ಸಮಾಜದ ರಕ್ಷಣೆಯಿಂದ ಉಚ್ಛೃಂಖಲರಿಗೆ ಎಲ್ಲರೂ ಆಶ್ರಯಕೊಡುವಂತೆ ಮಾಡುತ್ತಿದ್ದರೆ ಈ ಭಯವಿರುವುದು ಹೇಗೆ? ರಾಜ್ಯ ಸಂಸ್ಥೆಯ ಕಾರ್ಯಕರ್ತರಿಂದಲೇ ರಾಜ್ಯ ಸಂಸ್ಥೆಯ ಕಾರ್ಯಕರ್ತರ ಮೇಲೆ ಉಪಾಯವನ್ನು ವಿಧಿಸುವುದಾದರೂ ಕೆಲವು ಕಾರ್ಯಕರ್ತರು ಕುಲೀನತ್ವ, ಸಮಾಜ ದಂಡ ಭಯ, ಮತ್ತು ಆಚಾರ್ಯ ದೇವ-ಧರ್ಮ ಭಯಭಕ್ತಿಗಳಿಂದಾಗಿ ಉತ್ತರದಾಯಿಗಳಾಗಿದ್ದರೆ ಅದು ಸಾಧ್ಯವಾಗ-ಬಹುದಷ್ಟೆ. ಅಂತಃ ಸಮಾಜ ಬಂಧನಗಳೂ ಅತ್ಯಾವಶ್ಯಕಗಳಾಗಿರುವವು.

ಒಂದು ಸಮಾಜವು ತನ್ನ ಒಂದು ವಿಶಿಷ್ಟ ಧರ್ಮಾಚಾರ ವ್ಯವಹಾರಗಳ ತರಗತಿಯಿಂದ ಸ್ಥಿರತೆಗಾಗಿ ಸಮಾಜ ಬಂಧನಗಳಿಂದ ಬದ್ಧವಾಗಿ ಸಮಾಜವೆಂದಾಗುವುದು. ಅದರಲ್ಲೂ ವೈದಿಕ ಮಾರ್ಗಾನುಯಾಯಿ ಸಮಾಜಗಳ ಧರ್ಮಾಚಾರ ವ್ಯವಹಾರಗಳು ಮುಖ್ಯತಃ ಅನಾದಿ ವೇದ ಪ್ರಮಾಣ ಪರಂಪರೆಯಿಂದ ಅಭ್ಯಸ್ತವಾದ-ವುಗಳು. ಅವುಗಳಿಂದಾಗಿ ಎಷ್ಟೋ ಸದಾಚಾರಗಳೂ ಗುಣಗಳೂ ಸಂತೋಷಗಳೂ ವ್ಯಸನನಿವಾರಣಗಳೂ, ಅಕಾರ್ಯ ನಿವೃತ್ತಿಗಳೂ ನೆಲೆ ನಿಲ್ಲುತ್ತಿವೆ. ಸಮಾಜ ಬಂಧನಗಳ ರಕ್ಷಣೆಯಾಗದಿದ್ದರೆ ಇವೆಲ್ಲವುಗಳ ರಕ್ಷಣವು ರಾಜ ಶಾಸನಗಳಿಂದಲೂ ಆಗುವಂತಿಲ್ಲ. ಉದಾಹರಣಾರ್ಥ ಪ್ರಸ್ತುತ ಹವ್ಯಕ ಸಮಾಜವನ್ನೇ ಆಲೋಚಿಸಿರಿ. ಅದರೊಳಗೆ ಎಷ್ಟೋ ಸದಾಚಾರಗಳು ಇಹಪರ ಹಿತಕರಗಳಾಗಿ ಪರಂಪರೆಯಾಗಿ ಬಂದಿರುವುದಿಲ್ಲವೆ? ಈಗಿನ ನವನಾಗರಿಕತೆ ಎನ್ನುತ್ತ ಪಾಶ್ಚಾತ್ಯಾನುಕರಣ ತತ್ಪರರಾದವರು ಬ್ರಾಹ್ಮಣ ಸಮಾಜದ ವೇಷ ಭೂಷಣ, ಆಚಾರವಿಚಾರ, ಆಹಾರ ವಿಹಾರ, ಶುಚಿತ್ವ ಶುಚಿತ್ವ, ವ್ಯಸನ ಪರಿಹಾರ, ಸರಳಜೀವನ, ಸ್ವಾಭಿಮಾನ ಮೊದಲಾದ ಎಲ್ಲಾ ವಿಷಯಗಳಲ್ಲೂ ನಡೆದು ಬಂದಿರುವ ಸದಾಚಾರಗಳನ್ನೆಲ್ಲಾ ಅಯೋಗ್ಯಗಳೆಂದು ಪ್ರಮಾಣಿಸಬಲ್ಲರೊ? ಅಮೆರಿಕದವರು ಮದ್ಯಪಾನವನ್ನು ನಿಲ್ಲಿಸುವುದಕ್ಕೋಸ್ಕರ ಕೆಲವು ವರ್ಷಗಳ ಹಿಂದೆ ಶಾಸನವನ್ನು ಮಾಡಿ ಉಪದ್ರವ ಹೆಚ್ಚಾಗಿ ಸಾಧ್ಯವಾಗದೆ ಶಾಸನವನ್ನು ರದ್ದು ಮಾಡಿದರು. ಬ್ರಾಹ್ಮಣ ಸಮಾಜದಲ್ಲಿ ಈ ವ್ಯಸನವು ಸಮಾಜಭಯ ಸದಾಚಾರಗಳಿಂದಲೇ ದೂರವಾಗಿದೆ. ಸಮಾಜ ಬಂಧನಗಳನ್ನು ಬಿಟ್ಟು ಸ್ವೇಚ್ಛಾಚಾರ ನಡೆಸುವುದು ಮಾನ್ಯವಾದರೆ ಇದರ ಲಕ್ಷಣವು

ಆಗುವುದು ಹೇಗೆ? ಪರಮಾತ್ಮನಿಗೆ ಸಮರ್ಪಿಸಿ ಶುಚಿಯಾದ ಆಹಾರವನ್ನು ಸೇವಿಸುವುದು ಸದಾಚಾರವಾಗಿದೆ. ಇದರ ರಕ್ಷಣವಾಗದೆ ಮ್ಲೇಚ್ಛರಂತೆ ಉಚ್ಛಿಷ್ಟ ಭಕ್ಷಣ ಪ್ರವೃತ್ತಿಯಾದರೆ ಅದರಿಂದಾಗಬೇಕಾದ ಆರೋಗ್ಯವೂ ಆಹಾರ ಶುದ್ಧ್ಯಾಸತ್ವ ಶುದ್ಧಿಯೂ ರಕ್ಷಿತವಾಗುವುದು ಹೇಗೆ? ಯೂರೋಪಿನವರು ಇಲ್ಲಿಗೆ ಬಂದಾಗ ಉಷ್ಣ ದೇಶವಾಗಿದ್ದರೂ ತಮ್ಮ ವೇಷ ಭೂಷಾ ಭಾಷೆಗಳನ್ನು ಅಭಿಮಾನದಿಂದ ಬಿಡದೇ ಇದ್ದರು. ನಾವು ಮಾತ್ರ ಅವರನ್ನು ಅನುಕರಿಸಿದರೆ ಅದೇನು ಸ್ವಾಭಿಮಾನವೋ ಗೌರವವೋ? ಸಮಾಜ ಬಂಧನಗಳ ರಕ್ಷಣಾ ದೃಷ್ಟಿಯಿಂದ ಇವೆಲ್ಲಾ ವಿಚಾರಣೀಯ-ಗಳಲ್ಲವೆ? ದೇಶಾಭಿಮಾನಿಗಳಾದ ಲೋ. ತಿಲಕರೂ ಮ. ಗಾಂಧಿ ಮೊದಲಾದವರೂ ಕೂಡಾ ಈ ವಿಷಯಗಳಲ್ಲಿ ಸ್ವಲ್ಪವಾದರೂ ಸ್ವದೇಶಾಚಾರದ ಪಕ್ಷಪಾತಿಗಳಾಗಿದ್ದರು. ಎಷ್ಟೋ ಸರಳ ಜೀವನದ ನಡತೆಗಳು ಸಮಾಜದ ಸದಾಚಾರ ರಕ್ಷಣೆಗಳಿಂದ ಸಾಧಿಸುವುವು.

ಚಿರಸಂವಾಹಿ ಸಂಪ್ರೀತಿ ಸ್ವಾಧೀನ್ಯ ಸ್ವಾಸ್ಥ್ಯ ರಕ್ಷಕಃ ।
ಕುಲಾದಿಭೇದೈರ್ಧರ್ಮಾಣಾಂ ವಿಶೇಷಃ ಕಥಿತಃ ಪುರಾ ॥

ಎಂಬುದಾಗಿ ಸದಾಚಾರಗಳ ಮಹತ್ತ್ವವು ನೀತಿದೀಪಿಕೆಯೊಳಗೆ ಹೇಳಲ್ಪಟ್ಟಿದೆ. ಅಂದರೆ ಚಿರಕಾಲದಿಂದ ಅಭ್ಯಸ್ತವಾಗಿದ್ದು ಸಂತೋಷದ ಸ್ಥೈರ್ಯವೂ ಸ್ವಾಧೀನತೆಯೂ ಸ್ವಾಸ್ಥ್ಯವೂ ಆಚಾರ ರಕ್ಷಣೆಯಿಂದ ಸಿದ್ಧಿಸುವುದು. ತಮ್ಮ ಸದಾಚಾರದಲ್ಲಿ ಸಂತೋಷವಿಲ್ಲದವರು ಹೊಸ ಹೊಸ ಧೂರ್ತರಿಂದ ಪ್ರಭಾವಿತರಾಗಿ ಆಕರ್ಷಿಸಲ್ಪಟ್ಟು ಯಾವುದೊಂದು ರೀತಿಯಲ್ಲಿಯೂ ಸ್ಥಿರ ಸಂತೋಷ ಪಡೆಯದೆ ಹೋಗುವರು. ಯಾವಾಗಲೂ ಅಂಥವರನ್ನು ಸ್ವಾಚಾರದಿಂದ ಚ್ಯುತಗೊಳಿಸಿ ಸ್ವಾಧೀನ ಮಾಡಿ-ಕೊಳ್ಳುವುದು ಧೂರ್ತರಿಗೆ ಸಹಜವಾಗುತ್ತದೆ. ಅಂಥವರು ತನ್ನಲ್ಲೇ ಸ್ಥಿರವಾಗಿರದ ಕಾರಣ ಸ್ವಾಧೀನ ಮಾಡುವ ಧೂರ್ತರ ಅಧೀನರಾಗಿರುವರು. ಧೂರ್ತರು ಅಂಥವರಿಗೆ ಸಹಜವಾಗಿ ಅನೇಕ ವ್ಯಸನಗಳನ್ನೂ ಕುರೀತಿಗಳನ್ನೂ ಹಿಡಿಸಿ ತನ್ನ ಸ್ವಾರ್ಥವ್ಯಾಪಾರಗಳನ್ನು ಬೆಳೆಸುವರು. ಗೊತ್ತಾಗದಂತೇ ಸರ್ವಸ್ವವನ್ನೂ ಹರಿಸುವರು. ಗೋಪಾಲ-ಕೃಷ್ಣ ಗೋಖಲೆಯವರು ವಿದೇಶೀ ವಸ್ತು ಬಹಿಷ್ಕಾರ ಪರವಾದ ತಮ್ಮ ಒಂದು ವ್ಯಾಖ್ಯಾನದಲ್ಲಿ ವಿದೇಶೀ ವ್ಯಾಪಾರ ವಿಶಿಷ್ಟ್ಯವಿರಿ ಬೆಳೆಯುವುದಕ್ಕೆ ಪ್ರಥಮಕಾರಣ ತಮ್ಮ ಸದಾಚಾರಗಳನ್ನು ಬಿಟ್ಟ ಆಧುನಿಕರೇ ಎಂದು ಹೇಳಿರುತ್ತಾರೆ. ಈ ಪ್ರಕಾರ ಈಗಿನ ಎಲ್ಲಾ ಹೊಸ ಹೊಸ ರೀತಿಗಳೂ ಇಂಥವುಗಳೇ ಆಗಿ ಎಲ್ಲರನ್ನೂ ಅರ್ಥನಾಶ, ಆರೋಗ್ಯನಾಶ, ಧರ್ಮನಾಶ ಮೊದಲಾದ್ದಕ್ಕೆ ಪಾತ್ರರನ್ನಾಗಿ ಮಾಡಿರುವುದು. ಆಚಾರವನ್ನೂ ಬಿಟ್ಟವರು ಒಂದು ಕ್ಷಣ ಹಸಿವೆ ಬಾಯಾರಿಕೆಯಾದರೂ ಸಹಿಸಲು ಸಾಮರ್ಥ್ಯವಿಲ್ಲದವರಾಗಿರುತ್ತಾರೆ

ಗಾಯತ್ರೀ ಮಾತ್ರಸಾರೋಽಪಿ ಪರಂ ವಿಪ್ರ ಸುಯಂತ್ರಿತಃ ।
ನಾಯಂತ್ರಿತಃ ತ್ರಿವೇದೋಽಪಿ ಸರ್ವಾಶೀ ಸರ್ವವಿಕ್ರಯೀ ॥
ಆಚಾರಃ ಪ್ರಥಮೋ ಧರ್ಮಃ ಶ್ರುತ್ಯುಕ್ತಃ ಸ್ಮಾರ್ತ ಏವ ಚ ।
ತಸ್ಮಾದಸ್ಮಿನ್ ಸದಾಯುಕ್ತೋ ನಿತ್ಯಂ ಸ್ಯಾದಾತ್ಮವಾನ್ ದ್ವಿಜಃ ॥

ಇತ್ಯಾದಿ ಸದಾಚಾರ ಮಹಿಮೆಗಳು ವಿಚಾರವಂತರಿಗೆ ಆಲೋಚಿಸಿ ತಿಳಿಯಲರ್ಹವಾಗಿವೆ. ತನ್ನ ಸದಾಚಾರವನ್ನು ಬಿಟ್ಟವನು ಮುಂದುವರಿಸುತ್ತಾ ಏನು ಅನುಚಿತ ಕಾರ್ಯವನ್ನಾದರೂ ಮಾಡಬಹುದೆಂದೂ ಆದಕಾರಣ ವಿಶ್ವಾಸಕ್ಕೆ ಅಯೋಗ್ಯನೆಂದೂ ನೀತಿಶಾಸ್ತ್ರವಿದೆ.

ಕರ್ಮಸ್ವಂ ನೋಪಯುಂಜಾನ ಮವಿಶ್ವಾಸ್ಯಂ ಹಿತಂ ವಿದುಃ
(ಮ. ಭಾ. ರಾ. ಧ. ಅ. ೬೫)

ಆಚಾರ ರಕ್ಷಣದಂತೆ ಗುಣರಕ್ಷಣ ಮತ್ತು ರಕ್ತ ಶುದ್ಧಿಗೋಸ್ಕರವೂ ಸಮಾಜ ರಕ್ಷಣವ ಆವಶ್ಯಕತೆಯಿದೆ. ಪ್ರತಿಯೊಂದು ಸಮಾಜವೂ ತನ್ನ ಕೆಲವು ಗುಣಗಳಿಗಾಗಿ ಸಹಜ ಕಷ್ಟ ಸಹಿಷ್ಣುವಾಗಿರುತ್ತದೆ. ವಿಶೇಷವಾಗಿ ಆಪತ್ಕಾಲದಲ್ಲಿ ಅದು ತನ್ನ ಆಯಾ ಗುಣಗಳಿಗಾಗಿ ಪ್ರಸಿದ್ಧವಾಗುತ್ತಿದೆ. ಇರುವ ಗುಣಗಳನ್ನು ರಕ್ಷಿಸುವುದಾಗಲೀ ಇಲ್ಲದ ಗುಣಗಳನ್ನು ಸಂಪಾದಿಸುವುದಾಗಲೀ ಕೂಡದೆಂದು ಯಾರೂ ಹೇಳುವುದಿಲ್ಲ. ಸಮಾಜ ಬಂಧನಗಳ ರಕ್ಷಣದಿಂದ ಇರುವ ಗುಣಗಳ ರಕ್ಷಣೆಯಾಗುವುದು. ಸಮಾಜ ಬಂಧನಗಳಂತೆ ನಡೆಯುವವರಿಗೆ ಸನ್ಮಾನವಿಲ್ಲದೆ ಉಚ್ಛೃಂಖಲರಿಗೆ ಆಶ್ರಯ ಕೊಟ್ಟು ಸನ್ಮಾನಿಸಿದರೆ ಆ ಸಮಾಜ ಗುಣಗಳನ್ನು ರಕ್ಷಿಸಲೋಸುಗ ಕಷ್ಟ ಸಹಿಸುವುದಕ್ಕೆ ಪ್ರೋತ್ಸಾಹನೆಯು ಆಗುವುದು ಹೇಗೆ? ಸ್ತ್ರೀಯರ ಶುಚಿತ್ವವೂ ಬಾಲಕರ ಗುಣಶೀಲ ಸಂವರ್ಧನವೂ ಎಲ್ಲಾ ಸ್ತ್ರೀಪುರುಷರ ಅಕಾರ್ಯಕರಣದಿಂದ ನಿವೃತ್ತಿಯೂ ಸಮಾಜ ರಕ್ಷಣದಿಂದ ಉಂಟಾಗುವ ಸವಭಿಮಾನ, ಸಮಾಜ ದಂಡಭಯ ಸರಂಪರೆಯ ಅಭ್ಯಾಸ ಇತ್ಯಾದಿಗಳಿಂದಲೇ ಕರ್ಣನಿಗೆ ಯಾವಾಗಲೂ ತಾನು ಸೂತಪುತ್ರನೆಂದು ಭಾವನೆಯಾಗಿದ್ದು ಕ್ಷತ್ರಿಯ ಸಮಾಜದಲ್ಲಿ ರಕ್ಷಿತನಾಗದ ಕಾರಣ ಆತನು ಯುದ್ಧದಲ್ಲಿ ಸ್ವಲ್ಪ ಪೌರುಷದಿಂದಲೇ ಕೃತಕೃತ್ಯನೆಂದು ಭಾವಿಸುತ್ತಿದ್ದನು. ಅಪಜಯದಿಂದ ಏನೆಂದೂ ಅನುತ್ಸಾಹಿಯಾಗುತ್ತಿರಲಿಲ್ಲ. ಅರ್ಜುನನಾದರೋ ಅದಕ್ಕೆ ವಿಪರೀತ ಲೇಶ ಮಾತ್ರ ಅಪಜಯವಾದರೂ ಅಸಹಿಷ್ಣುವಾಗಿ ಮಹಾ ಪೌರುಷ ಮಾಡಿದರೂ ಅತೃಪ್ತನಾಗಿದ್ದನು. ಅದಕ್ಕೆ ಕಾರಣವೇನೆಂದರೆ ಕ್ಷತ್ರಿಯ ಸಮಾಜದೊಳಗೆ ರಕ್ಷಿತನಾಗಿರುವದೇ ಆಗಿದೆ. "ನಾಕುಲೀನಸ್ಯ ಶ್ರದ್ಧಾ ಜಾಯತೇ" ಅರ್ಥಾತ್ ಕುಲಾಚಾರಗಳ ಮತ್ತು ಸಮಾಜ ಸದಾಚಾರಗಳ ರಕ್ಷೆಯಾಗದೇ ಹೋದರೆ ಆಧ್ಯಾತ್ಮಿಕ ಆಧಿದೈವಿಕ ತತ್ತ್ವಗಳ ವಿಷಯದಲ್ಲಿ ಶ್ರದ್ಧೆಯೇ ಉದಯಿಸದಂತಾಗುವುದು. ಎಂಬುದಾಗಿ ನ್ಯಾಯಕಂದಲೀಕಾರರು ಹೇಳುತ್ತಾರೆ

ಶುಚೀನಾಂ ಶ್ರೀಮತಾಂ ಗೇಹೇ ಯೋಗ ಭ್ರಷ್ಟೋಽಭಿಜಾಯತೇ
ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಂ।

ಎಂಬುದಾಗಿ ಗೀತೆಯೂ ಇದೇ ಹೇಳಿದೆ. ಭಾರತದ ವೈದಿಕ ಆಧ್ಯಾತ್ಮಿಕಾದಿ ತತ್ತ್ವಜ್ಞಾನವೂ ಮನುಷ್ಯ ಸಂಬಂಧೀ ವಿಜ್ಞಾನ (Human Science) ಎಲ್ಲರಿಗಿಂತಲೂ ಉನ್ನತವಾಗಿರುವುದೆಂದು ಸರ್ವತ್ರ ಕೇಳಿಬರುವುದು ಸಮಾಜ ರಕ್ಷಣದ ಫಲವೇ ಆಗಿದೆ.

ಗಾರ್ಭೈರ್ಹೋಮೈರ್ಜಾತ ಕರ್ಮ ಚೌಲಮೌಂಜೀನಿಬಂಧನೈಃ।
ಬೈಜಿಕಂ ಗಾರ್ಭಿಕಂ ಚೈನೋ ದ್ವಿಜಾನಾಮುಪಮೃಜ್ಯತೇ॥
ಸ್ವಾಧ್ಯಾಯೇನ ವ್ರತೈರ್ಹೋಮೈಸ್ತ್ರೈವಿದ್ಯೇನೇಜ್ಯಯಾಸುತೈಃ।
ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ॥

ಎಂದು ಮನುಸ್ಮೃತಿಯೂ "ಯಸ್ಯೈತೇ ಅಷ್ಟಾಚತ್ವಾರಿಂ ಶತ್ಸಂಸ್ಕಾರಾಃ" ಇತ್ಯಾದಿ ಧರ್ಮ ಸೂತ್ರಗಳೂ ಎಲ್ಲಾ ಅಷ್ಟಾಚತ್ವಾರಿಂಶತ್ಸಂಸ್ಕಾರಗಳೂ ಅಧ್ಯಾತ್ಮ ದರ್ಶನ ಯೋಗ್ಯ ಶರೀರವನ್ನುಂಟು ಮಾಡುವುದರಲ್ಲಿ ಉಪಯುಕ್ತಗಳೆಂದು ಹೇಳುತ್ತಿವೆ. ಮನುಸ್ಮೃತಿಯೆಂಬುದು "ಯದ್ವೈಕಿಂ ಚ ಮನುರವದತ್ತದ್ಭೇಷಜಂ" ಎಂಬದಾಗಿ ಶೃತಿವರ್ಣಿತ ಮಹಿಮೆಯುಳ್ಳದ್ದಷ್ಟೇ ಅಲ್ಲದೆ ಜರ್ಮನಿಯ ಹೆರ್ ಹಿಟ್ಲರನಿಗೆ ಮಾನ್ಯನಾದ ನಿತ್ಶೆ ಸಾಹೇಬನ ಉದ್ಗಾರವೂ ಮನುಸ್ಮೃತಿಯ ವಿಷಯದಲ್ಲಿ ಕೇಳಿದರೆ ಆಶ್ಚರ್ಯಕರವಾಗಿದೆ. ಆತನು ತನ್ನ ಪುಸ್ತಕದಲ್ಲಿ.

—ಸತ್ಯವಾದ ಮಾನವತೆಯು ಸಿದ್ಧಿಸಬೇಕಾದರೆ ಹಿಂದುಗಳಲ್ಲಿ ಕಾಣುವ ಮಾರ್ಗವನ್ನೇ ಸ್ವೀಕರಿಸಬೇಕು. ಬಾಯಬಲ್ ತೆಗೆದು ಹಾಕಿ ಮನುರಚಿತ ಧರ್ಮ ಶಾಸ್ತ್ರವನ್ನೇ ಅನುಸರಿಸಬೇಕು. ಕ್ರಿಶ್ಚಿಯನ್ ಮತ ಗುಲಾಮಧರ್ಮವಾಗಿದೆ. ಮನುಧರ್ಮವಾದರೋ ಪರಮ ಕಲ್ಯಾಣ ಧರ್ಮ ಮಾರ್ಗವಾಗಿದೆ. ನನ್ನ ವಿಚಾರವು ಬದಲಿಸಿ ಬಾಯಬಲಿಗಿಂತ ಮನುಧರ್ಮದ ಕಡೆಗೇ ಅಧಿಕ ಜ್ಞಾನ ಸಂಪನ್ನರು ಆಕರ್ಷಿತರಾಗುತ್ತಾರೆಂದಾಗಿದೆ.

ಮನುಮಹಾರಾಜನು ತನ್ನ ಕಪೋಲಕಲ್ಪಿತವಾಗಿ ಒಂದೂ ಹೇಳಲಿಲ್ಲ. ಸ್ವಾಭಾವಿಕ ರೀತಿಯಿಂದ ಆವಶ್ಯಕವಾದ ಮತ್ತು ಹಿಂದಿನಿಂದ ನಡೆದು ಬಂದ ಪರಂಪರೆಯನ್ನೇ ಸಮಾಜ ವ್ಯವಸ್ಥೆಗೋಸ್ಕರವಾಗಿ ಸಂಗ್ರಹಿಸಿರುವುದಷ್ಟೇ. ತದನುಸಾರ ಸಮಾಜದೊಳಗೆ ಪ್ರತಿಯೊಬ್ಬನ ಅಧಿಕಾರವೂ ನಿರ್ದಿಷ್ಟವಾಗಿರುವುದು. ಮನುಷ್ಯನು ಯೋಗ್ಯನಾದಂತೇ ಅವನ ಉತ್ತರದಾಯಿತ್ವಗಳೂ ಹೆಚ್ಚುತ್ತವೆ. ಇವೆಲ್ಲಾ ತಿಳಿದು ಇದ್ದಂತೇ ಎಲ್ಲಾ ವ್ಯವಸ್ಥೆಗಳನ್ನೂ ಮನುಮಹಾರಾಜನು ಬರೆದಿರುತ್ತಾನೆ"—

ಎಂದೀ ಮೊದಲಾದ ವಿಚಾರಗಳು ಬರೆಯಲ್ಪಟ್ಟಿವೆ.

ಶ್ರೀ ಜಗದೀಶಚಂದ್ರ ಬೋಸ್‌ರವರು ವೃಕ್ಷಗಳಿಗೆ ಜೀವ ಉಂಟೆಂಬ ವೇದ ಶಾಸ್ತ್ರೋಕ್ತ ಸಿದ್ಧಾಂತವನ್ನು ಯಂತ್ರತಂತ್ರಗಳ ದ್ವಾರಾ ವೈಜ್ಞಾನಿಕರೆದುರು ಸಿದ್ಧಪಡಿಸಿದ ವಿಷಯದಲ್ಲಿ ಮಿಸ್ ಎನಿಬೆಸೆಂಟ್ ಎಂಬ ವಿಖ್ಯಾತ ಮಹಿಳೆಯು ಆತ್ಯಾಶ್ಚರ್ಯಪಟ್ಟು ಬೊತ್ತ ದೊಡ್ಡ ಯೂರೋಪೀಯ ವೈಜ್ಞಾನಿಕರಿಂದಾಗದಿದ್ದ ಈ ಅಧ್ಯಾತ್ಮ ಮಹಾ ಆವಿಷ್ಕಾರವು ಒಬ್ಬ ಹಿಂದೂ ವೈಜ್ಞಾನಿಕನಿಂದ ಆಗಿರುವುದಕ್ಕೆ ಕಾರಣವು ಹಿಂದೂ ಸಮಾಜದೊಳಗೆ ಆತನು ಉದ್ಭವಿಸಿರುವುದೇ ಆಗಿದೆ ಎಂದು ಹೇಳಿರುವಳು. ಇಂಥಾ ಅನೇಕ ಆಧುನಿಕರ ಉದ್ಗಾರಗಳೂ ಸಮಾಜರಕ್ಷಣದ ಮಹತ್ತ್ವವನ್ನು ಅಗತ್ಯ ತಿಳಿಸುವುವು.

ಆಧುನಿಕರು ಅರ್ಥಕಾಮವಿಷ್ಟೇ ಇಹಲೋಕ ಜೀವನ ಧ್ಯೇಯ ಹಾಗೂ ಸಾಧ್ಯವೆ ಹೊರತು ಇನ್ನೇನೂ ಸಾಧ್ಯವಿಲ್ಲವೆಂದು ತಿಳಿಯುತ್ತಾರೆ. ಹಾಗಾದರೆ 'ಋಣಂ ಕೃತ್ವಾ ಘೃತಂ ಪಿಬೇತ್' ಎಂಬ ಪರಿಣಾಮವಲ್ಲದೆ ಸಂಯಮದ ಪ್ರವೃತ್ತಿಯುಂಟಾಗುವುದಕ್ಕೆ ಕಾರಣವೇನೂ ಇಲ್ಲ. ಹಾಗಾದರೆ ಯಾವುದೊಂದು ಅರ್ಥಕಾಮ ಪ್ರವೃತ್ತಿಯುಂಟಾದರೂ ಅದನ್ನು ನಿಗ್ರಹಿಸುವ ಪ್ರಯತ್ನ ಮಾಡದೆ ನ್ಯಾಯದಿಂದಲೋ ಅನ್ಯಾಯದಿಂದಲೋ ಸಾಧಿಸುವುದೇ ಬುದ್ಧಿವಂತಿಕೆಯಾಯಿತು. ಹೀಗೆ ಹೇಳಿಯೂ ಆಧುನಿಕರು ಮನಃಕಲ್ಪಿತವಾದ ಬಂಧನಗಳನ್ನು ಪ್ರಕಾಶವಾಗಿ ವಿಧಿಸುವರು. ಒಳಗಿಂದೊಳಗೆ ಅವರ ಭಂಗವನ್ನೇ ತಾನು ಮಾಡುವುದು. ಅದರ ಫಲವಾಗುವುದು ಸಹಜ ಮನಃಕಲ್ಪಿತ ಬಂಧನಗಳಿಂದಾದರೂ ಎಲ್ಲರ ಅರ್ಥ ಕಾಮ ತೃಷ್ಣೆಯು ತೃಪ್ತಿಯಾಗುವಂತೆ ಸಾಧಿಸುತ್ತದೆಯೊ ? ಕಾರಣವಿಲ್ಲವೇ ಉಚ್ಛೃಂಖಲತೆಯನ್ನು ಬೆಳೆಯ ಬಿಟ್ಟು ಅರ್ಥ ಕಾಮ ತೃಷ್ಣೆಯು ಎಂದಿಗೂ ಸಂತೃಪ್ತವಾಗಲಾರದೆ ಬೇರೆ ಧರ್ಮ ಮೊದಲಾದ ಸಂತೋಷಾವಲಂಬನವೂ ಇಲ್ಲದೇ ಅಶಾಂತಿಯಲ್ಲೇ ಮರಣವು ಅಂಥವರಿಗೆ ಪರಿಣಾಮವಾಗಿದೆ. ಅಂಥವರನ್ನು ಕುರಿತೇ :—

ಯಾಮಪ್ರಾಪ್ಯೈವ ಕೌಂತೇಯ ತತೋಯಾಂತ್ಯಧಮಾಂ ಗತಿಂ

ಎಂದು ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಹೇಳಿರುವುದು. ಆಧುನಿಕರು ಆಗಿಂದಾಗ್ಯೆ ಮನಃ ಕಲ್ಪಿತ ಬಂಧನಗಳನ್ನು ಮತಗಣನೆಯಿಂದ ಹೊಸ ಹೊಸದಾಗಿ ಕಲ್ಪಿಸುವರು. ಕಾರಣವೇನು ? ಅವರಿಗೇ ಅವರೊಳಗೆ ಸಂತೋಷವಿರುವುದಿಲ್ಲ. ಹಾಗಾದರೂ ಕಲ್ಪಿತವಾದ ಬಂಧನಗಳನ್ನು ನೆಲೆಗೊಳಿಸುವುದಕ್ಕೋಸ್ಕರ ಎಲ್ಲಾ ಶಕ್ತಿಯು ಉಪಯುಕ್ತವಾಗುವುದು ಬೇಕೆಂದು ನಿಯಮಿಸುವರು. ಅಂಥಾ ಸ್ಥಿತಿಯಲ್ಲಿ ಶ್ರುತಿಸ್ಮೃತಿ ಸದಾಚಾರಗಳಿಂದ ಪ್ರಾಪ್ತವಾಗಿ ಸಮಾಜದ ಚಿರಅಭ್ಯಾಸದಲ್ಲಿ ಹಿಡಿದಿರುವ ಬಂಧನಗಳನ್ನೇ ಮನೋನೀತ ಮಾಡಿಕೊಂಡು ನೆಲೆಗೊಳಿಸುವುದಕ್ಕೆ ರಾಜಶಕ್ತಿಯು

ಉಪಯೋಗ ಮಾಡುವುದು ಬೇಡ ಏಕೆ? ಆಗಾಗ್ಗೆ ಹೊಸ ಹೊಸ ಕಲ್ಪಿತ ಬಂಧನಗಳ ಅಭ್ಯಾಸವನ್ನು ಹಿಡಿಸಿಬಿಡಿಸುತ್ತಿರುವ ಉಪದ್ರವದಿಂದ ಏನುಲಾಭ? ಮನಃ ಕಲ್ಪಿತ ಬಂಧನಗಳಿಗೆ ಮತ ಕೊಡುವವರು ಸರ್ವಜ್ಞರಾಗಿದ್ದಾರೊ? ಇಲ್ಲ. ಆದ್ದರಿಂದ ಅವರು ತಾವು ಹೇಳಿದ್ದೇ ಸ್ಥಿರಸತ್ಯವೆಂದು ಹೇಳಲಾಗುವದಿಲ್ಲ. ಪರಂಪರೆಯ ಬಂಧನಗಳನ್ನು ಎಲ್ಲಾ ಬಿಡುವುದಾಗಲೀ ಎಲ್ಲಾ ತಪ್ಪೆಂದಾಗಲೀ ನಿರ್ಣಯಿಸುವುದೂ ಅಸರ್ವಜ್ಞರಿಂದಾಗದು. ಅಂಥಾ ಸ್ಥಿತಿಯಲ್ಲಿ ತಮ್ಮ ಒಂದು ಹೊಸ ಕಲ್ಪನೆಯನ್ನು ನಡೆಸುವುದು ನಿರಂಕುಶತೆಯಲ್ಲದೆ ಬೇರೆ ಏನೂ ಕಾಣದು. ಯಾವುದೊಂದು ವಿಧಾನವೂ ಪ್ರಮಾಣಗಳ ಬಲದಿಂದಲೇ ಯಥಾರ್ಥಗಳಾಗಿ ತಿಳಿಯಬಹುದಲ್ಲದೆ ಮತಗಳಿಂದಾಗದು. ಪ್ರತ್ಯುತ ಇಚ್ಛೆಯು ಎಂದಿಗೂ ಅಧೋಗಾಮಿನಿಯಾಗಿರುವುದು. ಹೊಸ ಕಲ್ಪನೆಯ ಬಂಧಗಳಿಗೆ ಮತ ಕೊಡುವವರೆಲ್ಲರೂ ಸತ್ಯಸಂಕಲ್ಪರೂ ಸತ್ಯಕಾಮರೂ ಆದವರೆಂದರೆ ಶ್ರದ್ಧಾಜಡರೇ ಒಪ್ಪಬೇಕಷ್ಟೆ.

ಮನುಷ್ಯ ಜೀವನವು ಕೇವಲ ಇಹಲೋಕದ ವಿಚಾರಗಳಿಂದಲೇ ಸಫಲವೆನಿಸುವುದಿಲ್ಲ. ಹಕ್ಕಿಗಳಂತೆ ಹಾರುವುದಾಗಲೀ ಮೀನುಗಳಂತೆ ಮುಳುಗುವುದಾಗಲೀ ಆಟಂಬಾಂಬಿನಿಂದ ಸಮಸ್ತವನ್ನೂ ಸುಡುವುದಾಗಲೀ ಮನುಷ್ಯನ ಸಂಪೂರ್ಣ ಕೃತಕೃತ್ಯತೆಯಲ್ಲ. ತತ್ರಾಪಿ ಹಿಂದೂ ಜೀವನವು ಪಶುಜೀವನಕ್ಕಿಂತ ಧರ್ಮಮೋಕ್ಷ ಪುರುಷಾರ್ಥಗಳನ್ನು ಸಾಧಿಸುವುದಕ್ಕೋಸ್ಕರವಾಗಿರುವ ಜೀವನವು. ತದ್ವಿರುದ್ಧವಾದ ಅರ್ಥಕಾಮ ಪುರುಷಾರ್ಥಗಳು ಇಹಲೋಕದ ಗೌಣಪುರುಷಾರ್ಥಗಳು. ಅದ್ದರಿಂದ ಹಿಂದೂ ಸಮಾಜದೊಳಗಿನ ಜೀವನವು ಕೇವಲ ಐಹಿಕ ದೃಷ್ಟಿಗಳಿಂದ ನಿಯಮಿತ–ವಾಗುವಂತಿಲ್ಲ. ಅದು ಶ್ರುತಿಸ್ಮೃತಿ ಸದಾಚಾರ ಪ್ರತ್ಯಕ್ಷ ಅನುಮಾನಗಳೂ ಸೇರಿ ನಿಯಮಿತವಾಗುವುದು. ಇತರ ಸಮಾಜ ಬಂಧನಗಳೆಲ್ಲಾ ಪರಂಪರೆಯಾಗಿ ಪ್ರಮಾಣಪೂರ್ವಕ ಬಂದವುಗಳಾಗಿವೆ. ಈ ವಿಷಯದಲ್ಲಿ ಹಿಂದೂ ಸಮಾಜವು ತನ್ನ ಪರಂಪರಾಗತ ಸ್ವರೂಪವನ್ನು ಮರೆತರೆ ಆ ಮೇಲೆ ಅದು ಜೀವಿಸಿರಲಾರದು. 'ನಾವು ಹಿಂದುಗಳಾಗಿ ಜೀವಿಸಿ ಆಗಬೇಕಾದ್ದೇನೆಂ'ದೂ ಸಹ ಈ ನಾಲ್ಕು ಪುರುಷಾರ್ಥಗಳ ಗಂಧವೂ ಇಲ್ಲದ ಶೋಚನೀಯರಾದ ಪ್ರಶ್ನಕರ್ತರೂ ಈಗ ಕಾಣ ಸಿಗುವರು. ಆದರೆ ಅಂಥವರು ಏನೆಂದೂ ಜೀವಿಸಿ ಆಗಬೇಕಾದ್ದೇನೆಂದು ಪ್ರಶ್ನೆ ಕೇಳಿದರೆ ಅವರೇನು ಹೇಳುವರು? ಮ್ಲೇಚ್ಛರಿಗೂ ಸಹ ಕಂಡು ಬರುವ ಸ್ವಾಭಿಮಾನವೂ ಕೂಡಾ ಇಲ್ಲದ ಇಂಥಾ ಪ್ರಾಣಿಗಳಿಗೆ ದೇಶಾಭಿಮಾನವಾಗಲೀ ಇನ್ನು ಬೇರೆ ಆಧುನಿಕಾಭಿಮತ ಗುಣಗಳಾಗಲೀ ಯಾವುದೂ ಎಂದಿಗೂ ಸಂಭವವಿಲ್ಲ. ಮತ್ತೆ ಪುರುಷಾರ್ಥ ಸಿದ್ಧಿ ಎಲ್ಲಿಂದ?

ಆಧುನಿಕ ಜಡ ವಿಜ್ಞಾನದಿಂದಾಗಿ ದಿಗ್ಭ್ರಮೆಯನ್ನು ಹೊಂದಿದ ಈಗಿನ ಕೆಲವರು ವೇದಾದಿ ಪ್ರಮಾಣಗಳ ಮೇಲೆ ಜೀವನ ನಿಯಮನವು ಸಂಭವವಿಲ್ಲೆಂದು

ಘೋಷಿಸುವರು. ಆದರೆ ಭೌತಿಕ ಜಡವಿಜ್ಞಾನ ಪ್ರವೀಣರಾದ ಅಮೇರಿಕಾ ಮೊದಲಾದ ದೇಶದವರು ಹೊಸ ವೈಜ್ಞಾನಿಕ ಸಾಧನಗಳಿಂದುಂಟಾದ ಅನೀತಿ ಪ್ರವೃತ್ತಿಗಳನ್ನು ಭಾರತದ ಆಧ್ಯಾತ್ಮಿಕತ್ವದ ಬಲದಿಂದ ನಿಯಂತ್ರಣ ಮಾಡಿದರೆ ಮಾತ್ರವೇ ಕ್ಷೇಮ ಉಂಟಪ್ಪೇ ಎಂದು ಬೇರೆ ಉಪಾಯವನ್ನು ಕಾಣದೆ ಸ್ಪಷ್ಟವಾಗಿ ಹೇಳುವರು. ಪಾಶ್ಚಾತ್ಯ ದೇಶಗಳಲ್ಲಿ ಸಂಸ್ಕೃತಿ ಪ್ರಾಧಾನಗಳಾದ ಶಿಕ್ಷಣಗಳಿಗೆ ಪ್ರಾಧಾನ್ಯ ವಿದ್ದದ್ದನ್ನು ಜಡಭೌತಿಕ ವಿಜ್ಞಾನ ಪ್ರಧಾನವಾಗಿ ಮಾಡಿ ಅದರ ಮುಂದಿನ ಪರಿಣಾಮದಲ್ಲಿ ಈಗ ಯಾಂತ್ರಿಕ ಪ್ರಧಾನವಾದ ಶಿಕ್ಷಣವು ಬೆಳೆದಿವೆ. ಈ ಚಿಹ್ನವು ಉಚ್ಛೃಂಖಲ ಪರತೆಯು ಗಮಕವಾಗಿದೆ. ಪುರುಷ ನಿರ್ಮಿತಗಳಾದ ಸಂಸ್ಕೃತಿ ಶಿಕ್ಷಣಗಳು ಇಂಥಾ ಅರ್ಥಕಾಮ ದುಷ್ಪರಿಣಾಮಗಳನ್ನು ಪ್ರತಿಬಂಧಿಸಲು ಸಮರ್ಥಗಳಲ್ಲ. ಭ್ರಮ, ಪ್ರಮಾದ ವಿಪ್ರಲಿಪ್ಸಾಕರಣಾಪಾಟವಗಳು ಪುರುಷ ನಿರ್ಮಿತಗಳಲ್ಲಿ ಅನಿವಾರ್ಯಗಳಾದ್ದರಿಂದ ಅವುಗಳು ಪರೀಕ್ಷಕ ಬುದ್ಧಿಯನ್ನು ಸ್ಥಿರಗೊಳಿಸಲಾರವು. ಇಷ್ಟೊ ಅಲ್ಲದೆ 'ಜನ್ಮ, ಓಷಧಿ, ಮಂತ್ರ, ತಪಃ, ಸಮಾಧಿಜಾಃ ಸಿದ್ಧಯಃ' ಎಂಬ ಐದು ಪ್ರಕಾರದ ಸಿದ್ಧಿಗಳ ಪೈಕಿ 'ಓಷಧಿ ಸಿದ್ಧಿ' ಎಂಬುದರಲ್ಲಿ ಸೇರಿದ ಧಾತುವಾದನೇ ಈಗಿನ ಭೌತಿಕ ವಿಜ್ಞಾನದ ವಿಷಯಗಳು. ಯಾವುದೊಂದು ಯಮನಿಯಮಗಳ ಅಪೇಕ್ಷೆಯೂ ಇಲ್ಲದೆ, ಉಚ್ಛೃಂಖಲ ಅನೈತಿಕ ದೇಹಾತ್ಮವಾದಿಗಳಿಗೂ ಸಿದ್ಧಿಸುವ ಈ ಶಿಲ್ಪಗಳು ಹೆಚ್ಚು ಬೆಳೆದರೆ ಜಗತ್ತಿನಲ್ಲಿ ಮರ್ಯಾದೆಯೂ ನೀತಿಧರ್ಮವೂ ದೇಹಾತಿರಿಕ್ತ ಅಧ್ಯಾತ್ಮವಾದವೂ ಇಲ್ಲದಂತಾಗಿ ಸರ್ವನಾಶದ ಸಂಭವವನ್ನು ತಿಳಿದು ಮಹಾ ಯಂತ್ರ ಪ್ರವರ್ತನಗಳನ್ನು ಶ್ರುತಿ ಸ್ಮೃತ್ಯಾದಿಗಳಲ್ಲಿ ಪಾತಕಗಳಾಗಿ ಎಣಿಸಿ ಉದಾಹರಿಸುತ್ತಾರೆ. ಈ ವಿಜ್ಞಾನದ ವಿಷಯಗಳನ್ನೂ ತಿಳಿಯದೇ ಇರುತ್ತಿದ್ದರೆ ಅವುಗಳ ಪ್ರವೃತ್ತಿಯನ್ನು ನಿಷೇಧಿಸುವುದು ಹೇಗೆ? ಬೇರೆ ತರದ ಎಲ್ಲಾ ಸಿದ್ಧಿಗಳಿಗೂ ತಕ್ಕಮಟ್ಟಿಗೆ ಯಮನಿಯಮ ಶಾಸ್ತ್ರತಂತ್ರಗಳ ಆವಶ್ಯಕತೆಯು ಅನಿವಾರ್ಯವಾಗಿದೆ.

ಆದ್ದರಿಂದ ಅಪೌರುಷೇಯ ಸಂಸ್ಕೃತಿ ಪ್ರಮಾಣಗಳ ಪರೀಕ್ಷಿತ ಅಧ್ಯಯನಗಳೂ ಅದರೊಳಗಿನ ಆಧ್ಯಾತ್ಮಿಕ ಸಂಸ್ಕೃತಿಯ ಪ್ರವೃತ್ತಿ ಬಲಗಳೂ ಇಲ್ಲದೆ ಎಂದಿಗೂ ವರ್ತಮಾನ ವಿಜ್ಞಾನವು ಸುಪರಿಣಾಮಕಾರಕವಾಗದೆಂದು ತಿಳಿದವರು ಹೇಳುವುದು ಯುಕ್ತಿಯುಕ್ತವಾಗಿದೆ. ಹಾಗಿರಲು ಅಪೌರುಷೇಯ ಸಂಸ್ಕೃತಿ ಪ್ರಮಾಣಗಳುಳ್ಳವರಾದ ನಾವು ಹಿಂದೂ ಸಮಾಜದವರೇ ಅವುಗಳನ್ನೆಲ್ಲಾ ರಕ್ಷಿಸಿ ಸ್ವಪರಹಿತ ಸಾಧಿಸದೆ ಹೋದರೆ "ಸ್ವಯಂ ನಷ್ಟಃ ಪರಾನ್ನಾಶಯತಿ" ಎಂಬ ಈಗಿನ ದುಷ್ಪರಿಣಾಮಗಳಿಗೆ ಸಮಾಧಾನವೇನು?

ಕೆಲವರು ಕ್ರಮ ಕ್ರಮವಾಗಿ ಸಮಾಜ ಬಂಧನಗಳನ್ನು ಶಿಥಿಲಪಡಿಸಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಆದರೆ ಶಾಸ್ತ್ರಾನುಸಾರವಾದ ನಿಮಿತ್ತಗಳನ್ನು ಬಿಟ್ಟು ಸ್ವೇಚ್ಛೆಯಿಂದ ಹಾಗೆ ಮಾಡಿದರೆ ಕ್ರಮದಿಂದ ಎಲ್ಲಾ ಸ್ವೈರವಾಗುವುದು.

ಈ ಪ್ರಕಾರ ಸಮಾಜವು ಸ್ವೈರವಾದರೆ ಪರಿಣಾಮವು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಶಿಶುವಿಗೆ ತನ್ನ ವಯಃಸ್ಥಾಪನಾರ್ಥವಾಗಿ ತಾಯಿಯೇ ಸ್ತನ್ಯಕೊಡದಂಥವಳಾಗಿದ್ದದ್ದು ಪಾಶ್ಚಾತ್ಯರಲ್ಲಿ ಕಂಡುಬರುತ್ತದೆ. ಮಾತೃತ್ವವೇ ಅಂಥವರಿಗೆ ಬೇಡದಂತಾಗಿದೆ. ಮಾತೃತ್ವವನ್ನು ಪಾರಿತೋಷಿಕದಿಂದ ಸಂಮಾನಿಸುವುದೂ ಸಹಕಾರವೇ ಶಿಶು ಸಂಗೋ-ಪನದ ಭಾರವನ್ನು ವಹಿಸುವುದೂ ಕೆಲವು ಪಾಶ್ಚಾತ್ಯರು ಅದರ ಮೇಲೆ ಕಂಡುಹಿಡಿದ ಪ್ರತೀಕಾರವಂತೆ! ತಾಯಿಗಿಂತ ಶಿಶುವನ್ನು ಹೆಚ್ಚು ವಾತ್ಸಲ್ಯದಿಂದ ಯಾರು ಪಾಲಿಸುವರು? ಸ್ವೈರವಾಗಿ ಸಮಾಜಬಂಧನವನ್ನು ಅತಿಕ್ರಮಿಸುವ ರುಚಿ ಹಿಡಿದರೆ ತನ್ನಿಮಿತ್ತವಾದ ಸ್ವಾರ್ಥಪರತೆಯು ಸಮಾಜದ ಸಂಘಟನವನ್ನೇ ಅಲ್ಲ, ಒಂದು ಕುಟುಂಬದ ಒಗ್ಗಟ್ಟನ್ನೂ ಸಹ ಇಲ್ಲದಂತೆ ಮಾಡುವುದು ಪ್ರತ್ಯಕ್ಷವಾಗಿದೆ. ಇಂಥ ಸ್ಥಿತಿಯಲ್ಲಿ ದೇಶದೊಳಗಾದರೂ ಶಾಂತಿಸ್ಥಾಪನೋಪಯೋಗಿಯಾದ ಒಗ್ಗಟ್ಟು ಇರುವುದು ಅವಶ್ಯ. ಒಂದು ಪುಂಡರ ಸಂಘಟನವು ಯಾವ ರೀತಿಯಲ್ಲಿ ಕೊಲೆ ಮಾಡುವ ನಿಮಿತ್ತವಾಗಲೀ ಕೊಳ್ಳೆ ಹೊಡೆಯುವ ನಿಮಿತ್ತವಾಗಲೀ ಆಗುವುದೋ ಅಥವಾ ವ್ಯಸನಿಗಳ ಸಂಘಟನವು ವ್ಯಸನ ನಿಮಿತ್ತವಾಗಿ ಆಗುವುದೋ ಅಂಥಾ ಸಂಘಟನೆಗಳೇ ಆ ಮೇಲೆ ಪಾಶ್ಚಾತ್ಯರಲ್ಲೂ ಮ್ಲೇಚ್ಛರಲ್ಲೂ ಕಂಡುಬರುವಂತೆ ಆಗಬಹುದಲ್ಲದೆ, ನ್ಯಾಯ, ನೀತಿ, ವಿನಯ, ಧರ್ಮ ನಿಮಿತ್ತಗಳಾದ ಶಾಂತಿಸ್ಥಾಪಕ ಸಂಘಟನಗಳು ಆಗುವುದು ಶಕ್ಯವಾಗದು.

ಅದ್ವೈತಂ ಸುಖದುಃಖಯೋರನುಗತಂ ಸರ್ವಾಸ್ವವಸ್ಥಾಸು ಯತ್ ।
ವಿಶ್ರಾಮೋ ಹೃದಯಸ್ಯ ಯತ್ರ ಜರಸಾ ಯಸ್ಮಿನ್ನಹಾರ್ಯೋ ರಸಃ ॥

ಕಾಲೇನಾವರಣಾತ್ಯಯಾತ್ ಪರಿಣತೇ ಯತ್ಸ್ನೇಹಸಾರೇ ಸ್ಥಿತಂ ।
ಭದ್ರಂ ತಸ್ಯ ಸುಮಾನುಷಸ್ಯ ಕಥಮಪ್ಯೇಕಂ ಹಿ ತತ್ ಪ್ರಾರ್ಥ್ಯತೇ ॥

ಇತ್ಯಾದಿ ವರ್ಣನೀಯವಾದ ಕುಟುಂಬಗಳ ಗಾರ್ಹಸ್ಥ್ಯ ಪುರುಷಾರ್ಥವು ಆ ಮೇಲೆ ಎಂದಿಗೂ ನೆಲೆಗೊಳ್ಳದು. ಇದುವರೆಗಿನ ಆದರ್ಶ ಕವಿಕಾವ್ಯಗಳೆಲ್ಲಾ ಉಚ್ಛೃಂಖಲರಾದ ಬಳಿಕ ಅಪ್ರಿಯಗಳಾಗಿ ಕಾಣಬಹುದು. ಎಲ್ಲರೂ ರಸಾಭಾಸ ಪ್ರಿಯವಾಗಿ ಇಹಲೋಕದ ಸರಸಸುಖದಿಂದಲೂ ವಂಚಿತರಾಗುವ ಪ್ರಸಂಗ ಬರುವುದು.

ಈ ಪ್ರಕಾರ ಮತ್ತೂ ಎಷ್ಟೋ ತರದ ಆಪತ್ತಿಗಳು ಸಮಾಜ ಬಂಧನಗಳ ರಕ್ಷಣೆಯಾಗದೆ ಸ್ವೈರವೃತ್ತಿಯು ಸಮಾಜವಾದಾಗ ಉಂಟಾಗಬಹುದೆಂಬುದು ವಿಚಾರ-ವಂತರಿಗೆ ತಿಳಿಯಬಹುದಾಗಿದೆ. ಇದು ಕೇವಲ ಸಂಕ್ಷೇಪ. ಧರ್ಮಶಾಸ್ತ್ರಗಳನ್ನೂ ಭಾವಶಾಸ್ತ್ರಗಳನ್ನೂ ಮತ್ತು ಅರ್ಥಶಾಸ್ತ್ರಗಳನ್ನೂ ಪರಿಶೀಲಿಸಿದವರು ಮತ್ತು ಪಾಶ್ಚಾತ್ಯರಲ್ಲೂ ವಿಚಾರಶೀಲರಾದ ಹಲವರು ಎಷ್ಟೋ ಕಳವಳದಿಂದ ಈ ವಿಷಯವನ್ನು ಸಾರಿ ಹೇಳುತ್ತಿದ್ದಾರೆ. ವಿಜ್ಞಾನವೂ ಯಂತ್ರಸಾಧನಗಳೂ ಈ ವಿಷಯದಲ್ಲಿ ಏನೂ

ಪ್ರತೀಕಾರವನ್ನು ಮಾಡಲು ಅಸಮರ್ಥವಾಗಿವೆ. ನಾನಾತರದ ರಾಜನೀತಿಯ ಪಾರ್ಟಿಗಳು ಹೊಸ ಕಲ್ಪಿತ ಪ್ರಯೋಗಗಳಿಂದ ಸಮಾಜವನ್ನು ವಿಚಲಿತಗೊಳಿಸುತ್ತಿರುವುದಲ್ಲದೆ, ಅಭ್ಯಾಸವಾಗಿ ಬಂದಿರುವ ರೀತಿಗಳ ಅಧ್ಯಯನಮಾಡಿ ತಿಳಿದು ಅವುಗಳ ಸಮ್ಯಕ್ ಸ್ಥಾಪನೆಯ ವಿಷಯದಲ್ಲಿ ಪ್ರಯತ್ನಶೀಲಗಳಾಗಿಲ್ಲ. ಆದರಿಂದಾಗಿ ಬೇರೆ ಎಲ್ಲರಿಗಿಂತಲೂ ಶ್ರುತಿಸ್ಮೃತಿ ಮೂಲಕಗಳಾಗಿ ಸಮಾಜಗಳಿಗೆ ಹೆಚ್ಚು ಹಾನಿಯಾಗಿರುತ್ತವೆ. ಆದ್ದರಿಂದ ಶಾಸ್ತ್ರೋಕ್ತವಾದ ಪ್ರಮಾಣತರ್ಕ ಅನುಮಾನಗಳಿಂದ ಅವುಗಳ ಅಧ್ಯಯನಮಾಡಿ ಸಮಾಜದೊಳಗೆ ನಡೆಸುತ್ತಿದ್ದು "ತ್ರಯಾಣಾಂ ಧೂರ್ತಾನಾಂ" ಎಂಬ ಕಥೆಯಲ್ಲಿ ಒಬ್ಬ ದಡ್ಡ ಬ್ರಾಹ್ಮಣನು ಮೂರು ಧೂರ್ತರು ಶಂಕೆಯನ್ನುಂಟುಮಾಡಿದ ಮೇಲೆ, ಬಹಳ ಪರೀಕ್ಷಿಸಿ ಖರೀದಿ ಮಾಡಿದ ಆಡನ್ನು ನಾಯಿಯೆಂದು ಭ್ರಮಿಸಿ ತ್ಯಜಿಸಿದಂತೆ, ಪರಂಪರೆಯಲ್ಲಿ ಬಂದಿರುವ ಸದ್ಗುಣಗಳನ್ನೂ ಸದಾಚಾರಗಳನ್ನೂ ಕಳೆದುಕೊಳ್ಳದೆ ಕಾಪಾಡಿಕೊಳ್ಳಬೇಕು. ಇಲ್ಲವಾದರೆ ಸಮಾಜದಲ್ಲಿ ಬುದ್ಧಿವಂತರೂ ವಿಚಾರಕರೂ ಸವಭಿಮಾನಿಗಳೂ ಇಲ್ಲವೇ ಇಲ್ಲವೆಂದಾಗುವುದು. ಆದ್ದರಿಂದ ಸಮಾಜದವರೆಲ್ಲರೂ ಈ ಕಾರ್ಯದಲ್ಲಿ ಸಹಕಾರವನ್ನು ಕೊಟ್ಟು ನಡೆಸಿಕೊಳ್ಳಬೇಕು.

ಇನ್ನೀಗ ಆಧುನಿಕ ವಾತಾವರಣಗಳಿಂದಾಗಿ ಸಮಾಜ ಬಂಧನಗಳನ್ನು ರಕ್ಷಿಸುವುದು ಎಲ್ಲವೂ ಸಾಧ್ಯವಾಗದೆಂಬ ಒಂದು ವಾದವನ್ನೂ ಆಲೋಚಿಸಬೇಕಾಗಿದೆ. ಇವರ ಆಲೋಚನೆಗೆ ಸಾಧ್ಯವಾಗದಿದ್ದಲ್ಲಿ ಒದಗಿದ ಕಾರಣಗಳನ್ನೂ ಲಕ್ಷ್ಯಕ್ಕೆ ತಂದು ಶಾಸ್ತ್ರಾನುಸಾರ ನಿರ್ಣಯ ಮಾಡಬೇಕು. ಯಾವುದೊಂದು ಕರ್ತವ್ಯದಲ್ಲೂ "ಅರ್ಥೀ ಸಮರ್ಥೋ ವಿದ್ವಾನ್ ಅಧಿಕ್ರಿಯತೇ" ಎಂದೇ ಶಾಸ್ತ್ರವೂ ಹೇಳುವುದು. ಕಠಿನ ಸಮಯವು ಬಂದಿರುವುದೆಂದು ಎಲ್ಲಾ ಬಿಟ್ಟು ಕುಳಿತಿರುವುದು ಬುದ್ಧಿವಂತರ ಕಾರ್ಯವಲ್ಲ. ಬುದ್ಧಿವಂತರು ಆಪತ್ತಿಗಳಲ್ಲಿ ಇನ್ನಷ್ಟು ದೃಢರಾಗುವರು.

ಶಾಸ್ತ್ರದಲ್ಲಿ, ಸಮಾಜದ ವಿಚಾರವಂತರಾದ ವಿದ್ವಾಂಸರಿಗೆಲ್ಲರಿಗೂ ಯಾವುದು ಅಶಕ್ಯವೆಂದು ಪ್ರಮಾಣಪೂರ್ವಕವಾಗಿ ನಿಷ್ಪಕ್ಷಪಾತವಾಗಿ ಕಂಡುಬರುವುದೋ ಅವನ್ನು ಅನುಕೂಲ ಸ್ಥಿತಿ ಬರುವತನಕ ಅಶಕ್ಯವೆಂದು ಒಪ್ಪಿಕೊಳ್ಳಲು ಅನುಮತಿ ಇದೆ. ಯಾರೊಬ್ಬನಿಗೆ ಯಾವುದು ಯಾವಾಗ ಅಶಕ್ಯವೆಂದು ಸಮಾಜ ನಿರ್ಣಯಿಸುವುದೋ ಅದು ಆತನಿಗೆ ಅಶಕ್ಯವೆಂದು ಇರಲಿ. ಸ್ವೈರವಾಗಿ ತನಗೆ ಅಶಕ್ಯವೆಂದು ಸಮಾಜ ಭಯವನ್ನು ಬಿಟ್ಟು ಅತಿಕ್ರಮಿಸುವುದು ಸುವ್ಯವಸ್ಥೆಯಾಗುವುದಿಲ್ಲ. ಈಗಿನವರಾದರೂ ಹೊಸ ಹೊಸ ಸಂಘಟನೆಗಳನ್ನು ಮಾಡಿ ಅವರ ಶಿಸ್ತನ್ನು ಪಾಲಿಸಬೇಕೆಂದು ಒಪ್ಪುತ್ತಾರೆ. ಅತಿಕ್ರಮಿಸಿದರೆ ಶಿಕ್ಷೆಯನ್ನು ಸ್ವೀಕರಿಸುತ್ತಾರೆ. ಜಾತಿಸಂಘಟನವನ್ನು ಸಹ ಅಂತೆಯೇ ಪಾಲಿಸಬೇಕಾದ್ದು ನ್ಯಾಯವಾಗಿದೆ. ಸಾಧಾರಣವಾಗಿ ಒಬ್ಬ ಅಸ್ವಸ್ಥನಾದರೆ

ಸ್ನಾನಕ್ಕೆ ಅತನು ಅಶಕ್ತನೆಂದು ಮೊದಲಾದ ಎಷ್ಟೋ ವಿಷಯಗಳು ಸರ್ವಸಮ್ಮತಗ-ಳಾಗಿಯೇ ಇವೆ. ಕೆಲವು ಹೊಸ ವಿಷಯಗಳು ಬಂದಲ್ಲಿ ನಿರ್ಣಯಿಸಬೇಕಾಗುವದಷ್ಟೇ. ಯಾವ ತರವಲ್ಲೂ ಎಲ್ಲರನ್ನೂ ಕೂಡಿಕೊಂಡು ನಡೆಸಿದರೆ ಅದು ಶಾಸ್ತ್ರಾನುಮತ ವಾಗಬಹುದು. ಅದಕ್ಕೋಸ್ಕರ-

ದೇಶಂ ಕಾಲಂ ವಯಃ ಶಕ್ತಿಂ ಪಾಪಂ ಚಾವೇಕ್ಷ್ಯ ಯತ್ನತಃ ।
ಪ್ರಾಯಶ್ಚಿತ್ತಂ ಪ್ರಕಲ್ಪ್ಯಂ ಸ್ಯಾತ್ ಯತ್ರ ಚೋಕ್ತಾ ನ ನಿಷ್ಕೃತಿಃ ॥

ಎಂದೂ ಮೊದಲಾದ ಪ್ರಮಾಣಗಳಿವೆ.

ಪ್ರಮಾದವು ಕೈಯಿಂದ ಆಗಿಹೋದಲ್ಲಿ ಪ್ರೇಮದಿಂದ ಅದರ ಪರಿಹಾರ ಮಾಡಿ ಕೊಂಡು ಸಮಾಜ ಬಂಧನವನ್ನು ಮನ್ನಿಸುವುದು ದೊಡ್ಡ ಮರ್ಯಾದೆವಂತರ ನಡವಳಿಕೆಯಾಗಿರುವುದು.

ಮೂರು ತರದ ಜನರು 'ಎಲ್ಲಾ ಸಮಾಜಗಳಲ್ಲೂ ಈಗ ಕಾಣಿಸುವರು— (೧) ಸಮಾಜ ಬಂಧನದಂತೆ ನಡೆದು ಬರುವವರು. (೨) ತನ್ನಿಂದ ನಡೆಯುವದು ಕೆಲವು ಪ್ರಸಂಗಗಳಲ್ಲಿ ಸಾಧ್ಯವಾಗದೆ ಹೋದರೂ ಸಮಾಜವು ಹಾಗೆ ನಡೆಯುತ್ತಿರ-ಬೇಕೆಂದು ಹೃದಯಪೂರ್ವಕ ಬಯಸಿ ಆದಷ್ಟು ಅನುಕೂಲವನ್ನೇ ಮಾಡುವವರು. (೩) ಆಗ್ರಹದಿಂದಾಗಲೀ ಅತ್ಯಂತ ಮನೋದೌರ್ಬಲ್ಯದಿಂದಾಗಲೀ ಅತಿಕ್ರಮಿಸು ವವರು. ಈ ಪೈಕಿ ಮೊದಲನೆ ಮತ್ತು ಎರಡನೆ ತರದವರನ್ನು ಸುಧಾರಿಸಿಕೊಂಡು ನಡೆವುದು ಶಾಸ್ತ್ರೋಕ್ತ ಪರಿಹಾರದ ಪ್ರಕಾರಗಳಂತೆ ಕರ್ತವ್ಯವೇ ಆಗಿದೆ. ಮೂರನೆಯ ವರ್ಗದಲ್ಲಿಯೂ ಪ್ರಾರ್ಥನೀಯವೇನೆಂದರೆ ಎಲ್ಲಾ ಸಮಾಜದ ಕ್ಷೇಮಾರ್ಥವಾಗಿ ಅವರೂ ಈ ವಿಚಾರಗಳನ್ನು ಧರಿಸಿಕೊಳ್ಳಬೇಕು. ಅವರ ಅತಿಕ್ರಮಗಳು ಮಿತಿ ಮೀರದಿರುವ ತನಕ ಅವರು ತಮಗಿಂತ ಸಮಾಜದ ಮಹತ್ತ್ವವು ಹೆಚ್ಚಾಗಿರುವುದನ್ನು ಧ್ಯಾನಿಸಲು ಕಲಿಯುತ್ತಿರಬೇಕು. ಮಿತಿಮೀರಿ ಹೋದ ಪಕ್ಷದಲ್ಲಿ ಬೇರೆ ಜನರಿಗೆ ತಮ್ಮಿಂದ ಹಾನಿಯಾಗದಂತೆ ಪೃಥಕ್ ಸಂಸ್ಥೆಯಾಗಿ ನಡೆದುಕೊಳ್ಳುವುದನ್ನಾದರೂ ಸ್ವೀಕರಿಸಿಕೊಳ್ಳಬೇಕು. ಈ ವಿಷಯಗಳಲ್ಲಿ ಎಲ್ಲಾ ನಿರ್ಣಯಗಳನ್ನೂ ಆಚಾರ್ಯ ಪೀಠವೂ ತದಧೀನವಿದ್ವತ್ ಪರಿಷತ್ತೂ, ರಕ್ಷಣೀಯ ಸಮಾಜವೂ ಸೇರಿ ಒಪ್ಪಿಗೆಯಿಂದ ಮಾಡಿ ನಡೆಸಬೇಕು. ಅರ್ಥಾತ್ ಸಂರಕ್ಷಣದ ಭಾರವಹಿಸುವುದು ಎಲ್ಲರ ಕರ್ತವ್ಯವೇ ಆಗಿದೆ.

ಈ ರೀತಿಯಾಗಿ ಸಮಾಜದ ರಕ್ಷಣೆಗೆ ಅರ್ಥಿಯೂ ಸಮರ್ಥನೂ ಆಗಿರುವುದಕ್ಕೆ ಸಮಾಜದೊಳಗೆ ವಿದ್ಯೆಯೂ ವೃದ್ಧಿಯಾಗುತ್ತಿರಬೇಕು. ವೇದಶಾಸ್ತ್ರ ವಿದ್ಯೆಗಳು

ಸಮಾಜದೊಳಗೆ ಹ್ರಾಸವಾಗುತ್ತಾ ಹೋದರೆ ಆ ಮೂಲಕ ಸಮಾಜದ ಘಟಕ ವ್ಯಕ್ತಿಗಳಲ್ಲಿ ತಮ್ಮ ಪರಂಪರೆಯ ವಿಚಾರ ಸಂಚಾರವಾಗದೆ ನಿಂತುಹೋಗಿ ಕಠಿಣತೆಯೇ ಹೆಚ್ಚುತ್ತಾ ಹೋಗುವುದು.

ವಿಭಾವಿತಃ ಪ್ರಮಾಣೇನ ಕಥಾಭಿರನುಭಾವಿತಃ ।
ತರ್ಕೈಃ ಸಂಚಾರಿತಶ್ಚಾಯಂ ರಸೋಲೋಕೇ ನದುಃಖದಃ ॥

ಎಂಬಂತೆ ಸಮಾಜದ ಸ್ಥಾಯೀಭಾವವನ್ನು ರಕ್ಷಿಸುವುದಕ್ಕೋಸ್ಕರ ಸಮಾಜ ದೊಳಗೆ ವೇದಶಾಸ್ತ್ರ ವಿದ್ಯಾವೃದ್ಧಿಯು ನಡೆಯುತ್ತಿರುವುದು ಅವಶ್ಯಕರ್ತವ್ಯವಾಗಿದೆ.

ವಿಶೇಷವಾಗಿ ಹವ್ಯಕ ಬ್ರಾಹ್ಮಣ ಸಮಾಜವು ಏಕಜಾತೀಯ ಸಮಾಜವಾಗಿರುವುದು. ಆದ್ದರಿಂದ ಅದರೊಳಗೆ ಈಗಿನ ಯಾವ ತರದ ವಾದಗಳ ಸಾಮ್ರಾಜ್ಯವಾಗಿದ್ದರೂ ಒಗ್ಗಟ್ಟು ಇಟ್ಟುಕೊಂಡು ಸ್ವರಕ್ಷಣ ಮಾಡಿಕೊಳ್ಳುವುದು ಒಳ್ಳೆಯದು. ಬೇರೆ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರೂ ಸಮಾಜ ಸಂಬಂಧವಾದ ವಿಷಯಗಳಲ್ಲಿ ಆಚಾರ್ಯಾಧೀನವಾಗಿ ನಮ್ರತೆಯಿಂದ ನಡೆಯುವುದೊಂದು ಇಟ್ಟು ಕೊಂಡರೆ ಅಷ್ಟರಲ್ಲೇ ಎಲ್ಲವೂ ಶಕ್ಯವಾಗುವುದು. ಆಚಾರ್ಯ ಶಿಷ್ಯ ಸಂಬಂಧವು ಪರಸ್ಪರ ಎಳೆದು ಹಿಡಿದು ಕಷ್ಟಪಡುವುದಕ್ಕಾಗಿ ಆಗಿಲ್ಲದೆ—

ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ।

ಎಂಬಂತೆ ಎಲ್ಲರ ಶಾಸ್ತ್ರೋಕ್ತ ಕಲ್ಯಾಣಕ್ಕಾಗಿರುವುದು. ಆದ್ದರಿಂದ ಆಚಾರ್ಯಾಧೀನವಾಗಿ ಸಮಾಜದ ಸ್ಥಾಯೀಭಾವವನ್ನು ರಕ್ಷಿಸುತ್ತಾ ವೇದಶಾಸ್ತ್ರ ವಿದ್ಯಾಭಿವೃದ್ಧಿಗಾಗಿ ಯಥಾಶಕ್ತಿ ಅನುಕೂಲಮಾಡುತ್ತಾ ಶ್ರೇಯೋಭಾಗಿಯಾಗುವುದು ಪ್ರತಿಯೊಬ್ಬನ ಕರ್ತವ್ಯವಾಗುವುದು. "ಹಿತಂ ಮನೋಹಾರಿ ಚ ದುರ್ಲಭಂ ವಚಃ" ಶ್ರೀ ಪರಮಾತ್ಮನ ಕೃಪೆಯಿಂದ ನಮಗೆಲ್ಲರಿಗೂ ಹಿತವೇ ಪ್ರಿಯವಾಗಲಿ ಎಂದು ಪ್ರಾರ್ಥನೆ.

✲ ✲ ✲